ಮಲೆನಾಡಿನ ಸಾಂಸ್ಕೃತಿಕ ಸ್ಥಿತ್ಯಂತರಗಳು : ಕಥಾಸಾಹಿತ್ಯ

(ಕುವೆಂಪು, ಕಡಿದಾಳ್ ಮಂಜಪ್ಪ, ಇಂದಿರಾ ಎಂ.ಕೆ., ಅನಂತಮೂರ್ತಿ ಯು.ಆರ್.,
ಬಿಳುಮನೆ ರಾಮದಾಸ್, ವಸುಮತಿ ಉಡುಪ ಅವರ ಕೃತಿಗಳನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩ ೨೭೬

೨೦೦೯

ಮಲೆನಾಡಿನ ಸಾಂಸ್ಕೃತಿಕ ಸ್ಥಿತ್ಯಂತರಗಳು : ಕಥಾಸಾಹಿತ್ಯ

(ಕುವೆಂಪು, ಕಡಿದಾಳ್ ಮಂಜಪ್ಪ, ಇಂದಿರಾ ಎಂ.ಕೆ., ಅನಂತಮೂರ್ತಿ ಯು.ಆರ್., ಬಿಳುಮನೆ ರಾಮದಾಸ್, ವಸುಮತಿ ಉಡುಪ ಅವರ ಕೃತಿಗಳನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂ- B.M. ಜಯಶೀಲ
ವಾ- J K. ಕುಮಾರ

ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩ ೨೭೬

೨೦೦೯

ಪರಿವಿಡಿ

ಪೀಠಿಕೆ

ಮಾನವ ಮೂಲತಃ ಸಂಘ ಜೀವಿ ಆತ. ಇತರರೊಡನೆ ಹೊಂದಿಕೊಂಡು ಬಾಳುವಂತಹ ಅವಕಾಶ ಒದಗಿಸುವ ಸಮಾಜವನ್ನು ರೂಪಿಸಿಕೊಂಡಿದ್ದಾನೆ. ಇದಕ್ಕೆ ಬೆಸೆದುಕೊಂಡಂತೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ವಿಶಿಷ್ಟವಾದ ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದಾನೆ. ಈ ಸಂಸ್ಕೃತಿ ಮತ್ತು ಸಮಾಜಗಳನ್ನು ಹೊಂದಿರುವ ಕಾರಣದಿಂದಾಗಿ ಮಾನವ ಇತರ ಪ್ರಾಣಿಗಳಿಗಿಂತ ಭಿನ್ನನಾಗಿದ್ದಾನೆ. ಈ ಸಂಸ್ಕೃತಿ ಮತ್ತು ಸಮಾಜ ನಿಂತ ನೀರಲ್ಲ. ಅದು ನಿರಂತರವಾಗಿ ಹರಿಯುವ ಪ್ರಕ್ರಿಯೆ. ಬೌದ್ಧಿಕವಾದ ಸಾಮರ್ಥ್ಯವುಳ್ಳ ಮಾನವನಿಂದ ವೃತ್ತಿ, ಪ್ರವೃತ್ತಿ, ಭಾವ, ಬಯಕೆ, ಭಾಷೆ, ವೇಷ, ಮೊದಲಾದವುಗಳಿಗೆ ಕಾಲಕ್ರಮದಲ್ಲಿ, ಅಗತ್ಯಕ್ಕೆ ಅನುಗುಣವಾಗಿ, ಅನಿವಾರ್ಯತೆಯಿಂದಾಗಿ, ಕುತೂಹಲಕ್ಕಾಗಿ ಹೊಸ ಶೋಧನೆಗಳನ್ನು ನಡೆಸುತ್ತಾ, ಹೊಸ ಆವಿಷ್ಕಾರಗಳನ್ನು ಕಂಡುಕೊಳ್ಳುತ್ತಾ, ಬದುಕಿಗೆ ಅಳವಡಿಸಿಕೊಳ್ಳುತ್ತಾ ಹೋಗುವುದು ಜೀವಂತ ಸಮಾಜದ ಸಹಜ ಪ್ರಕ್ರಿಯೆ. ಒಂದು ಪರಿಸರ ಹೀಗೆ ತನ್ನದೇ ಆದ ಸಂಸ್ಕೃತಿಯನ್ನು ಕಟ್ಟಿಕೊಳ್ಳುತ್ತಾ ಸಾಗುವಾಗ ಮತ್ತೊಂದು ಸಂಸ್ಕೃತಿ ಮುಖಾಮುಖಿಯಾದಾಗ ತವಕ, ತಲ್ಲಣ, ವಿರೋಧ, ಆಕರ್ಷಣೆ–ವಿಕರ್ಷಣೆ, ಸಂಘರ್ಷ, ಸಾಮರಸ್ಯಗಳಿಂದ ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ ಮೊದಲಾಗಿ ಒಟ್ಟು ಸಾಂಸ್ಕೃತಿಕ ಬದುಕಿನಲ್ಲಿ ಸ್ಥಿತ್ಯಂತರಗಳಾಗುತ್ತಿರುವುದು ಕೂಡ ಜೀವಂತ ಸಮಾಜದ ಸಹಜ ಪ್ರಕ್ರಿಯೆ. ಅಂತೆಯೇ ಭಾರತೀಯ ಸಮಾಜದಲ್ಲಿ ಇಂತಹ ಪ್ರಕ್ರಿಯೆ ಸಾವಿರಾರು ವರ್ಷಗಳಿಂದ ಸಹಜವಾಗಿ ಸಾಗಿ ಬರುತ್ತಿರುವಾಗ ಸ್ಥಿತ್ಯಂತರಗಳು ತೀವ್ರತರವಾದ ಸ್ವರೂಪವನ್ನು ಪಡೆದುಕೊಂಡಿರುವುದು ವಸಾಹತುಶಾಹಿ ಪ್ರವೇಶ ಪಡೆದ ಮೇಲೆ.

ಭಾರತ, ಇತಿಹಾಸದ ಉದ್ದಕ್ಕೂ ಪರಕೀಯರ ಆಕ್ರಮಣಕ್ಕೆ ಒಳಗಾಗುತ್ತಲೇ ಬಂದಿದ್ದರೂ ಆ ಇತರ ಸಂಸ್ಕೃತಿಗಳ ಜೊತೆ ಒಂದು ಸಮಾನ ಅಂತರವನ್ನು ಇಲ್ಲಿನ ಸಮಾಜ ಕಾಯ್ದುಕೊಂಡು ಬಂದಿತ್ತು. ಆದರೆ ವಸಾಹತುಶಾಹಿ ಬಹುರೂಪದಲ್ಲಿ ಪ್ರವೇಶಿಸಿದಾಗ ಅದರ ಆಕ್ರಮಣವನ್ನು ಭಾರತೀಯ ಸಮಾಜ ತಡೆಯಲು ಅಸಮರ್ಥವಾಯಿತು. ವಸಾಹತುಶಾಹಿ ತಂದ ಹೊಸ ಮೌಲ್ಯಗಳಿಗೆ ಇಲ್ಲಿನ ಬಹುಮುಖಿ ಸಂಸ್ಕೃತಿಯು ನೀಡಿದ ಪ್ರತಿಕ್ರಿಯೆ ಕೂಡ ಬಹುರೂಪಿಯೇ ಆಗಿತ್ತು. ದೇಶೀಯ ಸಂಸ್ಕೃತಿ ಮತ್ತು ವಸಾಹತುಶಾಹಿ ತಂದ ಪರಕೀಯ ಸಂಸ್ಕೃತಿ ಮುಖಾಮುಖಿಯಾದಾಗ ಇಲ್ಲಿನ ಸಮಾಜದೊಳಗೆ ಶತಶತಮಾನಗಳಿಂದ ಸೃಷ್ಟಿಗೊಂಡಿದ್ದ ಸಂಕೋಲೆಗಳಿಂದ ಹೊರಬರುವ ವಿಮೋಚನೆಯ ಮಾರ್ಗವನ್ನು ತಂದಿತು. ಅಂದರೆ ಭಾರತೀಯ, ಅನ್ಯ ಸಂಸ್ಕೃತಿಯೊಡನೆ ಮುಖಾಮುಖಿಯಾದಾಗ ಎರಡು ಪ್ರಕ್ರಿಯೆಗಳು ಏಕಕಾಲದಲ್ಲಿ ಹುಟ್ಟಿಕೊಂಡವು. ಒಂದು ಅನ್ಯ ಸಂಸ್ಕೃತಿಯನ್ನು ಎದುರಿಸಿ ನಿಲ್ಲುವುದು ಮತ್ತೊಂದು ತನ್ನ ಸಂಸ್ಕೃತಿಯೊಡನೆ ತಾನೇ ಮುಖಾಮುಖಿಯಾಗುವುದು. ಈ ವಿಲಕ್ಷಣತೆ ನಮ್ಮ ಸಾಮಾಜಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಯ ವ್ಯಷ್ಟಿ ಮತ್ತು ಸಮಷ್ಟಿ ಬದುಕಿನ ಸ್ಥಿತ್ಯಂತರಗಳಿಗೆ ಎಡೆಕೊಟ್ಟಿತು.

ಭೌಗೋಳಿಕವಾಗಿಯೂ, ಜನಾಂಗಿಕವಾಗಿಯೂ, ಸಾಂಸ್ಕೃತಿಕವಾಗಿಯೂ ವೈವಿಧ್ಯಮಯವಾಗಿರುವ ಭಾರತದಂತಹ ದೇಶದಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಇಂತಹ ಸಂಚಲನಗಳನ್ನು, ಸಂಘರ್ಷಗಳನ್ನು ಆ

ಮೂಲಕ ಆ ಪರಿಸರದಲ್ಲಾಗುವ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗುರುತಿಸುವ, ಶೋಧಿಸುವ ಕಾರ್ಯ ಬಹಳ ಮುಖ್ಯವಾದುದು. ಇದರಿಂದ ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು, ಏಕತೆಯಲ್ಲಿ ವೈವಿಧ್ಯತೆಯನ್ನು ಹೊಂದಿರುವ ಸ್ವರೂಪಗಳು ಸ್ಪಷ್ಟವಾಗುತ್ತವೆ. ಈ ದಿಶೆಯಲ್ಲಿ ಕಾಲಮಿತಿಗೆ, ಪ್ರಾದೇಶಿಕಮಿತಿಗೆ ಒಳಪಡಿಸಿಕೊಂಡಂತೆ ನನ್ನ ಸಂಶೋಧನೆಯ ಅಧ್ಯಯನವು ಇರುತ್ತದೆ.

ಅಧ್ಯಾಯ ೧.೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ದಕ್ಷಿಣ ಭಾರತದ ಪಶ್ಚಿಮದ ಸೆರಗಿನಲ್ಲಿ ಹಬ್ಬಿರುವ ಮಲೆನಾಡು ಬೆಟ್ಟ, ಗುಡ್ಡ, ಕಾಡು, ಕಣಿವೆ, ನದಿಗಳಿಂದ ಆವೃತವಾಗಿ ಬಾಹ್ಯ ಸಂಪರ್ಕದಿಂದ ದೂರವುಳಿದ ಪ್ರಾಂತ್ಯವಾಗಿದ್ದು, ಮನುಷ್ಯ ಶ್ರಮವೇ ಪ್ರಧಾನವಾಗಿದ್ದು ತನ್ನದೇ ಆದ ಅನನ್ಯತೆಯನ್ನು ಸ್ಥಾಪಿಸಿಕೊಂಡಿತ್ತು. ಮೇಲುನೋಟಕ್ಕೆ ಪ್ರಶಾಂತವಾಗಿ ತೋರುವ ಈ ನಿಸರ್ಗ ಪರಿಸರದಲ್ಲಿ ಮಾನವನ ಜೀವನ ಕೂಡ ನಿಸರ್ಗಕ್ಕೆ ಹತ್ತಿರವಾಗಿತ್ತು. ಆದಾಗ್ಯೂ ಭಾರತದ ಇತರೆಡೆಗಳಲ್ಲಿ ಹೇಗೊ ಹಾಗೆಯೇ ಮಲೆನಾಡಿನಲ್ಲಿಯೂ ಪುರೋಹಿತಶಾಹಿಯ ಹಿಡಿತ, ಜಮೀನ್ದಾರಶಾಹಿಯ ಶೋಷಣೆ, ಜಾತಿ ಪದ್ಧತಿಯ ಕಟ್ಟುಕಟ್ಟಳೆಗಳು, ಮೌಢ್ಯ–ಕಂದಾಚಾರಗಳು, ಅನಕ್ಷರತೆ–ಅಜ್ಞಾನಗಳು ತುಂಬಿದ್ದವು. ಇಂತಹ ಪರಿಸರದೊಳಗೆ ವಸಾಹತುಶಾಹಿ ಪ್ರವೇಶಿಸಿದಾಗ ಇಲ್ಲಿನ ಜೀವನಕ್ರಮದಲ್ಲಿ ಹೊಸ ಸಂಚಲನವುಂಟಾಯಿತು. ಪರಿಣಾಮವಾಗಿ ಈ ಪರಿಸರದ ಸಾಂಸ್ಕೃತಿಕ ಬದುಕಿನಲ್ಲಿ ಪಲ್ಲಟಗಳಿಗೆ ಕಾರಣವಾಯಿತು. ಈ ಹಿನ್ನೆಲೆಯಲ್ಲಿ ಮಲೆನಾಡಿನ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕಂಡುಕೊಳ್ಳುವ ಆಸಕ್ತಿ ನನ್ನಲ್ಲಿ ಮೂಡಿತು.

'ಮಲೆನಾಡು' ಎಂದಾಗ ಮಲೆನಾಡಿನ ಒಂದು ಪ್ರಾಂತ್ಯವಾದ ತೀರ್ಥಹಳ್ಳಿ ಪರಿಸರವನ್ನಷ್ಟೆ ನನ್ನ ಅಧ್ಯಯನಕ್ಕೆ ಪ್ರಾದೇಶಿಕ ಮಿತಿಯನ್ನಿರಿಸಿಕೊಂಡಿದ್ದೇನೆ. ೧೯ನೇ ಶತಮಾನದ ಕೊನೆಯ ಕಾಲಘಟ್ಟದಲ್ಲಿ ಈ ಮಲೆನಾಡನ್ನು ವಸಾಹತುಶಾಹಿಯ ಒಂದು ಭಾಗವಾದ ಕ್ರೈಸ್ತ ಮಿಷನರಿಗಳು ಪ್ರವೇಶಿಸುತ್ತಾರೆ. ದಟ್ಟವಾದ ಅರಣ್ಯದ ನಡುವೆ ಬದುಕುವ ಇಲ್ಲಿನ ಹೆಚ್ಚಿನ ಸಮುದಾಯ ಯಾವುದೊ ಬುಡುಕಟ್ಟು ಜನಾಂಗವೆಂದೂ, ಅವರಿನ್ನೂ ಅನಾಗರಿಕ ಸ್ಥಿತಿಯಲ್ಲೇ ಇದ್ದಾರೆಂದು, ಇವರನ್ನು ಮತಾಂತರಗೊಳಿಸುವುದು ಸುಲಭವೆಂಬ ಯೋಚನೆಯೊಂದಿಗೆ ಈ ಪರಿಸರದಲ್ಲಿ ಸುತ್ತಾಡುತ್ತಾರೆ. ಆದರೆ ಅವರು ಅಂದುಕೊಂಡಂತೆ ಮತಾಂತರ ಪ್ರಕ್ರಿಯೆ ಯಶಸ್ವಿಯಾಗುವುದಿಲ್ಲ. ಆದರೆ ಮತಾಂತರದ ಉದ್ದೇಶದ ಹಿನ್ನೆಲೆಯಲ್ಲಿ ಬಂದ ಅವರ ಶೈಕ್ಷಣಿಕ ಸೇವೆಯನ್ನು, ಆರೋಗ್ಯ ಸೇವೆಯನ್ನು ಈ ಪರಿಸರ ಮುಕ್ತ ಮನಸ್ಸಿನಿಂದ ಸ್ವಾಗತಿಸಿತು. ಹಾಗೆಯೇ ಕ್ರೈಸ್ತ ಮಿಷನರಿಗಳ ಮೂಲಕ ಬಂದ ಯಂತ್ರನಾಗರಿಕತೆಯ ಉತ್ಪಾದನಾ ವಸ್ತುಗಳನ್ನು ತನ್ನ ಜೀವನಕ್ರಮದಲ್ಲಿ ಅಳವಡಿಸಿಕೊಂಡಿತು. ಈ ಎಲ್ಲ ಕಾರಣಗಳಿಂದ ಇಲ್ಲಿನ ಪರಿಸರದ ಜೀವನವಿಧಾನದಲ್ಲಿ ತೀವ್ರತರವಾದ ಪಲ್ಲಟಗಳಾದವು. ಆಧುನಿಕ ಶಿಕ್ಷಣ ವಿಸ್ತರಿಸಿದಂತೆ, ಹೊಸ ಚಿಂತನೆಗಳು ಮೂಡಿದಂತೆ, ಹೊಸ ಉದ್ಯೋಗದ ಅವಕಾಶಗಳು ದೊರಕಿದಂತೆ ಸುಧಾರಣೆಯ, ಬದಲಾವಣೆಯ ಗಾಳಿ ಬೀಸತೊಡಗಿತು. ಪರಿಣಾಮವಾಗಿ ಈ ಪರಿಸರದ ಸಾಂಸ್ಕೃತಿಕ ಬದುಕಿನಲ್ಲಿ ತವಕ, ತಲ್ಲಣ, ತಾಕಲಾಟ, ಸಂಘರ್ಷ, ಸಾಮರಸ್ಯ, ಆಕರ್ಷಣೆ–ವಿಕರ್ಷಣೆ, ಸ್ವೀಕರಣೆ–ನಿರಾಕರಣೆಗಳು ನಡೆಯುತ್ತಾ ಬಂದವು.

ಇಂಗ್ಲಿಷ್ ಶಿಕ್ಷಣ ಮೊದಮೊದಲು ಹೊಸ ಹೊಸ ಉದ್ಯೋಗಗಳ ಆಕರ್ಷಣೆಯಾಗಿ ಜೀವನ ನಿರ್ವಹಣೆಯ ಹೊಸ ಭರವಸೆಯನ್ನು ತಂದಿತು. ಸಂಪ್ರದಾಯಬದ್ಧತೆ ಸಡಿಲಗೊಂಡು, ಶಿಕ್ಷಣ ವಂಚಿತರು ಎಚ್ಚರಗೊಂಡು ಆಧುನಿಕ ಶಿಕ್ಷಣವನ್ನು ಪಡೆಯಲು ಹಳ್ಳಿಯಿಂದ ನಗರಕ್ಕೆ ಹೋದಂತಹ ಯುವಕರು ಉದ್ಯೋಗ ಹಿಡಿದು ಹುಟ್ಟಿದ ಊರಿನಿಂದ ದೂರವಾಗಿ ಪೋಷಕರನ್ನು, ಹಳ್ಳಿಯನ್ನು ಮರೆತವರು

ಒಂದು ಕಡೆಯಾದರೆ, ಮರಳಿಮಣ್ಣಿಗೆ ಬಂದು ತಮ್ಮ ಪರಿಸರವನ್ನು ಸುಧಾರಿಸಲು, ಬದಲಾಯಿಸಲು ಆ ಮೂಲಕ ಆಧುನಿಕತೆಗೆ, ಹೊಸತನಕ್ಕೆ ಈ ಪರಿಸರವನ್ನು ಸಜ್ಜುಗೊಳಿಸಲು ನಿಂತವರು ಇನ್ನೊಂದು ಕಡೆ. ಹಾಗೆ ಆಧುನಿಕತೆಯನ್ನು ಬಾಹ್ಯವಾಗಿ ಧರಿಸಿ ಅದು ತರುವ ವಿಲಾಸಕ್ಕೆ, ವಿಕಾರಕ್ಕೆ ಒಳಗಾದವರು ಮಗದೊಂದು ಕಡೆ, ಹೀಗೆ ಆಧುನಿಕ ಶಿಕ್ಷಣ, ಆಧುನಿಕ ಜೀವನಶೈಲಿ, ಆಧುನಿಕ ವಸ್ತು ರೂಪಗಳು ಮಲೆನಾಡಿನ ಸಾಂಸ್ಕೃತಿಕ ಬದುಕಿನಲ್ಲಿ ಸ್ಥಿತ್ಯಂತರವನ್ನುಂಟು ಮಾಡಿವೆ ; ಮಾಡುತ್ತಿವೆ.

ಯಾವುದೇ ಸಾಹಿತ್ಯ ಒಂದು ಜನ ಸಮೂಹದ ಪರಿಸರದ ಗರ್ಭದಿಂದಲೇ ರೂಪ ಪಡೆಯುವಂತಹದು. ಮಾನವನ ಬದುಕಿನ ಏನೆಲ್ಲ ಮೌಲ್ಯಗಳನ್ನು, ಆದರ್ಶಗಳನ್ನು ಅದು ತುಂಬಿಕೊಂಡಿದ್ದರೂ ಈ ನೆಲದ ನಂಟನ್ನು ಕಳಚಿಕೊಂಡಿರುವುದಿಲ್ಲ. ಒಂದು ಶ್ರೇಷ್ಠ ಕೃತಿ ಆಯಾಯ ಕಾಲದ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಚಾರಿತ್ರಿಕ, ವೈಚಾರಿಕ ಅಂಶಗಳನ್ನು ಒಳಗೊಂಡಿರುತ್ತದೆ. ಆದಕಾರಣ ಆಯಾಯ ಕಾಲದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಸಮಕಾಲೀನ ಸೃಜನಶೀಲ ಲೇಖಕರು ತಮ್ಮ ಕೃತಿಗಳಲ್ಲಿ ಪ್ರತಿಫಲಿಸುತ್ತಾ, ಪ್ರತಿಕ್ರಿಯಿಸುತ್ತಾ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ತೀರ್ಥಹಳ್ಳಿ ಪ್ರಾಂತ್ಯದ ಪರಿಸರದಲ್ಲಾದ ಒಂದು ಕಾಲಘಟ್ಟದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕಥಾಸಾಹಿತ್ಯದ ಆಧಾರದ ಮೇಲೆ ಶೋಧಿಸುವ ಉದ್ದೇಶದಿಂದ ಸಂಶೋಧನೆಗೆ ತೊಡಗಿಕೊಂಡಿರುತ್ತೇನೆ.

ಸಂಸ್ಕೃತಿ

ಇದು ಸಾಂಸ್ಕೃತಿಕ ಅಧ್ಯಯನವಾದುದರಿಂದ 'ಸಂಸ್ಕೃತಿ' ಎಂಬುದನ್ನು ನಾನು ಪರಿಭಾವಿಸಿಕೊಂಡ ಹಿನ್ನೆಲೆಯಲ್ಲಿ ಕಿರಿದಾಗಿ ವಿವರಿಸಲು ಪ್ರಯತ್ನಿಸುತ್ತೇನೆ. 'ಸಂಸ್ಕೃತಿ' ಶಬ್ದವು ಇಂಗ್ಲಿಷ್‌ನ 'ಕಲ್ಚರ್' ಎಂಬುದಕ್ಕೆ ಪರ್ಯಾಯವಾಗಿ ಕಂಡುಕೊಂಡ ಪದ. ಆದರೆ ಪಶ್ಚಿಮದ 'ಕಲ್ಚರ್' ಎಂಬ ಶಬ್ದದ ಅರ್ಥಕ್ಕಿಂತ ಭಿನ್ನವಾದ, ವ್ಯಾಪಕವಾದ ಅರ್ಥವನ್ನು ಪಡೆದಿದೆ. ಮ್ಯಾಥ್ಯೂ ಆರ್ನಾಲ್ಡ್ 'ಸಂಸ್ಕೃತಿಯು ಬದುಕಿನ ಬಹುಶ್ರೇಷ್ಠ ಮೌಲ್ಯ' ಎನ್ನುತ್ತಾನೆ. 'ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಸಮಗ್ರ ಜೀವನ ವಿಧಾನವೇ ಸಂಸ್ಕೃತಿ' ಎಂದಿದ್ದಾನೆ ಟಿ.ಎಸ್.ಎಲಿಯಟ್. ಮಾನವಶಾಸ್ತ್ರಜ್ಞರು ಸಂಸ್ಕೃತಿಯ ಸ್ವರೂಪವನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಅದರ ಸಾರವನ್ನು 'ಮಾನವ ವರ್ತನೆಗಳ ಮೊತ್ತವೇ ಸಂಸ್ಕೃತಿ' ಎಂದೂ, 'ಸಮುದಾಯಗಳ ಸಮಗ್ರ ಜೀವನ ವಿಧಾನವೇ ಸಂಸ್ಕೃತಿ' ಎಂದು ತಿಳಿಯಬಹುದಾಗಿದೆ. 'ಸಂಸ್ಕೃತಿ ಎಂಬುದು ಒಂದು ಸಮುದಾಯ ಬದುಕುವ, ಆಲೋಚಿಸುವ, ಬಹು ಆಯಾಮಗಳನ್ನು ಒಳಗೊಳ್ಳುವ ಒಂದು ಪರಿಭಾಷೆ'. ಸಂಸ್ಕೃತಿ ಪರಿಕಲ್ಪನೆ ಮೂಲತಃ ಒಂದು ರಾಜಕೀಯ ಆರ್ಥಿಕ, ಸಾಮಾಜಿಕವಾದ ಲೋಕದ ದೃಷ್ಟಿಯನ್ನು ಸೂಚಿಸುವ ಸೈದ್ಧಾಂತಿಕ ಪರಿಭಾಷೆ ಎಂದು ಮುಂತಾಗಿ ಅನೇಕ ವ್ಯಾಖ್ಯಾನಗಳು ನಡೆದಿವೆ. ಇದರ ವಿಶ್ಲೇಷಣೆಗೆ ನಾನು ಹೋಗುವುದಿಲ್ಲ.

ಒಟ್ಟಿನಲ್ಲಿ ಸಂಸ್ಕೃತಿ ಎಂಬುದು ಅತ್ಯಂತ ವ್ಯಾಪಕವಾದ ಅರ್ಥ ವ್ಯಾಪ್ತಿಯನ್ನು ಪಡೆದಿದೆ. ಅದನ್ನು ಒಂದು ಮಾತಿನಲ್ಲಿ ಸೂತ್ರೀಕರಿಸಲು ಸಾಧ್ಯವಿಲ್ಲ. ಸಾಹಿತ್ಯ, ಜಾನಪದ, ಕಲೆ, ಸಂಗೀತ, ಧರ್ಮ, ನೃತ್ಯ ಮುಂತಾದ ನೂರಾರು ಕ್ಷೇತ್ರಗಳಲ್ಲಿ ಸಾಂಸ್ಕೃತಿಕ ವಿವರಗಳ ಹುಡುಕಾಟ ನಿತ್ಯ ನಿರಂತರವಾಗಿ ಸಾಗುತ್ತಿದೆ. ಇಂದು ದೇಶ, ಭಾಷೆ, ಜನಾಂಗ ಮುಂತಾದ ವಿಷಯಗಳನ್ನು ಕೇಂದ್ರವಾಗಿಟ್ಟುಕೊಂಡು ಸಂಸ್ಕೃತಿ

ಅಧ್ಯಯನ ನಡೆಯುತ್ತಿದೆ. ಸಂಸ್ಕೃತಿಯೆಂಬುದು ಮಾನವನ ಮಾನಸಿಕ ಅವ್ಯಕ್ತರೂಪವಾಗಿರುತ್ತದೆ. ಇದು ಬಾಹ್ಯರೂಪ ತಾಳಿ ವೈವಿಧ್ಯಮಯವಾಗಿ ಪ್ರಕಟವಾಗುವಂತಹದು. ಅಂದರೆ ವ್ಯಕ್ತಿಯ ನಡೆ-ನುಡಿ, ಆಚಾರ-ವಿಚಾರ, ಸದಾಚಾರಗಳಲ್ಲಿ ಅಭಿವ್ಯಕ್ತವಾಗುತ್ತಿರುತ್ತದೆ. ಇದು ವ್ಯಷ್ಟಿ ನೆಲೆಯಿಂದ ಸಮಷ್ಟಿ ರೂಪದ ನೆಲೆಯಲ್ಲೂ ಪ್ರಕಟಗೊಳ್ಳುವುದಿದೆ. ಇದು ಒಂದು ಭಾಷೆ, ಪ್ರದೇಶ ಅಥವಾ ಜನಾಂಗದ ಅನನ್ಯತೆಯಲ್ಲಿ ಸಾಧ್ಯವಾಗುವಂತಹದು. ಹಾಗೆಯೆ 'ಸಾಂಸ್ಕೃತಿಕ' ಎನ್ನುವುದು ಅನೇಕ ಪರಿಕಲ್ಪನೆಗಳನ್ನು ದಾಟಿ ಬಹುಶಿಸ್ತೀಯವಾದ ಅಧ್ಯಯನ ವಿಧಾನ ಎಂಬರ್ಥದಲ್ಲಿ ನಿಂತಿದೆ. ಇದು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಇತ್ಯಾದಿ ಎಲ್ಲ ಆಯಾಮಗಳನ್ನು ಒಳಗೊಂಡ ಸಂಯುಕ್ತ ಪರಿಭಾಷೆಯಾಗಿದೆ. ಈ ನೆಲೆಗಳಲ್ಲಿ ಅದರ ಸ್ವರೂಪಗಳನ್ನು ಆಧಾರವಾಗಿಟ್ಟುಕೊಂಡು ಸಾಂಸ್ಕೃತಿಕ ಸ್ಥಿತ್ಯಂತರಗಳ ಚರ್ಚೆ ಮಾಡುವ ವಿನಮ್ರ ಪ್ರಯತ್ನವಿದು.

ಆಧುನಿಕತೆ

ಸಂಸ್ಕೃತಿ ಶಬ್ದದಂತೆ 'ಆಧುನಿಕತೆ' ಎಂಬ ಶಬ್ದವು ಕೂಡ ವಿಶಾಲವಾದ ಅರ್ಥವನ್ನು ಪಡೆದುಕೊಳ್ಳುತ್ತಿದೆ. ಆದಕಾರಣ ಒಂದು ಮಾತಿನಲ್ಲಿ ಅದನ್ನು ವ್ಯಾಖ್ಯಾನಿಸುವುದು ಕಷ್ಟ ನನ್ನ ಸಂಶೋಧನೆಯ ಸಾಂಸ್ಕೃತಿಕ ಸ್ಥಿತ್ಯಂತರದ ಹಿನ್ನೆಲೆಯಲ್ಲಿ ಆಧುನಿಕತೆಯೇ ಪ್ರಧಾನವಾಗಿರುವುದರಿಂದ ಅದನ್ನು ನಾನು ಗ್ರಹಿಸಿದಂತೆ ಕಿರಿದರಲ್ಲಿ ವಿವರಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

ಇಂಗ್ಲಿಷ್‌ನ 'Modernity' ಎಂಬ ಶಬ್ದಕ್ಕೆ ಕನ್ನಡದಲ್ಲಿ ಸಂವಾದಿಯಾಗಿ 'ಆಧುನಿಕತೆ' ಎಂಬ ಶಬ್ದವು ಬಳಕೆಯಲ್ಲಿದೆ. ನಿಘಂಟುವಿನಲ್ಲಿ 'ಆಧುನಿಕತೆ' ಎಂಬ ಶಬ್ದಕ್ಕೆ ನವೀನತೆ, ನವ್ಯತೆ ಎಂಬರ್ಥಗಳಿವೆ. ಅಲ್ಲದೆ ಗ್ರಾಮೀಣವಲ್ಲದ್ದು, ನಗರಕ್ಕೆ ಸೇರಿದ್ದು, ವಿದ್ಯಾವಂತರ ಪ್ರಪಂಚದ್ದು, ವೈಜ್ಞಾನಿಕವಾದುದು ಎಂಬರ್ಥದಲ್ಲು ಬಳಕೆಯಾಗುತ್ತಿದೆ. ಹಾಗೆ 'ಆಧುನಿಕತೆ' ಎಂಬುದನ್ನು ನವೀನ ಭಾವನೆಗಳಿಗೆ ಹೊಂದುವಂತೆ ಹಳೆಯ ಸಂಪ್ರದಾಯಗಳನ್ನು ಅಪ್ರಧಾನ ಮಾಡುವ ಒಂದು ಪ್ರವೃತ್ತಿ ಎನ್ನಬಹುದು. ಸಮಕಾಲೀನ ಸಂಗತಿಗಳಿಗೆ ಒಪ್ಪದ, ಒಗ್ಗದ ಸಂಪ್ರದಾಯಗಳನ್ನು ತಿರಸ್ಕರಿಸುವುದು ಮತ್ತು ಸಾರಸಗಟಾಗಿ ತಿರಸ್ಕರಿಸದೆ ಅದರೊಳಗಿರುವ ಜೀವಪರ ಮೌಲ್ಯಗಳನ್ನು ಹೊರತೆಗೆದು ಪರಿಷ್ಕರಿಸುವುದು, ಪುರಸ್ಕರಿಸುವುದು ಎಂಬರ್ಥವನ್ನು ಕೂಡ 'ಆಧುನಿಕತೆ' ಪಡೆದಿದೆ. ಆದ್ದರಿಂದ ಆಧುನಿಕತೆಯೆಂಬುದು ನಿರಂತರವಾದ ಒಂದು ಪ್ರಕ್ರಿಯೆ. ವಿಜ್ಞಾನ ಮತ್ತು ಕೈಗಾರಿಕೆಗಳಿಂದ ಮಾನವನ ಭೋಗ ಜೀವನಕ್ಕಾಗಿ ಸೃಷ್ಟಿಸಲ್ಪಟ್ಟ ಸರಕುಗಳು ವಸಾಹತುಶಾಹಿ ಮೂಲಕ ಪ್ರವೇಶಿಸಿ ಮೊದಮೊದಲು ಇಲ್ಲಿನ ಜೀವನಕ್ರಮದಲ್ಲಿ ಹೊರ ರೂಪದ ಬದಲಾವಣೆಯನ್ನು ತಂದವು. ಇಂಗ್ಲಿಷ್ ಶಿಕ್ಷಣ ಮೂಡಿಸಿದ ವ್ಯಕ್ತಿ ವಿಶಿಷ್ಟತಾವಾದ, ಧರ್ಮಾತೀತವಾದ ದೃಷ್ಟಿಕೋನಗಳು ಹೊಸ ರಾಜಕೀಯ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಮೊದಲಾದವುಗಳ ಮೂಲಕ ಅಂತರಂಗದೊಳಗೆ ಪ್ರವೇಶಿಸಿ ನೋಟ ಕ್ರಮ ಆಲೋಚನಾ ಕ್ರಮವನ್ನು ಬದಲಾಯಿಸಿದವು. ಬಾಹ್ಯ ಪ್ರಭಾವ, ಒಳಗಿನ ಒತ್ತಡದ ಮೂಲಕ ಹುಟ್ಟುವ ಹೊಸ ರೀತಿಯ ಚಿಂತನೆಗಳ ಫಲವಾಗಿ ರೂಢಿಸಿಕೊಳ್ಳುವ ಜೀವನಕ್ರಮವೇ ಆಧುನಿಕತೆ ಎಂದು ಸ್ಥೂಲವಾಗಿ ಹೇಳಬಹುದು.

ವಾಸ್ತವವಾಗಿ ಪಾಶ್ಚಾತ್ಯ ಜಗತ್ತು ತಂದು ಹಾಕಿದ ವಸ್ತು ವಿಷಯಗಳಲ್ಲಿ ಆಧುನಿಕತೆ ಎಂಬುದು

ಇಲ್ಲ. ತನ್ನ ನೆಲದ ಗುಣಕ್ಕನುಗುಣವಾಗಿ ಮತ ಮೌಢ್ಯ ಕಂದಾಚಾರಗಳನ್ನು ದಾಟಿ ಜೀವಪರ ಕಾಳಜಿಗಳಲ್ಲಿ ವಿವೇಕವನ್ನು ತರುವುದೇ ಆಧುನಿಕತೆಯಾಗಿದೆ. ಭಾರತದಂತಹ ಬಹುಮುಖಿ ಸಂಸ್ಕೃತಿಯ ಸಮಾಜದಲ್ಲಿ ಇದು ಮುಖ್ಯವಾಗಬೇಕು. ಆಗ ಮಾತ್ರ ದೇಶೀಯ ಚಿಂತನೆಗಳ ಜೊತೆ ಜೊತೆಗೆ ಆಧುನಿಕ ಜಗತ್ತಿಗೆ ತನ್ನನ್ನು ಒಡ್ಡಿಕೊಳ್ಳಲು ಸಾಧ್ಯವಾಗುವುದು. ಇದೇ ಆಧುನಿಕತೆಯ ಬಹುಮುಖ್ಯ ಲಕ್ಷಣ. ಈ ದೃಷ್ಟಿಯ ವಿಚಾರವನ್ನು ಮುಖ್ಯವಾಗಿಟ್ಟುಕೊಂಡು ಈ ನನ್ನ ಸಂಪ್ರಬಂಧದಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ವ್ಯಾಪ್ತಿ

ನಾನು ಮೊದಲೇ ಹೇಳಿದಂತೆ ನನ್ನ ಅಧ್ಯಯನವನ್ನು ತೀರ್ಥಹಳ್ಳಿ ಪ್ರಾಂತ್ಯದ ಮಲೆನಾಡ ಪರಿಸರಕ್ಕೆ ಸೀಮಿತಗೊಳಿಸಿಕೊಂಡಿದ್ದೇನೆ. ೧೯ನೇ ಶತಮಾನದ ಕೊನೆ ಮತ್ತು ೨೦ನೇ ಶತಮಾನದ ೭೦ರ ದಶಕದವರೆಗಿನ ಸರಿಸುಮಾರು ಒಂದು ಶತಮಾನದ ಕಾಲಾವಧಿಯ ಮಿತಿಯನ್ನು ಇರಿಸಿಕೊಂಡಿದ್ದೇನೆ. ಕಾರಣ ೧೮೮೨ರಲ್ಲಿ ಕವಲೇದುರ್ಗದಿಂದ ತೀರ್ಥಹಳ್ಳಿಗೆ ತಾಲ್ಲೂಕಿನ ಆಡಳಿತದ ಕೇಂದ್ರ ಸ್ಥಳವನ್ನು ವರ್ಗಾಯಿಸಲಾಯಿತು. ತೀರ್ಥಹಳ್ಳಿ ತಾಲ್ಲೂಕಿನ ಸಾಂಸ್ಕೃತಿಕ ಚರಿತ್ರೆಯನ್ನು ಪ್ರಾರಂಭಿಕವಾಗಿ ಕುವೆಂಪು ಅವರ ಕೃತಿಗಳ, ಎಂ.ಕೆ.ಇಂದಿರಾ ಅವರ ಕೃತಿಗಳ ವಿವರಗಳಲ್ಲಿ ಕಂಡುಕೊಳ್ಳಬಹುದು. ಮಲೆಗಳಲ್ಲಿ ಮದುಮಗಳು, ಫಣಿಯಮ್ಮ ಕಾದಂಬರಿಗಳ ಕಾಲಘಟ್ಟ ೧೯ನೇ ಶತಮಾನದ ಕೊನೆ ಮತ್ತು ೨೦ನೇ ಶತಮಾನದ ಆರಂಭಕಾಲವಾಗಿದೆ. ಕ್ರೈಸ್ತ ಮಿಷನರಿ ನೈಟಿಂಗೇಲ್‌ನ ವರದಿಯಲ್ಲಿನ ವಿವರಗಳ ಕಾಲ ಕೂಡ ೧೯ನೇ ಶತಮಾನದ ಕೊನೆಯ ಕಾಲಾವಧಿಯೇ ಆಗಿದೆ. ಆದಕಾರಣ ೧೯ನೇ ಶತಮಾನದ ಕೊನೆ ಈ ಮಲೆನಾಡ ಪರಿಸರದ ಬದುಕಿನಲ್ಲಿ ಐತಿಹಾಸಿಕವಾಗಿ ತಿರುವಿನ ಘಟ್ಟ ಎನ್ನಬಹುದು. ಆದ್ದರಿಂದ ಇದನ್ನು ಆದಿಯಾಗಿಟ್ಟುಕೊಂಡಿದ್ದೇನೆ. ಅಲ್ಲಿಂದ ಈ ಮಲೆನಾಡ ಪರಿಸರದಲ್ಲಿ ತೀವ್ರತರವಾದ ಸಂಚಲನವುಂಟಾಯಿತು. ಆಧುನಿಕ ಶಿಕ್ಷಣ ಅದನ್ನು ಇನ್ನಷ್ಟು ತೀವ್ರಗೊಳಿಸಿತು. '೧೯೭೪'ರಲ್ಲಿ ಬಂದ ಭೂ ಸುಧಾರಣೆಯ ಕಾನೂನು ಈ ಪರಿಸರದ ಬಹುಸಂಖ್ಯಾತರಾದ ರೈತ ಸಮುದಾಯದ ಬದುಕಿನಲ್ಲಿ ಹೊಸ ಮನ್ವಂತರವನ್ನೇ ಸೃಷ್ಟಿಸಿತು. ಆದ್ದರಿಂದ ಈ ಅವಧಿಯನ್ನು ಅಧ್ಯಯನದ ಕಾಲಘಟ್ಟದ ಅಂತ್ಯವಾಗಿಟ್ಟುಕೊಂಡಿರುತ್ತೇನೆ. ಮುಂದೆ ೮೦ರ ದಶಕದ ನಂತರ ಈ ಪರಿಸರದ ಮೇಲೆ ಜಾಗತೀಕರಣ, ಖಾಸಗೀಕರಣದ ಪ್ರಭಾವ ಬೀರಿದೆ. ಅದು ಪ್ರತೇಕವಾದ ಅಧ್ಯಯನ ಮಾಡಬೇಕಾದ ವಿಷಯ ವ್ಯಾಪ್ತಿ ಹೊಂದಿದೆ.

ಇಡೀ ಒಂದು ಶತಮಾನದ ಕಾಲಾವಧಿಯಲ್ಲಿ ಈ ಪರಿಸರದಲ್ಲಾದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗಮನಿಸುತ್ತಾ ಬಂದ ಈ ನೆಲದ ಸೃಜನಶೀಲ ಲೇಖಕರ ಕಥಾಸಾಹಿತ್ಯದಲ್ಲಿ ಅದು ಪ್ರತಿಫಲನವಾದ ರೀತಿ ಮತ್ತು ಅವರು ತೋರಿದ ಪ್ರತಿಕ್ರಿಯೆ ನನ್ನ ಸಂಶೋಧನಾ ಅಧ್ಯಯನದ ಪ್ರಮುಖ ವಿಷಯವಾಗಿರುತ್ತದೆ.

ತೀರ್ಥಹಳ್ಳಿ ಪರಿಸರದಿಂದ ಕುವೆಂಪು ಅವರು ಆದಿಯಾಗಿ ಈವರೆಗೆ ಸುಮಾರು ಮೂವತ್ತಕ್ಕೂ ಹೆಚ್ಚು ಸಾಹಿತಿಗಳು-ಬರಹಗಾರರು ಬಂದಿದ್ದಾರೆ. ನನ್ನ ಅಧ್ಯಯನದಲ್ಲಿ ಆರು ಜನ ಲೇಖಕರ ಕಥಾಸಾಹಿತ್ಯವನ್ನು ಮಾತ್ರ ಅನುಲಕ್ಷಿಸಿದ್ದೇನೆ. ಕಾಲಾನುಕ್ರಮಣಿಕೆಯಂತೆ ಕುವೆಂಪು, ಕಡಿದಾಳ್ ಮಂಜಪ್ಪ, ಎಂ.ಕೆ.ಇಂದಿರಾ, ಯು.ಆರ್.ಅನಂತಮೂರ್ತಿ, ಬಿಳುಮನೆ ರಾಮದಾಸ್ ಮತ್ತು ವಸುಮತಿ ಉಡುಪ

ಅವರ ಸಣ್ಣಕಥೆ, ಕಾದಂಬರಿಗಳಲ್ಲಿ ತೀರ್ಥಹಳ್ಳಿ ಪರಿಸರದ ಆವರಣವನ್ನು ಹೊಂದಿರುವಂತಹ ಕಥಾಜಗತ್ತನ್ನು ಮಾತ್ರ ನನ್ನ ಅಧ್ಯಯನ ವ್ಯಾಪ್ತಿಗೆ ಮಿತಗೊಳಿಸಿಕೊಂಡಿರುತ್ತೇನೆ. ಈ ಸೃಜನಶೀಲ ಲೇಖಕರ ಅನುಭವಲೋಕಕ್ಕೆ ನಿಲುಕಿದ ಅಥವಾ ಗ್ರಹಿಸಿದ ಮಲೆನಾಡ ಪರಿಸರದ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೂಕ್ಷ್ಮತೆಗಳನ್ನು ಈ ಅಧ್ಯಯನ ಕೇಂದ್ರವಾಗಿಟ್ಟುಕೊಂಡಿದೆ.

ಇದು ಸಾಂಸ್ಕೃತಿಕ ಅಧ್ಯಯನವಾದುದರಿಂದ ಕಥಾಸಾಹಿತ್ಯದ ಜೊತೆಗೆ ಪೂರಕವಾಗಿ ಕುವೆಂಪು ಅವರ 'ನೆನಪಿನದೋಣಿಯಲ್ಲಿ', ಕಡಿದಾಳ್ ಮಂಜಪ್ಪನವರ 'ನನಸಾಗದ ಕನಸು' ಅಂತಹ ಆತ್ಮಚರಿತ್ರೆಗಳನ್ನು ಬಳಸಿಕೊಂಡಿದ್ದೇನೆ. ಹಾಗೆಯೇ ಈ ಮಲೆನಾಡ ಪರಿಸರವನ್ನು ನೆನಪಿಸುವಂತಹ ತ್ಯಾನಂದೂರು ಪುಟ್ಟಣ್ಣ ಅವರ 'ನಾನುಕಂಡ ಮಲೆನಾಡು', ಡಾ. ಅಂಬಳಿಕೆ ಹಿರಿಯಣ್ಣ ಅವರ 'ಸಂಶೋಧನಾ' ಕೃತಿ 'ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ' ಮತ್ತು ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ 'ನಾಮಧಾರಿ' ಕೃತಿಗಳನ್ನು ಕೂಡ ಪ್ರಮುಖ ಆಕರಗಳನ್ನಾಗಿ ಬಳಸಿಕೊಂಡಿದ್ದೇನೆ.

ನಾನು ಮಲೆನಾಡ ಪರಿಸರದಿಂದ ಬಂದವನಾದ್ದರಿಂದ ಈ ಪರಿಸರದಲ್ಲಾಗುತ್ತಿರುವ ಬದಲಾವಣೆಗಳನ್ನು ಕಂಡ, ನನ್ನ ಹಿರಿಯರಿಂದ ಈ ಪರಿಸರದ ಬಗೆಗೆ ಚಿಕ್ಕಂದಿನಿಂದ ಕೇಳಿದ ಅನೇಕ ಸಂಗತಿಗಳಿಂದ, ಈ ಪರಿಸರದ ಬಗೆಗೆ ಅನೇಕ ಬಿಡಿ ಬಿಡಿ ಬರಹಗಳನ್ನು ಓದುತ್ತಾ ಬಂದ ನನ್ನಲ್ಲಿ ಗಟ್ಟಿಯಾಗಿ ನಿಂತಿರುವ ಅನುಭವಗಳು ನನ್ನ ಅಧ್ಯಯನಕ್ಕೆ ಸಹಾಯಕವಾಗಿ ಬಂದಿವೆ. ಆದರೆ ಯಾವುದೇ ಪೂರ್ವಗ್ರಹವಿಲ್ಲದೆ ವಸ್ತು ನಿಷ್ಠ ದೃಷ್ಟಿಕೋನದ ಮೂಲಕ ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಿದ್ದೇನೆ.

ನನ್ನ ಸಂಶೋಧನೆಯಲ್ಲಿ ಸಾಂಸ್ಕೃತಿಕ ಅಧ್ಯಯನವೇ ಪ್ರಧಾನವಾಗಿರುವುದರಿಂದ ವಿಶ್ಲೇಷಣಾತ್ಮಕ ವಿಧಾನವನ್ನು ಪ್ರಮುಖವಾಗಿ ಅನುಸರಿಸಿರುತ್ತೇನೆ. ಆರು ಜನ ಲೇಖಕರ ಕಥಾಸಾಹಿತ್ಯದ ಹಿನ್ನೆಲೆಯಲ್ಲಿ ನನ್ನ ಸಾಂಸ್ಕೃತಿಕ ಅಧ್ಯಯನವಿರುವುದರಿಂದ ಅಲ್ಲಲ್ಲಿ ತುಲನಾತ್ಮಕ ಕ್ರಮವನ್ನೂ ಅನುಸರಿಸಿರುತ್ತೇನೆ.

ಅಧ್ಯಾಯ ೧.೨

ಮಲೆನಾಡ ಪರಿಸರದ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನಲೆಯ ಸ್ವರೂಪ

ಅಧ್ಯಾಯ ೧.೨ ಮಲೆನಾಡ ಪರಿಸರದ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆಯ ಸ್ವರೂಪ

'ಮಲೆನಾಡು' ಎಂದರೆ ಮಲೆನಾಡು ಪರಿಸರದ ಒಂದು ಪ್ರಾಂತ್ಯವಾದ ತೀರ್ಥಹಳ್ಳಿ ತಾಲ್ಲೂಕಿಗೆ ಸೀಮಿತಗೊಳಿಸಿಕೊಂಡಿರುತ್ತೇನೆ. ಕರ್ನಾಟಕದ ಚರಿತ್ರೆಯಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ ನೆಲ ತೀರ್ಥಹಳ್ಳಿ. ಬಾಹ್ಯ ರೂಪದ ವೈಶಿಷ್ಟ್ಯತೆಯಿಂದಲೂ ಮತ್ತು ಆಂತರಿಕ ಜೀವಸತ್ವವನ್ನು ತನ್ನೊಳಗೆ ಅಡಗಿಸಿಕೊಂಡು ಮೆರೆಯುತ್ತಿರುವ ಈ ನಾಡಿನ ಹಲವು ತಾಲ್ಲೂಕುಗಳಲ್ಲಿ ತೀರ್ಥಹಳ್ಳಿಯು ಒಂದಾಗಿದೆ. ಮಲೆನಾಡ ಪರಿಸರದ ಸಾಂಸ್ಕೃತಿಕ ವಿಶ್ಲೇಷಣೆಯ ಹಿನ್ನಲೆಯಲ್ಲಿ ಇದರ ಭೌಗೋಳಿಕ ಮತ್ತು ಐತಿಹಾಸಿಕ ಸ್ವರೂಪವನ್ನು ಸ್ಥೂಲವಾಗಿ ಇಲ್ಲಿ ಪರಿಚಯ ಮಾಡಲಾಗಿದೆ.

ಭೌಗೋಳಿಕ ಹಿನ್ನೆಲೆ

ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಈ ತಾಲ್ಲೂಕಿನ ಆಡಳಿತ ಕೇಂದ್ರವಿರುವ ಊರು. ಪಶ್ಚಿಮಘಟ್ಟದ ಸೆರಗಿನಲ್ಲಿರುವ ಈ ತಾಲ್ಲೂಕಿನ ಈಶಾನ್ಯ ದಿಕ್ಕಿನಲ್ಲಿ ಶಿವಮೊಗ್ಗ, ಉತ್ತರ ಮತ್ತು ಪಶ್ಚಿಮ ದಿಕ್ಕಿನಲ್ಲಿ ಹೊಸನಗರ ತಾಲ್ಲೂಕುಗಳು, ಪೂರ್ವ ಆಗ್ನೇಯ ಮತ್ತು ದಕ್ಷಿಣದ ಸ್ವಲ್ಪಭಾಗ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ಕೊಪ್ಪ ಮತ್ತು ಶೃಂಗೇರಿ ತಾಲ್ಲೂಕುಗಳೂ, ನೈಋತ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಮತ್ತು ಕಾರ್ಕಳ ತಾಲ್ಲೂಕುಗಳು ಸುತ್ತುವರಿದಿವೆ. ತಾಲ್ಲೂಕಿನ ಪಶ್ಚಿಮ ಪ್ರದೇಶ ಪಶ್ಚಿಮ ಘಟ್ಟಗಳಿಗೆ ಸೇರಿದ ಭಾಗವಾದುದರಿಂದ ದಟ್ಟವಾದ ಕಾಡುಗಳಿಂದ ಕೂಡಿದೆ. ಒತ್ತಾದ ಕಾಡುಗಳು ಮತ್ತು ಗಿರಿಶಿಖರಗಳಿಂದ ಕೂಡಿದ ಈ ಭೂಪ್ರದೇಶ ಪೂರ್ವ, ಆಗ್ನೇಯ ಮತ್ತು ಈಶಾನ್ಯಭಿಮುಖವಾಗಿ ಅನೇಕ ಬೆಟ್ಟ ಸಾಲುಗಳು ಹಬ್ಬಿವೆ. ಉಳಿದಂತೆ ದಟ್ಟವಾದ ಕಾಡುಗಳು, ಕಣಿವೆಗಳು, ಹೊಳೆ-ಹಳ್ಳಗಳು, ಝುರಿಗಳಿದ್ದು ಏರುತಗ್ಗು ಭೂಮಿಯ ನಡುವೆ ಅಲ್ಲಲ್ಲಿ ಬಯಲು, ಹುಲ್ಲುಗಾವಲುಗಳು ಇವೆ. ಪಶ್ಚಿಮದಿಂದ ಪೂರ್ವ ದಿಕ್ಕಿನ ಕಡೆ ಹೋದಂತೆಲ್ಲಾ ಕಾಡಿನ ದಟ್ಟಣಿ ಕಡಿಮೆಯಾಗುತ್ತಾ, ಅಲ್ಲಲ್ಲಿ ಸಮತಟ್ಟಾದ ಭೂಮಿ ಗೋಚರಿಸುತ್ತದೆ.

ತೀರ್ಥಹಳ್ಳಿ ಪ್ರದೇಶ ಮಲೆನಾಡಿನ ಕೇಂದ್ರಭಾಗವಾಗಿರುವುದರಿಂದ ಇಲ್ಲಿನ ಪಶ್ಚಿಮಘಟ್ಟ ಭಾಗದಲ್ಲಿ ಹೇರಳವಾದ ಮಳೆ ಬೀಳುತ್ತದೆ. ಇಲ್ಲಿನ ಆಗುಂಬೆ ದಕ್ಷಿಣದ ಚಿರಾಪುಂಜಿ ಎಂದೇ ಖ್ಯಾತವಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಪರ್ವತ ಸಾಲಿನ ಗಂಗಾಮೂಲದಲ್ಲಿ ಹುಟ್ಟುವ ತುಂಗಾನದಿ ಪಶ್ಚಿಮದಿಕ್ಕಿನಲ್ಲಿ ಈ ತಾಲ್ಲೂಕನ್ನು ಪ್ರವೇಶಿಸಿ, ಉತ್ತರಾಭಿಮುಖವಾಗಿ ಹರಿದು ಈಶಾನ್ಯಕ್ಕೆ ತಿರುಗಿ, ಬಾಳಗಾರು ಮಠದ ಸಮೀಪ ದಕ್ಷಿಣಾಭಿಮುಖವಾಗಿ ಹರಿದು, ಸಿಬ್ಬಲಗುಡ್ಡೆ ಬಳಸಿಕೊಂಡು ಮಹಿಷಿ ಸಮೀಪ ಉತ್ತರಾಭಿಮುಖವಾಗಿ ಹರಿದು, ನಂತರ ಈಶಾನ್ಯಾಭಿಮುಖವಾಗಿ ಶಿವಮೊಗ್ಗ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ರೀತಿ ಬಳಸಿಕೊಂಡು ಹರಿಯುವುದರಿಂದಲೇ ತುಂಗಾನದಿ ತೀರ್ಥಹಳ್ಳಿ ಪ್ರದೇಶದ ಜೀವನದಿಯಾಗಿದೆ. ಇದರ ಮುಖ್ಯ ಉಪನದಿ ಮಾಲತಿ. ನಾಡಿಗೇ ಬೆಳಕನ್ನು ನೀಡುತ್ತಿರುವ ಶರಾವತಿ, ವರಾಹಿಗಳು ಈ ತಾಲ್ಲೂಕಿನ ಇತರ ಪ್ರಮುಖ ನದಿಗಳು.

ಈ ಭೂಪ್ರದೇಶದ ಸಸ್ಯ ಸಂಪತ್ತು ಸಮೃದ್ಧವೂ, ವೈವಿಧ್ಯಮಯವೂ ಆಗಿದೆ. ಇಲ್ಲಿನ ಅರಣ್ಯದಲ್ಲಿ ಬೆಲೆಬಾಳುವ ಬೀಟೆ, ತೇಗ, ಹೊನ್ನೆ, ಮತ್ತು, ಹೊನಾಲು, ಗಂಧಗರಿಗೆ, ಶ್ರೀಗಂಧ, ನೇರಲು, ಹೆಬ್ಬಲಸು, ಜಂಟಿ, ಭೋಗಿ ಮುಂತಾದ ಮರಗಳಿವೆ. ದಟ್ಟವಾದ ಕಾಡಿರುವುದರಿಂದ ಪ್ರಾಣಿ ಸಂಪತ್ತು ಕೂಡ ವಿಪುಲವಾಗಿ, ವೈವಿಧ್ಯಮಯವಾಗಿವೆ. ಇಲ್ಲಿನ ಕಾಡುಗಳಲ್ಲಿ ಆನೆ, ಕಾಡುಕೋಣ, ಹಂದಿ, ಹುಲಿ, ಚಿರತೆ, ಕರಡಿ, ಜಿಂಕೆ, ಸಾರಂಗ, ಕಾಡುಕುರಿ, ಬರ್ಕ ನರಿ, ಮೊಲ ಮೊದಲಾದ ಪ್ರಾಣಿ ಸಂಪತ್ತಿನಿಂದಲೂ, ನವಿಲು, ಗಿಳಿ, ಕೋಗಿಲೆ, ಕಾಮಳ್ಳಿ, ಕಾಜಾಣ, ಹೊರಸಲಹಕ್ಕಿ, ಮಂಗಟೆಹಕ್ಕಿ, ಪಾರಿವಾಳ, ಕಾಡುಕೋಳಿ, ಹುಂಡುಕೋಳಿ, ಪಿಕಳಾರ, ಹುರುಳಿಹಕ್ಕಿ, ಮೈನಾ ಮುಂತಾದ ಪಕ್ಷಿ ಸಂಪತ್ತಿನಿಂದಲೂ ಕೂಡಿದೆ. ಆದರೆ ಈ ಕಾಡಿನ ಸಂಪತ್ತು ಮತ್ತು ಅದರೊಳಗಿನ ಪ್ರಾಣಿ–ಪಕ್ಷಿ ಸಂಪತ್ತು ಐವತ್ತು–ಅರವತ್ತು ವರ್ಷಗಳ ಹಿಂದಿನ ಈ ಮಲೆನಾಡಿನ ಸ್ವರೂಪವಾಗಿದೆ. ಜನಸಂಖ್ಯೆ ಹೆಚ್ಚಿದಂತೆ, ಕೃಷಿ ಭೂಮಿ ವಿಸ್ತರಣೆಗೊಂಡಂತೆ, ನಾಗರಿಕತೆ ಬೆಳೆದಂತೆ ಆ ಸಂಪತ್ತು ಕರಗುತ್ತಾ ಬಂದಿದೆ.

ಈ ಪ್ರದೇಶವು ಹೆಚ್ಚಾಗಿ ಜಂಬುಮಣ್ಣು ಅಥವಾ ಕೆಂಪುಜೇಡಿ ಮಿಶ್ರಿತ ಮಣ್ಣು ಇದ್ದರೆ ಮತ್ತೆ ಕೆಲವೆಡೆ ಮರಳು–ಜೇಡಿ ಮಿಶ್ರಿತವಾದ ಫಲವತ್ತಾದ ಮಣ್ಣು ಇದೆ. ಹಾಗೆ ಕೆಲವೆಡೆ ಕಲ್ಲುಗಳಿಂದ ಕೂಡಿ ಫಲವತ್ತಲ್ಲದ ಮಣ್ಣಿನ ಪ್ರದೇಶವೂ ಇದೆ. ಮಲೆನಾಡಿನ ಅಲ್ಲಲ್ಲಿ ಬಯಲು ಪ್ರದೇಶದಲ್ಲಿ ಗದ್ದೆಕೋಗುಗಳು, ಕಣಿವೆಯಂತಹ ಪ್ರದೇಶಗಳಲ್ಲಿ ಅಡಿಕೆ ತೋಟಗಳು ಇವೆ. ಈ ಪರಿಸರದಲ್ಲಿ ಭತ್ತ ಮತ್ತು ಅಡಿಕೆ ಪ್ರಮುಖ ಬೆಳೆಗಳಾಗಿವೆ. ಹಾಗೆ ಉಪಬೆಳೆಗಳಾಗಿ ಕಾಫಿ, ಏಲಕ್ಕಿ, ಕರಿಮೆಣಸು, ಶುಂಠಿ, ಕಬ್ಬು, ಹುರುಳಿ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತದೆ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅನೇಕ ಪೌರಾಣಿಕ ಮಹತ್ವವುಳ್ಳ ಸ್ಥಳಗಳಿವೆ. ಪರಶುರಾಮ ತನ್ನ ತಾಯಿ ರೇಣುಕೆಯನ್ನು ಕತ್ತರಿಸಿದ ಕೊಡಲಿಯ ರಕ್ತವನ್ನು ತೊಳೆಯಲು ಶಕ್ತವಾಯಿತೆಂದು ಐತಿಹ್ಯ ಹೇಳುವ ತುಂಗಾನದಿ ತೀರ್ಥಕೊಂಡವಿದೆ. ಈ ತೀರ್ಥಕೊಂಡಕ್ಕೆ ಹೊಂದಿಕೊಂಡ ಊರನ್ನು ತೀರ್ಥಹಳ್ಳಿ ಎಂದು ಕರೆಯಲಾಗಿದೆ ಎನ್ನುವ ಅಭಿಪ್ರಾಯವಿದೆ. ಭೀಮ ಇಲ್ಲಿ ನದಿಗೆ ಕಟ್ಟೆಕಟ್ಟಿದ ಎಂದು ಐತಿಹ್ಯ ಹೇಳುವ ಭೀಮನಕಟ್ಟೆ, ಶ್ರೀರಾಮ ಜಿಂಕೆ ರೂಪದ ಮಾರೀಚನನ್ನು ಕೊಂದ ಸ್ಥಳವೆಂದು ಐತಿಹ್ಯವಿರುವ ಮೃಗವಧೆ, ಶ್ರೀರಾಮ ಬಾಣ(ಶರ)ದಿಂದ ಹುಟ್ಟಿದ ನದಿ (ಆವತಿ) ಎಂಬ ಐತಿಹ್ಯವಿರುವ ಶರಾವತಿ ಉಗಮಸ್ಥಾನವಾದ ಅಂಬುತೀರ್ಥ ಎಂಬ ಊರುಗಳಿವೆ. ಮೇಳಿಗೆಯಲ್ಲಿ ಜೈನ ಬಸದಿಯಿದೆ. ಹಣಗೆರೆಯಲ್ಲಿ ಸಯ್ಯದ್ ಯಾದತ್ ದರ್ಗಾಗಳಿದ್ದು ಈ ಭಾಗದ ಜನತೆಯ ಧಾರ್ಮಿಕ ಸಮನ್ವಯತೆಯನ್ನು ಎತ್ತಿ ತೋರಿಸುವ ಸ್ಥಳಗಳಾಗಿವೆ. ತುಂಗಾನದಿಯ ಸಿಬ್ಬಲಗುಡ್ಡೆಯಲ್ಲಿ ಮೀನುಗಳು ನಿರ್ಭಯವಾಗಿ ವಿಹರಿಸುವುದರಿಂದ ನೈಸರ್ಗಿಕ ಮತ್ಸ್ಯಧಾಮವಾಗಿ ಪರಿಣಮಿಸಿದೆ. ಮಾಂಡವ್ಯ ಋಷಿಯ ತಪೋಭೂಮಿ ಎಂಬ ಐತಿಹ್ಯವಿರುವ ಮಂಡಗದ್ದೆಯಲ್ಲಿ ಪಕ್ಷಿಧಾಮವು, ಸೂರ್ಯಾಸ್ತ ದೃಶ್ಯವುಳ್ಳ ಆಗುಂಬೆಯು ಪ್ರೇಕ್ಷಣೀಯ ಸ್ಥಳಗಳಾಗಿವೆ. ಈ ರೀತಿ ಪೌರಾಣಿಕ ಹಿನ್ನಲೆಯಿಂದಲೂ, ನೈಸರ್ಗಿಕವಾದ ಚಲುವಿನಿಂದಲೂ ಈ ಭೂಪ್ರದೇಶ ವಿಶಿಷ್ಟವೆನಿಸಿದೆ.

ಐತಿಹಾಸಿಕ ಸ್ವರೂಪ

ತೀರ್ಥಹಳ್ಳಿ ತಾಲ್ಲೂಕಿನ ಕೇಂದ್ರದಿಂದ ಹತ್ತು ಕಿ.ಮೀ. ದೂರದಲ್ಲಿರುವ 'ಆರಗ'ವು ಪ್ರಸಿದ್ಧವಾದ ಐತಿಹಾಸಿಕ ಸ್ಥಳ. ಇದು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಹೊಂಬುಜದ ಸಾಂತರ ಅಧೀನದಲ್ಲಿತ್ತು. ಹೊಯ್ಸಳರ ಕಾಲಕ್ಕೆ ಇದು ಪ್ರಮುಖ ಸ್ಥಳವಾಗಿದ್ದಂತೆ ಕಂಡುಬರುತ್ತದೆ. ಮುಂದೆ ೧೪ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿ ಕಂಪಣ ಎಂಬ ಒಂದು ಪ್ರತ್ಯೇಕ ಘಟಕವಾಗಿ ಒಂದು ರಾಜ್ಯದ ಸ್ಥಾನಮಾನವನ್ನು ಪಡೆದಿತ್ತು. ಮೂರು ಪಟ್ಟಣಗಳು ಮತ್ತು ಹದಿನೆಂಟು ಕಂಪಣಗಳನ್ನು ಒಳಗೊಂಡಿರುವ ಆರಗ ರಾಜ್ಯದಲ್ಲಿ ಇಂದಿನ ಶಿವಮೊಗ್ಗ, ಶಿಕಾರಿಪುರ, ಹೊಸನಗರ, ತೀರ್ಥಹಳ್ಳಿ, ಸೊರಬ ಮತ್ತು ಕೊಪ್ಪ ತಾಲ್ಲೂಕುಗಳ ಭಾಗಗಳನ್ನು ಒಳಗೊಂಡಿತ್ತು. ಆರಗ ಆಡಳಿತದ ಕೇಂದ್ರಸ್ಥಳವಾಗಿತ್ತು. ವಿಜಯನಗರ ಅರಸರ ನಿರೂಪದಂತೆ ಅರಸು ಮನೆತನದವರು ಅಥವಾ ಅವರ ಬಂಧುಗಳು ಇಲ್ಲಿ ಆಡಳಿತ ನಡೆಸಿದರು. ಇದನ್ನು ಮೊದಲ ಘಟ್ಟದಲ್ಲಿ ಕಾಣಬಹುದು. ಈ ದೃಷ್ಟಿಯಿಂದ ಇಲ್ಲಿ ಆಳಿದವರು ಸಾಮಂತರು ಅಥವಾ ಮಾಂಡಳಿಕರೆಂದು ಕರೆಸಿಕೊಂಡಿಲ್ಲವೆಂಬುದು ವಿಶೇಷ. ಎರಡನೇ ಘಟ್ಟಕ್ಕೆ ಬಂದರೆ ವಿಜಯನಗರದ ದೊರೆ ಕೃಷ್ಣದೇವರಾಯನು ಆರಗ ರಾಜ್ಯವನ್ನು ಕೆಳದಿಯ ಅರಸರಿಗೆ ವಹಿಸಿದನು. ವಿಜಯನಗರದ ಸಾಮಂತನಾಗಿದ್ದ ಸದಾಶಿವನಾಯಕ (೧೫೩೦–೧೫೬೭) ಇಕ್ಕೇರಿಯಿಂದ ಆರಗದ ಆಡಳಿತ ನಡೆಸಿದ. ಹೀಗೆ ಆರಗ ಕೆಳದಿ ಅರಸರ ನೇರ ಆಡಳಿತಕ್ಕೆ ಒಳಪಟ್ಟಿತು.

ಮಲೆಕರ್ನಾಟಕದ ಅರಸು ಮನೆತನಗಳಲ್ಲಿ ಕೆಳದಿ ರಾಜವಂಶ ಪ್ರಮುಖವಾದುದು. ಇವರ ಸಾಮ್ರಾಜ್ಯದ ರಾಜಧಾನಿಗಳು ಕ್ರಮವಾಗಿ ಕೆಳದಿ, ಇಕ್ಕೇರಿ, ಬಿದನೂರು ಹಾಗೆ ಸ್ವಲ್ಪ ಕಾಲ ಭುವನಗಿರಿ ಆಗಿದ್ದವು. ಕೆಳದಿವಂಶದ ಪ್ರಸಿದ್ಧ ರಾಣಿ ಚೆನ್ನಮ್ಮಾಜಿ (೧೬೭೧–೧೬೯೭) ರಾಜ್ಯದೊಳಗಿನ ಒಳಸಂಚಿನ ಶಂಕೆಯ ಕಾರಣದಿಂದ ಸ್ವಲ್ಪ ಕಾಲ ಭುವನಗಿರಿಯನ್ನು ಕೇಂದ್ರ ಸ್ಥಳವನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡುತ್ತಾಳೆ. ಈ ಭುವನಗಿರಿ ತೀರ್ಥಹಳ್ಳಿ ಪ್ರಾಂತ್ಯಕ್ಕೆ ಸೇರಿರುವಂತಹದು.

೧೭೬೩ರಲ್ಲಿ ಹೈದರ್‌ಅಲಿ ದಾಳಿ ಮಾಡಿ ಬಿದನೂರನ್ನು ವಶಪಡಿಸಿಕೊಂಡ ಪರಿಣಾಮವಾಗಿ ಆತನ ಆಡಳಿತಕ್ಕೆ ಈ ಭುವನಗಿರಿಯು ಸೇರಿಹೋಯಿತು. ಈ ದುರ್ಗಕ್ಕೆ ತನ್ನ ಕಾವಲು ಪಡೆಯನ್ನು ಇಟ್ಟು 'ಕಾವಲುದುರ್ಗ'ವೆಂದು ಕರೆದ. ಕ್ರಮೇಣ ಜನರ ಬಾಯಲ್ಲಿ 'ಕವಲೇದುರ್ಗ'ವಾಯಿತೆಂದು ಹೇಳುತ್ತಾರೆ. ೧೭೯೯ರಲ್ಲಿ 'ಟಿಪ್ಪು' ಮಡಿದು, ಮೈಸೂರು ಸಾಮ್ರಾಜ್ಯ ಬ್ರಿಟೀಷರ ವಶವಾಯಿತು. ಬ್ರಿಟೀಷರು ಅದನ್ನು ಮೈಸೂರು ಒಡೆಯರಿಗೆ ವಹಿಸಿಕೊಡುತ್ತಾರೆ. ಇಲ್ಲಿ ಸೇನಾತುಕಡಿಯನ್ನು ಇಡುವುದರೊಂದಿಗೆ ಫೌಸುದಾರನ ಮೂಲಕ ಈ ಭಾಗದ ತೆರಿಗೆಯನ್ನು ವಸೂಲಿ ಮಾಡಲಾಗುತ್ತಿತ್ತು. ೧೮೮೨ರವರೆಗೆ ಕವಲೆದುರ್ಗ ತೀರ್ಥಹಳ್ಳಿ ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಈ ಹಳೆಯ ಊರು ದುರ್ಗದ ಪಶ್ಚಿಮಕ್ಕಿದೆ. ಇಲ್ಲಿ ಕೆಳದಿರಾಜರ ಗುರುಪರಂಪರೆಗೆ ಸೇರಿದ ಲಿಂಗಾಯಿತ ಮಠವಿದೆ. ವೆಂಕಟಪ್ಪನಾಯಕ ಪ್ರತಿಷ್ಠಾಪಿಸಿದನೆನ್ನಲಾದ ವಿನಾಯಕ, ವಿಜಯವಿಠಲ, ಭುವನೇಶ್ವರಿ ಮುಂತಾದ ದೇವಮಂದಿರಗಳಿವೆ. ಒಂದು ಮಸೀದಿಯೂ ಇದೆ. ಕೆಳದಿ ನಾಯಕರ ಕಾಲದಲ್ಲಿ ಕಟ್ಟಿಸಿದ ಕೆರೆಗಳಿವೆ, ಟಂಕಶಾಲೆ ಇದೆ.

೧೨೪೭ ಚದರ ಕಿ.ಮೀಟರ್‌ಗಳ ವಿಸ್ತೀರ್ಣವಿರುವ ಈ ತಾಲ್ಲೂಕಿನಲ್ಲಿ ೨೪೭ ಹಳ್ಳಿಗಳಿವೆ

ಎಂದು ಅಂಕಿಅಂಶಗಳು ಹೇಳುತ್ತವೆ. ಆಡಳಿತದ ಅನುಕೂಲಕ್ಕಾಗಿ ಅಗ್ರಹಾರ, ತೀರ್ಥಹಳ್ಳಿ, ಆಗುಂಬೆ, ಮುತ್ತೂರು ಮತ್ತು ಮಂಡಗದ್ದೆ ಎಂದು ಹೋಬಳಿಗಳಾಗಿ ವಿಂಗಡಿಸಲಾಗಿದೆ. ಹಿಂದೆ ತಲಾ ಒಂದು ಹೋಬಳಿಗೆ ಎರಡು ಸೀಮೆಗಳಾಗಿಯೂ ಪ್ರತಿ ಸೀಮೆಯನ್ನು ಮೇಲುಪಾಲು, ಕೆಳಪಾಲು ಎಂದು ಎರಡು ಪಾಲುಗಳಾಗಿಯೂ ವಿಂಗಡಿಸಲಾಗಿತ್ತು. ಈ ಪಾಲುಗಳಿಗೆ ಅನೇಕ ಗ್ರಾಮಗಳು ಸೇರಿದ್ದವು. ಈ ಸೀಮೆಯ ಮುಖಂಡನನ್ನು ಸೀಮೆಗೌಡ ಎಂದೂ, ಪಾಲು ಮುಖಂಡನನ್ನು ಪಾಲುಗೌಡ ಎಂದೂ, ಗ್ರಾಮದ ಮುಖಂಡನನ್ನು ಊರಗೌಡ ಎಂದು ಕರೆಯುತ್ತಿದ್ದರು. ಈಗ ಹೋಬಳಿ ವ್ಯವಸ್ಥೆ ಉಳಿಸಿಕೊಂಡು ಉಳಿದೆಲ್ಲವನ್ನು ಬೇರೆ ರೀತಿಯಲ್ಲಿ (ಗ್ರಾಮಗಳಾಗಿ) ವ್ಯವಸ್ಥೆಗೊಳಿಸಿಕೊಳ್ಳಲಾಗಿದೆ.

ಕ್ರಿ.ಶ. ೧೮೮೨ರಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಆಡಳಿತ ಕೇಂದ್ರವು ಕವಲೇದುರ್ಗದಿಂದ ವರ್ಗಾಯಿಸಲ್ಪಟ್ಟಿತು. ೧೮೮೧ರಲ್ಲಿಯೇ ದಿವಾನ್ ರಂಗಾಚಾರ್ಯರ ಕಾಲದಲ್ಲಿ 'ಪ್ರಜಾಪ್ರತಿನಿಧಿಗಳ ಸಭೆ' ಅಸ್ತಿತ್ವಕ್ಕೆ ಬಂತು. ಮೈಸೂರು ಮಹಾರಾಜ ಚಾಮರಾಜೇಂದ್ರ ಒಡೆಯರ್ ಅವರ ದಸರಾ ದುರ್ಬಾರಿಗೆ ಜನಪ್ರತಿನಿಧಿಯಾಗಿ ೧೯೦೧ರಲ್ಲಿ ದೇವಂಗಿ ರಾಮಣ್ಣಗೌಡರು ಆಹ್ವಾನಿತರಾಗುತ್ತಾರೆ. ತುಡ್ಕಿ ರಾಮಣ್ಣಗೌಡರು ಪ್ರಜಾಪ್ರತಿನಿಧಿಯ ಸಭೆಯ ಸದಸ್ಯರಾಗಿ ಸುಮಾರು ೨೦ ವರ್ಷಗಳ ಕಾಲ ಇದ್ದರು. ೧೯೪೦ರಲ್ಲಿ ಮೈಸೂರು ಶಾಸನದ ಪ್ರಕಾರ ಪ್ರಜಾಪ್ರತಿನಿಧಿ ಸಭೆಗೆ ಪ್ರತಿ ತಾಲ್ಲೂಕಿನಿಂದ ಇಬ್ಬರಿಗೆ ಮತದಾರರಿಂದ ಚುನಾಯಿತರಾಗುವ ಅವಕಾಶ ಕಲ್ಪಿಸಲಾಗಿತ್ತು. ಆಗ ನಡೆದ ಚುನಾವಣೆಯಲ್ಲಿ ತುಡ್ಕಿ ರಾಮಣ್ಣಗೌಡರು ಮತ್ತು ಕಡಿದಾಳ್ ಮಂಜಪ್ಪ ಅವರು ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿ ಆಯ್ಕೆಯಾಗಿದ್ದರು. ೧೯೪೫ರಲ್ಲಿ ಶ್ರೀರಾಮಭಟ್ಟರು ಮತ್ತಿ ಶ್ರೀನಾಲೂರು ಚಿನ್ನಪ್ಪಗೌಡರು ಪ್ರಜಾಪ್ರತಿನಿಧಿಯ ಸಭೆಯ ಸದಸ್ಯರಾಗಿ ಆಯ್ಕೆಯಾಗುತ್ತಾರೆ.

೧೯೪೮ರಲ್ಲಿ ಮೈಸೂರು ಸಂವಿಧಾನ ರಚನಾ ಸಭೆಗೆ ಶಿವಮೊಗ್ಗ ಜಿಲ್ಲೆಯಿಂದ ಆಯ್ಕೆಯಾದ ನಾಲ್ವರಲ್ಲಿ ಕಡಿದಾಳ್ ಮಂಜಪ್ಪ ಒಬ್ಬರು. ಭಾರತದ ಸಂವಿಧಾನಕ್ಕೆ ಅನುಗುಣವಾಗಿ ಚುನಾವಣೆ ನಡೆಯುವವರೆಗೆ ಮೈಸೂರು ಸಂವಿಧಾನ ಸಭೆಯು ವಿಧಾನಸಭೆಯಾಗಿ ಕಾರ್ಯ ನಿರ್ವಹಿಸತಕ್ಕದ್ದೆಂದು ತೀರ್ಮಾನವಾಗುತ್ತದೆ. ಒಂದು ರೀತಿಯಲ್ಲಿ ಸ್ವತಂತ್ರ ಭಾರತದ, ಮೈಸೂರು ರಾಜ್ಯದ ತೀರ್ಥಹಳ್ಳಿ ಕ್ಷೇತ್ರದ ಮೊದಲ ಜನಪ್ರತಿನಿಧಿ ಶ್ರೀ ಕಡಿದಾಳ್.ಮಂಜಪ್ಪನವರು ಎನ್ನಬಹುದು. ಹಾಗೆಯೇ ೧೯೫೨ರಲ್ಲಿ ಭಾರತ ಸಂವಿಧಾನದ ಪ್ರಕಾರ ವಿಧಾನಸಭೆಗೆ ಚುನಾವಣೆ ನಡೆಯಿತು. ತೀರ್ಥಹಳ್ಳಿ ತಾಲ್ಲೂಕಿನ ಅಗ್ರಹಾರ ಹೋಬಳಿ ಬಿಟ್ಟು ಉಳಿದ ಹೋಬಳಿಗಳು ಮತ್ತು ಕೊಪ್ಪ ತಾಲ್ಲೂಕು ಸೇರಿರುವ ತೀರ್ಥಹಳ್ಳಿ-ಕೊಪ್ಪ ವಿಧಾನಸಭಾ ಕ್ಷೇತ್ರವನ್ನು ಕಡಿದಾಳ್ ಮಂಜಪ್ಪ ಪ್ರತಿನಿಧಿಸಿದ್ದರು. ಹಾಗೆ ತೀರ್ಥಹಳ್ಳಿ ತಾಲ್ಲೂಕಿನ ಅಗ್ರಹಾರ ಹೋಬಳಿ ಸೇರಿದಂತೆ ಸಾಗರ-ಹೊಸನಗರ ವಿಧಾನಸಭಾ ಕ್ಷೇತ್ರವನ್ನು ಶಾಂತವೇರಿ ಗೋಪಾಲಗೌಡರು ಪ್ರತಿನಿಧಿಸಿದ್ದರು. ೧೯೫೭ರ ಚುನಾವಣೆಯಲ್ಲಿ ಪರಿವರ್ತಿತ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರವನ್ನು ಎ.ಆರ್.ಬದರಿ ನಾರಾಯಣ್‌ರವರು ಪ್ರತಿನಿಧಿಸಿದ್ದರು. ೧೯೬೨ರ ಮತ್ತು ೧೯೬೭ರ ಚುನಾವಣೆಯಲ್ಲಿ ಸತತವಾಗಿ ಗೆದ್ದು ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರವನ್ನು ಶಾಂತವೇರಿ ಗೋಪಾಲಗೌಡರು ಪ್ರತಿನಿಧಿಸಿದ್ದರು. ಮುಂದಿನ ಅವಧಿಯಲ್ಲಿ ಕ್ರಮವಾಗಿ ಕೋಣಂದೂರು ಲಿಂಗಪ್ಪ, ಕಡಿದಾಳ್ ದಿವಾಕರ್,

ಡಿ.ಬಿ.ಚಂದ್ರೇಗೌಡ, ಪಟಮಕ್ಕಿ ರತ್ನಾಕರ್, ಆರಗ ಜ್ಞಾನೇಂದ್ರ (ಮೂರು ಬಾರಿ) ಪ್ರತಿನಿಧಿಸಿದ್ದರು. ಈಗ ಕಿಮ್ಮನೆ ರತ್ನಾಕರ್ ಪ್ರತಿನಿಧಿಸುತ್ತಿದ್ದಾರೆ.

ಹೀಗೆ ರಾಜಕೀಯ ಕ್ಷೇತ್ರದಲ್ಲಿ ಶ್ರೀ ಕಡಿದಾಳ್ ಮಂಜಪ್ಪ, ಶಾಂತವೇರಿ ಗೋಪಾಲಗೌಡರಂತಹ ಧೀಮಂತ, ಮಾದರಿ ರಾಜಕಾರಣಿಗಳನ್ನು ಈ ನೆಲ ನೀಡಿದೆ. ಸಾಹಿತ್ಯ ಕ್ಷೇತ್ರದಲ್ಲಿ ಎಲ್ಲರಿಗೂ ತಿಳಿದಿರುವಂತೆ ಕುವೆಂಪು, ಅನಂತಮೂರ್ತಿ, ಹಾ.ಮಾ.ನಾಯಕ, ಎಸ್.ವಿ.ಪರಮೇಶ್ವರಭಟ್ಟ, ಪೂರ್ಣಚಂದ್ರ ತೇಜಸ್ವಿ ಮುಂತಾದ ಪ್ರತಿಭೆಗಳನ್ನು ನೀಡಿದೆ. ಸ್ವಾತಂತ್ರ್ಯ ಹೋರಾಟಗಾರರಾದ ದೇವಂಗಿ ಮಾನಪ್ಪ, ಬಸವಾನಿ ರಾಮಚಂದ್ರಶರ್ಮ ಅವರು, ಸಹಕಾರ ಕ್ಷೇತ್ರದಲ್ಲಿ ಸಾಧನೆಗೈದ ಬಿ.ಎಸ್.ವಿಶ್ವನಾಥ್ ಅವರು, ಚಲನಚಿತ್ರ ಕ್ಷೇತ್ರದಲ್ಲಿ ಖ್ಯಾತರಾದ ಗಿರೀಶ ಕಾಸರವಳ್ಳಿಯವರು, ರಾಜ್ಯ ರೈತ ಸಂಘಟನೆಯ ಪ್ರವರ್ಧಮಾನಸ್ಥಿತಿಗೆ ಕಾರಣರಾದ ಎನ್.ಡಿ.ಸುಂದರೇಶ್–ಕಡಿದಾಳ್ ಶಾಮಣ್ಣ ಅವರು, ಸುಪ್ರಿಂಕೋರ್ಟ್ ನ್ಯಾಯಾಧೀಶರಾಗಿ, ರಾಜ್ಯಪಾಲರಾಗಿ ಗೌರವಕ್ಕೆ ಪಾತ್ರರಾದ ಶ್ರೀ ರಾಮಾಜೋಯಿಸ್ ಅವರು ಈ ಪರಿಸರದಿಂದ ಹುಟ್ಟಿ ಬಂದವರು.

ಗ್ರಂಥ ಋಣ :

೧. ಕರ್ನಾಟಕ ರಾಜ್ಯ ಗೆಝೆಟಿಯರ್ ಶಿವಮೊಗ್ಗ ಜಿಲ್ಲೆ.

೨. ರಂಗಾಚಾರ್.ಕೆ.ಆರ್., ತೀರ್ಥಹಳ್ಳಿ, ಕನ್ನಡ ವಿಷಯ ವಿಶ್ವಕೋಶ (ಸಂ) ಹಾ.ಮಾ.ನಾಯಕ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ೧೯೭೯.

೩. ರಾಮಭಟ್ಟ ಬಿ.ಎಸ್. ಆರಗದ ಅರಸರು, ಮಲೆ ಕರ್ನಾಟಕದ ಅರಸು ಮನೆತನಗಳು (ಸಂ) ರಾಜಾರಾಮ್ ಹೆಗಡೆ, ಅಶೋಕ ಶೆಟ್ಟರ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೨೦೦೧.

೪. ಷೇಕ್‌ಅಲಿ.ಬಿ., ಜಿ.ಆರ್.ರಂಗಸ್ವಾಮಯ್ಯ, ದಕ್ಷಿಣ ಭಾರತದ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೪.

೫. ಕಡಿದಾಳ್ ಮಂಜಪ್ಪ, ನನಸಾಗದ ಕನಸು, ಕಡಿದಾಳ್ ಪ್ರಕಾಶನ ಬೆಂಗಳೂರು, ೧೯೯೦.

೬. ಶ್ರೀಕಂಠ ಕೂಡಿಗೆ, ತೀರ್ಥಹಳ್ಳಿ ತಾಲ್ಲೂಕು, ನಾಮಧಾರಿ (ಸಂ) ಕೌಲಾನಿ ಧರ್ಮಯ್ಯ, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ (ರಿ.), ೨೦೦೨.

ಅಧ್ಯಾಯ ೨

ಮತಾಂತರ ಪ್ರಕ್ರಿಯೆ : ಕಥಾಸಾಹಿತ್ಯ

ಅಧ್ಯಾಯ ೨. ಮತಾಂತರ ಪ್ರಕ್ರಿಯೆ : ಕಥಾಸಾಹಿತ್ಯ

ಮಲೆನಾಡ ಪರಿಸರ

ಸಹ್ಯಾದ್ರಿ ಶ್ರೇಣಿ ಎಂದು ಕರೆಯಲ್ಪಡುವ ಘಟ್ಟದ ಸಾಲು ಭಾರತದ ಪಶ್ಚಿಮದ ಸೆರಗಿನಲ್ಲಿ ಹಾದು ಹೋಗಿದೆ. ಈ ಪರ್ವತ ಶ್ರೇಣಿಯ ಪೂರ್ವಕ್ಕೆ ಬೆಟ್ಟ-ಗುಡ್ಡ, ಕಾಡು-ಕಣಿವೆಗಳಿಂದಲೂ, ವೈವಿಧ್ಯಮಯವಾದ ಸಸ್ಯರಾಶಿ, ಜೀವಸಂಕುಲಗಳಿಂದಲೂ ಕೂಡಿ ನೋಡುಗರಿಗೆ ರಮ್ಯವೂ ರುದ್ರಭಯಂಕರವೂ ಆದ ನಾಡೇ ಮಲೆನಾಡು. (ಇದು ಇಂದಿನ ಸ್ವರೂಪದ ಮಲೆನಾಡಲ್ಲ ; ಅರವತ್ತು - ಎಪ್ಪತ್ತು ವರ್ಷಗಳ ಹಿಂದಿನ ಮಲೆನಾಡ ಸ್ವರೂಪ) ಇಂತಹ ಮಲೆನಾಡಿನ ಒಂದು ಭಾಗವಾದ ತೀರ್ಥಹಳ್ಳಿ ಪ್ರಾಂತ್ಯವು ಸಾಂಸ್ಕೃತಿಕವಾಗಿ ತನ್ನದೇ ಆದ ಛಾಪು ಮೂಡಿಸಿದ ಪರಿಸರ.

ಒಂದು ನೂರು ವರ್ಷಗಳ ಹಿಂದೆ ಮಲೆನಾಡ ಪರಿಸರದ ಬದುಕು ಹೇಗಿತ್ತು ಎಂಬುದು ಊಹೆಗೂ ನಿಲುಕದ ಸಂಗತಿ. ದಕ್ಷಿಣದ ಚಿರಾಪುಂಜಿ ಎಂದೇ ಖ್ಯಾತವಾಗಿರುವ ಸ್ಥಳವನ್ನು ಒಳಗೊಂಡಿರುವ ಈ ನೆಲದಲ್ಲಿ ವರ್ಷದ ಆರು ತಿಂಗಳು ವರ್ಷಧಾರೆ. ಆದ ಕಾರಣ ತುಂಬಿ ಹರಿವ ತುಂಗಾ, ಭದ್ರ, ಶರಾವತಿ ಮುಂತಾದ ನದಿಗಳಿಂದಲೂ, ಇವನ್ನು ಸೇರುವ ಹಳ್ಳಕೊಳ್ಳಗಳಿಂದಲೂ ಮಲೆನಾಡಿನ ಬಹುತೇಕ ಹಳ್ಳಿಗಳು ಹೊರ ಪ್ರಪಂಚದ ಸಂಪರ್ಕ ಕಳೆದುಕೊಂಡು ಅಂಡಮಾನ ದ್ವೀಪಗಳಾಗಿರುತ್ತಿದ್ದುವು. ಇಂತಹ ಪರಿಸರವು ಸರಿಯಾದ ರಸ್ತೆ, ಸಾರಿಗೆ, ಶಾಲೆ, ಆಸ್ಪತ್ರೆ ಮುಂತಾಗಿ ಎಲ್ಲ ಬಗೆಯ ಮೂಲಭೂತ ನಾಗರೀಕ ಸೌಲಭ್ಯಗಳಿಂದ ದೂರವಾಗಿಯೇ ಉಳಿದಿತ್ತು.

ಇಂತಹ ಪ್ರಾಕೃತಿಕ ಪರಿಸರದಲ್ಲಿ ಹಲವು ಜನ ಜಾತಿ ಸಮುದಾಯಗಳು ನೂರಾರು ವರ್ಷಗಳಿಂದ ಬಾಳಿಕೊಂಡು ಬರುತ್ತಿವೆ. ದೇವರ ಪೂಜೆ, ನಿಮಿತ್ತ ನೋಡುವುದು, ಜಾತಕ ಬರೆಯುವುದು, ಮದುವೆ ಮಾಡಿಸುವುದು, ಸತ್ಯನಾರಾಯಣವ್ರತ ನಡೆಸುವುದು ಮುಂತಾಗಿ ಪೌರೋಹಿತ್ಯ ಕೆಲಸ ನಿರ್ವಹಿಸುವ ಬ್ರಾಹ್ಮಣ ಸಮುದಾಯ. ಅಲ್ಪ ಸಂಖ್ಯೆಯಲ್ಲಿರುವ ಇವರಲ್ಲಿ ಕೆಲವರು ಗದ್ದೆ-ತೋಟ ಮಾಡುವ ಕೃಷಿಕರು, ಇನ್ನು ಕೆಲವರು ಜಮೀನ್ದಾರರಾಗಿದ್ದು ಲೇವಾದೇವಿ ವ್ಯವಹಾರವನ್ನು ಉಳ್ಳವರೂ ಆಗಿದ್ದರು. ಈ ಮಲೆನಾಡ ಪರಿಸರದಲ್ಲಿ ಬಹುಸಂಖ್ಯೆಯಲ್ಲಿರುವ ಜನ ಸಮುದಾಯವೆಂದರೆ ಒಕ್ಕಲಿಗರು. ಇವರಲ್ಲಿ ಕೆಲವರು ಜಮೀನ್ದಾರರು, ಹಲವರು ಗೇಣಿದಾರರು, ಮತ್ತೆ ಕೆಲವರು ಕೃಷಿ ಕಾರ್ಮಿಕರೂ ಆಗಿದ್ದರು. ಇವರನ್ನು ಬಿಟ್ಟರೆ ಹೆಚ್ಚಿನ ಸಂಖ್ಯೆಯಲ್ಲಿರುವ ಜನ ಸಮುದಾಯವೆಂದರೆ ಹಳೇ ಪೈಕದವರು (ದೀವರು). ಜಾತಿ ಸೂಚಕ ಪದವೇ ಹೇಳುವಂತೆ ಈ ಪರಿಸರದ ಮೂಲನಿವಾಸಿಗಳು ಇವರಾಗಿರಬಹುದು. ಬಗನಿ ಮರದಿಂದ ಕಳ್ಳು ಇಳಿಸಿ ಮಾರುವುದು ಇವರ ಮುಖ್ಯ ಕಾಯಕ. ಇವರಲ್ಲಿ ಕೆಲವರು ಗೇಣಿದಾರರೂ ಆಗಿದ್ದರು. ಈ ಬಹುಮುಖ್ಯ ಜನ ಜಾತಿ ಸಮುದಾಯಗಳಿಗೆ ನೆರವಾಗುವ, ಪರಸ್ಪರ ಪೂರಕವಾಗುವ ವಿವಿಧ ಕಸುಬನ್ನು ಪರಂಪರಾಗತವಾಗಿ ನಡೆಸಿಕೊಂಡು ಬರುತ್ತಿರುವ ಹಲವು ಜಾತಿ ಸಮುದಾಯಗಳನ್ನು ಕೂಡ ಗಮನಿಸಬಹುದು. ಬಟ್ಟೆ ಮಡಿ ಮಾಡುವ ಕಾಯಕದ ಅಗಸರು, ಪಲ್ಲಕ್ಕಿ ಹೊರುವ, ದೋಣಿ ನಡೆಸುವ ಬೋವಿಗಳು, ಬಣ್ಣ ಬಳಿವ, ಗೋಡೆ ಚಿತ್ತಾರ ಬರೆವ ಬಣಗಾರರು, ಮಡಿಕೆ-ಕುಡಿಕೆ ತಯಾರಿಸುವ ಕುಂಬಾರರು, ಕ್ಷೌರಿಕ ಕಾಯಕದ ಕ್ಷೌರಿಕರು, ಬುಟ್ಟಿ-ತಟ್ಟೆ ಹೆಣೆಯುವ ಹಂಬಳಿಗರು, ಕೃಷಿ ಕಾರ್ಮಿಕರಾದ

ಹಸಲರು, ಬೇಲರು, ಊರ ಹೊರವಲಯದಲ್ಲಿ ತಮ್ಮದೇ ಕೇರಿಯಲ್ಲಿ ವಾಸಿಸುವ ಹರಿಜನರು ಮುಂತಾಗಿ ಮಲೆನಾಡ ಪರಿಸರದಲ್ಲಿ ಬದುಕುವ ಈ ಎಲ್ಲಾ ಜನ ಸಮುದಾಯಗಳ ಸಾಮಾಜಿಕ ಬದುಕಿನಲ್ಲಿ ಸಾಮಾಜಿಕ ಶ್ರೇಣಿಯೊಂದು ಬಹುಕಾಲದಿಂದ ನೆಲೆಸಿದೆ.

ಭೌತಿಕವಾಗಿ ಮೇಲುನೋಟಕ್ಕೆ ನಾಗರಿಕತೆಯ ಜಂಜಾಟದಿಂದ ದೂರವಿರುವ ಪ್ರಶಾಂತವಾದ ತಾಣದಂತೆ ಕಂಡರೂ ಅಭೌತಿಕವಾಗಿ ಈ ಪರಿಸರದ ಜನಸಮುದಾಯಗಳ ಬದುಕು ಹಾಗಿರಲಿಲ್ಲ. ಸಾವಿರಾರು ವರ್ಷಗಳಿಂದ ನಿಸರ್ಗಕ್ಕೆ ಹತ್ತಿರವಾಗಿ ಬದುಕಿ ಬಾಳಿಕೊಂಡು ಬರುತ್ತಿರುವ ಇಲ್ಲಿನ ಜನರಲ್ಲಿ ಭೂತ, ಪ್ರೇತ, ದೆವ್ವಗಳ ಬಗ್ಗೆ ನಂಬಿಕೆಯೂ ಇವುಗಳಿಂದ ರಕ್ಷಣೆ ಪಡೆಯಲು ಪ್ರಾಣಿಗಳ ಬಲಿ ಆಚರಣೆಯನ್ನು, 'ಗಣ' ಮಕ್ಕಳ – ಜ್ಯೋತಿಷಿಗಳ ಅವಲಂಬನೆಯನ್ನು ಇಟ್ಟುಕೊಂಡವರಾಗಿದ್ದರು. ಅಜ್ಞಾನ, ಅನಕ್ಷರತೆ ಥಾಳಾಗಿದ್ದು, ಮೂಢಾಚರಣೆಗಲ್ಲಿ ಮುಳುಗಿದ್ದರು. ಮಧ್ಯಮ ಮತ್ತು ಕೆಳ ಸಮುದಾಯಗಳಲ್ಲಿ ಹೆಂಡ–ಕಳ್ಳುಗಳ ಸಮಾರಾಧನೆ ಸರ್ವೇಸಾಮಾನ್ಯವಾದ ಸಂಗತಿಯಾಗಿತ್ತು. ಬಲಿಷ್ಠರ ಅನೈತಿಕ ಸಂಬಂಧಗಳು, ಜಮೀನ್ದಾರರ ಅಟ್ಟಹಾಸಗಳು, ಪುರೋಹಿತರ ಶೋಷಣೆ ಇವೆಲ್ಲಾ ಸಾಮಾನ್ಯ ಸಂಗತಿಗಳಂತೆ ನಡೆಯುತ್ತಿದ್ದವು. ಕೆಳವರ್ಗದವರ ಬದುಕು ಹಾಗೂ ಒಟ್ಟು ಸ್ತ್ರೀಯರ ಬದುಕು ಭಾರತದ ಇತರೆಡೆಗಳಲ್ಲಿ ಯಾವ ರೀತಿ ಶೋಷಣೆ, ದಬ್ಬಾಳಿಕೆಗೆ ಒಳಗಾಗಿತ್ತೋ ಅದೇ ರೀತಿ ಇಲ್ಲಿನವರ ಬದುಕು ಕೂಡ ಭಿನ್ನವಾಗಿಯೇನೂ ಇರಲಿಲ್ಲ. ಸಹಜವಾಗಿ ನಿಸರ್ಗಕ್ಕೆ ಹೊಂದಿಕೊಂಡು ಬದುಕುತ್ತಿದ್ದ ಇಲ್ಲಿನ ಜನಸಮುದಾಯ ಪ್ರಕೃತಿಯ ವಿಕೋಪವನ್ನು ಎದುರಿಸುತ್ತಿದ್ದರು. ಆದರೆ ಮಲೆನಾಡ ಪರಿಸರವನ್ನು ಮಾರಿಯಂತೆ ಕಾಡುತ್ತಿದ್ದ ಮಲೇರಿಯಾವನ್ನು ಎದುರಿಸದಾದರು. ಒಟ್ಟಿನಲ್ಲಿ ಮಾನಸಿಕವಾಗಿಯೂ, ಭೌತಿಕವಾಗಿಯೂ ಪ್ರಾಚೀನ ಭಾರತೀಯ ಸಾಮಾಜಿಕ ಕ್ಷೇತ್ರದ ಸಹಜ ಬದುಕಿನಂತೆಯೇ ಸ್ಥಗಿತವಾಗಿರುವಂತೆ ತೋರುತ್ತಿದ್ದ ಮಲೆನಾಡ ಪರಿಸರದಲ್ಲಿ ತೀವ್ರತರವಾದ ಚಲನೆ ಕಾಣಿಸಿಕೊಂಡಿದ್ದು, ಸ್ಥಿತ್ಯಂತರವನ್ನುಂಟು ಮಾಡಿದ್ದು ಆಧುನಿಕತೆಯು ಪ್ರವೇಶಿಸತೊಡಗಿದಾಗ. ಈ ಬಗೆಯ ಪಲ್ಲಟಕ್ಕೆ ಕ್ರೈಸ್ತಧರ್ಮ ಪ್ರಚಾರಕರು ಮುಖ್ಯವಾಗಿ ಕಾರಣರಾಗುತ್ತಾರೆ.

ಮಿಷನರಿ ಕಣ್ಣಲ್ಲಿ ಮಲೆನಾಡು

ಕರ್ನಾಟಕದಲ್ಲಿ ಬ್ರಿಟೀಷರ ನೇರವಾದ ಆಡಳಿತಕ್ಕೆ ಒಳಗಾದ ಮೊತ್ತಮೊದಲಿನ ಪ್ರದೇಶವೆಂದರೆ ದಕ್ಷಿಣ ಕನ್ನಡ ಜಿಲ್ಲೆ. ಇದು ಮಲೆನಾಡಿನ ಘಟ್ಟ ಪ್ರದೇಶದ ಕೆಳಗೆ ಪಶ್ಚಿಮಕ್ಕಿರುವ ಕರಾವಳಿ ತೀರ. ಕ್ರಿ.ಶ.೧೭೯೯ರ ಮೈಸೂರು ಯುದ್ಧ ಮತ್ತು ೧೮೧೮ರ ಖಡಕೆ ಯುದ್ಧದ ಜಯದ ಮೂಲಕ ಭಾರತವನ್ನು ಸಂಪೂರ್ಣ ತಮ್ಮ ಹಿಡಿತಕ್ಕೆ ಬ್ರಿಟೀಷರು ತಂದುಕೊಂಡರು. ತದನಂತರ ತಮ್ಮ ಪ್ರಭುತ್ವದ ಬೇರುಗಳನ್ನು ಆಳವಾಗಿ ಹುಗಿಸಲು ಮಾಡಿದ ಮೊದಲ ಹುನ್ನಾರವೆಂದರೆ ತಮ್ಮ ಕ್ರೈಸ್ತಧರ್ಮದ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವುದು. ಪ್ರಭುತ್ವದ ಬೆಂಬಲ ಪಡೆದ ಐರೋಪ್ಯ ಕ್ರೈಸ್ತ ಮಿಷನರಿ ಸಂಸ್ಥೆಗಳು ಭಾರತೀಯ ಸಮಾಜದ ಕೊರತೆ ಮತ್ತು ದೌರ್ಬಲ್ಯವನ್ನು ಬಳಸಿಕೊಂಡು ಮತಾಂತರ ಚಟುವಟಿಕೆಯಲ್ಲಿ ತೊಡಗಿದರು. ಆದರೆ ಅವರ ಪ್ರವೇಶ ನೇರವಾದದ್ದಲ್ಲ. ಇಲ್ಲಿನ ಅನಕ್ಷರತೆ ಹೋಗಲಾಡಿಸಲು ಮಿಷನರಿ ಶಾಲೆಗಳನ್ನು ತೆರೆದರು. ಜನರ ಆರೋಗ್ಯ ಸುಧಾರಿಸಲು ಆಸ್ಪತ್ರೆಗಳನ್ನು ತೆರೆದರು. ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು

ನೀಡುವುದರ ಮೂಲಕ ಫಲಾನುಭವಿಗಳ ಮನವೊಲಿಸಿಕೊಂಡು ಮತಾಂತರಗೊಳಿಸುವುದು ಅವರ ಕಾರ್ಯತಂತ್ರ.

ಕ್ರೈಸ್ತ ಮಿಷನರಿಗಳು, ತಮ್ಮ ಸೇವೆ ನಡೆಸಲು ಮತ್ತು ಆ ಮೂಲಕ ಮತಾಂತರ ಚಟುವಟಿಕೆ ಆಯ್ಕೆ ಮಾಡಿಕೊಳ್ಳುವ ಸ್ಥಳಗಳನ್ನು ಗಮನಿಸಬೇಕು. ಸಾಮಾನ್ಯವಾಗಿ ಬಡತನ, ಅನಕ್ಷರತೆ, ಅನಾರೋಗ್ಯ, ಮೂಢಾಚರಣೆಗಳಲ್ಲಿ ಮುಳುಗಿರುವಂತಹ ಪರಿಸರವನ್ನೋ, ಗುಡ್ಡಗಾಡು ಪ್ರದೇಶಗಳಲ್ಲಿ ಬುಡಕಟ್ಟುಗಳ ಸಮುದಾಯಗಳು ವಾಸಿಸುವ ತಾಣಗಳನ್ನೋ ಆಯ್ದುಕೊಳ್ಳುತ್ತಿದ್ದರು. ಮಹಾರಾಷ್ಟ್ರ, ಮಧ್ಯಪ್ರದೇಶ, ಬಿಹಾರ, ಅಸ್ಸಾಂ, ನಾಗಲ್ಯಾಂಡ್ ಮುಂತಾದ ಪ್ರದೇಶಗಳಲ್ಲಿ ಹಿಂದುಳಿದ ಜನಾಂಗ ಮತ್ತು ಬುಡಕಟ್ಟು ಜನಾಂಗವಿರುವಲ್ಲಿ ಮತಾಂತರ ಪ್ರಕ್ರಿಯೆ ನಡೆದಿರುವುದನ್ನು ಕಾಣಬಹುದು. ಬಹುಶಃ ಈ ಹಿನ್ನಲೆಯಲ್ಲಿ ಮಲೆನಾಡ ಪರಿಸರವೂ ಬೆಟ್ಟ ಗುಡ್ಡಗಳಿಂದಲೂ, ದಟ್ಟವಾದ ಕಾಡುಗಳಿಂದಲೂ ಕೂಡಿದ್ದು ನಾಗರಿಕ ಸಂಪರ್ಕದಿಂದ ದೂರ ಇರುವ ಭೂಭಾಗವಾದುದರಿಂದ ಇಲ್ಲಿಯ ಜನ ಸಮುದಾಯ ಯಾವುದೋ ಬುಡಕಟ್ಟುಗಳಿಗೆ ಸೇರಿದವರೆಂದೂ, ಚಾರಿತ್ರಿಕ-ಸಾಂಸ್ಕೃತಿಕ ಪರಂಪರೆಯನ್ನು ಹೊಂದಿಲ್ಲದವರೆಂದು ಮಿಷನರಿಗಳು ಭಾವಿಸಿದ್ದರು ಎನ್ನಬಹುದು. ಮಿಷನರಿಗಳು ಈ ತೀರ್ಥಹಳ್ಳಿ ಪ್ರಾಂತ್ಯವನ್ನು ಸುತ್ತಾಡಿ ಅಧ್ಯಯನ ನಡೆಸಿರುವ ಬಗ್ಗೆ ಆಧಾರವೊಂದು ದೊರೆಯುತ್ತದೆ.

ಪ್ರೊಟೆಸ್ಟಂಟ್ ಕ್ರಿಶ್ಚಿಯನ್ ಮಿಷನರಿಯಾಗಿದ್ದ 'ನೈಟಿಂಗೇಲ್' ಎಂಬುವವನು ೧೯೨೨ರಲ್ಲಿ ಬರೆದಿರುವ "ದಿ ಸ್ಟೋರಿ ಆಫ್ ದಿ ನಾಮಧಾರಿಸ್" ಎಂಬ ಖಾಸಗಿ ಮತ್ತು ರಹಸ್ಯ ವರದಿಯೊಂದು ಮೈಸೂರಿನ ಮಿಷನ್ ಪ್ರೆಸ್‌ನಲ್ಲಿ ಮುದ್ರಿತವಾಗಿದೆ.[೧] ಇದರ ಪ್ರಕಾರ ೧೮೭೧ರಲ್ಲಿಯೆ ರೆವೆರೆಂಡ್ ಎ.ಜೆ.ಓ. ಲೈಲ್ ಎಂಬುವವರು ಈ ಮಲೆನಾಡ ಪ್ರದೇಶದಲ್ಲಿ ಸುತ್ತಾಡಿರುವ ಬಗ್ಗೆ, ನಾಮಧಾರಿ ಒಕ್ಕಲಿಗರ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿರುವುದನ್ನು ತಿಳಿಸುತ್ತದೆ. ಈ ಪ್ರಾಂತ್ಯದ ಜನಸಮುದಾಯ ಆತನಿಗೆ ಒರಟರಾಗಿಯೂ, ಅಜ್ಞಾನಿಗಳಾಗಿಯೂ ಕಂಡುಬರುತ್ತಾರೆ. ಆತ ಪದೇ ಪದೇ ಭೇಟಿ ಮಾಡುತ್ತಾನೆ. ಹೀಗೆ ಕ್ರೈಸ್ತ ಮಿಷನರಿಗಳ ಪ್ರವೇಶ ಆಗುತ್ತದೆ. ಹೊರನೋಟಕ್ಕೆ ರಮ್ಯ ಮನೋಹರವಾಗಿ ಕಾಣುವ ಈ ಪರಿಸರದ ಒಳಗಿನ ವಾತಾವರಣದಲ್ಲಿ ನೆಲೆನಿಂತು ತಮ್ಮ ಮತಾಂತರ ಚಟುವಟಿಕೆಯನ್ನು ನಡೆಸಲು ಹೆದರಿಕೆಯನ್ನುಂಟು ಮಾಡುತ್ತದೆ. ಆದ್ದರಿಂದ ಸಾಮೂಹಿಕವಾದ ಮತಾಂತರ ಕಾರ್ಯ ಅಸಾಧ್ಯವೆಂದೂ ಅಲ್ಲಲ್ಲಿ ವೈಯಕ್ತಿಕ ನೆಲೆಯಲ್ಲಿ ಮಾಡಬಹುದಷ್ಟೆ ಎಂಬ ತೀರ್ಮಾನಕ್ಕೆ ಬರುತ್ತಾರೆ.

ಈ ತೀರ್ಮಾನದಂತೆ ವೈಯಕ್ತಿಕ ನೆಲೆಯಲ್ಲಿ ಕ್ರೈಸ್ತಧರ್ಮದ ಪ್ರಸಾರದ ಪ್ರಭಾವಕ್ಕೆ ಅಲ್ಲಲ್ಲಿ ಒಳಗಾದವರೂ ಇದ್ದಾರೆ. ಎ.ಜೆ.ಓ. ಲೈಲ್ ಪ್ರವಾಸ ಮಾಡುತ್ತಿದ್ದ (೧೮೭೦) ಕಾಲಾವಧಿಯಲ್ಲಿ ಜನಿಸಿದ್ದ ಮಳುವಾಡಿ ಗಿರಿಯಪ್ಪ ಗೌಡರು ತಮ್ಮ ಕುಗ್ರಾಮದಿಂದ ಹದಿಮೂರು ಮೈಲಿ ದೂರದಲ್ಲಿರುವ ತೀರ್ಥಹಳ್ಳಿಯಲ್ಲಿ ಪ್ರಾಥಮಿಕ ವ್ಯಾಸಂಗ ಪೂರೈಸಿ, ಶಿವಮೊಗ್ಗದಲ್ಲಿ ಇಂಗ್ಲೀಷ್ ಶಾಲೆ ಇದೆ ಎಂದು ತಿಳಿದು ಹೆಚ್ಚಿನ ವ್ಯಾಸಂಗಕ್ಕೆ ಮನೆಯವರ ಗಮನಕ್ಕೆ ತರದೆ ಅಲ್ಲಿಗೆ ಹೋದರು. ಅಲ್ಲಿಯ ಕ್ರೈಸ್ತ ಮಿಷನರಿಗಳ ಬೋಧನೆಯ ಪ್ರಭಾವಕ್ಕೆ ಒಳಗಾದರು. ನೈಟಿಂಗೇಲ್ ಅವರನ್ನು ಕ್ರಿಶ್ಚಿಯನ್ ದೃಷ್ಟಿಕೋನದಿಂದ ವರ್ಣಿಸುತ್ತಾನೆ. "ಈ ಗಿರಿಯಪ್ಪ ಗೌಡ ಸಣ್ಣ ಹುಡುಗನಾಗಿದ್ದಾಗಿನಿಂದ ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದ.........

ಒಳ್ಳೆತನದ ಕಡೆ ದೃಷ್ಟಿಯುಳ್ಳವನಾಗಿದ್ದ..... ಜ್ಞಾನೋದಯವಾದವರನ್ನು ಅನುಸರಿಸುವವನಾಗಿದ್ದ".[೨]

ಅಂದರೆ ಮಲೆನಾಡ ಪರಿಸರದ ಜನರೆಲ್ಲಾ ಒರಟರೂ, ಅಜ್ಞಾನಿಗಳೂ, ಮೂಢಾಚಾರರು ಅಂತವರ ಮಧ್ಯೆ ಗಿರಿಯಪ್ಪನಂತವರು ಒಳ್ಳೆತನದ ಕಡೆ ಗಮನ ಹರಿಸಿ, ಜ್ಞಾನಿಗಳಾದ ನಮ್ಮಂತವರನ್ನು (ಪಾಶ್ಚಾತ್ಯರನ್ನು) ಅನುಸರಿಸುವ ಅಭ್ಯುದಯದ ಹೆಜ್ಜೆ ಇಡುತ್ತಿದ್ದಾನೆ ಎಂಬ ತಿಳುವಳಿಕೆ ಅವರ ದೃಷ್ಟಿಯದ್ದಾಗಿತ್ತು. ತಮ್ಮ ಹಿತ ಸಾಧನೆಗೆ ಗಿರಿಯಪ್ಪನಂತವರನ್ನು ಹೊಗಳಿಕೆಯ ಮೂಲಕ ತಮ್ಮ ಕಡೆ ಸೆಳೆಯುವ ತಂತ್ರವಾಗಿಯೂ ಈ ವರದಿಯನ್ನು ಗಮನಿಸಲು ಸಾಧ್ಯ. ತನ್ನ ಹಿರಿಯರಾಗಲಿ, ತಾನಾಗಲಿ ಸನಾತನ ಧರ್ಮದ ಆರ್ಷೇಯ ವಿಚಾರಗಳನ್ನು ಆಳವಾಗಿ ಅರಿಯದಿರುವುದೇನೋ ಸರಿ. ಆದರೆ ಅದು ಅವರನ್ನು ಒಂದು ಕೊರತೆಯನ್ನಾಗಿ ಕಾಡಿಲ್ಲ. ಆ ಕೊರತೆ ನೀಗಿಸಿಕೊಳ್ಳಲು ಆಧ್ಯಾತ್ಮಿಕ ಹಸಿವಿನಿಂದ ಕ್ರೈಸ್ತಧರ್ಮದ ಉಪದೇಶಗಳಿಗೇನೂ ಆಕರ್ಷಿತವಾದದ್ದಲ್ಲ. ಅದು ನೀಡುವ ಶಿಕ್ಷಣ, ಸುಧಾರಣೆ ಹೊಸತನದ ಬಯಕೆ ಹೊಂದಿರುವ ಗಿರಿಯಪ್ಪನನ್ನು ಆಕರ್ಷಿಸಿರುವುದು ನಿಜವಾದ ಸಂಗತಿ.

ನೈಟಿಂಗೇಲ್‌ನ ವರದಿ ತನ್ನ ದೃಷ್ಟಿಕೋನದ ಹಿನ್ನಲೆಯಲ್ಲಿ ಗಿರಿಯಪ್ಪ ಗೌಡರ ಬಗ್ಗೆ ಇನ್ನಷ್ಟು ಮಾಹಿತಿ ನೀಡುತ್ತದೆ. "ಶಿವಮೊಗ್ಗದಲ್ಲಿದ್ದಾಗ ಕ್ರೈಸ್ತಧರ್ಮ ಬೋಧಕರ ಪ್ರಭಾವಕ್ಕೆ ಒಳಗಾದರೂ, ಹುಟ್ಟಿದ ಊರಿನ ವ್ಯಾಮೋಹ ಬಿಡದೆ ಹಿಂತಿರುಗಿದರು. ಆದರೆ ಬದಲಾಗಿದ್ದರು. ತನ್ನ ಪರಿಸರದ ಜನರ ಸುಧಾರಣೆಗೆ ಪಣತೊಟ್ಟು, ಸಾಮಾಜಿಕ ಬದಲಾವಣೆಯ ಬಗ್ಗೆ ಮಾಹಿತಿ ಸಂಗ್ರಹಿಸತೊಡಗಿದರು.........' ಮೈಸೂರಿನ ವೆಸ್ಲಿಯನ್ ಮಿಷನರಿ ಹೊರಡಿಸುವ ಕನ್ನಡ ಭಾಷೆಯ 'ವೃತ್ತಾಂತ ಪತ್ರಿಕೆ' ತರಿಸಿ ಓದತೊಡಗಿದರು. ಹಾಗೆ ಬೈಬಲ್ ಮತ್ತು ಇತರ ಕ್ರೈಸ್ತಧರ್ಮ ಗ್ರಂಥಗಳನ್ನು ಕೊಂಡು ಓದತೊಡಗಿದರು. ಇದರ ಪರಿಣಾಮವಾಗಿ ತನ್ನ ಸಮಾಜದ ಸುಧಾರಣೆಯ ಚಿಂತನೆಯ ಜೊತೆ ಆಧ್ಯಾತ್ಮಿಕ ಕಾಳಜಿಯು ಹುಟ್ಟಿತು....... ಕ್ರೈಸ್ತಧರ್ಮ ಎತ್ತುವ ಜಾತಿ ಪ್ರಶ್ನೆಗಳು, ಅದು ನೀಡುವ ಹೊಸ ವಿಚಾರಗಳು ಗಿರಿಯಪ್ಪನಲ್ಲಿ ಹೊಸ ಅರಿವು ಮೂಡುವಂತಾಯಿತು. ಮೊದಲು ಸುಧಾರಣೆ ಎಂಬುದು ತಮ್ಮ ಕುಲದಲ್ಲೇ ಆಗಬೇಕೇಂಬ ಸಂಕಲ್ಪದಿಂದ ೧೮೪೯ರಲ್ಲಿ ಕ್ರೈಸ್ತ ಮಿಷನರಿಗಳಿಗೆ ಪತ್ರ ಬರೆದು ತೀರ್ಥಹಳ್ಳಿಗೆ ಒಬ್ಬ ಧರ್ಮಬೋಧಕರನ್ನು ಕಳುಹಿಸುವಂತೆಯೂ, ತಮ್ಮ ಜನಾಂಗದ ಮಕ್ಕಳಿಗೆ ಸನ್ನಡತೆಯನ್ನು ಕಲಿಸಿಕೊಡಬೇಕೆಂದು ಕೇಳಿಕೊಂಡಿದ್ದರು"[೩] ಎಂಬ ಬಗ್ಗೆ ನೈಟಿಂಗೇಲ್ ವರದಿಯಲ್ಲಿ ಹೇಳಿದ್ದಾನೆ.

ಗಿರಿಯಪ್ಪ ಗೌಡರು ಮಲೆನಾಡಿನ ಶೂದ್ರ ಸಮುದಾಯದ ಸುಧಾರಣೆಗೆ ಪಾದ್ರಿಯೊಬ್ಬರ ಅಗತ್ಯವಿದೆ ಎಂದು ಕೇಳಿಕೊಳ್ಳುವುದು ಇಲ್ಲಿಯ ಸಂದರ್ಭಕ್ಕೆ ಕೈಗನ್ನಡಿಯಂತೆ ಕಂಡು ಬರುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು. ಶೂದ್ರ ಸಮುದಾಯದಲ್ಲಿ ತುಂಬಿರುವ ಅಜ್ಞಾನ, ಅನಕ್ಷರತೆ, ಮೌಢ್ಯ-ಕಂದಾಚಾರಗಳಿಗೆ ಇಂಗ್ಲೀಷ್ ಶಿಕ್ಷಣ ಬಹಳ ದೊಡ್ಡ ಚಿಕಿತ್ಸೆಯಾಗಬಲ್ಲದು, ಪರಿಹಾರ ನೀಡಬಲ್ಲದು ಎಂಬುದನ್ನು ಮನಗಂಡಿದ್ದರು.

"ಭಾರತದ ಹತ್ತಿ ಇಂಗ್ಲೇಂಡಿನ ಮಿಲ್ಲುಗಳಲ್ಲಿ ಸುಂದರ ಬಟ್ಟೆಯಾಗಿ ಮಾರ್ಪಟ್ಟು ನಮ್ಮ ಕೈ ಸೇರುವಂತೆ ನಮ್ಮ ಮಕ್ಕಳು ಮಿಷನ್ ಶಾಲೆಗಳ ತರಬೇತಿಯಲ್ಲಿ ಸುಂದರ ಚಾರಿತ್ರ್ಯವನ್ನು ಪಡೆಯುತ್ತಾರೆ"[೪]

ಎಂದು ೧೯೦೪ರಲ್ಲಿ ನಾಲೂರಿನ ಶಾಲೆಯ ಆರಂಭೋತ್ಸವದಲ್ಲಿ ಅವರು ಆಡಿದ ಮಾತನ್ನು ಗಮನಿಸಬಹುದು. ಕಲಿಕೆಯಿಂದ ದೂರ ಉಳಿದು, ದೈಹಿಕ ಶ್ರಮ –ದುಡಿಮೆಗಳಲ್ಲಿಯೇ ತಮ್ಮ ಬದುಕನ್ನು ಸಾವಿರಾರು ವರ್ಷಗಳಿಂದ ಕಳೆದುಕೊಂಡು ಬಂದಿದ್ದ ಸಮುದಾಯಗಳು ಬಿಡುಗಡೆಯೊಂದಕ್ಕೆ ಕಾದುಕುಳಿತಂತೆ ಇದ್ದಾಗ ಪಾಶ್ಚಾತ್ಯರ ಆಗಮನ, ಅವರ ವಿಚಾರಧಾರೆಗಳು ದೊಡ್ಡ ಆಶಾಕಿರಣದಂತೆ ಕಂಡುಬಂದಿರಬೇಕು. ಆದ್ದರಿಂದಲೇ ಗಿರಿಯಪ್ಪನಂತವರಿಗೆ ಪಾದ್ರಿಗಳ ಇಂಗ್ಲೀಷ್ ಶಿಕ್ಷಣ ಅಗತ್ಯ ಮತ್ತು ಅನಿವಾರ್ಯವೆನಿಸಿತ್ತು. ನೈಟಿಂಗೇಲ್ ವರದಿಯಂತೆ ಗಿರಿಯಪ್ಪ ಗೌಡರ ಕೋರಿಕೆಯ ಸಾರವನ್ನು ಹೇಳುವುದಾದರೆ ತೀರ್ಥಹಳ್ಳಿಗೆ ಯಾರಾದರೂ ಪಾದ್ರಿಯನ್ನು ಕಳಿಯಿಸಿಕೊಡಬೇಕೆಂದೂ ಈ ಕಾಡು ಜನರ ಮೇಲೆ ಕರುಣೆ ತೋರಿ ಶಾಲೆ ಆಸ್ಪತ್ರೆ ಕೊಡಬೇಕೆಂದೂ, ಮಿಷನರಿಯಲ್ಲಿ ತಯಾರಾದ ಹುಡುಗನನ್ನು ಶಿಕ್ಷಕನನ್ನಾಗಿ ನೀಡಬೇಕೆಂದೂ, ಆತನಿಗೆ ತಾವು ವೇತನ ನೀಡುವುದಾಗಿಯೂ ಕೋರಿಕೊಂಡು, ಆ ಪ್ರಯುಕ್ತ ಆ ಕಾಲದಲ್ಲಿಯೇ ಬಹಳ ದೊಡ್ಡ ಮೊತ್ತವಾದ ನೂರು ರೂಪಾಯಿ ದೇಣಿಗೆಯನ್ನು ನೀಡಿದ್ದರು. ಗಿರಿಯಪ್ಪಗೌಡರ ಉದ್ದೇಶ ತನ್ನ ಮುಂದಿನ ಜನಾಂಗ ಶಿಕ್ಷಣ ಪಡೆದು ಜ್ಞಾನವಂತರಾದರೆ ಈ ಸಮಾಜ ಸುಧಾರಿಸಲು ಸಾಧ್ಯ ಎಂಬುದು. ಅದನ್ನು ಮುಕ್ತವಾಗಿ ಕ್ರೈಸ್ತಧರ್ಮದವರು ತಂದು ಕೊಡುವುದಾದರೆ ಅದನ್ನು ಸ್ವೀಕರಿಸುವುದರಲ್ಲಿ ತಪ್ಪಿಲ್ಲ ಎಂಬ ಧೋರಣೆ. ಆದ್ದರಿಂದ "೧೯೦೨ರಲ್ಲಿ ಬೆಂಗಳೂರಿಗೆ ತೆರಳಿ ಅಲ್ಲಿನ ಕ್ರೈಸ್ತ ಪ್ರಚಾರಕರ ಸಭೆಯಲ್ಲಿ ಭಾಗವಹಿಸಿ ಕ್ರೈಸ್ತರೊಡನೆ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಮಿಷನರಿಗಳ ವಿಶ್ವಾಸವನ್ನು ಗಳಿಸಿದ್ದರು".[೫]

ಒಕ್ಕಲಿಗ ಜನಾಂಗದ ಕುಂದು–ಕೊರತೆಗಳನ್ನು ಅವರ ಅರಿವಿಗೆ ತಂದು ಪರಿಹಾರವನ್ನು ಸೂಚಿಸಿ, ಉತ್ತಮ ಹಾದಿಯಲ್ಲಿ ಸಾಗುವಂತೆ ಮಾಡಬೇಕೆಂಬ ಉದ್ದೇಶದ ಹಿನ್ನೆಲೆಯಲ್ಲಿ ಅಂದಿನ ಆ ಜನಾಂಗದ ಮುಖಂಡರಾದ ದೇವಂಗಿ ರಾಮಣ್ಣ ಗೌಡ ಮತ್ತು ಗಿರಿಯಪ್ಪ ಗೌಡರ ನೇತೃತ್ವದಲ್ಲಿ "ನಾಮಧಾರಿ ಅನ್ಯೋನ್ಯಾಭಿವೃದ್ಧಿ ಸಭಾ ಎಂಬ ಸಂಘ ೧೯೦೧ರಲ್ಲಿ ಸ್ಥಾಪನೆಯಾಯಿತು. ಅದರಲ್ಲಿ ಮುಖ್ಯವಾದದ್ದು ಕನ್ಯಾವಿಕ್ರಯ ನಿಲ್ಲಿಸುವುದು, ಕನ್ಯಾ ಶುಲ್ಕವನ್ನು ಕೈಬಿಡುವುದು, ವಿಧವಾ ವಿವಾಹವನ್ನು ನಿಷೇಧಿಸದಿರುವುದು, ಮದ್ಯಪಾನ ತ್ಯಜಿಸುವಂತೆ ಪ್ರಚಾರ ಕೈಗೊಳ್ಳುವುದು, ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದು ಈ ಪಂಚ ಸಂಹಿತೆಯನ್ನು ಜಾರಿಗೊಳಿಸಬೇಕೆಂದು ಸಂಘವು ನಿರ್ಣಯ ಕೈಗೊಂಡಿತು".[೬] ಇಂತಹ ಸಂಘಟನೆ ಮತ್ತು ಆ ಮೂಲಕ ಈ ಸಮಾಜದಲ್ಲಿ ಸುಧಾರಣೆಯನ್ನು ತರಬೇಕೆಂಬ ಎಚ್ಚರ ಉಂಟಾದದ್ದು, ಕ್ರೈಸ್ತ ಮಿಷನರಿಗಳ ಪ್ರಭಾವ ಎಂದರೆ ತಪ್ಪಲ್ಲ. ಮುವತ್ತು ಸಾವಿರ ನಾಮಧಾರಿಗಳ ಮುಖಂಡರಾದ ಮಳುವಾಡಿ ಗಿರಿಯಪ್ಪ ಗೌಡರ ಕೋರಿಕೆ, ಅವರ ವಿಶ್ವಾಸಾರ್ಹ ನಡವಳಿಕೆಯಿಂದ ಕ್ರೈಸ್ತ ಮಿಷನರಿಗಳಿಗೆ ತೀರ್ಥಹಳ್ಳಿ ಪ್ರಾಂತ್ಯದ ನಾಮಧಾರಿ ಒಕ್ಕಲಿಗರ ಬಗ್ಗೆ ಒಲವು ಮೂಡಿ ಇವರು ಒಂದಲ್ಲ ಒಂದು ದಿವಸ ಕ್ರಿಶ್ಚಿಯನ್ನರಾಗುತ್ತಾರೆ ಎಂಬ ಆಸೆ ಚಿಗುರೊಡೆಯಿತು.

ನೈಟಿಂಗೇಲ್ ತನ್ನ ವರದಿಯಲ್ಲಿ ಕ್ರೈಸ್ತ ಮಿಷನರಿಗಳ ದೃಷ್ಟಿಕೋನದಲ್ಲಿ ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪಿಸುತ್ತಾನೆ. ಈ ಶೋಧನೆಯಿಂದ ತಮ್ಮ ಮತಾಂತರ ಪ್ರಕ್ರಿಯೆ ಅಷ್ಟೇನೂ ಕಷ್ಟವಲ್ಲ ಎಂಬುದನ್ನು ಮನಗಾಣುತ್ತಾನೆ.

"ನಾಮಧಾರಿಗಳು ಬುಡಕಟ್ಟು ಜನಾಂಗದ ಶೂದ್ರ ರೈತಾಪಿ ವರ್ಗದವರು, ಸುಮಾರು ೩೦,೦೦೦ದಷ್ಟಿದ್ದಾರೆ, ವಲಸೆ ಹೋದವರಲ್ಲ. ಮಿಷನರಿ ದೃಷ್ಟಿಕೋನದಿಂದ ಇದೊಂದು ಒಳ್ಳೆಯ ಲಾಭದ ಅಂಶ. ಅವರ ಮೇಲೆ ಕೆಲಸ ಮಾಡಿದರೆ ದೂರಗಾಮಿ ಪರಿಣಾಮ ಇರುತ್ತದೆ. ಅರಣ್ಯ ಪ್ರದೇಶದ ಕಟಾವು ಮಾಡಿದ ಜಾಗದಲ್ಲಿ ನೆನಪಿಲ್ಲದಷ್ಟು ಹಿಂದಿನ ಕಾಲದಿಂದ ಇದ್ದಾರೆ. ಅರಣ್ಯದೊಂದಿಗೆ ಒಂದಾಗಿದ್ದು ಸೌಂದರ್ಯಕ್ಕೆ ಮರುಳಾಗುವಂತವರು......... ಶೂದ್ರರೆಂಬ ಪರಿಗಣನೆಗೆ ಒಳಗಾದ ಇವರಿಗೆ ವೇದಾಧ್ಯಯನದ ಅಧಿಕಾರವಿಲ್ಲ. ವೇದದ ಅಧಿಕಾರವಿದ್ದವರನ್ನು ಗೌರವದಿಂದ ಕಾಣುವವರಾಗಿದ್ದಾರೆ........ ಈ ಜನಾಂಗ ಎರಡು ಸಾರಿ ಮತಾಂತರ ಹೊಂದಿದ ಜನಾಂಗ. ೧೧ನೇ ಶತಮಾನದ ಮೊದಲಿನ ರಾಜರು ಜೈನರು ಇವರೂ ಗೆದ್ದವರ ಧರ್ಮವನ್ನು ಒಪ್ಪಿಕೊಂಡಿದ್ದರು. ಈಗಲೂ ಜೈನೀಯ ಆಚರಣೆಯ ಕುರುಹುಗಳಿವೆ. ಹೊಸತತ್ತ್ವ (ಜೈನತತ್ತ್ವ) ವೇದದ ಪರಮಾಧಿಕಾರ, ಬ್ರಾಹ್ಮಣ ಶ್ರೇಷ್ಠತೆಯನ್ನು ಅಲ್ಲಗಳೆಯುವ ಸತ್ವ ನೀಡಿತು. ಈ ಪರಿಸ್ಥಿತಿ ಸುಮಾರು ಒಂದು ಶತಮಾನ ಇತ್ತು. ಕ್ರಿ.ಶ. ೧೧೧೦ಳರಲ್ಲಿ ಪಟ್ಟಕ್ಕೆ ಬಂದ ಹೊಯ್ಸಳರಾಜ ಜೈನ ಬಿಟ್ಟಿ ದೇವನು ಶ್ರೀರಾಮಾನುಜರ ಪ್ರಭಾವದಿಂದ ವೈಷ್ಣವ ಧರ್ಮವನ್ನು ಸ್ವೀಕರಿಸಿ ವಿಷ್ಣುವರ್ಧನನೆಂಬ ಹೆಸರಿನಿಂದ ಪ್ರಖ್ಯಾತನಾದ. ಇವರೂ ಕೂಡ ರಾಜ ಸ್ವೀಕರಿಸಿದ ಧರ್ಮವನ್ನೇ ಒಪ್ಪಿಕೊಂಡರು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಮತಾಂತರ ಹೊಂದಿ ಈಗ ಸ್ವೀಕರಿಸಿರುವ ಧರ್ಮವು ಕ್ರೈಸ್ತ ಧರ್ಮಕ್ಕೆ ತೀರ ಹತ್ತಿರವಾಗಿದೆ. ಆದ್ದರಿಂದ ನಾಮಧಾರಿಗಳು ಕ್ರೈಸ್ತ ಧರ್ಮವನ್ನು ಸ್ವೀಕರಿಸಲು ಇತರ ಹಿಂದುಗಳಿಗಿಂತ ಹೆಚ್ಚು ಪಕ್ವವಾಗಿದ್ದಾರೆ. ಆಧ್ಯಾತ್ಮಿಕ ವಿಷಯದಲ್ಲಿ ಅವರು ಭಗವಂತನ (ಕ್ರಿಸ್ತನ) ಸಾಮ್ರಾಜ್ಯದಿಂದ ಬಹಳ ದೂರ ಉಳಿದಿಲ್ಲ".[೭]

ಕ್ರೈಸ್ತ ಮಿಷನರಿಯ ದೃಷ್ಟಿಕೋನದ ಪ್ರಕಾರ ಈ ನಾಮಧಾರಿಗಳು ಈಗಾಗಲೇ ಜೈನಧರ್ಮ ನಂತರ ವೈಷ್ಣವಧರ್ಮ ಸ್ವೀಕರಿಸಿದ್ದರಿಂದ ಮತ್ತೊಂದು ಧರ್ಮಕ್ಕೆ ಮತಾಂತರಗೊಳಿಸುವುದು ಕಷ್ಟವಲ್ಲ ಎಂಬ ಭ್ರಮೆ. ಹಿಂದೂ ಧರ್ಮದ ಆಳವನ್ನಾಗಲಿ, ವೈಶಾಲ್ಯವನ್ನಾಗಲಿ ತಿಳಿಯದ ಮನಸ್ಥಿತಿಯಿದು. ಹಿಂದೂ ಧರ್ಮದ ಪಂಥಗಳಲ್ಲಿ ವಿಶಿಷ್ಟಾದ್ವೈತ ಪಂಥವೂ ಒಂದು. ಇದರ ತತ್ತ್ವಗಳು ಕ್ರೈಸ್ತಧರ್ಮದ ತತ್ತ್ವಗಳಿಗೆ ಹತ್ತಿರವಾಗಿರುವ ಬಗೆ ಹೇಗೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಒಂದಂತೂ ನಿಜ ವೈಷ್ಣವ ಧರ್ಮದ ತತ್ತ್ವಗಳನ್ನು ತಿಳಿಯದಿದ್ದರೂ, ತಿಳಿಯಲಾಗದಿದ್ದರೂ ವೈಷ್ಣವರಾದವರು ಈ ನಾಮಧಾರಿಗಳು. ವೇದಪಾರಮ್ಯದಿಂದ ದೂರವಿರುವ ಮತ್ತು ಅದನ್ನು ಒಪ್ಪಿಕೊಂಡ ಶೂದ್ರ ಸಮುದಾಯ. ಇವರ ಸರಳ ಭಕ್ತಿ, ಕ್ರಿಯಾಚರಣೆ ಕ್ರೈಸ್ತ ಮಿಷನರಿಗೆ ತನ್ನ ಧರ್ಮದ ಕ್ರಿಯಾಚರಣೆಗೆ ಹತ್ತಿರವಾಗಿರುವಂತೆ ಕಂಡಿರಬಹುದು. ಅವರು ನಂಬಿದ ದೈವಕ್ಕೆ ಭಯ-ಭಕ್ತಿಯಿಂದ ಕೈಮುಗಿದು ಧ್ಯಾನಿಸಬಲ್ಲರು ; ಬೇಡಿಕೊಳ್ಳಬಲ್ಲರು. ತಮ್ಮ ಮನೆಯ ಮುಂದಿನ ತುಳಸಿಕಟ್ಟೆಯ ಮುಂದೆಯೋ, ದೇವರ ಬನದ ಮುಂದೆಯೋ ನಿಂತು ಕೈಮುಗಿದು ಮಾಡುವ ಸರಳ ಪ್ರಾರ್ಥನೆಯಲ್ಲಿ ಯಾವ ಆಗಮಶಾಸ್ತ್ರವಾಗಲಿ, ಮಂತ್ರೋಚ್ಚಾರಣೆಯಾಗಲಿ ಇರುವುದಿಲ್ಲ, ಅವು ತಿಳಿದೂ ಇಲ್ಲ ; ತಿಳಿಯಲಿಷ್ಟಪಟ್ಟರೆ ಕಲಿಸುವವರೂ ಇಲ್ಲ, ಅದಕ್ಕೆ ಅಧಿಕಾರವೂ ಇಲ್ಲ. ಇದು ನಾಮಧಾರಿಗಳಿಗೆ ಮಾತ್ರವಲ್ಲ ವೇದಪಾರಮ್ಯದಿಂದ ದೂರವಿರುವ ಎಲ್ಲ ಸಮುದಾಯಗಳ ಸ್ಥಿತಿ. ಈ ಸರಳ ಪ್ರಾರ್ಥನೆ ಏಸುವಿನ ಪ್ರಾರ್ಥನೆಗೆ ಹತ್ತಿರವಾಗಿದೆ. ಇನ್ನೊಂದು, ಜೈನ ಧರ್ಮದವರಾಗಿದ್ದಾಗ ಆಗಲಿ, ನಂತರ ವೈಷ್ಣವ ಧರ್ಮಿಗಳಾಗಿದ್ದಾಗ ಆಗಲಿ ಮಾಂಸಾಹಾರವನ್ನು, ಬೇಟೆಯ ವಿನೋದವನ್ನು

ಬಿಡದ ಮಣ್ಣಿನ ಮಕ್ಕಳು. ಈ ಮೇಲುನೋಟದ ಕ್ರಿಯೆಗಳಿಂದ ನಾಮಧಾರಿಗಳ ಕ್ರಿಯೆ ಕ್ರೈಸ್ತಧರ್ಮದ ಕ್ರಿಯೆಗೆ ಹತ್ತಿರವಾಗಿದೆ ಎಂದೂ, ಆ ಕಾರಣ ಮತಾಂತರ ಸುಲಭ ಸಾಧ್ಯ ಎಂದು ನೈಟಿಂಗೇಲ್ ಭಾವಿಸಿರಬೇಕು. ಅಲ್ಲದೆ ರಾಜ ಸ್ವೀಕರಿಸಿದ ಧರ್ಮವನ್ನು ಇವರೂ ಅನುಸರಿಸುತ್ತಾರೆ ಎಂದ ಮೇಲೆ ಆರ್ಥಿಕ ಬೆಂಬಲ, ರಾಜಕೀಯ ಭದ್ರತೆ, ಪ್ರಭುತ್ವದ ಹಿಡಿತ ನೀಡಿದರೆ ಹತ್ತಿರ ಬರಲು ಸಾಧ್ಯ ಎಂಬ ಲೆಕ್ಕಾಚಾರವೂ ಈ ಮೇಲಿನ ಆತನ ತೀರ್ಮಾನಕ್ಕೆ ಆಧಾರವೆನ್ನಬಹುದು.

"೧೯೦೫ರಲ್ಲಿ ಮಂಡಗದ್ದೆ ಸಮೀಪದ ಸಿಂಧುವಾಡಿ ಚನ್ನಪ್ಪಗೌಡರ ಮತಾಂತರ ಕಾರ್ಯ ಸುಗಮವಾಗಿ, ಸರಳವಾಗಿ ಅಲ್ಲಿ ಕೆಲವು ಒಕ್ಕಲಿಗ ಸಮುದಾಯದ ಸಮ್ಮುಖದಲ್ಲಿಯೇ ನಡೆಯಿತು. ಇದಕ್ಕೆ ಹೆಂಡತಿ-ತಮ್ಮಂದಿರ ಪ್ರೋತ್ಸಾಹ ದೊರೆಯಿತು"[೮] ಎಂಬುದನ್ನು ನೈಟಿಂಗೇಲ್ ಹೇಳುವುದರ ಜೊತೆಗೆ ಮತ್ತು ಅದಕ್ಕೆ ಬಂದ ವಿರೋಧವನ್ನು ತಿಳಿಸುತ್ತಾನೆ. ಈ ಘಟನೆ ನಡೆದದ್ದರಿಂದ ಸಮೀಪದ ಬ್ರಾಹ್ಮಣ ಸಮುದಾಯದಿಂದ ವಿರೋಧ ವ್ಯಕ್ತವಾಗಿದ್ದು, ಮೈಸೂರಿನ ಶಿವಗಂಗಾ ಮಠದ ಗುರುಗಳು ಬಂದಿದ್ದು, ಶೃಂಗೇರಿ ಮಠದಿಂದ ಮತ್ತೆ ಹಿಂತಿರುಗಿಸಲು ಅನುಮತಿ ತಂದದ್ದು, ಚನ್ನಪ್ಪಗೌಡರಿಗೆ ಬರಹೇಳಿದ್ದು, ಆದರೆ ಚನ್ನಪ್ಪಗೌಡ ಅದನ್ನೆಲ್ಲ ತಿರಸ್ಕರಿಸಿದ್ದನ್ನು ನೈಟಿಂಗೇಲ್ ಪ್ರಸ್ತಾಪಿಸುತ್ತಾನೆ.

ಕ್ರೈಸ್ತ ಮಿಷನರಿಯ ಆಕರ್ಷಣೆಗೊಳಗಾದ, ಆ ಮೂಲಕ ತನ್ನ ಜನಾಂಗದಲ್ಲಿ ಬದಲಾವಣೆಯನ್ನು ತರಬಯಸಿದ ಮಳುವಾಡಿ ಗಿರಿಯಪ್ಪಗೌಡನಿಗೆ ಮತಾಂತರವಾಗಲು ತನ್ನ ಮನೆಯಲ್ಲಿಯೇ ವ್ಯಾಪಕವಾದ ವಿರೋಧ ವ್ಯಕ್ತವಾಯಿತು. ಗಿರಿಯಪ್ಪನ ತಂದೆ ಬಂದೂಕಿನಿಂದ ಮಗನನ್ನು ಕೊಲ್ಲುವುದು, ಇಲ್ಲದೆ ತಾನು ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆಯ ಪ್ರತಿರೋಧ ಒಡ್ಡಿದರೆ, ಹೆಂಡತಿ ವಿರೋಧವೂ ವ್ಯಕ್ತವಾಯಿತು. ಜೊತೆಗೆ ಮತಾಂತರವಾದರೆ ಆಸ್ತಿಹಕ್ಕು ಮತ್ತು ಮಕ್ಕಳ ಮೇಲಿನ ಅಧಿಕಾರ ಕಳೆದುಕೊಳ್ಳುವುದು ಈ ಎಲ್ಲಾ ಕಾರಣದಿಂದ ಭೌತಿಕವಾಗಿ ಮತಾಂತರವಾಗದೆ ಹಾಗೆ ಉಳಿದರು.

ಮಳುವಾಡಿ ಗಿರಿಯಪ್ಪಗೌಡರು ಇಟ್ಟ ಹೆಜ್ಜೆ ಒಂದು ರೀತಿಯಲ್ಲಿ ಜಾತಿ ಪದ್ಧತಿ, ಶೈಕ್ಷಣಿಕ ನಿರಾಕರಣೆ, ಮೂಢಾಚಾರಗಳ ವಿರುದ್ಧದ ಪ್ರತಿಭಟನೆಯಾಗಿತ್ತು ಎನ್ನಬಹುದು. "ತನ್ನ ಪರಿಸರದ ಸಮಾಜದಲ್ಲಿ ಎರಡನೇ ದರ್ಜೆಯವರಂತೆ ಪರಿಗಣಿಸಲ್ಪಟ್ಟ ಜನಾಂಗವನ್ನು ಒಂದು ಸಾಂಸ್ಕೃತಿಕ ಪ್ರತಿಭಟನೆಗೆ ಸಿದ್ಧಗೊಳಿಸಿದ ಹೆಗ್ಗಳಿಕೆ ಗಿರಿಯಪ್ಪನವರದು. ತಮ್ಮ ಜನಾಂಗದ ಸಾಂಸ್ಕೃತಿಕ ವಿಮೋಚನೆ ಮತ್ತು ಸಾಮಾಜಿಕ ಪ್ರಗತಿ ಆಧುನಿಕ ವಿದ್ಯಾಭ್ಯಾಸದಲ್ಲಿದೆ ಎಂಬುದನ್ನು ಕಂಡ ದೂರದರ್ಶಿತ್ವ ಅವರದಾಗಿತ್ತು"[೯] ಎಂಬ ಯು.ಹೆಚ್. ಗಣೇಶ್ ಅವರ ಮಾತು ಗಮನಾರ್ಹವಾದುದು. ಹೀಗೆ ಮಳುವಾಡಿ ಗಿರಿಯಪ್ಪಗೌಡರು ಧರ್ಮದ ನೆಪದಲ್ಲಿ ತಮ್ಮ ಸಮುದಾಯ ಆಧುನಿಕ ಶಿಕ್ಷಣವನ್ನು, ಆರೋಗ್ಯ ಸೇವೆಯನ್ನು ಪಡೆಯುವುದರ ಮೂಲಕ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಸ್ಥಿತ್ಯಂತರ ಹೊಂದಬೇಕು ; ಪ್ರಗತಿ ಸಾಧಿಸಬೇಕು ಎಂಬುದೇನೋ ನಿಜ. ಆದರೆ ಶಿಕ್ಷಣ ಮತ್ತು ಸೇವೆಯ ನೆಪದಲ್ಲಿ ಮತಾಂತರಗೊಳಿಸುವುದು ಮತ್ತು ಸಾಮ್ರಾಜ್ಯಶಾಹಿ ಪ್ರಭುತ್ವದ ಬೇರುಗಳನ್ನು ಗಟ್ಟಿಗೊಳಿಸಬೇಕೆಂಬುದು ಕ್ರೈಸ್ತ ಮಿಷನರಿಯ ಹಿಂದಿರುವ ಬಲವಾದ ಉದ್ದೇಶ. ಅಧಿಕಾರಶಾಹಿಯ ಕಬಂಧ ಬಾಹುವಿನ ರಾಜಕೀಯ ಹುನ್ನಾರ ತಿಳಿಯದೆ ಗಿರಿಯಪ್ಪ ಗೌಡರಂತಹ ಸದುದ್ದೇಶ ಹೊಂದಿರುವ ಮುಖಂಡರು ಇಡುವ ಹೆಜ್ಜೆಯಿಂದ ಈ ಮಲೆನಾಡ

ಪರಿಸರದಲ್ಲಿ ಸಾಂಸ್ಕೃತಿಕ ಮಹಾಪಲ್ಲಟವೇ ಆಗುವ ಸಾಧ್ಯತೆ ಇತ್ತು ; ಅದಾಗಲಿಲ್ಲ, ಗಿರಿಯಪ್ಪಗೌಡರಂತಹ ಮುಖಂಡರ ನಿಲುವಿಗೆ ಕುಟುಂಬದಲ್ಲೇ ಪ್ರಬಲವಾದ ವಿರೋಧ ವ್ಯಕ್ತವಾದುದರಿಂದ ಅದು ವ್ಯಕ್ತಿಗತವಾಗಿಯೇ ಉಳಿಯಿತು.

ಕುವೆಂಪು 'ಕಾನೂರು ಹೆಗ್ಗಡತಿ'ಯಲ್ಲಿ ಇಂತಹ ಮುಖಂಡರ ಬಗ್ಗೆ ಸ್ವಲ್ಪ ವ್ಯಂಗ್ಯವಾಗಿಯೇ ಹೇಳಿದ್ದಾರೆ. "ಆ ಪ್ರಾಂತ್ಯದಲ್ಲಿ ಮೊಟ್ಟ ಮೊದಲು ಲೋವರ ಸೆಕಂಡರಿ ಸ್ಕೂಲು ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಜನರಿಂದ ವಿದ್ವನ್ಮಣಿಯೆಂದು ಸಂಭಾವಿತರಾದ ಮಹನೀಯರೊಬ್ಬರು ಪಾದ್ರಿಗಳ ಮತ್ತು ಕೆಂಪು ಮುಖದ ರೆವರೆಂಡರುಗಳ ಪ್ರಭಾವಕ್ಕೂ ಮೆಚ್ಚಿಗೆಗೂ ಪಾತ್ರರಾಗಿ, ತಮ್ಮ ಮತದ ಆಚಾರ ಅನಾಚಾರಗಳೆರಡನ್ನು ಒಂದೇ ಉಸಿರಿನಲ್ಲಿ ನಿಂದಿಸಿ ಭಾಷಣ ಮಾಡತೊಡಗಿದರಂತೆ ; ತಾವು ಕ್ರೈಸ್ತ ಮತಕ್ಕೆ ಸೇರುವುದಾಗಿಯೂ ಸಾರಿದರಂತೆ, ಪಾದ್ರಿಗಳ ಮತ್ತು ರೆವರೆಂಡ್ ದೊರೆಗಳ ಮೆಚ್ಚುಗೆಗಾಗಿ ತಮ್ಮ ಬಂಧುಗಳಲ್ಲಿಯೂ ಕೆಲವರನ್ನು ಕ್ರೈಸ್ತ ಮತಕ್ಕೆ ಸೇರಿಸಿ, ತಾವು ಮಾತ್ರ ಸೇರುತ್ತೇನೆ ಎಂದು ಹೇಳುತ್ತಿದ್ದು, ಕಡೆಗೂ ಭಾರತೀಯ ಕ್ರೈಸ್ತ ಜನ ಸಂಖ್ಯೆಗೆ ಸ್ವಲ್ಪವೂ ಲಾಭವಾಗದ ರೀತಿಯಲ್ಲಿ ಕೈಲಾಸವಾಸಿಯೆ ಆಗಿ ಬಿಟ್ಟರಂತೆ!"[೧೦] ಗಿರಿಯಪ್ಪ ಗೌಡರಂತಹ ವ್ಯಕ್ತಿಗಳನ್ನು ಗಮನದಲ್ಲಿಟ್ಟುಕೊಂಡೇ ಕುವೆಂಪು ಹೇಳಿದ ಮಾತಾಗಿದೆ.

ಗಿರಿಯಪ್ಪಗೌಡರು ತಮ್ಮ ಕೌಟುಂಬಿಕ ಪರಿಸರದ ವಿರೋಧದ ಹಿನ್ನಲೆಯಲ್ಲಿ ಭೌತಿಕವಾಗಿ ಮತಾಂತರವಾಗದಿದ್ದರೂ ಮಾನಸಿಕವಾಗಿ ಮತಾಂತರವಾಗಿದ್ದರು. ೧೯೦೭ರಲ್ಲಿ ಅವರು ಅಕಾಲಿಕ ಮರಣಕ್ಕೆ ತುತ್ತಾದಾಗ ಅವರ ಮಗ ಶಂಕರಪ್ಪ ತಂದೆಯ ಶವವನ್ನು ಸುಟ್ಟು ಬೂದಿಯನ್ನು ನದಿಯಲ್ಲಿ ಕದಡದೆ ಆಯ್ದು ಕಲ್ಲುಗಳಿಂದ ಸುಟ್ಟ ಸ್ಥಳದಲ್ಲಿ 'ಕ್ರಿಸ್‌ಕ್ರಾಸ್' ಮಾಡಿದ್ದನ್ನು ನೋಡಿರುವುದಾಗಿ[೧೧] ನೈಟಿಂಗೇಲ್ ವರದಿ ಹೇಳುತ್ತದೆ.

ಸಿಂಧುವಾಡಿ ಚನ್ನಪ್ಪಗೌಡರು ಮತಾಂತರವಾದರು, ಮಳುವಾಡಿ ಗಿರಿಯಪ್ಪಗೌಡರು ಮತಾಂತರಕ್ಕೆ ಆಕರ್ಷಿತರಾದರೂ ಕುಟುಂಬದ ಹಿಡಿತದಿಂದ ಅದು ಸಾಧ್ಯವಾಗಲಿಲ್ಲ. ಇವರಿಬ್ಬರಿಗಿಂತಲೂ ಭಿನ್ನವಾದ ರೀತಿಯಲ್ಲಿ ಆ ಪ್ರದೇಶದ ಒಕ್ಕಲಿಗ ಸಮುದಾಯದ ಮುಖಂಡರಲೊಬ್ಬರಾದ ದೇವಂಗಿ ರಾಮಣ್ಣಗೌಡರು ಕ್ರೈಸ್ತ ಮಿಷನರಿಗಳ ಚಟುವಟಿಕೆಯನ್ನು ಸ್ವಾಗತಿಸುತ್ತಾರೆ. ಅಂದರೆ ದೇವಂಗಿ ರಾಮಣ್ಣಗೌಡರ ಮನಃಪರಿವರ್ತನೆಗೆ ಕ್ರೈಸ್ತ ಮಿಷನರಿಗಳ ಸಾಕಷ್ಟು ಪ್ರಯತ್ನ ಮಾಡಿದ್ದರು. ಇವರ ಮನಃಪರಿವರ್ತನೆಯಾದರೆ ಸಹಜವಾಗಿಯೇ ಇವರ ಅನುಯಾಯಿಗಳೂ ಕೂಡ ಕ್ರೈಸ್ತಧರ್ಮಕ್ಕೆ ಆಕರ್ಷಿತರಾಗಬಹುದು ಮತಾಂತರ ಕಾರ್ಯ ಸುಲಭ ಸಾಧ್ಯವೆಂದು ಭಾವಿಸುತ್ತಾರೆ. ಮಲೆನಾಡಿನ ಸಾಮಾಜಿಕ ಪರಿಸರದಲ್ಲಿ ಅತ್ಯಂತ ಪ್ರಭಾವಶಾಲಿಯೂ ಮುಂದಾಳುವೂ ಆಗಿದ್ದ ದೇವಂಗಿರಾಮಣ್ಣ ಗೌಡರಂತಹ ವ್ಯಕ್ತಿಗಳ ವೈಚಾರಿಕತೆ ಅವರ ಧರ್ಮದ ಮೇಲಿನ ವಿರೋಧವೆಂದೇ ಭಾವಿಸಿ ಮುಖಸ್ತುತಿಯ ಮೂಲಕ ತಮ್ಮೆಡೆಗೆ ಸೆಳೆಯುವ ಪ್ರಯತ್ನವನ್ನು ಕ್ರೈಸ್ತ ಮಿಷನರಿಗಳು ಮಾಡುತ್ತಾರೆ. 'ನಾಮಧಾರಿ ಜನಾಂಗದ ರತ್ನ' (The Jewel of the coste)[೧೨] ಎಂದೇ ಪ್ರಶಂಸೆ ಮಾಡುತ್ತಾರೆ. ಆದರೆ ದೇವಂಗಿ ರಾಮಣ್ಣ ಗೌಡರು ಪರಂಪರಾಗತವಾಗಿ ಬಂದ ಉತ್ತಮ ಮೌಲ್ಯಗಳ ಬಗ್ಗೆ ಶ್ರದ್ಧೆಯುಳ್ಳವರಾಗಿದ್ದರು. ಶುದ್ಧ ಆಚಾರ ವಿಚಾರಗಳ ಬಗ್ಗೆ ಉಗ್ರ ವಿಮರ್ಶಕರಾಗಿದ್ದರು. ಕ್ರೈಸ್ತ ಧರ್ಮದ ಮಿಷನರಿಗಳ ಶಿಕ್ಷಣದ ಕಾಳಜಿ, ದೈವಭಕ್ತಿ, ಶ್ರದ್ಧಾವಂತಿಕೆ,

ಸನ್ನಡತೆ ಬಗ್ಗೆ ಗೌರವವುಳ್ಳವರಾಗಿದ್ದರು. ಈ ಮನೋಭಾವದಿಂದಲೇ ದೇವಂಗಿ ಮತ್ತು ತೀರ್ಥಹಳ್ಳಿಯ ಇತರೆ ಸ್ಥಳಗಳಲ್ಲಿ ಮಿಷನರಿ ಶಾಲೆಗಳನ್ನು ತೆರೆಯಲು ಪ್ರೋತ್ಸಾಹ ನೀಡಿದರು. ರಾಮಣ್ಣಗೌಡರ ವ್ಯಕ್ತಿತ್ವದ ಬಗ್ಗೆ ಕುವೆಂಪು ತಮ್ಮ ನೆನಪಿನ ದೋಣಿಯಲ್ಲಿ ಹೀಗೆ ದಾಖಲಿಸುತ್ತಾರೆ.

"ಸುತ್ತಮುತ್ತಲೂ ಅಜ್ಞಾನ, ಮೂಢಾಚಾರ, ಮತಮೌಢ್ಯ, ದೆವ್ವ-ಪಿಶಾಚಿಗಳ ಪೂಜೆ, ಬಲಿ ಇತ್ಯಾದಿ ಗ್ರಾಮೀಣ ಅಂಧಕಾರದ ವಾತಾವರಣವಿದ್ದ ಆ ಕಾಲದಲ್ಲಿ ದೇವಂಗಿ ರಾಮಣ್ಣ ಗೌಡರು ವೈಜ್ಞಾನಿಕ ದೃಷ್ಟಿಯ ವಿಚಾರವಾದಿಗಳಾಗಿ ಸಾಮಾಜಿಕ ಲೋಪದೋಷಗಳನ್ನು ಪ್ರತಿಭಟಿಸಿ ನಿಂತಿದ್ದು ನಿಜವಾಗಿಯೂ ವಿಸ್ಮಯಕಾರಕ ಸಂಗತಿ......... ಪುರೋಹಿತಶಾಹಿಯ ಕುರುಡು ನಂಬಿಕೆಗಳನ್ನೆಲ್ಲ ತಿರಸ್ಕರಿಸಿದ್ದರು......... ಅವರ ವಿಚಾರಶೀಲತೆಯನ್ನು ಹಿಂದೂಧರ್ಮದ ವಿಚಾರದಲ್ಲಿ ಅವರಿಗಿರುವ ದೋಷವೆಂದೂ, ವಿರೋಧವೆಂದು ಭ್ರಮಿಸಿ ಕ್ರೈಸ್ತ ಪಾದ್ರಿಗಳು ಅವರ ಮುಖಸ್ತುತಿ ಮಾಡಿ ಅವರನ್ನು ಕ್ರೈಸ್ತರನ್ನಾಗಿ ಮತಾಂತರಗೊಳಿಸಲು ಮಾಡಿದ ಕುತಂತ್ರವು ವಿಫಲವಾಯಿತು. ಏಕೆಂದರೆ ದೇವಂಗಿ ರಾಮಣ್ಣ ಗೌಡರು ಹಿಂದೂ ಧರ್ಮದ ಕಟ್ಟುಕತೆಗಳನ್ನೆಂತೋ ಅಂತೆ ಕ್ರೈಸ್ತ ಧರ್ಮಗಳ ಕಟ್ಟುಕತೆಗಳನ್ನು ಅವೈಜ್ಞಾನಿಕವಾದ ಅವಿಚಾರಗಳೆಂದು ತಿರಸ್ಕರಿಸಿ ತಮ್ಮ ಮತಿ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದರು."[೧೩]

ಮತಾಂತರದ ಹಿಂದಿರುವ ಮನಸ್ಸು ಯಾವಾಗಲೂ ಎಲ್ಲರು ನನ್ನಂತಾಗಬೇಕೆಂದು ಬಯಸುತ್ತದೆ. ದೇವಂಗಿ ರಾಮಣ್ಣ ಗೌಡರಂತಹ ವ್ಯಕ್ತಿಗಳ ವ್ಯಕ್ತಿತ್ವದ ಆಳವನ್ನು ಅರಿಯಲಾರದೆ ಆಕರ್ಷಿಸಲು ಕ್ರೈಸ್ತ ಮಿಷನರಿಗಳು ಪ್ರಯತ್ನಿಸುತ್ತಾರೆ. ರಾಮಣ್ಣ ಗೌಡರು ಆ ಪರಿಸರದ ಜನಾಂಗದ ಮುಖಂಡರಷ್ಟೇ ಅಲ್ಲ ಆಯುರ್ವೇದ ಪಂಡಿತರು ಕೂಡ ಹೌದು. ಆಯುರ್ವೇದದಲ್ಲಿನ ನಿರಾಕರಣದ ಸೂತ್ರಗಳನ್ನು ಬಲ್ಲವರಾಗಿದ್ದರು. ಆಯಾ ಮಣ್ಣಿನ ಮಕ್ಕಳಿಗೆ ಆಯಾ ಮಣ್ಣಿನಿಂದಲೇ ಉದ್ಭವಿಸಿ ಬಂದ ವನೌಷಧಿ ಸಾಧನವಾಗುತ್ತದೆ. ಈ ಆಯುರ್ವೇದದ ಸೂತ್ರದ ಪ್ರಕಾರ ನಾವು ತಮ್ಮ ಋಷಿ ಪ್ರಣೀತ ಸರ್ವಧರ್ಮ ಸಮಭಾವ ಸೂತ್ರದಿಂದ ಅಸಮಾನತೆಯನ್ನು ದೂರ ಮಾಡಿಕೊಳ್ಳಬಲ್ಲೆವು ಎಂಬುದು ರಾಮಣ್ಣಗೌಡರ ವ್ಯಕ್ತಿತ್ವವನ್ನು ರೂಪಿಸಿದ್ದವು ಎಂದರೆ ಅತಿಶಯೋಕ್ತಿಯಲ್ಲ. ಇಂತಹ ಸ್ಥಳೀಯ ಮುಖಂಡರ ನಿಲುವು ಸುಧಾರಣೆಯನ್ನು, ಪ್ರಗತಿಯನ್ನು ಬಯಸಿತೇ ಹೊರತು ಮತಾಂತರವನ್ನಲ್ಲ. ವಸಾಹತುಶಾಹಿ ತನ್ನ ವಸಾಹತು ಪ್ರದೇಶಗಳಲ್ಲಿ ವ್ಯಾಪಕವಾಗಿರುವ ಅಸಮಾನತೆಯ ನೆಲೆಗಳನ್ನು ಗುರುತಿಸಿ, ಅಲ್ಲಿಯ ಪರಿಸ್ಥಿತಿಯ ಲಾಭ ಪಡೆದು ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಹುನ್ನಾರವನ್ನು ಚರಿತ್ರೆಯಲ್ಲಿ ನಾವು ನೋಡಬಹುದಾದಗಿದೆ. ಅಂತೆಯೇ ಕುವೆಂಪು ಅವರ ಮಾತುಗಳಲ್ಲಿಯೂ ಈ ಅಂಶ ಸ್ಪಷ್ಟವಾಗಿ ದಾಖಲಾಗಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಮತಾಂತರ ಪ್ರಕ್ರಿಯೆಯ ನಿರಾಕರಣೆ ಮತ್ತು ಅದೇ ಸಂದರ್ಭದಲ್ಲಿ ಅದು ತಂದುಕೊಂಡುವ ಆಧುನಿಕತೆಯನ್ನು ಗೌರವದಿಂದಲೇ ಸ್ವಾಗತಿಸುವ ಆ ಮೂಲಕ ಸುಧಾರಣೆಯನ್ನು ಬಯಸುವ ಮನಸ್ಸನ್ನು ಪ್ರತಿಕ್ರಿಯೆಯನ್ನೂ ಕಾಣಬಹುದು. ಆದ್ದರಿಂದ ದೇವಂಗಿ ರಾಮಣ್ಣ ಗೌಡರಂತವರು ಮತಾಂತರಗೊಳ್ಳದೆ ಅದರಿಂದ ಈ ಸಮಾಜಕ್ಕೆ ಆಗುವ ಒಳ್ಳೆಯದನ್ನು ಗೌರವಿಸಿದರು. ಅದೇ ವೇಳೆ ಕ್ರೈಸ್ತ ಧರ್ಮದ ಮೌಢ್ಯಗಳನ್ನೂ, ಕಂದಾಚಾರಿಗಳನ್ನೂ ಅಷ್ಟೇ ಕಟುವಾಗಿ ವಿಮರ್ಶಿಸುವ ಅವರು ವೈಚಾರಿಕ ನಿಲುವನ್ನು ಹೊಂದಿದ್ದರು.

ಕಳಿಸುವ ಕೃಪೆ ಮಾಡಿದರು. ಅವರ ಹೆಸರು ಮೋಸಸ್."[೧೪]

ಭಾರತ ಅಸಮಾನತೆಯ ತವರು ಎಂಬುದು ಎಲ್ಲರಿಗೂ ತಿಳಿದ ವಿಚಾರವೇ. ಎಲ್ಲರಿಗೂ ಎಲ್ಲಾ ಬಗೆಯ ಅನುಕೂಲತೆಗಳಾಗಲಿ, ಅಗತ್ಯಗಳಾಗಲಿ ದೊರೆಯದೆ ಅಥವಾ ಪಡೆದುಕೊಳ್ಳುವಲ್ಲಿ ಅರಿವಾಗಲಿ, ಬಲವಾಗಲಿ ಇಲ್ಲದೆ ಅತ್ಯಂತ ನೋವು, ನಿರಾಸೆಗಳಲ್ಲಿಯೇ ಬದುಕುತ್ತಿದ್ದ ಬಹುಸಂಖ್ಯಾತ ಭಾರತೀಯರಿಗೆ ಇಂಗ್ಲೀಷ್ ಶಿಕ್ಷಣ ಮತ್ತು ಕ್ರೈಸ್ತಧರ್ಮ ಅತ್ಯಂತ ಆಪ್ತವೆನಿಸಿದ್ದರಲ್ಲಿ ಅತಿಶಯೋಕ್ತಿಯೇನಿಲ್ಲ. ಅನ್ನ, ಅರಿವೆ, ಅರಿವು, ಆಶ್ರಯಗಳಿಲ್ಲದೆ, ಸದಾ ರೋಗರುಜಿನಗಳಿಂದ ನರಳುವ ಸ್ಥಿತಿಯೊಂದರ ಸಂದರ್ಭಕ್ಕೆ ಕ್ರೈಸ್ತ ಪಾದ್ರಿಗಳು ಶಾಲೆ, ಆಸ್ಪತ್ರೆ, ಆಶ್ರಯ ಮುಂತಾದ ಪ್ರಲೋಭನೆಗಳ ಮೂಲಕ ಆಕರ್ಷಿಸುವುದು, ಆ ಮೂಲಕ ಮತಾಂತರಗೊಳಿಸುವುದು ಸುಲಭವೇ ಆಗಿತ್ತು. ಆದ್ದರಿಂದ ಮಲೆನಾಡಿನ ಮನೆಯ ಯಜಮಾನರು ತಮ್ಮ ಮಕ್ಕಳಿಗೆ ದೊರೆಯುವ ಅನುಕೂಲತೆಗಳನ್ನು ನಿರಾಕರಿಸದೆ ದೂರದ ಮೈಸೂರು–ಬೆಂಗಳೂರುಗಳಿಗೆ ಉನ್ನತ ವ್ಯಾಸಂಗಕ್ಕೆ ಕಳುಹಿಸುವುದು ಸಾಧ್ಯವಾಯಿತು. ಇದು ಶತಮಾನಗಳ ಶಾಪದಿಂದ ವಿಮೋಚನೆಯೆಂದೇ ಭಾವಿಸಿದರು. ಅಲ್ಲದೆ ತಮ್ಮ ಪರಿಸರದ ಮೇಲುಜಾತಿ ಜನಸಮುದಾಯದಂತೆ ತಾವು ಸಹ ಶಿಕ್ಷಣ, ಉನ್ನತ ವಿಚಾರ, ಶುಚಿತ್ವ, ಧರ್ಮಶ್ರದ್ಧೆ ಸಾಮಾಜಿಕ ಅಂತಸ್ತು ಪಡೆಯಬಲ್ಲೆವು ಎಂಬ ಮನೋಧರ್ಮವು ಬಲವಾಗಿ ಬೇರೂರಿತು. ಆದ್ದರಿಂದಲೇ ಕುವೆಂಪು ಅವರಂತಹ ವ್ಯಕ್ತಿಗಳ ಮನೆ ಬಾಗಿಲಿಗೆ ಇಂಗ್ಲೀಷ್ ಕಲಿಸುವ ಕ್ರೈಸ್ತ ಶಿಕ್ಷಕರ ಆಗಮನವಾಗುವುದು ಒಂದು ರೂಪಕದಂತೆ ಕಂಡು ಬರುತ್ತದೆ.

ಕುವೆಂಪು ಐಗಳ ಶಾಲೆ ಮತ್ತು ಅದು ಅಳಿದು ಆಧುನಿಕ ಶಾಲೆ ರೂಪಗೊಳ್ಳುತ್ತಿರುವ ಸಂಧಿಕಾಲದಲ್ಲಿ ಬಂದವರು. ಆಗಲೇ ಮಲೆನಾಡಿನ ಅನೇಕ ಯುವಕರು (ಕುಪ್ಪಳಿ ಐಯಪ್ಪ ಗೌಡರು, ವಾಟಗಾರು ವೆಂಕಟಪ್ಪಗೌಡರು, ಹೊಸಮನೆ ಮಂಜಪ್ಪ ಗೌಡರು ಮುಂತಾದವರು) ಮಿಷನರಿಯ ಪ್ರೋತ್ಸಾಹದಿಂದ ಮೈಸೂರು, ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿ ಊರಿಗೆ ಹಿಂದುರಿಗಿದ್ದರು, ಮತ್ತೆ ಕೆಲವರು ಅಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇವರುಗಳ ಪ್ರಭಾವ ಕುವೆಂಪು ಅಂತವರ ಮೇಲೆ ಆದದ್ದರಿಂದ ಇವರು ಕೂಡ ಮೈಸೂರಿನ ಕ್ರೈಸ್ತ ಮಿಷನ್‌ಗೆ ಸೇರಿದ 'ಹಾರ್ಡ್‌ವಿಕ್' ಶಾಲೆಯಲ್ಲಿ ಪ್ರವೇಶ ಪಡೆದರು. ಇವರಿಗಿಂತ ಮೊದಲು ಹೋದ ಮಲೆನಾಡಿನ ಮಕ್ಕಳಿಗೆ ಕ್ರೈಸ್ತ ಮಿಷನರಿಗಳು ಪುಕ್ಕಟೆಯಾಗಿ ಊಟ, ವಸತಿ ನೀಡಿದರು. ಆದರೆ ಕುವೆಂಪು ಹೋದ ಕಾಲಕ್ಕೆ ಕ್ರೈಸ್ತ ಮಿಷನರಿಗಳು ಪುಕ್ಕಟೆ ಊಟ, ವಸತಿ ನಿಲ್ಲಿಸಿದ್ದರು. ಇದಕ್ಕೆ ಕಾರಣ ಮಿಷನರಿಗಳು ಯಾವ ಉದ್ದೇಶವನ್ನು ಇಟ್ಟುಕೊಂಡು ಖರ್ಚು ಮಾಡುತ್ತಿದ್ದರೋ ಆ ವೆಚ್ಚಕ್ಕೂ ಮತಾಂತರ ಹೊಂದುವವರ ಸಂಖ್ಯೆಗೂ ಅಜಗಜಾಂತರ ವ್ಯತ್ಯಾಸ ಕಂಡು ಬಂದುದರಿಂದ ಮಲೆನಾಡ ಮಕ್ಕಳಿಗೆ ಆ ಸೌಲಭ್ಯ ನಿಲ್ಲಿಸಿದರು. ಮಲೆನಾಡಿನ ಒಕ್ಕಲಿಗ ಹುಡುಗರನ್ನು ಪುಕ್ಕಟೆ ಊಟ, ವಸತಿ ನೀಡಿ ಓದಿಸುವ ನೆಪದಲ್ಲಿ ಹೇಗಾದರೂ ಮಾಡಿ ಮತಾಂತರಗೊಳಿಸಬಹುದೆಂದು ಒಳ ಆಸೆ ವಿಫಲವಾಯಿತು. ಒಟ್ಟಿನಲ್ಲಿ ಮಲೆನಾಡಿನ ಶೂದ್ರ ಮಕ್ಕಳು ಮೈಸೂರು–ಬೆಂಗಳೂರುಗಳಲ್ಲಿ ಹೆಚ್ಚಿನ ವ್ಯಾಸಂಗ ಪಡೆಯುವಂತಾದದ್ದು, ಅವರುಗಳು ಮುಂದಿನವರಿಗೆ ಶೈಕ್ಷಣಿಕವಾಗಿ ಮಾದರಿಯಾದದ್ದು, ಈ ಕ್ರೈಸ್ತ ಮಿಷನರಿಗಳ ಕಾರಣದಿಂದಲೇ ಎಂಬುದರಲ್ಲಿ ಎರಡು ಮಾತಿಲ್ಲ. ಮಲೆನಾಡಿನ ಶೂದ್ರ

ಸಮುದಾಯವು ಕ್ರೈಸ್ತ ಮಿಷನರಿಗಳ ಪ್ರಲೋಭನೆಗೆ ಒಳಗಾಗದಿದ್ದರೂ ಅವರ ಮೂಲಕವೇ ಬಂದ ಆಧುನಿಕತೆಯ ಅನುಕೂಲಗಳನ್ನು ಎಚ್ಚರಿಕೆಯ ಮನಸ್ಸಿನಿಂದ ತಮಗೆ ಬೇಕಾದಷ್ಟನ್ನು ಬಳಸಿಕೊಂಡು ತನ್ಮೂಲಕ ಇಡೀ ಪ್ರದೇಶವೇ ಸಾಂಸ್ಕೃತಿಕ ಪಲ್ಲಟಕ್ಕೆ ದಾರಿಯಾಗಿರುವ ಸೂಚನೆಗಳು ಇಲ್ಲಿ ಸಿಗುತ್ತದೆ. ಇದೊಂದು ಎಕ್ಲೆಕ್ಟಿಕ್ (Eclectic). (ಅಂದರೆ ಪ್ರತಿಯೊಂದು ಪಂಥದಿಂದಲೂ ತನಗೆ ಸರಿದೋರಿದ ತತ್ತ್ವಗಳನ್ನು ಆರಿಸಿಕೊಳ್ಳುವುದು.)

ಕುವೆಂಪು ಮನೆಗೆ ಮೋಸಸ್ ಮೇಷ್ಟ್ರು ಆಗಮನ ಒಂದು ರೂಪಕ ಎಂದೆ. ಆಧುನಿಕತೆ ಪ್ರವೇಶಿಸಿದ ರೂಪಕ ಅದು. ಮೋಸಸ್ ಆಕರ್ಷಿಸಿದ ಬಗೆಯನ್ನು ಹೀಗೆ ಹೇಳುತ್ತಾರೆ – "ಮೋಸಸ್ ಮೇಷ್ಟರು ಕನ್ನಡ ಇಂಗ್ಲೀಷ್ ಕಲಿಸುವುದರ ಜೊತೆಗೆ ಯೇಸುಕ್ರಿಸ್ತನ ಕಥೆಯನ್ನು ಹೇಳಿದರು.......... ಮಾರ್ಕನ ಸುವಾರ್ತೆ ಎಂಬ ಕಿರು ಹೊತ್ತಿಗೆಯನ್ನು ನಮಗೆ ಕೊಟ್ಟರು......... ನನ್ನ ಬದುಕಿಗೆ ಹೊಸಬಾಗಿಲನ್ನು ತೆರೆದಂತಾಯಿತು.......... ಮುಂದುವರಿದು ಹೇಳುತ್ತಾ ಯೇಸುವಿನಂತೆಯೆ ಐತಿಹಾಸಕವಾಗಿ ಬುದ್ಧಾದಿ ವಿಭೂತಿ ಪುರುಷರ ಜೀವನ ಕಥೆಯನ್ನು ಹೇಳಿ ಹೃದಯ ಸ್ಪರ್ಶಿಯಾದ ತತ್ತ್ವಗಳು ಬುದ್ಧಿಯಲ್ಲಿಯು ಬೆಳೆಯುವಂತೆ ನಮ್ಮವರು ಯಾರು ತಿಳಿಸುವ ಗೋಜಿಗೆ ಹೋಗಿರಲಿಲ್ಲ".[೧೫]

ಇಲ್ಲಿ ಎರಡು ಸಂಸ್ಕೃತಿ ಎರಡು ಧೋರಣೆಗಳನ್ನು ಕುವೆಂಪು ಮುಖಾಮುಖಿಯಾಗಿಸುತ್ತಾರೆ. ತಮ್ಮ ಧರ್ಮದ ಬಗ್ಗೆ ಯಾವ ಅರಿವೂ ಇಲ್ಲದ ಬಹುಸಂಖ್ಯಾತ ಭಾರತೀಯರ ಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ಧಾರ್ಮಿಕ ಶ್ರದ್ಧೆ ಎಂಬುದು ಕಿರಿಯದರಲ್ಲೇ ರಕ್ತಗತವಾಗಬೇಕಾದುದು. ಅದು ಸಾಧ್ಯವಾಗಬೇಕಾದರೆ ಮಹಾ ಪುರುಷರ ಜೀವನ ಬೋಧನೆಗಳನ್ನು ತತ್ತ್ವಜಿಜ್ಞಾಸೆಯನ್ನು ಬುದ್ಧಿಗೆ ನಿಲುಕುವ ಹಾಗೆ ತಿಳಿದವರು ಹೇಳಬೇಕಾಗಿತ್ತು. ಭಾರತೀಯ ಸಮಾಜದಲ್ಲಿ ಅದಾಗಲಿಲ್ಲ ಎಂಬ ಹಿನ್ನೆಲೆಯಲ್ಲಿ ಕುವೆಂಪು ಚರ್ಚೆಯನ್ನು ಮುಂದುವರಿಸುತ್ತಾರೆ.

"ಮನೆಯಲ್ಲಿ ದೇವರ ಪೂಜೆ ನಡೆಯುತ್ತಿತ್ತು ಭೂತದ ಬನದಲ್ಲಿ ವರ್ಷಕ್ಕೊಮ್ಮೆ ಬಲಿ ಹರಕೆ ಜರಗುತ್ತಿತ್ತು. ದೆಯ್ಯ, ಜಕ್ಕಣಿ, ಕಲ್ಲುಟಿಗ ಮುಂತಾದ ದೆವ್ವ–ಪಿಶಾಚಿಗಳ ಭೀಕರ ಕಥನಗಳೂ ಕಿವಿಯ ಮೇಲೆ ಬಿದ್ದು, ಕತ್ತಲೆಯಾದ ಮೇಲೆ ಮನೆ ತುಂಬ ಅವುಗಳ ಓಡಾಟದ ಹಂಚಿಕೆಯನ್ನು ಊಹಿಸಿ, ಭಾವಿಸಿ, ಬೆವರಿ ಬೇಗುದಿಗೊಳ್ಳುತ್ತಿದ್ದೆವು........ ದೇವರು ಕೂಡ ಬೃಹದಾಕಾರಗೊಂಡ ನಿರಂಕುಶಾಧಿಕಾರಿ ದೆವ್ವವೇ ಆಗಿದ್ದ.......".[೧೬]

ಅಂದರೆ ಮಲೆನಾಡಿನ ಗ್ರಾಮೀಣ ಪರಿಸರದಲ್ಲಿದ್ದಂತಹ ಮಕ್ಕಳ ಮನೋವಲಯದಲ್ಲಿ ಧಾರ್ಮಿಕ ಶ್ರದ್ಧೆಯೆಂಬುದು ಭೀಕರಾಕೃತಿಯಲ್ಲಿ ನೆಲೆಗೊಂಡಿದ್ದರ ಬಗೆಯನ್ನು ಚಿತ್ರಿಸುತ್ತದೆ. ಮಕ್ಕಳ ಮನದಲ್ಲಿ ದೇವರ ಬಗ್ಗೆ ಭಯ ಬೆಳೆದಿತ್ತೇ ಹೊರತು, ಪ್ರೀತಿ ಬೆಳೆದಿರಲಿಲ್ಲ. ತಾವು ಯಾವುದೋ ತಪ್ಪು ಮಾಡಿದ್ದೇವೆ, ಆಪತ್ತಿಗೆ ಒಳಗಾಗಿದ್ದೇವೆ ತಮ್ಮನ್ನು ರಕ್ಷಿಸು ಎಂಬ ಭಯದ ಮೊರೆ ಇತ್ತೇ ಹೊರತು, ಪ್ರೀತಿಯಿಂದ ದೈವೀ ಶಕ್ತಿಯನ್ನು ಬೇಡುವ ಸರಳ ಪ್ರಾರ್ಥನೆಯೇ ತಿಳಿದಿರಲಿಲ್ಲ. ಇಂತಹ ಹಿನ್ನಲೆಯಿಂದಲೇ ಬಂದ ಹಿರಿಯರು ಕೂಡ ಧಾರ್ಮಿಕ ತತ್ತ್ವಗಳಾಗಲಿ, ಆಚಾರ–ವಿಚಾರಗಳಾಗಲಿ ಪುರೋಹಿತರಿಗೆ ಸಂಬಂಧಿಸಿದ್ದು ; ಶೂದ್ರ ಅದಕ್ಕೆ ಅರ್ಹನಲ್ಲ ; ಅವನದೇನಿದ್ದರೂ ಅವರು ಹೇಳಿದಂತೆ ನಡೆದುಕೊಳ್ಳುವುದಷ್ಟೇ ಎಂಬ

ಅಂಧ ಶ್ರದ್ಧೆಯ ನಿಲುವುಳ್ಳವರಾಗಿದ್ದರು. ಅಲ್ಲದೆ ಬದುಕಿನಲ್ಲಿ ಎದುರಾಗುವ ಎಡರು ತೊಡರುಗಳಿಗೆ ದೇವರ ಮುನಿಸೇ ಕಾರಣವೆಂದು, ಅದರ ಉಪಶಮನಕ್ಕಾಗಿ ಅರ್ಥವಿಲ್ಲದ ಆಚರಣೆಗಳಿಗೆ ತಮ್ಮನ್ನು ಒಳಪಡಿಸಿಕೊಂಡಿದ್ದರು. ಇಂತಹ ಸಂದರ್ಭದಲ್ಲಿ ಮೋಸಸ್ ನಂತಹ ವ್ಯಕ್ತಿಗಳಿಂದ ಸರಳವಾಗಿ ಹರಿದು ಬರುವ ಏಸುಕ್ರಿಸ್ತನ ಸುವಾರ್ತೆಗಳು ಮಕ್ಕಳ ಮನಸ್ಸನ್ನು ಸಹಜವಾಗಿ ಆಕರ್ಷಿಸಿದೆ. ಬಾಲಕ ಕುವೆಂಪು "ತಮ್ಮ ಗೆಳೆಯರ ಜೊತೆ ಗುಡ್ಡವನ್ನೇರಿ ಗುರು ಹೇಳಿಕೊಟ್ಟ ಸರಳ ಪ್ರಾರ್ಥನೆ ಮಾಡಿ"[೧೭] ಸಂತೋಷಪಟ್ಟಿದ್ದರ ಬಗ್ಗೆ ಹೇಳಿದ್ದಾರೆ.

ಅಂದರೆ ವೈದಿಕ ಧರ್ಮದ ನೀತಿ ಬೋಧನೆಗಳನ್ನು, ಮಾನವೀಯ ಭಾವನೆಗಳನ್ನು, ದೈವ ಸಾಕ್ಷಾತ್ಕಾರದ ಹಾದಿಗಳನ್ನು ಸರಳವಾಗಿ ಚಿಕ್ಕಂದಿನಿಂದಲೇ ಹೇಳಲಿಲ್ಲ. ಕೆಲವು ಅಲ್ಪಸಂಖ್ಯಾತರು ಬಹು ಸಂಖ್ಯಾತ ಹಿಂದೂಗಳ ಪಾಲಿಗೆ ಅದನ್ನು ಒಗಟಾಗಿಸಿದರು. ಶ್ರೇಣೀಕರಣದ ಕಲ್ಪನೆಯಲ್ಲಿ, ಮಡಿಮೈಲಿಗೆಗಳ ಆಚರಣೆಯಲ್ಲಿ, ದೇವಭಾಷೆಯ ಹೆಸರಿನಲ್ಲಿ ಧಾರ್ಮಿಕ ವಿಚಾರಗಳು, ಸರಳ ಸತ್ಯಗಳು ಜನಮುಖಿಗೊಳಿಸದೆ ತಮ್ಮಲ್ಲಿಯೇ ಬಂಧಿಸಿದ್ದರು. ಆದ ಕಾರಣ ಬಹುಸಂಖ್ಯಾತರಿಗೆ ಆಧ್ಯಾತ್ಮದ ಅನುಭೂತಿಯನ್ನು ಪಡೆಯಲು ಸಾಧ್ಯವಾಗದೆ ಅದರ ಹೊರಕವಚದಂತಿರುವ ಧಾರ್ಮಿಕತೆಯ ಅಂಧಶ್ರದ್ಧೆ, ಮೂಢಾಚಾರಗಳೇ ಧಾರ್ಮಿಕತೆಯಾಗಿ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿರುವುದರಿಂದ ಈ ವ್ಯವಸ್ಥೆ ಒಳಗೊಳಗೇ ಕೊಳೆಯುತ್ತಿತ್ತು. ಹಾಗಾಗಿ ವೈದಿಕ ವಿರೋಧಿಯಾದ ಅನೇಕ ಪರಿಕಲ್ಪನೆಗಳು ಅವೈದಿಕ ವಲಯದಲ್ಲಿ ಆಗಲೇ ಮೂಡಿದ್ದವು. ಆದ ಕಾರಣ ಇಲ್ಲಿಯ ವೈದಿಕ ಅಥವಾ ಸನಾತನಧರ್ಮ ಕಾವಲಿಲ್ಲದ ಕೋಟೆಯಾಗಿತ್ತು. ಮೇಲುಸ್ತರದ ವೈದಿಕ ಧಾರ್ಮಿಕ ಮಿತಿಗಳನ್ನೇ ಕ್ರೈಸ್ತ ಮಿಷನರಿಗಳು ತಮ್ಮ ಧರ್ಮದ ವಿಚಾರಗಳನ್ನು ಅದಕ್ಕೆ ಎದುರಾಗಿ ಸರಳವಾಗಿ ಬೋಧಿಸಿ ಸಮಾನತೆ, ಸ್ವಾತಂತ್ರ್ಯಗಳು ತಮ್ಮ ಧರ್ಮದಲ್ಲಿವೆ ಎಂಬುದಾಗಿ ಬಿಂಬಿಸುತ್ತಿದ್ದರು.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ನೇಟೀವ್ ಪಾದ್ರಿ ಜೀವರತ್ನಯ್ಯನ ಪ್ರವೇಶದ ಚಿತ್ರಣ ಹೀಗಿದೆ :

"೧೮೯೩ನೆಯ ಇಸವಿ ಸೆಪ್ಟಂಬರ್ ೧೧ನೇಯ ತೇದಿ ಸೋಮವಾರ ತೀರ್ಥಹಳ್ಳಿಯ ಪಾದ್ರಿ ಅಥವಾ ಉಪದೇಶಿ ಜೀವರತ್ನಯ್ಯ ಕಾಡುದಾಟಿ........ ಗದ್ದೆಕೋಗಿನ ಅಂಚುಗಳನ್ನು ಹತ್ತಿ ಹಾರಿ........ ಮನೆಯೆಡೆಯ ಕಣದ........ ಉಣುಗೋಲನ್ನು ಸರಿಸಿ ಸಿಂಧುವಳ್ಳಿ ಮನೆಗೆ ಪ್ರವೇಶಿಸಿದ......... ದೀವದಾನೆ ಕಾಡಾನೆಯನ್ನು ಆಕರ್ಷಿಸಿ ಖೆಡ್ಡಕ್ಕೆ ಕೆಡಹಲು ಪ್ರಯತ್ನಿಸುವಂತೆ ಪಾದ್ರಿ ಜೀವರತ್ನಯ್ಯ ಚಿನ್ನಪ್ಪನ ಕಾಲಡಿಯ ಕುರುಡು ಆಚಾರ ಮತ್ತು ಮೂಢನಂಬಿಕೆಗಳ ಭೂಮಿಯನ್ನು ಸಡಿಲಗೊಳಿಸಿ ಅಗೆದು ತೆಗೆದು ಕ್ರೈಸ್ತ ಧರ್ಮದ ಖೆಡ್ಡಾಕಂದಕವನ್ನು ಮೆಲ್ಲಗೆ ನಿರ್ಮಿಸುತ್ತಿದ್ದನು"[೧೮]

ಜೀವರತ್ನಯ್ಯ ಮತಾಂತರಗೊಂಡ ನೇಟೀವ್ ಪಾದ್ರಿ, ಈತ ಮಲೆನಾಡ ಪ್ರಾಂತ್ಯದವನಲ್ಲ ; ಈ ಪ್ರಾಂತ್ಯಕ್ಕೆ ಪಾದ್ರಿಯಾಗಿ ನೇಮಕಗೊಂಡ ಭಾರತೀಯನೇ. ಭಾರತೀಯ ಸಮಾಜದ ಒಳಸೂಕ್ಷ್ಮಗಳನ್ನು ಈ ನೆಲದವ ಮಾತ್ರ ಅರಿತಿರಬಲ್ಲ. ಆ ರೀತಿ ಇರಬಲ್ಲವನೆ ನೇಟೀವ್ ಪಾದ್ರಿ ಜೀವರತ್ನಯ್ಯ. ಆತ ಮಲೆನಾಡಲ್ಲಿ ಕಾಡನ್ನು ದಾಟಿ ಗದ್ದೆ ಅಂಚಿನಲ್ಲಿ ಸಾಗಿ, ಸಾರದಾಟಿ, ಒಡ್ಡಿನ ಬೇಲಿಯ ಉಣಗಲ್ ಸರಿಸಿ

ಪ್ರವೇಶಿಸುವುದನ್ನು ರೂಪಕವಾಗಿ ನೋಡಬಹುದು. ಹಿಂದೂ ಸಮಾಜದೊಳಗಿನ ಅಜ್ಞಾನ, ಅಂಧಕಾರ, ಅಸಮಾನತೆ, ಅಸ್ಪೃಶ್ಯತೆ, ಮೂಢಾಚಾರಗಳನ್ನು ಬಳಸಿಕೊಂಡು ಮತಾಂತರ ಪ್ರಕ್ರಿಯೆಯ ದಾರಿಯನ್ನು ಕಂಡುಕೊಂಡು ಬರುವುದನ್ನು ಸೂಚಿಸುತ್ತದೆ. ಆದ್ದರಿಂದ ಮಲೆನಾಡ ಮೂಲೆಯೊಂದರ ಬೇಸಾಯಗಾರನೊಬ್ಬನ ಮನೆಯ ಚಾವಡಿಯಲ್ಲಿಯೇ ಕುಳಿತು, ಅಂಗಳ ತುಳಸಿಕಟ್ಟೆಯ ಮುಂದೆಯೇ ಭೂತದ ಬನದ ಎದುರಿನಲ್ಲಿಯೇ ಹಿಂಧೂಧರ್ಮದ ಅನಾಚಾರ, ಜಾತೀಯತೆ, ಬ್ರಾಹ್ಮಣರ ತಿರಸ್ಕಾರ, ಶೂದ್ರರ ದೈನ್ಯ, ದೆವ್ವಗಳ ಆರಾಧನೆ ಮೊದಲಾದ ಅವಗುಣಗಳನ್ನು ಎತ್ತಿ ಆಡುತ್ತಾ, ಏಸುವಿನ ಭಕ್ತಿ, ತ್ಯಾಗ, ಉದ್ಧಾರಕ ಸಾಮರ್ಥ್ಯವನ್ನು ಮನಮುಟ್ಟುವಂತೆ ಉಪದೇಶ ಮಾಡುತ್ತಾನೆ ಎಂಬುದನ್ನು ಐತಿಹಾಸಿಕ ಸಂದರ್ಭವೊಂದಕ್ಕೆ ಹೊಂದಿಕೆ ಮಾಡಿ ವ್ಯಂಗ್ಯವಾಗಿ ಹೇಳುತ್ತಾರೆ. ಅಂದರೆ ೧೮೯೩ನೆಯ ಇಸವಿ ಸೆಪ್ಟಂಬರ್ ೧೧ರಂದು ಅಮೆರಿಕಾದ ಚಿಕಾಗೋದಲ್ಲಿ ಭಾರತೀಯ ಸಂಸ್ಕೃತಿಯ ಸರ್ವೋತ್ತಮ ಪ್ರತಿನಿಧಿಯಾದ ಸ್ವಾಮಿವಿವೇಕಾನಂದರು ಸನಾತನ ಹಿಂದೂ ಧರ್ಮದ ವೇದಾಂತವನ್ನು, ಅದರ ಉತ್ಕೃಷ್ಟತೆಯನ್ನು ತಮ್ಮ ಸಿಂಹಕಂಠದಿಂದ ಮೊಳಗಿಸುತ್ತಿರುವಾಗ ಮಲೆನಾಡ ಮೂಲೆಯಲ್ಲಿ ಪಾದ್ರಿಯ ಉಪದೇಶದ ವೈರುಧ್ಯವನ್ನು ನಮ್ಮ ಮುಂದಿಡುತ್ತಾರೆ. ಸನಾತನ ಧರ್ಮದ ಉತ್ಕೃಷ್ಟ ವಿಚಾರಗಳು ಈ ದೇಶದ ಬಹು ಸಂಖ್ಯಾತ ಜನರನ್ನು ತಲುಪಿಲ್ಲ. ಅದಕ್ಕೆ ಅಂಟಿಕೊಂಡಿರುವ ಕಂದಾಚಾರಗಳೇ ಧಾರ್ಮಿಕ ಆಚರಣೆಗಳೆಂದು ಪರಂಪರಾಗತವಾಗಿ ನಂಬಿಕೊಂಡು ಶೂದ್ರಾದಿ ಸಮುದಾಯಗಳು ಪಾಲಿಸಿಕೊಂಡು ಬರುತ್ತಿವೆ.

‘ಕಾವಲಿಲ್ಲದ ಕೋಟೆಗೆ ನುಗ್ಗಲು ಶತ್ರುವಿಗೆ ಸೈನ್ಯಬೇಕೆ? ರಕ್ಷೆ ಇಲ್ಲದ ದುರ್ಗವನ್ನು ಗೆಲ್ಲಲು ನಿಪುಣ ಸೈನಿಕನೊಬ್ಬನಿದ್ದರೆ ಸಾಕು’[೧೯] ಎಂಬ ಕುವೆಂಪು ಅವರ ಮಾತು ಧ್ವನಿಪೂರ್ಣವಾದುದು. ಭಾರತೀಯ ಸಮಾಜದ ಧಾರ್ಮಿಕ ಸ್ಥಿತಿಯನ್ನೇ ಈ ಮಾತು ಅನಾವರಣಗೊಳಿಸುತ್ತದೆ. ಧರ್ಮ ಪ್ರಸಾರಣದ ಹೊಣೆಹೊತ್ತ ಮಠಮಾನ್ಯಗಳು, ಗುರುಪೀಠಗಳು ಶೂದ್ರ ಸಮುದಾಯಗಳಿಂದ ಪಾದ ಪೂಜೆ, ಪಲ್ಲಕ್ಕಿ ಸೇವೆ ಮಾಡಿಸಿಕೊಂಡರೆ ಹೊರತು ಆ ಧರ್ಮದ ಮಾನವೀಯ ಭಾವನೆಗಳನ್ನು, ನೀತಿ ಬೋಧನೆಗಳನ್ನು, ದೈವ ಸಾಕ್ಷಾತ್ಕಾರದ ಹಾದಿಯನ್ನು ಬಹುಸಂಖ್ಯಾತ ಹಿಂದುಗಳ ಪಾಲಿಗೆ ಒಗಟಾಗಿಸಿದರು. ಅವರಿಗೆ ವೇದ ಉಪನಿಷತ್ತುಗಳ ಓದನ್ನು ನಿರಾಕರಿಸಿದರು. ಅವರು ಆಧ್ಯಾತ್ಮದ ಒಳಸಾರವನ್ನು ಅರಿಯಲಾಗದೆ ಅದರ ಹೊರ ಕವಚದಂತಿರುವ ಧಾರ್ಮಿಕತೆಯ ಅಂಧಶ್ರದ್ಧೆ, ಮೂಢಾಚಾರಗಳನ್ನು ಅಂಟಿಕೊಳ್ಳುವಂತಾಯಿತು. ತನ್ನ ಮಡಿವಂತಿಕೆಯಿಂದ, ದೇವಭಾಷೆಯಿಂದ, ಕಂದಾಚಾರಗಳಿಂದ ವೈದಿಕ ಧರ್ಮ ಜನಮುಖಿಯಾಗಿರುವ ಅವಕಾಶವನ್ನೇ ಕಳೆದುಕೊಂಡಿತು. ಹಾಗಾಗಿ ಇದರ ವಿಚಾರವಾಗಿ ಸರಳವಾಗಿಯಾಗಲಿ ಅಥವಾ ಜನ ಭಾಷೆಯಲ್ಲಿಯಾಗಲಿ ಹೇಳುವುದು ಸಾಧ್ಯವಿರಲಿಲ್ಲ. ಹಾಗೆ ವೈದಿಕ ವಿರೋಧಿಯಾದ ಅನೇಕ ಪರಿಕಲ್ಪನೆಗಳು ಅವೈದಿಕ ವಲಯದಲ್ಲಿ ಆಗಲೇ ಮೂಡಿದ್ದವು. ಆದ್ದರಿಂದ ವೈದಿಕಧರ್ಮ ಕಾವಲಿಲ್ಲದ ಕೋಟೆಯಂತಾಗಿತ್ತು. ಇದರ ಮಿತಿಗಳನ್ನೇ ಬಳಸಿಕೊಂಡು ಪ್ರವೇಶಿಸಿದ ಕ್ರೈಸ್ತಧರ್ಮ ತನ್ನ ಧರ್ಮವನ್ನು ಸರಳವಾಗಿ ಬೋಧಿಸಿ, ಸಮಾನತೆ, ಸ್ವಾತಂತ್ರ್ಯಗಳು ತಮ್ಮ ಧರ್ಮದಲ್ಲಿವೆ ಎಂದು ಬಿಂಬಿಸುತ್ತಿದ್ದರು.

ಮಲೆನಾಡ ಪರಿಸರದಲ್ಲಿ ಕ್ರೈಸ್ತ ಮಿಷನರಿಗಳು ತಮ್ಮ ಮತಾಂತರ ಪ್ರಕ್ರಿಯೆಗೆ ಬಡತನ, ಅನಕ್ಷರತೆ, ಮೌಢ್ಯಗಳಲ್ಲಿ ಬದುಕುವ ಜನ ಸಮುದಾಯದತ್ತ ನೇರವಾಗಿ ಹೋಗಲಿಲ್ಲ. ತನ್ನ ಆಳ್ವಿಕೆಯನ್ನು ಗಟ್ಟಿಗೊಳಿಸಲು ಬ್ರಿಟೀಷ್ ಸರ್ಕಾರ ಜಮೀನ್ದಾರಿ ಪದ್ಧತಿಯಲ್ಲಿ ಅನುಸರಿಸಿದ ತಂತ್ರವನ್ನೇ ಕ್ರೈಸ್ತ ಮಿಷನರಿಗಳು ಅನುಸರಿಸಿದರು. ಅಂದರೆ ಮಲೆನಾಡ ಪರಿಸರದ ಶ್ರೀಮಂತರೂ, ಒಕ್ಕಲಿಗ ಸಮುದಾಯದಲ್ಲಿ ಪ್ರತಿಷ್ಠಿತರೂ ಆದಂತಹ ಕುಟುಂಬಗಳ ಯುವಕರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿತು. ಆ ಮೂಲಕ ಅವರನ್ನು ಕೈ ಕೆಳಗೆ ಬದುಕುವ ಜನ ಸಮುದಾಯಗಳು ಸುಲಭವಾಗಿ ಬರಬಹುದೆಂದು ಲೆಕ್ಕಚಾರ ಹೊಂದಿದ್ದರು. ಆದ ಕಾರಣ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಸಿಂಧುವಳ್ಳಿ ಚಿನ್ನಪ್ಪಗೌಡ, ಬೆಟ್ಟಳ್ಳಿ ದೇವಯ್ಯರಂತಹ ಯುವಕರನ್ನು ಆಕರ್ಷಿಸಲು ಪಾದ್ರಿ ಜೀವರತ್ನಯ್ಯನ ಪ್ರವೇಶವಾಗುತ್ತದೆ.

ತಮ್ಮ ಧರ್ಮದ ವಿಚಾರವಾಗಿ ತಿಳುವಳಿಕೆ ಹೊಂದಿರುವ, ಧಾರ್ಮಿಕ ಹಿನ್ನಲೆಯಲ್ಲಿ ಎಲ್ಲಾ ಲಾಭಗಳನ್ನು ಪಡೆಯುತ್ತಿರುವ, ಪರಂಪರಾಗತವಾದ ರೂಢಿ ಆಚರಣೆಗಳನ್ನು ಪಾಲಿಸಿಕೊಂಡು ಬರುತ್ತಿರುವ ಮೇಲು ವರ್ಗದ ಸಮುದಾಯವನ್ನು ಮತಾಂತರಗೊಳಿಸುವುದು ಸಾಧ್ಯವಿಲ್ಲ. ಅಂತೆಯೇ ತಮ್ಮ ಧರ್ಮದ ವಿಚಾರವಾಗಿ ಯಾವ ಬುದ್ಧಿ ಪೂರ್ವಕವಾದ ಅರಿವೂ ಇಲ್ಲದೆ, ಏನೋ ಪರಂಪರಾಗತವಾಗಿ ರೂಢಿಸಿಕೊಂಡು ಬಂದ ಅಂಧ ಆಚಾರ ವಿಚಾರಗಳನ್ನೇ ಧರ್ಮದ ತತ್ತ್ವಗಳೆಂದು ನಂಬಿ ಬದುಕುತ್ತಿರುವ ಜನಸಮುದಾಯವನ್ನು ಮತಾಂತರಗೊಳಿಸುವುದು ಸುಲಭ ಸಾಧ್ಯವಲ್ಲ. ಆದರೆ ಸನಾತನ ಧರ್ಮದ ಆರ್ಷೇಯ ವಿಚಾರಗಳನ್ನು ಅರಿಯದ, ಧರ್ಮದ ಮಿತಿಗಳು ಕಾಲ್ತೊಡಕಾಗಿರುವಂತಹ, ಹೊಸತನಕ್ಕೆ ತೆರೆದುಕೊಳ್ಳಲು ಹಾತೊರೆಯುವ ಮನದವರನ್ನು ಮತಾಂತರಕ್ಕೆ ಸೆಳೆಯುವುದು ಸುಲಭ, ಸಿಂಧುವಳ್ಳಿ ಚಿನ್ನಪ್ಪ, ಬೆಟ್ಟಳ್ಳಿ ದೇವಯ್ಯ ಈ ತರದವರು. – ಸನಾತನ ಧರ್ಮದ ಶ್ರೇಷ್ಠ ವಿಚಾರಗಳನ್ನು ಅರಿಯಲು ಸಾಧ್ಯವಿರದ ಪರಿಸರದಲ್ಲಿ ಬದುಕುವ ಹಾಗಿದ್ದು, ಜಾಗೃತ ಮನಸ್ಥಿತಿಯ ಹೊಸತನಕ್ಕೆ ತುಡಿತಕ್ಕೆ ಒಳಗಾದ ಯುವಕರಲ್ಲಿ ಅವರ ಪರಿಸರದಲ್ಲಾಗುತ್ತಿರುವ ಪುರೋಹಿತಶಾಹಿಯ ಶೋಷಣೆಯನ್ನು, ಶೂದ್ರರ ಮೌಢ್ಯತೆಯನ್ನು ಅರ್ಥೈಸಿ ಮತಾಂತರದ ಪ್ರಯತ್ನವನ್ನು ಪಾದ್ರಿ ಜೀವರತ್ನಯ್ಯ ನಡೆಸುತ್ತಾನೆ.

ಕುವೆಂಪು ಕಾದಂಬರಿಯಲ್ಲಿ ಬರುವ ಸಿಂಧುವಳ್ಳಿ ಚಿನ್ನಪ್ಪಗೌಡ ಐತಿಹಾಸಿಕವಾದ ಪಾತ್ರ, ಮಂಡಗದ್ದೆ ಸಮೀಪದ ಸಿಂಧುವಾಡಿಯ ಚಿನ್ನಪ್ಪಗೌಡ ಮತಾಂತರವಾದದ್ದನ್ನು ನೈಟಿಂಗೇಲ್ ಪ್ರಸ್ತಾಪಿಸಿದ್ದನ್ನು ಹಿಂದೆ ನೋಡಿದ್ದೇವೆ. ಕುವೆಂಪು ನೆನಪಿನ ದೋಣಿಯಲ್ಲಿ ಚನ್ನಪ್ಪಗೌಡರನ್ನು ಭೇಟಿ ಮಾಡಿರುವ ಬಗ್ಗೆ ದಾಖಲಿಸಿದ್ದಾರೆ.

ಅನೇಕ ವರ್ಷಗಳ ಹಿಂದೆ ಒಕ್ಕಲಿಗರಾಗಿದ್ದು ಕ್ರೈಸ್ತ ಪಾದ್ರಿಗಳ ಬೋಧನೆಗೆ ಸಿಕ್ಕಿ ಕ್ರೈಸ್ತರಾಗಿದ್ದ ವಯೋವೃದ್ಧ ಚನ್ನಪ್ಪರೊಡನೆ ಧರ್ಮ, ದೇವರು ಮತ ಮತ್ತು ಸಮಾಜಗಳ ಬಗ್ಗೆ ವಿಚಾರವಾಗಿ ಮಾತನಾಡಿದೆ. ಅವರಿಗೆ ಶ್ರೀ ರಾಮಕೃಷ್ಣರ ಜೀವನ ಚರಿತ್ರೆಯನ್ನು ಓದಲು ಹೇಳಿದೆ. ಅವರು ಸ್ವಲ್ಪ ವ್ಯಸನ ಪೂರ್ವಕ ಧ್ವನಿಯಿಂದಲೆ ಹೇಳಿದರು. "ನಾವು ತರುಣರಾಗಿದ್ದಾಗ ಹೀಗೆ ಹೇಳುವವರು ಯಾರೂ ಇರಲಿಲ್ಲ. ನಮ್ಮಲ್ಲಿ ಆಗ ಪ್ರಚಲಿತವಾಗಿದ್ದುದು ಮೂಢಾಚಾರಗಳು ಮಾತ್ರ –ಅಂದರೆ ಸರ್ವಧರ್ಮ ಸಮನ್ವಯ ಭಾವ. ಈ ವೇದಾಂತ ಧರ್ಮದ ವಿಶ್ವವೈಶಾಲ್ಯ ಇಂಥವುಗಳು ತಮಗೆ ತಿಳಿದಿದ್ದರೆ

ಮತಾಂತರಗೊಳ್ಳದೆಯೆ ಸಮಾಜವನ್ನು ಉನ್ನತ ಮಟ್ಟಕ್ಕೆ ಎತ್ತುವ ಪ್ರಯತ್ನ ತಾವು ಮಾಡಬಹುದಾಗಿತ್ತು ಎಂಬರ್ಥದಲ್ಲಿ".[೨೦]

ಮಲೆನಾಡ ಪರಿಸರ ಬೆಟ್ಟ-ಗುಡ್ಡಗಳಿಂದಲೂ, ದಟ್ಟವಾದ ಕಾಡುಗಳಿಂದಲೂ, ವೈವಿಧ್ಯಮಯವಾದ ಪ್ರಾಣಿ-ಪಕ್ಷಿಗಳಿಂದಲೂ ತುಂಬಿದ್ದಂತಹ ಪರಿಸರವಾಗಿದ್ದಂತಹದೆನ್ನೋ ನಿಜ. ಈ ಪರಿಸರದ ಜನ ನಾಗರಿಕತೆಯಿಂದ ಬಹುದೂರವಿರುವ ಯಾವುದೋ ಬುಡಕಟ್ಟುಗಳಿಗೆ ಸೇರಿರುವ ಯಾವ ಪರಂಪರೆಯೂ ಇಲ್ಲದ ಜನಸಮುದಾಯವೇನೂ ಅಲ್ಲ. ಕ್ರೈಸ್ತ ಮಿಷನರಿಗಳಿಗಳು ಹಾಗೆ ಭಾವಿಸಿದ್ದರು. ಈ ಮಲೆನಾಡಿನ ಪರಿಸರದ ಸಮಾಜ ತುಂಬಾ ಸಂಕೀರ್ಣವಾದುದು. ಒಟ್ಟು ಭಾರತೀಯ ಸಮಾಜ ಯಾವ ಸ್ವರೂಪದ್ದೋ ಅಂತೆಯೇ ಇದು ಕೂಡ. ಇಲ್ಲಿ ಶ್ರೇಣಿಕೃತ ಸಮಾಜ ವ್ಯವಸ್ಥೆ ಇದೆ. ಹಲವಾರು ಜಾತಿ-ಉಪಜಾತಿಗಳಿವೆ. ಜಾತಿ ತಾರತಮ್ಯಗಳು ಪಾಲಿಸಲ್ಪಡುತ್ತಿವೆ. ಪ್ರತಿಯೊಂದು ಜಾತಿ-ಉಪಜಾತಿಯೂ ಕೂಡ ತಮ್ಮ ತಮ್ಮದೇ ಆದ ನಂಬಿಕೆ ಆಚರಣೆ, ಕಟ್ಟುಕಟ್ಟಳೆಗಳನ್ನು ಪಾಲಿಸುತ್ತಿವೆ. ಇಂತಹ ಸಂಕೀರ್ಣ ಸಮಾಜದೊಳಗೆ ಕ್ರೈಸ್ತ ಮಿಷನರಿ ಪ್ರವೇಶ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ವಿಫಲವಾಯಿತು. ಆದರೆ ಅದು ತಂದ ಆಧುನಿಕತೆ ಇಲ್ಲಿಯ ಲೋಕದೊಳಗೆ ಬಿರುಗಾಳಿಯನ್ನುಂಟು ಮಾಡದಿದ್ದರೂ ಬೀಸಿದ ಕಿರುಗಾಳಿಯೂ ಕೆಲಮಟ್ಟಿನ ತಲ್ಲಣ, ಬೆರಗು, ಕುತೂಹಲ, ಹೊಸ ಆಶಾಕಿರಣ, ಜೀವನ ಮೌಲ್ಯಗಳ ಸುಧಾರಣೆಗೆ ಸ್ಥಿತ್ಯಂತರಗಳಿಗೆ ಕಾರಣವಾದಂತಹದು ನಿಜ.

ಇಲ್ಲಿನ ಶ್ರೇಣಿಕೃತ ಸಮಾಜದ ಜಾತಿ ಪ್ರಜ್ಞೆ ಎಷ್ಟು ಆಳವಾದುದೆಂದರೆ ಕ್ರೈಸ್ತ ಧರ್ಮ ವಿದೇಶದಿಂದ ಬಂದ ಹೊಸಧರ್ಮ, ಹಿಂದೂ ಧರ್ಮಕ್ಕಿಂತ ಬೇರೆಯಾದುದು ಎಂದು ಇಲ್ಲಿಯ ಸಮಾಜ ನೋಡಲಿಲ್ಲ. ಅದು ಇನ್ನೊಂದು ಜಾತಿ ಎಂದೇ ನೋಡಿತು. ಅಷ್ಟೇ ಅಲ್ಲ ಇಲ್ಲಿನ ಶ್ರೇಣಿಕೃತ ಸಮಾಜದ ಜಾತಿ ವ್ಯವಸ್ಥೆಯ ಕೆಳಹಂತದಲ್ಲಿರುವ ಹರಿಜನ ಜಾತಿಗಿಂತಲೂ ಕೀಳಾದುದೆಂದು ಭಾವಿಸುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಬೆಟ್ಟಳ್ಳಿ ದೇವಯ್ಯ ತೀರ್ಥಹಳ್ಳಿ ಉಪದೇಶಿ ಜೀವರತ್ನಯ್ಯನ ಬಲೆಗೆ ಬೀಳುವ ಮೊದಲು ದೇವಯ್ಯನ ಪ್ರತಿಕ್ರಿಯೆಯನ್ನು ಗಮನಿಸಬಹುದು. ಸಿಂಧುವಳ್ಳಿ ಚಿನ್ನಪ್ಪನೊಡನೆ ಬೆಟ್ಟಳ್ಳಿ ಮನೆಗೆ ಪಾದ್ರಿ ಬಂದಾಗ, ಆತನಿಗೆ ಊಟ ಹಾಕುವ ಸಂದರ್ಭ ಗಮನಿಸಬಹುದು. ಒಂದು ಪ್ರತಿಷ್ಠಿತ ಮನೆಯಲ್ಲಿ ನಡೆವ ಈ ಸಂಗತಿ ಸಾಮಾನ್ಯವಾದುದಲ್ಲ. ಒಂದು ಕ್ರಾಂತಿಯ ವಾತಾವರಣವೇ ಏರ್ಪಟ್ಟಿತ್ತು. ಚಿನ್ನಪ್ಪ ನಮ್ಮ ಜೊತೆಯಲ್ಲಿಯೇ ಪಾದ್ರಿಯನ್ನು ಕೂರಿಸಿ ಊಟ ಹಾಕಿ ಎಂದಾಗ ದೇವಯ್ಯನ ಪ್ರತಿಕ್ರಿಯೆ.

"ಥೂ ಥೂ ಥೂ! ಹೋಲೇರಿಗಿಂತಲೂ ಅತ್ತತ್ತ, ಆ ಕಿಲಸ್ತರನ್ನ ಒಳಗೆ ಕೂರಿಸೋದೆ ಸೈ? ಏನೋ ಬಟ್ಟೆ ಬರಿ ಹಾಕ್ಕೊಂಡು ಬಂದನಲ್ಲಾ ಅಂತ ಜಗಲಿ ಹತ್ತಿಸಿದ್ದು! ಹಿತ್ತಲ ಕಡೆ ಬಳ್ಳೆ ಹಾಕುವಂತಹದು ಸುಧಾರಣೆಗೊಂಡು ಕೆಳ ಜಗಲಿ ಹಾಕುವ ತೀರ್ಮಾನಕ್ಕೆ ಬರುತ್ತಾರೆ. ಬಾಳೆ ಎಲೆ ಯಾವುದು ಹಾಕಬೇಕು ಕೀತು ಹಾಕುವುದೊ? ಕುಡಿ ಹಾಕುವುದೊ? ಕಂಡು ಹಾಕುವುದೊ? ಅಂತೂ ಕಂಡು ಹಾಕಿದರು ಕುಡಿ ಎಲೆಯ ಗೌರವ ಸಿಗಲಿಲ್ಲ. ಕೈಯಿಂದ ಬಡಿಸಲು ಮನೆಯಾಳುಗಳೂ ಒಪ್ಪಲಿಲ್ಲ..... 'ದನಾ ತಿನ್ನುವ ಕೀಳು ಜಾತಿಗೆ ಕೈಯಿಂದಲೇ ಅನ್ನ ಇಕ್ಕಿ ಅವರ ಎಂಜಲಿನಿಂದ ಮೈಲಿಗೆಯಾಯಿತೆಂದರೆ ಜಾತಿಯವರಾರೂ

ತಮ್ಮನ್ನು ಒಳಗೆ ಸೇರಿಸುವುದಿಲ್ಲ' ಎಂದು ಬಿಟ್ಟರು. ಕೊನೆಗೆ ಹರಿಜನರಿಗೆ ಬಡಿಸುವ ಹಾಗೆ ಎಲೆಯಲ್ಲಿ ಎಲ್ಲದನ್ನು ಬಡಿಸಿ ಮೊರದಲ್ಲಿಟ್ಟುಕೊಡುವಂತೆ ಮಾಡಿದರು.....[೨೧]

ಕಾದಂಬರಿಯಲ್ಲಿ ಬರುವ ಕುಟುಂಬಗಳಲ್ಲಿ ಬೆಟ್ಟಳ್ಳಿ ಮನೆ ಬೇರೆಲ್ಲ ಮನೆಗಳಿಗಿಂತ ಸ್ವಲ್ಪ ಸುಧಾರಿಸಿದ ಮನೆ. ದೇವಯ್ಯ ಪಾದ್ರಿಯ ಉಡುಪಿಗೆ, ತೀರ್ಥಹಳ್ಳಿಗೆ ಹೋದಾಗ ಸರ್ಕಾರಿ ಕೆಲಸಗಳಿಗೆ ಸಹಾಯ ಮಾಡುತ್ತಿದ್ದ ಎಂಬ ಕಾರಣಕ್ಕೆ ವಿಶ್ವಾಸ ಹೊಂದಿದ್ದನಷ್ಟೆ ತನ್ನ ಮನೆಯಲ್ಲಿ ಪಾದ್ರಿಗೆ ಸತ್ಕರಿಸುವ ಸಂದರ್ಭದಲ್ಲಿ ಕಟ್ಟು ಕಟ್ಟಳೆಗಳನ್ನು ಮೊದಲಿಗೆ ಮೀರಲಾರದೆ ಹೋದ. ಇದು ಆಧುನಿಕತೆ ತಂದ ಸಂಭ್ರಮ ಮತ್ತು ಆತಂಕ. ಇಲ್ಲಿ ಕಟ್ಟು ಪಾಡುಗಳ ಲೋಕದಲ್ಲಿ ಅನ್ಯಧರ್ಮಿಯ ಅಥವಾ ಜಾತಿಗೆ ಸೇರಿದ ಪಾದ್ರಿ ಮನೆಯ ಜಗುಲಿ ಮೆಟ್ಟುವುದಾಗಲಿ, ಒಳಗೆ ಕುಳಿತು ಎಲ್ಲರ ಜೊತೆ ಊಟ ಮಾಡುವುದಾಗಲಿ ಇಲ್ಲಿನ ಪರಿಸರದ ಸಾಮಾಜಿಕ ಸಂದರ್ಭದಲ್ಲಿ ಕೀಳಾದದ್ದು ; ಅವಮಾನಕರವಾದದ್ದು ; ಸಮಾಜಬಾಹಿರವಾದದ್ದು ಆಗಿ ಕಂಡು ಬರುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ವಿಚಾರ ಎಂದರೆ– ಐರೋಪ್ಯ ಪಾದ್ರಿ ಭೇಟಿ ನೀಡಿದ್ದರೆ ಇಂತಹ ಪ್ರತಿರೋಧ ವ್ಯಕ್ತವಾಗುತ್ತಿತ್ತೆ? ಜೀವರತ್ನಯ್ಯ ಮತಾಂತರಗೊಂಡ ದೇಶಿಯನಾದ್ದರಿಂದ ಮತ್ತು ಕೆಳವರ್ಗಕ್ಕೆ ಸೇರಿದವನಾದ್ದರಿಂದ ಈ ನೇಟೀವ್ ಪಾದ್ರಿಯನ್ನು ಈ ರೀತಿ ನಡೆಸಿಕೊಂಡರೆ? ಎಂಬುದನ್ನು ಗಮನದಲ್ಲಿಟ್ಟುಕೊಂಡು ಯೋಚಿಸಿದರೆ ಈ ಎರಡನೇ ಸತ್ಯವೇ ಎದ್ದು ತೋರುತ್ತದೆ. ಜೀವರತ್ನಯ್ಯ ಮತಾಂತರ ಹೊಂದಿದ್ದರೂ ಈ ಪರಿಸರದ ಸಮಾಜದ ಕಣ್ಣಲ್ಲಿ ಕೆಳಜಾತಿ ಕೇವಲ ತೊಟ್ಟ ಬಟ್ಟೆಯಿಂದ ಆತ ಬದಲಾಗಿ ತೋರುವುದಿಲ್ಲ. ಚರ್ಮದಂತೆ ಅಂಟಿಕೊಂಡು ಬಂದ ಜಾತಿ ಇಲ್ಲಿ ಮುಖ್ಯವಾಗುತ್ತದೆ. ಯಾವ ಧರ್ಮ ಸೇರಿದರೂ ತನ್ನ ಪರಿಸರದ ಕಣ್ಣಲ್ಲಿ ಜಾತಿಯನ್ನು ಕಳೆದುಕೊಳ್ಳಲು ಸಾಧ್ಯವಿಲ್ಲವೆಂಬ ಸತ್ಯ ಬೆಟ್ಟಳ್ಳಿ ಮನೆಯೊಳಗಿನ ನಡವಳಿಕೆ ಎತ್ತಿ ತೋರಿಸುತ್ತದೆ. ಈ ದೇಶದ ಸಾಮಾಜಿಕ ವಿನ್ಯಾಸದಲ್ಲಿ ಜಾತಿ, ಮತಧರ್ಮಗಳ ತಾರತಮ್ಯ, ಮಡಿವಂತಿಕೆ ಮತ್ತು ಅದು ಆಚರಣೆಗೊಳ್ಳುವ ಕ್ರಮ ಅತ್ಯಂತ ಬಿಗಿಯಾಗಿರುವುದನ್ನು ಇಂತಹ ಕಡೆ ಗಮನಿಸಬಹುದಾದ ಅಂಶ. ಆಂಗ್ಲ ಕ್ರೈಸ್ತ ಪಾದ್ರಿಗೆ ಸಿಗುವ ಗೌರವಕ್ಕಿಂತ ಸ್ಥಳೀಯ ಮತಾಂತರ ಪಾದ್ರಿಗೆ ಭಾರತೀಯ ಹಿಂದೂ ಮನಸ್ಸುಗಳು ಹೇಗೆ ಪ್ರತಿಕ್ರಿಯಿಸುತ್ತವೆ ಎಂಬುದು ಗಮನಿಸಬೇಕಾದ ಅಂಶ. ಸ್ಥಳೀಯ ಜನ ಸಮುದಾಯದ ಸ್ಪೃಶ್ಯ–ಅಸ್ಪೃಶ್ಯ ನಂಬಿಕೆ ಆಚರಣೆಗಳು ಕ್ರೈಸ್ತ ಧರ್ಮದ ಸುಲಭ ಪ್ರವೇಶಕ್ಕೆ ಅಡ್ಡಿಯಾಗಿತ್ತು. ಮಲೆನಾಡಿಗರ ದೃಷ್ಟಿಯಲ್ಲಿ ಜೀವರತ್ನಯ್ಯನು ಅಸ್ಪೃಶ್ಯನೆ. ಈ ಹಿನ್ನೆಲೆಯಲ್ಲಿ ಕಾದಂಬರಿಯೊಳಗೆ ಇನ್ನು ಕೆಲವು ವಿವರಗಳನ್ನು ಗಮನಿಸಬಹುದು. ಪಾದ್ರಿ ಜೀವರತ್ನಯ್ಯ ದೇವಯ್ಯನಿಗೆ ಸೈಕಲ್ ಕಲಿಸುವ ಸಂದರ್ಭ ಅತ್ಯಂತ ಬೆರಗಿನ ವಿಚಾರವಾಗಿತ್ತು ಸ್ಥಳೀಯರಿಗೆ ಅವರ ಸಂಭಾಷಣೆ ಹೀಗಿದೆ –

"ಬೀಸೆಕಲ್ಲಿನ ಮೇಲೆ ಹ್ಯಾಂಗೊ ಸವಾರಿ ಮಾಡಾದೂ...... ಆ ಪಾದ್ರಿಗೆ ಏನೋ ಹಸುರು ಗೊತ್ತಿರ ಬೈದೂ!...... ಮತ್ತೆ? ಹಸುರುಗೊತ್ತಿರೋಕೆ ಸಣ್ಣ ಗೌಡರ ಮ್ಯಾಲೆ ಮಂಕುಬೂದಿ ಎರಚಿ, ಕಿಲಸ್ತರ ಜಾತಿ ಸೇರಿಸೋಕೆ ಮಾಡ್ಯಾನಂತೆ!"[೨೨]

ದೇವಯ್ಯನ ಜೊತೆ ಅವನ ಆಳು ಬಚ್ಚನೂ ಕಿಲಸ್ತರ ಜಾತಿ ಸೇರುತ್ತಾನೆ ಎಂಬ ಸಂಗತಿ ಹರಿಜನಕೇರಿಗೆ ಅಪಶಕುನದ ವಿಚಾರ. ಗುತ್ತಿ ಹತ್ತಿರ ಸೇಸಿ ಹೇಳುವ ಮಾತು – 'ಆ ಪಾದ್ರಿ ಜಾತಿಗೆ

ಸೇರ್ತಾನೆ (ಬಚ್ಚ) ಅಂತಾ ಕೇರೀಲೆಲ್ಲ ಗುಸುಗುಸು! ಜಾತಿಕೆಟ್ಟೋವನಿಗೆ ಕೊಡಾಕೆ ಬದಲಾಗಿ (ತಿಮ್ಮಿಯನ್ನು) ಬಾವಿಗೆ ಹಾಕಾದುಲೇಸು![೨೩]

ಉಪದೇಶಿ ಜೀವರತ್ನಯ್ಯನ ಬಲೆಗೆ ಬೀಳುವ ಮೊದಲು ದೇವಯ್ಯ ಕೂಡ ಆತನನ್ನು ಕೀಳಾಗಿಯೇ ಕಂಡಿದ್ದ. ಕ್ರಮೇಣ ಪಾದ್ರಿಗೆ ಮಾರು ಹೋದದ್ದು ಪಾದ್ರಿಯ ಉಡುಪಿಗೆ, ತೀರ್ಥಹಳ್ಳಿಗೆ ಹೋದಾಗ ಸರ್ಕಾರಿ ಕೆಲಸಕ್ಕೆ ಸಹಾಯ ಮಾಡುತ್ತಿದ್ದ ಎಂಬ ದಾಕ್ಷಿಣ್ಯಕ್ಕೆ ಹೊಸ ಹೊಸ ವಸ್ತುಗಳ ಉಡುಗೊರೆಯ ಹಂಗಿಗೆ. ಪಾದ್ರಿಯ ಪ್ರಲೋಭನೆಗಳು ದೇವಯ್ಯನ ಬಾಹ್ಯ ಮತ್ತು ಆಂತರಿಕ ಬದುಕಿನಲ್ಲಿ ಸ್ಥಿತ್ಯಂತರಗಳಾಗತೊಡಗಿದವು. ತೀರ್ಥಹಳ್ಳಿಗೆ ಹೋಗಿ ಬಂದಾಗಲೆಲ್ಲ ಆತ ಏನಾದರೂ ಸುಧಾರಣೆಯಾಗಿಯೆ ಬರುತ್ತಿದ್ದ. ಅವನ ಉಡುಪಿನಲ್ಲಾಗುವ ಬದಲಾವಣೆಗೆ ತಂದೆಗೆ ದುಂದುಗಾರಿಕೆ ಎನಿಸಿದರೆ ತಾಯಿ–ಹೆಂಡತಿಗೆ ಮೆಚ್ಚುಗೆಯ ವಿಷಯವಾಗಿತ್ತು. ಆತ ತಂದ ಗಡಿಯಾರವಂತೂ ಬೆಟ್ಟಳ್ಳಿ ಮನೆಯವರಿಗೆಲ್ಲ ಬೆರಗನ್ನು ತಂದಿತ್ತು. ಲಾಂದ್ರ ಲ್ಯಾಂಪು, ಲಾಟೀನುಗಳು ಬೆಟ್ಟಳ್ಳಿ ಮನೆಯು ನವನಾಗರಿಕತೆಯನ್ನು ಪಡೆಯುತ್ತಿರುವ ಸಂಕೇತಗಳಾಗಿದ್ದವು – ಈ ಬಾಹ್ಯ ಪರಿವರ್ತನೆಗಳಾವವು ಮನೆಯ ಮಂದಿಗೆ ಭಯಂಕರವಾಗಿ ಕಂಡಿರಲಿಲ್ಲ, ಮೆಚ್ಚುಗೆಯನ್ನೇ ತಂದಿತ್ತು. ಆದರೆ ಒಂದು ದಿವಸ ತೀರ್ಥಹಳ್ಳಿಯಿಂದ ಹಿಂತಿರುಗಿ ಬಂದಾಗ ಜುಟ್ಟು ಬೋಳಿಸಿ ಕ್ರಾಪು ಬಿಟ್ಟಿದ್ದು ಭಯಂಕರವಾಗಿ ಕಂಡಿತು. ತಾಯಿ ಅಪಶಕುನವೆಂದೇ ಗೋಳಿಟ್ಟಳು. ಅಪ್ಪ ಸತ್ತಾಗ ನಡೆಯಬೇಕಾಗಿದ್ದ ಕಾರ್ಯ, ಬದುಕಿರುವಾಗಲೇ ನಡೆದು ಹೋಗಿತ್ತು. ಹೆಂಡತಿ ಆಗಬಾರದ್ದು ಆಯಿತೆಂದು ಮೊದ ಮೊದಲು ರೋದಿಸಿದರೂ ದಿನಕಳೆದಂತೆಲ್ಲಾ ಅವಳಿಗೆ ಜುಟ್ಟಿಗಿಂತಲೂ ಕ್ರಾಪೆ ತನ್ನ ಗಂಡನಿಗೆ ಚಂದವಾಗಿ ತೋರಿತು. ಪಾದ್ರಿಯ ಉಪದೇಶಕ್ಕಿಂತ ಪಾದ್ರಿಯ ಮನೆಯ ವಾತಾವರಣ ದೇವಯ್ಯನನ್ನು ಆಕರ್ಷಿಸಿತ್ತು. ಪುರುಷರ ಜೊತೆ ಯಾವ ಹಿಂಜರಿಕೆಯಿಲ್ಲದೆ, ಅಳುಕಿಲ್ಲದೆ ಮುಕ್ತವಾಗಿ ಮಾತನಾಡುವ ಸ್ವಚ್ಛಂದ ಪರಿಸರ ಅವನಿಗೆ ಇಷ್ಟವಾಗುತ್ತದೆ. ಅದಕ್ಕೆ ತನ್ನ ಮನೆಯ ಪರಿಸರವನ್ನು ಹೋಲಿಸಿ ನೋಡುತ್ತಾನೆ. ಗೊಬ್ಬೆ ಸೀರೆಯುಟ್ಟು, ಮುಂಗೈಗೆ ಹಚ್ಚೆ ಹಾಕಿಸಿಕೊಂಡು, ಗಂಡಸರಿಂದ ಮರೆಯಾಗಿ, ರಜಸ್ವಲೆಯಾದಾಗ ಮನೆಯ ಹೊರಗಿರುವ ತನ್ನ ಪರಿಸರದ ಸಂಸ್ಕೃತಿ ಆಚರಣೆ ಹೀನವಾಗಿ ಕಾಣತೊಡಗುತ್ತದೆ. ಅಂದರೆ ದಿನಗಳದಂತೆ ದೇವಯ್ಯನಲ್ಲಾಗುವ ಆಂತರಿಕ ಮತ್ತು ಬಾಹ್ಯ ಬದಲಾವಣೆಗಳು ಏನನ್ನು ಸೂಚಿಸುತ್ತವೆ ಎಂದರೆ ಮತಾಂತರ ನಯವಾದ ರೀತಿಯಲ್ಲಿ ನಿಧಾನಕ್ಕೆ ಮಲೆನಾಡ ಪ್ರವೇಶ ಮಾಡುತ್ತಿರುವ ಬಗೆಯನ್ನು ಸೂಚಿಸುತ್ತದೆ. ಹಾಗೆ ಆಧುನಿಕತೆ ಆವರಿಸಿಕೊಳ್ಳುವ ಪರಿಕೂಡ ಹೌದು. ಕ್ರೈಸ್ತಮತಕ್ಕೆ ಮತಾಂತರವಾಗದಿದ್ದರೂ ಆಧುನಿಕತೆಯ ಸೆಳೆತಗಳು ಮತಾಂತರವಾಗುವುದಕ್ಕೆ ಸಿದ್ಧವಾಗುತ್ತಿರುವ ಮನಸ್ಥಿತಿಯನ್ನು ಇಲ್ಲಿ ಕಾಣಬಹುದಾಗಿದೆ. ಹಾಗಾಗಿ ಆಧುನಿಕತೆಯನ್ನು ಸ್ಥಿತ್ಯಂತರದ ಭಾಗವಾಗಿ ಅಧ್ಯಯನ ಮಾಡಬೇಕಾಗಿದೆ. ಮೊದ ಮೊದಲು ಮೇಲು ನೋಟಕ್ಕೆ ತನ್ನ ಉಡುಗೆ ತೊಡುಗೆಗಳಲ್ಲಿ ಬದಲಾಗುತ್ತಿರುವ ದೇವಯ್ಯ, ಮಾನಸಿಕವಾಗಿಯೂ ಜೀವರತ್ನಯ್ಯನ ಉಪದೇಶ, ಸ್ನೇಹ ವಿಶ್ವಾಸಗಳು ವೃದ್ಧಿಯಾದಂತೆ ಬದಲಾಗುತ್ತಿರುವುದನ್ನು ಕಾಣಬಹುದು. ಭಾರತೀಯರ ವಿಶಿಷ್ಟ ಗುಣವೇನೆಂದರೆ ಯಾವುದನ್ನಾದರೂ ಆರಂಭದಲ್ಲಿ ಪ್ರತಿಭಟನೆ, ತದನಂತರ ಅಪಹಾಸ್ಯ ಮಾಡಿ ಆ ನಂತರ ಸ್ವೀಕರಿಸಿ ತನ್ನದಾಗಿಸಿಕೊಳ್ಳುವುದು. ನಾಗರಿಕತೆ ಯಂತ್ರ ರೂಪದಲ್ಲೋ, ವಿಚಾರ ರೂಪದಲ್ಲೋ ನಮ್ಮ ಸಮಾಜದೊಳಗೆ ಪ್ರವೇಶ ಪಡೆದ

ಬಗೆ ಈ ರೀತಿಯದು.

ಕ್ರೈಸ್ತ ಪಾದ್ರಿಗಳು ತಮ್ಮ ಮತಧರ್ಮಗಳನ್ನು ಪ್ರಚಾರ–ಪ್ರಸಾರ ಮಾಡಲು ಕೇವಲ ಬೋಧನೆಯಂತ ಒಣ ಕಗ್ಗದ ಮೂಲಕ ಪ್ರವೇಶಿಸಲಿಲ್ಲ. ಬದಲಾಗಿ ಜೀವನಾವಶ್ಯಕ ವಸ್ತು – ಸಾಮಾಗ್ರಿಗಳನ್ನು ಒದಗಿಸುವುದರ ಮೂಲಕ ಶಿಕ್ಷಣ – ಸೇವೆಗಳಂತಹ ಅಗತ್ಯ ಮೂಲಗಳ ಮೂಲಕ ಜನಮಾನಸವನ್ನು ತಲುಪಲು ಪ್ರಯತ್ನಿಸುತ್ತಾರೆ. ಪಾದ್ರಿ, ಜೀವರತ್ನಯ್ಯನ ಈ ಪ್ರತಿಕ್ರಿಯೆ ದೇವಯ್ಯನಲ್ಲಿ ಬಾಹ್ಯ ಮತ್ತು ಆಂತರಿಕವಾದ ಬದಲಾವಣೆಗಳಾಗಲು ಸಾಧ್ಯವಾಗಿರುವುದನ್ನು ಕಾಣಬಹುದು.

ಕುವೆಂಪು ದೇವಯ್ಯನ ಪಾತ್ರದ ಒಳ ಹೊಕ್ಕು ಕೆಲವು ಸೂಕ್ಷ್ಮಗಳನ್ನು ವಿವರಿಸುತ್ತಾರೆ. ಕ್ರೈಸ್ತಧರ್ಮದ ಯಾವ ತತ್ವಗಳಾಗಲಿ, ಆಚಾರಗಳಾಗಲಿ ಅವನನ್ನು ಸೆಳೆಯಲಿಲ್ಲ. ಬದಲಾಗಿ ಅನೇಕ ಕಟ್ಟುಪಾಡುಗಳು ತನ್ನ ಪರಿಸರದಿಂದ ಜಾಗೃತ ಪ್ರಜ್ಞೆಯ ಈತನಿಗೆ ಸ್ವಾತಂತ್ರ್ಯದ ಬಯಕೆ. ಬಂಧನ ರಹಿತ ವಾತಾವರಣದ ಆಕಾಂಕ್ಷೆ. ಹಾಗೆ ನೋಡಿದರೆ ಕಾದಂಬರಿಯ ಇತರೆ ಕುಟುಂಬಗಳಲ್ಲಿ ಕಂಡು ಬರುವ ಕಟ್ಟುಪಾಡುಗಳು ಬೆಟ್ಟಳ್ಳಿ ಮನೆಯಲ್ಲಿ ಕಂಡು ಬರುವುದಿಲ್ಲ. ಕಲ್ಲು ಹೃದಯದ ಕಲ್ಲೇಗೌಡರಂತವರೂ ಕೂಡ ಹೆಂಡತಿಗೆ ಹೆದರುತ್ತಿದ್ದರು. ಆದ್ದರಿಂದ ತನ್ನ ಪರಿಸರದಲ್ಲಿ ಸ್ವೇಚ್ಛಾತನಕ್ಕೆ ದೊಡ್ಡ ಅಡ್ಡಿಯೇನಿರಲಿಲ್ಲ. ಪಾದ್ರಿಯ ಸಂಬಂಧ ಅವನಿಗಿರುವ ಸ್ವಾತಂತ್ರ್ಯವನ್ನು ವಿಕಾಸಗೊಳಿಸಿತ್ತು. ಆದಾಗ್ಯೂ ತನ್ನ ಮನೆ ಪಾದ್ರಿಯ ಮನೆಯ ವಾತಾವರಣದ ಹಾಗೆ ಇದ್ದರೆ ಸೊಗಸು ಎಂದು ಭಾವಿಸುತ್ತಾನೆ. ಹೆಂಡತಿಯ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತ 'ಈ ಮೂಡ ಜಾತೀಲಿ ಇರೋಕ್ಕಿಂತ ಅವರ ಜಾತಿಗೆ ಸೇರೋದೆ ವಾಸಿ ಅಂತ ಕಾಣ್ತದೆ'[೨೪] ಎನ್ನುತ್ತಾನೆ.

"ಕ್ರಿಶ್ಚಿಯನ್ ಧರ್ಮದಿಂದ ಆಕರ್ಷಿತನಾಗಲು ದೇವಯ್ಯನಿಗೆ ಆಂತರಿಕವಾದ ಧಾರ್ಮಿಕ ಅಥವಾ ಆಧ್ಯಾತ್ಮಿಕ ಒತ್ತಡಗಳಿಲ್ಲ. ಮತಾಂತರವು ತನ್ನನ್ನು ಆಧುನಿಕನನ್ನಾಗಿ ಮಾಡುತ್ತದೆ. ತನ್ನ ಸಾಮಾಜಿಕ ಅಂತಸ್ತನ್ನು ಹೆಚ್ಚಿಸುತ್ತದೆ, ಕಟ್ಟುಕಟ್ಟಳೆಗಳಿಲ್ಲದ ಜೀವನ ಶೈಲಿಯನ್ನು ತಂದುಕೊಡುತ್ತದೆ ಎಂಬ ಭ್ರಮೆಗಳಿಂದ ದೇವಯ್ಯ ಆವೃತನಾಗಿರುತ್ತಾನೆ........." ಆಧುನಿಕವಾಗುವುದೆಂದರೆ ಕ್ರಿಶ್ಚಿಯನ್ ಆಗುವುದು, ಅವರ ಹಾವ ಭಾವ ವೇಷ, ಭೂಷಣ, ಊಟೋಪಾಚಾರಗಳನ್ನು ಅನುಕರಿಸುವುದು ಎಂದು ನಂಬುವವ ದೇವಯ್ಯ[೨೫] ಎಂಬ ಮಾತು ಈ ಹಿನ್ನಲೆಯಲ್ಲಿ ಗಮನಾರ್ಹವಾದುದು.

ಬೈಸಿಕಲ್ ಸವಾರಿ ದೇವಯ್ಯನ ಮನೋಭಾವದ ಹಿನ್ನಲೆಯಲ್ಲಿ ಒಂದು ರೂಪಕವಾಗಿ ಬಂದಿದೆ ಎನ್ನಬಹುದು. "ಮತ ಪ್ರಚಾರಕ್ಕೆ ಬೈಬಲ್ ಏಸುಕ್ರಿಸ್ತನಿಗಿಂತಲೂ ಪ್ರಭಾವಶಾಲಿಯಾಗಿ ಪಾದ್ರಿಗೆ ಮೊದಲಿಗೆ ತೋರುತ್ತದೆ. ಆದರೆ ದೇವಯ್ಯ ಸವಾರಿ ಮಾಡುವಾಗ ಬೈಸಿಕಲ್ ಕಲಿಯುವಿಕೆಯ 'ಪ್ರಯೋಜನ ಬರಿಯ ನಲಿಯುವಿಕೆಯಾಗುತ್ತೇ ಹೊರತು ಕಲಿಯುವಿಕೆಯಾಗಿರಲಿಲ್ಲ"[೨೬] ದೇವಯ್ಯನಂತರವರ ಧಾರ್ಮಿಕ ಶ್ರದ್ಧೆ ಏನೆಂಬುದನ್ನು ಧ್ವನಿಸುತ್ತದೆ. ಆದ್ದರಿಂದ ದೇವಯ್ಯನಂತವರಿಗೆ ಮತಾಂತರ ಎಂಬುದು ಸಾಮಾಜಿಕವಾಗಿ ತಂದುಕೊಡಬಹುದಾದ ಸುಖದ ವಿಷಯವಾಗಿತ್ತು ; ಸಾಮಾಜಿಕವಾದ ಪ್ರತಿಷ್ಠೆಯ ಸಂಗತಿಯಾಗಿತ್ತು.

ಹಾಗಿದ್ದೂ ಕೂಡ ಜೀವರತ್ನಯ್ಯನ ಉಪದೇಶಗಳು, ವಿಚಾರಧಾರೆಗಳು, ಹಿಂದೂ ಧರ್ಮದ ಆಚಾರಗಳ ಬಗ್ಗೆ ಮಾಡುವ ಟೀಕಾ ಪ್ರಹಾರಗಳು ದೇವಯ್ಯನ ಪರಿಸರದಲ್ಲಿದ್ದ ಕಂದಾಚಾರಗಳ ಬಗ್ಗೆ

ಅಜ್ಞಾನದ ಮೇಲೆ, ನೈರ್ಮಲ್ಯ ಪ್ರಜ್ಞೆಯ ಬಗ್ಗೆ, ಅರ್ಥವಿಲ್ಲದ ಕಟ್ಟುಪಾಡುಗಳ ಬಗ್ಗೆ ಬೆಳಕು ಚೆಲ್ಲಿದವು. ಕ್ರೈಸ್ತಧರ್ಮದ ಮೂಲಕ ಬಂದ ಆಧುನಿಕತೆ ದೇವಯ್ಯನಲ್ಲಿ ತನ್ನ ಪರಿಸರವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವಂತೆ ಮಾಡಿತು. ಬಾಣಂತಿ ಕೋಣೆಯ ಮುಚ್ಚಿದ ಕಿಟಕಿಯನ್ನು ತೆಗೆಯುವ ಕ್ರಿಯೆ ತನ್ನ ಪರಿಸರದಲ್ಲಿ ಮುಸುಕಿಕೊಂಡಿರುವ ಕಂದಾಚಾರಗಳ ಕತ್ತಲೆಯನ್ನು ಸರಿಸುವೆನೆಂಬ ಸಾಂಕೇತಿಕ ಧ್ವನಿ ಇದೆ.

ತೀರ್ಥಹಳ್ಳಿಯಿಂದ ಹಿಂತಿರುಗಿದ ದೇವಯ್ಯನಲ್ಲಿ ಪಾದ್ರಿಯ ಉಪದೇಶದಿಂದ ತನ್ನ ಜಾತಿಯವರ ಮೂಢಾಚಾರಗಳ ಬಗ್ಗೆ ಜಿಗುಪ್ಸೆ ಹುಟ್ಟಿಸಿತ್ತು, ತುಂಬ ಅವಮಾನಕ್ಕೆ ಗುರಿಯಾಗಿತ್ತು. ಆವೇಶದಲ್ಲಿಯೆ ತನ್ನ ಕೋಣೆಯಲ್ಲಿ ಮಗುವಿನ ಜ್ವರಕ್ಕೆ ಕಟ್ಟಿದ್ದ ತಾಯತವನ್ನೆಲ್ಲ ಕಿತ್ತೆಸೆದ, ಕೊಳಕು ದಿಷ್ಟಿಮಣಿಯನ್ನು ತೆಗೆದೆಸೆದ – ಶುದ್ಧ ವಿಚಾರದಿಂದ ಹಾಗೆ ಮಾಡಿದ್ದರೂ ಅಂತರಂಗದಲ್ಲಿ ಅಳಕು ಮೂಡುತ್ತದೆ, ಆತ್ಮಾವಲೋಕನ ಮಾಡಿಕೊಳ್ಳುತ್ತಾನೆ. ಧರ್ಮದ ಹೆಸರಿನಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ನಿರ್ಲಕ್ಷ್ಯವನ್ನು ಖಂಡಿಸಿದ್ದು ತಪ್ಪೆ? ಪೂಜೆ, ವ್ರತ, ಸಂತರ್ಪಣೆ ಮೂಲಕ ಹಾದಿ ತಪ್ಪಿಸುವ ಜೋಯಿಸರ ಕ್ರಿಯೆಯನ್ನು ತಡೆದದ್ದು ತಪ್ಪೆ? ಹಳೆಮನೆ ಶಂಖರಪ್ಪ ಹೆಗಡೆ ಎಂಬ ಗೊಡ್ಡು ತನ್ನ ಹೆಂಡತಿ ಮಕ್ಕಳಿಗೆ ಕಾಯಿಲೆ ಯಾವುದು ಎಂಬುದರ ಬಗ್ಗೆ ಯೋಚಿಸದೆ ಮೂರು ಹೊತ್ತೂ ಪೂಜೆ, ದೆಯ್ಯದ್ಯಾವರುಗಳಿಗೆ ಹರಕೆ ಸಲ್ಲಿಸುತ್ತಾ, ತನಗೆ ಯಾರೋ ಹುಯ್ಯಲು ಕೊಟ್ಟಿದ್ದಾರೆಂದು ಆ ಜೋಯಿಸರು, ಈ ಭಟ್ಟರು, ಆ ಗಣಮಗರಿಂದ ಏನೇನೋ ಮಾಡಿಸಿ ತಾನೂ ದಾರಿತಪ್ಪಿ, ಇತರರನ್ನೂ ದಾರಿ ತಪ್ಪಿಸುತ್ತಿದ್ದಾನಲ್ಲಾ– ಇದನ್ನೆಲ್ಲಾ ತಿದ್ದಬಾರದೆ? ಸುಮ್ಮನಿದ್ದು ತಾನೂ ಈ ಮೂಢರೊಳಗೆ ಮೂಢನಾಗಬೇಕೆ?[೨೭] ಈ ಆತ್ಮಾವಲೋಕನ, ಇದನ್ನೆಲ್ಲ ತಿದ್ದಬೇಕೆಂಬ ಕಾಳಜಿ ಏನಿದೆ ಅದು ದೇವಯ್ಯನಿಗೆ ಪಾದ್ರಿಯ ಉಪದೇಶದಿಂದ ಟೀಕೆಯಿಂದ ಮೂಡಿಬರುವ ವಿಚಾರಶೀಲತೆಯಾಗಿತ್ತು. ಅಷ್ಟರ ಮಟ್ಟಿಗೆ ದೇವಯ್ಯ ಬದಲಾಗುತ್ತಿದ್ದ.

ದೇವಯ್ಯನ ಪಾತ್ರ ಆಧುನಿಕತೆ ಕಾಲಿಡುವ ಸಂದರ್ಭದಲ್ಲಿ ಹಳೆಯ ಹೊಸತುಗಳ ನಡುವೆ ಹೊಯ್ದಾಡುತ್ತಿದ್ದ ಮಾನಸಿಕ ಸಂದಿಗ್ಧವನ್ನು ಸಂಕೇತಿಸುತ್ತದೆ. ಮಗುವಿನ ತೊಟ್ಟಿಲಿಗೆ ಮನೆಯವರು ಕಟ್ಟಿದ ಯಂತ್ರ ತಂತ್ರ ಮುಡಿಪುಗಳನ್ನು ಕಿತ್ತೊಗೆದು ಹೊಸ ವಿಚಾರಗಳ ಅರ್ಥವಂತಿಕೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ ದೇವಯ್ಯನ ಪಾತ್ರ, ತಾನು ಮಾಡಿದ ಕ್ರಿಯೆ ಎಲ್ಲೊ ತಪ್ಪಾಗಿದೆ ಎಂಬ ಅಪರಾಧಿ ಪ್ರಜ್ಞೆ ಕಾಡುವುದರಿಂದ ಅದನ್ನು ಸಮರ್ಥಿಸುವ ಮನಸ್ಥಿತಿಯಿಂದ ತಾನು ಮಾಡಿದ ಕ್ರಿಯೆಗೆ ಸಕಾರಣಗಳನ್ನು ಕೊಟ್ಟುಕೊಳ್ಳುತ್ತಾನೆ. ಈ ದೃಷ್ಟಿಯಿಂದ ಪರಂಪರೆಯ ಪ್ರಜ್ಞೆಯಲ್ಲಿಯೂ ಹೊಸ ಬಗೆಯ ಆಲೋಚನೆಗಳು ತರ್ಕ ವಾದಗಳ ಮೂಲಕ ಬದುಕನ್ನು ಬೇರೊಂದು ದೃಷ್ಟಿಯಿಂದ ನೋಡುವಂತ ಸಂದರ್ಭವನ್ನು ಈ ಪಾತ್ರದ ಮೂಲಕ ಕಾಣುತ್ತೇವೆ.

ದೇವಯ್ಯನ ಕ್ರೈಸ್ತಧರ್ಮದ ಆಕರ್ಷಣೆಯ ಸಂದರ್ಭವನ್ನು ಇಟ್ಟುಕೊಂಡು ಮಲೆಗಳಲ್ಲಿ ಮದುಮಗಳು ಕಾದಂಬರಿ ಏನನ್ನು ಹೇಳುತ್ತಿದೆ ಎಂದರೆ – ಐರೋಪ್ಯ ದೇಶದಿಂದ ಬಂದ ಕ್ರೈಸ್ತ ಧರ್ಮ ನೇಟೀವ್ ಪಾದ್ರಿ ಮೂಲಕ ಮಲೆನಾಡನ್ನು ಪ್ರವೇಶಿಸುತ್ತದೆ. ಅದು ನೇಟೀವ್ ಪಾದ್ರಿಯನ್ನು ಯಾಕೆ ಮುಖ್ಯವಾಗಿ ಬಳಸಿಕೊಳ್ಳುತ್ತದೆ ಎಂದರೆ ಆತ ಕೂಡ ಮತಾಂತರನಾದ ದೇಶೀಯ. ಆತನಿಗೆ

ಭಾರತೀಯ ಸಮಾಜದ ಹಿಂದೂ ಧರ್ಮದೊಳಗಿನ ಎಲ್ಲ ದೌರ್ಬಲ್ಯಗಳನ್ನು, ಅಸಮಾನತೆಯನ್ನು, ಅಮಾನವೀಯತೆಯನ್ನು, ಮೌಢ್ಯಕಂದಾಚಾರಗಳನ್ನು ಬಲ್ಲ, ಸ್ವತಃ ಆತ ಕೂಡ ಮೌಢ್ಯ ಪ್ರಪಂಚದಿಂದಲೇ ಬಂದವನು. ಆದ್ದರಿಂದ ಇಲ್ಲಿಯ ಎಲ್ಲ ಲೋಪದೋಷಗಳನ್ನು ಎತ್ತಿ ಆಡುವ ಸಾಮಾರ್ಥ್ಯ ಅವನಿಗಿದೆ. "ದೀವದಾನೆ ಕಾಡಾನೆಯನ್ನು ಆಕರ್ಷಣೆಯ ಖೆಡ್ಡಾಕ್ಕೆ ಕೆಡಹಲು ಪ್ರಯತ್ನಿಸುವಂತೆ ನೇಟೀವ್ ಪಾದ್ರಿ ಜೀವರತ್ನಯ್ಯ ಚಿನ್ನಪ್ಪನ ಕಾಲಡಿಯ ಕುರುಡು ಆಚಾರ ಮತ್ತು ಮೂಢನಂಬಿಕೆಗಳ ಭೂಮಿಯನ್ನು ಅಗೆದು ತೆಗೆದು ಕ್ರೈಸ್ತ ಮತದ ಖೆಡ್ಡಕಂದಕವನ್ನು ನಿರ್ಮಿಸುತ್ತಿದ್ದನು"[೨೮] ಎಂಬಲ್ಲಿ ಹಿಂದೂ ಧರ್ಮದ ಅಮಾನವೀಯತೆ, ದೌರ್ಬಲ್ಯ, ಮೌಢ್ಯತೆ ಕಂದಾಚಾರಗಳ ಬಗ್ಗೆ ಚಿನ್ನಪ್ಪ – ದೇವಯ್ಯನಂತ ಜಾಗೃತ ಪ್ರಜ್ಞೆಯ ಯುವಕರಲ್ಲಿ ಎಚ್ಚರವನ್ನು ಮೂಡಿಸುತ್ತಾ, ಈ ಪರಿಸರದ ಬದುಕಿಗೆ ಅಪರಿಚಿತವಾದ ಸರಳ ಆಚರಣೆಗಳನ್ನು ಬೋಧಿಸುತ್ತಾ, ಈ ಪರಿಸರ ಕಂಡಿಲ್ಲದ ಯಾಂತ್ರಿಕ ವಸ್ತುಗಳನ್ನು ಪರಿಚಯಿಸುತ್ತಾ ತನ್ನ ಧರ್ಮವನ್ನು ಹರಡುವ ಪ್ರಕ್ರಿಯೆಯನ್ನು ಕಾದಂಬರಿ ದಾಖಲಿಸುತ್ತದೆ.

ಜೀವರತ್ನಯ್ಯನಂತ ಪಾದ್ರಿಗಳ ಉಪದೇಶ ಮತ್ತು ಆಮಿಷಗಳು, ಫಲಕಾರಿಯಾಗಲು ಕಾರಣವೇನು? ಹಿಂದೂ ಧರ್ಮದಲ್ಲಿ ಮನೆಮಾಡಿಕೊಂಡಿರುವ ಪುರೋಹಿತಶಾಹಿ ಹಿಡಿತ, ಜಾತಿಮತ ತಾರತಮ್ಯ, ಸಂಕುಚಿತ ಮನೋಭಾವ, ಅನಾಚಾರ, ಮೌಢ್ಯ, ಅವಿವೇಕ, ಅಜ್ಞಾನ, ಅಶಿಕ್ಷಣ, ಶೂದ್ರ–ದಲಿತ ದೈನ್ಯ ಸ್ಥಿತಿ, ಕಲ್ಲು, ಮಣ್ಣು, ಮರ, ಪೂಜೆ, ಭೂತ–ಪ್ರೇತಗಳಲ್ಲಿ ನಂಬಿಕೆಯಿಟ್ಟು ಭಯ–ಭಕ್ತಿಯ ನಡವಳಿಕೆ ಇತ್ಯಾದಿಗಳ ಎದುರಿನಲ್ಲಿ ಕ್ರೈಸ್ತಧರ್ಮದ ಸರಳವಾದ ಆಚರಣೆ, ಪರೋಪಕಾರ, ಸೇವಾ ಮನೋಭಾವ, ತ್ಯಾಗ, ಶ್ರದ್ಧೆ, ಭಕ್ತಿ ಉದ್ಧರಿಸುವ ಸಾಮಾರ್ಥ್ಯಗಳು ಇತ್ಯಾದಿಗಳನ್ನು ಮುಖಾಮುಖಿಯಾಗಿಸುತ್ತದೆ ಕಾದಂಬರಿ.

ಸಾವಿರಾರು ವರ್ಷಗಳ ಪರಂಪರೆಯೊಳಗೆ ಬೆಳದು ಬರುತ್ತಿರುವ ಹಿಂದೂ ಧರ್ಮದೊಳಗೆ ಅನ್ಯಧರ್ಮದ ಪ್ರವೇಶ ಸುಲಭ ಸಾಧ್ಯವಾದದ್ದು, ಇಲ್ಲಿಯ ದೌರ್ಬಲ್ಯದಿಂದ ಎಂಬ ವಿಷಾಧದೊಳಗೆ ಸ್ಥಳೀಯ ಮಠಮಾನ್ಯಗಳ, ಗುರುಪೀಠಗಳ ಚಿತ್ರಣವನ್ನು ಕಾದಂಬರಿ ನೀಡುತ್ತದೆ. ಚಿನ್ನಪ್ಪ–ದೇವಯ್ಯರಂತಹ ಜಾಗೃತ ಪ್ರಜ್ಞೆಯುಳ್ಳ ಯುವಕರಲ್ಲಿ ತಮ್ಮ ಪರಿಸರದಲ್ಲಾಗುತ್ತಿರುವ ಪುರೋಹಿತಶಾಹಿಯ ಶೋಷಣೆಯನ್ನು, ಶೂದ್ರರ ಮೌಢ್ಯತೆಯನ್ನು ಅರ್ಥೈಸಿ, ಹೊಸ ವಸ್ತು–ವಿಚಾರಗಳ ಬಲೆ ಬೀಸಿ ಖೆಡ್ಡಾಕ್ಕೆ ಬೀಳಿಸುವ ಕ್ರೈಸ್ತ ಮಿಷನರಿಯ ತಂತ್ರ ಹುನ್ನಾರವನ್ನು ತಡೆಯಬಲ್ಲ ನೈತಿಕ ಸಾಮಾರ್ಥ್ಯ ಬಡವರ ಹಸಿವಿಗೆ ಮೌಢ್ಯವಕೊಟ್ಟು ಮೃಷ್ಟಾನ್ನವನ್ನುಂಡ ಮಠಮಾನ್ಯಗಳಿಗೆ ಗುರುಪೀಠಗಳಿಗೆ ಇತ್ತೆ? ಎಂಬುದನ್ನು ಕುವೆಂಪು ಕಟುವಾಗಿ ಟೀಕಿಸುತ್ತಾರೆ ; ಪ್ರಶ್ನಿಸುತ್ತಾರೆ.

"ಅಜ್ಞರೂ ಮೌಢ್ಯಾಂಧರೂ ಆಗಿದ್ದ ಶೂದ್ರ ವರ್ಗದ ಸಾಮಾನ್ಯ ಜನರಿಂದ ಪಾದ ಪೂಜೆ ಮಾಡಿಸಿಕೊಳ್ಳುತ್ತಿದ್ದರು ; ಅಡ್ಡ ಪಲ್ಲಕ್ಕಿ ಸೇವೆ ಸಲ್ಲಿಸಿಕೊಳ್ಳುತ್ತಿದ್ದರು ; ದಾನ ದಕ್ಷಿಣೆ, ಸಾಷ್ಟಾಂಗ ನಮಸ್ಕಾರಗಳನ್ನು ಸ್ವೀಕರಿಸುತ್ತಿದ್ದರು ; ಆಶೀರ್ವಾದ ಮಾಡುತ್ತಿದ್ದರು. ತಮ್ಮ ತಮ್ಮ ಪಂಗಡಕ್ಕೆ ಸೇರಿದ........ ಭೂಸುರರಿಗೆ ಸಮಾರಾಧನೆ ಮಾಡಿಸಿ ಹೊಟ್ಟೆ ತುಂಬಿಸುತ್ತಿದ್ದರು......... ಶೂದ್ರರು ವೇದೋಪನಿಷತ್ತುಗಳನ್ನು ಓದುವುದಿರಲಿ, ಕೇಳಿದರೂ ಅವರ ಕಿವಿಗೆ ಸೀಸ ಕರಗಿಸಿ ಹೊಯ್ಯುವ ನರಕ ಶಿಕ್ಷೆಯನ್ನು ವಿಧಿಸಿ ಅದಕ್ಕೆ ಮನುಧರ್ಮಶಾಸ್ತ್ರವೆಂದು ಹೆಸರಿಟ್ಟವರು ಶೂದ್ರರಿಗೆ ವೇದಾಂತ ಬೋಧನೆ ಮಾಡುವ ಪಾಪಕ್ಕೆ ಏಕೆ

ಪಕ್ಕಾಗುತ್ತಾರೆ.........."[೨೯]

ಮಲೆನಾಡಿನ ಘೋರಾರಣ್ಯ ಪ್ರದೇಶದ ಒಂದು ಮೂಲೆಯಲ್ಲಿ ನಡೆಯುತ್ತಿರುವ ಮತಾಂತರ ಪ್ರಕ್ರಿಯೆಯನ್ನು ಚಿತ್ರಿಸುತ್ತಲೇ ಇಡಿ ಭಾರತದಲ್ಲಿ ನಡೆಯುತ್ತಿರುವ ಕ್ರೈಸ್ತ ಮಿಷರಿಗಳ ಚಟುವಟಿಕೆಯನ್ನು ಸೂಚಿಸುತ್ತಾರೆ. "ಅದೇ ಹೊತ್ತಿಗೆ ವಿಪರ್ಯಾಸವೆಂದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಕ್ರೈಸ್ತಮತ ಶ್ರದ್ಧೆಯ ಮತ್ತು ಮಿಷನರಿ ಮತಾಂಧತೆಯ ಶಕ್ತಿ ಕೇಂದ್ರವಾಗಿದ್ದ ಅಮೆರಿಕಾ ನಗರ ಚಿಕಾಗೋ ನಗರದಲ್ಲಿ ನೆರೆದಿದ್ದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಹಿಂದೂ ಧರ್ಮದ ಮತ್ತು ವೇದಾಂತ ದರ್ಶನದ ಮಹೋನ್ನತಿಯನ್ನೂ ವಿಶ್ವ ವೈಶಾಲ್ಯವನ್ನು ತಮ್ಮ ಸಿಂಹಕಂಠದಿಂದ ಘೋಷಿಸಿದ್ದರು! ಅದನ್ನು ಆಲಿಸಿದ್ದ ಅನ್ಯಧರ್ಮೀಯ ವಿದ್ವಜ್ಜನ ಸಮೂಹವು ಆನಂದೋನ್ಮತ್ತವಾಗಿ ಜಯಘೋಷ ಮಾಡಿತ್ತು"[೩೦]– ಎಂಬುದಕ್ಕೆ ಹೊಂದಿಕೆ ಮಾಡಿ ಬಿಡುತ್ತಾರೆ ಕುವೆಂಪು. ಅಂದರೆ ವಿಶ್ವಮಟ್ಟದಲ್ಲಿ ಹಿಂದೂ ಧರ್ಮದ ಕೀರ್ತಿ ಪತಾಕೆಯನ್ನು ಸಂನ್ಯಾಸಿಯೊಬ್ಬರು ಹಾರಿಸುತ್ತಿರುವಾಗ ತನ್ನ ನೆಲದಲ್ಲಿ ಆ ಧರ್ಮ ಅನ್ಯಧರ್ಮದ ಆಕ್ರಮಣಕ್ಕೆ ಕುಸಿಯತೊಡಗಿತ್ತು. ಸಾಮ್ರಾಜ್ಯಶಾಹಿ ಪ್ರಭುತ್ವವೇ ಇದ್ದರೂ ಅನ್ಯಧರ್ಮದ ಶಕ್ತಿ, ಸಾಮಾರ್ಥ್ಯಕ್ಕಿಂತ ಹಿಂದೂ ಧರ್ಮದ ಒಳಗಿನ ದೌರ್ಬಲ್ಯವೇ ಕುಸಿತಕ್ಕೆ ಮುಖ್ಯ ಕಾರಣವಾಗಿತ್ತು. ಯಾರು ಎಂಬುದು ಇಲ್ಲಿನ ವ್ಯಂಗ್ಯ. ಆ ಧರ್ಮವನ್ನು ರಕ್ಷಿಸಬೇಕಾಗಿತ್ತು. ಆ ಸಂಸ್ಥೆಗಳ ಪುರೋಹಿತಶಾಹಿ ಹಿಡಿತ, ಬಹುಸಂಖ್ಯಾತರಿಗೆ ಅದರ ತತ್ತ್ವಗಳ ನಿರಾಕರಣೆ, ಅಸಮಾನತೆ, ಸ್ವಾರ್ಥ ಮುಂತಾದ ದೌರ್ಬಲ್ಯಗಳಿಂದ ಅದು ಕಾವಲಿಲ್ಲದ ಕೋಟೆಯು, ರಕ್ಷಕರಿಲ್ಲದ ದುರ್ಗವು ಆದುದರಿಂದ ಶತ್ರುವಿಗೆ ಪ್ರವೇಶಿಸಲು ಆಯುಧವಾಗಲಿ, ಸೈನ್ಯವಾಗಲಿ ಬೇಕಿಲ್ಲ, ಪರಿಸ್ಥಿತಿಯ ಲಾಭ ಪಡೆವ ಚಾಣಾಕ್ಷತನವಿದ್ದರೆ ಸಾಕು. ಆ ಚಾಣಾಕ್ಷತನ, ಮುತ್ಸದ್ದಿತನ, ಹುನ್ನಾರಗಳಲ್ಲಿ ಸಾಮ್ರಾಜ್ಯಶಾಹಿ ಪ್ರಭುತ್ವ ಕೈ ಪಳಗಿರುವಂತಹದು. ವಸಾಹತುಶಾಹಿ ಪ್ರವೇಶ ಸಾಧ್ಯವಾಗುವುದು ಇಂತಹ ಹೊರಗಿನ ಆಕ್ರಮಣ ಮತ್ತು ಒಳಗಿನ ದೌರ್ಬಲ್ಯ ಎರಡೂ ಸೇರಿದಾಗ. ಆದ್ದರಿಂದ ಕುವೆಂಪು ಕ್ರೈಸ್ತ ಮಿಶನರಿ ಚಟುವಟಿಕೆಯನ್ನು ಹೇಗೆ ವಿರೋಧಿಸುತ್ತಾರೋ ಅದಕ್ಕಿಂತಲೂ ಮಿಗಿಲಾಗಿ ಹಿಂದೂ ಧರ್ಮದ ದೌರ್ಬಲ್ಯವನ್ನು ಟೀಕಿಸುತ್ತಾರೆ. ಹಿಂದೂ ಧರ್ಮೀಯರು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾದ ಕಡೆ ಬೆಳಕನ್ನು ಚೆಲ್ಲುತ್ತಾರೆ.

ಹೀಗೆ ಹಿಂದೂ ಧರ್ಮ ಸಾವಿರಾರು ವರ್ಷಗಳಿಂದ ಕೆಲವರ ಗುತ್ತಿಗೆಯಾಗಿ, ಬಹು ಸಂಖ್ಯಾತ ಸಮುದಾಯದ ಕೇವಲ ಅಂಧಾಚರಣೆಯಾಗಿ, ಅದರ ವಿಶ್ವ ವೈಶಾಲ್ಯತೆಯೆಲ್ಲಾ ಪಾತಾಳ ಸೇರಿರುವ ಹೊತ್ತಿನಲ್ಲಿ ವಸಾಹತುಶಾಹಿ ಹೊಸ ವಿಚಾರಗಳ ಬೆಳಕಿನಲ್ಲಿ ಪ್ರವೇಶಿಸಿದಾಗ, ಶೋಷಿತ ಸಮಾಜಗಳು ಆಕರ್ಷಿತವಾದವು, ಹೊಸಬಗೆಯ ಬದುಕಿನ ಜಾಗೃತ ಪ್ರಜ್ಞೆಯ ಮನಸ್ಸುಗಳು ತುಡಿದವು. ಆ ಮೂಲಕ ಪರಿಸರದಲ್ಲಿ ಆತಂಕ ತಲ್ಲಣ, ಬೆರಗು, ಹೊಸ ಆಕಾಂಕ್ಷೆ, ಹೊಸ ಸಂಚಲನಗಳುಂಟಾದವು. ಆದರೂ ಕ್ರೈಸ್ತ ಮಿಷನರಿಗಳು ಅಂದುಕೊಂಡ ರೀತಿಯಲ್ಲಿ ಮಲೆನಾಡ ಪ್ರಾಂತ್ಯದಲ್ಲಿ ಮತಾಂತರ ಪ್ರಕ್ರಿಯೆ ಸಾಫಲ್ಯವನ್ನು ಕಾಣಲಿಲ್ಲ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ದೇವಯ್ಯ ಸಿಂಧುವಳ್ಳಿ ಚಿನ್ನಪ್ಪನ ಹಾಗೆ ಮತಾಂತರವಾಗಲು ಸಾಧ್ಯವಾಗುವುದಿಲ್ಲ. ಕಾರಣಗಳೇನೆಂದರೆ ಮೂಲಭೂತವಾಗಿ ದೇವಯ್ಯ ಹಿಂದೂ

ಧರ್ಮದ ತತ್ತ್ವ ವಿಚಾರಗಳಿಗೆ ಬೇಸತ್ತು ಕ್ರೈಸ್ತ ಧರ್ಮದ ಕಡೆ ಒಲಿದವನಲ್ಲ. ಹಾಗೆ ಕ್ರೈಸ್ತ ಧರ್ಮ ಯಾವ ಉದಾತ್ತ ತತ್ತ್ವಗಳನ್ನಾಗಲಿ, ಮಾನವ ಪ್ರೀತಿಯನ್ನಾಗಲಿ ಕಂಡು ಅದಕ್ಕೆ ಒಲಿದವನೂ ಅಲ್ಲ. "ಕ್ರಿಶ್ಚಿಯನ್ ಧರ್ಮದಿಂದ ಆಕರ್ಷಿತನಾಗಲು ದೇವಯ್ಯನಿಗೆ ಆಂತರಿಕವಾದ ಧಾರ್ಮಿಕ ಅಥವಾ ಆಧ್ಯಾತ್ಮಿಕ ಒತ್ತಡಗಳಿಲ್ಲ, ಮತಾಂತರವು ತನ್ನನ್ನು ಆಧುನಿಕನನ್ನಾಗಿ ಮಾಡುತ್ತದೆ, ತನ್ನ ಸಾಮಾಜಿಕ ಅಂತಸ್ತನ್ನು ಹೆಚ್ಚಿಸುತ್ತದೆ, ಕಟ್ಟುಕಟ್ಟಳೆಗಳಿಲ್ಲದ ಜೀವನ ಶೈಲಿಯನ್ನು ತಂದುಕೊಡುತ್ತದೆ ಎಂಬ ಭ್ರಮೆಗಳಿಂದ ಆವೃತನಾಗಿರುತ್ತಾನೆ."[೨೧] ಅಂದರೆ ಕ್ರೈಸ್ತ ಧರ್ಮದ ಮೂಲಕ ಬಂದ ಯಾಂತ್ರಿಕ ವಸ್ತುಗಳನ್ನು ಬಳಸುವುದು, ವೇಷಭೂಷಣ, ಊಟೋಪಚಾರ, ಅವರ ಜೀವನಕ್ರಮ ಅನುಸರಿಸುವುದೇ ಕ್ರಿಶ್ಚಿಯನ್ ಎಂದೂ ಆ ಮೂಲಕ ತಾನು ತನ್ನ ಪರಿಸರದಲ್ಲಿ ಇತರರಿಗಿಂತ ಬೇರೆಯಾಗಿ ಕಾಣಿಸಬೇಕೆಂದೂ ಆಧುನಿಕವಾಗಿರುವೆನೆಂದೂ ಭಾವಿಸಿರುವಂತವನು. ಪಾದ್ರಿ ಜೀವರತ್ನಯ್ಯನ ಉಪದೇಶಕ್ಕಿಂತ ಆತನ ಮಗಳು ಆತನನ್ನು ಸೆಳೆದಿದ್ದಳು. ಪ್ರಲೋಭನೆಯಾಗಿ, ನಯವಾಗಿ, ಒತ್ತಡವಾಗಿ ಕೊನೆಯದಾಗಿ ಬೆದರಿಕೆಯನ್ನು ಒಡ್ಡುತ್ತಾನೆ. ಇದು ಮತಾಂತರ ಪ್ರಕ್ರಿಯೆಯಲ್ಲಿ ನಡೆಯುವ ವಿವಿಧ ಹಂತಗಳು.

ಕುವೆಂಪು 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಬರೆಯುವುದಕ್ಕಿಂತ ಮೊದಲು ೧೯೩೬ರಲ್ಲಿ 'ಕ್ರಿಸ್ತನಲ್ಲ, ಪಾದ್ರಿಯ ಮಗಳು' ಎಂಬ ಸಣ್ಣ ಕತೆಯನ್ನು ಬರೆದಿದ್ದಾರೆ. ಇಲ್ಲಿಯೂ ಕ್ರೈಸ್ತ ಪಾದ್ರಿಗಳ ಮತಾಂತರದ ವಂಚಕ ಸೂತ್ರದ ಪ್ರಯೋಗವನ್ನೇ ಧ್ವನಿಸಿದ್ದಾರೆ. ಅಲ್ಲಿಯ ಯೋಗಿನ್ ವೇದಾಂತ ಕೇಸರಿ, ಆಜನ್ಮ ಬ್ರಹ್ಮಚಾರಿಯಾಗಿರುವನೆಂಬ ಅವನ ವ್ರತ ಅವನಿಂದಲೇ ಹೇರಲ್ಪಟ್ಟದ್ದು. ವಿವೇಕಾನಂದರ ಧೀರ ನಿಲವನ್ನು ಹೊಂದಿ ಎಲ್ಲರನ್ನು ಚಕಿತಗೊಳಿಸಿದವನು. ಅಂತವನು ಕ್ರೈಸ್ತನಾದ ರಹಸ್ಯವೇ ಬೇರೆ. ಆತನನ್ನು ಕ್ರೈಸ್ತ ಜಾತಿಗೆ ಸೇರಿಸಿದ್ದು, ಕ್ರಿಸ್ತನಲ್ಲ, ಪಾದ್ರಿಯ ಮಗಳು, ಪಾದ್ರಿಯ ಮಗಳ ಮೇಲಿನ ಮೋಹ–ಪ್ರೇಮಗಳು ಜೈವಿಕವಾದದ್ದು ಮತ್ತು ಮಾನವ ಸಹಜವಾದ್ದು. ಮತಾಂತರಕ್ಕೆ ತನ್ನ ಮಗಳನ್ನೇ ಇದಕ್ಕಾಗಿ ಬಳಸಿಕೊಳ್ಳುವ ಪಾದ್ರಿಯ ಬುದ್ಧಿ ಆತನ ಅಧೀನವಾದದ್ದು ಮತ್ತು ಆ ಮಟ್ಟಿಗೆ ಕಲುಷಿತವಾದದ್ದು, ಆಕೆ ಅವನನ್ನು ಬಿಟ್ಟು ಬೇರೆಯವನ ಜೊತೆ ಓಡಿ ಹೋಗುತ್ತಾಳೆ. ತಾನೆಲ್ಲಿ ಎಡವಿದೆನೆಂಬ ಮತ್ತು ತನ್ನ ಈ ದುರಂತಕ್ಕೆ ತಾನೇ ಕಾರಣ ಎಂಬ ಅರಿವು ಅವನಿಗಿದೆ. "ಉಪದೇಶ ಜಯಿಸದವರನ್ನು ಸೌಂದರ್ಯ ಜಯಿಸುವುದೆಂಬ ತತ್ತ್ವವನ್ನು ಪಾದ್ರಿ ಚೆನ್ನಾಗಿ ಅರಿತಿದ್ದ"[೨೨] ಎಂದು ಅವನು ಹೇಳುವಲ್ಲಿ ಈ ಅಂಶ ಸ್ಪಷ್ಟವಿದೆ. ಕುವೆಂಪು ಅವರಂತಹ ವಿಕಾಸಶೀಲ ಬರಹಗಾರರಲ್ಲಿ ಮತ್ತೆ ವಿಸ್ತೃತವಾಗಿ 'ಮಲೆಗಳಲ್ಲಿ ಮದುಮಗಳು' (೧೯೬೭) ಮತ್ತೆ ಕಾಣಿಸಿಕೊಳ್ಳುತ್ತದೆ.

ಈ ಸಂಬಂಧ ದೇವಯ್ಯನಿಗೆ ಹತ್ತರಲ್ಲಿ ಮತ್ತೊಂದು ಸೇರಿ ಹನ್ನೊಂದಾಗಿತ್ತು. ಆದರೆ ಪಾದ್ರಿಗೆ ಅದು ಪ್ರಬಲವಾಗ ಗಾಳವಾಗಿತ್ತು. ದೇವಯ್ಯನ ಮತಾಂತರ ಪಾದ್ರಿಯ ಮತಕ್ಕೆ, ಆತನ ವೃತ್ತಿಗೆ, ಪಾದ್ರಿಗೆ ಮಗಳಿಗೆ ಲಾಭಕರವಾಗಿದ್ದರಿಂದ ಆದಷ್ಟು ಬೇಗ ಮತಾಂತರ ಆಗುವಂತೆ ಒತ್ತಾಯಿಸತೊಡಗಿದ ; ನಯವಾಗಿ ಬೆದರಿಕೆಯನ್ನು ಹಾಕಿದ್ದ, ನಯವಾಗಿ, ಒತ್ತಡ ಪೂರ್ವಕವಾಗಿ ಅಂತಿಮವಾಗಿ ಬೆದರಿಕೆಯನ್ನೂ ಹಾಕಿದ್ದ. ಹಿಂದೂ ಧರ್ಮಕ್ಕೆ ಅಂಟಿದ ಮತಾಚಾರ ಮೂಢಾಚಾರಗಳ ಬಗಗೆ ಪಾದ್ರಿಗಿಂತಲೂ ಚೆನ್ನಾಗಿಯೇ ಗಡ್ಡದಯ್ಯ ವಿವರಿಸಿ ಹೇಳುತ್ತಾನೆ. ಈ ಸ್ವಧರ್ಮ ವಿಮರ್ಶೆಯಲ್ಲಿ ತಿರಸ್ಕಾರವಿರಲಿಲ್ಲ. ಇದನ್ನೆಲ್ಲಾ ತೊಡೆದು

ಹಾಕಬೇಕೆಂದು ಕಳಕಳಿಯಿತ್ತು. ಧರ್ಮದ ಸಾಂಸ್ಥಿಕ ಲಕ್ಷಣವನ್ನು ತಿರಸ್ಕರಿಸಿ ಅನುಭವದ ಮೂಲಹಂದರವಾದ ಆಧ್ಯಾತ್ಮಿಕತೆ ಪ್ರೀತಿ ವಿಶ್ವಾಸಗಳನ್ನು ಸತ್ವವಾಗಿಸಿಕೊಂಡ ಸಂತ ಗಡ್ಡದಯ್ಯನವರಂತವರಿಂದ ಭಾರತದ ಜನ ಸಮುದಾಯಗಳಲ್ಲಿ ವ್ಯಾಪಕವಾಗಿ ನಡೆಯಬಹುದಾದ ಮತಾಂತರ ಕ್ರಿಯೆಯನ್ನು ತಡೆದಿದೆ. ಇದು ದೇವಯ್ಯನಲ್ಲಿ ಹೊಸ ತರ್ಕ, ಅರಿವು ಮೂಡಲಿಕ್ಕೆ ಸಾಧ್ಯವಾಯಿತು. ಪಾದ್ರಿಯ ಮತಾಂತರದ ಬಲೆಯಿಂದ ಬಿಡಿಸಿಕೊಳ್ಳಲು ದೇವಯ್ಯ ಪ್ರತಿವಂಚನೆಯ ತಂತ್ರಕ್ಕೆ ಮೊರೆ ಹೋದ ದೇವಯ್ಯ ಮತಾಂತರ ಬಲೆಯಿಂದ ತಪ್ಪಿಸಿಕೊಳ್ಳಲು ಮೊದ ಮೊದಲು ಅವಧಿಯನ್ನು ಮುಂದೂಡುತ್ತಾ ಬಂದ, ಜೀವರತ್ನಯ್ಯನಿಗೆ ನಂಬಿಕೆ ತರಲು ತನ್ನ ಆಳು ಬಚ್ಚನಿಗೆ ತೀರ್ಥ ಕೊಡಿಸಿ ಮತಾಂತರ ಮಾಡಿಸಿದ. ಕಾಲವಂಚನೆ ಮೂಲಕ ತಪ್ಪಿಸಿಕೊಳ್ಳುವ ಉಪಾಯವನ್ನು ಆಲೋಚಿಸಿ ಮೈಸೂರು ಸಂಸ್ಥಾನದಲ್ಲಿ ಇದ್ದ ಕಾನೂನನ್ನು ಪಾದ್ರಿಯ ಗಮನಕ್ಕೆ ತರುತ್ತಾನೆ. ಅನ್ಯಮತವನ್ನು ಸ್ವೀಕರಿಸಿದ ವ್ಯಕ್ತಿಗೆ ಪಿತ್ರಾರ್ಜಿತ ಆಸ್ತಿ ತಂದೆ ಬದುಕಿರುವವರೆಗೆ ಬರುವುದಿಲ್ಲವೆಂದೂ, ಅವರು ಕಾಲವಾದ ನಂತರ ಮತಾಂತರ ಹೊಂದುವುದಾಗಿ ವಾದಿಸಿದ್ದ ದೇವಯ್ಯ ಇದಕ್ಕೆ ಪಾದ್ರಿ ಸಾಮ್ರಾಜ್ಯಶಾಹಿ ಹಿಡಿತದ ರಾಜಕೀಯ ಸ್ವರೂಪವನ್ನು ಪರಿಚಯಿಸುತ್ತಾನೆ.

"ಇಂಡಿಯಾದಲ್ಲಿ ಬ್ರಿಟೀಷ್ ಸರಕಾರವು ಪ್ರೊಟೆಸ್ಟೆಂಟ್ ಮಿಷನರಿಗಳಿಗೆ ನೇಟೀವ್ ಜನರನ್ನು ಮತಾಂತರಗೊಳಿಸುವುದಕ್ಕೆ ಸರ್ವ ಸೌಲಭ್ಯಗಳನ್ನು ಕೊಡುತ್ತಾ ಇದೆ. ಮೈಸೂರು ಸಂಸ್ಥಾನವೂ ನೇಟೀವ್ ಸಂಸ್ಥಾನವಾದರೂ ಅದರ ರಾಜನು ಸಂಪೂರ್ಣವಾಗಿ ಬ್ರಿಟೀಷರ್ ಅಡಿಯಾಳು ಬ್ರಿಟಿಷರ ಪ್ರತಿನಿಧಿ ರೆಸಿಡೆಂಟ್ ಸಾಹೇಬರು ಹೇಳಿದ ಹಾಗೆ ಕೇಳಬೇಕಾಗುತ್ತದೆ. ಇಲ್ಲದಿದ್ದರೆ ರಾಜ್ಯವನ್ನೇ ಕಳೆದುಕೊಳ್ಳುತ್ತಾನೆ. ನಮ್ಮ ದೊಡ್ಡ ಪಾದ್ರಿಗಳು......... ರೆಸಿಡೆಂಟರ ಕಿವಿಯಲ್ಲಿ......... ಉಸಿರಿದರೆ ಸಾಕು, ನಿಮ್ಮ ಪಿತ್ರಾರ್ಜಿತ ಆಸ್ತಿಗೆ ನಿಮ್ಮ ಅರ್ಧಾಂಗಿ ಆಗುವ ನನ್ನ ಮಗಳು ಹಕ್ಕುದಾರಳಾಗಿ ಬಿಡುತ್ತಾಳೆ".[೩೩]

ಈ ಮಾತುಗಳಿಂದ ದೇವಯ್ಯನಿಗೆ ಮಿಷನರಿ ಹಿಡಿತದ ಭೀಕರ ಸ್ವರೂಪಗಳು ಅರ್ಥವಾಗತೊಡಗಿದವು. ತಾನು ಕ್ರೈಸ್ತ ಧರ್ಮದ ಆಕರ್ಷಣೆಗೆ ಒಳಗಾದರೂ, ಪಾದ್ರಿ ಮಗಳಿಗೆ ಹೋಲಿಸಿಕೊಂಡಾಗ ತನ್ನ ಹೆಂಡತಿ ದೇವಮ್ಮ ಗೊಡ್ಡು ಸಂಪ್ರದಾಯಕ್ಕೆ ಅಂಟಿಕೊಂಡವಳಾಗಿ ಕಂಡರೂ ಆಕೆಯಿಂದ ದೂರವಾಗಬೇಕು ಎಂದು ಯೋಚಿಸಿದವನಲ್ಲ. ಆದರೆ ಮತಾಂತರ ಹೆಂಡತಿಯೂ ಆಗಬೇಕು ; ಇಲ್ಲವಾದರೆ ವಿವಾಹ ವಿಚ್ಛೇಧನ ನೀಡಬೇಕು, ಕ್ರೈಸ್ತ ಮತ ಇಬ್ಬರು ಹೆಂಡಿರನ್ನು ಹೊಂದಲು ಎಂದಿಗೂ ಸಮ್ಮತಿಸುವುದಿಲ್ಲ ಎಂಬ ಪಾದ್ರಿಯ ಸೂಚನೆ ದೇವಯ್ಯನಿಗೆ ಅಪಥ್ಯವಾಗಿತ್ತು. ಅಂದರೆ ಯಾವುದು ಇದುವರೆಗೆ ದೇವಯ್ಯನಿಗೆ ಆಕರ್ಷಣೆಯ ಸಂಗತಿಯಾಗಿತ್ತೊ, ಹೊಸ ವಿಚಾರಗಳನ್ನು ತಂದಿತ್ತೋ ಈಗ ಅದರ ಒಳ ಸುಳಿಗಳು ಗೋಚರಿಸತೊಡಗಿದಾಗ ತಲ್ಲಣಿಸುತ್ತಾನೆ. ಮುಂದೆ ಈ ಕಾರಣದಿಂದಲೇ ದಸ್ಯು ಮಾರ್ಗವನ್ನು ಕಂಡುಕೊಳ್ಳುತ್ತಾನೆ. ಮಲೆನಾಡಿನ ಪ್ರತಿಷ್ಠಿತ ಜಮೀನ್ದಾರಿ ಕುಟುಂಬದಲ್ಲಿ ಹುಟ್ಟಿ ಬಂದ ದೇವಯ್ಯನಿಗೆ ಈ ಸಂದರ್ಭದಲ್ಲಿ ಮತಾಂತರದ ಯೋಚನೆಗಳೇ, ಅನೇಕ ತಲ್ಲಣಗಳನ್ನು ಸಂಘರ್ಷಗಳನ್ನುಂಟು ಮಾಡುತ್ತದೆ ಎಂದ ಮೇಲೆ ಮತಾಂತರವಾಗಿದ್ದರೆ ಆತ ಊಹಿಸಲು ಅಸಾಧ್ಯವಾದ ತಲ್ಲಣ, ಸಂಘರ್ಷಕ್ಕೆ ಎಡೆಯಾಗಬೇಕಾದ ಸಂದರ್ಭ ಒದಗುತ್ತಿತ್ತು. ಬಹುಶಃ ವಿಷಾಧವನ್ನು ಅನುಭವಿಸುವ ಸ್ಥಿತಿ ಬರುತ್ತಿತ್ತು. ಈ ವಿಷಾಧ ಕ್ರಿಸ್ತನಲ್ಲ ಪಾದ್ರಿ ಮಗಳು ಕತೆಯ

ಯೋಗಿನ್‌ನಲ್ಲಿ ಮತ್ತು ನೆನಪಿನ ದೋಣಿಯಲ್ಲಿ ಬರುವ ಐತಿಹಾಸಿಕವಾದ ಸಿಂಧುವಾಡಿ ಚಿನ್ನಪ್ಪಗೌಡರು ಕುವೆಂಪು ಜೊತೆ ವ್ಯಕ್ತ ಪಡಿಸಿದ ಮಾತುಗಳಲ್ಲಿಯೂ ಕಾಣಬಹುದು.

ಮಲೆನಾಡ ಪ್ರಾಂತ್ಯದಲ್ಲಿ ಮತಾಂತರ ಪ್ರಕ್ರಿಯೆಯನ್ನು ವಿಫಲಗೊಳಿಸಿದ್ದು ದೇವಮ್ಮನಂತ ಸಂಪ್ರದಾಯ ಶೀಲ ಹೆಣ್ಣುಗಳಿಂದ, ದೇವಯ್ಯ ಕಾವೇರಿಯ ಜೊತೆ ಸಂಬಂಧವನ್ನು ಹೊಂದಿರುವುದನ್ನು ತಿಳಿದಿದ್ದರೂ ; ನುಂಗಿಕೊಂಡಿದ್ದಳು, ಪಾದ್ರಿ ಮಗಳ ಜೊತೆ ಸಂಬಂಧವಿದೆ ಎಂಬ ಸುದ್ದಿ ಬಂದಾಗಲೂ ಸಂಕಟಪಟ್ಟುಕೊಂಡಿದ್ದಳು ; ಪ್ರತಿಭಟಿಸಿರಲಿಲ್ಲ. ಆದರೆ ದೇವಯ್ಯ ಮತಾಂತರವಾಗುವ ಸುದ್ದಿ ಮಾತ್ರ ತನ್ನ ಸಾವು ಬದುಕಿನ ಕಟ್ಟಕಡೆಯ ಗಂಡಾಂತರವಾಗಿತ್ತು. ಗಂಡನನ್ನು ಮತಾಂತರಕ್ಕೆ ಬಿಡುವ ಮೊದಲು ತಾನು ತನ್ನ ಮಗುವಿನೊಡನೆ ಸಾವನ್ನು ಸ್ವೀಕರಿಸುವುದು ಶ್ರೇಯಸ್ಕರವಾದುದೆಂದು ಭಾವಿಸಿದಳು. ತನಗೆ ಒದಗಲಿದ್ದ ಮಹಾಘೋರ ಹಾನಿಯನ್ನು ತಡೆಯಲು ತವರಿಗೆ ಉಟ್ಟ ಬಟ್ಟೆಯಲ್ಲೇ ಬಿಟ್ಟಮಂಡೆಯಾಗಿ ಹೊರಟಳು.

ನೈಟಿಂಗೇಲ್‌ನ ವರದಿಯಲ್ಲಿ ಮಳುವಾಡಿ ಗಿರಿಯಪ್ಪ ಗೌಡರು ಏಕೆ ಮತಾಂತರವಾಗಲಿಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳುತ್ತಾ "ಗಿರಿಯಪ್ಪನ ತಂದೆಯನ್ನು ಬ್ರಾಹ್ಮಣರು ಮಗನ ವಿರುದ್ಧ ಪ್ರೇರೇಪಿಸಿದರೆಂದೂ, ಆತ ಬಂದೂಕಿನಿಂದ ಮಗನನ್ನು ಕೊಲ್ಲುವುದಾಗಿಯೂ ಇಲ್ಲವೆ ತಾನೇ ಆತ್ಮ ಹತ್ಯೆ ಮಾಡಿಕೊಳ್ಳುವುದಾಗಿಯೂ ಬೆದರಿಕೆ ಹಾಕಿದ್ದನು. ಅಲ್ಲದೆ ಅಜ್ಞಾನಿಯಾದ ಹೆಂಡತಿಯನ್ನು ಗಿರಿಯಪ್ಪ ಎದುರಿಸಬೇಕಾಯಿತು".[೩೪]

ಶೂದ್ರ ಸಮುದಾಯದ ಮಲೆನಾಡಿನ ಕೌಟುಂಬಿಕ ವ್ಯವಸ್ಥೆ ಅತ್ಯಂತ ಬಿಗಿಯಾದುದಾಗಿತ್ತು. ಮಲೆನಾಡ ಊರುಗಳಲ್ಲಿ ಆಗ ಒಂದೊಂದೆ ಮನೆಗಳು, ಇಪ್ಪತ್ತು ಮೂವತ್ತು ಜನರಿರುವ ಅವಿಭಕ್ತ ಕುಟುಂಬ. ಇಂತಹ ವ್ಯವಸ್ಥೆಯೊಳಗೆ ದೇವಯ್ಯನಂತವರಿಗೆ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಸುಲಭ ಸಾಧ್ಯವಲ್ಲ. ಅದಕ್ಕೆ ಹಿರಿಯರ, ಬಂಧು ಬಳಗದವರ ಒಟ್ಟಾರೆ ತನ್ನ ಸಮಾಜದ ಒಪ್ಪಿಗೆಯ ಮುದ್ರೆ ಬೀಳುತ್ತಿರಲಿಲ್ಲ. ಅನ್ಯಧರ್ಮದ ಬಗ್ಗೆ ಈ ವ್ಯವಸ್ಥೆಯ ಪ್ರತಿಕ್ರಿಯೆಗಳನ್ನು ಕಾದಂಬರಿಯಲ್ಲಿ ಬಿಡಿ ಬಿಡಿಯಾಗಿ ಇರುವುದನ್ನು ಗಮನಿಸಬಹುದು.

ಸುಬ್ಬಣ್ಣ ಹೆಗಡೆ ಅಂತಕ್ಕನ ಮನೆಯಲ್ಲಿ ಮಕುಂದಯ್ಯ-ಚಿನ್ನಮ್ಮರ ಪ್ರೀತಿ ಕುರಿತು ಕಾವೇರಿ ಎದುರಿನಲ್ಲಿ ಹೇಳುವ ಮಾತು.

"ಇವರಿವರೆ ಗೊತ್ತು ಮಾಡಿಕೊಳ್ಳಾಕೆ? ನಾವೇನು ಕಿಲಸ್ತರೆ? ಮದುವೆ ಮುಂಚೇನೆ ಮಾತುಕತೆ ಎಲ್ಲ ಮಾಡಿಕೊಂಡು ಬರಾಕೆ".

ಈ ಮಾತನ್ನು ಕೇಳಿ ಕಿಲಸ್ತರ ಸ್ವಾತಂತ್ರ್ಯದ ಬಗ್ಗೆ ಸಹಾನುಭೂತಿ ಇದ್ದ ಕಾವೇರಿ ಕಂಬದ ಮರೆಯಲ್ಲಿ ಮುಖ ಅಡಗಿಸಿಕೊಂಡು ನಿಂತಳು.

"ಅಂತಕ್ಕನ ಮನೆಯಲ್ಲಿ ಪಾದ್ರಿಯೊಡನೆ ಹೊರಗಡೆ ಜಗಲಿಯಲ್ಲಿ ಊಟಕ್ಕೆ ಕುಳಿತುಕೊಳ್ಳುತ್ತಿದ್ದ ದೇವಯ್ಯ, ದೊಡ್ಡಪ್ಪನಿರುವಾಗ ಹೆದರಿ ಮನೆಯ ಒಳಗೆ ತನ್ನ ಜಾತಿಯವರು ಕೂರುತ್ತಿದ್ದ ಜಾಗದಲ್ಲಿ

ಊಟಕ್ಕೆ ಕುಳಿತ".

"ದೇವಯ್ಯನ ಮಗನಿಗೆ ಜೋಯಿಸರು ಜಾತಕ ಬರೆದು, ಹೆಸರು ಚಕಾರದಿಂದ ಪ್ರಾರಂಭವಾಗತಕ್ಕದ್ದು ಎಂದು ಚಿನ್ನಪ್ಪ ಎಂಬ ಹೆಸರು ಸೂಚಿಸಿದ್ದರೂ ಸಿಂಧುವಳ್ಳಿ ಚಿನ್ನಪ್ಪನನ್ನು ನೆನೆಪಿಗೆ ತರುವ ಅದು ಅಮಂಗಳಕರವಾದುದೆಂದು ದೇವಮ್ಮ – ಅವಳ ಅತ್ತೆ ದೇವಯ್ಯನ ಮಾತನ್ನು ತಿರಸ್ಕರಿಸಿ ಚೆಲುವಯ್ಯ ಎಂದು ಕರೆಯತೊಡಗಿದ್ದರು".

ಈ ಮೂಢ ಜಾತೀಲಿ ಇರೋಕ್ಕಿಂತ ಅವರ ಜಾತಿಗೆ ಸೇರೋದೆ ವಾಸಿ ಅಂತ ಕಾಣ್ತದೆ...... ಎಂದ ದೇವಯ್ಯನಿಗೆ – ದೇವಮ್ಮನ ಪ್ರತಿಕ್ರಿಯೆ–

ನಮ್ಮನ್ನು ಬಾವಿಗೋ ಕೆರೆಗೋ ತಳ್ಳಿ ಆಮ್ಯಾಲೆ ಏನು ಬೇಕಾದ್ರೂ ಮಾಡಿ.........

ಬೆಟ್ಟಳ್ಳಿ ಮನೆಗೆ ಸೇರಿದ ಮತ್ತು ಸುತ್ತ ಮುತ್ತಲಿನ ಆಳು ಕಾಳುಗಳು ಕೂಡ ಮತಾಂತರಕ್ಕೆ ತಮ್ಮ ವಿರೋಧವನ್ನು ವ್ಯಕ್ತ ಪಡಿಸುವುದನ್ನು ಕಾಣಬಹುದು. ಬೀಸೆಕಲ್ಲಿನ ಸವಾರಿ ಸಂದರ್ಭದಲ್ಲಿ ಆಳು ಮಕ್ಕಳು ಮಾತನಾಡಿಕೊಳ್ಳುತ್ತಾ – ಪಾದ್ರಿಗೆ ಹಸುರು ಗೊತ್ತಿದೆ. ಹಸುರು ಗೊತ್ತಿರೋಕೆ, ಸಣ್ಣಗೌಡರ ಮ್ಯಾಲೆ ಮಂಕುಬೂದಿ ಎರಚಿ ಕೆಲಸ್ತರ ಜಾತಿಗೆ ಸೇರಿಕೋಕೆ ಮಾಡ್ಯಾನಂತೆ.......

ಆ ಯೂರೋಫಿನ್ ಬಿಳಿ ದೊರೆ ಪಾದ್ರಿ........ ಹತ್ರಾನು ಬೋದ್ನೆ ಮಾಡಸಿ ಕುಡಿಸಿ, ಕುಣಿಸಿ, ಅವರ ಬುದ್ಧಿಸಿ ಕೆಡಸಿಬಿಟ್ಟಿದಾನಂತೆ.........

ಮೊಮ್ಮಗನ್ನ ಎಲ್ಲ ಬಿಟ್ಟಾರು ನಮ್ಮ ದೊಡ್ಡಗೌಡ್ರು? ಆ ಪಾದ್ರಿನ ಸೀಳಿ ಸೀಳಿ ಹಾಕ್ಬಿಟ್ಟಾರು.[೩೫]

ದೇವಯ್ಯನ ಭಾವಮೈದುನ ಮುಕುಂದಯ್ಯ – ಆ ಜಾತಿಗೆ ಸೇರಿಸೋ ಹುಚ್ಚು ಬಿಡಿಸ್ದೇ ಇದ್ರೆ ಆಗೋದಿಲ್ಲ ಆ ಪಾದ್ರಿಗೆ – ಎಂಬ ಗಟ್ಟಿ ನಿಲುವನ್ನು ತಾಳಿ ದೇವಯ್ಯನನ್ನು ಮತಾಂತರ ಬಲೆಯಿಂದ ಬಿಡಿಸಲು ಯೋಜನೆಯನ್ನು ಹಾಕುತ್ತಾನೆ. ಈ ರೀತಿ ದೇವಯ್ಯನ ಸುತ್ತಲಿನ ಪರಿಸರದೊಳಗೆ ಮತಾಂತರ ಬಗ್ಗೆ ವ್ಯಾಪಕವಾದ ಖಂಡನೆ, ತಿರಸ್ಕಾರಗಳು ವೈಯಕ್ತಿಕ ಮಟ್ಟದಲ್ಲಿ ಕಾಣಿಸಿಕೊಳ್ಳುತ್ತದೆ. ಇದು ವೈಯಕ್ತಿಕ ಮಟ್ಟದ್ದಾಗಿತ್ತೇ ಹೊರತು ಸಂಘಟಿತ ಮಟ್ಟದ್ದಾಗಿರಲಿಲ್ಲ.

ಮೇಗರವಳ್ಳಿಯ ಮಿಷನ್ ಸ್ಕೂಲ್ ಕಟ್ಟಡದ ಪ್ರಾರಂಭೋತ್ಸವದ ಸಂದರ್ಭದಲ್ಲಿ ದೇವಯ್ಯನ ಮತಾಂತರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮೊದ ಮೊದಲು ಬಹಿರಂಗವಾಗಿ ಅದ್ದೂರಿಯಾಗಿಯೇ ಪ್ರಚಾರದ ಸಲುವಾಗಿ ಮಾಡಬೇಕೆಂಬುದು ಪಾದ್ರಿಯ ಯೋಜನೆಯಾಗಿತ್ತು. ಆದರೆ ದೇವಯ್ಯನ ನಡವಳಿಯಲ್ಲಿ ಅವನಿಗುಂಟಾದ ಪಾದ್ರಿಯ ಮತ್ತು ಬಂಧುಗಳ ವಿರೋಧವನ್ನು ಗಮನಿಸಿದ್ದ ಪಾದ್ರಿಗೆ ಗಲಾಟೆಗೆ ಅವಕಾಶವಾಗದಂತೆ ಹಾಗೂ ದೇವಯ್ಯನ ಹೆಸರನ್ನು ಬದಲಾಯಿಸದೆ, ವೇಷಭೂಷಣಗಳಲ್ಲಿಯೂ ವ್ಯತ್ಯಾಸ ಗೊತ್ತಾಗದಂತೆ ಸರಳವಾಗಿ ಮತಾಂತರ ಕಾರ್ಯ ನಡೆಸಬೇಕೆಂದು ಯೋಚಿಸಿ ರೆವರೆಂಡ್ ಲೇಕ್‌ಹೀಲ್ ಅವರನ್ನು ಕೇಳಿಕೊಂಡಿದ್ದ. ಜಾತಿಯಿಂದ ಶೂದ್ರನು ದೇವಯ್ಯನ ಆಳು ಆದ ಬಚ್ಚ ಆರ್ಥಿಕವಾಗಿ ಸಾಮಾಜಿಕವಾಗಿ ಬಲಿಷ್ಠನಲ್ಲ. ಹಾಗಾಗಿ ಬಚ್ಚನನ್ನು ಹೆಸರು ಬದಲಿಸಿ ಸಂಕೇತವಾಗಿ ತೀರ್ಥ ನೀಡಿ ಕ್ರೈಸ್ತ ಧರ್ಮಕ್ಕೆ ಮತಾಂತರದ ಪ್ರಕ್ರಿಯೆ ನಡೆಸುತ್ತಾರೆ. ಆದರೆ ಅದೇ

ದೇವಯ್ಯನಿಗೆ ಅಷ್ಟು ಸುಲಭವು, ಸರಳವೂ ಆಗಿ ಮತಾಂತರ ಮಾಡಲು ಸಾಧ್ಯವಾಗುವುದಿಲ್ಲ. ಸಾಮಾಜಿಕವಾಗಿ ಬಲಿಷ್ಠನೂ ಅವಿಭಕ್ತ ಕುಟುಂಬದ ಸದಸ್ಯನೂ ಆದ ದೇವಯ್ಯ ಸರ್ವತಂತ್ರ ಸ್ವತಂತ್ರ್ಯನಲ್ಲ. ಅವನಿಗೆ ಮನೆಯ ಹಿರಿಯರಾದಿಯಾಗಿ ಬಂಧು ಬಳಗದವರ ವಿರೋಧವಿದೆ. ಆದ ಕಾರಣ ಮತಾಂತರ ವಿಧಿ ವಿಧಾನ ಇವನ ಸಂದರ್ಭಕ್ಕೆ ಗಟ್ಟಿಯಾಗಿ ಆಚರಣೆಗೆ ಬರುವುದಿಲ್ಲ.

ಜೀವರತ್ನಯ್ಯ ಶಿಫಾರಸ್ಸಿನ ಮೇಲೆ ಮಿಷನ್ ಸ್ಕೂಲಿಗೆ ಹಳೆಮನೆ ಅನಂತಯ್ಯನವರೇ ಹೆಡ್‌ಮಾಸ್ಟರ್ ಆಗಿ ನೇಮಕಗೊಂಡರು. ಕಿಲಸ್ತರ ಇಸ್ಕೋಲ್ಮನೆಗೆ ಮಕ್ಕಳನ್ನು ಜಾತಿಗೆ ಸೇರಿಸುತ್ತಾರೆ ಎಂಬ ಗುಮಾನಿಯನ್ನು ಹೋಗಲಾಡಿಸಲು, ಕ್ರೈಸ್ತರಾಗಿದ್ದ ಅರ್ಹ ಅಧ್ಯಾಪಕರು ಈ ಮಲೆನಾಡಿನ ಕೊಂಪೆಗೆ ಬರಲು ಇಷ್ಟಪಡುವುದಿಲ್ಲವೆಂಬ ಕಾರಣಕ್ಕೆ, ಮಿಷನರಿಗಳು ನೀಡುವ ಸಂಬಳ ಐಗಳ ಶಾಲೆ ಮೇಸ್ಟ್ರಿಗೆ ಬಹಳ ದೊಡ್ಡ ಮೊತ್ತವಾಗಿ ಕಾಣುವ ಸಲುವಾಗಿ ಅನಂತಯ್ಯನವರ ನೇಮಕವಾಗಿತ್ತು. ಹಾಗೆ ಅಂತಕ್ಕನ 'ಓಟ್ಲುಮನೆ' ವಿದ್ಯಾರ್ಥಿಯ ನಿಲಯವಾಗಿ ಪರಿವರ್ತನೆಯಾಯಿತು.

ಮಿಷನ್ ಸ್ಕೂಲಿನ ಪ್ರಾರಂಭೋತ್ಸವದ ದಿವಸ ದೇವಯ್ಯನ ಮತಾಂತರ ವಿಧಿ ವಿಧಾನ ಕ್ರಿಯೆಯ ಸಂದರ್ಭದಲ್ಲಿ ಅದನ್ನು ತಡೆಯಲು ಕೋವಿ ಹಿಡಿದು ಬಂದಿದ್ದ ಮುಕುಂದಯ್ಯನಿಗೆ ಮಿಷನ್ ಶಾಲೆಗೆ ಮೇಸ್ಟ್ರಾಗಿ ನೇಮಕವಾಗಿದ್ದ ಅನಂತಯ್ಯಗಳು ಮತ್ತು ಶಾಲೆಯನ್ನು ಕಟ್ಟಲು ಸಹಕರಿಸಿದ ಕಣ್ಣ ಪಂಡಿತರು ಪರೋಕ್ಷವಾಗಿ ಬೆಂಬಲಕ್ಕೆ ನಿಂತಿದ್ದರು. ಹೊರಗಿನಿಂದ ಬಾಗಿಲಿಗೆ ಚಿಲಕವನ್ನು ಹಾಕಿಸಿ, ಕಿಟಕಿಯ ಮೂಲಕ ಬಂದೂಕನ್ನು ತೋರಿಸಿ ದಸ್ಯು ಮಾರ್ಗದಲ್ಲಿ ಮುಕುಂದಯ್ಯ ಬೆದರಿಸುತ್ತಾನೆ. ಜಾತಿ ಕೆಡಿಸುವ ಕೆಲಸ ಮಾಡುತ್ತಿದ್ದೀರಿ. ತನ್ನ ಅಕ್ಕನನ್ನು ಆತ್ಮಹತ್ಯೆಗೆ ದೂಡುತ್ತಿದ್ದೀರಿ. ನನ್ನ ಭಾವನನ್ನು ಕಿಲಸ್ತರ ಜಾತಿಗೆ ಸೇರಿಸಿದ್ದೇ ಆದರೆ ನಿಮ್ಮನ್ನು ಸುಟ್ಟು ಬಿಡುವೆನೆಂಬ ಹುಸಿ ಬೆದರಿಕೆ.

ವಿದೇಶಿ ಪಾದ್ರಿಗೆ ವಾಸ್ತವ ಪರಿಸ್ಥಿತಿ ಅರ್ಥವಾಗುತ್ತದೆ. ವಿದೇಶಿ ಪಾದ್ರಿಗಿಂತಲೂ ನೇಟೀವ್ ಪಾದ್ರಿ ಹೆಚ್ಚು ಅಪಾಯಕಾರಿ. ಆತನಿಗೆ ಬಡ್ತಿ ಮುಖ್ಯವಾಗಿರುತ್ತದೆ. ಆದ್ದರಿಂದ ಪ್ರಚೋದನೆಯ ಮಾತುಗಳನ್ನಾಡುತ್ತಾನೆ.

"ನಿಮ್ಮನ್ನು ಗುಂಡಿಕ್ಕಿ ಕೊಲ್ಲಲು ಪ್ರಯತ್ನಿಸಿರುವ ಇವನನ್ನು ಬಂಧಿಸಿ ಕಾನೂನು ರೀತ್ಯಾ ಶಿಕ್ಷೆಗೆ ಒಳಪಡಿಸುವುದೇ ಉತ್ತಮ ಹಾಗೆ ಮಾಡಿದರೆ ಈ ಜನಕ್ಕೆ ಸ್ವಲ್ಪ ಹೆದರಿಕೆ ಹುಟ್ಟಿ ನಮ್ಮ ಪವಿತ್ರ ಕ್ರೈಸ್ತನ ಸುವಾರ್ತೆಯನ್ನು ನಾವು ನಿರಾತಂಕವಾಗಿ ಬೋಧಿಸಲು ಅನುಕೂಲ ಸನ್ನಿವೇಶ ಕಲ್ಪಿತವಾಗುತ್ತದೆ. ಈ ಕಾಡು ಜನರನ್ನು ಪಳಗಿಸಿದಂತಾಗುತ್ತದೆ......!"

ಈ ದೇಶಕ್ಕೆ ವ್ಯಾಪಾರಕ್ಕಾಗಿ ಬಂದು, ತದನಂತರ ರಾಜಕೀಯ ಹಿಡಿತ ಸಾಧಿಸಿದ ಇಂಗ್ಲೀಷರಿಗೆ ತಮ್ಮ ಆಡಳಿತದ ಬೇರುಗಳನ್ನೂರಲು ಮತಾಂತರಕ್ಕೆ ಪ್ರೋತ್ಸಾಹಿಸಿದರು. ಆದರೆ ಒತ್ತಾಯವಾಗಿ ಹೇರುವ ಮೂರ್ಖತನ ಸಾಮಾನ್ಯವಾಗಿ ಮಾಡಲಿಲ್ಲ. ಅವರ ತಂತ್ರ ಹೇರುವುದಲ್ಲ ; ಸೆಳೆಯುವುದು. ಈ ಕೆಳಗಿನ ಲೇಕ್‌ಹಿಲ್‌ರ ಮಾತುಗಳನ್ನು ಗಮನಿಸಬೇಕಾದ ಅವರ ದೂರದೃಷ್ಟಿ ತಂತ್ರಗಳು ವೇದ್ಯವಾಗುತ್ತದೆ. "ಉಪದೇಶಿಗಳೇ ಕ್ರಿಸ್ತ ಸ್ವಾಮಿಯ ಸಂದೇಶವನ್ನು ಕ್ರೈಸ್ತೋಚಿತವಲ್ಲದ ವಿಧಾನಗಳಿಂದ ಪ್ರಚಾರ ಮಾಡಲು ಹೊರಟಿದ್ದಾದರೆ, ಜನರನ್ನು ಮೈ ಮೇಲೆ ಹಾಕಿಕೊಂಡು ತದ್ವಿರುದ್ಧ ಪರಿಣಾಮಕ್ಕೆ ಭಾಜನರಾಗುತ್ತೀರಿ.

ನಾವು ನಮ್ಮ ಸ್ವಾರ್ಥ ಉದ್ದೇಶಗಳನ್ನೆಲ್ಲ ತ್ಯಜಿಸಿ, ಸತ್ತ್ವ ಮಾರ್ಗದಿಂದಲೇ ಮುಂದುವರಿದು, ಜನರ ನಂಬಿಕೆಗೆ ಪಾತ್ರರಾಗಬೇಕು. ಅವರ ವಿಶ್ವಾಸ ಲಭಿಸಿದ ತರುವಾಯವೇ ಅವರು ನಮ್ಮ ಉಪದೇಶಕ್ಕೆ ಕಿವಿಗೊಡುತ್ತಾರೆ. ಔಷಧೋಪಚಾರ, ವಿದ್ಯಾಭ್ಯಾಸ ಮೊದಲಾದ ಸಹಾಯಗಳ ಮೂಲಕ ಅವರ ಹೃದಯವನ್ನು ಗೆಲ್ಲಬೇಕು. ಅವರ ಮತೀಯ ಮೌಢ್ಯಗಳಿಂದ ಅವರಿಗಾಗುತ್ತಿರುವ ಅಪಾಯಗಳನ್ನು ಉಪಾಯವಾಗಿ ಅವರಿಗೆ ಮನದಟ್ಟಾಗುವಂತೆ ಮಾಡಬೇಕು.........”[೩೬]

ಈ ಮೇಲಿನ ಮಾತುಗಳಿಂದ ಒಟ್ಟು ಕಾದಂಬರಿ ಏನನ್ನು ಹೇಳುತ್ತಿದೆ ಎಂದರೆ ಧಾರ್ಮಿಕ ಸ್ವಾತಂತ್ರ್ಯ ಎಲ್ಲರ ಮೂಲಭೂತ ಹಕ್ಕು, ಧರ್ಮದ ಉದ್ದೇಶವು ಜೀವನದ ಅರ್ಥ, ಮೌಲ್ಯ ಮತ್ತು ಸತ್ಯಗಳನ್ನು ಅರಸುವುದರಲ್ಲಿರುವುದರಿಂದ ತಮ್ಮ ಬದುಕಿಗೆ ಆಧಾರವಾಗುವಂತಹ ತಮ್ಮ ಮಾನಸಿಕ ನಿಲುವಿಗೆ ಹೊಂದಿಕೊಳ್ಳುವಂತಹ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಎಲ್ಲರಿಗೂ ಇರಬೇಕಾದುದು ಸಹಜ. ಈ ಧಾರ್ಮಿಕ ಸ್ವಾತಂತ್ರ್ಯವನ್ನು ಭಾರತ ಸಂವಿಧಾನ ಎಲ್ಲರಿಗೆ ನೀಡಿದೆ. ಆದ್ದರಿಂದ ಮತಾಂತರ ಹೊಂದುವ ಹಕ್ಕು ಎಲ್ಲ ಬಗೆಯ ಸಾಧ್ಯತೆಗಳು ಯಾರಿಗೇ ಆಗಲಿ ಸಹಜವಾದ ಸ್ವಾತಂತ್ರ್ಯವಿದೆ. ಇದು ವ್ಯಕ್ತಿಗತವಾದ ಸಂಗತಿ. ಆದರೆ ಭಾರತದಂತಹ ವಿಶಾಲವಾದ ಮತ್ತು ಜಾತಿ ಧರ್ಮಗಳ ಸಂಕೀರ್ಣವಾದ ಸಮಾಜದಲ್ಲಿ ಮತಾಂತರ ಹೊಂದುವುದು ಸುಲಭ ಸಾಧ್ಯವಲ್ಲ. ಹಾಗಿದ್ದು ಪರಕೀಯರ ಆಗಮನದ ನಂತರ ವಿವಿಧ ಕಾರಣಗಳಿಗಾಗಿ ಮತಾಂತರ ಪ್ರಕ್ರಿಯೆ ನಡೆದು ಬಂದಿದೆ. ಆದರೆ “ಈ ಮತಾಂತರ ವ್ಯಕ್ತಿಗತವಾದ ಅಪೇಕ್ಷೆ ಹಾಗೂ ಬಯಕೆಯಿಂದ ನಡೆದು ಬಂದಿದೆ ಎಂದು ಹೇಳುವುದು ಕಷ್ಟಸಾಧ್ಯ ಅಥವಾ ಬಹಳ ವಿರಳವಾಗಿ ಅಂತಹದು ನಡೆದಿದ್ದಿರಬಹುದು. ಆದರೆ ಅವಿಭಕ್ತ ಕುಟುಂಬದ ಜಾತಿ ಸಂಬಂಧಗಳ ಹಿನ್ನಲೆಯ ಭಾರತೀಯ ಸಮಾಜದಲ್ಲಿ ಅದು ಅಷ್ಟು ಸುಲಭವಾಗಿ ಸಾಧ್ಯವಿಲ್ಲ. ಬದಲಾಗಿ ಆಸೆ, ಅಮಿಷಗಳಿಗೆ ಬಲಿಯಾಗಿ ಇಲ್ಲವೆ ಅಧಿಕಾರದ ಬಲದಿಂದ, ಲೈಂಗಿಕ ಆಕರ್ಷಣೆಯಿಂದ ಮತಾಂತರವಾಗಿರುವುದು ಸಾಧ್ಯವಿದೆ”.[೩೭] ಇಂತಹ ಪ್ರಕ್ರಿಯೆಯನ್ನು ಕಾದಂಬರಿ ವಿರೋಧಿಸುತ್ತದೆ, ಮತ್ತು ವಿವೇಕಾನಂದರ ತತ್ತ್ವವನ್ನು ಎತ್ತಿ ಹಿಡಿಯುತ್ತದೆ. ವಿವೇಕಾನಂದರು ಸೋದರಿ ಕ್ರಿಸ್ಟೈನ್ ಜೊತೆ ಹೇಳುವ ಸಂದರ್ಭದಲ್ಲಿ ಕಾದಂಬರಿಯಲ್ಲಿ ಕಾಣಬಹುದು.

“ನೋಡು, ಸೋದರೀ ನಾನು ಇಂಡಿಯಾದಿಂದ ಇಲ್ಲಿಗೆ ಬಂದು ನಿಮಗೆ ವೇದಾಂತ ಬೋಧನೆ ಮಾಡಿ, ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ನೀಡಿ ನಿಮ್ಮನ್ನು ಮತಾಂತರಗೊಳಿಸುವ........ ಕಿರಾತ ನೀತಿಗೆ ಕೈ ಹಾಕಿದೆ. ಕ್ರೈಸ್ತರಿಗೆ, ಯೆಹೂದ್ಯರಿಗೆ, ಮೆಥಡಿಸ್ಟರಿಗೆ........ ಕ್ಯಾಥೊಲಿಕ್ಕರಿಗೆ ಅವರವರ ಭಾವದಲ್ಲಿಯೆ ಅವರವರು ಮುಂದುವರಿಯುವಂತೆ ಹೇಳಿ ದೀಕ್ಷೆ ಕೊಡುವ ಕೆಲಸದಲ್ಲಿದ್ದೇವೆ. ಅದೇ ಸಮಯದಲ್ಲಿ ನನ್ನ ಮಾತೃ ಭೂಮಿಯ ಒಂದು ಪ್ರದೇಶದ ಮೂಲೆಯಲ್ಲಿ ಕ್ರೈಸ್ತ ಮತ ಪ್ರಚಾರಕರು ಬ್ರಿಟೀಷ್ ಸರ್ಕಾರದ ರಾಜಕೀಯ ಬಲ ಮತ್ತು ಪ್ರತಿಷ್ಠೆ ಮತ್ತು ಸೌಕರ್ಯ ಸೌಲಭ್ಯಗಳನ್ನು ಪಡೆದು, ವಿದ್ಯಾಭ್ಯಾಸದ ಮತ್ತು ವೈದ್ಯಕೀಯದ ನೆರವೀಯುವ ಬಲೆಯೊಡ್ಡಿ, ಅರಿಯದ ಅಜ್ಞಾನಿಗಳನ್ನು ತಮ್ಮ ಜಾತಿಗೆ ಸೇರಿಸಿಕೊಂಡು ತಮ್ಮ ಸಂಖ್ಯೆ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವ ವ್ಯಾಪಾರಿ ಉದ್ಯಮದಲ್ಲಿದ್ದಾರೆ. ಆದರೆ ಆ ಅಜ್ಞಾನೀ ಜನರಲ್ಲಿಯೂ ಒಂದು ಅಂಧವಾದ ಸ್ವಮತನಿಷ್ಠೆ ಇರುವುದರಿಂದ ಅವರೂ ಮಿಷನರಿಗಳ ಮತಾಂತರ ಕಾರ್ಯವನ್ನು ತಮ್ಮದೇ ಆದ ದಸ್ಯು ವಿಧಾನದಿಂದ ವಿಫಲಗೊಳಿಸುತ್ತಿದ್ದಾರೆ”.[೩೮]

ಆರ್ಥಿಕವಾಗಿ ಶ್ರೀಮಂತರಾದ ಒಕ್ಕಲಿಗ ಸಮುದಾಯದ ಮನೆಗಳ ಯುವಕರನ್ನು ಸೆಳೆಯುವುದರ ಮೂಲಕ ಅವರ ಜೀತದಾಳುಗಳನ್ನು ತಮ್ಮೆಡೆಗೆ ಸೆಳೆಯಬಹುದೆಂಬ ಸಂಚು ಕೂಡ ಫಲಕಾರಿಯಾಗುವುದಿಲ್ಲ. ದೇವಯ್ಯ ತಾನು ಮತಾಂತರವಾಗುವ ಕಾಲವನ್ನು ಮುಂದೂಡುವ ಸಲುವಾಗಿ, ಪಾದ್ರಿಗೆ ನಂಬಿಕೆಯನ್ನುಂಟು ಮಾಡಲು ತನ್ನ ಆಳು ಬಚ್ಚನನ್ನು ಮತಾಂತರಕ್ಕೆ ಒಳಪಡಿಸಿದ್ದ, ಈ ಬಚ್ಚನಿಗೆ ಮತಾಂತರದ ಯಾವ ಬದಲಾವಣೆಯೂ ಕಾಣಿಸಿಕೊಳ್ಳುವುದಿಲ್ಲ.

"ತೀರ್ಥ ತಗಾ ಅಂತಾ......... ಎಂಥದೋ ಉಂದಿಷ್ಟು ನೀರು ಹುಯ್‌ದ್ರು ನನ್ನ ಕೈಗೆ ಆ ಪಾದ್ರಿ, ಪುಸ್ತಗ ತಗೊಂಡು ಏನೇನೋ, ಓದಿದ್ರು........ ನೀನಿನ್ನು ಕಿಲಸ್ತ್ರ ಆದೆ ಅಂದರು ನಿನ್ನ ಹೆಸರು ಜಕ್ರಪ್ಪೈಯ್ಯ ಅಂದ್ರು ನೀನಿನ್ನು ಹೊಲೇರಂವ ಅಲ್ಲ ; ಬಿರಾಂಬ್ರ ಮನಿಗಾಗ್ಲಿ, ಗೌಡ, ಮನಿಗಾಗ್ಲಿ ಹೋದ್ರೆ ಅಂಗಳದಾಗ ನಿತ್ಗೂ ಬ್ಯಾಡ ಜಗ್ಲೀಗೆ ಹೋಗಿ ಕೂತ್ಗಾ ಅಂದ್ರು........."[೩೯]

– ಇಂತಹ ಮತಾಂತರಿ ಬಚ್ಚ ತನ್ನ ಪರಿಸ್ಥಿತಿಯನ್ನು ಮೀರಲು ಸಾಧ್ಯವೆ? ಬಚ್ಚನ ಉದ್ದೇಶವೇ ಬೇರೆ. ತಿಮ್ಮಿಯನ್ನು ಅಪಹರಿಸಿರುವ ನಾಯಿಗುತ್ತಿಗೆ ಪಾದ್ರಿ ಮೂಲಕ ಜೈಲಿಗೆ ಕಳುಹಿಸಬೇಕೆಂಬ ಹಠ, ದೇವಯ್ಯ – ಪಾದ್ರಿ ಹೇಳಿದಾಗ ಕೇಳುವಂತೆ ಮಾಡಿತ್ತು. ಬಚ್ಚನ ಆತ್ಮ ವಿಶ್ವಾಸದ ಮೂಲ ದೇವಯ್ಯನೇ ಹೊರತು ಕ್ರೈಸ್ತ ಧರ್ಮವಲ್ಲ ; ಪಾದ್ರಿಯಲ್ಲ, ಮಲೆನಾಡ ಪರಿಸರದಲ್ಲಿ ಕ್ರೈಸ್ತ ಸಮುದಾಯದಿಂದ ದೊರಕಬಹುದಾದ ಅನುಕೂಲತೆಗಳನ್ನು ಮಧ್ಯಮ ಜಾತಿಯ ಸಮಾಜಗಳು ನೇರವಾಗಿ ಪಡೆದುಕೊಳ್ಳಲು ಸಾಧ್ಯ ; ಪಡೆದುಕೊಂಡವು. ಆದರೆ ತಳ ಸಮುದಾಯಗಳು ಕ್ರೈಸ್ತ ಧರ್ಮಗಳಿಂದ ಸಿಗಬಹುದಾದ ಲಾಭಗಳನ್ನು, ನಾಗರಿಕ ಪ್ರಯೋಜನಗಳನ್ನು ನೇರವಾಗಿ ಪಡೆದ ಸಮುದಾಯಗಳಲ್ಲ. ಕ್ರೈಸ್ತ ಮಿಷನರಿಗಳ ಮುಖ್ಯ ಉದ್ದೇಶ ಸ್ಥಳೀಯ ಬಲಾಢ್ಯರನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಪ್ರಯತ್ನ ನಡೆಸುವಾಗ ಆಮಿಷದ ರೂಪಗಳಾದ ಆಧುನಿಕ ವಸ್ತುಗಳನ್ನು (ಸೈಕಲ್, ಗಡಿಯಾರ, ಲಾಟೀನ್ ಇತ್ಯಾದಿ) ಕೇವಲ ಬೆರಗಿನಿಂದ ನೋಡುವ ಮನಸ್ಥಿತಿಯವರಾಗಿದ್ದರು. ಕ್ರೈಸ್ತಧರ್ಮದ ಆಮಿಷಗಳಾದ ಶಾಲೆ, ಆಸ್ಪತ್ರೆ, ಯಂತ್ರೋಪಕರಣಗಳು ತಳ ಸಮುದಾಯದವರನ್ನು ಮುಟ್ಟಲಿಲ್ಲ.

ಅಲ್ಲದೆ, ತಮಗಿಂತ ಜಾತಿ ಶ್ರೇಣಿಯಲ್ಲಿರುವ ಬ್ರಾಹ್ಮಣರು, ಒಕ್ಕಲಿಗರು, ಶೆಟ್ಟರು ಬ್ರಾಹ್ಮಣ ಜಾತಿಗಳ ಬಗ್ಗೆ ಪರಂಪರಾಗತವಾಗಿ ಗೌರವ ಭಾವನೆ ಮೂಡಿಸಿಕೊಂಡು ಬರಲಾಗಿತ್ತು. ಅವು ಶ್ರೇಷ್ಠವಾದವು ಎಂಬ ಮಾನಸಿಕ ಸ್ಥಿತಿ ಎಷ್ಟು ಬೇರೂರಿತ್ತು ಎಂದರೆ – ನಾಯಿಗುತ್ತಿ ಪೋಲೀಸರಿಂದ ತಪ್ಪಿಸಿಕೊಂಡು ಬರುವಾಗ ತನ್ನ ಸ್ಥಿತಿಯ ಬಗ್ಗೆ ಮರುಗುತ್ತ ಆತ ಹೇಳಿಕೊಳ್ಳುವ ಮಾತುಗಳು ಅನಾವರಣಗೊಳಿಸುತ್ತದೆ.

ನಾನು ಹೊಲೇರವನಲ್ಲದೆ ಬ್ಯಾರೆ ಜಾತಿಗೆ ಸೇರಿದವನಾಗಿದ್ದರೆ ಹೀಂಗಾಗ್ತಿತ್ತೇ? ಎಂದುಕೊಂಡ.......... ಗೌಡರ ಜಾತಿಗೆ? ಶೆಟ್ಟರ ಜಾತಿಗೆ? ಬಿರಾಂಬರ ಜಾತಿಗೆ?.......... ಉಂಹ್ಞೂ ಈ ಜಲ್ಮದಾಗೆ ಅದೆಲ್ಲಿ ಸಾಧ್ಯ?

ಅವಕಾಶವಿದ್ದಿದ್ದರೆ ಆತನಿಗೆ ಸಂತೋಷವಾಗುತ್ತಿತ್ತು. ಆದರೆ ಅದು ಈ ಜಲ್ಮದಲ್ಲಿ ಸಾಧ್ಯವಿಲ್ಲ ಎಂಬ ಸಹಜವಾದ ಸತ್ಯವಾದ ಅಭಿಪ್ರಾಯಕ್ಕೆ ಬರುತ್ತಾನೆ.

ಆದರೆ ಅವಕಾಶವಿರುವ ಸಾಬರ ಜಾತಿಗೆ....? ಕೆಲಸ್ತರ ಜಾತಿಗೆ.... ಥೂಥೂಥೂ[೪೦]

ಅತ್ಯಂತ ಸುಲಭವಾಗಿ ಮತಾಂತರವಾದ ಅವಕಾಶಗಳಿದ್ದರೂ ಅದನ್ನು ಕೀಳು, ಅಸಹ್ಯವೆಂದು ನಿಕೃಷ್ಟಗೊಳಿಸಿ ತಿರಸ್ಕರಿಸುತ್ತಾನೆ. (ಈ ಅಸಹ್ಯ ಕೂಡ ಮೇಲು ವರ್ಗದಿಂದಲೇ ಬಂದುದು.) ಇದು ತಳ ಸಮುದಾಯದಲ್ಲಿ ವ್ಯಕ್ತವಾದ ವಿರೋಧದ ಬಗೆ. ಭಾರತೀಯ ಸಮಾಜ ಒಂದು ರೀತಿ 'ಪಿರಾಮಿಡ್' ಆಕಾರದಲ್ಲಿ ವ್ಯವಸ್ಥೆ ರೂಪಗೊಂಡಿರುವುದರಿಂದ ತಳ ಸಮಾಜಗಳು ತಮ್ಮ ಮೇಲಿನ ಜಾತಿ ಸಮಾಜಗಳನ್ನು ಶ್ರೇಷ್ಠವೆಂದೇ ಭಾವಿಸಿ, ಆ ಸಮಾಜದ ಅನುಕರಣೆಯಲ್ಲಿ, ಅನುಸರಣೆಯಲ್ಲಿ ಇದ್ದೂ ತಮ್ಮ ಅನನ್ಯತೆಯನ್ನು ಕಾಪಾಡಿಕೊಂಡ ಸಮಾಜಗಳಾಗಿವೆ. ತಮ್ಮ ಸ್ಥಿತಿಗೆ ಪೂರ್ವಜನ್ಮದ ಕಾರಣ ಎಂದು ಒಪ್ಪಿಕೊಂಡು ಬದುಕುವ ಮನಸ್ಥಿಯವರು. ಆದ್ದರಿಂದ ಅನ್ಯಧರ್ಮವನ್ನು ನೋಡಲಾರರು. ಹಾಗೆ ಕ್ರೈಸ್ತ ಮಿಷನರಿಗಳು ತಮ್ಮ ಧರ್ಮದ ಸರಳ ಸತ್ಯದ ಬೋಧನೆಯನ್ನಾಗಲಿ, ಹೊಸ ವಸ್ತುಗಳ ನೀಡಿಕೆಯನ್ನಾಗಲಿ ಮಾಡಲಿಲ್ಲ. ಈ ಎಲ್ಲಾ ಕಾರಣ ಮಲೆನಾಡಿನ ಕೆಳಹಂತದ ಸಮುದಾಯವು ಕ್ರೈಸ್ತ ಮಿಷನರಿಗಳಿಗೆ ಆಕರ್ಷಿತರಾಗಲಿಲ್ಲ. ಹಾಗೆ ಮತಾಂತರ ದಲಿತ ವಿಮೋಚನೆಯ ಒಂದು ಸಾಧ್ಯತೆಯಾಗಿ ಕಾದಂಬರಿ ಕೂಡ ಗಮನಿಸುತ್ತಿಲ್ಲ.

ಮತಾಂತರ ಹೊಂದಿದವರೆಲ್ಲಾ ಕ್ರೈಸ್ತ ಧರ್ಮ ಅವರ ಅಂತರಂಗವನ್ನು ಮುಟ್ಟಿತ್ತೆ ಅವರ ನಡೆನುಡಿ, ನಂಬಿಕೆಗಳಲ್ಲಿ ವ್ಯಕ್ತವಾಗುತ್ತಿತ್ತೇ? – ಈ ಬಗ್ಗೆ ಕಾನೂರು ಹೆಗ್ಗಡತಿಯ ಒಂದೆರಡು ಸಂದರ್ಭಗಳನ್ನು ಗಮನಿಸಬಹುದು.

"ಕಿಲಸ್ತರ ಜಾತಿ ಮತಾಂತರದಿಂದ ಅವನಲ್ಲಿದ್ದ ರಾಕ್ಷಸೀ ಭಾವ ಒಂದಿನಿತೂ ಪಳಗಿರಲಿಲ್ಲ. ಅದಕ್ಕೆ ಬದಲಾಗಿ ಹಿಂದು ಸಮಾಜದ ಕಟ್ಟುಪಾಡುಗಳಿಗೆ ಪಾರಾಗಿ, ಹಳ್ಳಿಯಲ್ಲಿ ಕ್ರೈಸ್ತ ಸಮಾಜದ ಅಭಾವದಿಂದ ಅವರ ಸಂಯಮ ನಿಯಮಗಳಿಗೂ ಸಿಕ್ಕದೆ, ಸ್ವಚ್ಛಂದ ಜೀವನದಿಂದ ಇಮ್ಮಡಿ ಕಿರಾತನಾಗಿದ್ದನು.......... ಮತಕ್ಕೆ ಸೇರಿದರೆ ಹಣ ಕೊಡುತ್ತೇನೆಂದು ಸುಳ್ಳಾಡಿ ಮೋಸ ಮಾಡಿದುದಕ್ಕಾಗಿ ಪಾದ್ರಿಯನ್ನೇ ಕೊಲ್ಲಲು ಹೋಗಿದ್ದನಂತೆ........... ಬ್ರಾಂದಿ ಕುಡಿಯಲು ದೊರಕುತ್ತದೆ ಎಂದೇ ಅವನು ಕ್ರೈಸ್ತ ಮತಕ್ಕೆ ಸೇರಿದ್ದನಂತೆ".[೪೧]

ಮತಾಂತರ ತರುವ ಅವಗಢಗಳೆಡೆ ಬೆಳಕು ಚೆಲ್ಲುತ್ತದೆ. ಜಾತಿ ಮತಾಂತರವಾದದ್ದು ಸ್ವೇಚ್ಛಾಚಾರಕ್ಕೆ, ಈ ಪರಿಸರದಲ್ಲಿ ಕ್ರೈಸ್ತ ಸಮಾಜದ ಅಭಾವದಿಂದ ಬಿಟ್ಟ ಧರ್ಮ, ಸೇರಿದ ಧರ್ಮ ಎರಡರ ನಿಯಂತ್ರಣವಿಲ್ಲದೆ ಸಂಸ್ಕಾರಗೊಳ್ಳುವ ಬದಲು ರಾಕ್ಷಸನಾದ. ಸಾಮಾನ್ಯ ವಾಂಛೆಗಳು ಮತಾಂತರಕ್ಕೆ ಕಾರಣವಾಗುತ್ತವೆ ಎಂದ ಮೇಲೆ ನಿಜವಾದ ಕ್ರಿಶ್ಚಿಯನ್ ಆಗಿರಲು ಸಾಧ್ಯವೆ? ಎಂಬ ಪ್ರಶ್ನೆ ಮೂಡುತ್ತದೆ.

ಮಾರ್ಕನಿಗೆ ಬೈರ ವಂಚಿಸಿ ತಪ್ಪಿಸಿಕೊಂಡಾಗ ತಿಮ್ಮ ಇದು ದೆವ್ವದ ಕಾಟವೆಂದು ಸಮರ್ಥಿಸುತ್ತಾನೆ. "ನಮ್ಮ ಭೂತರಾಯನಿಗೆ ಕಿಲಸ್ತಾನ್ರು ಅಂದ್ರೆ ಆಗೋದಿಲ್ಲ......... ಸೀತೆ ಮನೆ ಜಾಕಣ್ಣ ಮೊದ್ಲು ಮೊದ್ಲು ನಮ್ಮ ದೈಯ್ಯ ದ್ಯಾವರನ್ನು ಹಾಸ್ಯ ಮಾಡುತ್ತಿದ್ದ. ಒಂದು ಸಾರಿ ಚೌಡಿ ಕೊಡ್ತು ರಕ್ತ ಕಾರ್ಕೋಳ್ಳೊ ಹಾಂಗೆ ! ಆಮೇಲೆ ನಮ್ಮ ದೇವರಿಗೆ ಹರಕೆ ಹೇಳ್ತಾನೆ......... ತಿಮ್ಮನ ಶ್ರದ್ಧಾವಣಿ ಮಾರ್ಕನ ಚರ್ಮದಲ್ಲಿ ಮಾತ್ರವಿದ್ದ ಕ್ರೈಸ್ತ ಧರ್ಮ ಅಳುಕಿತು".[೪೨]

ಮತಾಂತರಿಯ ಪೂರ್ವಾಶ್ರಮದ ನಂಬಿಕೆಯ ಬೇರುಗಳನ್ನು ಕ್ರೈಸ್ತ ಧರ್ಮ ಕೀಳುವಲ್ಲಿ ವಿಫಲವಾಗಿರುವುದನ್ನು ಸೂಚಿಸುತ್ತದೆ. ಮಲೆನಾಡಿನ ಪರಿಸರದಲ್ಲಿ ಕ್ರೈಸ್ತ ಧರ್ಮದ ಪ್ರಚಾರಕ್ಕೆ ಒಕ್ಕಲಿಗ

ಸಮುದಾಯದ ಕೆಲವು ಯುವಕರು ಆಕರ್ಷಿತವಾದ ಹಾಗೆ. ಈ ಭಾಗ ಇನ್ನಿತರೆ ಪ್ರಮುಖ ಜನ ಸಮುದಾಯವಾದ ಹಳೇ ಪೈಕದವರಾಗಲಿ, ಮೇಲುವರ್ಗದ ಬ್ರಾಹ್ಮಣ ಸಮುದಾಯದಲ್ಲಾಗಲಿ ಆಕರ್ಷಿತವಾದ ಯಾವ ಕುರುಹುಗಳು ಸೃಜನೇತರ ಮತ್ತು ಸೃಜನಶೀಲ ಸಾಹಿತ್ಯ ಕೃತಿಗಳಲ್ಲಿ ಕಂಡು ಬರುವುದಿಲ್ಲ. ಆದರೆ ಅನಂತಮೂರ್ತಿ ಅವರ ಘಟಶ್ರಾದ್ಧ ಕಥೆಯಲ್ಲಿ ಪಾದ್ರಿಯೊಬ್ಬ ತನ್ನ ಮತಕ್ಕೆ ಸೆಳೆಯಲು ಪ್ರಯತ್ನಿಸಿದ ಸಂದರ್ಭವನ್ನು ತರುತ್ತಾರೆ.

ವಿಧವೆ ಯಮುನಕ್ಕ ಗರ್ಭಪಾತಕ್ಕೆ ಒಳಗಾಗಿ, ಸ್ವಲ್ಪ ಚೇತರಿಸಿಕೊಂಡು ಪರ್ಬವಿನ ಮನೆಯಿಂದ ನಾಣಿಯ ಜೊತೆಯಲ್ಲಿ ಬರುವಾಗ ಒಬ್ಬ ಕ್ರಿಶ್ಚಿಯನ್ ಧರ್ಮ ಪ್ರಚಾರಕ ಆಕೆಯ ಬಳಿಗೆ ಬಂದು – "ಪಾಪಿಗಳನ್ನು ದೇವರು ರಕ್ಷಿಸುತ್ತಾನೆ. ನೀವು ಹೆದರುವುದು ಬೇಡ" ಯಮುನಕ್ಕ ಹೆದರಿ ಸ್ವಲ್ಪ ವೇಗವಾಗಿ ನಡೆಯ ತೊಡಗಿದ್ದರು. ಆತ ಹಿಂಬಾಲಿಸಿ ಬಂದು ಮುಂದುವರೆದು "ಭಯ ಪಡಬೇಡಿ ನಿಮ್ಮ ಅಗ್ರಹಾರದ ಜನ ನಿಮ್ಮನ್ನು ದೂರ ಹಾಕುತ್ತಾರೆ. ಆದರೆ ನಮ್ಮ ಕರ್ತನನ್ನು ನಂಬಿದರೆ ಅವನು ನಿಮ್ಮನ್ನು ಕಾಪಾಡುತ್ತಾನೆ. ಇಗರ್ಜಿಗೆ ನನ್ನ ಜೊತೆ ಬನ್ನಿ ಅಲ್ಲಿ ನಿಮಗೆ ರಕ್ಷಣೆ ಕೊಡುತ್ತೇವೆ."– ಯಮುನಕ್ಕ ಎಲ್ಲಿ ಅವನ ಜೊತೆ ಹೋಗಿ ಬಿಡುತ್ತಾರೊ ಎಂದು ನಾಣಿ ಕಂಗಾಲಾದ. ಆದರೆ ಯಮುನಕ್ಕ ಗಡ್ಡದವನನ್ನು ಭಯದಿಂದ ನೋಡಿ, ತಲೆ ತುಂಬ ಸೆರಗು ಹೊದ್ದು ಮಾತನಾಡದೆ ನಡೆದರು. ಅವನು ಮತ್ತೆ ಹೇಳಿದ. "ನಿಮ್ಮ ಕಲ್ಲಿನ ದೇವರಿಗೆ ಕಲ್ಲಿನ ಹೃದಯ, ಆದರೆ ನಮ್ಮ ದೇವರು ಏಸುವನ್ನು ನಂಬಿದವರನ್ನು ಕಾಪಾಡುತ್ತಾನೆ. ನಾನು ಹೇಳಿದ ಹಾಗೆ ಕೇಳಿ ಇಗರ್ಜಿಗೆ ಬನ್ನಿ"[೪೩]

ಇಲ್ಲಿ ಕುವೆಂಪು ತಮ್ಮ ಕೃತಿಗಳ ಮೂಲಕ ಏನನ್ನು ಹೇಳಿದ್ದಾರೊ ಹಾಗೆ ಅನಂತಮೂರ್ತಿ ಅವರು ಕೂಡ ಹಿಂದೂ ಧರ್ಮದ ಒಳಗಿನ ದೌರ್ಬಲ್ಯಗಳೇ ಅನ್ಯಧರ್ಮದ ಬಂಡವಾಳ ಆಗಿರುವ ಬಗ್ಗೆ ಬೆಳಕು ಚೆಲ್ಲುತ್ತಾರೆ. ಸಮಾಜದ ಅಂಧಾಚರಣೆಯ ಕಟ್ಟು ಪಾಡಿಗೆ ಒಳಗಾಗಿ ಬಂಧನದಲ್ಲಿ ಬದುಕುವ ಯಮುನಕ್ಕ ಮೀರಲಾಗದೆ. ಆ ಕಡೆ ದೈಹಿಕ ಬಯಕೆಯನ್ನು ಹತ್ತಿಕ್ಕಲಾರದೆ ಆಕೆ ಕಂಡುಕೊಂಡ ಒಳದಾರಿಯೇ ಆಕೆಯ ಬದುಕಿಗೆ ಮುಳುವಾಗುತ್ತದೆ. ಆಕೆಗೆ ತನ್ನ ಧರ್ಮದಲ್ಲಿ ಮುಂದಾಗುವ ಪರಿಣಾಮವನ್ನು ಅನ್ಯಧರ್ಮೀಯ ಕಂಡುಕೊಂಡು ಹೇಳಬಲ್ಲ. ಅವನು ಹೇಳಿದಂತೆಯೇ ಮುಂದೆ ಯಮುನಕ್ಕ ಸಮಾಜದ ಬಹಿಷ್ಕಾರಕ್ಕೆ ಒಳಗಾಗಬೇಕಾಯಿತು.

ಈ ಸಂದರ್ಭವನ್ನು ವಿಮರ್ಶಕರಾದ ಟಿ.ಪಿ.ಅಶೋಕ್ ಅವರು ಹೀಗೆ ವ್ಯಾಖ್ಯಾನಿಸುತ್ತಾರೆ. "ವಸಾಹತೀಕರಣ ಪ್ರಕ್ರಿಯೆಯ ಒಂದು ರೂಪಕವನ್ನೇ ಲೇಖಕರು ಸೃಷ್ಟಿಸಿದ್ದಾರೆ. ರಾಜಕೀಯವಾಗಿ, ಆರ್ಥಿಕವಾಗಿ ಬಲಾಢ್ಯವಾದ ಒಂದು ಸಾಮಾಜ್ಯಶಾಹಿ ಧರ್ಮ ರಾಜಕಾರಣದ ಮೂಲಕ ಆಂತರಿಕವಾಗಿ ದುರ್ಬಲವಾಗಿದ್ದ ಸಮಾಜಗಳ ಒಳಗಣ ಸಮಸ್ಯೆಗಳ ಲಾಭ ಪಡೆದು ತನ್ನ ಹಿತಾಸಕ್ತಿ ಸ್ಥಾಪಿಸುವ ಒಂದು ಮೂಲ ಮಾದರಿ."[೪೪]

ಈ ಮಾದರಿ ಸಂಪ್ರದಾಯದ ಹೆಸರಿನಲ್ಲಿ ಮಾನವೀಯತೆಯನ್ನು ಕಳೆದುಕೊಂಡ ಸಮಾಜದಲ್ಲಿ ನರಳುವ ಜೀವಿಗಳಿಗೆ ಹೊರಬರಲು ಅನಿವಾರ್ಯವಾದ ಪರಿಹಾರಗಳೋ ಎಂಬಂತೆ ಕಾಣಿಸಿಕೊಳ್ಳುತ್ತದೆ ಎನ್ನಬಹುದು. ಪ್ರಸ್ತುತ ಘಟಶ್ರಾದ್ಧ ಸಂದರ್ಭ ಈಗಾಗಲೇ ವಿವರಿಸಿರುವ ಕುವೆಂಪು ಸಾಹಿತ್ಯದಲ್ಲಿ

ಬರುವ ಸಂದರ್ಭದಲ್ಲಿ ಮುಂದುವರಿಕೆಯ ಸಾಮಾನ್ಯ ದೃಷ್ಟಾಂತವೇ ಆಗಿದೆ. ಇಲ್ಲಿ ಬರುವ ಒಬ್ಬ ಸಾಮಾನ್ಯ ಪಾದ್ರಿಗೂ ಹಿಂದೂ ಧರ್ಮದ ದೋಷಗಳು ಪರಿಣಾಮಗಳು ಅರಿವಿಗೆ ಬರುತ್ತದೆ. ಅದನ್ನೇ ಪ್ರಲೋಬನೆಯಾಗಿ ಒಡ್ಡುತ್ತಾನೆ. ಆದರೆ ಈ ಕಥಾವಲಯದಲ್ಲಿ ಇಂತಹ ಸಾಮಾನ್ಯ ವಿಚಾರಗಳು, ಧಾರ್ಮಿಕ ವ್ಯಕ್ತಿಗಳು ಮುಖ್ಯವಾಗುವುದಿಲ್ಲ.

ಫಣಿಯಮ್ಮ ಕಾದಂಬರಿಯಲ್ಲಿ ಮತಾಂತರದ ವಿಚಾರ ಒಂದು ಸಂದರ್ಭದಲ್ಲಿ ಬರುತ್ತದೆ. ಆದರೆ ಅದು ಕಥಾವಲಯದಲ್ಲಿ ಮುಖ್ಯವಾಗಿ ಬರುವುದಿಲ್ಲ ; ಪ್ರಾಸಂಗಿಕವಾಗಿ, ಪ್ರೇಮಾಬಾಯಿ ಎಂಬ ಹದಿನಾರು ವರ್ಷದ ಮಂಗಳೂರಿನ ಕ್ರಿಶ್ಚಿಯನ್ ಹುಡುಗಿ ತೀರ್ಥಹಳ್ಳಿ ಆಸ್ಪತ್ರೆಗೆ ನರ್ಸ್ ಆಗಿ ಬಂದಿದ್ದಾಳೆ. ಜಾತಿ, ಧರ್ಮ ಮೀರಿ ಫಣಿಯನ್ನು ಹೆರಿಗೆ ಮಾಡಿಸುವುದಕ್ಕೆ ಅವರ ಕೌಶಲದ ಬಗ್ಗೆ ಮೆಚ್ಚುಗೆ ಅಭಿಮಾನವಿದೆ. ಫಣಿಯಮ್ಮನ 'ವಿಧವೆ' ಬದುಕು ಆಕೆಗೆ ನೋವನ್ನು ತಂದಿದೆ. ಆ ಹಿನ್ನಲೆಯಲ್ಲಿ ಪ್ರಶ್ನೆ ಮಾಡುತ್ತಾಳೆ. "ನಿಮ್ಮ ಬ್ರಾಹ್ಮಣರಂಥ ಕಠಿಣ ಮನಸ್ಸು ನಮ್ಮ ಜನಕ್ಕೆ ಬರಲಿಕ್ಕಿಲ್ಲ ಅಷ್ಟು ಸಣ್ಣ ಪ್ರಾಯಕ್ಕೆ ತಲೆ ಬೋಳಿಸಿ ಬದುಕಿಲ್ಲ ಊಟ ಇಲ್ಲದೆ ಸಾಯಿಸೂದ ನಮ್ಮಲ್ಲಿ ಹಿಂಗಿಲ್ಲಪ್ಪ. ಒಂದು ಗಂಡ ಸತ್ತರೆ ಮತ್ತೊಂದು ಗಂಡನ್ನ ಮಾಡಿಕೊಳ್ಳಲಿಕ್ಕೆ ಮಾಫಿ ಉಂಟು"[೬೫] ಒಟ್ಟು ಸಮಾನ್ಯ ಮಟ್ಟದ ತಿಳುವಳಿಕೆಯುಳ್ಳ, ತನ್ನ ಧರ್ಮದ ಬಗ್ಗೆ ಹೆಚ್ಚೇನೂ ತಿಳಿಯದ ಅನ್ಯಧರ್ಮದ ಹೆಣ್ಣೊಬ್ಬಳಿಗೆ ಹಿಂದೂ ಧರ್ಮದ ಅಮಾನವೀಯತೆಗಳು ಎದ್ದು ಕಾಣುತ್ತದೆ. ತನ್ನ ಧರ್ಮದ ಉದಾರತೆಯ ಕಣ್ಣಲ್ಲಿ ಫಣಿಯಮ್ಮನ ದುಸ್ಥಿತಿಯನ್ನು ಸಹಜವಾದ ಒಂದು ಹೆಣ್ಣಾಗಿ ಪ್ರಶ್ನೆ ಮಾಡುತ್ತಾಳೆಯೇ ಹೊರತು ನಿಮ್ಮ ಧರ್ಮಕ್ಕಿಂತ ನಮ್ಮ ಧರ್ಮ ಉತ್ತಮ ಎಂಬ ಅರ್ಥದಲ್ಲೇನೂ ಅಲ್ಲ. ಆದರೆ ಬಂಗಾರಮ್ಮನಂತಹ ಸಂಪ್ರದಾಯನಿಷ್ಠ ಹೆಣ್ಣಿಗೆ ತಮ್ಮ ಧರ್ಮದ ಟೀಕೆ ಎಂದೇ ಭಾವಿಸಿ ಏಸುಕ್ರಿಸ್ತ ಪ್ರಾಣ ಹಿಂಸೆ ಮಾಡಬಾರದೆಂದರೂ, ಭಗವಂತನ ಕೃಪೆಯಿಂದ ಲೋಕದಲ್ಲಿ ದವಸ, ಧಾನ್ಯ, ಹಣ್ಣು, ತರಕಾರಿಗಳೆಲ್ಲಾ ಬೆಳೆಯುತ್ತಿದ್ದರೂ, ಸಾಧು ಪ್ರಾಣಿಗಳನ್ನು ಏಕೆ ಕೊಂದು ತಿನ್ನುತ್ತಿದ್ದೀರಿ ಎಂಬ ಮೊಂಡುವಾದಕ್ಕೆ ಬೀಳುತ್ತಾಳೆ. ಆದರೆ ಒಂದು ಧರ್ಮದ ಆಚರಣೆಗೆ ಬಲಿಯಾದ ಫಣಿಯಮ್ಮ ಎಲ್ಲರು ಅವರವರ ಸಂಪ್ರದಾಯ ಅವರು ನಡೆಸುತ್ತಾರೆ. ಎಲ್ಲ ಧರ್ಮಗಳಲ್ಲೂ ತಪ್ಪಿವೆ ಎಂಬ ವಾಸ್ತವವನ್ನು ಮನದಟ್ಟು ಮಾಡುತ್ತಾರೆ. ಬಂಗಾರಮ್ಮನ ಸಿಟ್ಟು ಏನೆಂದರೆ, ಯಾರು ಏನಾದರೂ ತಿನ್ನಲ್ಲಿ ಮಲೆನಾಡ ಹಳ್ಳಿಗಳಲ್ಲಿ ಕ್ರೈಸ್ತ ಜನ ಬಂದು ಗೌಡ್ರನ್ನ, ಹೊಲೇರನ್ನಲ್ಲ ಇವರ ಜಾತಿಗೆ ಸೇರಿಸುತ್ತಾರೆ ಎಂಬ ಕಾರಣಕ್ಕೆ. ಅಂದರೆ ಮಲೆನಾಡ ಪ್ರಾಂತ್ಯದಲ್ಲಿ ನಡೆಯುವ ಮತಾಂತರ ಪ್ರಕ್ರಿಯೆಯ ಬಗ್ಗೆ ವಿರೋಧಗಳು ಹೇಗೆ ವ್ಯಕ್ತವಾಗುತ್ತಿದ್ದವು ಎಂಬುದನ್ನು ಇಲ್ಲಿ ಮನಗಾಣಬಹುದು.

ಎಂ.ಕೆ.ಇಂದಿರಾ ಅವರ 'ತಗ್ಗಿನ ಮನೆ ಸೀತೆ' ಕಾದಂಬರಿಯಲ್ಲೂ ಪ್ರಾಸಂಗಿಕವಾಗಿ ಈ ಸಂದರ್ಭವನ್ನು ಪ್ರಸ್ತಾಪಿಸುತ್ತಾರೆ. ಸೀತೆ ಮತ್ತು ಅಚ್ಚಿ ಸಹೋದರಿಯರಿಬ್ಬರ ಸಂಭಾಷಣೆ "ಕಿರಾಸ್ತಾನ್ರ ಡೇವಿಡ್ಡಪ್ಪ ಪೋಟಾ ಪೆಟ್ಗೆ ತಂದದಾನಂತೆ ಮಂಡಗದ್ದೇಲಿ, ಅಲ್ಲೊಂದು ದೊಡ್ಡ ಆಸ್ಪತ್ರೆ ಅದೆಯಂತಲ್ಲೆ. ಅಲ್ಲಿ ಮಖಕ್ಕೆ ಕರೀ ಬಟ್ಟೆ ಮುಚ್ಕಂಡು ಪೋಟಾ ತೆಗಿತಾನಂತೆ, ಛೂ ಮಂತ್ರಗಾಳಿ ಮಾಡ್ತಾನಾದೀತು ಪೋಟಾ ತೆಗಿಸ್ಕಾಂಡಾರ್‍ಗೆ ತುಸುನಾರೆ ನೋವೇ ಆಗಲ್ಲಂತೆ.

ಅದೇ ಮತ್ತೆ, ಅವ ಪೋಟಾ ತೆಗೀತಿನಿ ಅಂತ ಮುಸಿಗೀನಾಗೇ ಮಂತ್ರ ಹಾಕಿ ಮಾಟಾ ಮಾಡಿ ಗೌಡ್ರನ್ನ, ಹೊಲೇರನ್ನ ಕಿರಿಸ್ತಾನ್ರ ಜಾತಿಗೆ ಸೇರಿಸ್ಗಾತಾನಂತೆ ಅದಕ್ಕೇ ಬಾಂಬ್ರು ಯಾರೂ ಆ ಆಸ್ಪತ್ರೆಗೆ ಹೋಗೋದೆ ಇಲ್ಲಂತೆ.

ಬಾಂಬ್ರ ಹೆಂಗಸ್ರನ್ನ ಕಂಡ್ರ ಈರಾಪಿನ್ನು ಕದ್ಕಂಡು ಹೋಗ್ತಾರಂತೆ[೮೬]

ಈ ಮೇಲಿನ ಬ್ರಾಹ್ಮಣ ಸಮುದಾಯದ ಹೆಣ್ಣು ಮಕ್ಕಳಿಬ್ಬರ ಮಾತುಗಳಲ್ಲಿ ಮಲೆನಾಡ ಪರಿಸರದಲ್ಲಿ ಕ್ರೈಸ್ತ ಧರ್ಮದ ಬಗ್ಗೆ, ಕ್ರೈಸ್ತ ಜನರ ಬಗ್ಗೆ ಯಾವ ರೀತಿ ಮನೋಭಾವಗಳು, ಪ್ರತಿಕ್ರಿಯೆಗಳು, ಪ್ರತಿರೋಧಗಳು ಹೇಗೆ ವ್ಯಕ್ತವಾಗುತ್ತಿದ್ದವು ಎಂಬುದನ್ನು ಸೂಚಿಸುತ್ತದೆ. ಕುತೂಹಲದ ಸಂಗತಿ ಎಂದರೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಆಧುನಿಕ ಯಂತ್ರ ವಸ್ತುವಾದ ಸೈಕಲ್ ಬಗ್ಗೆ ಬೆಟ್ಟಳ್ಳಿ ಹರಿಜನರು ಇದೇ ರೀತಿ ಮಾತಾಡಿಕೊಂಡಿದ್ದರು. ಬೀಸೇಕಲ್ಲಿನ ಮೇಲೆ ಹೇಗೆ ಸವಾರಿ ಮಾಡುವುದು, ಆ ಪಾದ್ರಿಗೆ ಹಸುರು ಗೊತ್ತಿರಬೇಕು. ಇದರಿಂದಲೇ ದೇವಯ್ಯಗೌಡರ ಮೇಲೆ ಮಂಕುಬೂದಿ ಎರಚಿದ್ದಾನೆ ಎಂಬ ಅವರ ತಿಳುವಳಿಕೆ ಮತ್ತು ಪ್ರತಿಕ್ರಿಯೆ ಹೇಗಿದೆಯೊ ಹಾಗೆ ಇಲ್ಲಿ ಕೂಡ ಕ್ಯಾಮರ ಎಂಬ ಆಧುನಿಕ ಯಂತ್ರ ವಸ್ತು ಕ್ರೈಸ್ತ ಜನರಿಂದಲೇ ಅಥವಾ ವಿದೇಶಿಯರಿಂದಲೇ ಈ ಮಲೆನಾಡನ್ನು ಪ್ರವೇಶಿಸಿದೆ. ಕಪ್ಪು ಬಟ್ಟೆ ಮುಚ್ಚಿಕೊಂಡು ಪೋಟೊ ತೆಗೆಯೋ ಕ್ಯಾಮರ ಮಂತ್ರದ ಪೆಟ್ಟಿಗೆಯಂತೆಯೂ ತೆಗೆಯೋ ಡೆವಿಡ್ ಮಾಂತ್ರಿಕನಂತೆಯೂ ಕಾಣುತ್ತಾರೆ. ಪೋಟೊ ತೆಗೆಯುವಾಗ ನೋವೇ ಆಗಲ್ಲ ಅಂದರೆ ಆತ ಮಂತ್ರ ಹಾಕಿ ನಮ್ಮ ವಶ ಮಾಡಿಕೊಂಡು ಬಿಡ್ತಾನೆ ಎಂಬ ಭಯ, ತಲ್ಲಣ ಇಂತಹ ಮಂತ್ರ ಹಾಕುವುದರಿಂದಲೇ, ಗೌಡ್ರು ಕೆಳಜಾತಿಯವರ ಬಲೆಗೆ ಬೀಳ್ತಾರೆ. ಅದಕ್ಕೆ ಬ್ರಾಹ್ಮಣರ್‍ಯಾರೂ ಅಲ್ಲಿಯ ಆಸ್ಪತ್ರೆ ಸೇವೆ ಪಡೆಯಲು ಹೋಗುವುದಿಲ್ಲ. ಅಷ್ಟೇ ಅಲ್ಲ ಬ್ರಾಹ್ಮಣ ಹೆಂಗಸರನ್ನು ಕಂಡರೆ ಯುರೋಪಿಯನ್ನರು ಕದ್ದುಕೊಂಡು ಹೋಗುತ್ತಾರೆ. – ಈ ರೀತಿಯ ಸುದ್ಧಿಗಳು ಕಲ್ಪಿತ ಸಂಗತಿಗಳು ಇಡೀ ಮಲೆನಾಡಿನಲ್ಲಿ ಹಬ್ಬಿ ಹೆಚ್ಚು ಕಡಿಮೆ ಎಲ್ಲಾ ಸಮುದಾಯದವರು ಮಾತನಾಡಿಕೊಳ್ಳುವುದರ ಮೂಲಕ ಕ್ರೈಸ್ತ ಮಿಷನರಿ ಚಟುವಟಿಕೆಗೆ ಅಸಂಘಟಿತವಾದ ವಿರೋಧದ ಶಕ್ತಿಗಳು ರೂಪಿತವಾಗಿದ್ದವು. ಆದ ಕಾರಣವೇ ಮಲೆನಾಡ ಪ್ರದೇಶದಲ್ಲಿ ಮತಾಂತರ ಪ್ರಕ್ರಿಯೆ ಯಶಸ್ವಿಯಾಗಲಿಲ್ಲ.

ಬಿಳುಮನೆ ರಾಮದಾಸ್ ಅವರ 'ವ್ಯಾಮೋಹ' ಕಾದಂಬರಿಯಲ್ಲಿಯೂ ಪ್ರಾಸಂಗಿಕವಾಗಿ ಮಿಷನರಿ ಚಟುವಟಿಕೆಗಳ ಬಗ್ಗೆ ಪ್ರಸ್ತಾಪವಿದೆ. "ನಾಲೂರು ಗೌಡರು ಮಂಡಗದ್ದೆ ಸೀಮೆಯ ಕಡೆ ಕಿಲಸ್ತರ ಕುಟುಂಬವೊಂದರ ಸಂಪರ್ಕವಿದೆಯೆಂದೂ, ಆ ಸಂಬಂಧದ ಕಾರಣ ತಮ್ಮ ಮನೆಗೆ ಆಧುನಿಕ ವಸ್ತು ಎಂದರೆ ಜಾತಿ ನಾಯಿಗಳನ್ನು, ಇಂಗ್ಲೀಷ್ ಕೋಳಿಗಳನ್ನು ತಂದು ಸಾಕುತ್ತಿದ್ದಾರೆ ಎಂದು ಜನ ಬೆರಗಿನಿಂದ ನೋಡುತ್ತಿದ್ದರು. ಕಿಲಸ್ತರ ಸಂಪರ್ಕದಿಂದ ತಮ್ಮ ಮನಗೆ ನಾಗರೀಕತೆಯನ್ನು ತಂದುಕೊಳ್ಳುತ್ತಿದ್ದಾರೆ ಎಂದು ಭಾವಿಸಿದ್ದರು. ಆದರೆ ನಿಜವಾದ್ದು ನಾಗರೀಕತೆ ತಂದು ಹಾಕುವುದಾಗಿರಲಿಲ್ಲ. ಅದು ಕಿಲಸ್ತರ ಕುಟುಂಬದ ಹೆಣ್ಣು ಹೆಂಡಕ್ಕೆ ಅವರು ಬಲಿಯಾಗಿದ್ದರು"[೮೭] ಎಂಬುದಾಗಿ ಕಾದಂಬರಿಯಲ್ಲಿ ಹೇಳಿಕೆ ಇದೆ. ಇಲ್ಲಿ ನಾವು ನೋಡುವುದು ದೇವಯ್ಯನ ಮಾದರಿಯನ್ನು, ಕಾನೂರು ಹೆಗ್ಗಡತಿಯಲ್ಲಿ ಬರುವ ಜಾಕಿಯ ಮಾದರಿಯನ್ನು, ಅಂದರೆ ಮತಾಂತರದ ಉದ್ದೇಶ ಅಥವಾ ಕ್ರೈಸ್ತ ಜನರ ಜೊತೆಗಿನ ನಿಕಟ

ಸಂಪರ್ಕದ ಹಿಂದೆ ಇಂತಹ ಮೋಜಿನ ಉದ್ದೇಶಗಳು ಕೆಲವರಲ್ಲಿ ಇದ್ದವು. ಆದ ಕಾರಣ ಮಲೆನಾಡಿನ ಬಹುಸಂಖ್ಯಾತ ಒಕ್ಕಲಿಗ ಸಮುದಾಯದಲ್ಲಿ ಇಂತಹ ದೃಷ್ಟಿಕೋನಗಳು ಪ್ರಬಲವಾಗುತ್ತಾ ಹೋದಂತೆ ದೇವಯ್ಯನಂತವರಿಗೆ ಮತಾಂತರದ ಪ್ರತಿಷ್ಠೆಯ ಭಾವಗಳಿಗೆ ಕುಂದು ಉಂಟಾಗತೊಡಗಿತು. ಅಂತವರನ್ನು ಸಮಾಜ ನೋಡುವ ಪ್ರತಿಕ್ರಿಯಿಸುವ ಬಗೆಯೇ ಬೇರೆ ರೀತಿಯಾಗತೊಡಗಿದಾಗ ಮತಾಂತರ ಪ್ರಕ್ರಿಯೆ ವಿಫಲವಾಗುತ್ತದೆ.

ಈ ರೀತಿ ಮಲೆನಾಡ ಪರಿಸರದಲ್ಲಿ ೧೯ನೇ ಶತಮನಾದ ಕೊನೆ ೨೦ನೇ ಶತಮಾನದ ಆರಂಭದ ಘಟ್ಟದಲ್ಲಿ ನಡೆದಿರುವ ಮತಾಂತರ ಪ್ರಕ್ರಿಯೆಯ ಪ್ರಯತ್ನ ಅದಕ್ಕೆ ಇಲ್ಲಿನ ಜನ ಸಮುದಾಯಗಳ ಪ್ರತಿಕ್ರಿಯೆ, ಪ್ರತಿರೋಧಗಳನ್ನು ಈ ನೆಲದಲ್ಲಿ ಹುಟ್ಟಿ ಬಂದ ಲೇಖಕರು ತಮ್ಮ ಸಾಹಿತ್ಯ ಕೃತಿಗಳ ಕಲಾವಲಯದಲ್ಲಿ ಪ್ರಧಾನವಾಗಿಯೂ, ಪ್ರಾಸಂಗಿಕವಾಗಿಯೂ ತರುವುದರ ಮೂಲಕ ಈ ನೆಲದ ಜನರ ಸಾಮಾಜಿಕ ಜೀವನದಲ್ಲಾಗುತ್ತಿರುವ ಸ್ಥಿತ್ಯಂತರಗಳನ್ನು ದಾಖಲಿಸಿದ್ದಾರೆ.

ಮಂತಾಂತರದ ವೈಫಲ್ಯತೆ

ಮಲೆನಾಡ ಪರಿಸರದಲ್ಲಿ ಮತಾಂತರದ ವೈಫಲ್ಯಕ್ಕೆ ಕಾರಣಗಳನ್ನು ಮತಾಂತರ ಪ್ರಕ್ರಿಯೆ ನಡೆದ ಸಂಗತಿಗಳ ವಿಶ್ಲೇಷಣೆಯಲ್ಲಿಯೇ ಚರ್ಚಿಸಲಾಗಿದೆ. ಆ ವೈಫಲ್ಯಗಳನ್ನೆಲ್ಲ ಈ ಕೆಳಕಂಡ ಅಂಶಗಳಲ್ಲಿ ವಿವರಿಸಿಕೊಳ್ಳಬಹುದು. ಅದಕ್ಕೂ ಮೊದಲು ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿ ಬಗ್ಗೆ ಬಂದ ವಿಮರ್ಶೆಯೊಂದನ್ನು ಗಮನಿಸಬಹುದು. "ಭಾರತೀಯ ಅಂಧ ವಿಶ್ವಾಸಗಳನ್ನು ಟೀಕಿಸಿ ತಮ್ಮ ಧರ್ಮ ಪ್ರಚಾರ ಮಾಡುತ್ತಿರುವ ಪಾದ್ರಿಗಳು ಇಲ್ಲೂ ಇದ್ದಾರೆ. ಆದರೆ ವಿಫಲ ಯತ್ನ ಮಾಡುತ್ತಿರುವ ಮೂರ್ಖರಾಗಿ ಅವರು ನೋಡಲ್ಪಟ್ಟಿದ್ದಾರೆ. ಅಂದರೆ ಪಾದ್ರಿಗಳ ತರ್ಕಕ್ಕೆ ನಿಲುಕದ ಅದ್ಭುತವಾಗಿ ಹಿಂದೂ ಧರ್ಮವನ್ನು ಪ್ರತಿಷ್ಠಾಪಿಸಲಾಗಿದೆ. ಇದು ಕೇವಲ ಸನಾತನ ಹಿಂದೂ ಧರ್ಮದ ಸಂದರ್ಭದಲ್ಲಿ ಮಾತ್ರವಲ್ಲ, ತೀರಾ ಅವೈಜ್ಞಾನಿಕ ಎನ್ನಬಹುದಾದ ಸಂಪ್ರದಾಯಗಳ ಸಂದರ್ಭದಲ್ಲಿ ಕೂಡ ದೃಷ್ಟಾಂತವಾಗುತ್ತದೆ."[೪೮]

ಕುವೆಂಪು ಕೃತಿಗೆ ಸಂಬಂಧಿಸಿದಂತೆ ಹೇಳಿದ್ದರೂ ಒಟ್ಟು ಮಲೆನಾಡ ಸಂದರ್ಭದಲ್ಲಿ ಮತಾಂತರ ಪ್ರಕ್ರಿಯೆಯ ವಿಫಲತೆಯ ಹಿನ್ನೆಲೆಯಲ್ಲಿ ಗಮನಾರ್ಹವಾದ ಮಾತಾಗಿದೆ. ಜೀವರತ್ನಯ್ಯ ಆಗಲಿ, ರೆವರೆಂಡ್ ಲೇಕ್‌ಹಿಲ್ ಆಗಲಿ ಹಿಂದೂ ಧರ್ಮದ ಅಂಧ ವಿಶ್ವಾಸಗಳನ್ನು ಟೀಕಿಸುತ್ತಾರೆ. ಅದರಲ್ಲೂ ನೇಟೀವ್ ಪಾದ್ರಿ ಜೀವರತ್ನಯ್ಯ ಮೊದಮೊದಲ ಸೌಮ್ಯವಾಗಿ ಕಾಣುವಂತವನು ಕಾದಂಬರಿಯ ಕೊನೆಯಲ್ಲಿ ಉಗ್ರಗಾಮಿಯಾಗಿ ಕಾಣುವುದಕ್ಕೆ ಶುರುವಾಗುತ್ತಾನೆ. ಜೀವರತ್ನಯ್ಯನ ನಿಜವಾದ ಉದ್ದೇಶ ಕ್ರೈಸ್ತಧರ್ಮ ತತ್ತ್ವವನ್ನು ಪ್ರಚಾರ, ಪ್ರಸಾರ ಮಾಡುವುದಕ್ಕಿಂತ ತನ್ನ ಸ್ಥಾನದಿಂದ ಬಡ್ತಿ ಪಡೆಯಬೇಕೆಂಬ ಹಂಬಲದಲ್ಲಿ ಮತಾಂತರ ಪ್ರಯತ್ನ ನಡೆಸುತ್ತಾನೆ. ಈತನ ಅವಸರಗಳೇ ದೇವಯ್ಯನಂತವರು ಹಿಂಜರಿಯುವಂತೆ ಮಾಡುತ್ತದೆ.

ಮಿಷನರಿಯಿಂದ ಸಂಬಳ ಪಡೆದು ಕ್ರೈಸ್ತ ಧರ್ಮ ಪ್ರಚಾರ ಮಾಡುವವರ ವೈಖರಿ ಕೂಡ ವಿಫಲತೆಯ ಅಂಶಗಳಲ್ಲಿ ಒಂದು. ಕುವೆಂಪು ನೆನಪಿನ ದೋಣಿಯಲ್ಲಿ ದಾಖಲಿಸುತ್ತಾರೆ.

೧೪-೦೪-೧೯೩೩ರ ಸಾಯಂಕಾಲ ಕೆಲವು ಪಾದ್ರಿಗಳು ಇಬ್ಬರು ಐರೋಪ್ಯರೂ ದೇವಂಗಿಯ ಆಸ್ಪತ್ರೆಯ ಬಳಿ ಬಂದು 'ಹರಿಕಥೆ' ಮಾಡುತ್ತಾರೆಂದು ತಿಳಿಯಿತು. ಹಿಂದೂಮತವನ್ನೇನಾದರೂ ಖಂಡಿಸುತ್ತಾರೋ ನೋಡಬೇಕೆಂದು ಅಲ್ಲಿಗೆ ಏಳುವರೆ ಗಂಟೆಗೆ ವೆಂಕಟಯ್ಯ ಹಿರಿಯಣ್ಣ ಶ್ರೀನಿವಾಸ ವಿಜಯದೇವ ಮೊದಲಾದವರೊಡನೆ ಹೋದೆ. ಆದರೆ ನಾನು ಬಂದಿದ್ದು ನೋಡಿ ಉಪದೇಶಿ ಬಹಳ ಎಚ್ಚರಿಕೆಯಿಂದ ಮಾತಾಡಿ ಬಿಟ್ಟನು. ಅವನ 'ಹರಿಕಥೆ' ತಮಾಷೆಯಾಗಿತ್ತು. ಈ ಸಂಬಳದ "ಕಂಬಳಿ ಕುರಿಗಳಿಂದ ಧರ್ಮ ಪ್ರಚಾರವಾಗುತ್ತದೆಯೇ? ಅಯ್ಯೋ ಯೇಸು ! ಕಡೆಯಲ್ಲಿ ನಾನೂ ಎರಡು ಮಾತನಾಡಿದೆ........ ಜಗತ್ತಿನಲ್ಲಿ ಯೇಸು ಕ್ರಿಸ್ತನಂತೆಯೆ ನೂರಾರು ಮಹಾತ್ಮರು ಹುಟ್ಟಿ ಸತ್ತಿದ್ದಾರೆ. ಅವರಲ್ಲಿ ಯೇಸುಕ್ರಿಸ್ತನು ಒಬ್ಬನು ಮಾತ್ರ, ಅವರವರು ಅವರವರ ಮತವನ್ನು ಸತ್ಯ, ಧರ್ಮ, ಪ್ರೇಮ ಇವುಗಳನ್ನು ಹಿಡಿದು ಅನುಸರಿಸಿದರೆ ಮೋಕ್ಷ ಲಭಿಸಿಯೆ ಲಭಿಸುತ್ತದೆ. ಬೇಕಾದುದು ನೀರು, ಅದನ್ನು ಯಾವ ಹೆಸರಿನಿಂದ ಕರೆದರೇನು? ಎಂಬ ಶ್ರೀ ಗುರುದೇವನ ತತ್ತ್ವವನ್ನು ಸ್ವಲ್ಪ ಹೊತ್ತು ವಿವರಿಸಿದೆ."[೯]

ಮೇಲಿನ ದಾಖಲೆಯಿಂದ ತಿಳಿದು ಬರುವ ಸಂಗತಿ, ಮಲೆನಾಡಿನ ಪ್ರಾಂತ್ಯದಲ್ಲಿ ಅದಾಗಲೇ ಆಧುನಿಕ ವಿದ್ಯಾಭ್ಯಾಸ ಪಡೆದ ಕುವೆಂಪು ಅಂತಹ ಅನೇಕ ಬುದ್ಧಿ ಜೀವಿಗಳು ಬಂದಿದ್ದರಿಂದ, ಅವರ ವಿಚಾರಧಾರೆಗಳು ಅನೇಕ ವೇದಿಕೆಗಳ ಮೂಲಕ ಪ್ರಾಪ್ತವಾಗುತ್ತಿದ್ದುರಿಂದ ಕ್ರೈಸ್ತ ಧರ್ಮದ ಕೇವಲ ಧಾರ್ಮಿಕ ಉದ್ದೇಶಗಳ ಪ್ರಚಾರ-ಪ್ರಸಾರ ಯಶಸ್ವಿಯಾಗಿಲ್ಲ. ಇಂತಹ ವಿಚಾರಧಾರೆಗಳ ಮುಂದೆ ಧರ್ಮ ಪ್ರಚಾರಕರು ಜನರ ಕಣ್ಣಲ್ಲಿ ವಿಶೇಷ ವ್ಯಕ್ತಿಗಳಾಗಿ ಕಾಣಲಿಲ್ಲ.

ಮಲೆನಾಡ ಪ್ರಾಂತ್ಯದಲ್ಲಿ ಮತಾಂತರ ಪ್ರಕ್ರಿಯೆ ಎಂಬುದು ವ್ಯಕ್ತಿಯ ಮಟ್ಟದಲ್ಲಿ ನಡೆದ ಪಯತ್ನವೇ ಹೊರತು, ಸಮಷ್ಟಿ ಮಟ್ಟದಲ್ಲಿ ಆ ಪ್ರಯತ್ನ ನಡೆಯಿಲಿಲ್ಲ. ಕ್ರೈಸ್ತ ಪಾದ್ರಿಗಳು ತಂದ ಆಧುನಿಕ ಪರಿಕರಗಳು ಮತಾಂತರ ಹೊಂದುವಷ್ಟು ಪರಿಣಾಮವನ್ನು ಬೀರಲಿಲ್ಲ. ಭಾರತೀಯ ಸಮಾಜಗಳ ಪರಂಪರೆಯಲ್ಲಿ ಉಳಿದು ಬೆಳೆದು ಭಾವನೆಗಳು ಕೆಲಸ ಮಾಡುವುದರಿಂದ ಬಾಹ್ಯ ಆಕರ್ಷಣೆಗಳು ಅದರ ಮುಂದೆ ಬಹಳ ಕಾಲ ನಿಲ್ಲಲಾರವು.

ದೇವಯ್ಯನಂತವರ ಮತಾಂತರದ ಉದ್ದೇಶ ಹೊರಗಿನ ಆಕರ್ಷಣೆ, ಸಾಮಾಜಿಕ ಪ್ರತಿಷ್ಠೆ, ವಸ್ತು ರೂಪದ ಆಧುನಿಕತೆಯ ಪ್ರಲೋಭನೆಯೇ ಹೊರತು ಕ್ರೈಸ್ತ ಧರ್ಮದ ನಿಜವಾದ ತಿಳುವಳಿಕೆಗಾಗಿಯಲ್ಲ. ಮಳುವಾಡಿ ಗಿರಿಯಪ್ಪಗೌಡರ ಆಸಕ್ತಿ ಕೂಡ ಶಿಕ್ಷಣದ ಅಭಿಲಾಷೆ. ಅದರಿಂದ ತನ್ನ ಸಮುದಾಯದ ಜನ ಸುಧಾರಣೆಯಾಗಬೇಕೆಂದು ಬಯಸಿದ್ದರೇ ಹೊರತು ಏಸುವಿನ ತತ್ತ್ವಗಳು ತಮ್ಮ ಬಾಳಿಗೆ ಬೆಳಕು ಎಂದು ಆಶಿಸಿಯಲ್ಲ. ಗಿರಿಯಪ್ಪಗೌಡ ಆಗಲಿ, ದೇವಯ್ಯ ಆಗಲಿ ತಮ್ಮ ಪ್ರಯತ್ನದಿಂದ ವಿರೋಧವನ್ನು ಎದುರಿಸಬೇಕಾಗುತ್ತದೆ ; ಮೀರಲು ಸಾಧ್ಯವಾಗುವುದಿಲ್ಲ. ಪಾದ್ರಿಯ ಮೂಲಕ ದೇವಯ್ಯನ ಒಡನಾಟವನ್ನು ಗಮನಿಸುತ್ತಾ ಬಂದ ಗೆಳೆಯ ಮತ್ತು ಭಾವಮೈದುನ ಮುಕುಂದಯ್ಯ ಎಲ್ಲೂ ವಿರೋಧಿಸುವುದು ಕಾಣುವುದಿಲ್ಲ. ಆದರೆ ಮತಾಂತರವಾಗುತ್ತಾನೆ ಎಂದಾಗ ಬಂಧುವಾಗಿ ತಡೆಯುತ್ತಾನೆ. ಪಾದ್ರಿಗೆ ಜಾತಿ ಸೇರಿಸೊ ಹುಚ್ಚು ಬಿಡಿಸದಿದ್ದರೆ ಆಗುವುದಿಲ್ಲವೆಂದು ಬಂದೂಕು ಹಿಡಿದು ಹುಸಿ ಬೆದರಿಕೆ ಹಾಕುತ್ತಾನೆ. ಗಿರಿಯಪ್ಪನ ತಂದೆಯೂ ಬಂದೂಕನ್ನು ಹಿಡಿದು ಮಗನನ್ನು ಹೆದರಿಸಿದ್ದಾರೆ. ಈ ರೀತಿ ಅವಿಭಕ್ತ

ಕುಟುಂಬದ, ಅಲ್ಲೇ ಸುತ್ತ ಮುತ್ತ ಇರುವ ಕಳ್ಳುಬಳ್ಳಿ ಸಂಬಂಧಗಳ ಹೆಣಿಗೆಯಲ್ಲಿ ಮತಾಂತರ ಪ್ರಕ್ರಿಯೆ ಸುಲಭ ಸಾಧ್ಯವಲ್ಲ.

ಆಧುನಿಕತೆಯ ಸ್ಪರ್ಶತೆಗೆ ತನ್ನನ್ನು ತೆರೆದುಕೊಳ್ಳುತ್ತಿದ್ದ ಒಕ್ಕಲಿಗ ಸಮಾಜ ಕ್ರೈಸ್ತ ಧರ್ಮದ ಪ್ರಭಾವಕ್ಕೆ ದಿಢೀರನೆ ಒಳಗಾಗಲಿಲ್ಲ. ಮಲೆನಾಡಿನ ಈ ಸಮುದಾಯವು ಈಗಾಗಲೇ ತನ್ನ ಪರಂಪರೆಯಲ್ಲಿ ಜೈನ ಧರ್ಮದ ಪ್ರಸಾರ-ಪ್ರಭಾವಕ್ಕೆ ಒಳಗಾಗಿದೆ. ಹಾಗೆ ವೈಷ್ಣವ ಧರ್ಮದ ಪ್ರಸಾರ-ಪ್ರಭಾವಕ್ಕೂ ಒಳಗಾಗಿದೆ. ಹೀಗೆ ಪ್ರಭಾವಕ್ಕೆ ಅನುಸರಣೆಗೆ ಒಳಗಾಗಿಯೂ ತನ್ನತನವನ್ನು ಕಾಪಾಡಿಕೊಂಡೇ ಬಂದದ್ದರಿಂದ ಕ್ರೈಸ್ತ ಧರ್ಮದ ವಿಚಾರದಲ್ಲೂ ಅದು ತಂದ ಆಧುನಿಕತೆಯನ್ನು ವೈಚಾರಿಕತೆಯನ್ನು ಶಿಕ್ಷಣವನ್ನು ಪಡೆದುಕೊಳ್ಳುತ್ತಲೇ ತನ್ನ ಅನನ್ಯತೆಯನ್ನು ಉಳಿಸಿಕೊಂಡಿದ್ದರಿಂದಲೇ ಕ್ರೈಸ್ತ ಧರ್ಮ ಈ ಪರಿಸರದಲ್ಲಿ ಯಶಸ್ಸನ್ನು ಕಾಣಲಿಲ್ಲ.

ಆಸ್ತಿಯೇ ಮುಖ್ಯ ಜೀವನಾಧಾರವಾಗಿರುವ ಶೂದ್ರ ಸಮುದಾಯಕ್ಕೆ ಮತಾಂತರದಿಂದ ಪಿತ್ರಾರ್ಜಿತ ಆಸ್ತಿ ದಕ್ಕದೇ ಹೋಗಬಹುದಾದ ಸಾಧ್ಯತೆ ಇರುವುದರಿಂದ ಈ ಮೂಲಕ ಕಳ್ಳು-ಬಳ್ಳಿಯ ಸಂಬಂಧಗಳನ್ನೇ ಕಿತ್ತೊಗೆಯಬೇಕಾದ ಸಂದರ್ಭಗಳು ಬರಬಹುದಾದ್ದರಿಂದ ಧರ್ಮ ಅದಕ್ಕಿಂತ ದೊಡ್ಡದೆನಿಸಲಿಲ್ಲ. ಇದು ಮತಾಂತರ ಪ್ರಕ್ರಿಯೆಯ ಸೋಲಿಗೆ ಕಾರಣ.

ಕ್ರೈಸ್ತ ಧರ್ಮಿಯರ ಆಹಾರ ಪದ್ಧತಿ ಜಾತಿ ಶ್ರೇಣಿಯಲ್ಲಿ ಕೆಳಹಂತದಲ್ಲಿರುವ ಹರಿಜನರ ಪದ್ಧತಿಗೆ ಹತ್ತಿರವಾದುದರಿಂದ ಜಾತಿ ಶ್ರೇಣಿಯಲ್ಲಿ ಮೇಲಿದ್ದ ಒಕ್ಕಲಿಗರಿಗೆ ಮತಾಂತರವು ಕೆಳಜಾತಿಗೆ ಸೇರಿದಂತೆಯೇ ವಿನಃ ಬೇರಲ್ಲ ಎಂಬ ಧೋರಣೆ. ಅಲ್ಲಿಯ ಪರಿಸರ ಕ್ರೈಸ್ತ ಧರ್ಮವನ್ನು ಧರ್ಮವೆಂದು ಕಂಡಿಲ್ಲ. ಅದೊಂದು ಜಾತಿ (ಕಿಲಸ್ತರ ಜಾತಿ)ಎಂಬ ಪರಿಗಣನೆ ಪಾದ್ರಿ ಜೀವರತ್ನಯ್ಯ ಬೆಟ್ಟಳ್ಳಿ ಮನೆಗೆ ಚಿನ್ನಪ್ಪ ಬಂದಾಗ ಊಟ ಎಲ್ಲಿ ಹಾಕಬೇಕು, ಹೇಗೆ ಹಾಕಬೇಕು ಎಂಬ ಚರ್ಚೆ ಗಮನಿಸಬಹುದು –

"ಥೂಥೂಥೂ..... ಹೊಲೇರಿಗಿಂತಲೂ ಅತ್ತತ್ತ, ಆ ಕಿಲಸ್ತರನ್ನು ಒಳಗೆ ಕೂರಿಸೊದೆ ಸೈ ಏನೋ ಬಟ್ಟೆಬರಿ ಹಾಕ್ಕೊಂಡು ಬಂದನಲ್ಲಾ ಅಂತ ಜಗಲಿ ಹತ್ತಿಸಿದ್ದು".

ಮನೆಯೊಳಗೆ ಕೆಲಸದ ಆಳುಗಳು ಕೂಢ ಹೀನಾಯವಾಗಿಯೇ ಕಾಣುತ್ತಾರೆ.

"ದನಾ ತಿನ್ನುವ ಕೀಳುಜಾತಿಗೆ ಕೈಯಿಂದಲೆ ಅನ್ನ ಇಕ್ಕಿ ಅವರ ಎಂಜಲಿನಿಂದ ಮೈಲಿಗೆಯಾಯಿತೆಂದರೆ ಜಾತಿಯವರಾರೂ ತಮ್ಮನ್ನು ಒಳಗೆ ಸೇರಿಸುವುದಿಲ್ಲ".

ಬ್ರಾಹ್ಮಣರು ಪಂಕ್ತಿ ಭೋಜನದಲ್ಲಿ ಭೇದ ಮಾಡುತ್ತಾರೆ ಎಂದು ಟೀಕಿಸಿದ ಕಾಡುಗೆ ತಾಯಿ ದೊಡ್ಡಮ್ಮ ಹೆಗ್ಗಡ್ತಿ –

"ಬಿರಾಂಬ್ರ ಮನೇಲಿ ಗೌಡನ್ನ ಒಳಗೆ ಕೂರ್ಸಿ ಇಕ್ತಾರೆ ಅಂತಾ ಮಾಡಿಯೇನು? ನಮ್ಮನೇಲಿ ಆ ಕಿಲಸ್ತರ ಉಪದೇಶಿ ಬರ್ತಾನಲ್ಲಾ, ಅವನ್ನ ಒಳಗೆ ಕೂರ್ಸಿ ಊಟ ಹಾಕ್ತೀವೇನು?......."

ಈ ರೀತಿ ನಂಬಿಕೆ, ಮಡಿವಂತಿಕೆ ಆಚರಿಸುವ ಸಮಾಜದೊಳಗೆ ಕ್ರೈಸ್ತ ಬೋಧನೆಗಳು ಪ್ರವೇಶಿಸುವುದು ಸುಲಭ ಸಾಧ್ಯವಲ್ಲ.

ಗುತ್ತಿಯೊಡನೆ ತಿಮ್ಮಿ ಓಡಿ ಹೋಗುವಂತೆ ಸಹಕರಿಸಿದ ಸೇಸಿಗೆ ಮುಂದೆ ಗಂಡ, ಮಕ್ಕಳು ಕೇರಿಯನ್ನು ಎದುರಿಸಬೇಕಾದ ಸಂದರ್ಭದಲ್ಲಿ ಆಕೆಯ ಮೇಲೆ ಗಣ ಬರುತ್ತದೆ. ಅದು ಆಡುವ ಮಾತು–

"ಜಾತಿಕೆಟ್ಟು ನೀತಿಕೆಟ್ಟ ಕೇರಿಗೆಲ್ಲ ಮುಟ್ಟುಚಿಟ್ಟು! ಹಲಸಿನ ಮರದ ಮೇಲೆ ನನ್ನ ಜುಟ್ಟು ! ನಾನೆ ಅಡಗಿಸಿದ್ದೇನೆ....... ನನಗೆ ಆಯಾರಕೊಟ್ಟು ಪೂಜೆ ಮಾಡಿ....... ಹೆಣ್ಣು ಕೂದಲು ಕೊಂಕದೆ ಬರುತ್ತದೆ".

"ಕತ್ತಲೆಯಲ್ಲಿ ಒಂದು ಪಿಸುಮಾತು ಕೇಳಿಸಿತು. ಹೌದು ಮತ್ತೆ ? ಕಿಲಸ್ತರ ಜಾತಿಗೆ ಹೆಣ್ಣು ಕೊಟ್ರೆ, ಆಗ್ದೆ ಬಿಡ್ತದೆಯೆ....... ಮುಟ್ಟುಚಿಟ್ಟು....... ಕೇರಿಗೆ?......."

ಇಜಾರದ ಸಾಬಿಯ ಕೊಲೆಯ ಕೇಸಿನಲ್ಲಿ ಸಿಲುಕಿಕೊಂಡ ನಾಯಿಗುತ್ತಿ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ತಪ್ಪಿಸಿಕೊಂಡು ಬರುವಾಗ ತನ್ನ ದುಸ್ಥಿತಿಗೆ ತಾನೆ ಮರಗುವ ಸಂದರ್ಭದಲ್ಲಿ –

"ನಾನು ಹೊಲೇರವನಲ್ಲದೆ ಬ್ಯಾರೆ ಜಾತಿಗೆ ಸೇರಿದವನಾಗಿದ್ದರೆ ಹೀಂಗಾಗ್ತಿತ್ತೆ?" ಎಂದು ಕೊಂಡನು. 'ಗೌಡರ ಜಾತಿಗೆ? ಸೆಟ್ಟರ ಜಾತಿಗೆ? ಬಿರಾಂಬರ ಜಾತಿಗೆ?....... ಉಂಹ್ಞೂ ಈ ಜಲ್ಮದಾಗೆ ಅದೆಲ್ಲಿ ಸಾಧ್ಯ?...... ಸಾಬರ ಜಾತಿಗೆ? ಕಿಲಸ್ತರ ಜಾತಿಗೆ?.. ಥೂಥೂಥೂ! ತನ್ನ ತಲೆಯಲ್ಲಿ ಸುಳಿದಿದ್ದ ಏನನ್ನೊ ಉಗುಳಿ ನಿರಾಕರಿಸಿದನು'.[೫೦]

ಈ ಮೇಲಿನ ಸಂಗತಿ ಗಮನಿಸಿದರೆ ಜಾತಿ ವ್ಯವಸ್ಥೆಯ ಕಟ್ಟು ಪಾಡುಗಳು ಹೇಗೆ ಪಾಲನೆಯಾಗುತ್ತಿದ್ದವು ಎಂಬುದು ತಿಳಿಯುತ್ತದೆ. ಒಕ್ಕಲಿಗರಂತಹ ಮಧ್ಯಮ ಜಾತಿ ಸಮುದಾಯದ ಕೆಲವರು (ದೇವಯ್ಯ) ಮತಾಂತರ ಆಗುವುದರ ಮೂಲಕ ಸಾಮಾಜಿಕ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಬೇಕೆಂದು ಬಯಸಿದ್ದರೂ. ಆದರೆ ತಳ ಸಮುದಾಯ ಮತಾಂತರ ಹೀನವಾದದ್ದು ಎಂಬುದನ್ನು ಹೇಗೆ ಭಾವಿಸುತ್ತದೆ ಎಂಬುದು ಮೇಲಿನ ಅಂಶಗಳಿಂದ ತಿಳಿಯುತ್ತದೆ. ಜಾತಿ ಶ್ರೇಣಿಯಲ್ಲಿ ಮೇಲೇರುವುದು ಶ್ರೇಷ್ಠ ಎನಿಸುತ್ತದೆ. ಆದರೆ ಇಸ್ಲಾಂ ಧರ್ಮ, ಕ್ರೈಸ್ತ ಧರ್ಮ ಇವೂ ಒಂದು ಜಾತಿ ಎಂದು ಭಾವಿಸಿರುವ ತಳ ಸಮುದಾಯ ಅದಕ್ಕೆ ಮತಾಂತರವಾಗುವುದನ್ನು ಹೀನವೆಂದು ತಿರಸ್ಕರಿಸುತ್ತದೆ. ಇಂತಹ ಮನಸ್ಥಿತಿಯ ಕಾರಣ ತಳ ಸಮುದಾಯದಲ್ಲಿ ಮತಾಂತರ ಪ್ರಕ್ರಿಯೆ ವಿಫಲವಾಗಿದೆ. ಕಾರಂತರ ಚೋಮನದುಡಿಯಲ್ಲಿ ಚೋಮನಿಗೆ ಆಸ್ತಿಯ ಆಮಿಷ ತೋರಿದರೂ ಆತ ನಂಬಿದ. ಪರಂಪರಾಗತವಾದ ನಂಬಿಕೆ ಬಿಡುವುದಿಲ್ಲ. ಆದರೆ ಆತನ ಮಗ ಮತಾಂತರವಾಗಿ ಹೊಸ ಜಮೀನು ಪಡೆದು ಉಳುತ್ತಾನೆ. ಆದರೆ ಮಲೆನಾಡ ಪರಿಸರದಲ್ಲಿ ಕ್ರೈಸ್ತ ಮಿಷನರಿಗಳು ಆ ರೀತಿಯ ಆಮಿಷವನ್ನು ಮಲೆನಾಡಿನಲ್ಲಿ ತಳ ಸಮುದಾಯಕ್ಕೆ ಒಡ್ಡಲಿಲ್ಲ. ಬಹುಶಃ ಇದಕ್ಕೆ ಇನ್ನೊಂದು ಕಾರಣವನ್ನು ಗಮನಿಸಬಹುದು. ಮಲೆನಾಡ ಪರಿಸರದಲ್ಲಿರುವ ತಳ ಸಮುದಾಯ ಜನವೆಲ್ಲಾ ಆಯಾಯ ಊರಲ್ಲಿ, ಆಯಾಯ ಜಮೀನ್ದಾರನ ಸ್ವತ್ತುಗಳು. ಆದ್ದರಿಂದ ಆ ಬಗೆಯ ಸ್ವಾತಂತ್ರ್ಯಕ್ಕೆ ಅವರೆಂದೂ ಚಿಂತಿಸರು, ಬಚ್ಚನ ಆತ್ಮ ವಿಶ್ವಾಸದ ಮೂಲ ದೇವಯ್ಯನೇ ಹೊರತು ಪಾದ್ರಿಯಲ್ಲ.

ಬಚ್ಚನ ಮತಾಂತರ ಪ್ರಕ್ರಿಯೆ ಅತ್ಯಂತ ವ್ಯಂಗ್ಯವಾಗಿಯೇ ಬಂದಿದೆ. ಬಚ್ಚ ದೇವಯ್ಯ ಹೇಳಿದ ಹಾಗೆ ನಡೆಯುತ್ತಿದ್ದಾನೆ ; ಪಾದ್ರಿ ಉಪದೇಶದಿಂದಲ್ಲ. ಬಚ್ಚ ಸುಖ ಕಷ್ಟದ ಬಗ್ಗೆ ಪಾದ್ರಿ ಬೋಧನೆಯನ್ನೇನೂ

ಮಾಡಿಲ್ಲ. ನೇರವಾಗಿ ಚರ್ಚಿಗೆ ಕರೆದೊಯ್ದು ತೀರ್ಥ ನೀಡಿ ನೀನು ಕ್ರೈಸ್ತನಾದೆ, ನಿನ್ನ ಹೆಸರು ಚಕ್ರಪ್ಪಯ್ಯ, ಇನ್ನು ಮೇಲೆ ಬ್ರಾಹ್ಮಣರ ಮನೆಯಲ್ಲಿ, ಗೌಡರ ಮನೆಯಲ್ಲಿ ಹೊರಗೆ ನಿಲ್ಲಬೇಡ ಒಳಗೆಡ ಪ್ರವೇಶಿಸು ಎಂದು ಹೇಳಿಬಿಟ್ಟರೆ ಪರಂಪರಾಗತವಾದ ಬೇರನ್ನೂ ಕಿತ್ತು ಒಮ್ಮೆಲೆ ಮೇಲರಿಮೆಯನ್ನು ಪಡೆದುಕೊಂಡು ಬಚ್ಚ ಹಾಗೆ ಮಾಡಲು ಸಾಧ್ಯವೇ? ಆ ಬಗ್ಗೆ ಪಾದ್ರಿ ಯೋಚಿಸಿಲ್ಲ. ಒಂದು ಪಕ್ಷ ಪಾದ್ರಿ ಪ್ರೋತ್ಸಾಹ, ಬಲ ನೀಡಿದರೂ ಒಡೆಯನಿಷ್ಟ ಬಚ್ಚ ಹಾಗೆ ಮಾಡುಲು ಸಾಧ್ಯವೆ? ಆದ್ದರಿಂದ ಬಚ್ಚನಿಗೆ ದೇಹದ ಮೇಲೆ ಧರಿಸಿದ ಬಿಳಿ ಬಟ್ಟೆಯಂತೆ ಅವನ ಧರ್ಮ ಧಾರಣೆಯೂ ಕೂಡ. ಇಂತಹ ಸಂಗತಿಗಳು ಮತಾಂತರ ಪ್ರಕ್ರಿಯೆ ವಿಫಲವಾಗಲು ಕಾರಣ.

ಇದುವರೆಗೆ ಚರ್ಚಿಸಿದಂತೆ ಮಲೆನಾಡ ಪರಿಸರಕ್ಕೆ ಕ್ರೈಸ್ತ ಮಿಷನರಿಗಳು ಪ್ರವೇಶ ಮಾಡಿದ್ದು ಮತಾಂತರದ ಉದ್ದೇಶದಿಂದ. ಅವರ ದೃಷ್ಟಿಯಲ್ಲಿ ದಟ್ಟವಾದ ಅರಣ್ಯದಿಂದ ಕೂಡಿರುವ ನಾಡಿನಲ್ಲಿ ಬದುಕುವ ಜನಸಮುದಾಯ ಯಾವುದೋ ಬುಡಕಟ್ಟಿಗೆ ಸೇರಿದವರೆಂದೂ, ಒರಟು ಸ್ವಭಾವದವರೆಂದೂ, ಅಜ್ಞಾನಿಗಳೆಂದು, ನಾಗರಿಕತೆಯಿಲ್ಲದವರೆಂದು ಭಾವಿಸುತ್ತಾರೆ. ಈಗಾಗಲೇ ಎರಡು ಬಾರಿ ಮತಾಂತರವಾದವರನ್ನು ಮತಾಂತರಗೊಳಿಸುವುದು ಸುಲಭವೆಂದು ಮೇಲುನೋಟದ ಪರಿವೀಕ್ಷಣೆಯಲ್ಲಿ ಕಂಡುಕೊಳ್ಳುತ್ತಾರೆ. ಆದರೆ ಈ ಪರಿಸರದಲ್ಲಿ ಸಾವಿರಾರು ವರ್ಷಗಳಿಂದ ತಮ್ಮದೇ ಆದ ಐತಿಹಾಸವನ್ನು, ಸಂಸ್ಕೃತಿಯನ್ನು, ನಂಬಿಕೆ ಆಚರಣೆಗಳನ್ನು ಹೊಂದಿರುವ ಜನಸಮುದಾಯದ ಆಳವನ್ನು ಅವರು ಅರಿಯಲಿಲ್ಲ. ಇದು ಒರೆಗೆ ಹಚ್ಚಲ್ಪಟ್ಟಿದ್ದು ಕ್ರೈಸ್ತ ಮಿಷನರಿಗಳ ಪ್ರವೇಶದಿಂದ ಎನ್ನಬೇಕು. ದೊಡ್ಡ ಗುರಿಯೊಂದಿಗೆ ಪ್ರವೇಶ ಮಾಡಿದ ಕ್ರೈಸ್ತ ಮಿಷನರಿಗಳು ಈ ಪರಿಸರದ ಮುಖ್ಯ ಕೊರತೆಗಳಾದ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ಬಳಸಿಕೊಂಡು ಇಲ್ಲಿನ ಜನಸಮುದಾಯವನ್ನು ಕ್ರೈಸ್ತ ಧರ್ಮಕ್ಕೆ ಆಕರ್ಷಿಸುವ ಪ್ರಯತ್ನ ನಡೆಯುತ್ತದೆ. ವಸಾಹತುಶಾಹಿಯ ಧೋರಣೆಯಂತೆ ಅದರ ಭಾಗವಾದ ಕ್ರೈಸ್ತ ಮಿಷನರಿ ಮಲೆನಾಡ ಪರಿಸರದಲ್ಲಿ ಬಹುಸಂಖ್ಯಾತರಾದ ಒಕ್ಕಲಿಗ ಸಮುದಾಯದ ಯುವಕರನ್ನು ಸೆಳೆಯುವ ಪ್ರಯತ್ನ ಮಾಡುತ್ತಾರೆ. ಕಾರಣ ಸ್ಪಷ್ಟವಿದೆ ಒಡೆಯರು ಒಲಿದರೆ, ಆಳುಗಳನ್ನು ಒಲಿಸಿಕೊಳ್ಳುವುದು ಸುಲಭವೆಂದು. ಆದರೆ ಅವರ ಈ ಯೋಜನೆ ವಿಫಲವಾಗುತ್ತದೆ.

ಈ ಸಂಕೀರ್ಣ ಸಮಾಜದೊಳಗೆ ಸಂಬಂಧಗಳನ್ನು ಸರಳವಾದ ಮಾರ್ಗದಿಂದ ಬಿಡಿಸಲು ಸಾಧ್ಯವಿಲ್ಲ. ದೇವಯ್ಯನಂತ ಯುವಕರ ಆಸಕ್ತಿ ಬಾಹ್ಯವಾದದು ; ಆಂತರಂಗಿಕವಾಗಿಯಲ್ಲ. ಶಿಕ್ಷಣ, ಆರೋಗ್ಯ ಸೇವೆ ಪಡೆಯುವುದರ ಜೊತೆಗೆ, ಬಾಹ್ಯವಾದ ವಸ್ತು, ವೇಷಗಳಿಗೆ ಆಕರ್ಷಿತರಾದರೇ ಹೊರತು ಧರ್ಮಕ್ಕಲ್ಲ. ಕಾರಣ ಈ ಪರಿಸರದಲ್ಲಿರುವ ಜನಸಮುದಾಯ ಹೆಚ್ಚಾಗಿ ಧಾರ್ಮಿಕ ಕಾರಣಗಳಿಂದ ಶೋಷಿತರಾದವರಲ್ಲ. ಮತಾಂತರ ಪ್ರಕ್ರಿಯೆ ಈ ಪರಿಸರಕ್ಕೆ ಬಿರುಗಾಳಿಯಾಗಿ ಬರಲಿಲ್ಲ. ಆದರೆ ಕಿರುಗಾಳಿಯಾಗಿ ಬೀಸಿದೆ. ಆ ಮೂಲಕ ಹೊಸ ಬಗೆಯ ಕುತೂಹಲ, ಬೆರಗು, ತಲ್ಲಣ, ತವಕ, ಸಂಘರ್ಷ ಮೂಡಿಸಿದೆ. ಆದರೆ ವ್ಯಾಪಕ ಮಟ್ಟದಲ್ಲಿಯಲ್ಲ. ಇಲ್ಲಿನ ಸಮುದಾಯ ಮತಾಂತರ ಪ್ರಕ್ರಿಯೆಯನ್ನು ನಯವಾಗಿ ನಿರಾಕರಿಸುತ್ತಲೇ ಅದು ತಂದ ಆರೋಗ್ಯ ಸೇವೆಯನ್ನು, ಶಿಕ್ಷಣ ಸೇವೆಯನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿದೆ. ಆದಕಾರಣ ವೈಯಕ್ತಿಕ ಮಟ್ಟದಲ್ಲಿ ಸಂಘರ್ಷಗಳು, ವಿರೋಧಗಳು ನಡೆದಿರಬಹುದೇ ಹೊರತು, ಸಮೂಹ ಮಟ್ಟದಲ್ಲಿ ನಡೆಯಲಿಲ್ಲ. ಎರಡು ಸಂಸ್ಕೃತಿಗಳು

ಮುಖಾಮುಖಿಯಾದಾಗ ಅವುಗಳ ಒಳನಿರೀಕ್ಷೆಯೇ ಬೇರೆಯಾಗಿದ್ದು ; ಹೊರಗೆ ವ್ಯಕ್ತವಾಗುವ ಕ್ರಿಯೆಯೇ ಬೇರೆಯಾಗಿರುತ್ತದೆ. ಗಿರಿಯಪ್ಪಗೌಡರಂತವರು ಈ ಪರಿಸರದ ಮಕ್ಕಳ ಶೈಕ್ಷಣಿಕ ಬದುಕು ಸುಧಾರಿಸಬಹುದು ಎಂಬ ಕಾಳಜಿಯಿಂದ ಮತಾಂತರಕ್ಕೆ ಮನಸ್ಸು ಮಾಡುತ್ತಾರೆಯೇ ಹೊರತು ಧಾರ್ಮಿಕ ಬದುಕಿನ ಕೊರತೆಯಿಂದಲ್ಲ. ರಾಮಣ್ಣಗೌಡರಂತವರು ಮತಾಂತರ ಪ್ರಕ್ರಿಯೆಯನ್ನು ನಯವಾಗಿ ತಿರಸ್ಕರಿಸುತ್ತಲೇ ಕ್ರೈಸ್ತ ಮಿಷನರಿಗಳು ನೀಡುವ ಶಿಕ್ಷಣವನ್ನು ಗೌರವಿಸುತ್ತಾರೆ ; ಪ್ರೋತ್ಸಾಹಿಸುತ್ತಾರೆ.

ಕಥಾಸಾಹಿತ್ಯದಲ್ಲಿ ಬರುವ ದೇವಯ್ಯನಂತವರು ವಿಲಾಸದ ಜೀವನಕ್ಕಾಗಿ, ಸಾಮಾಜಿಕ ಪ್ರತಿಷ್ಠೆಗಾಗಿ, ಅಂತಸ್ತನ್ನು ಹೆಚ್ಚಿಸಿಕೊಳ್ಳುವ ಹಿನ್ನೆಲೆಯಲ್ಲಿ ಕ್ರೈಸ್ತ ಧರ್ಮವನ್ನು ಪರಿಭಾವಿಸುತ್ತಾನೆ. ಅದೇ ತಳ ಸಮುದಾಯದ ಗುತ್ತಿ, ದೊಡ್ಡ ಬೀರ, ಸೇಸಿಯಂತವರು ಕ್ರೈಸ್ತ ಧರ್ಮವನ್ನು ಒಂದು ಜಾತಿಯಾಗಿಯೂ, ಅದು ಕೀಳಾದದ್ದು ಎಂದು ಪರಿಭಾವಿಸುತ್ತಾರೆ. ಇಲ್ಲಿ ಮತಾಂತರ ಪ್ರಕ್ರಿಯೆ ದಲಿತ ವಿಮೋಚನೆಯ ಸಾಧ್ಯತೆಯಾಗಿ ಕಂಡು ಬರುವುದಿಲ್ಲ.

ಕುವೆಂಪು ಮಲೆನಾಡ ಮತಾಂತರ ಪ್ರಕ್ರಿಯೆಯ ಬಗ್ಗೆ ತಮ್ಮ ಕೃತಿಯಲ್ಲಿ ವ್ಯಾಪಕ ಚರ್ಚೆ ಮಾಡಿದ್ದಾರೆ. ಮಲೆನಾಡ ಪರಿಸರದ ಹಿನ್ನೆಲೆಯಲ್ಲಿ ಚರ್ಚಿಸುತ್ತಿದ್ದರೂ ಒಟ್ಟು ಭಾರತೀಯ ಸಂದರ್ಭಕ್ಕೆ ಅನ್ವಯಿಸಿ ಚರ್ಚೆಗೆ ಒಳಪಡಿಸುತ್ತಾರೆ. ಎಲ್ಲ ಧರ್ಮಗಳನ್ನು ಸಮಾನವಾಗಿ ಗೌರವಿಸುವ ಕುವೆಂಪು ಆ ಧರ್ಮಗಳಲ್ಲಿನ ಲೋಪಗಳನ್ನು, ಮೌಢ್ಯ ಕಂದಾಚಾರಗಳನ್ನು ಟೀಕಿಸಿದ್ದಾರೆ. ಸಾವಿರಾರು ವರ್ಷಗಳ ಪರಂಪರೆಯೊಳಗೆ ಬೆಳೆದು ಬರುತ್ತಿರುವ ಹಿಂದೂ ಧರ್ಮದೊಳಗೆ ಅನ್ಯಧರ್ಮದ ಪ್ರವೇಶ ಸುಲಭ ಸಾಧ್ಯವಾದದ್ದು ಇಲ್ಲಿಯ ದೌರ್ಬಲ್ಯದಿಂದ ಎಂದು ಕುವೆಂಪು ಚಿಂತಿಸುವಂತೆಯೇ ಅನಂತಮೂರ್ತಿ ಅವರ ಚಿಂತನೆ ಕೂಡ ಇದೆ. ಇಂದು ಮತಾಂತರದ ಬಗ್ಗೆ ನಡೆಯುತ್ತಿರುವ ಚರ್ಚೆಯನ್ನು ಗಮನಿಸಿದರೆ (ಇತ್ತೀಚೆಗೆ ಬೈರಪ್ಪನವರ ಹೇಳಿಕೆ ಬಗ್ಗೆ ನಡೆದ ಮತಾಂತರ ಸಂವಾದ ಗಮನಿಸಿದಾಗ) ವಿಶ್ವಮಾನವರಾದ ಕುವೆಂಪು ಅವರ ಚಿಂತನೆ ಇವರಿಗಿಂತ ಬಹಳ ಮುಂದಿದೆ ಎಂಬುದನ್ನು ಕಾಣಬಹುದು.

ಹೀಗೆ ಮಲೆನಾಡ ಪರಿಸರ ತನ್ನ ಅನನ್ಯತೆಯನ್ನು ಉಳಿಸಿಕೊಳ್ಳುತ್ತಲೇ ಬದಲಾವಣೆಗೆ ತನ್ನನ್ನು ತೆರೆದುಕೊಂಡಿದ್ದರಿಂದ ಇಲ್ಲಿನ ಜೀವನ ಕ್ರಮದಲ್ಲಿ ಸ್ಥಿತ್ಯಂತರಗಳಾಗುತ್ತಾ ಬಂದಿದೆ.

ಅಡಿ ಟಿಪ್ಪಣಿ

೧. ತ್ಯಾನಂದೂರು ಪುಟ್ಟಣ್ಣ ವೈ.ಎಸ್. ನಾಕಂಡ ಮಲೆನಾಡು, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಶಿವಮೊಗ್ಗ, ೧೯೯೭ ಪುಟ : ೨೦೩.

೨. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೩೫೩

೩. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ –

೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೩೫೪, ೩೫೫, ೩೫೭

೪. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೨೬೬

೫. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೩೫೮

೬. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೫೭.

೭. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೩೫೪, ೩೫೫, ೩೫೬.

೮. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೩೬೭.

೯. ಗಣೇಶ್.ಯು.ಹೆಚ್., ದೂರರ್ಶಿತ್ವದ ಪ್ರಜ್ಞಾಕೇಂದ್ರ, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧,ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೧೧೪.

೧೦. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು ೧೯೯೨, ಪುಟ: ೩೨೦.

೧೧. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೩೭೧

೧೨. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ : ೩೬೨.

೧೩. ಕುವೆಂಪು, ನೆನಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩, ಪುಟ:೮೬೬

೧೪. ಕುವೆಂಪು, ನೆನಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩, ಪುಟ:೨೧

೧೫. ಕುವೆಂಪು, ನೆನಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩, ಪುಟ:೨೩

೧೬. ಕುವೆಂಪು, ನೆನಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩, ಪುಟ:೨೩

೧೭. ಕುವೆಂಪು, ನೆನಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩, ಪುಟ:೨೪

೧೮. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೯೬

೧೯. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೯೭

೨೦. ಕುವೆಂಪು, ನೆನಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩, ಪುಟ:೭೬೬

೨೧. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ :೧೯೯, ೨೦೦

೨೨. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೫೧

೨೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೬೪

೨೪. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೨೦೯

೨೫. ಟಿ.ಪಿ.ಅಶೋಕ, ಕುವೆಂಪು ಕಾದಂಬರಿ : ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೪, ಪುಟ : ೬೨, ೬೩

೨೬. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೫೮

೨೭. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೨೦೬

೨೮. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೯೬

೨೯. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೯೭

೩೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೯೬

೩೧. ಅಶೋಕ ಟಿ.ಪಿ., ಕುವೆಂಪು ಕಾದಂಬರಿ : ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪, ಪುಟ : ೬೩

೩೨. ಕುವೆಂಪು, ಕ್ರಿಸ್ತನಲ್ಲ ಪಾದ್ರಿಯ ಮಗಳು, ಸಂನ್ಯಾಸಿ ಮತ್ತು ಇತರ ಕಥೆಗಳು, ಉದಯರವಿ ಪ್ರಕಾಶನ, ೧೯೯೧, ಪುಟ : ೨೨

೩೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೬೪೯

೩೪. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ೨೦೦೨, ಪುಟ : ೩೬೫.

೩೫. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ : ೩೦೧, ೩೦೯, ೨೦೩, ೨೦೯, ೨೫೧.

೩೬. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ : ೬೯೪, ೬೯೫.

೩೭. ಚಿದಾನಂದಗೌಡ.ಕೆ ಮತಾಂತರ ಸಂವಾದ, ವಿಜಯ ಕರ್ನಾಟಕ ದಿನಪತ್ರಿಕೆ ೨೫.೧೦.೨೦೦೮

೩೮. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ : ೬೮೫

೩೯. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೬೪೭

೪೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೮೫

೪೧. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೧೫೬

೪೨. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೨೪೮

೪೩. ಅನಂತಮೂರ್ತಿ.ಯು.ಆರ್, ಘಟಶ್ರಾದ್ಧ, ಐದು ದಶಕದ ಕಥೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು ೨೦೦೧, ಪುಟ:೨೦೦.

೪೪. ಇಂದಿರಾ.ಎಂ.ಕೆ., ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೧೦೫.

೪೫. ಅಶೋಕ.ಟಿ.ಪಿ., ಅನಂತಮೂರ್ತಿ.ಯು.ಆರ್. ಒಂದು ಅಧ್ಯಯನ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೪೮

೪೬. ಇಂದಿರಾ.ಎಂ.ಕೆ., ತಗ್ಗಿನಮನೆ ಸೀತೆ, ಪ್ರಕಾಶ ಸಾಹಿತ್ಯ, ಬೆಂಗಳೂರು, ೨೦೦೪, ಪುಟ:೪೩.

೪೭. ಬಿಳುಮನೆ ರಾಮದಾಸ್, ವ್ಯಾಮೋಹ, ಮಲೆನಾಡು ಪ್ರಕಾಶನ, ಬೆಂಗಳೂರು, ೧೯೯೦, ಪುಟ:೧೩.

೪೮. ರಾಜಾರಾಮ ಹೆಗಡೆ, ಕುವೆಂಪು ಕಾದಂಬರಿಗಳಲ್ಲಿ ವಸಾಹತುಶಾಹಿ ಅನುಭವ ಸ್ವರೂಪ, ಕುವೆಂಪು ಕಾದಂಬರಿಗಳು, ಗುರುಪಾದ ಮರಿಗುದ್ದಿ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೪, ಪುಟ:೨೭೮.

೪೯. ಕುವೆಂಪು, ನೆನಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩, ಪುಟ:೭೬೫

೫೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ : ೧೯೯, ೨೦೦, ೪೨೪, ೧೭೦, ೪೮೫.

ಅಧ್ಯಾಯ ೩

ಇಂಗ್ಲಿಷ್ ಶಿಕ್ಷಣದ ಪ್ರವೇಶ : ಕಥಾಸಾಹಿತ್ಯ

ಅಧ್ಯಾಯ ೩. ಇಂಗ್ಲಿಷ್ ಶಿಕ್ಷಣದ ಪ್ರವೇಶ : ಕಥಾಸಾಹಿತ್ಯ

ಯಾವುದೇ ಸಮಾಜ ನಿಂತನೀರಲ್ಲ. ನಿರಂತರ ಬದಲಾವಣೆಯನ್ನು ಕಾಲ ಪ್ರವಾಹದಲ್ಲಿ ಪಡೆದುಕೊಳ್ಳುತ್ತಾ ಹೋಗುವುದು ಆ ಸಮಾಜದ ಜೀವಂತ ಲಕ್ಷಣ. ಈ ಪ್ರಕ್ರಿಯೆಯಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾದುದು. ಇಂದು ನಮ್ಮ ದೇಶದಲ್ಲಿ ಅಳವಡಿಸಿಕೊಂಡಿರುವ ಶಿಕ್ಷಣ ಪದ್ಧತಿ ಇಂಗ್ಲಿಷ್ ಶಿಕ್ಷಣದ ಮಾದರಿಯಿಂದ ರೂಪಿಸಿಕೊಂಡಿರುವಂತಹದು. ಈ ದೇಶದಲ್ಲಿ ಸಾವಿರಾರು ವರ್ಷಗಳಿಂದ ದೇಶೀಯ ಮಾದರಿಯ ಶಿಕ್ಷಣ ಪದ್ಧತಿಯೊಂದು ಬೆಳೆದು ಬಂದಿತ್ತು. ಅದನ್ನು ಇತಿಹಾಸ ಗುರುತಿಸುತ್ತದೆ. ಪ್ರಾಚೀನ ಭಾರತದ ಎಲ್ಲ ಜೀವನ ಕ್ಷೇತ್ರಗಳಿಗೆ ಆಧ್ಯಾತ್ಮವೇ ತಳಹದಿಯಾದಂತೆ ಶಿಕ್ಷಣಕ್ಕೂ ಅದೇ ತಳಹದಿಯಾಗಿತ್ತು. ಪವಿತ್ರ ಧಾರ್ಮಿಕ ಗ್ರಂಥದ ಕಂಠಪಾಠ ಮಾಡಿ ಮುಂದಿನ ಪೀಳಿಗೆಗೆ ಹಸ್ತಾಂತರ ಮಾಡುವುದು ಆ ಶಿಕ್ಷಣ ಕ್ರಮದ ಪ್ರಧಾನ ಉದ್ದೇಶವಾಗಿತ್ತು. ಬರವಣಿಗೆ ಎಂಬುದು ಅಸ್ತಿತ್ವಕ್ಕೆ ಬರತೊಡಗಿದಂತೆ ವೈಯಕ್ತಿಕತೆ, ವೈವಿಧ್ಯ, ವೈಶಿಷ್ಟ್ಯಗಳು ಶಿಕ್ಷಣ ಪದ್ಧತಿಯಲ್ಲಿ ಕಾಣಿಸಿಕೊಳ್ಳತೊಡಗಿತೋ ಆಗ ಈ ಹಿನ್ನಲೆಯಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ರೀತಿ ನೀತಿಗಳ ನಿರೂಪಣೆಗೆ ಪುರಾಣಗಳು, ಕಥೆ-ಕಾವ್ಯಗಳು ಸೃಷ್ಟಿಯಾಗತೊಡಗಿ ಅವು ಶಿಕ್ಷಣದ ಭಾಗವಾದವು. ಕಸುಬಿನ ಹಿನ್ನಲೆಯಲ್ಲಿ ವರ್ಣಾಶ್ರಮ ಪದ್ಧತಿ, ಜಾತಿ ಪದ್ಧತಿ ಬೆಳೆದಂತೆ, ಆಯಾಯ ಜಾತಿ ಸಮುದಾಯಗಳು ಮಾಡುವ ಜೀವನೋಪಾಯಕ್ಕೆ ಪೂರಕವಾದ ಶಿಕ್ಷಣಗಳು ಸೇರಿಕೊಂಡು ಒಟ್ಟು ಆಧ್ಯಾತ್ಮಿಕ ಮತ್ತು ಲೌಕಿಕ ಎರಡೂ ಜೀವನ ಕ್ರಮವನ್ನು ರೂಪಿಸುವ ಮಾದರಿಯಾಗಿ ವಿಶಾಲವಾದ ಅರ್ಥದಲ್ಲಿ ಶಿಕ್ಷಣ ಎಂಬುದು ಪ್ರಾಚೀನ ಕಾಲದಲ್ಲಿ ಒಳಗೊಂಡಿತ್ತು.

ಪರಂಪರಾಗತವಾದ ಶಿಕ್ಷಣ ಕ್ರಮ

ಪ್ರಾಚೀನ ಕಾಲದಿಂದ ಭಾರತೀಯ ಶಿಕ್ಷಣ ಪದ್ಧತಿ ನಡೆದು ಬಂದ ಬಗೆಯನ್ನು ಅವಲೋಕಿಸಿದರೆ, ಆಶ್ರಮ ಅಥವಾ ಗುರುಕುಲಗಳಲ್ಲಿ ವೈದಿಕ ಶಿಕ್ಷಣ ಪದ್ಧತಿ ರೂಢಿಯಲ್ಲಿತ್ತು. ಕ್ರಿಸ್ತ ಪೂರ್ವದಲ್ಲೇ ಬೌದ್ಧರು ಸಂಘಾರಾಮಗಳಲ್ಲಿ, ಜೈನರು 'ಬಸದಿ'ಗಳಲ್ಲಿ ಶಿಕ್ಷಣ ನೀಡುತ್ತಿದ್ದರೂ ಅವು ವೈದಿಕ ಶಿಕ್ಷಣ ಪದ್ಧತಿಗೆ ಪರಕೀಯವಾಗದೇ ಒಟ್ಟು ಭಾರತೀಯರ ಜೀವನ ಕ್ರಮದಲ್ಲಿ ಬೆರತು ಹೋದವು. ಜೈನ, ಬೌದ್ಧ ಸಂಸ್ಥೆಗಳು ಜಾತ್ಯತೀತವಾಗಿ ಶಿಕ್ಷಣವನ್ನು ನೀಡಲು ಪ್ರಯತ್ನಿಸಿದರೂ ಅಂತಹ ಯಶಸ್ಸು ಕಾಣಲಿಲ್ಲ. ಸುಸಂಸ್ಕೃತ ಶ್ರೀಮಂತ ಕುಟುಂಬಗಳಲ್ಲಿ ಅರಮನೆಗಳಲ್ಲಿ ಸ್ತ್ರೀಯರಿಗೆ ಶಿಕ್ಷಣದ ಅವಕಾಶವಿತ್ತೇ ಹೊರತು ಮಹಿಳೆಯರಿಗೆ ಯಾವ ವ್ಯವಸ್ಥಿತ ಶಿಕ್ಷಣ ಸೌಲಭ್ಯವೂ ಇರಲಿಲ್ಲ.

ಹೀಗೆ ಸುಮಾರು ಒಂದೂವರೆ ಸಾವಿರ ವರ್ಷಗಳಿಂದ ಏಕ ಪ್ರಕಾರವಾಗಿ ಕೆಲವರಿಗೆ ಮಾತ್ರ ಸೀಮಿತವಾಗಿ ಹರಿದುಬಂದ ದೇಶೀ ಶಿಕ್ಷಣ ಪದ್ಧತಿ ಮೊದಲು ಆಘಾತ ಅನುಭವಿಸಿದ್ದು, ಮುಸ್ಲಿಂ ಶಿಕ್ಷಣದ ಆಗಮನದಿಂದ. 'ವಕ್ತಾಬ್' ಎಂಬ ಪ್ರಾಥಮಿಕ ಶಾಲೆಗಳು, ಮದರಸಾ ಎಂಬ ಉನ್ನತ ಶಿಕ್ಷಣ ಸಂಸ್ಥೆಗಳು ಆರಂಭವಾದವು. ಅದರ ಹಿನ್ನೆಲೆಯಲ್ಲೇ ಪರ್ಷಿಯನ್ ಶಿಕ್ಷಣವೂ ಬಂತು. ಆದರೆ ನಿರಂತರ ಕದನಗಳು, ರಾಜಕೀಯ ಅಸ್ಥಿರತೆ ಮೊದಲಾದ ಕಾರಣಗಳಿಂದ ಆ ಶಿಕ್ಷಣವು ದೇಶೀಯ ಶಿಕ್ಷಣ ಕ್ರಮದ ಮೇಲೆ ಪ್ರಭಾವ ಬೀರಿದರೂ ಬುಡವನ್ನೇ ಅಲುಗಾಡಿಸಲು ಸಮರ್ಥವಾಗಲಿಲ್ಲ.

ಹೊಸ ಶಿಕ್ಷಣ ಪದ್ಧತಿ

ಬ್ರಿಟೀಷರ ಆಗಮನ, ಆ ಮೂಲಕ ಬಂದ ಪಶ್ಚಿಮದ ನಾಗರಿಕತೆಯ ಗಾಳಿ ಬೀಸ ತೊಡಗಿದಾಗ ಈ ನೆಲದ ಶಿಕ್ಷಣದ ದಿಕ್ಕು ದೆಸೆಗಳಲ್ಲಿ ತೀವ್ರತರವಾದ ಸಂಚಲನಗಳು ಮಾರ್ಪಾಡುಗಳು ಉಂಟಾದವು. ಇಂಗ್ಲಿಷರು ವ್ಯಾಪಾರದ ಗುರಿಯೊಂದಿಗೆ ೧೬ನೇ ಶತಮಾನದಲ್ಲಿಯೇ ಆಗಮಿಸಿದರೂ ಇಲ್ಲಿಯ ಸಂಪೂರ್ಣ ರಾಜಕೀಯ ಹಿಡಿತ ಸಾಧಿಸಿಕೊಂಡದ್ದು, ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದ್ದು ೧೯ನೇ ಶತಮಾನದಲ್ಲಿ. ಹಾಗೆ ಭಾರತಕ್ಕೆ ಪಾಶ್ಚಾತ್ಯ ಸಂಪರ್ಕವು ನಾಲ್ಕು ಬಗೆಯಲ್ಲಿ ಒದಗಿ ಬಂತು ಎಂಬುದನ್ನು 'ಶ್ರೀನಿವಾಸ ಹಾವನೂರು' ಅವರು ಹೀಗೆ ಗುರುತಿಸುತ್ತಾರೆ.[೧]

೧. ಆಡಳಿತ ವ್ಯವಹಾರ

೨. ಮುದ್ರಣಯಂತ್ರ

೩. ಕ್ರಿಸ್ತಮತ ಪ್ರಚಾರ

೪. ಹೊಸ ಶಿಕ್ಷಣ ಪದ್ಧತಿ ಮತ್ತು ಹೊಸ ವಿಚಾರ ಸರಣಿ.

ಬಂಗಾಲದ ಸಿರಾಜುದ್ದೌಲನು ಕ್ರಿ.ಶ. ೧೭೫೭ರಂದು ಪ್ಲಾಸಿ ಕದನದಲ್ಲಿ ಸೋತಂದಿನಿಂದ ಪ್ರಾರಂಭವಾದ ಬ್ರಿಟಿಷರು ಸಾಧಿಸಿಕೊಂಡ ಈ ದೇಶದ ರಾಜಕೀಯ ಹಿಡಿತ, ಕ್ರಿ.ಶ.೧೮೧೮ರ ಖಡಕಿಯ ಯುದ್ಧದಲ್ಲಿ ಪೇಶ್ವೆಯವರ ಸೋಲಿನೊಂದಿಗೆ ಹೆಚ್ಚು ಕಡಿಮೆ ಇಡಿ ಭಾರತದ ರಾಜಕೀಯ ಹಿಡಿತವನ್ನು ಪೂರ್ಣವಾಗಿ ಸಾಧಿಸಿಕೊಂಡರು. ಅವರು ತಂದ ಮುದ್ರಣಯಂತ್ರ ಭಾರತೀಯ ಶೈಕ್ಷಣಿಕ–ಸಾಹಿತ್ಯದ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟು ಮಾಡಿತು. ಈ ದೇಶದ ರಾಜಕೀಯವನ್ನು ತಮ್ಮ ವಶಕ್ಕೆ ತೆಗೆದುಕೊಂಡ ಮೇಲೆ ಭಾರತವನ್ನು ಆಳುವ ಇಂಗ್ಲಿಷ್ ಪ್ರಭುಗಳ ಮತ್ತು ಭಾರತೀಯರ ಮಧ್ಯಸ್ಥಗಾರನಾಗಿ ಕಾರ್ಯ ನಿರ್ವಹಿಸಬಲ್ಲ ನೌಕರ ಕುಶಲಿಗಳನ್ನು ತಯಾರು ಮಾಡುವ ಜರೂರು ಉಂಟಾಯಿತು. ಈ ದೇಶದ ಸಂಸ್ಕೃತಿ, ಚರಿತ್ರೆ ಭಾಷೆಗಳನ್ನು ತಿಳಿಯಲು ಮತ್ತು ಆಧುನಿಕ ಶಿಕ್ಷಣವನ್ನು ನೀಡಲು ಹಲವಾರು ಕ್ರೈಸ್ತ ಮಿಷನರಿ ಸಂಸ್ಥೆಗಳು ಈ ದೇಶವನ್ನು ಪ್ರವೇಶಿಸಿದವು.

ಕರ್ನಾಟಕಕ್ಕೆ ಬಂದಿದ್ದ ಮಿಷನರಿಗಳೆಂದರೆ ಜೆಸುಯಿಟ್ ಸೊಸೈಟಿ, ಲಂಡನ್ ಮಿಶನ್ ವೆಸ್ಲಿಯನ್ ಮೆಥಾಡಿಸ್ಕ್ ಮಿಶನ್ ಹಾಗೂ ಜರ್ಮನ್ ಬಾಸೆಲ್ ಮಿಶನ್. ಈ ಮಿಷನರಿಗಳ ಶಿಕ್ಷಣ ಸೇವೆ ಮತ್ತು ಆರೋಗ್ಯ ಸೇವೆಯ ಹಿಂದೆ ಕ್ರೈಸ್ತ ಧರ್ಮದ ಪ್ರಸಾರ, ಮತಾಂತರ ಪ್ರಕ್ರಿಯೆಯ ಉದ್ದೇಶ ಹೊಂದಲಾಗಿತ್ತು. ೧೮೩೫ರಲ್ಲಿ ಮೆಕಾಲೆ ವರದಿಯಂತೆ ಇಂಗ್ಲಿಷ್ ಶಿಕ್ಷಣ ಅಥವಾ ಆಧುನಿಕ ಶಿಕ್ಷಣ ಕ್ರಮ ಅಧಿಕೃತವಾಗಿ ಜಾರಿಗೆ ಬಂತು. ಅಂದಿನ ಗವರ್ನರ್ ಲಾರ್ಡ್ ವಿಲಿಯಂ ಬೆಂಟಿಂಕ್ ಭಾರತದ ಜನತೆಗೆ ಇಂಗ್ಲೀಷ್ ಮಾಧ್ಯಮದ ಮೂಲಕ ಐರೋಪ್ಯ ಜ್ಞಾನ, ಸಾಹಿತ್ಯಾದಿಗಳನ್ನು ಬೋಧಿಸುವುದೇ ಬ್ರಿಟೀಷ್ ಸರ್ಕಾರದ ಉದ್ದೇಶವೆಂದು ಘೋಷಿಸಿದ ಮೇಲೆ ಭಾರತದಾದ್ಯಂತ ಇಂಗ್ಲಿಷ್ ಶಿಕ್ಷಣ ಪದ್ಧತಿ ಹರಡುತ್ತಾ ಬಂತು.[೨]

ಆದರೆ ಮೆಕಾಲೆ ರೂಪಿಸಿದ ಶಿಕ್ಷಣ ಕ್ರಮದ ನಿಜವಾದ ಪ್ರತಿಫಲ ನಿರೀಕ್ಷೆ ಏನೆಂದರೆ ಇಂಗ್ಲಿಷರ ಆಡಳಿತಯಂತ್ರಕ್ಕೆ ಗುಮಾಸ್ತರನ್ನು ತಯಾರು ಮಾಡುವುದು. ಇದರ ಪರಿಣಾಮ ದೇಶೀಯ ಶಿಕ್ಷಣ

ಪದ್ಧತಿ ಮಾಯವಾಗುತ್ತಾ ಹೋಯಿತು.

ಇದನ್ನು ಕುವೆಂಪು ನೆನಪಿನ ದೋಣಿಯಲ್ಲಿ ಹೀಗೆ ದಾಖಲಿಸಿದ್ದಾರೆ –

"ಆಗ ತಾನೆ ಸಮಗ್ರ ಭರತ ಖಂಡದಲ್ಲಿ ಸುಸ್ಥಾಪಿತವಾದ ಬ್ರಿಟಿಷ್ ಸಾಮ್ರಾಜ್ಯ ಚೆನ್ನಾಗಿ ಬೇರು ಬಿಡಲು ತೊಡಗಿದ್ದ ಕಾಲ. ಆಡಳಿತ ವ್ಯವಸ್ಥೆಯನ್ನು ಕ್ರಮಗೊಳಿಸಿದ ಆಳರಸರು ಅದನ್ನು ಸುಗಮವಾಗಿ ತಮ್ಮ ಇಚ್ಛೆಯಂತೆ ನಡೆಸಿಕೊಂಡು ಹೋಗಲು ನಮ್ಮವರನ್ನೇ ದುಡಿಯುವ ಆಳುಗಳಾಗಿ ಮಾಡಲು ನಿರ್ಧರಿಸಿ ಅದಕ್ಕೆ ಅನುಕೂಲವೂ ಅನುರೂಪವೂ ಆದ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತಂದರು. ಅದರಲ್ಲಿ ಅತ್ಯಂತ ಪ್ರಮುಖವಾದದ್ದು ಮತ್ತು ಬಹುಕಾಲ ಪರಿಣಾಮಕಾರಿಯಾದದ್ದು ಇಂಗ್ಲಿಷ್ ಭಾಷೆಯ ಕಲಿಕೆ ಮತ್ತು ಇಂಗ್ಲೀಷ್ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಅಂಗೀಕರಿಸಿದ್ದು."[೩]

ಭಾರತೀಯರಿಗೆ ಬೇಕಾದ ಶಿಕ್ಷಣವನ್ನು ಇಂಗ್ಲೀಷರು ನೀಡಲಿಲ್ಲ ; ಇಂಗ್ಲಿಷರ ಗುಲಾಮಗಿರಿಗೆ ಬೇಕಾದ ಶಿಕ್ಷಣವನ್ನು ಭಾರತೀಯರಿಗೆ ನೀಡಿದರು. ಅದು ಬಹುಕಾಲ ಪರಿಣಾಮಕಾರಿಯಾದದ್ದು ಎಂಬ ಕುವೆಂಪು ಅವರ ದೂರದರ್ಶಿತ್ವದ ಮಾತು ಎಷ್ಟು ಸತ್ಯವಾದದು ಎಂಬುದು ನಮ್ಮ ಇಂದಿನ ಸಂದರ್ಭವನ್ನೇ ಗಮನಿಸಬಹುದು. ಇಂಗ್ಲಿಷ್ ಕಲಿಕೆ ಮತ್ತು ಭಾಷಾ ಮಾಧ್ಯಮವಾಗಿ ಆಳ ಮತ್ತು ವಿಸ್ತಾರವಾಗಿ ಭಾರತೀಯ ಪರಿಸರದಲ್ಲಿ ಬೆಳೆಯುತ್ತಿರುವುದನ್ನು ನೋಡಿದಾಗ ಆ ಮಾತು ಸತ್ಯವಾಗಿದೆ. ಇಂದಿನ ಸಾಫ್ಟವೇರ್ ಜಗತ್ತಿನ ಶಿಕ್ಷಣ ಅಮೇರಿಕಾದಂತಹ ದೇಶಗಳಿಗೆ ಅನುಕೂಲವೂ ಅನುರೂಪವೂ ಆದ ವಿದ್ಯಾಭ್ಯಾಸ ಪದ್ಧತಿಯಾಗಿ ಹೇಗೆ ರೂಪ ತಾಳಿದೆಯೋ ಹಾಗೆ ಅಂದು ಇಂಗ್ಲಿಷ್ ಶಿಕ್ಷಣತಂದಂಹ ಪರಿಸರವೂ ಅದೇ ರೀತಿ ರೂಪ ತಾಳಿತ್ತು.

ಪರಿಣಾಮಕಾರಿಯಾಗಿಯೇ ಭಾರತದಲ್ಲಿ ಶಿಕ್ಷಣದ ಪ್ರಸಾರದ ಹೊಣೆ ಹೊತ್ತ ಕ್ರೈಸ್ತ ಮಿಷನರಿಗಳಿಗೆ ಹಿಂದೆ ಹೇಳಿದಂತೆ ಎರಡು ಉದ್ದೇಶವಿತ್ತು. ಒಂದು, ಬ್ರಿಟೀಷರ ಆಡಳಿತ ಯಂತ್ರಕ್ಕೆ ದುಡಿಯಬಲ್ಲ ಅಕ್ಷರಸ್ಥ ಕೆಲಸದಾಳುಗಳನ್ನು ತಯಾರು ಮಾಡುವುದು. ಇನ್ನೊಂದು, ಅಕ್ಷರ ಪ್ರಪಂಚದಿಂದ ಶತಶತಮಾನಗಳಿಂದಲೂ ದೂರವಿದ್ದ ಜನ ಸಮುದಾಯಕ್ಕೆ ಅಕ್ಷರ ಜ್ಞಾನದ ಬೆಳಕನ್ನು ನೀಡುವ ನೆಪದಲ್ಲಿ ಮತಾಂತರಗೊಳಿಸುವ ಹುನ್ನಾರ ಅಡಗಿತ್ತು. ಈ ಉದ್ದೇಶ, ಗುರಿಗಳ ಪರಿಣಾಮವೇನೇ ಇರಲಿ ಶ್ರೇಣೀಕೃತ ಭಾರತೀಯ ಸಮಾಜದಲ್ಲಿ ಅಕ್ಷರ ಲೋಕದಿಂದ ದೂರಯಿಡಲ್ಪಟ್ಟಿದ್ದ ಬಹುಸಂಖ್ಯಾತ ಸಮುದಾಯಗಳಿಗೆ ಕ್ರೈಸ್ತ ಮಿಷನರಿಗಳ ಶಿಕ್ಷಣ ಚಟುವಟಿಕೆ ಬೆಳಕಾಗಿ ಬಂದು ಭಾರತೀಯರ ಬದುಕಿನಲ್ಲಿ ತೀವ್ರತರವಾದ ಸಂಚಲನವನ್ನು, ಸ್ಥಿತ್ಯಂತರವನ್ನು ತಂದಿತು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುವ ಸಂಗತಿಯಾಗಿದೆ. ಬ್ರಿಟಿಷರು ಬರದಿದ್ದರೆ ತಾನು ಮೇಲುಜಾತಿಯವರ ಮನೆಯ ಕೊಟ್ಟಿಗೆಯಲ್ಲಿ ಸಗಣಿ ಬಳಿಯುತ್ತಿರುತ್ತಿದ್ದೆ ಎಂದು ಒಂದು ಕಡೆ ಕುವೆಂಪು ಹೇಳಿದ್ದನ್ನು ನೆನೆಯಬಹುದು. ಮಲೆನಾಡಿನ ಬದುಕಿನ ಬಗ್ಗೆ ತ್ಯಾನಂದೂರು ಪುಟ್ಟಣ್ಣನವರು ಬರೆದ 'ನಾ ಕಂಡ ಮಲೆನಾಡು' ಕೃತಿಯನ್ನು ಮಲೇರಿಯಾ ರೋಗದ ಐರೋಪ್ಯ 'ರೋನಾಲ್ಡ್‌ರಾಸ್' ಅವರಿಗೆ ಅರ್ಪಿಸಿದ್ದಾರೆ. ಇದು ಬಹುಸಂಖ್ಯಾತ ಭಾರತೀಯರು ಆಧುನಿಕತೆಯನ್ನು ಬರಮಾಡಿಕೊಂಡ ರೀತಿ. ಆದ್ದರಿಂದ ಪರಕೀಯ ಶಿಕ್ಷಣ ಭಾರತೀಯರಿಗೆ ಪರಕೀಯವಾಗದೆ ಇಲ್ಲಿನವರು ಆಶೋತ್ತರಗಳನ್ನು ಅನುಸರಿಸಿಕೊಂಡು, ಹೊಸತನಕ್ಕೆ ಹೊಂದಿಕೊಂಡು,

ನಮ್ಮ ಒಟ್ಟು ಬದುಕಿಗೆ ಒಪ್ಪುವಂತೆ ರೂಪಗೊಂಡು ಬೆಳೆಯುತ್ತಿದೆ.

ಆಧುನಿಕ ಶಿಕ್ಷಣ ಪದ್ಧತಿ ಆಗಮನದ ಪೂರ್ವ

ಸಾಮಾಜಿಕವಾಗಿ ಮೇಲುಸ್ತರದಲ್ಲಿದ್ದ ಬ್ರಾಹ್ಮಣ ಸಮುದಾಯದ ಮಕ್ಕಳಿಗೆ ಮಠಗಳಲ್ಲಿ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಲಿಯುವಂತಹ ಅವಕಾಶವಿತ್ತು. ಕಾಶಿಯವರೆಗೂ ಹೋಗಿ ಕಲಿತವರಿದ್ದರು. ೧೯ನೇ ಶತಮಾನದ ಕೊನೆ ಹಾಗೂ ೨೦ನೇ ಶತಮಾನದ ಆರಂಭ ಘಟ್ಟದ ಕಾಲಕ್ಕಾಗಲೇ ಮಲೆನಾಡ ಪರಿಸರದ ಅನುಕೂಲಸ್ಥ ಶೂದ್ರ ಕುಟುಂಬಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂಬ ಕಾಳಜಿ ಮೂಡಿತ್ತು. ಪಾಶ್ಚಾತ್ಯ ಸಂಪರ್ಕಕ್ಕೆ ಮುಂಚೆ ನಾಡಿನಲ್ಲಿ ಪ್ರಾಥಮಿಕ ಸ್ವರೂಪದ ಶಿಕ್ಷಣವನ್ನು ನೀಡುವ ಶಾಲಾಮಠಗಳು ಬಹುತೇಕ ಎಲ್ಲ ಹಳ್ಳಿಗಳಲ್ಲಿದ್ದವು. ಮಲೆನಾಡಿನಲ್ಲಿ ಹೆಚ್ಚಾಗಿ ಅವಿಭಕ್ತ ಕುಟುಂಬವಾದುದರಿಂದ ತಮ್ಮ ತಮ್ಮ ಮನೆಗಳಲ್ಲೋ, ಕೇಂದ್ರ ಸ್ಥಾನದಲ್ಲಿರುವ ಮನೆಗಳಲ್ಲೊ ಅಕ್ಷರ ಜ್ಞಾನವನ್ನು ಬಲ್ಲವರನ್ನು ಎಲ್ಲಿಂದಲೊ (ಸಾಮಾನ್ಯವಾಗಿ ದಕ್ಷಿಣ ಕನ್ನಡದಿಂದ) ಕರೆತಂದು ಮಕ್ಕಳಿಗೆ ಪಾಠ ಹೇಳಲು ನೇಮಿಸುತ್ತಿದ್ದರು, ಅವರೇ ಐಗಳು. ಅವರು ಪಾಠ ಹೇಳುವ ಸ್ಥಳವೇ ಐಗಳ ಶಾಲೆ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೋಣೂರು ರಂಗಪ್ಪಗೌಡರ ಮನೆಯಲ್ಲಿ ಐಗಳ ಶಾಲೆ ಇರುವುದು. ಅಲ್ಲಿ ಹಳೆಮನೆ ಮಕ್ಕಳು, ಬೆಟ್ಟಳ್ಳಿ ಮಕ್ಕಳು ಕಲಿಯುತ್ತಿರುವ ಪ್ರಸ್ತಾಪವನ್ನು ಗಮನಿಸಬಹುದು. ಇದು ಮಲೆನಾಡ ಜನ ಕಂಡುಕೊಂಡ ಒಂದು ಶೈಕ್ಷಣಿಕ ವ್ಯವಸ್ಥೆ. ಇಲ್ಲಿಯ ಶಾಲೆಗಳಲ್ಲಿ ಓದು, ಬರಹ, ಗಣಿತ ಈ ಪ್ರಾಥಮಿಕ ವಿಷಯಗಳ್ನು ಹೆಚ್ಚಿನ ವೆಚ್ಚವಿಲ್ಲದೆ ಕಲಿಸಲಾಗುತ್ತಿತ್ತು. ಶೀಲ ಸಂವರ್ಧನೆಯ ದೃಷ್ಟಿಯಿಂದ ರಾಮಾಯಣ–ಮಹಾಭಾರತಗಳ ಓದನ್ನು ಕಲಿಸಲಾಗುತ್ತಿತ್ತು. ಮಲೆನಾಡಿನ ಪರಿಸರದಲ್ಲಿ 'ಜೈಮಿನಿ ಭಾರತ' ಕೃತಿ ಬಹುತೇಕ ಅಕ್ಷರದ ಅರಿವಿರುವ ಶ್ರೀಮಂತರ ಮನೆಗಳಲ್ಲಿರುವುದು ಸರ್ವೇಸಾಮಾನ್ಯವಾದ ಸಂಗತಿಯಾಗಿತ್ತು.

ಈ ಐಗಳ ಶಾಲೆಯ ಗುರುಗಳು ಯಾವುದೇ ತರಬೇತಿ ಪಡೆದವರಲ್ಲ ; ಓದು ಬರಹ ಬಲ್ಲವರಷ್ಟೆ. ಇಂತವರನ್ನು ಮಲೆನಾಡಿಗಿಂತ ಸ್ವಲ್ಪ ಆಧುನಿಕವಾಗಿ, ಶೈಕ್ಷಣಿಕವಾಗಿ ಮಂಚೂಣಿಯಲ್ಲಿದ್ದ ಘಟ್ಟದ ಕೆಳಗಿನ ಕರಾವಳಿ ಪರಿಸರದಿಂದ ಕರೆತರಲಾಗುತ್ತಿತ್ತು. ಮಕ್ಕಳು ಅಕ್ಷರಾಭ್ಯಾಸವನ್ನು ಸಮತಟ್ಟಾದ ಮರಳಲ್ಲಿ (ಧೂಳಾಕ್ಷರ) ಕಲಿಯಬೇಕಿತ್ತು. ಸ್ಲೇಟು ಪರಂಪರೆ ಆನಂತರದ್ದು, ಕುವೆಂಪು ಅವರ ಮಲೆನಾಡಿನ ಚಿತ್ರಗಳು ಕೃತಿಯಲ್ಲಿ ಈ ಬಗ್ಗೆ ಚಿತ್ರಣವೊಂದಿದೆ.

'ಮರಳಿನ ಸ್ಲೇಟು ! ನಮ್ಮ ಐಗಳು ಅ ಆ ಇ ಈ ಬರೆದುಕೊಟ್ಟು ತಿದ್ದುವಾಗ ಕೈ ಬೆರಳುಗಳ ರೀತಿಯಲ್ಲಿ ಕಾರ್ಯತಹ ತೋರಿಸಿಕೊಟ್ಟು ಬೆರಳ ಮೇಲಿಟ್ಟು ಅದುಮಿ ತಿಕ್ಕಿ ಕಣ್ಣೀರು ಬರಿಸಿ ಎರಡು ಪೆಟ್ಟುಕೊಟ್ಟು....... ಅಕ್ಷರಾಭ್ಯಾಸದ ಶಿಕ್ಷೆಗಳನ್ನೆಲ್ಲಾ ವಿಧಿಸಿ ಹೋಗುತ್ತಿದ್ದರು....... ಕಣ್ಣೀರು ಸುರಿಸುತ್ತಾ, ಕೂದಲು ಕೆರೆಯುತ್ತಾ, ಮರಳಿನಲ್ಲಿ ಬರೆಯುತ್ತಾ, ಬರೆದದ್ದನ್ನು ಮರೆಯುತ್ತಾ.......'[೪]

ದೇಶೀಯ ಶಿಕ್ಷಣ ಪದ್ಧತಿಯ ಕಲಿಕೆಯ ಸಂಕಷ್ಟವನ್ನು ಕಣ್ಣ ಮುಂದೆ ತರುತ್ತದೆ. ಕಲಿಯುವವರಲ್ಲಿ ಗುರುಗಳ ಬಗ್ಗೆ ಭಯವಿತ್ತೆ ಹೊರತು ಭಕ್ತಿಯಿರಲಿಲ್ಲ. ಹಾಗೆ ಕಲಿಸುವ ಗುರುಗಳು ಎಷ್ಟು ದಿವಸ ಇರುತ್ತಿದ್ದರು ಎಂಬ ಖಾತ್ರಿ ಇರಲಿಲ್ಲ. ಅಂದರೆ ಮಕ್ಕಳ ಕಲಿಕೆ ಮಧ್ಯಮವರ್ಗ, ಶೂದ್ರ ಸಮುದಾಯಗಳಲ್ಲಿ

ವ್ಯವಸ್ಥಿತವಾಗಿಯೇನೂ ಇರಲಿಲ್ಲ. ಮಲೆನಾಡ ಪರಿಸರದ ಆ ಕಾಲದ ಐಗಳ ಶಾಲೆ ಶಿಕ್ಷಣ ಕೇಂದ್ರ ಅನ್ನುವುದಕ್ಕಿಂತ ಮಕ್ಕಳ ಪಾಲಿಗೆ ಶಿಕ್ಷೆಯ ಕೇಂದ್ರ ಎನ್ನಬಹುದು. ಅಕ್ಷರ ಕಲಿಕೆಯ ಶಿಕ್ಷೆ ಸಹಿಸಲಾರದೆ ಪಲಾಯನವಾದಿಗಳಾದವರೇ ಬಹುಮಂದಿ. ಎಲ್ಲೋ ಕುವೆಂಪು ಅಂತಹ, ಕಡಿದಾಳ್ ಮಂಜಪ್ಪ ಅವರಂತಹ ಪ್ರತಿಭಾಶಾಲಿಗಳು ಆ ಕಲಿಕಾ ಮಾದರಿಯನ್ನು ಎದುರಿಸಿ ಯಶಸ್ವಿಯಾದರು. ಕಡಿದಾಳ್ ಮಂಜಪ್ಪನವರು ಕೂಡ ಕುವೆಂಪು ಅವರ ಹಾಗೆ ಮೊದಲ ಶಿಕ್ಷಣವನ್ನು ಐಗಳ ಶಾಲೆಯಲ್ಲೇ ಪಡೆದದ್ದು. ತಮ್ಮ ಗ್ರಾಮದ ಪಟೇಲರ ಮನೆಯ ಒಂದು ಹುಲ್ಲು ಜೋಪಡಿಯಲ್ಲಿ ಆ ಶಾಲೆ ನಡೆಯುತ್ತಿತ್ತು. ಮರಳಿನ ಮೇಲೆ ಬರೆಯುವುದನ್ನು ಕಲಿತ ನಂತರವೇ ಸ್ಲೇಟು ಬಳಪಗಳನ್ನು ಹಿಡಿಯುವುದಕ್ಕೆ ಬಡ್ತಿ. ಅಕ್ಕಸಾಲಿ ಕೆಲಸ ಮಾಡುತ್ತಿದ್ದ ಓದು ಬರಹ ಬಲ್ಲಂತ ಒಬ್ಬರು ಆ ಕೆಲಸ ನಿರ್ವಹಿಸುತ್ತಲೇ ಮಕ್ಕಳಿಗೆ ಕಲಿಸುತ್ತಿದ್ದರು. ಕುಲುಮೆಯ ಪಕ್ಕದಲ್ಲಿ ಸಣ್ಣ ನಾಗರ ಬೆತ್ತವನ್ನು ಇಟ್ಟುಕೊಂಡಿದ್ದು ಕಲಿಯದವರಿಗೆ, ತಪ್ಪಿಸಿಕೊಂಡವರಿಗೆ ಅದರ ರುಚಿ ತೋರಿಸುತ್ತಿದ್ದರು. ಹುಡುಗನೊಬ್ಬ ಒಂದು ವಾರ ಶಾಲೆಗೆ ಬಾರದಿದ್ದಾಗ ಆತನನ್ನು ಹಿಡಿದು ತರಿಸಿ 'ಕೋಳದಂಡ ಶಿಕ್ಷೆ' ವಿಧಿಸಿದರಂತೆ. 'ಕೋಳದಂಡ ಶಿಕ್ಷೆ'[5]ಯೆಂದರೆ ಎರಡೂ ಕೈಗಳನ್ನು ಹಗ್ಗದಲ್ಲಿ ಕಟ್ಟಿ, ಶಾಲೆಯ ಸೂರಿನ ಕೆಳಗೆ ಅವನನ್ನು ನೇತು ಹಾಕಿ ಕೆಳಗೆ ಮೆಣಸಿನಕಾಯಿ ಸೀಗೆಕಾಯಿ ಹೊಗೆ ಹಾಕುವುದು. ದನಕ್ಕೆ ಬಡಿಯುವ ಹಾಗೆ ಬಡಿಯುವ ಶಿಕ್ಷಕರಗೆ ದೇವರು ಶಿಕ್ಷೆ ನೀಡಲಿ ಎಂದು ಭೂತರಾಯನಿಗೆ ಬಾಳೆ ಕೊನೆ ಅರ್ಪಿಸುವ ಹರಕೆ ಮಕ್ಕಳು ಹೊರುತ್ತಿದ್ದರಂತೆ.

ಕುವೆಂಪು ಮತ್ತು ಕಡಿದಾಳ್ ಮಂಜಪ್ಪ ಅವರ ನೆನಪಿನ ಪುಟಗಳಲ್ಲಿ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯ ಕಲಿಕೆಯ ಕ್ರಮದ ಕ್ರೂರ ಸ್ವರೂಪವು ದಾಖಲಾಗುತ್ತದೆ. ಮಲೆನಾಡಿನ ಹಿಂದುಳಿದ ಸಮುದಾಯದಲ್ಲಿ ಅಕ್ಷರ ಲೋಕಕ್ಕೆ ಪ್ರವೇಶ ಪಡೆದವರೇ ವಿರಳ. ಅಂದರೆ ಆ ಲೋಕ ಅಷ್ಟು ಭಯಂಕರವಾಗಿರುವಾಗ ಆ ಬಗ್ಗೆ ಆಸಕ್ತಿ ಮಕ್ಕಳಲ್ಲಿ ಮೂಡುವುದಾದರೂ ಹೇಗೆ? ಉಗ್ರವಾದ ಶಿಕ್ಷೆಯಿಂದ ಮಾತ್ರ ಶಿಕ್ಷಣ ಕಲಿಕೆ ಸಾಧ್ಯ ಎಂಬ ಅಜ್ಞಾನ ಆವರಿಸಿಕೊಂಡಿತ್ತು. ಹೀಗೆ ಓದು ಎಂದರೆ ಬೆಚ್ಚಿ ಬೀಳುವ, ಗುರುಗಳೆಂದರೆ ಭೀತಿ ಪಡುವ, ಗುರುಗಳು ಬಾರದಿದ್ದರೆ ಸಂತೋಷ ಪಡುವ ಬಾರದಿರಲಿ ಎಂದು ಹರಕೆ ಹೊರುವ ಎಳೆಯ ಪ್ರಪಂಚದ ಮನಸ್ಥಿತಿಯ ಸಂದರ್ಭದಲ್ಲೇ ಪ್ರೀತಿಯಿಂದ ಕಾಣುವ ಕ್ರೈಸ್ತ ಮಿಷನರಿಗಳ ಪ್ರವೇಶವಾದದ್ದು. ಅಂದರೆ ಸಾಂಪ್ರದಾಯಿಕ ದೇಶೀ ಶಿಕ್ಷಣ ಪದ್ಧತಿಯಲ್ಲಿರುವ ಕಾಠಿಣ್ಯವೇ ಆಧುನಿಕ ಶಿಕ್ಷಣ ಪದ್ಧತಿಯ ಪ್ರವೇಶಕ್ಕೆ ; ಅದರ ಕಲಿಕೆಗೆ ಆಕರ್ಷಿತವಾದದ್ದು.

ಹೊಸ ಶಿಕ್ಷಣ ಪದ್ಧತಿಯ ಪ್ರವೇಶ

ಮಲೆನಾಡಿಗೆ ಇಂಗ್ಲಿಷ್ ಶಿಕ್ಷಣ ಪದ್ಧತಿ ಪ್ರವೇಶವಾದ ಬಗೆಯನ್ನು ಕುವೆಂಪು ಹೀಗೆ ದಾಖಲಿಸುತ್ತಾರೆ.

"ಕ್ರೈಸ್ತ ಮಿಷನರಿಗಳ ಬ್ರಿಟೀಷ್ ಸಾಮ್ರಾಜ್ಯದ ಮತ್ತು ಕ್ರೈಸ್ತ ಧರ್ಮದ ಮುಂಚೂಣಿಯ ದಳಗಳಾಗಿ ಸಹ್ಯಾದ್ರಿಯ ಕಾಡುಹಳ್ಳಿಗಳಿಗೂ ಕಾಲಿಟ್ಟರು. ಸ್ಕೂಲು, ಆಸ್ಪತ್ರೆಗಳನ್ನು ತೆರೆದರು. ಹಿಂದೂಗಳಾಗಿದ್ದು, ಬ್ರಾಹ್ಮಣರಿಂದ ತಿರಸ್ಕೃತರಾಗಿ ಮೌಢ್ಯ, ಅಜ್ಞಾನ, ಅಂಧಕಾರದಲ್ಲಿದ್ದವರಿಗೆ ಬೆಳಕು ತೋರಿಸುತ್ತೇವೆ ಎಂದು ಬೋಧಿಸಿದರು. ಶೂದ್ರರ ಮಕ್ಕಳಿಗೆ ನವೀನ ವಿದ್ಯಾಭ್ಯಾಸ ಮಾಡಿಸಲು ಮೈಸೂರು, ಬೆಂಗಳೂರುಗಳ ಕ್ರೈಸ್ತ ವಿದ್ಯಾಸಂಸ್ಥೆಗಳಿಗೆ ಕರೆದೊಯ್ದು ಊಟ, ಬಟ್ಟೆ, ವಸತಿಗಳನ್ನು ಪುಕ್ಕಟೆಯಾಗಿ ನೀಡಿ ಅವರ ತಂದೆ

ತಾಯಿಗಳ, ಬಂಧುಗಳ ಗೌರವ ಕೃತಜ್ಞತೆಗಳನ್ನು ಸೂರೆ ಹೊಯ್ದರು. ಈ ಎಲ್ಲಾ ಸ್ನೇಹ ಸೌಹಾರ್ದದ ಪರಿಣಾಮವಾಗಿ ಕುಪ್ಪಳಿಯ ಉಪ್ಪರಿಗೆಯ ವಿದ್ಯಾಸಂಸ್ಥೆಗೂ ಒಬ್ಬ ಇಂಗ್ಲೀಷ್ ಬಲ್ಲ ತರುಣನನ್ನು ನಮಗೆ ಮೇಷ್ಟರನ್ನಾಗಿ ಕಳುಹಿಸುವ ಕೃಪೆ ಮಾಡಿದರು........ ಅವರೇ ಮೋಸಸ್"[೬]

ಈ ಮೇಲಿನ ಭಾಗ ಮಲೆನಾಡಿಗೆ ಇಂಗ್ಲಿಷ್ ಶಿಕ್ಷಣ ಏಕೆ ಪ್ರವೇಶ ಮಾಡಿತು ಮತ್ತು ಹೇಗೆ ಪ್ರವೇಶ ಮಾಡಿತು ಎಂಬುದನ್ನು ಸೂಚಿಸುತ್ತದೆ. 'ದಿ ಸ್ಟೋರಿ ಆಫ್ ದಿ ನಾಮಧಾರಿ' ಎಂಬ ಮಲೆನಾಡಿನ ಒಕ್ಕಲಿಗ ಸಮುದಾಯದ ಬಗ್ಗೆ ನೈಟಿಂಗೇಲ್ ೧೯೨೨ರಲ್ಲಿ ತಯಾರಿಸಿದ ವರದಿ ಪ್ರಕಾರ ಈ ಮಲೆನಾಡ ಪ್ರದೇಶದಲ್ಲಿ ಕ್ರೈಸ್ತ ಮಿಷನರಿಗಳು ಓಡಾಡಿದ್ದು, ಇಲ್ಲಿಯ ನಾಮಧಾರಿ ಸಮುದಾಯ ಬುಡಕಟ್ಟಿಗೆ ಸೇರಿದವರೆಂದೂ, ವಲಸೆ ಹೋಗದವರೆಂದೂ ಮತಾಂತರಕ್ಕೆ ಸುಲಭ ಸಾಧ್ಯವಾಗಿರುವ ಜನವೆಂತಲೂ ಭಾವಿಸಿದ್ದನ್ನು ಹೇಳುತ್ತದೆ. ಆದ್ದರಿಂದ ಕ್ರೈಸ್ತ ಮಿಷನರಿಗಳು ಸಹ್ಯಾದ್ರಿಯ ಕಾಡುಹಳ್ಳಿಗಳಿಗೂ ಕಾಲಿಟ್ಟರು. ವ್ಯವಸ್ಥಿತ ಶಿಕ್ಷಣದಿಂದ ದೂರ ಇಡಲ್ಪಟ್ಟ ಸಮುದಾಯಗಳಿಗಾಗಿ ಸ್ಕೂಲುಗಳನ್ನು, ಮಲೇರಿಯಾದಿ ರೋಗಗಳಿಂದ ನರಳುವವರ ಚಿಕಿತ್ಸೆಗಾಗಿ ಆಸ್ಪತ್ರೆಗಳನ್ನು ತೆರೆದರು. ಅಷ್ಟೇ ಅಲ್ಲ ಮೈಸೂರು, ಬೆಂಗಳೂರಿನಂತಹ ನಗರದಲ್ಲಿರುವ ಹೆಚ್ಚಿನ ಶಿಕ್ಷಣಕ್ಕಾಗಿ ಉಚಿತ ವಸತಿ, ಊಟಗಳ ಆಕರ್ಷಣೆಯನ್ನು ಒಡ್ಡಿದರು. ಕುವೆಂಪು ಅವರಿಗಿಂತ ಹಿಂದಿನ ತಲೆಮಾರಿನ ಕುಪ್ಪಳಿ ಐಯಪ್ಪ ಗೌಡರು, ದೇವಂಗಿ ತಿಮ್ಮಯ್ಯ ಗೌಡರು, ವಾಟಗಾರು ವೆಂಕಪ್ಪಗೌಡರು ಮುಂತಾದವರೆಲ್ಲ ಅಲ್ಲಿ ಶಿಕ್ಷಣ ಪಡೆದು ಹಿಂದಿರುಗಿದ್ದರು.

ಕುವೆಂಪು ಅಕ್ಷರ ಲೋಕಕ್ಕೆ ಕಾಲಿರಿಸಿದ ಸಂದರ್ಭ ಐಗಳ ಶಾಲೆ ಮರೆಯಾಗುತ್ತಿರುವ ಇಂಗ್ಲಿಷ್ ಶಾಲೆ ಕಾಲಿಡುತ್ತಿರುವ ಸಂಧಿಕಾಲ. ಐಗಳು ಎಂಬ ನಾಮ ಅಳಿದು ಮೇಷ್ಟರು ಎಂಬ ನಾಮ ಪಟ್ಟಕ್ಕೇರಿತ್ತು. ಮೋಸಸ್ ಮೇಷ್ಟರು ಬಂದದ್ದು ಮೊದಲಿಗೆ ಖಾಸಗೀ ಶಾಲೆಗೆ (ಕುಪ್ಪಳ್ಳಿ ಉಪ್ಪರಿಗೆ ಶಾಲೆಗೆ) ಆಧುನಿಕತೆಯ ಸಂಕೇತದಂತಿದ್ದ ತರುಣ ಮೋಸಸ್ ಬಂದಾಗ ಬಾಲಕ ಕುವೆಂಪು ಅಂತವರಿಗೆ ಆಕರ್ಷವಾಗಿ ಕಂಡಿದ್ದು. ಏಕೆಂದರೆ ತಮ್ಮ ಹಿಂದಿನ ಗುರುಗಳ ಹಾಗೆ ಭಯಂಕರವಾಗಿರಲಿಲ್ಲ, ಅವರು ಕಲಿಸುವ ರೀತಿ, ಅದಕ್ಕಿಂತಲೂ ಮಕ್ಕಳನ್ನು ಆಕರ್ಷಿಸಿದ್ದು "ಅವರ ಬಿಳಿ ಉಡುಪು, ಕ್ರಾಪು. ಅಷ್ಟೇ ಅಲ್ಲ ತಮ್ಮ ಬಣ್ಣಗೇಡಿ ಬಟ್ಟೆಗಳ ಬಗ್ಗೆ ನಾಚಿಕೆಯಾಯಿತು. ತಮ್ಮ ಜುಟ್ಟು ತಲೆಗಳ ಬಗ್ಗೆ ಜುಗುಪ್ಸೆಯೂ, ಅದಕ್ಕೆ ಕಾರಣರಾದ ಹಿರಿಯರ ಮೇಲೂ ಸಿಟ್ಟು ಬಂದಿತು"[೭] ಎಂದು ಹೇಳವಲ್ಲಿ ಇಂಗ್ಲಿಷ್ ಶಿಕ್ಷಣ ತಮ್ಮ ಮಕ್ಕಳನ್ನು ಆಕರ್ಷಿಸಿದ ಬಗೆ. ಈ ಮೂಲಕ ಅದರ ಬಗ್ಗೆ ಮೇಲರಿಮೆಯನ್ನು, ತಮ್ಮ ಉಡುಪು ರೂಪಗಳ ಬಗ್ಗೆ ಕೀಳರಿಮೆಯನ್ನು ಒಟ್ಟಿಗೆ ತುಲನಾತ್ಮಕವಾದ ಹಿನ್ನೆಲೆಯನ್ನು ತಂದಿತು. ಮಾತೃಭಾಷೆಯ ಕಲಿಕೆ, ಕಲಿಸುವ ಕ್ರಮ ಭಯಂಕರವಾಗಿರುವಾಗಲೇ ಇಂಗ್ಲಿಷ್ ಅಕ್ಷರಗಳು ಕವಾಯಿತು ಸೈನಿಕರಂತೆ ಆ ಕಾಲದ ಹಿರಿಯರನ್ನು ಆಕರ್ಷಿಸಿದ್ದವು. ಅವರ ಇಂಗ್ಲಿಷ್ ಶಿಕ್ಷಣ ವರ್ಣಮಾಲೆಯನ್ನು ಕಲಿಯುವುದರಲ್ಲಿಯೇ ಸಮಾಪ್ತಿ ಕಂಡಿದ್ದರೂ ಅದೇ ಅವರ ವ್ಯಕ್ತಿತ್ವಕ್ಕೆ ಒಂದು ರೀತಿ ವಿಶಿಷ್ಟತೆಯನ್ನು ಮೂಡಿಸಿತ್ತು. ಕುವೆಂಪು ಅವರ ಚಿಕ್ಕಪ್ಪ ಕುಪ್ಪಳ್ಳಿ ರಾಮಣ್ಣಗೌಡರು ಅಡಿಕೆ ತುಂಬಿದ ರವಾನೆಯ ಚೀಲಗಳ ಮೇಲೆ 'K.R.G.'[೮] ಎಂದು ವಿಳಾಸ ಬರೆಯುತ್ತಿದ್ದರು. ಹಳ್ಳಿಯ ಇತರರಿಗೆ ತಿಳಿಯದ ಇಂಗ್ಲಿಷ್ ನನಗೆ ತಿಳಿದಿದೆ ಎಂಬ ಠೀವಿ ಅವರಲ್ಲಿ ಮೂಡಿಸಿತ್ತು. ಅಂದರೆ ಇಂಗ್ಲಿಷ್ ಶಿಕ್ಷಣ ಕಾಲಿಡುತ್ತಲೇ ಅದು ಮತ್ತು ಅದನ್ನು ಕಲಿಸುವವರ ಬಾಹ್ಯ

ಆಕರ್ಷಣೆಯೇ ಭಾರತೀಯರನ್ನು ಪ್ರಧಾನವಾಗಿ ಮೊದಲಿಗೆ ಸೆಳೆಯಿತು. ಇಂಗ್ಲಿಷನ್ನು ಜ್ಞಾನದ ವಿಸ್ತಾರಕ್ಕೆ ನಾವು ಕಲಿಯಬೇಕಿದೆ ಎಂಬ ಸೆಳೆತಕ್ಕಿಂತ ಅದು ತನಗೆ ವೈಯಕ್ತಿಕವಾದ ಪ್ರತಿಷ್ಠೆಯನ್ನು ತಂದುಕೊಡುತ್ತದೆ. ತನ್ನ ಪರಿಸರದಲ್ಲಿ ತನ್ನನ್ನು ಇತರರಿಗಿಂತ ಭಿನ್ನವಾಗಿ, ಆ ಮೂಲಕ ಗೌರವಕ್ಕೆ ಅರ್ಹನನ್ನಾಗಿ ಮಾಡುತ್ತದೆ ಎಂಬ ಮೇಲರಿಮೆಯ ಕಾಳಜಿ ಕಾರಣವಾಗುತ್ತದೆ. ಒಂದು ಒಂದೂವರೆ ಶತಮಾನದ ಹಿಂದೆ ಭಾರತೀಯರಲ್ಲಿ ಯಾವ ಮನೋಭಾವನೆ ಕೆಲಸ ಮಾಡಿತೊ ಅದೇ ಭಾವನೆ ಬಹುತೇಕ ಇಂದಿಗೂ ಮುಂದವರಿದುಕೊಂಡೇ ಬಂದಿರುವುದು ವಿಪರ್ಯಾಸ. ಇಂಗ್ಲಿಷ್ ಮಾಧ್ಯಮ ಶಿಕ್ಷಣ ಪದ್ಧತಿಗೆ ಬದಲಾಗುತ್ತಿರುವುದು ಕೇವಲ ಒಂದು ಭಾಷಿಕ ನೆಲಯಲ್ಲಿ ಮಾತ್ರವಲ್ಲ ; ಇಡೀ ಬದುಕಿನ ಜೀವನ ಕ್ರಮದಲ್ಲೇ ಸ್ಥಿತ್ಯಂತರಗಳಾಗುತ್ತಿರುವುದನ್ನು ಗಮನಿಸಬಹುದು.

ಮಲೆನಾಡ ಪರಿಸರದ ಮುಖಂಡರ ಶಿಕ್ಷಣದ ಕಾಳಜಿಗಳು

ಮಲೆನಾಡ ಪ್ರಾಂತ್ಯಕ್ಕೆ ಇಂಗ್ಲಿಷ್ ಶಿಕ್ಷಣ ಕ್ರೈಸ್ತ ಮಿಷನರಿಗಳ ಮೂಲಕ ಪ್ರವೇಶಿಸುತ್ತಿರುವ ಸಂದರ್ಭದಲ್ಲಿ ತೀರ್ಥಹಳ್ಳಿ ಪ್ರಾಂತ್ಯದ ಒಕ್ಕಲಿಗರ ಮುಂದಾಳುಗಳೆಲ್ಲ ಈ ಪ್ರಾಂತ್ಯದ ಮತ್ತು ಈ ಸಮಾಜದ ಅಭಿವೃದ್ಧಿ ಬಗ್ಗೆ ಚಿಂತಿಸತೊಡಗಿದರು. ಈ ಹಿನ್ನಲೆಯಲ್ಲಿ 'ನಾಮಧಾರಿ ಅನ್ಯೋನ್ಯಾಭಿವೃದ್ಧಿ ಸಭಾ' ಎಂಬ ಸಂಘ ಸ್ಥಾಪನೆಯಾಯಿತು. "ದಿನಾಂಕ:೦೫-೦೫-೧೯೦೧ರಂದು ಒಕ್ಕಲಿಗರ ಸಭೆ ನಡೆಯಿತು".[೯] ಈ ಸಂಘದ ಸಂಹಿತೆಯಲ್ಲಿ ಶಿಕ್ಷಣ ಪ್ರೋತ್ಸಾಹವೂ ಒಂದು ಅಂಶ. ಈ ರೀತಿ ಸಮಾಜದ ಮುಖಂಡರೆನಿಸಿದ್ದ ದೇವಂಗಿ ರಾಮಣ್ಣ ಗೌಡರು, ಎಂ.ಆರ್.ಗಿರಿಯಪ್ಪಗೌಡರು, ಸಿಂಧುವಾಡಿ ಚನ್ನಪ್ಪಗೌಡರು ಮುಂತಾದವರು ಚಿಂತಿಸಲು ಸಂಘಟನಾತ್ಮಕವಾಗಿ ಸುಧಾರಣೆ ತರುವ ಪ್ರಯತ್ನ ಮಾಡಿರುವುದು ಆಧುನಿಕತೆಯ ಪ್ರಭಾವದಿಂದ ಈ ಸಂಘದ ಸಂಹಿತೆಯಲ್ಲಿ ಶಿಕ್ಷಣವು ಒಂದು ಅಂಶ. ಈ ಸಂಘಟನೆಯ ನೇತಾರರಲ್ಲಿ ಒಬ್ಬರಾದ ಮುಳುವಾಡಿ ಎಂಬ ಮಲೆನಾಡ ಕುಗ್ರಾಮವೊಂದರಲ್ಲಿ ಜನಿಸಿದ ಎಂ.ಆರ್.ಗಿರಿಯಪ್ಪಗೌಡರು ತೀರ್ಥಹಳ್ಳಿಯಲ್ಲಿ ಓದುತ್ತಿರುವಾಗಲೇ ಶಿವಮೊಗ್ಗದಲ್ಲಿ ಇಂಗ್ಲಿಷ್ ಶಾಲೆ ಇದೆ ಎಂಬುದನ್ನು ತಿಳಿದು ತಂದೆಗೆ ಹೇಳದೆ ಶಿವಮೊಗ್ಗ ಸೇರಿದರು. ಕ್ರೈಸ್ತ ಧರ್ಮ ಬೋಧಕರ ಪ್ರಭಾವಕ್ಕೆ ಒಳಗಾಗಿ ತಮ್ಮ ಪರಿಸರದ ಜನಾಂಗದ ಸುಧಾರಣೆಗೆ ಪಣತೊಟ್ಟರು. ಈ ಸುಧಾರಣೆ ಕ್ರೈಸ್ತ ಮಿಷನರಿಗಳ ಇಂಗ್ಲಿಷ್ ಶಿಕ್ಷಣ ಪದ್ಧತಿಯಿಂದ ಮಾತ್ರ ಸಾಧ್ಯ ಎಂದು ಭಾವಿಸಿ ಮಿಷನರಿಗಳಿಗೆ ಪತ್ರ ಬರೆದು ತೀರ್ಥಹಳ್ಳಿಗೆ ಒಬ್ಬ ಧರ್ಮಬೋಧಕರನ್ನು ಕಳುಹಿಸಿಕೊಡಿ ಎಂದು ಕೋರಿದ್ದರು. ತಮ್ಮ ಊರಿನ ನಾಲೂರಿನಲ್ಲಿ ಮಿಷನರಿ ಸ್ಥಾಪನೆಗೆ ಭೂಮಿಯನ್ನೂ, ನೂರು ರೂಪಾಯಿಗಳ ದೇಣಿಗೆಯನ್ನು ನೀಡಿದರು. ಅದರ ಪ್ರಾರಂಭೋತ್ಸವದಲ್ಲಿ ಅವರಾಡಿದ ಮಾತಿನಲ್ಲಿ ಅವರ ಕಾಳಜಿ, ದೂರದರ್ಶಿತ್ವ ಎದ್ದು ತೋರುತ್ತದೆ.

"ಭಾರತದ ಹತ್ತಿ ಇಂಗ್ಲೆಂಡಿನ ಮಿಲ್ಲುಗಳಲ್ಲಿ ಸುಂದರ ಬಟ್ಟೆಯಾಗಿ ಮಾರ್ಪಟ್ಟು ನಮ್ಮ ಕೈ ಸೇರುವಂತೆ ನಮ್ಮ ಮಕ್ಕಳು ಮಿಷನ್ ಶಾಲೆಗಳ ತರಬೇತಿಯಲ್ಲಿ ಸುಂದರ ಚಾರಿತ್ರ್ಯವನ್ನು ಪಡೆಯುತ್ತಾರೆ".[೧೦]

ಈ ಪರಿಸರದ ಸರ್ವತೋಮುಖ ಅಭಿವೃದ್ಧಿ ಇಂಗ್ಲಿಷ್ ವಿದ್ಯಾಭ್ಯಾಸದಲ್ಲಿದೆ ಎಂಬುದಾಗಿ ಬಲವಾಗಿ ನಂಬಿದ್ದರು. ಈ ಕಾರಣದಿಂದ ಮತಾಂತರಗೊಳ್ಳಲು ನಿರ್ಧರಿಸಿದ್ದರೇ ಹೊರತು, ಅವರು ಇರುವ ಧರ್ಮದಲ್ಲಿನ ಆಧ್ಯಾತ್ಮಿಕ ಕೊರತೆಯಿಂದಲ್ಲ. ಅವರ ಕೌಟುಂಬಿಕ ಪರಿಸರ ಅವರ ಮತಾಂತರವನ್ನು

ಆಗಗೊಡಲಿಲ್ಲ. ಅಂದರೆ ಮಿಷನರಿಗಳ ಉದ್ದೇಶ ಇಂಗ್ಲಿಷ್ ಶಿಕ್ಷಣದ ಮೂಲಕ ಮತಾಂತರ ಮಾಡಲು ಅಭೀಪ್ಸೆ ಹೊಂದಿದ್ದರೆ, ಇಲ್ಲಿಯ ಮುತ್ಸದ್ಧಿ ಮನಸ್ಸುಗಳು ಮತಾಂತರದ ಮೂಲಕ ಇಂಗ್ಲಿಷ್ ಶಿಕ್ಷಣವನ್ನು ಆ ಮೂಲಕ ಆಧುನಿಕತೆಯನ್ನು ಮೈಗೂಡಿಸಿಕೊಳ್ಳಬೇಕೆಂಬ ಅಭೀಪ್ಸೆ ಹೊಂದಿದರು. ಮಳುವಾಡಿ ಗಿರಿಯಪ್ಪನಂತಹ ಕೆಲವೇ ಮಂದಿ ಮತಾಂತರದ ಮೂಲಕ ಇಂಗ್ಲಿಷ್ ಶಿಕ್ಷಣ ಪಡೆಯಬಹುದೆಂದು ಭಾವಿಸಿದ್ದರು. ಉಳಿದ ಮಲೆನಾಡ ಮುಖಂಡರ ಮನದಲ್ಲಿ ಮತಾಂತರವನ್ನು ದೂರವಿಟ್ಟು ಅದರ ಭಾಗವಾದ ಆಧುನಿಕ ಶಿಕ್ಷಣ ಪದ್ಧತಿಯನ್ನು ಪಡೆಯುವ ಪ್ರತಿತಂತ್ರ ಮೂಡತೊಡಗಿತ್ತು.

ಈ ಪರಿಸರದ ಏಳಿಗೆಯ ಬಗ್ಗೆ ಕಾಳಜಿಯುಳ್ಳ ಪ್ರಮುಖರಲ್ಲಿ ದೇವಂಗಿ ರಾಮಣ್ಣಗೌಡರು ಒಬ್ಬರು. ಸಾಮಾಜಿಕ ಮನ್ನಣೆಯ ಮುಂಚೂಣಿಯಲ್ಲಿದ್ದ ಇವರನ್ನು ಕ್ರೈಸ್ತ ಮಿಷನರಿಗಳ ಮನಃಪರಿವರ್ತನೆಗೆ ಪ್ರಯತ್ನಿಸಿದರು. ತಮ್ಮ ಸಂಪ್ರದಾಯದ ಒಳ್ಳೆ ಆಚಾರ-ವಿಚಾರಗಳ ಬಗ್ಗೆ ಶ್ರದ್ಧೆ ಹೊಂದಿದ್ದ ಗೌಡರು ಬದಲಾಗಲಿಲ್ಲ. ಹಾಗೆಂದು ಗೊಡ್ಡಾಗಿ ಅಂಟಿಕೊಂಡವರಲ್ಲ. ಆಂಗ್ಲ ಶಿಕ್ಷಣ, ಸನ್ನಡತೆಯ ಬಗ್ಗೆ ಗೌರವ ಹೊಂದಿ ಕ್ರೈಸ್ತ ಮಿಷನರಿಗಳ ಮೂಲಕ ಈ ಪರಿಸರದ ಮಕ್ಕಳ ಶೈಕ್ಷಣಿಕ ಕೊರತೆ ನೀಗಲಿ ಎಂದು ದೇವಂಗಿ ಮುಂತಾದ ಕಡೆ ಮಿಷನರಿ ಶಾಲೆಗಳನ್ನು ತೆರೆಯಲು ಪ್ರೋತ್ಸಾಹಿಸಿದರು.

ಆಧುನಿಕ ಶಿಕ್ಷಣ ಮೂಡಿಸಿದ ಪಲ್ಲಟಗಳು

ಮಲೆನಾಡ ಪರಿಸರದ ಜಾಗೃತ ಪ್ರಜ್ಞೆಯ ಮುಖಂಡರ ಶಿಕ್ಷಣದ ಕಾಳಜಿಗಳಿಂದ ಅನೇಕರು ದೂರದ ಮೈಸೂರು ಬೆಂಗಳೂರು ನಗರಗಳಲ್ಲಿ ಆಧುನಿಕ ಶಿಕ್ಷಣ ಪಡೆಯುವಂತಾಯಿತು. ಶಿಕ್ಷಣ ಪಡೆದವರ ಬದುಕಿನ ರೀತಿ ನೀತಿಗಳಲ್ಲಿ ಅನೇಕ ಬದಲಾವಣೆಗಳು ಉಂಟಾದವು. ಈ ಬದಲಾವಣೆ ಮುಂದಿನ ತಲೆಮಾರಿಗೆ ಪ್ರಭಾವ ಬೀರಿದವು. ಬ್ರಿಟಿಷರ ಆಳ್ವಿಕೆಯಲ್ಲಿ ಪಟೇಲ್ ವೃತ್ತಿಯನ್ನು ಅನೇಕ ಪ್ರತಿಷ್ಠಿತ ಕುಟುಂಬದ ಹಿರಿಯರು ಗೌರವಾನ್ವಿತವಾಗಿ ನಡೆಸಿಕೊಂಡು ಬಂದಿದ್ದರು. ಅವರಲ್ಲಿ ಹೊಸಮನೆ ಸುಬ್ಬಣ್ಣಗೌಡರು ಒಬ್ಬರು. ಇವರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ವಿಶೇಷ ಕಾಳಜಿ ವಹಿಸಿದರು. ಮೈಸೂರಿನ ಹಾರ್ಡ್‌ವಿಕ್ ಶಾಲೆಯಲ್ಲಿ ಶಿಕ್ಷಣ ಪಡೆದ ಅವರ ಮಗ ಹೊಸಮನೆ ಮಂಜಪ್ಪಗೌಡರು ಕುವೆಂಪು ಅವರಿಗೆ ಇಂಗ್ಲಿಷ್ ಸಾಹಿತ್ಯದ ರುಚಿಯನ್ನು ಹತ್ತಿಸಿದವರು. ಇಂಗ್ಲಿಷ್ ಶಿಕ್ಷಣದ ಪರಿಣಾಮ ಮಂಜಪ್ಪನವರಲ್ಲಿ ವಿಶಿಷ್ಟವಾದ ಜೀವನಶೈಲಿ .ರೂಪಗೊಂಡಿತ್ತು. ಇಂಗ್ಲಿಷ್‌ನವರ ಅಚ್ಚುಕಟ್ಟುತನ, ಹಿತಮಿತವಾದ ಆಹಾರ, ವಿಹಾರ, ಸಮಯ ಪ್ರಜ್ಞೆ, ಸರಳ ಉಡುಪು, ಶಿಸ್ತು ಅವರಲ್ಲಿ ಮೈತಳೆದಿತ್ತು. ವಿದ್ಯಾವಂತರಾಗಿಯೂ, ಸುಸಂಸ್ಕೃತರಾಗಿಯೂ, ವಿನಯವಂತರಾಗಿಯೂ, ನಿರ್ಮಲ ವೇಷಭೂಷಣ ತೊಟ್ಟವರಾಗಿಯೂ ಮಂಜಪ್ಪಗೌಡರಂತವರೋ, ಮೋಸಸ್ ಮೇಷ್ಟ್ರು ತರದವರೋ ಕುವೆಂಪು ಅಂತವರಿಗೆ ಆಶ್ಚರ್ಯವಾಗಿ ಆದರ್ಶವಾಗಿ ಕಾಣುವುದಕ್ಕೆ ಕಾರಣ ಅದರ ಹಿಂದೆ ಇರುವ ಇಂಗ್ಲಿಷ್ ಶಿಕ್ಷಣ ಮತ್ತು ಅದು ತಂದ ಆಧುನಿಕತೆ. ಇವು ಕುವೆಂಪು ಅವರಿಗೆ ಶಿಕ್ಷಣ ಪಡೆಯುವ ತವಕಕ್ಕೆ ಮೊದಲ ಆಕರ್ಷಣೆ.

ಈ ರೀತಿ ಆ ಕಾಲದ ಜಾಗೃತ ಪ್ರಜ್ಞೆಯ ಹಿರಿಯರಲ್ಲಿ, ಇಂಗ್ಲಿಷ್ ಶಿಕ್ಷಣ ಪಡೆಯದಿದ್ದರೆ ತಮ್ಮ ಮಕ್ಕಳು ಮುಂದುವರಿಯಲು ಸಾಧ್ಯವಿಲ್ಲ ಎಂಬ ಅರಿವಿನ ಕಾರಣದಿಂದಲೇ ಕುವೆಂಪು ಅಂತಹವರು ತೀರ್ಥಹಳ್ಳಿ ಪೇಟೆ ಶಾಲೆ ಸೇರುವಂತಾಯಿತು. ಕುವೆಂಪು ಸೇರಿದ ಪೇಟೆಯ ಶಾಲೆಯ ಹೆಸರು

ಎ.ವಿ.ಸ್ಕೂಲ್ ಅಂದರೆ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್. ಆಧುನಿಕ ಶಿಕ್ಷಣ ಶಾಲೆ ತನ್ನ ಹೆಸರನ್ನು ಆಂಗ್ಲ ಭಾಷೆಯಲ್ಲಿಯೇ ಹೊತ್ತಿತ್ತು. ಅದರ ಪ್ರವೇಶ ಕೂಡ ಕಂಠಪಾಠ ಮಾಡಿದ್ದ ಇಂಗ್ಲಿಷ್ ಪದ್ಯವನ್ನು ಹೇಳುವುದರ ಮೂಲಕ ದೊರಕಿತಂತೆ ಎಂಬುದು ಕುತೂಹಲದ ಸಂಗತಿ.

ಹೀಗೆ ಪರಂಪರಾಗತವಾದ ಸಾಮಾಜಿಕ ವ್ಯವಸ್ಥೆಯೊಂದು ಆಧುನಿಕ ಮೌಲ್ಯಗಳಿಗೆ ಮುಖಾಮುಖಿಯಾದಾಗ ಪಲ್ಲಟಗೊಳ್ಳುವ ಕ್ರಮ ಇದಾಗಿದೆ. ಮಲೆನಾಡ ಪರಿಸರದಲ್ಲಿನ ಅವಕಾಶಗಳು ಮತ್ತು ದೌರ್ಬಲ್ಯಗಳು ಇಂಗ್ಲಿಷ್ ಶಿಕ್ಷಣದ ಪ್ರವೇಶಕ್ಕೆ ಸುಲಭವಾಯಿತು. ಬಹು ಸಮುದಾಯಗಳು ಪರಂಪರಾಗತವಾದ ಶಿಕ್ಷಣದಿಂದ ದೂರ ಇಡಲ್ಪಟ್ಟಿರುವುದು. ತಾವು ರೂಢಿಸಿಕೊಂಡ ಶಿಕ್ಷಣ ಕ್ರಮ ರೂಕ್ಷವಾದುದಾಗಿರುವುದು, ಕಲಿಸುವವರು ಭಯಂಕರ ಸ್ವರೂಪಿಗಳಾಗಿ ತೋರಿದುದು, ಹೆಚ್ಚಿನ ವಿದ್ಯಾಭ್ಯಾಸ ಮಾಡಬೇಕೆಂಬ ಆಕಾಂಕ್ಷೆ ಮೂಡಿದುದು, ಇಂಗ್ಲಿಷ್ ಶಿಕ್ಷಣ ತಂದ ಹೊಸ ರೀತಿ ಬದುಕಿಗೆ ಆಕರ್ಷಿತವಾದುದು, ವ್ಯಕ್ತಿ ಪ್ರತಿಷ್ಠೆಗೆ ಅವಕಾಶವಾದುದು, ಇಂಗ್ಲಿಷ್ ಕಲಿಸುವ ಶಿಕ್ಷಕರು ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಮೆಚ್ಚುಗೆಯನ್ನು ಆಕರ್ಷಣೆಯನ್ನು ತಂದುದು, ಮಿಗಿಲಾಗಿ ಸಮಾಜದ ಮುಖಂಡರ ಕಾಳಜಿಗಳು ಮೊದಲಾದವು ಮಲೆನಾಡ ಪರಿಸರದಲ್ಲಿ ಇಂಗ್ಲಿಷ್ ಶಿಕ್ಷಣ ಪ್ರವೇಶ ಮಾಡಲು ಯಾವ ಅಡ್ಡಿ ಆತಂಕಗಳು ಎದುರಾಗಲಿಲ್ಲ. ಹೀಗೆ ಆಧುನಿಕ ಶಿಕ್ಷಣವನ್ನು ಪಡೆಯುವ ಕತೂಹಲ ತಾಳಿದ ಮನಸ್ಸುಗಳು ಆಧುನಿಕ ಶಿಕ್ಷಣದ ಹಿಂದಿನ ವಸಾಹತುಶಾಹಿ ಮತ್ತು ಕ್ರೈಸ್ತ ಮಿಷನರಿಗಳ ಉದ್ದೇಶವನ್ನು ಎಚ್ಚರಿಕೆಯಿಂದಲೇ ಗಮನಿಸುತ್ತ ಬಂದಿರುವುದರಿಂದ ಕ್ರೈಸ್ತ ಮಿಷನರಿಗಳು ನಿರೀಕ್ಷಿಸಿದ ಮತಾಂತರ ಪ್ರಕ್ರಿಯೆ ಸಾಧ್ಯವಾಗಲಿಲ್ಲ. ಈ ಪರಿಸರದ ಹಿರಿಯರು ಬಯಸಿದ ದೂರದರ್ಶಿತ್ವದ ಪರಿಣಾಮ ಇಂದು ಸಾಕಷ್ಟು ಪ್ರತಿಫಲವನ್ನು ನೀಡಿದೆ ; ನೀಡುತ್ತಿದೆ.

ಇಂಗ್ಲಿಷ್ ಮಾದರಿಯ ಶಾಲೆಗಳು ಪ್ರಾರಂಭವಾದಾಗ ಅದು ಎಲ್ಲಾ ವರ್ಗದವರಿಗೂ ಕಲಿಯಲು ಅವಕಾಶ ನೀಡುವುದೂ ಒಂದು ಉದ್ದೇಶವಾಗಿತ್ತು. ಆದ್ದರಿಂದ ಕ್ರೈಸ್ತ ಮಿಷನರಿಗಳ ಯಾವುದೇ ಶ್ರೀಮಂತರ ಮನೆಗಳಲ್ಲಿ ಐಗಳ ಮಠವಿರುವಂತೆ ಶಾಲೆಯನ್ನು ತೆರೆಯಲು ಒಪ್ಪಲಿಲ್ಲ. ಕಾರಣ ಅಸ್ಪೃಶ್ಯತೆಯ ಆಚರಣೆಯಲ್ಲಿರುವ ಸಮಾಜದಲ್ಲಿ ಎಲ್ಲ ಜಾತಿಯವರಿಗೆ ಅಲ್ಲಿ ಶಿಕ್ಷಣ ನೀಡಲಾಗಲಿ, ಹಾಗೆ ಎಲ್ಲರು ಬಂದು ಕಲಿಯುವುದು ಸಾಧ್ಯವಾಗದ ಸಂಗತಿ. ಆದ್ದರಿಂದ ಮಿಷನರಿ ಎಲ್ಲ ಊರುಗಳಿಗೆ ಕೇಂದ್ರವಾಗಿರುವ ಸ್ಥಳದಲ್ಲಿ ಶಾಲೆಯನ್ನು ಸ್ಥಾಪಿಸುತ್ತಾ ಬಂತು. ಈ ರೀತಿ ಖಾಸಗಿ ಶಿಕ್ಷಣ ಸಂಸ್ಥೆ ಸಾರ್ವಜನಿಕ ಶಿಕ್ಷಣ ಸಂಸ್ಥೆಯ ರೂಪ ಪಡೆದದ್ದು ಆಧುನಿಕ ಶಿಕ್ಷಣದ ಪ್ರವೇಶ ಪಡೆದಾಗ. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಮಿಷನರಿ ಚಟುವಟಿಕೆಯನ್ನು ನಿರೂಪಿಸುತ್ತಾ. ಎಲ್ಲಾ ಊರುಗಳಿಗೂ ಕೇಂದ್ರವಾಗಿರುವ ಮೇಗರವಳ್ಳಿಯಲ್ಲಿ ಮಿಷನರಿ ಶಾಲೆ ಪ್ರಾರಂಭವಾಗುವುದನ್ನು ಪ್ರಸ್ತಾಪಿಸುತ್ತದೆ. ಕೋಣೂರಿನಲ್ಲಿ ಐಗಳ ಮಠದಲ್ಲಿ ಕಲಿಯುತ್ತಿದ್ದ ಮಕ್ಕಳೆಲ್ಲಾ ಈ ಮೇಗವರಳ್ಳಿಯಲ್ಲಿ ಪ್ರಾರಂಭವಾದ ಮಿಷನರಿ ಶಾಲೆಗೆ ಸೇರುತ್ತಾರೆ. ಅಂತಕ್ಕ ಶೆಟ್ಟಿಯ ಹೋಟೆಲ್ ಮನೆ ವಿದ್ಯಾರ್ಥಿನಿಲಯವಾಗಿ ಪರಿವರ್ತಿತವಾಗುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿ ೧೯ನೇ ಶತಮಾನದ ಕೊನೆ, ೨೦ನೇ ಶತಮಾನದ

ಆರಂಭಕಾಲಘಟ್ಟದ ಸಂದರ್ಭದ ಮಲೆನಾಡು ಪರಿಸರದಲ್ಲಿ ಹಳೆಯ ಶಿಕ್ಷಣ ಪದ್ಧತಿಯ ನಿರ್ಗಮನ, ಇಂಗ್ಲಿಷ್ ಶಿಕ್ಷಣದ ಮೂಲಕ ಆಗಮಿಸುತ್ತಿರುವ ಆಧುನಿಕ ಶಿಕ್ಷಣದ ಸಂಕ್ರಮಣಕಾಲದ ಸಂದರ್ಭವನ್ನು ದಾಖಲಿಸುತ್ತದೆ. ಪಾದ್ರಿ ಜೀವರತ್ನಯ್ಯನ ಮತಾಂತರ ಚಟುವಟಿಕೆ, ಚಿನ್ನಪ್ಪ – ದೇವಯ್ಯರನ್ನು ಆತ ಆಕರ್ಷಿಸಿದ ಬಗೆ, ಮೇಗರವಳ್ಳಿಯಲ್ಲಿ ಕಟ್ಟುತ್ತಿರುವ ಮಿಶನ್ ಶಾಲೆ – ಈ ವಿಚಾರಗಳೆಲ್ಲವನ್ನು ಮಾತನಾಡಿಕೊಳ್ಳುತ್ತಾ, ಮಾತನಾಡಿಕೊಳ್ಳುತ್ತಾ ಇಲ್ಲಿನ ಜನಸಮುದಾಯ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಹೊರಳಿಕೊಳ್ಳುತ್ತಿತ್ತು ಎಂಬುದನ್ನು ಗಮನಿಸಬಹುದು. ಇದಕ್ಕೆ ಹಳೆಮನೆ ತಿಮ್ಮಪ್ಪ ಹೆಗ್ಗಡೆಯಂತಹ ಧೂರ್ತನಲ್ಲಿಯೂ ಆಧುನಿಕ ಶಿಕ್ಷಣದ ಆಕರ್ಷಣೆ ಹೇಗೆ ಒಳಗುಮಾಡಿತ್ತು ಎಂಬುದನ್ನು ಕಾಣಬಹುದು. ತಬ್ಬಲಿಯಾದ ತನ್ನ ಅಣ್ಣನ ಮಗನನ್ನು ಓದಿಸಬೇಕೆಂಬ ಉದಾರಬುದ್ಧಿ ಮೊಳೆಯುತ್ತದೆ. ಐಗಳ ಹತ್ತಿರ ಚೆನ್ನಾಗಿ ಕಲಿತು, ಮೇಗರವಳ್ಳಿ ಹೊಸ ಮಿಶನ್ ಸ್ಕೂಲಿನಲ್ಲಿ ಇಂಗ್ಲಿಷ್ ಕಲಿಯಬೇಕೆಂದೂ ನಂತರ ತೀರ್ಥಹಳ್ಳಿಯಲ್ಲಿಯೂ ಶಿಕ್ಷಣವನ್ನು ಮುಂದುವರಿಸಬೇಕೆಂಬ ಅವನ ಕಾಳಜಿ ಅವನಲ್ಲುಂಟಾದ ವಿದ್ಯಾಭ್ಯಾಸದ ಕಾಳಜಿಯನ್ನು ಅಭಿವ್ಯಕ್ತಿಸುತ್ತದೆ. ಇದು ಆಧುನಿಕತೆ ತಂದಂತಹ ಪ್ರಭಾವ.

ಒಟ್ಟಿನಲ್ಲಿ ಆಧುನಿಕ ಶಿಕ್ಷಣ ಎಲ್ಲರಿಗೂ ಸಲ್ಲಬೇಕೆಂಬ ಕಾಳಜಿ ಹೊತ್ತಿರುವುದೇನೋ ಸರಿ. ಆದರೆ ಈ ಸಮಾಜದಲ್ಲಿ ಜಾರಿಗೆ ತರುವುದು ಅಷ್ಟು ಸುಲಭವಾಗಿರಲಿಲ್ಲ. ಜಾತ್ಯತೀತ ಆಧುನಿಕ ಶಿಕ್ಷಣ ಪದ್ಧತಿ ಮೊದಮೊದಲಿಗೆ ಜಾತಿ ಪದ್ಧತಿಯಿದ್ದ ಭಾರತೀಯ ಸಮಾಜದೊಳಗೆ ಪ್ರವೇಶ ಪಡೆಯುವುದು ಮತ್ತು ಎಲ್ಲರೂ ಒಂದಾಗಿ ಕಲಿಯುವ ವ್ಯವಸ್ಥೆ ರೂಪಿಸಿಕೊಳ್ಳುವುದು ಕಷ್ಟಸಾಧ್ಯವಾದ ಸಂಗತಿಯಾಗಿತ್ತು. ಕುವೆಂಪು ಪ್ರವೇಶಿಸಿದ ಆಧುನಿಕ ಶಾಲೆಯ ಚಿತ್ರಣವನ್ನು ನೆನಪಿನ ದೋಣಿಯಲ್ಲಿ ಹೀಗೆ ಚಿತ್ರಿಸಿರುವುದನ್ನು ಕಾಣಬಹುದು.

"ಬ್ರಾಹ್ಮಣ ಉಪಾಧ್ಯಾಯರು ಜನಿವಾರದ ಹುಡುಗರನ್ನೆಲ್ಲಾ ಬೆಂಚಿನ ಮೇಲೆ ಕೂರುವಂತೆ ಮಾಡಿ ಒಕ್ಕಲಿಗರೆ ಮೊದಲಾದ ಶೂದ್ರ ಹುಡುಗನ್ನು ತುಸು ದೂರ ನೆಲದ ಮೇಲೆ ಕೂರುವಂತೆ ಮಾಡುತ್ತಿದ್ದರು. ಅಂತೂ ಕೆಲಕಾಲ ಹೀಗೆ ಬ್ರಾಹ್ಮಣರೂ ರಕ್ಷಣೆ ಮಾಡಿಕೊಂಡರು........ ಕ್ರೈಸ್ತ ವಿದ್ಯಾಧಿಕಾರಿಗಳಿಗೆ ಇದು ಗೊತ್ತಾಗಿ ಆಕ್ಷೇಪಿಸಿದರು. ಆಗ ಬೆಂಚುಗಳಿಗೆ ಬ್ರಾಹ್ಮಣ ದೀಕ್ಷೆ ಕೊಟ್ಟುಬಿಟ್ಟರು. ಕೆಲವು ಬೆಂಚುಗಳು ಬ್ರಾಹ್ಮಣ ಬೆಂಚುಗಳಾಗಿ ಮತ್ತೆ ಕೆಲವು ಶೂದ್ರ ಬೆಂಚುಗಳಾದವು........ ಮುಸಲ್ಮಾನರು ಓದಲು ಬರುತ್ತಿದ್ದ ಕಾಲ ತುಸು ಮುಂದುವರಿದು ಅಸ್ಪೃಶ್ಯರ ಮಕ್ಕಳೂ ಶಾಲೆಗೆ ಬಂದು ಸೇರತೊಡಗಿದರು. ಅವರನ್ನು ನಿರ್ದಾಕ್ಷಿಣ್ಯವಾಗಿ ಹೊರಗಡೆ ತಣೆಯ ಮೇಲೆ ಕೂರಿಸಿದರು........ ಬ್ರಾಹ್ಮಣರಾದ ತಮಗೆ ಆಕ್ಷೇಪಣೆ ಬರದಂತೆ ಗೌಡರ ಮಕ್ಕಳು ಹೊಲೆಯರೊಡನೆ ಕೂರಲು ಒಪ್ಪುವುದಿಲ್ಲ ಅದಕ್ಕಾಗಿ ಹಾಗೆ ಮಾಡಬೇಕಾಗಿದೆ ಎಂದರು. ಗೌಡರುಗಳಲ್ಲಿ ಕೆಲವು ಶ್ರೀಮಂತ ಮತ್ತು ಪ್ರತಿಷ್ಠಿತ ಮನೆಗಳವರು ಬ್ರಾಹ್ಮಣ ಪಕ್ಷವೇ ನಿಂತು ಜೀತದವರಾದ ಹೊಲೆಯರನ್ನು ತಾವೂ ದೂರ ಅಂಗಳದಲ್ಲಿಯೆ ನಿಲ್ಲಿಸುವುದರಿಂದ ಅವರ ಕೊಳಕು ಹುಡುಗರನ್ನು ತಮ್ಮ ಮಕ್ಕಳ ಮೈ ಮುಟ್ಟುವಂತೆ ಕೂಡಿಸಲಾಗದು ಎಂದರು. ಶಕ್ತರ ಸಂಖ್ಯೆ ಅಧಿಕವಾದುದರಿಂದ ಅಧಿಕಾರಿಗಳೂ ಶಾಲೆಗಳನ್ನು ಸುಗಮವಾಗಿ ನಡೆಸುವ ಹೊಣೆಗೆ ತಲೆಬಾಗಿ ಆ ವಿಚಾರದಲ್ಲಿ ನಿಷ್ಠುರ ವರ್ತನೆಗೆ ಹೋಗಲಿಲ್ಲ."[೧೧]

ತರಗತಿಯಲ್ಲಿ ಕಾಣುವ ಈ ಮಡಿವಂತಿಕೆಯ ಚಿತ್ರ ಇಡೀ ಭಾರತದ ಜಾತಿ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಮಡಿವಂತಿಕೆ, ಮೇಲು-ಕೀಳು ಭಾವನೆ ಕೇವಲ ಬ್ರಾಹ್ಮಣ ಸಮುದಾಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ, ಶೂದ್ರರಲ್ಲೂ ಅದು ಹೇಗಿದೆ ಎಂಬುದನ್ನು ಸೂಚಿಸುತ್ತದೆ. ಪ್ರತಿಯೊಂದು ಜಾತಿಯೂ ತನಗಿಂತ ಮೇಲಿನ ಸ್ತರವು ಅಂದುಕೊಂಡ ಜಾತಿಗಳ ಬಗ್ಗೆ ಮೇಲರಿಮೆಯನ್ನು, ತಮಗಿಂತ ಕೆಳಸ್ತರದವು ಅಂದುಕೊಂಡ ಜಾತಿ ಸಮುದಾಯಗಳ ಬಗ್ಗೆ ಕೀಳರಿಮೆಯನ್ನು ಹೊಂದಿವೆ. ಇದಕ್ಕೆ ಪೂರಕವಾಗಿ ಆರ್ಥಿಕ ಸ್ಥಿತಿಯೂ ಕೆಲಸ ಮಾಡುತ್ತದೆ. ಆಧುನಿಕ ಶಿಕ್ಷಣ ಎದುರಿಸಬೇಕಾದ ಮೊದಲ ಸ್ಥಿತಿಯಿದು. ಬ್ರಾಹ್ಮಣರು ಶೂದ್ರರ ಬಗ್ಗೆ ದಲಿತರ ಬಗ್ಗೆ ಯಾವ ಮಡಿವಂತಿಕೆಯನ್ನು ಇಟ್ಟುಕೊಂಡಿದ್ದರೋ ಅದೇ ಶೂದ್ರ ಸಮುದಾಯದವರು ದಲಿತರ ಬಗ್ಗೆ ಅದೇ ಮಡಿವಂತಿಕೆಯನ್ನು ಆಚರಿಸುತ್ತಿದ್ದರು. ಶೂದ್ರನಿಗೆ ಓದು ಏಕೆ ಎಂದು ಭಾವಿಸಿದಂತೆ ತಮ್ಮ ಮನೆಗಳಲ್ಲಿ ಜೀತಮಾಡುವ ದಲಿತನಿಗೆ ಓದು ಏಕೆ ಎಂದು ಭಾವಿಸಲಾಗಿತ್ತು. ಜೀತ ಮಾಡುವವನ ಮಗ ತನ್ನ ಸರಿಸಮನಾಗಿ ಕುಳಿತು ಕಲಿಯುವುದು ಕಹಿ ವಿಚಾರ. ಆದರೆ ಆಳುವ ಪ್ರಭುಗಳು ಯಾವಾಗಲೂ ನ್ಯಾಯ ಪಕ್ಷ ಪಾತಿಗಳಾಗಿರುವುದಕ್ಕಿಂತ ಸ್ವಹಿತಾಸಕ್ತಿಯ ಹಿನ್ನಲೆಯಲ್ಲಿ ಬಲ ಪಕ್ಷ ಪಾತಿಗಳಾಗಿಯೇ ಇದ್ದದ್ದು ಹೆಚ್ಚು. ಹಾಗಿದ್ದೂ ಆಧುನಿಕ ಶಿಕ್ಷಣ ಎಲ್ಲರಲ್ಲೂ ಕಲಿಯುವ ಹಂಬಲವನ್ನುಂಟು ಮಾಡಿರುವುದು ಸತ್ಯ.

ಇಂಗ್ಲಿಷ್ ಶಿಕ್ಷಣ ಯಾವ ರೀತಿ ನಾನಾಕಾರಣಗಳಿಂದ ಭಾರತೀಯರಿಗೆ ಆಕರ್ಷಕವಾಯಿತೊ ಆ ಮಟ್ಟದಲ್ಲಿ ಅದರ ಕಲಿಕೆ ಅಷ್ಟೇ ಕಷ್ಟದಾಯಕವಾಗಿತ್ತು. ಎಲ್.ಎಸ್.(ಲೋಯರ್ ಸೆಕೆಂಡಿರಿ ಸ್ಕೂಲ್) ಪಾಸು ಮಾಡುವವನು ಆ ಕಾಲದಲ್ಲಿ ಸಮಾಜದಲ್ಲಿ ಮನ್ನಣೆಗೆ ಪಾತ್ರನಾಗುತ್ತಿದ್ದ. ಕುವೆಂಪು ಅದನ್ನು ಸಾಧಿಸಿದರು. ಅದರ ಕಲಿಕೆಯ ಕಷ್ಟದ ಬಗ್ಗೆ ಕುವೆಂಪು ತಮ್ಮ ಆತ್ಮ ಕಥೆಯಲ್ಲಿ ಹೇಳುವುದಿಲ್ಲ. ತಮ್ಮ ಕಾದಂಬರಿಗಳನ್ನು ಇಂಗ್ಲಿಷ್‌ಗೆ ಭಾಷಾಂತರ ಮಾಡುವಷ್ಟು ಪ್ರಬುದ್ಧತೆಗಳಿಸಿಕೊಂಡಿದ್ದ ಕಡಿದಾಳ್ ಮಂಜಪ್ಪನವರಂತಹ ಪ್ರತಿಭಾವಂತರಿಗೂ ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್ ಕಲಿಕೆಗೆ ನುಂಗಲಾರದ ತುತ್ತಾಗಿತ್ತು. ಈ ಸಮಸ್ಯೆ ಯಾವುದೇ ಗ್ರಾಮೀಣ ಪರಿಸರದ ಮಗುವಿಗೆ ತಂದುಕೊಡುವ ಸಮಸ್ಯೆಯಾಗಿ ಇಂದಿಗೂ ಇರುವುದು ವಾಸ್ತವ ಸತ್ಯ.

ಐಗಳ ಮಠದಿಂದ ತೀರ್ಥಹಳ್ಳಿ ಪ್ರಾಥಮಿಕ ಶಾಲೆಗೆ ಸೇರಿದ ಕನ್ನಡ ಮತ್ತು ಮಗ್ಗಿಯಲ್ಲಿ ಚುರುಕಾಗಿದ್ದ ಇವರಿಗೆ ತಲೆ ನೋವು ಆದದ್ದು ಇಂಗ್ಲಿಷ್ ಕಲಿಕೆ, ಅದರ ಗಂಧ ಗಾಳಿಯೇ ತಿಳಿಯದ ಅವರಿಗೆ ಅಕ್ಷರಗಳನ್ನು ಒಟ್ಟು ಸೇರಿಸಿ ಬರೆಯಲಾಗಲಿ, ಓದಲಾಗಲಿ ಸಾಧ್ಯವಾಗಲಿಲ್ಲ. ತಾಳ್ಮೆ ಕಳೆದುಕೊಂಡ ಗುರುಗಳಿಂದ ಒಳಶುಂಠಿ ಶಿಕ್ಷೆಗೆ ಒಳಗಾಗಬೇಕಾಯಿತು. ತಂದೆಯಲ್ಲಿ ತಮ್ಮ ದುಃಖ ತೋಡಿಕೊಳ್ಳುತ್ತಾರೆ.

"ಅಪ್ಪಯ್ಯ ನಾನೆಷ್ಟು ಪ್ರಯತ್ನ ಮಾಡಿದರೂ ಇಂಗ್ಲಿಷ್ ನನ್ನ ತಲೆಗೆ ಹತ್ತುವುದಿಲ್ಲ, ಏನ್ಮಾಡ್ಲಿ........" ಇದೊಂದು ವರ್ಷ ನೋಡು ಇಂಗ್ಲಿಷ್ ಬರದೆ ಇದ್ದರೆ ಇನ್ನೇನ್ಮಾಡ್ತಿಯಾ ಮನೆಯಲ್ಲಿ ಕೆಲಸ ಮಾಡಿಕೊಂಡಿರು........ ನಿನ್ನ ಅದೃಷ್ಟ ನಾ ಏನ್ಮಾಡ್ಲಿ"[೧]

ತಂದೆ ಮಗನ ಸಂಭಾಷಣೆಯಲ್ಲಿ ಕಹು ವಾಸ್ತವತೆ ಇದೆ. ಇದು ಇಂಗ್ಲಿಷ್ ಶಿಕ್ಷಣ ತಂದ ಆಸೆ ಮತ್ತು ಸಾಧಿಸಲಾಗದ ಆತಂಕ. ನಮ್ಮದಲ್ಲದ ಪರಕೀಯ ಭಾಷೆಯನ್ನು ಪ್ರಾಥಮಿಕ ಹಂತದಲ್ಲಿ ಅಳವಡಿಸಿದಾಗ

ಕಲಿಯಲೇಬೇಕಾದ ಒತ್ತಡ, ಕಲಿಯಲಾಗದ ಹತಾಶೆಗೆ ಸಿಲುಕಿದ ಎಳೆಯ ಚೇತನಗಳ ಭಯ, ತಲ್ಲಣ ಒಂದು ಕಡೆಯಾದರೆ, ಅದನ್ನು ಕಲಿಯದೆ ಭವಿಷ್ಯವೆ ಇಲ್ಲ ಎಂದು ತಿಳಿದಿರುವ ಪೋಷಕರ ನಿರಾಶೆ, ನಿಸ್ಸಹಾಯಕತೆ ಮತ್ತೊಂದು ಕಡೆ. ಮಲೆನಾಡಿನ ಎಷ್ಟೋ ಪ್ರತಿಭಾವಂತ ಎಳೆಯ ಚೇತನಗಳು ಇಂಗ್ಲಿಷ್ ಗೋಡೆಯನ್ನು ದಾಟಲಾಗದೆ ವ್ಯಾಸಂಗಕ್ಕೆ ಶರಣು ಹೊಡೆದವರು ಬಹುಮಂದಿ ಎಂದರೆ ತಪ್ಪಾಗಲಾರದು. ತಮ್ಮೆಲ್ಲ ಸಮಸ್ಯೆಗಳ ನಡುವೆಯೂ ಭಗೀರಥ ಪ್ರಯತ್ನ ಮಾಡಿದವರು ಗುರಿ ಮುಟ್ಟಿದರು. ಇಂದು ಇಂಗ್ಲಿಷ್ ಮಾದರಿಯ ಆಧುನಿಕ ಶಿಕ್ಷಣ ಯಶಸ್ವಿಯಾಗಿದೆ. ಆದರೆ ಇಂಗ್ಲಿಷ್ ಭಾಷೆ ಮತ್ತು ಮಾಧ್ಯಮ ಹೆಚ್ಚಿನ ಕಲಿಕಾ ಸಾಮಾಗ್ರಿಗಳನ್ನು, ಸುಧಾರಣೆಯನ್ನು ಹೊಂದಿರುವ ಈ ಕಾಲದಲ್ಲಿ ಕೂಡ ಅದು ಕಷ್ಟವಾಗಿಯೇ ಉಳಿದಿದೆಯೆಂದರೆ ಅದು ಭಾರತೀಯರಲ್ಲಿ ರಕ್ತಗತವಾಗುವ ಕಾಲ ಬಹಳ ದೂರವಿದೆ. ಅದು ಇನ್ನೂ ಕೂಡ ಪ್ರತಿಷ್ಠೆಯ ವ್ಯಾಮೋಹದ ಹುಸಿ ಭರವಸೆಯ ಭಾಷೆಯಾಗಿಯೇ ಹೆಚ್ಚಿನವರಲ್ಲಿ ಬಳಕೆಯಾಗುತ್ತಿರುವುದನ್ನು ಗಮನಿಸಬಹುದು.

ಮಾಧ್ಯಮಿಕ ಶಾಲಾ ಮೂರನೇ ತರಗತಿಯ ಸಾರ್ವತ್ರಿಕ ಪರೀಕ್ಷೆಯಲ್ಲಿ ಪಾಸಾದವನು ಸಮಾಜದ ಗೌರವಕ್ಕೆ ಭಾಜನನಾಗಿರುತ್ತಿದ್ದ. ಕುವೆಂಪು ಮಾತಿನಲ್ಲಿ ಹೇಳುವುದಾರೆ "ಆಗಿನ ಕಾಲದಲ್ಲಿ ಆ ಕಾಡು ಮೂಲೆಯ ಊರುಗಳಲ್ಲಿ ಲೊಯರ್ ಸೆಕಂಡರಿ ಪರೀಕ್ಷೆ ಎಂದರೆ ಒಂದು ಮಹಾ ಅನರ್ಘ್ಯ ಪದವಿಯಾಗತ್ತು........ ಅದರಲ್ಲೂ ಶೂದ್ರ ವರ್ಗದವರು ಆ ಪರೀಕ್ಷೆಗೆ ಕೂರುವುದೆಂದರೆ ವಿಶ್ವಾಮಿತ್ರನಿಗೆ ಬ್ರಹ್ಮರ್ಷಿ ಪಟ್ಟ ದಯಪಾಲಿಸಿದಷ್ಟೆ ಮಹತ್ವದ್ದಾಗಿತ್ತು".[೧೩]

ಇಲ್ಲಿ 'ಬ್ರಹ್ಮರ್ಷಿಪಟ್ಟ ದಯಪಾಲಿಸಿದಷ್ಟೆ ಮಹತ್ವದಾಗಿತ್ತು' ಎಂಬ ಮಾತು ಆಧುನಿಕ ಶಿಕ್ಷಣ ಕ್ರಮದಲ್ಲಿಯೂ ಜಾತಿ ವ್ಯವಸ್ಥೆಯ ಕ್ರೌರ್ಯ ಆಗಲೇ ತಲೆಹಾಕುವುದನ್ನು ಸೂಚಿಸುತ್ತದೆ. ಅಕ್ಷರ ಪರಂಪರೆಯುಳ್ಳ ಮೇಲುವರ್ಗದ ಸಮುದಾಯ ಬಹುಬೇಗ ಇಂಗ್ಲಿಷ್ ಶಿಕ್ಷಣವನ್ನು ತನ್ನದಾಗಿ ಮಾಡಿಕೊಂಡು, ಮುಂದಿನ ಜನಾಂಗಕ್ಕೆ ಶಿಕ್ಷಣ ನೀಡುವ ಶಿಲ್ಪಿಗಳು ಅವರೇ ಆದರು. ಸಂಸ್ಕೃತ ಪುರೋಹಿತರೇ ಇಂಗ್ಲಿಷ್ ಪುರೋಹಿತರೂ ಆದರು. ಭಾಷೆ ಬೇರೆಯಾದರೂ ಬಾಯಿಗಳು ಬೇರಯಾಗಲಿಲ್ಲ. ಆದ್ದರಿಂದ ಶೂದ್ರನ ಅರ್ಹತೆಗಿಂತ, ಅವರ ಕೃಪೆ ಮುಖ್ಯವಾಗಿತ್ತು ಎಂಬುದು ಧ್ವನಿ. ಅಂದರೆ ಆಧುನಿಕ ಶಿಕ್ಷಣ ಎಲ್ಲರಿಗೂ ಶಿಕ್ಷಣದ ಅವಕಾಶ ನೀಡಿತು . ಎಂಬುದರ ಜೊತೆಯಲ್ಲೇ ಪರಂಪರಾಗತವಾದ ಶೋಷಕ ಮನಸ್ಥಿತಿ ಇಲ್ಲಿಯೂ ಅದನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಲೋವರಿ ಸೆಕೆಂಡರಿ ಪರೀಕ್ಷೆಯಲ್ಲಿ ಇಬ್ಬರು ಮಾತ್ರ ತೇರ್ಗಡೆ ಹೊಂದಿದ್ದರು. ಇಂಗ್ಲಿಷ್ ಕಾರಣದಿಂದ ಉಳಿದವರೆಲ್ಲ ನಪಾಸಾಗಿದ್ದರು. ಇಂಗ್ಲಿಷನ್ನು ಕಡ್ಡಾಯವಾಗಿ ಹೇರಿದರೆ ಉಂಟಾಗುವ ಅನಾಹುತದ ಅರಿವು ಕುವೆಂಪು ಅವರಿಗೆ ಅಂದೇ ಉಂಟಾಗಿತ್ತು. ಹೊಸಮನೆ ಮಂಜಪ್ಪ ಗೌಡರ ಒತ್ತಾಯದ ಮೇರೆಗೆ ಕುವೆಂಪು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಹೋಗುವಂತಾಯಿತು. ಕಡಿದಾಳ್ ಮಂಜಪ್ಪನವರೂ ಕೂಡ ಎಲ್.ಎಸ್. ತೇರ್ಗಡೆಯಾದಾಗ ಬಂಧುಗಳ ಒತ್ತಾಯದ ಮೇರೆಗೆ ಹೆಚ್ಚಿನ ವ್ಯಾಸಂಗಕ್ಕೆ ಕಳಿಸುವಂತಾಯಿತು. ಅಂದರೆ ಆ ಕಾಲದಲ್ಲಿ ಮಲೆನಾಡಿನ ಹಿರಿಯರಿಗೆ ಈಗಿನ ಕಾಲದ ಹಾಗೆ ಮಕ್ಕಳನ್ನು ಏನಾದರೂ ಮಾಡಿ ಓದಿಸಲೇಬೇಕೆಂಬ ಯಾವ ಇರಾದೆಯೂ ಇರಲಿಲ್ಲ. ಏನೋ ನಾಲ್ಕು ಅಕ್ಷರ

ಕಲಿಯಲಿ, ಮನೆಯ ವ್ಯವಹಾರ ನೋಡಿಕೊಂಡು ಹೋಗಲಿ ಎಂಬುದಷ್ಟೆ ತಮ್ಮ ಮಕ್ಕಳನ್ನು ಓದಿಸಬೇಕೆಂಬ ಆಸಕ್ತಿ ಬಂಧುಗಳ, ಹಿತೈಷಿಗಳ ಒತ್ತಡದಿಂದಲೇ ಬರಬೇಕಿತ್ತು. ಇದಕ್ಕೆ ಸಾಮಾಜಿಕ ಆರ್ಥಿಕ ಕಾರಣಗಳೂ ಇವೆ.

ಕ್ರೈಸ್ತ ಮಿಷನರಿಗಳ ಆಸಕ್ತಿ ಮತ್ತು ಮಲೆನಾಡ ಪರಿಸರದ ಜಾಗೃತ ಪ್ರಜ್ಞೆಯ ಹಿರಿಯರ ಪ್ರೋತ್ಸಾಹದಿಂದ ಈ ನೆಲದಲ್ಲಿ ಅನೇಕ ಆಧುನಿಕ ಶಿಕ್ಷಣ ನೀಡುವ ಶಾಲೆಗಳು ಸ್ಥಾಪಿತವಾದವು. ಅನೇಕ ಮಂದಿ ಶ್ರೀಮಂತರ, ಮಧ್ಯಮ ವರ್ಗದವರ ಮಕ್ಕಳು ಆಧುನಿಕ ಶಿಕ್ಷಣ ಪಡೆದು ಮುಂದೆ ಬೆಂಗಳೂರು – ಮೈಸೂರುಗಳಲ್ಲಿಯೂ ವ್ಯಾಸಂಗವನ್ನು ಮಾಡಲು ಸಾಧ್ಯವಾಯಿತು. ಹಲವು ಮಂದಿ ತಮ್ಮ ವ್ಯಾಸಂಗವನ್ನು ಪೂರ್ಣಗೊಳಿಸಿಯೋ ; ಅಪೂರ್ಣಗೊಳಿಸಿಯೋ ತಮ್ಮ ಪರಿಸರಕ್ಕೆ ಹಿಂತಿರುಗಿ ಹೊಸ ರೀತಿಯಲ್ಲೋ, ಸುಧಾರಿತ ರೀತಿಯುಲ್ಲೋ ಬದುಕನ್ನು ರೂಪಿಸಿಕೊಳ್ಳುತ್ತಾ ಬಾಳಿದರು. ಕೆಲವರು ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಸೇವಾ ಕ್ಷೇತ್ರಗಳಲ್ಲಿ ನೆಲೆಯೂರಿ ಸಾಧನೆಯಲ್ಲಿ ತೊಡಗಿಕೊಂಡು ಮಲೆನಾಡಿಗೆ ಕೀರ್ತಿಯನ್ನು ತಂದರು.

ಕುವೆಂಪು ನೆನಪಿನ ದೋಣಿಯಲ್ಲಿ ತಿಳಿಸುವಂತೆ ಅವರಿಗಿಂತ ಸ್ವಲ್ಪ ಪೂರ್ವದಲ್ಲಿ ಮೈಸೂರು, ಬೆಂಗಳೂರುಗಳಿಗೆ ವ್ಯಾಸಂಗಕ್ಕಾಗಿ ಹೋಗಿ ಹಿಂತಿರುಗಿರುವವರಲ್ಲಿ ಕೆಲವರ ಹೆಸರುಗಳನ್ನು ಕಾಣಬಹುದು. ಕುಪ್ಪಳ್ಳಿ ಅಯ್ಯಪ್ಪಗೌಡರು, ದೇವಂಗಿ ತಿಮ್ಮೇಗೌಡರು, ವಾಟಗಾರು ವೆಂಕಪ್ಪಗೌಡರು, ಕುವೆಂಪು ಅವರಿಗೆ ಸಾಹಿತ್ಯದ ರುಚಿಯನ್ನು ಹತ್ತಿಸಿದ ಹೊಸಮನೆ ಮಂಜಪ್ಪಗೌಡರು ಮುಂತಾದವರು ಮಲೆನಾಡ ಪರಿಸರದಲ್ಲಿ ಆಧುನಿಕ ಶಿಕ್ಷಣ ಪಡೆದ ಮೊದಲ ತಲೆಮಾರೆನ್ನಬಹುದು. ಕುವೆಂಪು, ದೇವಂಗಿ ಮಾನಪ್ಪಗೌಡರು, ಕಡಿದಾಳ್ ಮಂಜಪ್ಪಗೌಡರು ಮುಂತಾದವರು ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಉನ್ನತ ವ್ಯಾಸಂಗವನ್ನು ಮಾಡಿದವರ ಮೊದಲ ಸಾಲಲ್ಲಿ ಕಾಣಿಸಿಕೊಳ್ಳುತ್ತಾರೆ. ಇದೆಲ್ಲಾ ೨೦–೪೦ರ ದಶಕಗಳಲ್ಲಿಯಾದರೆ, ೪೦–೬೦ರ ದಶಕಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆಧುನಿಕ ಶಿಕ್ಷಣ ಪಡೆದು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ತಲೆಮಾರುಗಳನ್ನು ಕಾಣಬಹುದು. ಹಾ.ಮಾ.ನಾಯಕರು, ಶಾಂತವೇರಿ ಗೋಪಾಲಗೌಡರು, ಯು.ಆರ್.ಅನಂತಮೂರ್ತಿ ಅವರು ಮೊದಲಾದವರು ಮಲೆನಾಡಿನ ಅವರ ಮುಂದಿನ ಯುವ ಜನಾಂಗದ ಮೇಲೆ ಶೈಕ್ಷಣಿಕವಾಗಿ, ರಾಜಕೀಯವಾಗಿ ಸಾಂಸ್ಕೃತಿಕವಾಗಿ ಪ್ರಭಾವ ಬೀರಿದರು.

ಹೀಗೆ ಕ್ರೈಸ್ತ ಮಿಷನರಿಗಳ ಮೂಲಕ ಪ್ರವೇಶಿಸಿದ ಆಧುನಿಕ ಶಿಕ್ಷಣ ಮಲೆನಾಡ ಪರಿಸರದಲ್ಲಿ ಸ್ಥಿತ್ಯಂತರವನ್ನುಂಟು ಮಾಡುತ್ತಾ ಆ ಮೂಲಕ ಅರಿವನ್ನೂ, ಹೊಸ ಎಚ್ಚರವನ್ನೂ ಸುಧಾರಿತ ಬದುಕನ್ನು ರೂಪಿಸಿಕೊಳ್ಳುವಂತಹ ಸಂಚಲನವನ್ನು ಉಂಟು ಮಾಡುತ್ತಲೇ ಇದೆ. ಈ ರೀತಿ ಇಂಗ್ಲಿಷ್ ಅಥವಾ ಆಧುನಿಕ ಶಿಕ್ಷಣ ಮಲೆನಾಡನ್ನು ಪ್ರವೇಶಿಸಿದಂದಿನಿಂದ ಇಲ್ಲಿ ಆದ ಪಲ್ಲಟಗಳನ್ನು, ಉಂಟು ಮಾಡಿದ ಸಂಘರ್ಷವನ್ನು, ಮೂಡಿಸಿದ ಹೊಸ ಆಶೋತ್ತರಗಳ ಬಗ್ಗೆ ಈ ನೆಲದ ಸಾಹಿತ್ಯ ಪ್ರತಿಬಿಂಬಿಸುತ್ತಾ, ಪ್ರತಿಕ್ರಿಯಿಸುತ್ತಲೇ ಬಂದಿದೆ.

ಆಧುನಿಕ ಶಿಕ್ಷಣ : ಕಥಾಸಾಹಿತ್ಯ

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮಲೆನಾಡ

ಬದುಕಿನ ಸಾಂಸ್ಕೃತಿಕ ಕಥಾನಕ. ೧೯ನೇ ಶತಮಾನದ ಕೊನೆ ೨೦ನೇ ಶತಮಾನದ ಆರಂಭಕಾಲ ಘಟ್ಟದ ಬದುಕನ್ನು ಅಭಿವ್ಯಕ್ತಿಸುತ್ತದೆ. "ಕೂಲಿ ಮಠಗಳ ಶಿಕ್ಷಣ ಪದ್ಧತಿ ಕೊನೆಯಾಗುತ್ತಿದ್ದ ಇಂಗ್ಲಿಷರ ಆಧುನಿಕ ಶಿಕ್ಷಣ ಪದ್ಧತಿ ಮೊಳಕೆದೋರುತ್ತಿದ್ದ ಸಂಧಿ ಸಮಯ. ಮಲೆನಾಡಿಗೆ ಆ ಹೊಸ ಪ್ರಭಾವದ ಮುಂಬೆಳಕನ್ನು ಮೊದಲಿಗೆ ತಂದವರು ಕ್ರೈಸ್ತ ಮಿಷನರಿಗಳು ಮಂಡಗದ್ದೆಯಲ್ಲಿ ಹೆರಿಗೆ ಆಸ್ಪತ್ರೆ ಸ್ಥಾಪಿಸಿದಂತೆ ತೀರ್ಥಹಳ್ಳಿ, ದೇವಂಗಿ ಮೊದಲಾದೆಡೆಗಳಲ್ಲಿ ಸ್ಕೂಲುಗಳನ್ನು ಸ್ಥಾಪಿಸಿದರು"[೧೪] – ಹೀಗೆ ಕುವೆಂಪು ಮಲೆನಾಡಿಗೆ ಕ್ರೈಸ್ತ ಮಿಷನರಿಗಳು ಪ್ರವೇಶಿಸಿದ್ದನ್ನು ಕಾದಂಬರಿಯಲ್ಲೂ ದಾಖಲಿಸುತ್ತಾರೆ. ಮೇಗರವಳ್ಳಿಯ ಅಂತಕ್ಕ ಶೆಟ್ತಿಯ ಹೋಟ್ಲುಮನೆ ಸುದ್ದಿ ಮಾಧ್ಯಮದ ಕೇಂದ್ರ, ಅದರ ಪಕ್ಕದಲ್ಲೆ ನಿರ್ಮಾಣವಾಗುವ ಮಿಶನ್ ಸ್ಕೂಲು ಏನೋ ಹೊಸದೊಂದು ಈ ಊರನ್ನು ಪ್ರವೇಶ ಮಾಡುತ್ತಿರುವಂತೆ ಜನರಿಗೆ ತೋರುತ್ತಿತ್ತು. ಅದು ಅವರಿಗೆ ಕುತೂಹಲವನ್ನುಂಟು ಮಾಡಿದರೆ, ಆ ಕಟ್ಟಡದ ನಿರ್ಮಾಣದ ಹೊಣೆಹೊತ್ತ ಪಾದ್ರಿ ಜೀವರತ್ನಯ್ಯ ಆ ಭಾಗದಲ್ಲೆಲ್ಲಾ ಓಡಾಡುತ್ತಿರುವುದು ಮತಾಂತರದ ಅನುಮಾನಗಳನ್ನು ಆತಂಕವನ್ನು ಜನರಲ್ಲಿ ಮೂಡಿಸಿತ್ತು. ಕ್ರೈಸ್ತ ಮಿಷನರಿಗಳ ಮತಾಂತರ ಕಾರ್ಯಗಳನ್ನು ಮುಕುಂದಯ್ಯ ತೀವ್ರವಾಗಿ ವಿರೋಧಿಸುತ್ತಾನೆ. ಇದು ಸಮಾಜದ ಬುಡಮೇಲು ಮಾಡುವ ಕೆಲಸ ಎಂದು ಖಂಡಿಸುತ್ತಾನೆ. ಆದರೆ ಮಿಷನರಿಗಳಿಂದ ಮಲೆನಾಡಿಗೆ ದತ್ತವಾದ ವೈದ್ಯಕೀಯ ಹಾಗೂ ವಿದ್ಯಾಭ್ಯಾಸದ ಸೇವಾ ಕಾರ್ಯಗಳನ್ನು ಶ್ಲಾಘಿಸುತ್ತಾನೆ. ಮಿಶನ್ ಶಾಲೆಯ ಏಳಿಗೆಗಾಗಿ ಸಹಕರಿಸಲು ಮುಂದಾಗುತ್ತಾನೆ. ತಮ್ಮ ಮನೆಯ ಐಗಳ ಮಠದಲ್ಲಿ ಕಲಿಯುತ್ತಿದ್ದ ಕಾಡು, ತಿಮ್ಮು ಮೊದಲಾದ ಹುಡುಗರನ್ನು ಇಲ್ಲಿ ತಂದು ಸೇರಿಸಬೇಕೆಂದು ಉತ್ಸಾಹ ತಾಳುತ್ತಾನೆ. ದೇವಂಗಿ ರಾಮಣ್ಣಗೌಡರು ಮೊದಲಾದ ಆ ಕಾಲದ ಸಮಾಜದ ಮುಖಂಡರು ಆಧುನಿಕ ಶಿಕ್ಷಣವನ್ನು ಯಾವ ಮನೋಭಾವದಿಂದ ಸ್ವಾಗತಿಸಿದರು ಮತ್ತು ನಿರಾಕರಿಸಿದರು ಎಂಬುದನ್ನು ಮುಕುಂದಯ್ಯನ ಪಾತ್ರದಲ್ಲಿ ಕಾಣಬಹುದು. ಅಂದರೆ ಕುವೆಂಪು ಅವರು ಪರಕೀಯ ಸಂಸ್ಕೃತಿಯಿಂದ ದತ್ತವಾದ ಆಧುನಿಕತೆ. ಆ ಮೂಲಕ ಮಲೆನಾಡಿಗೆ ಬಂದ ಆಧುನಿಕತೆಯ ಪ್ರತೀಕವಾದ, ಎಚ್ಚರದ ಭಾಗವಾದ ಶಾಲೆಯ ಬಗೆಗೆ ಒಲವನ್ನು ತೋರುತ್ತಾರೆ. ಈ ಬಗಗೆ ವಿಮರ್ಶಕರಾದ ಕೆ.ಸಿ.ಶಿವಾರೆಡ್ಡಿಯವರು ಹೀಗೆ ಹೇಳುತ್ತಾರೆ –

"ಆಧುನಿಕ ವಿಚಾರಧಾರೆಗಳು ಆ ಮೂಲಕ ಮಲೆನಾಡಿಗೆ ಬಂದ ಆಧುನಿಕತೆಯ ಪ್ರತೀಕವಾದ ಶಾಲೆ ಇಡೀ ಮಲೆನಾಡಿನ ದುರಂತ ಬದುಕಿಗೆ, ಪುನಃಶ್ಚೇತನದ ಸುಯೋಗವನ್ನು ತಂದುಕೊಟ್ಟಿತ್ತೆಂಬ ಆಶಯ ಮದುಮಗಳು ಕಾದಂಬರಿಯಲ್ಲಿ ಗಾಢವಾಗಿದೆ".[೧೫]

ಈ ಮೇಲಿನ ಉದ್ಧರಣೆಯಲ್ಲಿ 'ದುರಂತ ಬದುಕಿಗೆ' ಎಂಬ ಮಾತು ಸರಿಹೊಂದುವುದಿಲ್ಲ. ಆಧುನಿಕ ಪೂರ್ವದಲ್ಲಿ ಮಲೆನಾಡಿನ ಸಾಂಸ್ಕೃತಿಕ ಬದುಕು ದುರಂತವಾಗಿಯೇನೂ ಇರಲಿಲ್ಲ ; ಜಡವಾಗಿಯೂ ಇರಲಿಲ್ಲ. ಇಲ್ಲಿಯ ಪರಿಸರ ತನ್ನ ಜೀವನ ಕ್ರಮಕ್ಕೆ ತನ್ನದೇ ಆದ ವ್ಯವಸ್ಥೆಯನ್ನು ರೂಪಿಸಿಕೊಂಡಿತ್ತು. ಆ ಬದುಕಿಗೆ ಸ್ಥಿತ್ಯಂತರವನ್ನು, ಹೊಸತನವನ್ನು, ಸುಧಾರಣೆಯನ್ನು ತಂದುದು ಆಧುನಿಕತೆಯ ವಿಚಾರಧಾರೆಗಳು ಮತ್ತು ಅದರ ಪ್ರತೀಕವಾದ ಆಧುನಿಕ ಶಿಕ್ಷಣ ಪದ್ಧತಿ.

ಆಧುನಿಕತೆಯ ಪ್ರತೀಕವಾದ ಶಾಲೆ ಅದುವರೆಗಿನ ಸೀಮಿತ ಪರಿಸರಕ್ಕೆ ಮೀಸಲಾದ ಐಗಳ

ಮತಕ್ಕೆ ಇತಿಶ್ರೀ ಹಾಡಲಾಯಿತು. ಮಕ್ಕಳ ಏಳಿಗೆಯ ಪ್ರತಿರೂಪವಾದ ಶಾಲೆ ಅದಕ್ಕೆ ಪೂರಕವಾದ ವ್ಯವಸ್ಥೆಯಾಗಿ ಅಂತಕ್ಕನ 'ಹೋಟ್ಲುಮನೆ' ವಿದ್ಯಾರ್ಥಿನಿಲಯವಾಗಿ ಮಾರ್ಪಡುವುದರ ಮೂಲಕ ಶಾಲೆ ಎಂಬುದು ಈ ನೆಲದ ಬದುಕಿಗೆ ಹೊಸ ಆಶಾ ಕಿರಣವಾಗಿ ಕಾಣಿಸಿಕೊಳ್ಳುತ್ತದೆ.

ಕುವೆಂಪು ಅವರ 'ಕಾನೂರು ಹೆಗ್ಗಡತಿ'ಯ ಕಥೆ ಪ್ರಾರಂಭವಾಗುವುದೇ ಅಂತಕ್ಕ ಶೆಟ್ಟಿಯಂತಹ ಹೋಟ್ಲುಮನೆಯಲ್ಲಿ ಕಲಿತು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮೈಸೂರು-ಬೆಂಗಳೂರಿನಂತಹ ನಗರಗಳಲ್ಲಿ ವಿದ್ಯಾಭ್ಯಾಸ ಪಡೆದು ಆಧುನಿಕತೆಯನ್ನು ಮೈಗೂಡಿಸಿಕೊಂಡು ಮರಳಿ ಮಣ್ಣಿಗೆ ಬಂದ ಯುವಕರ ವರ್ಣನೆಯಿಂದಲೇ. ಮೈಸೂರಿನಿಂದ ಹೂವಯ್ಯ, ರಾಮಯ್ಯ ಬೇಸಿಗೆಯ ರಜೆಗೆ ಊರಿಗೆ ಹಿಂತಿರುಗಿ ತೀರ್ಥಹಳ್ಳಿ ಕಲ್ಲು ಸಾರ ದಾಟುವ ಸಂದರ್ಭದಿಂದ ಕಾದಂಬರಿ ಪ್ರಾರಂಭವಾಗುವ ಕ್ರಿಯೆಯೇ ಆಧುನಿಕತೆ ಈ ಮಲೆನಾಡನ್ನು ಪ್ರವೇಶಿಸುವುದನ್ನು ಸೂಚಿಸುತ್ತದೆ. ಹೂವಯ್ಯ ತಲೆಗೆ ಟೋಪಿ ಹಾಕಿರಲಿಲ್ಲ. ಕ್ರಾಪು ಬಿಟ್ಟಿದ್ದು, ಖಾದಿತೊಟ್ಟಿದ್ದ. ಆತನ ನಿಲುವು ತಿಳಿದವರಲ್ಲಿ ಗೌರವವನ್ನೂ, ತಿಳಿಯದವರಲ್ಲಿ ಮೋಹವನ್ನುಂಟು ಮಾಡುವಂತಿತ್ತು. ಆತನ ಮೂಗು ತುದಿಯಲ್ಲಿ ಶುಕಚುಂಚುವಿನಂತೆಯೂ ಅದು ಸೃಷ್ಟಿಯ ರಹಸ್ಯವನ್ನು ಕುಟಿಕಿ ನೋಡುತ್ತೇನೆ ಎನ್ನುವಂತಿತ್ತು ಎಂಬ ವಿವರಣೆಯಲ್ಲಿ ಆಧುನಿಕ ಶಿಕ್ಷಣದಿಂದ ಆಧುನಿಕತೆಯ ಒಳ್ಳೆಯ ಅಂಶಗಳನ್ನು ಮೈಗೂಡಿಸಿಕೊಂಡ ಹೂವಯ್ಯನಲ್ಲಿ ತನ್ನ ವಿಚಾರಧಾರೆಯಿಂದ ಮಲೆನಾಡ ಪರಿಸರದ ಮೌಢ್ಯ, ಕಂದಾಚಾರಗಳನ್ನು ಕುಟುಕಿ ತೆಗೆದು ಸುಧಾರಣೆ ತರುವ ಮನೋಭಾವನೆ ಮೈದಾಳಿತ್ತು ಎಂಬುದನ್ನು ಸೂಚಿಸುತ್ತದೆ. ಪುರೋಹಿತ ಶಾಹಿಯಿಂದ ಬಿಡುಗಡೆ ಮತ್ತು ಆತ್ಮ ಸ್ಥೈರ್ಯದ ಪ್ರತೀಕವೂ ಆಗಿದ್ದ.

ಅದೇ ಅವನ ಜೊತೆಯಲ್ಲಿ ಬರುವ ಸಹೋದರ ರಾಮಯ್ಯನಿಗೆ ಬೀರಿದ ಆಧುನಿಕತೆಯ ಪ್ರಭಾವ ಭಿನ್ನವಾಗಿತ್ತು ; ಮೇಲುಸ್ತರದಾಗಿತ್ತು. ಆತನ ನಿಲುವಿನಲ್ಲಿ ಅಂತಹ ವಿಶೇಷತೆಯೇನೂ ಕಾಣುತ್ತಿರಲಿಲ್ಲವೆಂದೂ, ಆಧುನಿಕತೆ ತಂದ ಸುಖಾಪೇಕ್ಷೆಗೆ ಒಳಗಾದಂತೆ ಅವನ ದೇಹವಿತ್ತೆಂದೂ ಆತ ಕೂಡ ಖಾದಿ ತೊಟ್ಟಿದ್ದ, ಬಿಳಿ ಟೋಪಿ ಧರಿಸಿದ್ದ, ಮೈಗೆ ನೀಲಿ ಬಣ್ಣದ ಕೋಟು ಹಾಕಿದ್ದ ಕಿಸೆಯಲ್ಲಿ ಫೌಂಟನ್ ಪೆನ್ ಕೈಯಲ್ಲೊಂದು ಕೈಗಡಿಯಾರ ಹೊಂದಿದ್ದ ಎಂದು ವರ್ಣಿಸುವ ಮಾತುಗಳು ಆಧುನಿಕತೆ ತಂದ ವಸ್ತು ರೂಪಗಳು ಅವನ ದೇಹವನ್ನು ಹೇಗೆ ಅಲಂಕರಿಸಿದ್ದವು ಎಂಬುದನ್ನು ಅಭಿವ್ಯಕ್ತಿಸುತ್ತವೆ. ಆಧುನಿಕತೆ ತಂದ ವಿಚಾರ ಧಾರೆಗಳನ್ನು ಹೆಚ್ಚಾಗಿ ಒಬ್ಬ ತನ್ನದನ್ನಾಗಿ ಮಾಡಿಕೊಂಡಿದ್ದರೆ. ಮತ್ತೊಬ್ಬ ಆಧುನಿಕತೆಯನ್ನು ಬಾಹ್ಯವಾಗಿ ಹೆಚ್ಚಾಗಿ ಅಳವಡಿಸಿಕೊಂಡಿದ್ದ. ಅಂದರೆ ಆಧುನಿಕ ಶಿಕ್ಷಣ ಅವರಿಬ್ಬರ ಮೇಲೆ ಒಂದೇ ತೆರನಾದ ಪ್ರಭಾವವನ್ನು ಬೀರಲಿಲ್ಲ. ಕಾರಣ ಆಧುನಿಕ ಶಿಕ್ಷಣ ವ್ಯಕ್ತಿಗತವಾದ ದೃಷ್ಟಿಕೋನವನ್ನು ಹೆಚ್ಚಾಗಿ ಬೆಳೆಸಿತು. ಸಮೂಹ ಪ್ರಜ್ಞೆಯಿಂದ ವ್ಯಕ್ತಿ ಪ್ರಜ್ಞೆಗೆ ಸಾಗುವುದಕ್ಕೆ ಆಧುನಿಕತೆ ಕಾರಣವಾಯಿತು. ಈ ವ್ಯಕ್ತಿ ಪ್ರಜ್ಞೆಯು ಕೇವಲ ಲೌಕಿಕ ಬಿಂಬವಾಗಿಯೂ ಸ್ವೇಚ್ಛಾಚಾರವಾಗುವುದಕ್ಕೂ ಆಧುನಿಕತೆ ಕಾರಣವಾಯಿತು. ಸೂಕ್ಷ್ಮ ಮನಸ್ಸುಗಳು ಆಧುನಿಕತೆಯನ್ನು, ಸಮುದಾಯದ ಸೃಜನಶೀಲ ಶ್ರೇಷ್ಠತೆಯನ್ನು ಬಳಸಿಕೊಂಡರೆ, ರಾಮಯ್ಯ ಕೇವಲ ಆಧುನಿಕತೆಯ ಕೆಳಸ್ತರದಲ್ಲಿಯೇ ನಿಂತು ಬಿಟ್ಟಿರುವುದನ್ನು ಕಾಣಬಹುದು.

ಇಂಗ್ಲಿಷ್ ಶಿಕ್ಷಣವನ್ನು ಪಡೆದುಕೊಂಡು ತಮ್ಮ ಹಳ್ಳಿ ಪರಿಸರಕ್ಕೆ ಪ್ರವೇಶಿಸಿದಾಗ ಇವರ ಬಗ್ಗೆ ಸಂಬಂಧಿಕರಲ್ಲಿ, ಇವರ ವಯೋಮಾನದ ತರುಣ-ತರುಣಿಯರಲ್ಲಿ ಆಳುಕಾಳುಗಳ ಸಮುದಾಯದಲ್ಲಿ ಮೆಚ್ಚುಗೆ, ಗೌರವಿದೆ. ಸೀತೆಮನೆ ಸಿಂಗಪ್ಪಗೌಡ, ಮುತ್ತಳ್ಳಿ ಶಾಮಯ್ಯಗೌಡರಂತಹ ಹಿರಿಯರು, ಚಿನ್ನಯ್ಯ-ಸೀತೆಯಂತವರು ಹೂವಯ್ಯ-ರಾಮಯ್ಯರ ಬಗ್ಗೆ ಮೆಚ್ಚುಗೆ ಗೌರವದಿಂದಲೇ ನಡೆದುಕೊಳ್ಳುತ್ತಾರೆ. ಅವರ ಆಗಮನ ಮನೆಯಲ್ಲಿ ಒಂದು ಸಂಭ್ರಮವಾಗಿ ಕಾಣುತ್ತಾರೆ. ಇದೆಲ್ಲಾ ಆಧುನಿಕತೆಯ ಬಗ್ಗೆ ಇರುವ ಮನಸ್ಥಿತಿ ರೂಪಗೊಂಡ ಬಗೆಯಿದು. ಮುತ್ತಳ್ಳಿ ಮನೆಯಲ್ಲಿ ಹೂವಯ್ಯನ ಕೈಗೆ ಸೀತೆ ಆತನ ಟ್ರಂಕಿನಲ್ಲಿದ್ದ ಪುಸ್ತಕಗಳನ್ನು ಎತ್ತಿಕೊಡುವಾಗ ರೋಮಾಂಚನ ಅನುಭವಿಸಿದಳು.

"ಕೆಂಪು ಹಸುರು ಮೊದಲಾದ ಬಣ್ಣದ ಬೈಂಡುಗಳಿಂದಲೂ ಭಾರವಾಗಿ ಭವ್ಯವಾಗಿ ನಿಗೂಢವಾಗಿದ್ದ ಆ ಗ್ರಂಥದ ಸಮೂಹಗಳನ್ನು ಸ್ಪರ್ಶಿಸುವ ಅದೃಷ್ಟ ದೊರಕಿದುದು ಸೀತೆಗೆ ಒಂದು ಸೌಭಾಗ್ಯವೆಂಬಂತೆ ತೋರಿತ್ತು. ಹೂವಯ್ಯನಲ್ಲಿ ಆಕೆಗೆ ಮೊದಲೇ ಇದ್ದ ಅನುರಾಗ ಗೌರವಗಳು ಅವನು ಓದುತ್ತಿದ್ದ ಆ ಹೊತ್ತುಗೆಗಳನ್ನು ನೋಡಿ ಇಮ್ಮಡಿಯಾದವು". ಆ ಪುಸ್ತಕಗಳಿಗೂ (ತನ್ನಲ್ಲಿರುವ ಕನ್ನಡದ ಪುಸ್ತಕಗಳಿಗೂ) ಆಂಗ್ಲೇಯ ವಹಿಗಳಿಗೂ ಇದ್ದ ರೂಪ ತಾರತಮ್ಯ ಕಾಫಿ ತೋಟದ ಕೂಲಿಗೂ ಕಾಫಿ ತೋಟದ ದೊರೆಗೂ ಇದ್ದ ವ್ಯತ್ಯಾಸದಂತಿತ್ತು.[೧೬]

ಹೂವಯ್ಯನ ಸಾಮೀಪ್ಯದಲ್ಲಿ ಸೀತೆಗಾಗುವ ಸಂಭ್ರಮ, ಗೌರವ ಮತ್ತು ಕೀಳರಿಮೆಯನ್ನು ಅನಾವರಣಗೊಳಿಸುವ ಈ ವಿವರಣೆಯಲ್ಲಿ ಆಧುನಿಕತೆ ತರುವ ಪರಿಣಾಮವನ್ನು ಸೂಚಿಸುತ್ತದೆ. ಸೀತೆ ಅತ್ಯಂತ ಗೌರವದಿಂದ ಸ್ಪರ್ಶಿಸುವ ಮುದ್ರಣ ಕೃತಿಗಳೇ ಜಾನಪದದ ಮಹಾ ಕಾಲಜ್ಞಾನವನ್ನು ಹೊಸಕಿ ಹಾಕಿತು ಎಂಬುದು ಒಂದು ದುರಂತ ಕಥೆ. ಗಾಂಧಿ ತಮ್ಮ ಹಿಂದೂ ಸ್ವರಾಜ್ಯದಲ್ಲಿ ಇಂತಹ ಮುದ್ರಣತಂತ್ರಜ್ಞಾನ ಸಂಸ್ಕೃತಿಯನ್ನು ತೀವ್ರವಾಗಿ ತರಾಟೆ ತೆಗೆದುಕೊಳ್ಳುವುದು ಈ ಕಾರಣವಾಗಿಯೆ. ಮುದ್ರಣ ನಾಲಿಗೆಯ ನಂಬಿಕೆ ಶಕ್ತಿಯನ್ನು ಕಳೆದ ಹಾಗೆ ಈಚಿನ ತಂತ್ರಜ್ಞಾನದ ಮುಂದುವರಿಕೆಯ ಭಾಗವಾದ ಕಂಪ್ಯೂಟರ್‌ಗಳು ನೆನಪಿನ ಶಕ್ತಿಯ ಅನುಭವವನ್ನು ಕುಬ್ಜ ಮಾಡುತ್ತಿವೆ. ಸೀತೆಗೆ ಹೂವಯ್ಯನ ಮೇಲೆ ಇದ್ದ ಪ್ರೀತಿ, ಗೌರವ ಹೆಚ್ಚಾಗಲು ಕಾರಣ ಆತನ ಇಂಗ್ಲಿಷ್ ಶಿಕ್ಷಣ. ಈ ರೀತಿ ಬೆರಗು ಗೌರವ ಅನುಭವಿಸುವ ಮನಃಸ್ಥಿತಿ ತನ್ನಲ್ಲಿರುವ ಕನ್ನಡ ಪುಸ್ತಕಗಳನ್ನು ಕಳಪೆಯಾಗಿ ತೋರುವುದನ್ನು ಅನುಭವಿಸುತ್ತದೆ. ಆಧುನಿಕತೆ ಆಕರ್ಷಕವಾಗಿ ಆಕ್ರಮಣ ಮಾಡುವಾಗ ದೇಶೀತನ ಕುಸಿಯುವ ಪರಿಯನ್ನು ಧ್ವನಿಸುತ್ತದೆ. "ಆಳುವ ಪಶ್ಚಿಮದ ಹೊಸ ಸಂಸ್ಕೃತಿಗೆ ದೇಶೀಯ ಸಂಸ್ಕೃತಿಗಳು ಶರಣಾದ ಚರಿತ್ರೆಯೇ ಆಧುನಿಕ ಚರ್ಚೆ"[೧೭] ಎಂಬ ಮಾತಿದೆ.

ಅಂದರೆ ಇಂಗ್ಲಿಷ್ ಶಿಕ್ಷಣದ ಮೂಲಕ ಬಂದ ಆಧುನಿಕತೆ ಭಾರತೀಯರ ಮನದಲ್ಲಿ ಬೆರಗು ಸಂಭ್ರಮದ ಮೂಲಕ ಸ್ವಾಗತವನ್ನು ಪಡೆದು, ಪಡೆದ ಮನದಲ್ಲಿ ತಾರತಮ್ಯ ಮೇಲರಿಮೆ-ಕೀಳರಿಮೆಯನ್ನು ಹುಟ್ಟು ಹಾಕುವುದು, ದೇಶಿಯವಾದುದನ್ನು ಕಳಪೆಯಾಗಿ ಕಾಣುವಂತೆ ಮಾಡುವುದು ಆಧುನಿಕತೆಯ ವಿಶಿಷ್ಟ ತಂತ್ರಶಕ್ತಿ ಎನ್ನಬಹುದು. ಆಧುನಿಕ ಶಿಕ್ಷಣ ಪಡೆದ ಮತ್ತು ಪಡೆಯದವರ ನಡುವೆ ದೊರೆ-ದಾಸನ ಮನಸ್ಥಿತಿಯನ್ನು ಸಹಜವಾಗಿ ರೂಪಿಸಿತು. ಆಡಳಿತ ವ್ಯವಸ್ಥೆಯ ಕೆಳಹಂತದ ನೌಕರ ಕೂಡ

ಗ್ರಾಮೀಣ ಪ್ರದೇಶದಲ್ಲಿ ದೊರೆಯ ಪ್ರತಿ ರೂಪವಾಗಿ ಕಾಣುತ್ತಾನೆ. ಖಾಕಿ ಬಟ್ಟೆ ಹಾಕಿಕೊಂಡು ಬರುವರನ್ನು ಕಂಡರೆ ಇಂದಿಗೂ ಕೆಲವು ಹಳ್ಳಿಗಳಲ್ಲಿ ಭಯ ದೂರವಾಗಿಲ್ಲ. ಹಾಗಿರುವಾಗ ಇಂಗ್ಲೀಷ್ ಪ್ರಭುಗಳ ಆಳ್ವಿಕೆಯ ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಹೇಗಿರಬಹುದು? 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಬರುವ ಅರಣ್ಯ ಇಲಾಖೆಗೆ ಸೇರಿದ 'ಮಾರ್ಕ್'ನನ್ನು ಕಂಡರೆ ಸಾಮಾನ್ಯ ಜನರಿರಲಿ ಚಂದ್ರೇಗೌಡನಂತಹ ಜಮೀನ್ದಾರನೂ ಭಯ, ಗೌರವದಿಂದ ನೋಡುತ್ತಿದ್ದ. ಸಾಮ್ರಾಜ್ಯಶಾಹಿ ರೂಪದ 'ಮಾರ್ಕ್' ಅದೇ ಸಾಮ್ರಾಜ್ಯಶಾಹಿ ನೀಡಿದ ಆಧುನಿಕ ಶಿಕ್ಷಣ ಪಡೆದು, ಕ್ರಾಪು ಬಿಟ್ಟು, ಖಾದಿ ಬಟ್ಟೆ ತೊಟ್ಟು, ಇಂಗ್ಲಿಷ್ ಮಾತನಾಡಬಲ್ಲ ತರುಣರನ್ನು ನೋಡಿ ತನ್ನ ಅಧಿಕಾ ಚಲಾಯಿಸುವ ಮಾತನ್ನಾಡದೆ ತಟಸ್ಥನಾದ. ಅಂದರೆ ಇಂಗ್ಲಿಷ್ ಶಿಕ್ಷಣ ಇತರರನ್ನು ಶೋಷಿಸುವುದಕ್ಕೂ ; ಶೋಷಕರನ್ನು ಎದುರಿಸುವುದಕ್ಕೂ ಒಂದು ಅಸ್ತ್ರವಾದುದು ವಿಪರ್ಯಾಸ.

ಜನ ಸಂಪರ್ಕಗಳಿಂದ ದೂರ ಉಳಿದ ಮಲೆನಾಡಿಗೆ ಆಧುನಿಕತೆ ಪ್ರವೇಶವಾದದ್ದು ನಿಧಾನಗತಿಯಲ್ಲಿ, ಮಧ್ಯಮವರ್ಗದ ಒಕ್ಕಲಿಗ ಸಮುದಾಯದವರು ಆಧುನಿಕತೆಯನ್ನು ಬೆರಗು ಗಣ್ಣಿನಿಂದ ನೋಡುತ್ತಿದೆ. ಈ ಪರಿಸರದಲ್ಲೇ ಹುಟ್ಟಿ ಮೈಸೂರಿನಲ್ಲಿ ಉನ್ನತ ವ್ಯಾಸಂಗ ಪಡೆದು ಹಿಂತಿರುಗಿದ ಹೂವಯ್ಯ ಸಹಜವಾಗಿ ಬಾಹ್ಯವಾಗಿ ಮತ್ತು ಆಂತರಂಗಿಕವಾಗಿ ಬದಲಾದದ್ದರಿಂದ ಆ ಪರಿಸರಕ್ಕೆ ಪರಕೀಯನಂತೆ, ಹೊಸಬನಂತೆ ತೋರುವುದು ಸಹಜವಾಗಿದೆ. ಇವರ ಮೇಲೆ ಸುತ್ತಲ ಸಮಾಜ ಪ್ರೀತಿ, ಗೌರವ, ಕೀಳರಿಮೆಗಳ ಪ್ರತಿಕ್ರಿಯೆಗಳು ಬರುತ್ತಿರುವಂತೆ ಪುರೋಹಿತಶಾಹಿ ವೆಂಕಪ್ಪ ಜೋಯಿಸರಲ್ಲಿ ಜಮೀನ್ದಾರಶಾಹಿ ಚಂದ್ರೇಗೌಡರಲ್ಲಿ ವ್ಯಕ್ತವಾಗುವ ಪ್ರತಿಕ್ರಿಯೆಗಳು ಭಿನ್ನವಾಗಿರುತ್ತವೆ.

ಮಲೆನಾಡ ಪರಿಸರದಲ್ಲಿರುವ ಮೌಢ್ಯವನ್ನೇ ತನ್ನ ಬಂಡವಾಳ ಮಾಡಿಕೊಂಡು ಜೀವನೋಪಾಯ ಮಾಡುವಂತಹ ತನ್ನಂತವರಿಗೆ ಆಧುನಿಕ ಶಿಕ್ಷಣ ಪಡೆದ ಹೂವಯ್ಯನಂತವರ ಅಭಿಪ್ರಾಯಗಳು ಮುಳುವಾಗುತ್ತವೆ ಎಂಬುದು ವೆಂಕಪ್ಪಯ್ಯನ ಭಯ. ಆ ಕಾರಣ ಯಥಾಸ್ಥಿತಿಯ ವಾದಿಯಾದ ಈತ ಒಕ್ಕಲುತನದ ಚಟುವಟಿಕೆಗಳೇ ತಮ್ಮ ಸಮುದಾಯಕ್ಕೆ ಪ್ರಧಾನವಾದುದು ಎಂಬ ಸಂಪ್ರದಾಯ ಮನಃಸ್ಥಿತಿಯ ಚಂದ್ರೇಗೌಡನಿಗೆ ಸಾತ್ ನೀಡುವವನಂತೆ ಕಂಡು ಬರುತ್ತಾನೆ. ಆಧುನಿಕತೆಯ ಪ್ರವೇಶ ಪುರೋಹಿತಶಾಹಿಗಳಿಗೆ, ಯಥಾಸ್ಥಿತಿವಾದಿಗಳಿಗೆ ತ್ಲಲ್ಲಣವನ್ನುಂಟು ಮಾಡಿದೆ ಎಂಬುದಕ್ಕೆ ವೆಂಕಪ್ಪಯ್ಯನ ವರ್ತನೆಯೇ ಸಾಕ್ಷಿ. ಅವನ ಹಳಹಳಿಕೆಯ ಮಾತುಗಳಲ್ಲಿ ಗೋಚರವಾಗುತ್ತದೆ.

"ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳು ಮಾಡಿ ಬಿಡುತ್ತದೆ........ ದೇವರು ದಿಂಡರು ಭಕ್ತಿಗಿಕ್ತಿ ಎಲ್ಲ ನಿರ್ನಾಮ! ಜೊತೆಗೆ ನೂರಾರು ಹವ್ಯಾಸಗಳನ್ನು ಬೇರೆ ಕಲಿತು ಬಿಡುತ್ತಾರೆ....... ನಿನ್ನ ಮನೆ ಜಮೀನು ಉಳಿಯಬೇಕಾದರೆ ಅವರ ಓದು ನಿಲ್ಲಿಸಿ ಮದುವೆ ಗಿದುವೆ ಮಾಡಿ ಕೆಲಸಕ್ಕೆ ಹಚ್ಚು. ಸಂಸಾರ ತಲೆಗೆ ತಾಗಿದರೆ ಆಗ ಬುದ್ಧಿ ಬರುತ್ತದೆ"[೧೮]

ವೆಂಕಪ್ಪಯ್ಯನ ಮಾತುಗಳು ಚಂದ್ರೇಗೌಡನ ಉದ್ಧಾರಕ್ಕೆ ಹೇಳುವ ಮಾತುಗಳಲ್ಲ ; ಬದಲಾಗಿ ತನ್ನ ಜೀವನೋಪಾಯ ಮತ್ತು ವರ್ಣ ವ್ಯವಸ್ಥೆಯ ಜಾತಿ ಪದ್ಧತಿ ಯಥಾಸ್ಥಿತಿಯಲ್ಲಿರಬೇಕೆಂಬ ಒಳ ಆಸೆಯಿಂದ ಸಂಪ್ರದಾಯಸ್ಥ ಚಂದ್ರೇಗೌಡನ ಮನೆಯ ಉದ್ಧಾರದ ಸೂತ್ರವನ್ನು ಮುಂದಿಡುವ ತಂತ್ರವಾಗಿದೆ.

ಪುರೋಹಿತಶಾಹಿಯ ಹತಾಶ ಮನಃಸ್ಥಿತಿಯಿದು. ಲಾಗಾಯ್ತಿನಿಂದಲೂ ಶೂದ್ರ ಸಮುದಾಯದವನ್ನು ಅಕ್ಷರ ಪ್ರಪಂಚಕ್ಕೆ ಬರಲು ಅವಕಾಶ ನೀಡದೆ ವ್ಯವಸ್ಥಿತವಾಗಿ ಬಳಸಿಕೊಂಡು ಬಂದ ತಂತ್ರವನ್ನೇ, ಆಧುನಿಕತೆಯ ಗಾಳಿ ಬೀಸಿದ ಸ್ಥಿತ್ಯಂತರದ ಸಂದರ್ಭದಲ್ಲಿಯೂ ತಡೆಗೋಡೆಯಂತೆ ಬಳಸಿಕೊಳ್ಳುವುದನ್ನು ಕಾಣಬಹುದು. ಈಗಿನ ವಿದ್ಯಾಭ್ಯಾಸ ಎಂದರೆ ಆಗಿನ ವಿದ್ಯಾಭ್ಯಾಸ ಯಾವುದು ಈ ಸಮುದಾಯಕ್ಕೆ ನೀಡಲಾಗಿತ್ತು? ಯಾವ ಅವಕಾಶ ಕೊಡಲಾಗಿತ್ತು? ಇಲ್ಲ. ಈಗಿನ ಶಿಕ್ಷಣ ಎಂದರೆ ಪಾಶ್ಚಾತ್ಯ ಶಿಕ್ಷಣ. ಅದು ನೈತಿಕತೆಯನ್ನು ಹಾಳು ಮಾಡಿ ಬಿಡುತ್ತದೆ, ಬೇಡದ ಹವ್ಯಾಸಗಳಿಗೆ ಕಾರಣವಾಗುತ್ತದೆ ಎಂಬ ಭಯ ಸೃಷ್ಟಿ ಮಾಡಲಾಗಿತ್ತು. ಸಾಂಪ್ರದಾಯಿಕ ವೃತ್ತಿ ಬದುಕಿನ ಬಗ್ಗೆ ನಿಷ್ಠೆಯುಳ್ಳ, ಮಕ್ಕಳ ನೈತಿಕತೆಯ ಕೆಡಕಿನ ಬಗ್ಗೆ ಭಯವುಳ್ಳ, ಪುರೋಹಿತಶಾಹಿ ಸಲಹೆಯನ್ನು ಶಿರಸಾವಹಿಸಿ ಸ್ವೀಕರಿಸುವ ಮನವುಳ್ಳ ಚಂದ್ರೇಗೌಡನಂತಹ ದೂರದೃಷ್ಟಿಯಿಲ್ಲದವನಿಗೆ ಸರಿಯೆನಿಸುವುದು ಅತಿಶಯೋಕ್ತಿಯಾಗಲಾರದು. ಆದ್ದರಿಂದ 'ಹಾಂಗೆ ಮಾಡೋದೆ ಸೈ' ಎಂಬ ನಿರ್ಣಯಕ್ಕೆ ಬರುತ್ತಾನೆ. ರಾಮಯ್ಯ, ಹೂವಯ್ಯ ಭೂತ, ಜಕಣಿ, ದೆಯ್ಯ ದ್ಯಾವರು ನಿರಾಕರಿಸುವುದು, ವೇದ ಉಪನಿಷತ್ತು-ಭಗವದ್ಗೀತೆ ಓದುವುದು ಚಂದ್ರೇಗೌಡನಿಗೆ ಸರಿ ಕಾಣುವುದಿಲ್ಲ. ಅದನ್ನು ಓದಿ ಮನೆ ಹಾಳು ಮಾಡಿಕೊಳ್ಳುತ್ತಾರೆ ಎಂಬ ವೆಂಕಪ್ಪಯ್ಯನ ಮಾತು ಸರಿಯೆನಿಸುತ್ತದೆ. ಕೆಲಸದ ಬಗ್ಗೆ ನಿಗಾ ವಹಿಸದೆ ಓದುತ್ತಾ ಕುಳಿತುಕೊಳ್ಳುವುದು ಚಂದ್ರೇಗೌಡನಿಗೆ ಬೇಜವಾಬ್ದಾರಿತನವಾಗಿ ತೋರುತ್ತದೆ. ಕೃಷಿಯನ್ನು ಅವಲಂಬಿಸಿಕೊಂಡಿರುವ ಸಮಾಜದ ಮಕ್ಕಳ ಪ್ರಥಮ ಆದ್ಯತೆ ಮನೆಗೆ ಸಂಬಂಧಿಸಿದ ಕೆಲಸ. ಆ ನಂತರ ವ್ಯಾಸಂಗ. ಆದರೆ ಆಧುನಿಕ ಶಿಕ್ಷಣದಲ್ಲಿ ಮೊದಲ ಆಧ್ಯತೆ ವ್ಯಾಸಂಗಕ್ಕೆ ಇದು ಹಳೆಯ ತಲೆಮಾರಿಗೆ ಬೇಜವಾಬ್ದಾರಿತನವಾಗಿ ಕಾಣುತ್ತದೆ.

ಕ್ರಿ.ಶ. ೧೯೦೧ರಲ್ಲಿಯೇ ಕ್ರೈಸ್ತ ಧರ್ಮದ ಉಪದೇಶ ಮತ್ತು ಮೈಸೂರು ಮಲೆನಾಡು ಅಭಿವೃದ್ಧಿ ಇಲಾಖೆಯ ಬೋಧನೆಯಿಂದ ಜಾಗೃತರಾದ ಒಕ್ಕಲಿಗ ಮುಖಂಡರೆಲ್ಲಾ ಸೇರಿ ಸ್ಥಾಪಿಸಿದ "ನಾಮಧಾರಿ ಅನ್ಯೋನ್ಯಾಭಿದ್ಧಿ ಸಭಾ" ಸಂಘದ ಅನೇಕ ಧ್ಯೇಯಗಳಲ್ಲಿ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದು ಕೂಡ ಒಂದು. ಅದು ಮಲೆನಾಡ ಪರಿಸರದ ಎಲ್ಲೆಡೆ ಜಾಗೃತಿಯನ್ನುಂಟು ಮಾಡುತ್ತಿದ್ದರೂ ಅದು ತೀವ್ರವಾಗಿ ಮಲೆನಾಡಿನ ಮೂಲೆಮೂಲೆ ಮುಟ್ಟಲು ಏಕೆ ಸಾಧ್ಯವಾಗಲಿಲ್ಲ ಎಂಬ ಹಲವು ಕಾರಣಗಳಲ್ಲಿ ಈ ಪುರೋಹಿತಶಾಹಿ ಹಿಡಿತ, ಸ್ವತಂತ್ರ ವಿಚಾರಶಕ್ತಿಯ ಕೊರತೆಯು ಒಂದು. ಕಾನೂರು ಹೆಗ್ಗಡತಿಯ ಕಥೆಯು ೨೦ನೇ ಶತಮಾನದ ಮೂವತ್ತು-ನಲವತ್ತರ ದಶಕದ ಕಾಲಘಟ್ಟದ ಬದುಕನ್ನು ಚಿತ್ರಿಸುತ್ತದೆ. ಚಂದ್ರೇಗೌಡ 'ಶೂದ್ರ ಸಂಘ'ದ ಸದಸ್ಯನೇ ಆದರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ದೂರದೃಷ್ಟಿಯವನಾಗಿರಲಿಲ್ಲ ; ಮಂದದೃಷ್ಟಿಯವನಾಗಿದ್ದ. ಈ ಮಂದ ದೃಷ್ಟಿಯ ಹಿಂದಿರುವುದು ಪುರೋಹಿತ ಶಕ್ತಿ? ಆದ್ದರಿಂದ ಬಹುತೇಕ ಯುವಕರು ಸ್ವ-ಪ್ರಯತ್ನ, ಹೋರಾಟ, ತ್ಯಾಗಗಳಿಂದಲೇ ಶಿಕ್ಷಣ ಪಡೆಯಲು ಸಾಧ್ಯವಾಗಿದ್ದನ್ನು ಮಲೆನಾಡ ಪರಿಸರದಲ್ಲಿ ಗಮನಿಸಬಹುದು.

ಹಳೆ ತಲೆಮಾರಿನ ಚಂದ್ರೇಗೌಡ ತನ್ನ ಮಗ ರಾಮಯ್ಯನ ಹತ್ತಿರ ವ್ಯಾಸಂಗದ ಮುಂದುವರಿಕೆಯನ್ನು ಕಡ್ಡಿ ಮುರಿದಂತೆ ನಿರಾಕರಿಸುತ್ತಾನೆ.

"ಸಾಕು ನೀವು ಓದಿ ಪ್ಯಾಸು ಮಾಡಿದ್ದು, ನೀವು ಅಮಲ್ದಾರಿಕೇ ಮಾಡೋದು ಅಷ್ಟರೊಳಗೆ

ಇದೆ! ನೆಲಾಗುಡಿಸುವಂತೆ ಬಿಳೀ ಪಂಚೆ ಉಟ್ಕೊಂಡು ಷೋಕಿ ಮಾಡಿ ಬಿಟ್ಟರೆ ಎಲ್ಲಾ ಬಂತು! ಆ ವೆಂಕಪ್ಪಯ್ಯ ಹೇಳ್ದ್ಹಾಂಗೆ ಮಣ್ಣು ಕೆರೆಯೊ ಜಾತಿ ಕೈಗೆ ಲೇಖನಿ ಕೊಟ್ಟರೆ ಇನ್ನೇನಾಗ್ತದೆ........

'ಅಣ್ಣಯ್ಯ ಇನ್ನೂ ಓದಬೇಕು ಅಂತಿದ್ದಾನೆ' – ರಾಮಯ್ಯ ಅಂಜುತ್ತಲೇ ಅಂದಾಗ ನೀವು ಓದ್ತಾ ಷೋಕಿ ಮಾಡ್ತಾ ಪ್ಯಾಟೆ ತಿರುಗ್ತಾ ಇರಿ, ನಾನಿಲ್ಲಿ ಗೊಬ್ಬರ ಹೊತ್ತು ಗೆಯ್ದು ದುಡ್ಡು ಕಳಿಸ್ತಾ ಇರ್ತೀನಿ..... ಅವನು ಏನಾದ್ರೂ ಮಾಡ್ಲಿ..... ಅವನ ಪಾಲು ಅವನು ತೆಗೆದುಕೊಂಡು ಮೈಸೂರಿಗಾದ್ರೂ ಹೋಗ್ಲಿ, ಮದ್ರಾಸಿಗಾದ್ರೂ ಹೋಗ್ಲಿ"[೧೯]

ಪರಂಪರಾಗತವಾದ ವೃತ್ತಿ ಬದುಕಿಗೆ ಮತ್ತು ಯಥಾಸ್ಥಿತಿಗೆ ಅಂಟಿಕೊಂಡ ಚಂದ್ರೇಗೌಡನಿಗೆ ಮಕ್ಕಳು ಪಡೆಯುತ್ತಿರುವ ಆಧುನಿಕ ಶಿಕ್ಷಣ ಆಕರ್ಷಕವಾಗಿ ತೋರುವುದಿಲ್ಲ ; ಅದೊಂದು ಷೋಕಿಯಾಗಿ ತೋರುತ್ತದೆ. ಆಧುನಿಕ ಶಿಕ್ಷಣ ಮೂಡಿಸಿದ ಶಿಸ್ತು, ಸ್ವಚ್ಛತೆಯ ಅರಿವು, ನಾಗರಿಕ ಲಕ್ಷಣಗಳು ಮನೆಹಾಳು ಕೆಲಸವಾಗಿ ತೋರುತ್ತದೆ. ಆಯಾ ಜಾತಿ, ವರ್ಗದ ಕಸುಬು ಪಲ್ಲಟವಾಗುವ ಬಗ್ಗೆ ವಿರೋಧವಿದೆ. ವೃತ್ತಿಯನ್ನೇ ಜಾತಿಯಾಗಿಸಿದ ಮತ್ತು ಆ ಬಗೆಗೆ ಇನ್ನಿಲ್ಲದ ರೀತಿಯ ಭಾವನಾತ್ಮಕ ಸಂಬಂಧಗಳನ್ನೆಲ್ಲಾ ಬೆಸೆದು ತಲೆಮಾರುಗಳಿಂದ ಒಂದೊಂದು ಕಸುಬಿಗೆ ಅಂಟಿಕೊಂಡಿರುವಂತೆ ಮಾಡಿರುವುದು ವೈದಿಕಶಾಹಿ ಆಲೋಚನೆಯ ಫಲ. ಈ ಕಾರಣದಿಂದಲೇ ಶ್ರೇಣಿಕೃತ ಸಮಾಜದ ಮೂಲಾಶಯಗಳು ಇಂದಿಗೂ ಉಳಿದುಕೊಂಡು ಬಂದಿವೆ. ಆಧುನಿಕ ಶಿಕ್ಷಣದ ಮುಖ್ಯ ಗುರಿ ಪರಂಪರಾ ವೃತ್ತಿಯನ್ನು ದಾಟುವ ಅಥವಾ ಮೀರುವ ಶಕ್ತಿಯನ್ನು ನೀಡುತ್ತದೆ. ಚಂದ್ರೇಗೌಡರಂತವರಿಗೆ ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದೆಂದರೆ ಅದು ತರುವ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳನ್ನು ಒಪ್ಪಿಕೊಳ್ಳುವುದೆಂದೇ ಅರ್ಥ. ಈ ಸ್ಥಿತ್ಯಂತರವನ್ನು ಹಳೆ ತಲೆಮಾರು ಒಪ್ಪಿಕೊಳ್ಳಲಾರದು. ಉನ್ನತ ಶಿಕ್ಷಣ ಅಥವಾ ಇಂಗ್ಲಿಷ್ ಶಿಕ್ಷಣ ಪಡೆಯಬೇಕೆಂಬ ಹೊಸ ತಲೆಮಾರಿನ ತೀವ್ರ ಬಯಕೆಯೇ ಅವಿಭಕ್ತ ಕುಟುಂಬಗಳ ವಿಘಟನೆಗೆ ಕಾರಣವಾದದ್ದು ಮಲೆನಾಡ ಪರಿಸರದಲ್ಲಿ ಆಧುನಿಕ ಪ್ರವೇಶದ ಸಂಕ್ರಮಣ ಕಾಲದ ಸಮಸ್ಯೆಗಳಲ್ಲೊಂದು.

ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಎಚ್ಚರವನ್ನು ಆಧುನಿಕತೆ ಕೊಡುವುದರೊಂದಿಗೆ ಅನೇಕ ಅಡ್ಡ ಪರಿಣಾಮಗಳಿಗೂ ಕಾರಣವಾಯಿತು. ಕುಟುಂಬ ವಿಭಜನೆ, ಕೌಟುಂಬಿಕ ಸಂಬಂಧಗಳಲ್ಲಿ ಬಿರುಕು, ಕೌಟುಂಬಿಕ ಜೀವನದಿಂದ ದೂರ, ಅತಂತ್ರ ಸ್ಥಿತಿಯ ನಿರ್ಮಾಣ ಮುಂತಾದ ಸಂಗತಿಗಳನ್ನು ಮಲೆನಾಡ ಲೇಖಕರು ತಮ್ಮ ಕೃತಿಗಳಲ್ಲಿ ಚರ್ಚಿಸಿದ್ದಾರೆ.

ಬಿಳುಮನೆ ರಾಮದಾಸ್ ಅವರ 'ನಂಬಿಕೆಟ್ಟವರಿಲ್ಲವೊ' ಕಾದಂಬರಿಯಲ್ಲಿ ಕೂಡ ತಮ್ಮಯ್ಯನ ಮಗ ಬೊಮ್ಮಯ್ಯ ಓದುವುದು ಯಜಮಾನ ಪುಟ್ಟೇಗೌಡನಿಗೆ ಸರಿ ಕಾಣುವುದಿಲ್ಲ, ಆತನ ತಂದೆಗೆ ಕೊಡುವ ಉತ್ತರ.

"ಅವನಿಗೇನು ಗೊತ್ತಾಗತದೆ? ಓದು ಅಂದರೆ ಇಸ್ಕೂಲಿಗೆ ಹೋಗ್ತಾನೆ, ಬ್ಯಾಡಾಂದರೆ ಕಿಟ್ಟಯ್ಯನಂಗೆ ಮನೆಕಡೆ ಕೆಲಸ ಮಾಡುಕೊಂಡು ಇರ್ತಾನೆ ಮನೆಯಾಗೇನು ತಿನ್ನಕ್ಕಿಲ್ಲವಾ? ಉಣ್ಣಾಕ್ಕಿಲ್ಲವಾ?" ಲೇಖಕರ ಅಭಿಪ್ರಾಯ – ಆಗೆಲ್ಲ ಶೂದ್ರರ ಓದುವುದು ಯಾಕಾಗಿ? ಎಷ್ಟು ಓದಿದರೂ ಅವರು ಪ್ರಾಯಕ್ಕೆ ಬಂದ ಮೇಲೆ ಗದ್ದೆ ನೋಡುಕೊಂಡಿರುವುದು ತಾನೆ ಎಂದು ಅಭಿಪ್ರಾಯವಿದ್ದಿತ್ತು ಶೂದ್ರ ಸಮುದಾಯದಲ್ಲಿ.[೨೦]

ಕೇವಲ ಚಂದ್ರೇಗೌಡನಂತಹ ಒಬ್ಬ ವ್ಯಕ್ತಿಗೆ ಸಂಬಂಧಿಸಿದ ಭಾವನೆಯಾಗಿ ಉಳಿಯುವುದಿಲ್ಲ ; ಬದಲಾಗಿ ಹಾಗೆ ಯೋಚಿಸುವಂತ ವ್ಯಕ್ತಿತ್ವಗಳು ಮಲೆನಾಡ ಪರಿಸರದಲ್ಲಿ ಬಹುಮಂದಿ. ಇದು ಆಧುನಿಕತೆ ಸಂಪ್ರದಾಯ ಮುಖಾಮುಖಿಯಾದಾಗ ಚಾಲ್ತಿಯಲ್ಲಿದ್ದ ಸಾರ್ವತ್ರಿಕ ಅಭಿಪ್ರಾಯವಾಗಿ ಬಹಳ ಕಾಲ ಇತ್ತು ಎಂಬುದನ್ನು ಈ ಪರಿಸರದ ಲೇಖಕರು ದಾಖಲಿಸುತ್ತಾರೆ. ಈ ಸಂಘರ್ಷ ಅವಿಭಕ್ತ ಕುಟುಂಬ ವ್ಯವಸ್ಥೆ ವಿಭಕ್ತ ಕುಟುಂಬಗಳಾಗಲು ಆಧುನಿಕತೆ ಅಥವಾ ಆಧುನಿಕ ಶಿಕ್ಷಣದ ಹಂಬಲವೂ ಕಾರಣವೆಂದರೆ ಅತಿಶಯೋಕ್ತಿಯಲ್ಲ.

ಚಂದ್ರೇಗೌಡ ಹೂವಯ್ಯನಿಗೆ ನಿನ್ನ ಪಾಲು ಆಸ್ತಿ ನೀ ತೆಗೆದುಕೊಂಡು ಎಲ್ಲಿಗಾದರೂ ಹೋಗು ಎಂದು ತಾಕೀತು ಮಾಡಿದಾಗ ಆಧುನಿಕ ಶಿಕ್ಷಣದಲ್ಲಿ ಭವಿಷ್ಯದ ಹೊಂಗನಸು ಕಂಡಿದ್ದ ಹೂವಯ್ಯ ಮೊದಲಿಗೆ ಅಸಹಾಯಕತೆಯಿಂದ ಸಂಕಟಕ್ಕೆ ಒಳಗಾಗುತ್ತಾನೆ. ಒಂದು ಕ್ಷಣ ತಾಯಿಯಿಲ್ಲದಿದ್ದರೆ ತಾನೆಷ್ಟು ಸ್ವತಂತ್ರನಾಗಿರುತ್ತಿದ್ದೆ ಎಂದು ಯೋಚಿಸುತ್ತಾನೆ. ಇಂತಹ ಸ್ವಾತಂತ್ರ್ಯದ ಬಯಕೆಯನ್ನು ತಂದಿರುವುದು ಕೂಡ ಆಧುನಿಕ ಶಿಕ್ಷಣದ ಪರಿಣಾಮ. ಹೂವಯ್ಯನಂತ ಆಧುನಿಕ ಶಿಕ್ಷಣದ ರುಚಿ ಹತ್ತಿದ ಹತ್ತಾರು ಮಲೆನಾಡು ಯುವಕರಿಗೆ ಕೌಟುಂಬಿಕವಾದ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಒಂದು ಕ್ಷಣ ವಿಚಲಿತರಾದರೂ ಆ ಸಮಸ್ಯೆಗಳಿಗೆ ಸೋತು ಶರಣಾಗುವುದಿಲ್ಲ. ತಮ್ಮ ಮುಂದಿನ ವಿದ್ಯಾಭ್ಯಾಸವನ್ನು ಹೇಗೆ ಮುಂದುವರಿಸಬಹುದು ಎಂಬ ಬಗ್ಗೆ ಹಲವು ಸಾಧ್ಯತೆಗಳನ್ನು ಶೋಧಿಸುತ್ತಾರೆ. ಅದರ ದ್ಯೋತಕವೆಂಬಂತೆ ಹೂವಯ್ಯ ಇಂಗ್ಲಿಷ್ ಪತ್ರಿಕೆಯನ್ನು ಮನೆಗೆ ಬರುವಂತೆ ಮಾಡಿಕೊಂಡು ಓದುವುದನ್ನು ಕಾಣುತ್ತೇವೆ. ಹಾಗೆ ಅನೇಕ ಗ್ರಂಥಗಳನ್ನು ತರಿಸಿಕೊಂಡು ಜ್ಞಾನ ಸಂಪಾದನೆಯನ್ನು ಮಾಡಿಕೊಳ್ಳುವುದನ್ನು ಕಾಣುತ್ತೇವೆ. ಅಂದರೆ ಆಧುನಿಕ ಶಿಕ್ಷಣ ಹೂವಯ್ಯನಂತವರಲ್ಲಿ ತನ್ನ ಪರಿಸರವನ್ನು ಬಿಟ್ಟು ಹೋಗುವ ಸಾಮಾರ್ಥ್ಯ ಮತ್ತು ಅವಕಾಶವನ್ನು ಒದಗಿಸುತ್ತದೆ. ಹಾಗೆಯೇ ಕೌಟುಂಬಿಕ ಸಮಸ್ಯೆಗಳಿಂದ ಬಿಡಿಸಿಕೊಳ್ಳಲು, ಆ ಪರಿಸರದಿಂದ ನಿರ್ಗಮಿಸಲು ಸಾಧ್ಯವಾಗದೇ ಹೋದರೂ, ಆ ಶಿಕ್ಷಣದಿಂದ ದತ್ತವಾದ ಜೀವನ ಕ್ರಮವನ್ನು ತಾನಿರುವ ಪರಿಸರದಲ್ಲಿಯೇ ಅರ್ಥಪೂರ್ಣವಾಗಿ ಬದುಕಲು ಸಾಧ್ಯ ಎಂಬ ಅರಿವನ್ನೂ, ಸಾಮರ್ಥ್ಯವನ್ನೂ ತಂದುಕೊಡುತ್ತದೆ.

ಆದ್ದರಿಂದ ಕಾನೂರು ಮನೆಯ ಉಪ್ಪರಿಗೆಯ ಮೇಲೆ ಕುಳಿತಿರುವ ಹೂವಯ್ಯನ ಕೈಗೆ ಇಂಗ್ಲಿಷ್ ಪತ್ರಿಕೆ ಕೈ ಸೇರುತ್ತದೆ. ಭಾರತೀಯರ ಸ್ವರಾಜ್ಯ ಸಂಪದಾನೆಯ ಪ್ರಯತ್ನ, ರಾಷ್ಟ್ರ ನಾಯಕರ ಆಂದೋಲನ, ಬ್ರಿಟಿಷರ ದಬ್ಬಾಳಿಕೆ, ದಕ್ಷಿಣಾಫ್ರಿಕಾದಲ್ಲಿ ಭಾರತೀಯರ ಮೇಲೆ ನಡೆಯುವ ಹಲ್ಲೆ ಮುಂತಾಗಿ ರಾಷ್ಟ್ರ-ಅಂತರ್‌ರಾಷ್ಟ್ರೀಯ ಮಟ್ಟದಲ್ಲಾಗುವ ಘಟನೆಗಳ ಕುರಿತು ಸಂವಾದ ಮಾಡಬಲ್ಲ. ಇಂಗ್ಲಿಷ್ ಶಿಕ್ಷಣ ತಂದಂತಹ ಮಹತ್ವದ ಪ್ರಯೋಜನವೆಂದರೆ ಮಲೆನಾಡ ಮೂಲೆಯಲ್ಲಿ ಕುಳಿತ ಜಗತ್ತಿನೊಡನೆ ಸಂವಾದ ನಡೆಸಬಲ್ಲ ಸಾಮರ್ಥ್ಯ ನೀಡಿದ್ದು. ತಾನು ಓದುವ ಪುಸ್ತಕದ ಅನೇಕ ವಿಚಾರಗಳನ್ನು, ಕಥೆಗಳನ್ನು ತನ್ನ ತಾಯಿ ಮತ್ತು ಸುತ್ತಲ ಪರಿಸರದ ಜನಕ್ಕೆ ಹೇಳುತ್ತಲೇ ಅವರಲ್ಲಿ ಹೊಸತನವನ್ನು, ಹೊಸ ಚಿಂತನೆಯನ್ನು ಮೂಡಿಸಲು ಪ್ರಯತ್ನಿಸುತ್ತಿದ್ದ, ಮೂಢಾಚಾರಗಳನ್ನು ಕಿತ್ತೊಗೆಯಲು ಪ್ರಯತ್ನಿಸುತ್ತಿದ್ದ. ಇದು ಹೂವಯ್ಯನಲ್ಲಿ ಆಧುನಿಕ ಶಿಕ್ಷಣ ಉಂಟು ಮಾಡಿದ ಅರಿವಿನ ಫಲ.

ಆಧುನಿಕ ಶಿಕ್ಷಣ ಏಕಮುಖವಾಗಿ ಪ್ರಭಾವ ಎಲ್ಲರ ಮೇಲೂ ಬೀರಿಲ್ಲ. ಆಧುನಿಕ ಶಿಕ್ಷಣ ಪಡೆದ ರಾಮಯ್ಯಲ್ಲಿ ಸ್ವಾಭಿಮಾನ, ಸ್ವತಂತ್ರ ಚಿಂತನೆಗಳು ಪರಂಪರೆಯ ದಾರ್ಷ್ಟ್ಯದ ಸಂಕೇತವಾದ ಚಂದ್ರೇಗೌಡನ ಎದುರು ಸೋಲುತ್ತಾ ಹೋಗುತ್ತವೆ. ಮನೆ ಪಾಲು ಪಂಚಾಯಿತಿಗೆ ಬಂದವರಿಗೆ ಹೆಂಡ ತುಂಡಿನ ಸಮಾರಾಧನೆಯ ಸತ್ಕಾರ ಮಾಡುವುದು ಸುಶಿಕ್ಷಿತ ರಾಮಯ್ಯನಿಗೆ ಅಸಹ್ಯ ತರುವ ಸಂಗತಿ. ಈ ಕಾರಣಕ್ಕೆ ತಂದೆಯಿಂದ ನಿಂದನೆಗೆ ಗುರಿಯಾಗುತ್ತಾನೆ. "ನಿನಗೆ ಎರಡಕ್ಷರ ಕಲ್ತಿದ್ದಕ್ಕೆ ಜಂಬ ನೆತ್ತಿಗೇರಿಬಿಟ್ಟಿದೆ........ ನೆಲಗುಡಿಸೋ ಪಂಚೆ ಉಟ್ಕೊಂಡು ಪ್ಯಾಟೇಲಿ ತಿರುಗೀ ತಿರುಗೀ ಈಗ ಕೆಲಸಾಮಾಡೋದು ಅಂದ್ರೆ ಮೈ ಬಗ್ಗೋದಿಲ್ಲ."[೨೦] ಎಂಬ ಭರ್ತ್ಸನೆಯಲ್ಲಿ ಮಕ್ಕಳಾದವರೂ ಸದಾ ವಿಧೇಯರಾಗಿರಬೇಕು, ತಂದೆ-ಹಿರಿಯರ ಎದುರು ನಿಂತು ಮಾತನಾಡಬಾರದು (ಇವನ್ನೆಲ್ಲಾ ಕುವೆಂಪು 'ಮಲೆನಾಡ ಮರ್ಜಿ' ಎಂದು ಕರೆಯುತ್ತಾರೆ). ನಾಗರಿಕ ನಡವಳಿಕೆ ಅಳವಡಿಸಿಕೊಂಡ ಮಕ್ಕಳ ನಡವಳಿಕೆ ಸಂಪ್ರದಾಯದ ಕಣ್ಣಲ್ಲಿ, ಉದ್ಧಟತನವಾಗಿಯು ಅಹಂಕಾರವಾಗಿ, ಷೋಕಿಯಾಗಿ, ನಿಷ್ಪ್ರಯೋಜಕವಾಗಿ ಕಾಣುತ್ತದೆ.

ಆಧುನಿಕ ಶಿಕ್ಷಣ ಪಡೆದ ರಾಮಯ್ಯನಿಗೆ ಹೂವಯ್ಯನ ಹಾಗೆ ತನ್ನದನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಅದು ಅವನಲ್ಲಿ ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಲಿಲ್ಲ ; ಈ ಕಡೆ ಪರಂಪರೆಯಿಂದ ಬಂದ ಗಟ್ಟಿತನವೂ ಉಳಿದುಕೊಳ್ಳಲಿಲ್ಲ. ಈ ಅತಂತ್ರವು ಮುಂದಿನ ದುರಂತಕ್ಕೆ ಕಾರಣವಾಗುತ್ತದೆ. ಮದುವೆ ಸಂದರ್ಭದ ಉಡುಪು, ನಡವಳಿಕೆ ಅವನ ವ್ಯಕ್ತಿತ್ವದ ಅಧೋಗತಿಯನ್ನು ಸೂಚಿಸುತ್ತದೆ.

"ಅವನ ಉಡುಪು! ಅದರಲ್ಲಿ ನವೀನತೆಯೆಂಬುದು ಲವಲೇಶವೂ ಕಾಣುತ್ತಿರಲಿಲ್ಲ.... ತಂದೆಯ ಅಭಿರುಚಿಗೆ ಸಂಪೂರ್ಣ ಶರಣಾಗಿದ್ದಂತೆ ತೋರುತ್ತಿತ್ತು......... ಅವನು ತೊಟ್ಟಿದ್ದ ಜರಿಯ ಪೇಟದ ಒಳಗಡೆ ಕ್ರಾಪಿನ ಹೊಸರೋಗಕ್ಕೆ ಜುಟ್ಟಿನ ಹಳೆಯ ರೋಗ ಹಿಡಿದಿತ್ತು! ಖಾದಿ ಬಟ್ಟೆ, ಗಾಂಧಿ ಟೋಪಿ, ಸ್ವದೇಶೀಗಳೆಲ್ಲ ಎಲ್ಲಿಯೇ ಗಾಳಿಯಲ್ಲಿ ಹಾರಿಹೋಗಿದ್ದವು.......... ಒಟ್ಟಿನಲ್ಲಿ ಕನಿಕರಕ್ಕೆ ಯೋಗ್ಯನಾಗಿದ್ದ."[೨೧]

ಭಾರತದಂತಹ ದೇಶದ ಕೌಟುಂಬಿಕ ವ್ಯವಸ್ಥೆಗಳಲ್ಲಿ ತಿಳುವಳಿಕೆ ಬಂದ ವಯೋಮಾನದ ಯಾರೇ ಆದರೂ ಅವರಷ್ಟಕ್ಕೆ ಅವರು ಸ್ವತಂತ್ರರಲ್ಲ. ಆತನ ಮನೆಯ ಯಜಮಾನಿಕೆ ಹೊತ್ತವನ ನಿಯಂತ್ರಣದಲ್ಲಿರಬೇಕಾಗುತ್ತದೆ. ಅಂತೆಯೆ ಚಂದ್ರೇಗೌಡನ ಯಜಮಾನಿಕೆಯಲ್ಲಿ ರಾಮಯ್ಯನಂತವರು ಸ್ವಂತ ನಿರ್ಧಾರ ತೆಗೆದುಕೊಳ್ಳಲು ವಿಫಲರಾಗುತ್ತಾರೆ. ತಂದೆಯಿಲ್ಲದ ಹೂವಯ್ಯನ ಸಂದರ್ಭಕ್ಕೂ, ತಂದೆಯನ್ನು ಹೊಂದಿರುವ ರಾಮಯ್ಯನ ಸಂದರ್ಭಕ್ಕೂ ಶಿಕ್ಷಣ ಪಡೆಯುವ ವಿಚಾರದಲ್ಲಿ, ಮೈಗೂಡಿಸಿಕೊಳ್ಳುವ ವಿಚಾರದಲ್ಲಿ ವ್ಯತ್ಯಾಸಗಳುಂಟಾಗುತ್ತವೆ. ಚಿಕ್ಕಪ್ಪ ಚಂದ್ರೇಗೌಡನ ನಿಯಂತ್ರಣಕ್ಕೆ ಹೂವಯ್ಯ ಒಳಗಾಗಿದ್ದರೂ ಆಸ್ತಿಯ ಕಾರಣದಿಂದ ವ್ಯಕ್ತಿಗತ ಸ್ವಾತಂತ್ರ್ಯ ಪಡೆಯಬಲ್ಲ. ಈತನ ಹಾಗೆ ಬಿಳುಮನೆ ರಾಮದಾಸ್ ಅವರ 'ವ್ಯಾಮೋಹ' ಕಾದಂಬರಿಯಲ್ಲಿ ಬರುವ ಆಧುನಿಕ ಶಿಕ್ಷಣ ಪಡೆದ ಶ್ರೀನಿವಾಸ ಆಸ್ತಿಯ ಹಕ್ಕಿನ ಕಾರಣದಿಂದ ವ್ಯಕ್ತಿಗತ ಸ್ವಾತಂತ್ರ್ಯ ಹೊಂದಿದ್ದ. ಈ ಸಂಗತಿಗಳು ಶೈಕ್ಷಣಿಕ ಹಿನ್ನಲೆಯಲ್ಲಿ ಮಲೆನಾಡ ಪರಿಸರದಲ್ಲಿರುವ ಸಹಜ ವಾಸ್ತವ ಸ್ಥಿತಿಗತಿಗಳು ಮತ್ತು ಸ್ಥಿತ್ಯಂತರಗಳು.

ಆತ್ಮ ಬಲವಿಲ್ಲದ ರಾಮಯ್ಯ ತಂದೆಯ ನಂತರ ಮನೆಯ ವ್ಯವಹಾರ ನಡೆಸಲು ದುರ್ಬಲನಾಗುತ್ತಾನೆ.

ಅನಕ್ಷರಸ್ಥಳೂ, ಬಡತನದಿಂದ ಬಂದವಳೂ, ಗಂಡನ ದೌರ್ಜನ್ಯಕ್ಕೆ ತುತ್ತಾದ ಸುಬ್ಬಮ್ಮ ವ್ಯವಹಾರದ ಸೂತ್ರ ಹಿಡಿಯುವುದು ವಿಪರ್ಯಾಸ. ಸುಬ್ಬಮ್ಮನ ಸಾವು ದೈಹಿಕವಾಗಿ, ಮಾನಸಿಕವಾಗಿ, ದುರ್ಬಲತೆಯನ್ನು ತಂದು ರಾಮಯ್ಯ ಆತ್ಮಹತ್ಯೆ ಮಾಡಿಕೊಳ್ಳುವಂತಹದಾಗುತ್ತದೆ. ಆಧುನಿಕತೆಯನ್ನು ಮೈಗೂಡಿಸಿಕೊಳ್ಳಲಾರದೆ, ಪರಂಪರೆಯನ್ನು ಉಳಿಸಿಕೊಳ್ಳಲಾಗದೆ ಅಧೋಗತಿಯ ವ್ಯಕ್ತಿತ್ವವನ್ನು ರಾಮಯ್ಯನಲ್ಲಿ ಕಾಣುತ್ತೇವೆ. ಇದು ಆಧುನಿಕತೆ ತಂದ ವಿಕಾರ.

ಹೂವಯ್ಯನಂತವರ ಸಂಪರ್ಕ, ಸಾನಿಧ್ಯ ಸೀತೆ, ಚಿನ್ನಯ್ಯರಲ್ಲೂ ಹೊಸ ರೀತಿ ಆಲೋಚನೆಯನ್ನು ತರುತ್ತದೆ. ಚಿನ್ನಯ್ಯನ ಮಗನಿಗೆ ಜೋಯಿಸರು 'ಕರಿಯಣ್ಣ' ಎಂಬ ಹೆಸರು ಇಟ್ಟುಕೊಟ್ಟಿದ್ದರು. ಇದು ಚಿನ್ನಯ್ಯನಿಗೆ ಬೇಸರ ತರಿಸಿತ್ತು. ಈ ಪುರೋಹಿತರಿಂದ ಉಳಿಗಾಲವಿಲ್ಲವೆಂದೂ, ನಮಗೆ ವಿದ್ಯೆ ಬುದ್ಧಿ ನೀಡದಿದ್ದರೂ ಒಳ್ಳೆಯ ಹೆಸರನ್ನಾದರೂ ನೀಡಬಾರದೆ ಎಂದು ಸೀತೆಗೆ ಬೇರೆ ಹೆಸರನ್ನು ಇಡುವಂತೆ ಕೋರುತ್ತಾನೆ. ಅವಳು ವೆಂಕಟಾಚಾರ್ಯರ ಕಾದಂಬರಿಯಲ್ಲಿ ಬರುವ 'ರಮೇಶ' ಎಂಬ ಹೆಸರನಿಟ್ಟಳು. ಈ ರೀತಿ ತಮ್ಮ ಮಕ್ಕಳಿಗೆ ತಾವು ಹೆಸರಿಡುವ ಸ್ವತಂತ್ರ ಚಿಂತನೆಯನ್ನು ತಂದುದು ಆಧುನಿಕ ಶಿಕ್ಷಣ.

ಕುವೆಂಪು ಅವರ ಸಮಕಾಲೀನರಾದ ಕಡಿದಾಳ್ ಮಂಜಪ್ಪನವರ 'ಪಂಜರವಳ್ಳಿಯ ಪಂಜು' ಕಾದಂಬರಿಯು ಕೂಡ ಮಲೆನಾಡ ಪರಿಸರಕ್ಕೆ ಇಂಗ್ಲಿಷನ ಆಗಮನವು ತಂದಂತಹ ಬೆರಗು, ಸಂಭ್ರಮ, ಆಕಾಂಕ್ಷೆ, ತಲ್ಲಣಗಳನ್ನು ದಾಖಲಿಸುತ್ತದೆ. ಸಾಮಾನ್ಯ ಬಡಗೇಣಿದಾರನಾದ ಸಿದ್ಧಣ್ಣನಿಗೆ ಪಂಜರವಳ್ಳಿಯಲ್ಲಿ ವೆಸ್ಲಿಯನ್ ಮಿಶನ್ ಸಂಸ್ಥೆಯವರು ಸ್ಥಾಪಿಸಿದ ಶಾಲೆಗೆ ತನ್ನ ಮಗನನ್ನು ಸೇರಿಸಬೇಕೆಂಬ ಆಸಕ್ತಿಯನ್ನು ತಾಳುತ್ತಾನೆ. ಈ ಆಸಕ್ತಿಯನ್ನು ಮೂಡಿಸಿದ್ದು ಜಮೀನ್ದಾರರಾದ ಬೆಳ್ಳೀಗೌಡನ ಮಗ ಕಾಳೇಗೌಡನ ಮಗ ಪವಿತ್ರಪುರದಲ್ಲಿ ಪ್ರೌಢಶಾಲೆಯಲ್ಲಿ ಓದಿಕೊಂಡು ಬಂದು ಶೇಕದಾರ, ದಫೇದಾರರ ಜೊತೆ ಇಂಗ್ಲಿಷ್‌ನಲ್ಲಿ ಸಂಭಾಷಿಸುವುದು. ಅಂದರೆ ಬಡತನ, ಅನಾಥ ಸ್ಥಿತಿಯಿಂದ ಕಷ್ಟಪಟ್ಟು ದುಡಿದು, ಆರ್ಥಿಕವಾಗಿ ಸ್ವಲ್ಪ ಸುಧಾರಿಸಿಕೊಂಡಿದ್ದ, ಆ ಪರಿಸರದ ಗೇಣಿದಾರರಿಗೆಲ್ಲ ಮುಖಂಡನಾಗಿದ್ದ ಸಿದ್ಧಣ್ಣನಿಗೆ ಊಳಿಗಮಾನ್ಯ ವ್ಯವಸ್ಥೆಯನ್ನು ದಿಕ್ಕರಿಸಿ ನಿಲ್ಲಬೇಕಾದರೆ, ಆಡಳಿತ ಯಂತ್ರದ ಶೋಷಣೆಯನ್ನು ಎದುರಿಸಬೇಕಾದರೆ ತನ್ನ ಮಗ ಇಂಗ್ಲಿಷ್ ಕಲಿಯಬೇಕೆಂಬ ಮಹತ್ತರವಾದ ಆಕಾಂಕ್ಷೆ ಹೊಂದಿದ್ದ. ದೇಶದ ಎಲ್ಲ ಭಾಗದಲ್ಲಿಯಂತೆ ಮಲೆನಾಡ ಪರಿಸರದಲ್ಲೂ ಕೂಡ ಒಂದೇ ಸಮುದಾಯದಲ್ಲೂ ಆರ್ಥಿಕ ಸ್ಥಿತಿಗತಿಗಳು ಅವರ ಬದುಕನ್ನು, ಆಲೋಚನೆಗಳನ್ನು, ಅಭಿಪ್ರಾಯಗಳನ್ನು ರೂಪಿಸುತ್ತವೆ. ಅಂತೆಯೇ ಜಮೀನ್ದಾರನಾದ ಚಂದ್ರೇಗೌಡ ತನ್ನ ಮಕ್ಕಳ ಶಿಕ್ಷಣದ ವಿಷಯದಲ್ಲಿ ತಳೆಯುವ ನಿರ್ಧಾರಕ್ಕೂ, ಅಭಿಪ್ರಾಯಗಳಿಗೂ, ಪಂಜರವಳ್ಳಿ ಕಾದಂಬರಿಯ ಗೇಣಿದಾರ ಸಿದ್ಧಣ್ಣ ಪರಂಪರಾಗತವಾದ ವೃತ್ತಿ ಬದುಕನ್ನು ಮೀರುವುದಕ್ಕೂ ವ್ಯತ್ಯಾಸವಿದೆ. ಸಿದ್ಧಣ್ಣನ ನಿರ್ಧಾರದ ಹಿನ್ನೆಲೆಯಲ್ಲಿ ಆರ್ಥಿಕ ಸ್ಥಿತಿ ಮುಖ್ಯವಾಗಿದೆ ಎಂಬುದನ್ನು ಗಮನಿಸಬೇಕು.

ಆದರೆ ಪವಿತ್ರಪುರದ ಪ್ರೌಢಶಾಲೆಗೆ ಕಳುಹಿಸಿ ಓದಿಸುವಷ್ಟು ಆರ್ಥಿಕ ಅನುಕೂಲತೆ ಅವನಿಗಿಲ್ಲ. ಇಂಗ್ಲಿಷ್ ಶಿಕ್ಷಣದ ಆಕರ್ಷಣೆ, ಆ ಮೂಲಕ ಆರ್ಥಿಕ, ಸಾಮಾಜಿಕ ಸಂಕಟಗಳಿಂದ ಬಿಡುಗಡೆ ಪಡೆದುಕೊಳ್ಳುವ ಹಂಬಲ ಮತ್ತು ಅದನ್ನು ಈಡೇರಿಸಿಕೊಳ್ಳಲು ಸಾಧ್ಯವಾಗದಂತಹ ನಿಸ್ಸಹಾಯಕತೆಯ

ಸಂದರ್ಭವನ್ನು ವಸಾಹತುಶಾಹಿಯು ತನ್ನ ತೆಕ್ಕೆಗೆ ಸುಲಭವಾಗಿ ಸೆಳೆದುಕೊಳ್ಳುತ್ತದೆ. ಈ ಹಿನ್ನಲೆಯಲ್ಲಿ ಮೈಸೂರಿನ ವೆಸ್ಲಿಯನ್ ಮಿಶನ್ ಸಂಸ್ಥೆಯ ವ್ಯವಸ್ಥಾಪಕನಾಗಿದ್ದ ಜಾನ್ ತಮ್ಮ ಶಾಖಾ ಶಾಲೆಯಿರುವ ಪಂಜರವಳ್ಳಿಗೆ ಭೇಟಿಕೊಟ್ಟಾಗ ಗಿಡ್ಡಣ್ಣನ ಬಗ್ಗೆ ಮಾಹಿತಿ ಪಡೆದು, ಮೈಸೂರಿನಲ್ಲಿ ಉಚಿತ ಊಟ ವಸತಿ ನೀಡಿ ಓದಿಸುವುದಾಗಿ ತಿಳಿಸಿದಾಗ ಸಿದ್ಧಣ್ಣಗೌಡ ಸಂದಿಗ್ಧಕ್ಕೆ ಒಳಗಾಗುತ್ತಾನೆ. ಒಂದು ಕಡೆ ಆರ್ಥಿಕ ಬಲವಿಲ್ಲದ ತನಗೆ ಇದೊಂದು ಸದಾವಕಾಶ ಎಂದು ಸಂತೋಷವಾದರೆ ; ಇನ್ನೊಂದು ಕಡೆ, ಕ್ರೈಸ್ತರ ಪ್ರಭಾವದಿಂದ ಮಗನು ಕ್ರೈಸ್ತನಾದರೆ ಎಂಬ ಆತಂಕಕ್ಕೆ ಒಳಗಾಗುತ್ತಾನೆ. ಆ ಕಾಲದಲ್ಲಿ ಮಲೆನಾಡಿನಿಂದ ಮೈಸೂರಿನ ಪರಿಸರಕ್ಕೆ, ಅದರಲ್ಲೂ ಕ್ರೈಸ್ತ ಮಿಶನರಿಗಳ ವ್ಯಾಸಂಗ ಪರಿಸರಕ್ಕೆ ಕಳುಹಿಸಬೇಕಾದ ಸಂದರ್ಭದಲ್ಲಿ ಪೋಷಕರು ಅನುಭವಿಸಿದ ಮಾನಸಿಕ ಹೋಯ್ದಾಟಕ್ಕೆ, ಸಿದ್ಧಣ್ಣನ ಮನಸ್ಥಿತಿ ಸಂಕೇತವಾಗಿದೆ. ಪರಂಪರಾಗತವಾದ ಸಮಾಜವೊಂದು ಭಯ ಮತ್ತು ಆಸೆಗಳಿಂದ ಆಧುನಿಕತೆಯತ್ತ ನೋಡುವ ಪರಿ ಇದು.

ಈ ಹೊಯ್ದಾಟದಲ್ಲಿ ಆಧುನಿಕತೆಯ ಆಕರ್ಷಣೆ ಗೆಲ್ಲುತ್ತದೆ, ಸಿದ್ಧಣ್ಣ ಮಗನನ್ನು ಕಳುಹಿಸುತ್ತಾನೆ. ಆದರೆ ತನ್ನ ಆತಂಕವನ್ನು ಹೆಚ್ಚು ಮಾಡುವ ತನ್ನ ಪರಿಸರದ ವ್ಯಂಗ್ಯವನ್ನು ವಿರೋಧಿಸುವುದು ಸವಾಲಾಯಿತು. ದಾಯಾದಿ ಕಾಳೇಗೌಡನ ಅಸೂಯೆ ಹೀಗೆ ವ್ಯಕ್ತವಾಗುತ್ತದೆ.

"ಏನೋ ಸಿದ್ಧಾ, ನಿನ್ಮಗನ್ನ ಕಿಲಸ್ತಾನ್ ಜಾತಿಗೆ ಸೇರಿಸಿದಂತೆಲ್ಲೋ? ಹೌದೇನೊ........

ಅದಕ್ಕೆ ಉತ್ತರ –

ಕಿಲಸ್ತಾನ್ ಜಾತಿಗಲ್ಲ, ಇಂಗ್ಲಿಷ್ ಜಾತಿಗೆ ಸೇರ್ಲಿ ಅಂತ ಮೈಸೂರಿಗೆ ಕಳ್ಸೀನಿ".[೨೩]

ಕಾಳೇಗೌಡನ ದನಿಯಲ್ಲಿ ಗೇಣಿದಾರನ ಮಗ ಓದುವುದು ಅಪಥ್ಯದ ಸಂಗತಿಯಾಗಿದ್ದರೆ, ಸಿದ್ಧಣ್ಣ ದನಿಯಲ್ಲಿ ದಿಟ್ಟತನ ಮತ್ತು ಭೂ ಮಾಲಿಕರ ಮೇಲಿನ ಸಿಟ್ಟು ಅಭಿವ್ಯಕ್ತವಾಗುತ್ತದೆ. ಆದ್ದರಿಂದ ಮಲೆನಾಡ ಪರಿಸರದಲ್ಲಿ ಅವರವರ ಆರ್ಥಿಕ ಸ್ಥಿತಿಗಳನ್ನು ಅವಲಂಬಿಸಿ ಆಧುನಿಕ ಶಿಕ್ಷಣದ ಕಲಿಕೆಯಲ್ಲಿ ತೊಡಗಿಸುವಂತ ನಿರ್ಧಾರಗಳಾಗಿದ್ದವು.

ಸಿದ್ಧಣ್ಣಗೌಡ ತನ್ನ ಮಗನಿಗೆ ಯಾರೋ ಪುರೋಹಿತರ ಸಲಹೆಯಂತೆ ಗಿಡ್ಡಣ್ಣಗೌಡ ಎಂಬ ಹೆಸರನ್ನು ಇಟ್ಟಿದ್ದ. ವೆಸ್ಲಿಯನ್ ಶಾಲೆಯಲ್ಲಿ ಓದುತ್ತಿದ್ದಾಗ ಅಧ್ಯಾಪಕರೊರ್ವರ ಸಲಹೆಯಂತೆ 'ಮೋಹನ' ಎಂದು ಬದಲಾಯಿಸಿಕೊಂಡ, ಇಂಗ್ಲಿಷ್ ಶಿಕ್ಷಣ ಪರಂಪರೆಯನ್ನು ಮೀರುವ, ವ್ಯಕ್ತಿಗತವಾದ ಆಯ್ಕೆಯ ಸ್ವಾತಂತ್ರವನ್ನು ತಂದುಕೊಟ್ಟಿದೆ.

ಮನುಷ್ಯನ ಬದುಕು ಕಾಲ, ದೇಶ, ವೃತ್ತಿ, ಪರಿಸ್ಥಿತಿಗಳನ್ನು ಅವಲಂಬಿಸಿ ರೂಪಗೊಳ್ಳುತ್ತಿರುತ್ತದೆ. ಅಂತೆಯೇ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಆಲೋಚನೆಗಳು, ಅಭಿಪ್ರಾಯಗಳು ಬದಲಾಗುತ್ತಾ ಸಾಗುತ್ತವೆ. ಮಗನ ವಿದ್ಯಾಭ್ಯಾಸದ ಮೂಲಕ ಸಿದ್ಧಣ್ಣ ಬಯಸಿದ ನಿರೀಕ್ಷೆಯು ಒಂದಾರೆ, ಮಗ ಮೋಹನನ ನಿಲುವೇ ಬೇರೆಯಾಗಿ ಬಿಡುತ್ತದೆ.

ಸಿದ್ಧಣ್ಣ ನಿರೀಕ್ಷೆ ಆತನ ಪರಿಸರದಿಂದ ಮೂಡಿದ್ದು. ಮಗ ವಿದ್ಯಾವಂತನಾಗಿ ಪವಿತ್ರಮರಕ್ಕೆ

ಅಮಲ್ದಾರನಾಗಿ ಬಂದರೆ ತನಗೆ ಮುಳುವಾಗಿರುವ ಜಮೀನ್ದಾರಿ ಕುಳಗಳನ್ನು ನಿಯಂತ್ರಿಸಬಹುದು. ಇಲ್ಲವೆ ವಕೀಲನಾಗಿ ಬಂದರೆ ಕುಟುಂಬದಲ್ಲಿ ತನಗೆ ಬರಬೇಕಿದ್ದ ನ್ಯಾಯಯುತ ಪಾಲನ್ನು ಕಾನೂನಿನ ಮೂಲಕ ಪಡೆಯಬಹುದು ಎಂಬುದು. ಆದರೆ ಮೋಹನ ಶೈಕ್ಷಣಿಕವಾಗಿ ಬೆಳೆದಂತೆ ದೇಶಸೇವೆ, ರಾಷ್ಟ್ರೀಯ ಚಳುವಳಿ, ಗಾಂಧಿ ಚಿಂತನೆಗಳು ಸೆಳೆಯುತ್ತವೆ. ಅಶೋಕ ಅವರ ಮಾತನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

"ವಸಾಹತುಶಾಹಿ, ಆಳ್ವಿಕೆಯ ಫಲವಾಗಿ ಮೂಡಿಬಂದ ಆಧುನಿಕ ಇಂಗ್ಲಿಷ್ ಶಿಕ್ಷಣ ಅದೇ ವಸಾಹತುಶಾಹಿ ಆಳ್ವಕೆಯನ್ನು ವಿರೋಧಿಸುವಂಥ ರಾಜಕೀಯ ಪ್ರಜ್ಞೆಯನ್ನು ಉಂಟು ಮಾಡಿದ್ದು ತೃತೀಯ ಜಗತ್ತಿನ ಆಧುನೀಕರಣದ ಪ್ರಕ್ರಿಯೆಯಲ್ಲಿನ ಒಂದು ಅತ್ಯಂತ ಕುತೂಹಲಕಾರಿಯಾದ ಅಂಶ".[೨೪]

ಬ್ರಿಟಿಷರು ಭಾರತೀಯರನ್ನು ತಮ್ಮ ಅಡಿಯಾಳಾಗಿ ಇಟ್ಟುಕೊಳ್ಳಲು ಯಾವ ಮೂಲೋದ್ದೇಶದಿಂದ ಇಂಗ್ಲಿಷ್ ಶಿಕ್ಷಣವನ್ನು ಕೊಡಲು ಬಯಸಿದರೊ, ಅದು ಭಾರತೀಯರಲ್ಲಿ ಸ್ವತಂತ್ರ ವಿಚಾರ ಶಕ್ತಿಯನ್ನು ಪ್ರೇರೇಪಿಸಿತು ಮತ್ತು ಮುಂದಿನ ರಾಜಕೀಯ ಆಂದೋಲನಕ್ಕೆ ಸಿದ್ಧಗೊಳಿಸಿತು. ಮೋಹನ ತನ್ನ ವ್ಯಾಸಂಗವನ್ನು ಮುಂದುವರಿಸಿದಂತೆ ತಂದೆಯ ನಿರೀಕ್ಷೆಯ ಅಚ್ಚಿನಲ್ಲಿ ಎರಕ ಹೊಯ್ದಂತೆ ರೂಪಗೊಳ್ಳುವುದಿಲ್ಲ. ಬದಲಾಗಿ ಕಾಲಮಾನದ ಪ್ರಭಾವದಿಂದ, ಶಿಕ್ಷಣವು ತಂದು ಕೊಟ್ಟ ಅರಿವಿನಿಂದ ಎಚ್ಚೆತ್ತು ಕೇವಲ ನೌಕರಿ ಪಡೆಯುವ ಶಿಕ್ಷಣವನ್ನು ಮಾತ್ರ ಪಡೆಯುವುದಿಲ್ಲ ಅಥವಾ ಸಾಮ್ರಾಜ್ಯಶಾಹಿ ನಿಲುವನಂತೆ ರೂಪಗೊಳ್ಳುವುದಿಲ್ಲ. ತಾನು ಪಡೆದ ಶಿಕ್ಷಣವನ್ನು ಅಸ್ತ್ರವನ್ನಾಗಿ ಮಾಡಿಕೊಂಡು ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಾನೆ. ನಿಜವಾದ ಬದುಕಿನ ನೆಲೆಬೆಲೆಗಳನ್ನು ಅರ್ಥ ಮಾಡಿಕೊಳ್ಳುತ್ತಲೇ ಚಾರಿತ್ರಿಕ ಭಾಗವಾದ ರಾಷ್ಟ್ರೀಯ ಹೋರಾಟದಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದು. ಮುಂದೆ ಸಾಮಾಜಿಕ ಸೇವಾ ಮನೋಭಾವದಿಂದ ರಾಜಕೀಯ ಪ್ರವೇಶಿಸುವುದು ಇದು ಆತನಿಗೆ ಇಂಗ್ಲಿಷ್ ಶಿಕ್ಷಣ ತಂದುಕೊಟ್ಟಂತಹ ಅರಿವಾಗಿದೆ.

ಮೋಹನ ಹೈಸ್ಕೂಲು ಓದುತ್ತಿರುವಾಗಲೇ ಭಗವದ್ಗೀತೆ, ಬೈಬಲ್, ಖುರಾನ್ ಓದಿದ್ದ. ರಾಮಾಯಣ–ಮಹಾಭಾರತಗಳನ್ನೂ ಓದಿಕೊಂಡಿದ್ದ. ಕಾಲೇಜು ಸೇರಿದ ನಂತರ ಇತಿಹಾಸ, ಆಂಗ್ಲ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ್ದ. ಆಧುನಿಕ ವಿಜ್ಞಾನವನ್ನು ಸ್ವಲ್ಪ ಮಟ್ಟಿಗೆ ಅಧ್ಯಯನ ಮಾಡಿದ್ದರಿಂದ ಪ್ರತಿಭಾವಂತನಾದ. ಬಡತನದಲ್ಲಿ ಹುಟ್ಟಿ ಬೆಳೆದ ಆತನಿಗೆ ಬಡ ವಿದ್ಯಾರ್ಥಿಗಳ ಮೇಲಿನ ಕಾಳಜಿ ವಿದ್ಯಾರ್ಥಿ ನಾಯಕನನ್ನಾಗಿ ರೂಪಿಸಿತು. ಗಾಂಧೀಜಿ ಕರೆಗೆ ಓಗೋಡುವಂತೆ ಮಾಡಿತು. ತಲೆ ಮಾರುಗಳ ಅಂತರದಲ್ಲಿ ಆಧುನಿಕತೆ ಬೀರಿದ ಪ್ರಭಾವ ಬೇರೆ ಬೇರೆಯೇ ಆಗಿತ್ತು. ಬದುಕಿನ ಸಹಜ ಲಹರಿಗಳನ್ನು ಕಾದಂಬರಿ ವರ್ಣಿಸುತ್ತಲೆ, ಹೊಸ ಆಯಾಮಗಳು ಸಹಜವಾಗಿ ಮೈಪಡೆಯುತ್ತಾ ಕಾದಂಬರಿ ಕಲಾತ್ಮಕವಾದ ರೂಪ ಪಡೆಯುತ್ತದೆ. ಮೋಹನನಿಗೆ ರಾಜಕೀಯದ ಎಲ್ಲ ಏಳು ಬೀಳುಗಳನ್ನು ಸಮರ್ಥವಾಗಿ ಎದುರಿಸುವಂತಹ ನೈತಿಕ ಶಕ್ತಿಯನ್ನು ಆತ ಪಡೆದ ಆಧುನಿಕ ಶಿಕ್ಷಣ ತಂದುಕೊಟ್ಟಿರುತ್ತದೆ.

ಬಿಳುಮನೆ ರಾಮದಾಸ್ ಅವರ ವ್ಯಾಮೋಹ ಕಾದಂಬರಿಯ ಕಥಾವಸ್ತುವಿನ ಕಾಲ ಸುಮಾರು ಐವತ್ತರ ದಶಕದ್ದು ಎನ್ನಬಹುದು. ಮೇಗರವಳ್ಳಿಯ ಸುತ್ತಮುತ್ತಲಿನ ಪರಿಸರದ ಬದುಕು ಅವರ

ಬಹುತೇಕ ಕಾದಂಬರಿಗಳ ಕಥಾಹಂದರ. ಇಲ್ಲಿಯ ಕಥಾನಾಯಕ ಹೂವಯ್ಯನಂತೆ ಆಧುನಿಕ ಶಿಕ್ಷಣ ಪಡೆದು ಹಳ್ಳಿಯ ಪರಿಸರಕ್ಕೆ ಹಿಂದಿರುಗಿದವನು. ತಂದೆಯಿಲ್ಲದ ತಬ್ಬಲಿ ಶ್ರೀನಿವಾಸನನ್ನು ಓದಿಸಲೇಬೇಕೆಂದು ಪಣತೊಟ್ಟವಳು ಆತನ ಅಜ್ಜಿ ಕಾಡಮ್ಮ ಹೆಗ್ಗಡತಿ. ಆದ ಕಾರಣ ಜಾತಕವನ್ನು ಹನಸದ ಭಟ್ಟರಲ್ಲಿ ತೋರಿಸುತ್ತಾಳೆ. ಇಲ್ಲಿಯು ವೆಂಕಪ್ಪ ಜೋಯಿಸನಂತೆಯೇ ಹನಸದ ಪುರೋಹಿತರ ಪ್ರತಿಕ್ರಿಯೆ ಕೂಡ ಇದೆ ಎಂಬುದು ಗಮನಿಸಬಹುದು.

"ವಿದ್ಯಾಭ್ಯಾಸವೇನೋ ಚೆನ್ನಾಗಿದೆಯಮ್ಮ, ಆದರೆ ಶೂದ್ರರಿಗೆ ಓದು ಯಾಕೆ? ನೀವು ಎಲ್ಲಿಯಾದರೂ ಶೂದ್ರರು ಹೆಚ್ಚಿಗೆ ಓದಿದ್ದು ಕೇಳಿದ್ದೀರಾ? ಎಷ್ಟು ಓದಿದ್ದರೂ ಗದ್ದೆ ಹೂಡುವುದು ತಪ್ಪುತ್ತದೆಯೇ?"[೨೫]

ಆಧುನಿಕತೆ, ಆಧುನಿಕ ಶಿಕ್ಷಣ ಈ ಪರಿಸರವನ್ನು ಪ್ರವೇಶಿಸಿದಂತೆಲ್ಲಾ ಪುರೋಹಿತಶಾಹಿಯ ಆತಂಕಗಳು, ಪ್ರತಿಕ್ರಿಯೆಗಳು ಮಲೆನಾಡ ಪರಿಸರದ ಎಲ್ಲೆಡೆ ಹೇಗೆ ಕಂಡು ಬರುತ್ತಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಇದಕ್ಕೆ ಪೂರಕವಾಗಿ ಅವಿಭಕ್ತ ಕುಟುಂಬದ ಈರ್ಷೆ ಕೂಡ ಕಾರಣವಾಗುತ್ತದೆ. ಶ್ರೀನಿವಾಸನ ಚಿಕ್ಕಪ್ಪ ಪುಟ್ಟೇಗೌಡ ಕೂಡ ಶೂದ್ರರು ಓದಿ ಏನಾಗಬೇಕು ; ಗದ್ದೆ ಹೂಡುವುದು ತಾನೇ ಎಂದು ಶ್ರೀನಿವಾಸನ ಓದನ್ನು ನಿರಾಕರಿಸುತ್ತಾನೆ. ಹೀಗೆ ಇದೇ ಲೇಖಕರ ನಂಬಿ ಕೆಟ್ಟವರಿಲ್ಲವೊ, ಕಾದಂಬರಿಯ ಬೊಮ್ಮಯ್ಯನ ಓದನ್ನು ದೊಡ್ಡಪ್ಪ ವಿರೋಧಿಸುತ್ತಾನೆ. ಅಂದರೆ ಮಲೆನಾಡ ಪರಿಸರದಲ್ಲಿ ಶೂದ್ರ ಸಮುದಾಯದ ಮಕ್ಕಳ ಓದಿನ ನಿರಾಕರಣೆ ಕೇವಲ ಪುರೋಹಿತಶಾಹಿಯ ಬೋಧನೆ ಮಾತ್ರವಲ್ಲ ಅವಿಭಕ್ತ ಕುಟುಂಬದ ಮತ್ಸರವೂ ಅದನ್ನು ಪೋಷಿಸಿದೆ ಎಂದರೆ ತಪ್ಪಾಗಲಾರದು. ಬ್ರಾಹ್ಮಣ ಮಕ್ಕಳ ಹಾಗೆ (ಈ ಸಮುದಾಯ ಪಡೆಯುತ್ತಿರುವ ಆಧುನಿಕ ಶಿಕ್ಷಣದ) ಮೊಮ್ಮಗ ಓದಲೇಬೇಕೆಂಬ ಹಠದಿಂದ ಕಾಡಮ್ಮ ಹೆಗ್ಗಡತಿ ಓದಿಸುತ್ತಾಳೆ. ವಕೀಲನಾಗುವ ಉದ್ದೇಶದಿಂದ ಶಿವಮೊಗ್ಗದಲ್ಲಿ ಕಛೇರಿ ತೆಗೆದ. ಆದರೆ ಅಲ್ಲಿಯೂ ಬ್ರಾಹ್ಮಣರ ಹೊರತಾಗಿ ಶೂದ್ರರಿಗೆ ವಕೀಲ ಕೆಲಸ ಹೇಳಿಸಿದ್ದಲ್ಲ ಎಂಬ ಭಾವನೆ ಜನಗಳಲ್ಲಿದ್ದುದರಿಂದ ಈ ಶೂದ್ರ ವಕೀಲನಿಗೆ ಯಾವ ಕೇಸು ಬರದೆ ಹಳ್ಳಿಗೆ ಹಿಂತಿರುಗಿದ. ಕಡಿದಾಳ್ ಮಂಜಪ್ಪನವರು ಕೂಡ ವಕೀಲ ವೃತ್ತಿಯನ್ನು ಶಿವಮೊಗ್ಗದಲ್ಲಿ ಪ್ರಾರಂಭಿಸಿದಾಗ ಮೇಲ್ಜಾತಿಯವರಿರಲಿ ಸ್ವಜಾತಿಯ ಬಂಧುಗಳೇ "ಈ ಲಾಯರ್ ಕಸುಬು ಬ್ರಾಹ್ಮಣ್ರಿಗೆ ಮಾತ್ರ ಹೇಳ್ಸಿದ್ದು. ನಮ್ಮವರಿಗೆ ಅದು ಕೈ ಹತ್ತುವುದು ಬಹಳ ಕಷ್ಟ. ಬ್ರಾಹ್ಮಣ್ರ ಜೊತೆಗೆ ನಿಮಗೆ ಪೈಪೋಟಿ ಮಾಡಲು ಆಗುವುದಿಲ್ಲ"[೨೬] ಎಂಬ ಪ್ರತಿಕ್ರಿಯೆ ಗಮನಿಸಿದರೆ ಪಟ್ಟಭದ್ರಹಿತಾಸಕ್ತಿಯು ಓದಿಗೆ ನಿರಾಕರಣೆ, ತದನಂತರ ಉದ್ಯೋಗದ ನಿರಾಕರಣೆ ಮಾಡುತ್ತದೆ. ಆದರೆ ಇವೆಲ್ಲವನ್ನು ಮೀರುವ ಶಕ್ತಿಯನ್ನು ಆಧುನಿಕ ಶಿಕ್ಷಣ ತಂದುಕೊಟ್ಟಿದೆ.

ಹಳ್ಳಿಯ ಪರಿಸರದಲ್ಲಿ ಶ್ರೀನಿವಾಸನ ನಡವಳಿಕೆಗಳು ಹೊಸ ರೀತಿಯಲ್ಲಿ ಕಾಣಿಸಿಕೊಂಡವು. ಆಧುನಿಕ ಶಿಕ್ಷಣ ಪಡೆದ ಆತನ ಸುಧಾರಿತ ನಡವಳಿಕೆಗಳಿಂದ ತನ್ನ ಪರಿಸರದಲ್ಲಿ ವ್ಯಂಗ್ಯಕ್ಕೆ, ಮೆಚ್ಚುಗೆಗೆ, ಗೌರವಕ್ಕೆ ಪಾತ್ರನಾಗಿದ್ದಾನೆ. ಆತ ನಿತ್ಯ ಸ್ನಾನ ಮಾಡುವುದು, ಬೆಳಗಿನ ಹೊತ್ತು ಗಂಜಿ ಊಟ ಮಾಡದೆ ಕಾಫಿ ತಿಂಡಿ ಸೇವಿಸುವುದರಿಂದ, ನವೀನ ರೀತಿ ಮುಖ ಕ್ಷೌರ ಮಾಡಿಕೊಳ್ಳುವುದರಿಂದ, ಕಾಲಿಗೆ ಬೂಡ್ಸು ಹಾಕುವುದರಿಂದ, ಯಾವಾಗಲೂ ವ್ಯಾಸಂಗಕ್ಕಾಗಿ ನಗರಗಳಿಗೆ ಆಗಾಗ ಹೋಗುತ್ತಿದ್ದರಿಂದ ಆ ಪರಿಸರಕ್ಕೆ ಭಿನ್ನನಾಗಿ ಕಾಣುತ್ತಿದ್ದ. ಈತನ ಚಿಕ್ಕಪ್ಪ ವ್ಯಂಗ್ಯವಾಗಿ 'ಇಂಗ್ಲಿಷ್ ಗೌಡರು' ಎಂದು ಕರೆದರೆ

ಅದೇ ಆಳು ಕಾಳುಗಳ ಈ ಸಂಬೋಧನೆಯಲ್ಲಿ ಮೆಚ್ಚುಗೆ ಗೌರವವಿತ್ತು. ಶಿಕ್ಷಣದ ಮೂಲಕ ಬಂದ ಆಧುನಿಕತೆ ಶೂದ್ರ ಸಮುದಾಯದ ದೈನಂದಿನ ಚರ್ಯೆಗಳಲ್ಲೇ ಪಲ್ಲಟವನ್ನು ತಂದಿತು. ಶ್ರೀನಿವಾಸನ ನಡವಳಿಕೆ ಕಾಡಮ್ಮ ಹೆಗ್ಗಡತಿಗೆ ಅಭಿಮಾನ, ಮೆಚ್ಚುಗೆ ತಂದಿದ್ದರೂ ಕೆಲವೊಮ್ಮೆ ಆತಂಕವನ್ನೂ ಅನುಭವಿಸುತ್ತಾಳೆ. ಅವನ ಕೆಲವು ಚರ್ಯೆಗಳು ಆಕೆಗೆ ಪುರೋಹಿತರು ಹೇಳಿದ ಹಾಗೆ ಓದಿಸಿದ್ದು ತಪ್ಪಾಯಿತೇನೋ ಎನಿಸುತ್ತದೆ. ಆಧುನಿಕ ಶಿಕ್ಷಣ ಪಡೆದ ಯುವಕರ ಬಗ್ಗೆ ಹಿರಿಯರು ಅಭಿಮಾನ, ಮೆಚ್ಚುಗೆಯನ್ನು ಒಂದು ಅನುಮಾನ ಇಟ್ಟುಕೊಂಡೇ ಪ್ರತಿಕ್ರಿಯಿಸುತ್ತಿದ್ದರು.

ಇಂತಹ ಆತಂಕಗಳಿಗೆ ಸಾಕ್ಷ್ಯಗಳೂ ಈ ಪರಿಸರದಲ್ಲಿ ಇದ್ದವೆಂಬುದನ್ನು ಗಮನಿಸಬಹುದು. ಬಿಳುಮನೆ ರಾಮದಾಸ್ ಅವರ 'ನಂಬಿಕೆಟ್ಟವರಿಲ್ಲವೊ' ಕಾದಂಬರಿಯ ಬೊಮ್ಮಯ್ಯನನ್ನು ತಂದೆ ತಮ್ಮಯ್ಯಗೌಡ ಅನೇಕ ಕಷ್ಟಗಳನ್ನು ಅನುಭವಿಸಿ, ಸಾಹುಕಾರರಿಂದ ಸಾಲ ಪಡೆದು ಮಗನನ್ನು ಓದಿಸುತ್ತಾನೆ. ಆದರೆ ಆತ ಹೂವಯ್ಯನ ಹಾಗೆ, ಶ್ರೀನಿವಾಸನ ಹಾಗೆ ತನ್ನ ಪೋಷಕರನ್ನಾಗಲಿ, ತನ್ನ ಪರಿಸರವನ್ನಾಗಲಿ ಪ್ರೀತಿಸಲಿಲ್ಲ, ಇಲ್ಲಿಯ ಸುಧಾರಣೆಗೆ ತೊಡಗಿಕೊಂಡವನಲ್ಲ. ತಂದೆ ತಾಯಿಗಳ ಆಸೆಯಂತೆ ಸರ್ಕಾರಿ ಹುದ್ದೆಯನ್ನೇನೊ ಪಡೆದ, ಅಧಿಕಾರ ಏರಿದ ಮೇಲೆ ತಾನು ಹುಟ್ಟಿ ಬೆಳೆದ ಪರಿಸರ, ತಂದೆ-ತಾಯಿಗಳ ಸಂಸ್ಕಾರ ಆತನಿಗೆ ಕೀಳಾಗಿ ಕಾಣತೊಡಗಿತು. ತಂದೆ-ತಾಯಿಯ ಸಲಹೆ ಮೀರಿ ಮದುವೆಯಾದ. ತನ್ನ ತಾಯಿಯ ನಡವಳಿಕೆ ಆತನಿಗೆ ಸಂಸ್ಕಾರಹೀನವಾಗಿ ಕಾಣುವುದರಿಂದ ತಾಯಿ ಮದುವೆಗೆ ಬರುವುದನ್ನು ನಿರಾಕರಿಸುತ್ತಾನೆ. ಇಂತಹ ವಿಕಾರವನ್ನು ಆಧುನಿಕ ಶಿಕ್ಷಣ ತಂದಿದೆ. ತನ್ನ ತಾಲ್ಲೂಕಿಗೆ ಅಮಲ್ದಾರನಾಗಿ ಬಂದರೂ ಊರಿಗೆ ಮನೆಗೆ ಬರದವನಾದ. ಹಾಗಿದ್ದೂ ತಂದೆಯಿಂದ ಬರಬಹುದಾದ ಆಸ್ತಿಯ ಬಗ್ಗೆ ಕಾಳಜಿಯುಳ್ಳವನಾಗಿದ್ದ. ಈ ರೀತಿ ಆಧುನಿಕ ಶಿಕ್ಷಣ, ಉದ್ಯೋಗ ಇವು ಕೌಟುಂಬಿಕ ಸಂಬಂಧಗಳನ್ನು ದೂರ ಮಾಡಿದೆ. ಮಾನವೀಯತೆಗಿಂತ ಆಸ್ತಿ, ಅಧಿಕಾರ, ಅಂತಸ್ತು ಈ ಬಗ್ಗೆ ಆಸಕ್ತಿ ತಳೆಯುವಂತೆ ಮಾಡಿ, ಮನುಷ್ಯ ಪ್ರೀತಿಯನ್ನು ಕುಬ್ಜಗೊಳಿಸಿರುವುದು ಆಧುನಿಕ ಶಿಕ್ಷಣದ ಮತ್ತೊಂದು ಮುಖ.

ವ್ಯಾಮೋಹ ಕಾದಂಬರಿಯ ಶ್ರೀನಿವಾಸನ ಚಿಕ್ಕಪ್ಪ ರಾಮೇಗೌಡ ಮೇಗರವಳ್ಳಿ ಸೀಮೆಯಲ್ಲಿ ಅಪರೂಪವಾಗಿ ಎಲ್.ಎಸ್. (ಲೋಯರ್ ಸೆಕೆಂಡರಿ) ಪಾಸು ಮಾಡಿದ್ದ. ಆದ ಕಾರಣ ಒಕ್ಕಲಿಗ ಸಮುದಾಯದಲ್ಲಿ ಆತನಿಗೆ ಒಂದು ರೀತಿ ಗೌರವ ಮನ್ನಣೆಗಳಿದ್ದವು. ಆದರೆ ಆತ ಅನೇಕ ಹವ್ಯಾಸಗಳನ್ನು ಇಟ್ಟುಕೊಂಡು ಮನೆಗೆ ಬೇಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿದ್ದ-ಷೋಕಿವಾಲನಾಗಿ, ಜೈಮಿನಿ ಭಾರತ ಓದುತ್ತಾ ಊರೂರು ತಿರುಗುವ ಚಪಲವುಳ್ಳವನಾಗಿದ್ದ. ಇಂತವರೆಲ್ಲ ಆಧುನಿಕ ಶಿಕ್ಷಣ ಪಡೆದು ತಮ್ಮ ಮನೆಗಳಲ್ಲಿ ಆತಂಕ ಸೃಷ್ಟಿ ಮಾಡಿದವರು. ಆದ್ದರಿಂದ ಕಾಡಮ್ಮ ಹೆಗ್ಗಡತಿಯಂತವರಿಗೆ ಶ್ರೀನಿವಾಸನಂತವನನ್ನೂ ಆಧುನಿಕ ಶಿಕ್ಷಣ ಪಡೆದ ಹಿನ್ನಲೆಯಲ್ಲಿ ಆತಂಕದಿಂದ ಕೆಲವೊಮ್ಮೆ ನೋಡುವಂತೆ ಮಾಡುತ್ತದೆ. ಇಂತಹ ಮನಃಸ್ಥಿತಿಯವರ ಆತಂಕವನ್ನು ಹೆಚ್ಚು ಮಾಡುವ ಪುರೋಹಿತರ ಉಪದೇಶಗಳು ಮಲೆನಾಡ ಪರಿಸರದಲ್ಲಿ ಹರಡಿತ್ತು. "ಅಯ್ಯೋ ಈ ಇಂಗ್ಲಿಷ್ ಕಲಿತವರ ವಿಚಾರ ಹೇಳಬೇಡಿ, ಯಾವಾಗ ಎಲ್ಲಿಲ್ಲಿ ಬಿದ್ದು ಏಳುತ್ತಾರೆ ಹೇಳೋಕೆ ಸಾಧ್ಯವಿಲ್ಲ......... ನಮ್ಮ ಹುರುಳಿಯವನೊಬ್ಬ ಅಮಲ್ದಾರನಾಗಿ ಬೆಂಗಳೂರಿನಲ್ಲಿ ಯಾವಳೊ ಶೂದ್ರಳನ್ನು ಇಟ್ಟು ಕೊಂಡಿದ್ದಾನಂತೆ".[೨೭] ಇದೆಲ್ಲಾ ಆಧುನಿಕ ಶಿಕ್ಷಣ

ತಂದ ಹೊಸ ಆಕಾಂಕ್ಷೆ ಮತ್ತು ಆತಂಕಗಳು ಇದರಲ್ಲಿ ಹುರುಳಿಲ್ಲದಿಲ್ಲ. ಆದರೆ ಜಾತಿನಿಷ್ಠ, ಸಂಪ್ರದಾಯ ನಿಷ್ಠ ಸಮಾಜಕ್ಕೆ ಅದು ಬಹಳ ದೊಡ್ಡ ಸಂಗತಿಯಾಗಿ ತಲ್ಲಣಗಳನ್ನು ಅನುಭವಿಸುತ್ತದೆ.

ಕಡಿದಾಳ್ ಮಂಜಪ್ಪನವರ 'ಪಂಜರವಳ್ಳಿಯ ಪಂಜು' ಕಾದಂಬರಿಯ ಮೋಹನ ಓದಿ ಸರ್ಕಾರಿ ಹುದ್ದೆ ಪಡೆಯಬೇಕೆಂಬುದ ಪೋಷಕರ ಅಭಿಲಾಷೆ. ಆದರೆ ಆತ ದೇಶ ಸೇವೆಗೆ, ಸ್ವಾತಂತ್ರ್ಯ ಹೋರಾಟಕ್ಕೆ ಇಳಿಯುವುದು ತಂದೆ ತಾಯಿಗಳಿಗೆ ಆತಂಕವನ್ನುಂಟು ಮಾಡುತ್ತದೆ.

ಡಾ. ಯು.ಆರ್.ಅನಂತಮೂರ್ತಿ ಅವರ 'ಸಂಸ್ಕಾರ' ಕಾದಂಬರಿ ೧೯೪೦–೪೫ರ ಕಾಲಮಾನದ ಆವರಣವನ್ನು ಹೊಂದಿದೆ. ಇಡೀ ಕಾದಂಬರಿಯು ಭಾರತೀಯ ಸಾಮಾಜಿಕ ಜೀವನದ ಸ್ಥಿತ್ಯಂತರದ ರೂಪಕವಾಗಿ ತೋರುತ್ತದೆ. ತುಂಗಾನದಿ ತೀರದ ಪುರಾತನ ಸಂಸ್ಕೃತಿಯ ಪ್ರತೀಕದಂತಿದ್ದ ದೂರ್ವಾಸಪುರದ ಸಮಾಜ ತನ್ನ ಒಳಗಿನಿಂದಲೇ ಕುಸಿಯುತ್ತಿರುವುದನ್ನು ಸೂಚಿಸುತ್ತದೆ. ಪುರಾತನ ಸಂಸ್ಕೃತಿಯ ಪುರೋಹಿತ ಮೌಲ್ಯಗಳ ಉತ್ತಮಿಕೆಗೆ ಪ್ರಾಣೇಶಾಚಾರ್ಯರಂತವರು ಪ್ರತೀಕವಾದರೆ ಗುರುಡಾಚಾರ್ಯ, ಲಕ್ಷ್ಮಣಾಚಾರ್ಯ ಮುಂತಾದವರು ಸ್ವಾರ್ಥ, ಅಸೂಯೆಗಳಿಂದ ಅಪ್ರಜ್ಞಾಪೂರ್ವಕವಾಗಿ ಒಳಗಿನಿಂದಲೇ ನಾಶಮಾಡುತ್ತಿದ್ದಾರೆ. ಹೀಗೆ ಒಳಗೇ ದುರ್ಬಲವಾಗಿದ್ದ ಸಮಾಜಕ್ಕೆ ಬಾಹ್ಯ ಕಾರಣಗಳು ನಾಶದತ್ತ ಕೊಂಡೊಯ್ಯುತ್ತವೆ. ಆಧುನಿಕ ಜೀವನಕ್ರಮಕ್ಕೆ ತೆರೆದುಕೊಂಡಿದ್ದ ನಾರಾಣಪ್ಪ ಪ್ರಜ್ಞಾಪೂರ್ವಕವಾಗಿಯೇ ಅಗ್ರಹಾರದ ಬ್ರಾಹ್ಮಣ್ಯವನ್ನು ನಾಶ ಮಾಡಲು ಹೊರಟಿದ್ದ. ಅದಕ್ಕಾಗಿ ಮಾಂಸ, ಮೀನು ತಿನ್ನುವುದು, ಶೂದ್ರಳಾದ ಚಂದ್ರಿಯನ್ನು ಹೆಂಡತಿಯಂತೆ ಮನೆಯಲ್ಲಿಯೇ ಇರಿಸಿಕೊಳ್ಳುವುದು ಇವೆಲ್ಲಾ ಆತ ಭಾವಿಸಿಕೊಂಡಂತೆ ಕ್ರಾಂತಿಕಾರಕವಾದ ಹೆಜ್ಜೆಗಳು. ಇದರ ಮೂಲಕ ಬ್ರಾಹ್ಮಣ್ಯವನ್ನು ನಾಶಮಾಡುತ್ತೇನೆಂದು ಹೊರಟಿದ್ದಾನೆ. ಇದು ನಾರಾಣಪ್ಪನ ಹೊರ ವಿರೋಧವೇ ಹೊರತು ಸೃಜನಾತ್ಮಕವಾದ ವಿರೋಧವಲ್ಲ. ಬ್ರಾಹ್ಮಣ್ಯದ ನಾಶವನ್ನು ದಲಿತರ ಸಂಪರ್ಕದಿಂದ ಮಾಂಸ ತಿನ್ನುವುದರಿಂದ ನಾಶ ಮಾಡಲು ಸಾಧ್ಯವಿಲ್ಲ. ಅದು ಮನೋಭಾವಕ್ಕೆ ಸಂಬಂಧಿಸಿದ್ದು. ಮಲೆಗಳಲ್ಲಿ ಮದುಮಗಳುವಿನ ದೇವಯ್ಯ ಕ್ರಿಶ್ಚಿಯನ್ ಆಕರ್ಷಣೆ ಕೂಡ ಈ ಬಗೆಯದು. ಪರಂಪರಾಗತವಾದ ಮೌಲ್ಯ ನಾಶ ಮಾಡುವ ಹಿಂದೆ ಪ್ರತಿಮೌಲ್ಯ ಸೃಷ್ಟಿ ಮಾಡಬೇಕು. ಆದರೆ ನಾರಾಣಪ್ಪನದು ನಾಶದ ಪ್ರಜ್ಞೆಯೇ ಹೊರತು ಹೊಸ ಮೌಲ್ಯ ಸೃಷ್ಟಿ ಮಾಡುವುದಿಲ್ಲ. ಹಾಗಿದ್ದೂ ನಾರಾಣಪ್ಪನಂತವರ ನಡವಳಿಕೆ ದೂರ್ವಾಸಪುರದಂತಹ ಅಗ್ರಹಾರದಲ್ಲಿ ಸಂಚಲನವನ್ನುಂಟು ಮಾಡಿದ್ದು ನಿಜ. ಅಲ್ಲದೆ ಅವನು ಎತ್ತುವ ಪ್ರಶ್ನೆಗಳು ಇತರ ಬ್ರಾಹ್ಮಣರಿಗಲ್ಲದಿದ್ದರೂ ಪ್ರಾಣೇಶಾಚಾರ್ಯರಂತವರು ಆತ್ಮಾವಲೋಕನ ಮಾಡುವಂತೆ ಮಾಡುತ್ತದೆ.

"ನಿಮ್ಮ ಶಾಸ್ತ್ರ ನಡೆಯೋದಿಲ್ಲ, ಮುಂದೆ ಬರೋದು ಕಾಂಗ್ರೇಸ್ಸು, ಪಂಚರನ್ನು ದೇವಸ್ಥಾನದೊಳಗೆ ಬಿಡಬೇಕು.

ಎಷ್ಟು ದಿನ ಈ ಬ್ರಾಹ್ಮಣ್ಯ ಉಳಿಯತ್ತೆ ಅಂತ?

ಕೊನೆಗೆ ಗೆಲ್ಲೋದು ನಾನೋ ನೀವೋ ನೋಡುವ, ನಾನು ಬ್ರಾಹ್ಮಣ್ಯದ ನಾಶ ಮಾಡುತ್ತೇನೆ, ಮಾಡಿಯೇ ತೀರುತ್ತೇನೆ......... ನನ್ನ ದುಃಖವೆಂದರೆ ನಾಶ ಮಾಡೋಕ್ಕೆ ಈ ಅಗ್ರಹಾರದಲ್ಲಿ ಬ್ರಾಹ್ಮಣ್ಯಾನೇ ಉಳಿದಿಲ್ಲಲ್ಲಾಂತ.

ಮುಂಡೆಯರ ಆಸ್ತಿಗೆ ಮುಟ್ಟುಗೋಲು ಹಾಕಿ ಮಾಟಮಂತ್ರ ಮಾಡಿಸಿ, ಕೆಟ್ಟದ್ದು ಬಗೆಯುವ ಗರುಡ (ಗರುಡಾಚಾರ್ಯ) ನಿಮ್ಮ ಪ್ರಕಾರ ಬ್ರಾಹ್ಮಣನೊ? ಹೇಲಿನಲ್ಲಿ ಬಿದ್ದರೋ ಕಾಸನ್ನ ನಾಲಗೆಯಿಂದ ನೆಕ್ಕಿ ತೆಗಿಯೋ ಆ ಲಕ್ಷ್ಮಣ.........

ಜುಟ್ಟು ಬಿಟ್ಟು, ಅಂಗಾರ ಹಾಕಿ ನಿಮ್ಮ ಕಟ್ಟೇ ಮೇಲೆ ಕೂತು ನೀವು ಹೇಳೊ ಪುರಾಣಾನ್ನ ಕೇಳಿಸಿಕೊಂಡು ಇರಬೇಕಾಗಿತ್ತು".[೨೮]

ಭಾರತೀಯ ಸಂಪ್ರದಾಯನಿಷ್ಠ ಸಮಾಜದೊಳಗೆ ಆಧುನಿಕತೆ ಪ್ರವೇಶ ಮಾಡಿದ್ದು ತನ್ನ ಆಕರ್ಷಣೆ, ಸಾಮರ್ಥ್ಯಕ್ಕಿಂತ ಹೆಚ್ಚಾಗಿ ಇಲ್ಲಿಯ ಸಮಾಜದೊಳಗಿನ ಆಂತರಿಕ ದೌರ್ಬಲ್ಯದ ಕಾರಣಗಳಿಗಾಗಿ ಎಂಬುದನ್ನು ಮೇಲಿನ ಮಾತುಗಳು ಅಭಿವ್ಯಕ್ತಿಸುತ್ತವೆ. ಬಾಹ್ಯವಾದ ರೀತಿಯಲ್ಲಿ ಸಂಪ್ರದಾಯದ ಚೌಕಟ್ಟಿನಿಂದ ಬಿಡುಗಡೆಗೊಳ್ಳಲು, ಸ್ವೇಚ್ಛೆಯಿಂದ ಬದುಕಲು ಆಶಿಸುವ ಹಿನ್ನಲೆಯಲ್ಲಿ ಆಧುನಿಕತೆಯನ್ನು ಮೈಗೂಡಿಸಿಕೊಂಡ ನಾರಾಣಪ್ಪ ಅಗ್ರಹಾರದ ಯುವಕರ ಮೇಲೆ ಪ್ರಭಾವ ಬೀರಿದ. ಪ್ರಾಣೇಶಾಚಾರ್ಯರಿಂದ ವೇದ ಮಂತ್ರಗಳನ್ನು ಕಲಿತು ಬೆಳೆದ ಗರುಡಾಚಾರ್ಯನ ಮಗ ಶ್ಯಾಮ ಮನೆಯಿಂದ ಓಡಿ ಮಿಲಟರಿ ಸೇರಿದ. ಲಕ್ಷ್ಮಣಾಚಾರ್ಯನ ಅಳಿಯ ಶ್ರೀಪತಿ ನಾರಾಣಪ್ಪನ ಹಾದಿ ತುಳಿದ. ಇದಕ್ಕೆ ಆ ಮನೆಗಳ ಮೋಂಡುತನಗಳೂ ಕಾರಣವಾಗುತ್ತವೆ. "ಆಧುನಿಕ ಆಕರ್ಷಣೆಗಳು ಪರಂಪರೆಯ ವಿಘಟನೆಗೆ ಹಾದಿ ಮಾಡಿಕೊಡುವಂತೆ, ಆಧುನಿಕತೆ ಎತ್ತುವ ಕೆಲವು ಮುಖ್ಯ ಪ್ರಶ್ನೆಗಳನ್ನು ಅರಗಿಸಿಕೊಳ್ಳಲಾಗದ, ಗ್ರಹಿಸಲಾರದ ಪರಂಪರೆಯ ಅಸಾಮರ್ಥ್ಯ ಹಾಗೂ ಮೊಂಡುತನ ಕೂಡ ಪರಂಪರೆಯ ವಿಘಟನೆಗೆ ಹಾದಿ ಮಾಡಿ ಕೊಡುತ್ತದೆ.[೨೯] ಅಗ್ರಹಾರದ ಸಂಪ್ರದಾಯಸ್ಥರಿಗೆ ಕಲಿಗಾಲದ ಫಲವಾಗಿ ವಿನಾಶಕಾರಿ ಶಕ್ತಿಯಾಗಿ ಕಾಣುವ ಆಧುನಿಕ ಮೌಲ್ಯಗಳೇ ನಾರಾಣಪ್ಪನಂತವರಿಗೆ ಬಿಡುಗಡೆ ಮಾರ್ಗವಾಗಿ ಕಾಣಿಸಬಲ್ಲವು. ದೂರ್ವಾಸಪುರದ ಪ್ರಾಣೇಶಾಚಾರ್ಯರ ಅಧಿಪತ್ಯದ ಅಗ್ರಹಾರದ ಹೊರಗೆ ಇಂಗ್ಲಿಷರ ಕಾನೂನಿನ ಆಧುನಿಕ ನಾಗರಿಕತೆಯ ಇನ್ನೊಂದು ವಲಯ ರೂಪಿತವಾಗುತ್ತಿರುತ್ತದೆ. ಇಂಗ್ಲಿಷ್‌ನ ಕಾನೂನು ಅಧಿಕಾರ ಇರುವ ಕಾರಣದಿಂದ ನಾರಾಣಪ್ಪನನ್ನ ಅಗ್ರಹಾರದಿಂದ ಬಹಿಷ್ಕಾರ ಹಾಕುವ ಧೈರ್ಯವನ್ನು ಸಂಪ್ರದಾಯನಿಷ್ಠರು ಮಾಡುವುದಿಲ್ಲ.

ದುರ್ವಾಸಪುರದ ಅಗ್ರಹಾರಕ್ಕಿಂತ ಸ್ವಲ್ಪ ಸುಧಾರಿಸಿರುವ, ಆಧುನಿಕತೆಯನ್ನು ಮೈಗೂಡಿಸಿಕೊಳ್ಳುತ್ತಿರುವ ಪಾರಿಜಾತಪುರದ ಅಗ್ರಹಾರಕ್ಕೆ ದುರ್ವಾಸಪುರದ ಯುವಕರು ಹೋಗಿ 'ಪರಿಜಾತ ಮಂಡಳಿ' ಎಂಬ ಯುವಕ ಸಂಘವನ್ನು ಕಟ್ಟಿ ಅಲ್ಲಿ ಯಕ್ಷಗಾನ, ತಾಳಮದ್ದಲೆ ಅಭ್ಯಾಸ ಮಾಡುತ್ತಿಲ್ಲ ; ಗುಲೇಬಕಾವಲಿ ನಾಟಕದ ತಯಾರಿಕೆಯಲ್ಲಿ ತೊಡಗಿದ್ದಾರೆ. ತಾಲೀಮಿಗೆ ಬಂದಾಗ ಎಲ್ಲಾ ಸೇರಿ ಕಾಫಿ ಸಮಾರಾಧನೆ ನಡೆಯುತ್ತಿತ್ತು. ಆಸಕ್ತರು ನದಿ ದಡದಲ್ಲಿ ಸೇರಿ ಮಧ್ಯರಾತ್ರಿಯಲ್ಲಿ ಪಾರ್ಟಿ ಮಾಡುತ್ತಿದ್ದರು. ಕುಡಿದಾಗಲೆಲ್ಲ ಮಂಜುನಾಥನ ಬಾಯಲ್ಲಿ ಇಂಗ್ಲಿಷ್ ಶಬ್ದಗಳು ಬರುತ್ತಿದ್ದವು. ಈ ಅಂಶ ಆಧುನಿಕತೆ ತರುವ ಹೊಸತನ, ಸಂಪ್ರದಾಯದ ಸಂಕೋಲೆಯಿಂದ ಬಿಡುಗಡೆ ಅಷ್ಟೆ ಅಲ್ಲ ಅದು ತರುವ ವಿಕಾರತೆಯನ್ನು ಸೂಚಿಸುತ್ತದೆ.

ಪಾರಿಜಾತಪುರದ ಸಾಹುಕಾರ ಮಂಜಯ್ಯನವರಿಗೆ ದುರ್ವಾಸಪುರದಲ್ಲಿ ಒಬ್ಬರ ಹಿಂದೆ ಒಬ್ಬರು ಸಾಯುವುದನ್ನು ಕಂಡು ಇದು ಪ್ಲೇಗು ಎಂದು ತಿಳಿದಿದ್ದೇ ತಾಯಿ ನಾಡು ಪತ್ರಿಕೆಯಲ್ಲಿ ಚಿಕ್ಕದಾಗಿ ಪ್ರಕಟವಾದ ಸುದ್ದಿಯಿಂದ ಶಿವಮೊಗ್ಗದಿಂದ ನಾರಾಣಪ್ಪ ಈ ಪ್ಲೇಗನ್ನು ತಂದನಂದು, ತಾವು ಯಾವುದೇ

ಕುರುಡು ಧರ್ಮಕ್ಕೆ ಕಟ್ಟುಬಿದ್ದು, ಸತ್ತವನ ಶವಸಂಸ್ಕಾರ ಮಾಡದೇ ಹೋದದ್ದು ಪ್ರಮಾದವಾಯಿತೆಂದು ಪರಿತಪಿಸುತ್ತಾರೆ. ಜಾಗೃತರಾಗಿ ಡಾಕ್ಟರನ್ನು ಕರೆಸಬೇಕು, ಇನಾಕ್ಯುಲೇಶನ್ ಮಾಡಿಸಬೇಕು, ವಿಷವಾಯುವನ್ನು ಇಲಿಯ ದೋರುಗಳಿಗೆ ತುಂಬಿಸಬೇಕು, ಜನರನ್ನು ಎಚ್ಚರಿಸಬೇಕೆಂದು ಕಾರ್ಯ ಪ್ರವೃತ್ತರಾಗುತ್ತಾರೆ. ಇದು ಸಾಧ್ಯವಾದದ್ದು ಆಧುನಿಕ ಶಿಕ್ಷಣದ ಅರಿವಿನಿಂದ, ಸಾಧನಗಳಿಂದ. ಆದ್ದರಿಂದ ಸಂಸ್ಕೃತವೇ ದೇವಭಾಷೆಯೆಂದು ನಂಬಿಕೊಂಡಿದ್ದ ಅಗ್ರಹಾರವನ್ನು ಇಂಗ್ಲಿಷ್ ಪ್ರವೇಶಿಸುತ್ತದೆ. ಧರ್ಮಗ್ರಂಥಗಳಿಂತ 'ನ್ಯೂಸ್‌ಪೇಪರ್' ಆಕರ್ಷಕವಾಗಿ ಮತ್ತು ಅರಿವಿನ ಮಾಧ್ಯಮವಾಗಿ ಕಂಡು ಬರುತ್ತದೆ.

'ಪ್ಲೇಗ್' ಕೂಡ ಹೊರಗಿನಿಂದ ಬಂದ ರೋಗವಾಗಿ ಒಂದು ರೂಪಕವಾಗಿಯೇ ಕಾದಂಬರಿಯಲ್ಲಿ ಬಳಕೆಯಾಗಿದೆ. ಪಾಶ್ಚಾತ್ಯ ಚಿಂತನೆ ತಂದ ಆಧುನಿಕತೆಯ ಪ್ರವೇಶ ಈ ದೇಶದೊಳಗೆ ಒಳ್ಳೆಯದು ಹೇಗೋ ಹಾಗೆ ಅದರ ಜೊತೆ ಕೆಟ್ಟದ್ದನ್ನು ತಂದಿರುವ ರೂಪಕವದು.

ಭಾರತೀಪುರದ ಜಗನ್ನಾಥ ಪುರೋಹಿತಶಾಹಿ ಮತ್ತು ಜಮೀನ್ದಾರಿ ಶಾಹಿಯ ಆವರಣದಿಂದಲೇ ಬಂದವನು. ಮೈಸೂರಿನಲ್ಲಿ ಶಿಕ್ಷಣ ಪಡೆದ ಹೂವಯ್ಯ ಮಲೆನಾಡನ್ನು ಪ್ರವೇಶಿಸುವಂತೆ ಜಗನ್ನಾಥ ಲಂಡನ್‌ನಲ್ಲಿ ವ್ಯಾಸಂಗ ಪೂರೈಸಿ ಆಧುನಿಕತೆಯನ್ನು, ವೈಚಾರಿಕತೆಯನ್ನು ಮೈಗೂಡಿಸಿಕೊಂಡು ಮಲೆನಾಡನ್ನು ಪ್ರವೇಶಿಸುತ್ತಾನೆ. ಭಾರತೀಪುರದ ಪಾರಂಪರಿಕ ಸಮಾಜದ ಹಿಂಸೆ ಹಲವು ರೀತಿಯಲ್ಲಿ ಜಗನ್ನಾಥನಿಗೆ ಗೋಚರಿಸುತ್ತದೆ. ಅದು ಜಾತಿ ಕೇಂದ್ರಿತ ವ್ಯವಸ್ಥೆಯಾಗಿ, ಧರ್ಮ ಕೇಂದ್ರಿತ ವ್ಯವಸ್ಥೆಯಾಗಿ, ಜಮೀನ್ದಾರಿ ವ್ಯವಸ್ಥೆಯಿಂದಾಗಿ ಮತ್ತು ಲೈಂಗಿಕ ವಿಧಿ ನಿಷೇಧಗಳಿಂದಾಗಿ ಹಿಂಸೆಯ ಸ್ವರೂಪವನ್ನು ಕಾಣುತ್ತಾನೆ.

ಗಣೇಶ ತನ್ನಿಷ್ಟದಂತೆ ಉಣ್ಣುವುದಕ್ಕೂ, ಉಡುವುದಕ್ಕೂ ಕೊನೆಗೆ ಹೆಂಡತಿಯ ಜೊತೆ ಮಲಗುವುದಕ್ಕೂ ಹಲವು ಕಟ್ಟುಪಾಡುಗಳ ಮೂಲಕ ತಡೆಯೊಡ್ಡುತ್ತದೆ. ಹಾಗೆಯೇ ಮಂಜುನಾಥನ ದರ್ಶನಕ್ಕೆ ಬರುವ ಯಾತ್ರಿಕರಿಗೆ ಅಡಿಗೆ ಮಾಡಿ ಬಡಿಸುತ್ತಲೇ ಜೀವ ಸವೆಸುವ ನಾಗಮಣಿ. ಈ ನಾಗಮಣಿ ಆತ್ಮಹತ್ಯೆಗೆ ಶರಣಾಗುವುದರ ಮೂಲಕ, ಗಣೇಶ ಮಂಜುನಾಥ ಲಿಂಗವನ್ನೇ ಕಿತ್ತು ತರುವುದರ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾರೆ. ಗೇಣಿದಾರರನ್ನು ಹದ್ದುಬಸ್ತಿನಲ್ಲಿ ಇಡುವುದಕ್ಕೆ ಮಂಜುನಾಥಸ್ವಾಮಿಯ ಭೂತರಾಯನನ್ನು ಬಳಸುವುದು. ಇವೆಲ್ಲಾ ಜಡವಾಗಿರುವಂತಹ ಮತ್ತು ಹಿಂಸಾತ್ಮಕವಾದ ಜಗತ್ತು. ಈ ಹಿಂಸಾತ್ಮಕವಾದ ಪರಂಪರೆಯ ಸಮಾಜದ ಚಕ್ರವನ್ನು ತಿರುಗಿಸಬೇಕು ಅಂತ ಹೊರಟವನು.

ನಾರಾಣಪ್ಪ ಆರಂಭಿಸಿದ ಬಂಡಾಯವನ್ನು ಮತ್ತಷ್ಟು ವಿಶಾಲವಾದ ತಾತ್ವಿಕ ನೆಲೆಗಟ್ಟಿನಲ್ಲಿ ಮುಂದುವರೆಸಿದವನು ಜಗನ್ನಾಥ. ತಂದೆ ಬರೆಸಿಕೊಂಡ ಪ್ರಾಮಸರಿ ನೋಟುಗಳನ್ನು ಹರಿದು ಹಾಕಿ ಈ ಜಮೀನ್ದಾರಿ ವಿರೋಧಿಸುತ್ತಾನೆ. ಹಾಗೆ ದಲಿತರಿಗೆ ಅಕ್ಷರ ಕಲಿಸುವುದು, ಅವರಲ್ಲಿ ಆತ್ಮಗೌರವ ತುಂಬಿ ದೇವಾಲಯದೊಳಗೆ ಪ್ರವೇಶ ಮಾಡಿಸುವುದು ಆ ಮೂಲಕ ಭಾರತೀಪುರದ ಬೇರಲ್ಲ ಸಮುದಾಯಗಳಿಗೆ ಮಾತ್ರ ಸೀಮಿತವಾದ ಮಂಜುನಾಥ ಸ್ವಾಮಿಯ ಪುರಾಣವನ್ನು ನಾಶ ಮಾಡುವುದು. ಈ ರೀತಿ ಕೆಳಜಾತಿಗಳು ಇಡುವ ಹೆಜ್ಜೆ ಸಾಂಪ್ರದಾಯಿಕ ಸಮಾಜವನ್ನು ಬದಲಿಸಬಲ್ಲದು ಎಂಬುದು ಜಗನ್ನಾಥನ ಚಿಂತನೆ. ಮಂಜುನಾಥನ ನಂಬಿಕೆ ನಾಶ ಮಾಡಿದ ಮೇಲೆ ನಾವು ನಮ್ಮ ಜೀವನಕ್ಕೆ

ಜವಾಬ್ದಾರರಾಗಬೇಕಾಗುತ್ತೆ. ಅದಕ್ಕೆ ಹೊಸ ಹಾದಿಗಳನ್ನು ಹುಡುಕಬೇಕಾಗುತ್ತದೆ. ಕಾರ್ಖಾನೆ, ಗಣಿಯಂತಹ ಉದ್ಯಮಗಳು ಬರಬೇಕೆಂದು ಯೋಜನೆಯನ್ನು ರೂಪಿಸುತ್ತಾನೆ. ಜಗನ್ನಾಥನ ಪ್ರಯತ್ನ ವಿಫಲವಾದರೂ ಜಗನ್ನಾಥನ ಪ್ರಾಮಾಣಿಕ ಉದ್ದೇಶವನ್ನು ಪ್ರಶ್ನಿಸಬೇಕಾಗಿಲ್ಲ.

೨೦೦೧ರಲ್ಲಿ ಬಂದ ದಿವ್ಯ ಕಾದಂಬರಿಯ ಮೊದಲ ಮಾತಿನಲ್ಲಿಯೇ ಯು.ಆರ್.ಅನಂತಮೂರ್ತಿ ಅವರು 'ಕಾಲದಲ್ಲಿ ಇನ್ನೂ ದೂರವಿರುವ ಈಗಿ ನನಗೆ, ನನ್ನ ತೀರ್ಥಹಳ್ಳಿ ಪರಿಸರದ ಬಾಲ್ಯದ ನೆನಪುಗಳೂ, ಎಳೆವಯಸ್ಸಿನ ಶಿವಮೊಗ್ಗದ ನೆನಪುಗಳೂ ಹೊಸದಾದ ನನ್ನ ಈಚಿನ ಕಾಣುವಿಕೆಗೂ ಹಿಂದಿನಷ್ಟೇ ಸಮೃದ್ಧವೆನ್ನಿಸುವ ದ್ರವ್ಯವಾಗುವಂತೆ ಉಳಿದಿದೆ' ಎಂಬುದಾಗಿ ಕೃತಜ್ಞತೆ ಸಲ್ಲಿಸಿದ್ದಾರೆ. ಅವರ ಬೇರೆಲ್ಲಾ ಕಾದಂಬರಿಗಳಿಗಿಂತ ಈ ಕಾದಂಬರಿ ಈ ಮಲೆನಾಡ ಪರಿಸರಕ್ಕೆ ಹೆಚ್ಚು ಹತ್ತಿರವಾದ ವಾಸ್ತವ ಬರವಣಿಗೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಸ್ವಾತಂತ್ರ್ಯ ನಂತರದ ಸುಮಾರು '೬೦'ರ ದಶಕದ ಕಾಲಾವಧಿಯಲ್ಲಿ ಮಲೆನಾಡ ಪರಿಸರದಲ್ಲಾಗುವ ಸ್ಥಿತ್ಯಂತರವನ್ನು ಅಭಿವ್ಯಕ್ತಿಸುತ್ತದೆ. ಆಧುನಿಕತೆ ಪ್ರವೇಶದೊಂದಿಗೆ ಸಂಸ್ಕಾರದಲ್ಲಾದ ತೀವ್ರ ತಲ್ಲಣವನ್ನಾಗಲಿ, ಭಾರತೀಪುರದಲ್ಲಾದ ಸಂಘರ್ಷವನ್ನಾಗಲಿ ತೀವ್ರ ಸ್ವರೂಪದಲ್ಲಿ ಕಾಣದೆ ಸಹಜವಾಗಿ ಆಧುನಿಕತೆ ಮೈಗೂಡಿಸಿಕೊಳ್ಳುತ್ತಿರುವ ಪರಿಯನ್ನು ಇಲ್ಲಿ ಕಾಣಬಹುದು.

ದೇವನಹಳ್ಳಿ ಮಂಜಯ್ಯ ಜಮೀನ್ದಾರಿ ಹಿನ್ನೆಲೆಯುಳ್ಳವರು, ಕಾಶಿಯಲ್ಲಿ ವ್ಯಾಸಂಗ ಮಾಡಿದರೂ, ಗಾಂಧಿ ಪ್ರಭಾವಕ್ಕೆ ಒಳಗಾದವರೂ ಆಗಿದ್ದಾರೆ. ಕಾಂಗ್ರೇಸ್ಸಿನ ಸಕ್ರಿಯ ರಾಜಕಾರಣಿ, ವ್ಯವಸಾಯದ ಜೊತೆ ವ್ಯವಹಾರದಲ್ಲೂ ಕುಶಲರು ತಮ್ಮ ಗೇಣಿದಾರರ ಬಗ್ಗೆ ಉದಾರ ನಿಲುವುಳ್ಳವರು. ಈ ಉದಾರತೆಯ ಹಿಂದೆ ಇರುವುದು ರಾಜಕೀಯ ಪ್ರಜ್ಞೆ. ವಿಧವೆಯಾದ ಮಗಳು ವಿಮಲೆಗೆ ಮಡಿ ಹಿಡಿಸದೆ ಕಾನೂನು ಪದವಿ ಓದಿಗಾಗಿ ಮದ್ರಾಸಿಗೆ ಕಳುಹಿಸುತ್ತಾರೆ. ಬ್ರಾಹ್ಮಣ ಸಮುದಾಯದ ವಿಧವೆ ವಿಮಲ ತಮ್ಮ ಮನೆಯ ಕಾರಿನ ಡ್ರೈವರ ಕ್ರಿಶ್ಚಿಯನ್ ಧರ್ಮದ ಮೈಕೇಲ್‌ನನ್ನು ಪತಿಯನ್ನಾಗಿ ಹೊಂದಿದ್ದಾಳೆ, ಇಂತಹ ಧೈರ್ಯ ಆಧುನಿಕ ಶಿಕ್ಷಣದಿಂದ, ಆಧುನಿಕ ಆವರಣ ಪಡೆದುಕೊಳ್ಳುತ್ತಿರುವ ತನ್ನ ಮನೆಯಿಂದ ಅದು ಸಾಧ್ಯವಾಗಿದೆ. ಮೈಕೇಲ್ ಆ ಮನೆಯಲ್ಲಿ ಎಲ್ಲರ ದೃಷ್ಟಿಕೋನದಲ್ಲಿ ಕೆಳಹಂತದ ನೌಕರ. ತನ್ನ ಈ ಕೀಳರಿಮೆಯನ್ನು ಮೀರಲು ಆಧುನಿಕ ರೂಪಗಳಾದ ಇಂಗ್ಲಿಷ್ ಭಾಷೆ, ವಸ್ತ್ರ, ಸಿಗರೇಟ್ ಮುಂತಾದವನ್ನು ಬಳಸಿಕೊಳ್ಳುವ ಮತ್ತೊಂದು ನೆಲೆಯನ್ನು ಕಾಣಬಹುದು. ಮಂಜಯ್ಯನ ಮಗ ಘನಶ್ಯಾಮ ಕಾಶಿ, ಲಂಡನ್‌ನಲ್ಲಿ ವ್ಯಾಸಂಗ ಪೂರ್ಣಗೊಳಿಸಿ ಬಂದವನು. ತಂದೆಯ ಜಮೀನ್ದಾರಿ ಒಲವನ್ನು ವಿರೋಧಿಸುತ್ತಾನೆ. ತಂದೆ ಕಾಲಾನಂತರ ಗೇಣಿ ಜಮೀನನ್ನೆಲ್ಲಾ ಒಂದು ಟ್ರಸ್ಟಿಗೆ ಒಳಪಡಿಸುತ್ತಾನೆ. ಕೇಶವನ ಪ್ರಕಾರ "ಘನಶ್ಯಾಮ ದೇವರ ಹಂಗಿಲ್ಲದವನು, ಪುರುಷ ಪ್ರಯತ್ನದಿಂದಲೇ ಈ ಜಗತ್ತು ನಡೆದುಕೊಂಡು ಹೋಗುವುದು ಎಂದು ತಿಳಿದಿರೊ ಪರಂಗಿ ಜನರ ಹಾಗೆ"[೩೦]. ಅಂದರೆ ಘನಶ್ಯಾಮನ ಯಡಪಂಥಿಯ ಚಿಂತನೆಗಳು ಬೆಳದದ್ದು ಆಧುನಿಕ ಶಿಕ್ಷಣದಿಂದ.

ಕೇಶವನಲ್ಲಿರುವ ಸಂಸ್ಕೃತ ಜ್ಞಾನ ಎಲ್ಲರಿಗೆ ಬಳಕೆಯಾಗಬೇಕೆಂದು ಶಾಲೆಯೊಂದನ್ನು ಸ್ಥಾಪಿಸಲು ನಿರ್ಧರಿಸುತ್ತಾನೆ. ಕೇಶವನ ಸ್ಥಾನದಲ್ಲಿ ಸ್ಥಿತ್ಯಂತರವಾಗಿದೆ. ಅರ್ಚಕ ಕೇಶವಭಟ್ಟ ಇನ್ನು ಮುಂದೆ ಮಿಷ್ಟರ್

ಕೇಶವಭಟ್ಟನಾದ. ಸಾಹುಕಾರ ಟ್ರಸ್ಟಿನ ಕಾರ್ಯದರ್ಶಿಯಾದ. ಕೇಶವನ ಸಂಸ್ಕೃತ ಜ್ಞಾನ ಜನಸಾಮಾನ್ಯರಿಗೆ ಕೊಡಬೇಕು ಎಂಬ ಆಲೋಚನೆ ಘನಶ್ಯಾಮನ ಯೋಚನೆ ಯೋಜನೆ ಇದು ವಿಸ್ಮೃತಿ ತತ್ವದ ಭಾಗ. ಅನಂತಮೂರ್ತಿ ತಮ್ಮ ಇತ್ತೀಚಿನ ಬರಹಗಳಲ್ಲಿ ಪಶ್ಚಿಮ ಚಿಂತನೆಗಳ ವಿರುದ್ಧವಾಗಿ ಪೂರ್ವದ ಆಧ್ಯಾತ್ಮ, ಗಾಂಧಿ ಚಿಂತನೆ ಮತ್ತು ಪರಿಸರ ಚಿಂತನೆಯನ್ನು ಪ್ರತಿಪಾದಿಸುತ್ತಿರುವುದು ಕುತೂಹಲದ ಸಂಗತಿಯಾಗಿದೆ. ಇದನ್ನು ಈಚಿನ ಮಾತುಸೋತು ಭಾರತ, ಅರೆಶತಮಾನದ ಬರಹ ಇತ್ಯಾದಿ ಕೃತಿಗಳಲ್ಲಿ ಒಂದು ತಾತ್ವಿಕ ದೃಷ್ಟಿಕೋನವಾಗಿ ತಂದಿರುವುದನ್ನು ಕಾಣಬಹುದು.

ತಳ ಸಮುದಾಯಗಳಲ್ಲಿ ಆಧುನಿಕ ಶಿಕ್ಷಣ

ಇದುವರೆಗಿನ ಪರಿಶೀಲನೆಯಂತೆ ಇಂಗ್ಲಿಷ್ ಶಿಕ್ಷಣ ಎಂಬುದು ಮೇಲುವರ್ಗ ಮತ್ತು ಮಧ್ಯಮ ಅಥವಾ ಶೂದ್ರ ಸಮುದಾಯಗಳಲ್ಲಿ ಉಂಟು ಮಾಡಿದ ಆಕರ್ಷಣೆ, ತವಕ–ತಲ್ಲಣ, ಜೀವನಕ್ರಮದಲ್ಲಾದ ಪಲ್ಲಟಗಳನ್ನು ಗಮನಿಸಿದೆ. ಆದರೆ ಮಲೆನಾಡ ಪರಿಸರದಲ್ಲಿ ತಳ ಸಮುದಾಯಗಳ ಪ್ರತಿಕ್ರಿಯೆ ತಟಸ್ಥವಾಗಿರುವಂತಿದೆ. ತಮ್ಮ ಒಡೆಯರ ಮಕ್ಕಳ ಓದು ಅವರಲ್ಲಾದ ಬಾಹ್ಯ ಪರಿವರ್ತನೆಗಳನ್ನು ಬೆರಗಿನಿಂದ ನೋಡುತ್ತಿದ್ದಷ್ಟೆ. ಕ್ರೈಸ್ತ ಮಿಷನರಿ ಶಾಲೆಗಳು ಅಥವಾ ಸರ್ಕಾರಿ ಶಾಲೆಗಳು ಈ ಬಗ್ಗೆ ಹೆಚ್ಚು ತಲೆಕೆಡೆಸಿಕೊಂಡಂತೆ ಕಂಡುಬರುವುದಿಲ್ಲ. ಕುವೆಂಪು ನೆನಪಿನ ದೋಣಿಯಲ್ಲಿ ಹೇಳುವ ಹಾಗೆ (ಹಿಂದೆ ನೋಡಿರುವಂತೆ) ಆಂಗ್ಲೇಯ ರೀತಿಯ ಸ್ಕೂಲುಗಳು ಪ್ರಾರಂಭವಾದಾಗ ಮೇಲು ವರ್ಗದ ಮಕ್ಕಳು ಬೆಂಚಿನ ಮೇಲೆ ಶೂದ್ರರಮಕ್ಕಳು ನೆಲದ ಮೇಲೆ ಕೂರುವಂತ ವ್ಯವಸ್ಥೆ ಮಾಡಲಾಗಿತ್ತು. ಇದು ಕ್ರೈಸ್ತ ವಿದ್ಯಾಧಿಕಾರಿಗೆ ತಿಳಿದು ಆಕ್ಷೇಪಿಸಿದಾಗ ಕೆಲವು ಮೇಲುವರ್ಗದ ಬೆಂಚುಗಳು ಕೆಲವು ಶೂದ್ರವರ್ಗದ ಬೆಂಚುಗಳು ಆದವು. ಕಾಲಕಳೆದಂತೆ ಅಸ್ಪೃಶ್ಯರ ಮಕ್ಕಳು ಶಾಲೆಗೆ ಬಂದಾಗ ಅವರನ್ನು ಶಾಲೆಯ ಹೊರಗಡೆಯ ತಣಿಯ ಮೇಲೆ ಕೂರಿಸಿದರು. ತಮ್ಮೊಡನೆ ಕೂರಿಸಲು ಮೇಲು ವರ್ಗದವರ ವಿರೋಧ ಹೇಗಿತ್ತೊ ಹಾಗೆ ಪ್ರತಿಷ್ಠಿತ ಶೂದ್ರ ಸಮುದಾಯದ ವಿರೋಧವು ಇದ್ದದ್ದರಿಂದ ಬಲಪಕ್ಷಪಾತಿಗಳಾದ ಸರ್ಕಾರಿ ಅಧಿಕಾರಿಗಳು ಈ ಬಗ್ಗೆ ಹೆಚ್ಚು ಆಕ್ಷೇಪವೆತ್ತಲಿಲ್ಲ. ಇದು ೨೦ನೇ ಶತಮಾನದ ಆರಂಭ ಕಾಲಘಟ್ಟದ ಸಂದರ್ಭ.

ಅಸ್ಪೃಶ್ಯ ಅಥವಾ ತಳ ಸಮುದಾಯಗಳ ಕುಟುಂಬಗಳಲ್ಲಿ ಶಿಕ್ಷಣದ ಕಾಳಜಿ ಬಗ್ಗೆ ನಮ್ಮ ಕಥಾಸಾಹಿತ್ಯದಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ. ಕುವೆಂಪು ಅವರ ಕಾನೂರು ಹೆಗ್ಗಡತಿ ಕೊನೆಯಲ್ಲಿ 'ಹತ್ತು ವರ್ಷಗಳಾದ ಮೇಲೆ' ಎಂಬ ಭಾಗದಲ್ಲಿ ನಿಂಗನ ಮಗ ಪುಟ್ಟ ಸೀತೆಯ ಪ್ರಯತ್ನದಿಂದ ಅನಕ್ಷರಸ್ಥನಾಗುತ್ತಾನೆ ಎಂಬ ಸೂಚನೆಯಿದೆ. ಅನಂತಮೂರ್ತಿಯವರ ಭಾರತೀಪುರ ಕಾದಂಬರಿಯಲ್ಲಿ ಹರಿಜನ ಯುವಕರಿಗೆ ಅಕ್ಷರಾಭ್ಯಾಸ ಮಾಡಿಸುವ ಪ್ರಯತ್ನ ನಡೆಯುತ್ತದೆ.

ಮಲೆನಾಡನ್ನು ಆಧುನಿಕ ಶಿಕ್ಷಣದ ಶಾಲೆಗಳು ಎಲ್ಲೆಡೆ ಸ್ಥಾಪಿತವಾಗುತ್ತಿದ್ದರೂ ಅದರ ಸದುಪಯೋಗವನ್ನು ಮೇಲು ವರ್ಗದದವರು, ಮಧ್ಯಮ ವರ್ಗದವರು ಆರ್ಥಿಕವಾಗಿ ಬಲಿಷ್ಠರು ಪಡೆದುಕೊಳ್ಳುವಲ್ಲಿ ಮಾತ್ರ ಸಫಲರಾದರು. ಆರ್ಥಿಕವಾಗಿ ಹಿಂದುಳಿದವರು ಒಡೆಯರ ಮನೆಯಲ್ಲಿ ಜೀತದಾಳಗಳಾಗಿರುವ ಕುಟುಂಬಗಳ ಮಕ್ಕಳು ಇದರಿಂದ ದೂರವೇ ಉಳಿದರು. ಒಂದು ಆರ್ಥಿಕ

ಕಾರಣ ಇನ್ನೊಂದು ನಮ್ಮ ಮಕ್ಕಳು ಓದಿ ಯಾವ ಸಾಹೇಬ ಆಗಬೇಕು ಎಂಬ ತರ್ಕ, ಕುಲ ಕಸುಬು ನಾಶವಾಗುವ ಭಯ. ಹಾಗೆ ಒಡೆಯರ ಆಣತಿಯಂತೆ ಬದುಕನ್ನು ರೂಪಿಸಿಕೊಳ್ಳಬೇಕಾದ ಜನ ಸಮುದಾತಯಕ್ಕೆ ಓದು ಕೂಡ ಅವರ ಕೃಪೆಯನ್ನು ಅವಲಂಬಿಸಿತ್ತು.

ಸುಮಾರು ಅರವತ್ತು-ಎಪ್ಪತ್ತರ ದಶಕದ ಮಲೆನಾಡ ಬದುಕಿನ ಆವರಣವನ್ನು ಹೊಂದಿರುವ 'ವಸುಮತಿ ಉಡುಪ' ಅವರ ಕಥೆಗಳಲ್ಲಿ ಕೆಳ ಸಮುದಾಯದ ಮಕ್ಕಳ ಶಿಕ್ಷಣದ ಹಂಬಲ, ಶೋಷಣೆಯನ್ನು ಗಮನಿಸಬಹುದು. ಅವರ 'ಕಾಲ' ಕಥೆ ಇದನ್ನು ಅನಾವರಣಗೊಳಿಸಿದೆ. ಜಮೀನ್ದಾರ ರಾಯರ ಮನೆಯಲ್ಲಿ ಕೆಲಸದ ಆಳುಗಳಾದ ಚೇಂಕ್ರ-ಚಲುವಿಯರ ಮಗ ಕೃಷ್ಣಮೂರ್ತಿ. ರಾಯರ ಹಿರಿಯ ಮಗ ಓದಿ ನೌಕರಿ ಪಡೆದ್ದರಿಂದ ಅವನ ಹಾಗೆ ತನ್ನ ಮಗನಾಗಬೇಕೆಂದು ಆತನ ಹೆಸರನ್ನೇ ತನ್ನ ಮಗನಿಗೂ ಇಡುವಲ್ಲಿ ಆಸೆಯ ಆಳವನ್ನು ಅರಿಯಬಹುದು.

ಕೆಳವರ್ಗದಿಂದ ಬಂದ ಅಧ್ಯಾಪಕರೊಬ್ಬರ ಬೋಧನೆ ಒತ್ತಾಸೆಯಿಂದ ತನ್ನ ಮಗನನ್ನು ಶಾಲೆಗೆ ಸೇರಿಸಲು ಮುಂದಾದಾಗ ಪಟ್ಟಭದ್ರ ಹಿತಾಸಕ್ತಿಯ ಮನಸ್ಸು ತಡೆಯುತ್ತದೆ –

"ಯಂತ ಹುಡುಗಾಟಂತ ಮಾಡಿದ್ಯನೋ ವಿದ್ಯೆ?... ಅಂವ ಕೋತಪ್ಪನಾಯಕ ಹೇಳ್ದ ಬೆಪ್ಪು ತಕ್ಕಡಿ ನೀ ಕೇಳ್ದಿ, ನಿನ್ನ ಮಗ ಓದು ಮುಗಿಸಿಕೊಂಡು ಬರ್ಬೇಕಾರೆ ನಿನ್ನ ಗಡ್ಡ ಮೀಸೆ ಹಣ್ಣಾಗಿರುತ್ತೆ. ಅಷ್ಟು ಸುಲಭ ಆಗಿದ್ದರೆ ಎಲ್ಲರೂ ಗೌರ್ಮೆಂಟು ಕೆಲಸ್ಸಕ್ಕೆ ಸೇರ್ಕಂತಿದ್ದರು.... ಹಿರೇರೂ ಇಂತಿಂತೋರು ಇಂತಿಂತಾದ್ದಕ್ಕೇ ಲಾಯಿಕು ಅಂತ ಮಾಡಿಟ್ಟಿದ್ದು ಸುಳ್ಳೂಂತ ಮಾಡಿದ್ಯಾ".[೩೧]

೨೦ನೇ ಶತಮಾನದ ಆರಂಭ ಘಟ್ಟದಲ್ಲಿ ಪುರೋಹಿತಶಾಹಿ ಮತ್ತು ಜಮೀನ್ದಾರಿಶಾಹಿಯ ಹಿತಾಸಕ್ತಿ ಧೋರಣೆ ೬೦-೭೦ರ ದಶಕದ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಬದಲಾಗದಿರುವುದನ್ನು ಕಾಣಬಹುದು. ಮಗನ ಭವಿಷ್ಯದ ಆಸೆ ಮತ್ತು ಒಡೆಯರ ಮೇಲಿನ ನಿಷ್ಠೆ, ಇಂತಹ ಡೋಲಾಯ ಮನಸ್ಥಿತಿಯ ಚೇಂಕ್ರನಂತವನಿಗೆ ಒಮ್ಮೆ ಒಡೆಯರ ಮಾತು ಸರಿಯೆನಿಸಿದ್ದಿದೆ. ಬಹುಸಂಖ್ಯಾತ ದುಡಿವ ವರ್ಗದ ಜನ ಅನ್ನದ ಋಣಕ್ಕೆ ಕಟ್ಟುಬಿದ್ದು ಒಡೆಯರ ಮಾತನ್ನು ಮೀರದಿದ್ದವರೇ ಹೆಚ್ಚು. ದುಡಿಯುವ ಕೆಳಸಮುದಾಯ ತಾವು ಬೆಳೆದ ಪರಿಸರ, ಪರಂಪರೆಯ ಹಿನ್ನಲೆಯಲ್ಲಿ ತತ್‌ಕ್ಷಣ ಪ್ರತಿಫಲ ನಿರೀಕ್ಷೆ ಮಾಡುವಂತವರು. ಕಾರಣ ಒಡೆಯರ ಮನೆಯಲ್ಲಿ ಕೆಲಸ ಮಾಡಿ ಆ ದಿನ ಸಂಜೆಯೇ ಸಂಬಳ ಪಡೆಯವರ ಭಾವ ಪ್ರಪಂಚ ತಮ್ಮ ಮಕ್ಕಳು ಬೇಗ ಓದಿ ಕೆಲಸಕ್ಕೆ ಸೇರಿ ದುಡಿದು ತರಬೇಕೆಂಬ ಅದೂರದೃಷ್ಟಿ. ಅದೇ ದೀರ್ಘಕಾಲದ ಅವಧಿಯಲ್ಲಿ ಪ್ರತಿಫಲ ಪಡೆಯುವ ಒಡೆಯರುಗಳು ತಮ್ಮ ಮಕ್ಕಳ ಭವಿಷ್ಯದ ದೃಷ್ಟಿಯಲ್ಲಿ ದೂರದೃಷ್ಟಿಯುಳ್ಳವರಾಗಿರುತ್ತಾರೆ. ಭವಿಷ್ಯದ ದೊಡ್ಡ ಕನಸು ಕಾಣುವ ಇವರು ತಮ್ಮ ಮಗ ಅಧಿಕಾರಿ ಅಥವಾ ನೌಕರನಾಗಿ ನೆಲೆಯೂರಬೇಕೆಂದು ಬಯಸುತ್ತಾರೆ. ಆದರೆ ಕೂಲಿ ಸಮುದಾಯದವರಿಗೆ ದುಡಿವ ಮಕ್ಕಳೇ ಆಸ್ತಿ. ಇಲ್ಲಿ ಮಕ್ಕಳು ಚಿಕ್ಕಂದಿನಿಂದ ದುಡಿವ ಭಾಗವಾಗಿಯೇ ಬೆಳೆಯುತ್ತಾರೆ. ಒಡೆಯರ ಮನೆಯ ದನಕರು ಕಾಯುವುದರಿಂದ ಮುಂದೆ ಗದ್ದೆ-ತೋಟಗಳಲ್ಲಿ ದುಡಿವರೆಗೆ ಬಡ್ತಿ ಪಡೆಯುತ್ತ ಹೋಗುತ್ತಾರೆ, ದೇಹದಲ್ಲಿ ತ್ರಾಣ ಇರುವವರೆಗೆ ದುಡಿದೇ ಬದುಕಬೇಕಾಗುತ್ತದೆ. ಇದು ಲಾಗಾಯ್ತಿನಿಂದ ಬಂದ ಚಕ್ರ ಪುನರಾವರ್ತನೆಯಾಗುತ್ತಿರುತ್ತದೆ. ಇಂತಹ ಸಂಬಂಧವನ್ನು

ಒಡೆಯ ಹೇಗೆ ಬಿಟ್ಟು ಕೊಡಲು ಸಾಧ್ಯ?

ಆದರೂ ಒಡೆಯರ ಮಕ್ಕಳ ಓದು ತನ್ನ ಮಗನೂ ಪಡೆಯಬೇಕೆಂಬ ಹಂಬಲವನ್ನು ಆಧುನಿಕತೆ ಮೂಡಿಸುತ್ತದೆ. ಆದ್ದರಿಂದ ಭಿನ್ನವಾಗಿ ಚೀಂಕ್ರ ಯೋಚಿಸುತ್ತಾ. ಒಡೆಯರ ಮಾತನ್ನು ಮೌನ ಪ್ರತಿರೋಧವನ್ನು ಒಡ್ಡುತ್ತಲೆ ತನ್ನ ಮಗನನ್ನು ಶಾಲೆಗೆ ಕಳುಹಿಸುತ್ತಾನೆ. ಮಗ ಬರೆಯುವ, ಓದುವ ಕ್ರಿಯೆಯನ್ನು ಕಂಡು ಹೊಸ ಆನಂದವನ್ನು ಅನುಭವಿಸುತ್ತಾರೆ. ಆ ಹುಡುಗ ಮಾಧ್ಯಮಿಕ ಶಾಲೆ ಸೇರಿದಾಗ ರಾಯರು ಅಸೂಯೆ, ಸ್ವಾರ್ಥದಿಂದ ಕುದಿದರೂ ಬಹಿರಂಗವಾಗಿ ವಿರೋಧಿಸಲಿಲ್ಲ. ಅದಕ್ಕೆ ಕೆಳ ಸಮುದಾಯದ ಏಳಿಗೆ ಬಗ್ಗೆ ಸರ್ಕಾರದ ಒತ್ತಾಸೆ ಇರುವ ಕಾರಣ. ಆದರೆ ಅವರ ಶೋಷಣೆಯ ತಂತ್ರ ಬೇರೆ ರೀತಿಯಾಗಿತ್ತು. ತಮ್ಮ ಮನೆಗೆ ಊಟಕ್ಕೆ ಬರುತ್ತಿದ್ದ ಅಧ್ಯಾಪಕರ ಮೂಲಕ ತೇರ್ಗಡೆಯಾಗದ ಹಾಗೆ ನೋಡಿಕೊಳ್ಳುತ್ತಾರೆ. ಆದರೆ ಕಾಲ ಬದಲಾಗಿತ್ತು, ಚೀಂಕ್ರನ ತಂತ್ರವೇ ಬೇರೆಯಾಗಿತ್ತು. ಮಾವನ ಜೊತೆ ಆ ಹುಡುಗನನ್ನು ಓದಲು ಮತ್ತು ಹೋಟೆಲ್ ಕೆಲಸ ಮಾಡಲು ಕಳುಹಿಸಿಕೊಟ್ಟಿದ್ದ. ಆ ಮೂಲಕ ಪರಂಪರವಾಗತವಾದ ಜೀತಕ್ಕೆ ಮುಕ್ತಿ ಹಾಡಿದ್ದ. ಅಕ್ಷರ ಜ್ಞಾನ ಇಂತಹ ಪಲ್ಲಟಗಳನ್ನು ತಂದಿತು ಎಂಬುದು ನಿಜ.

ಇದೇ ಲೇಖಕರ 'ಸಮುದ್ಧರಣ ಕಥೆ'ಯಲ್ಲಿ ಬರುವ ಭಟ್ಟರ ಮನೆಯ ಆಳುಗಳು ಗುಲಾಬಿ–ಪುಟ್ಟ ದಂಪತಿಗಳು ರಟ್ಟೆ ಮುರಿದು ಹೊಟ್ಟೆ ತುಂಬಿಕೊಳ್ಳುವ ಇವರು ದೊಡ್ಡ ಕನಸು ಹೊತ್ತಿದ್ದರು. ಗುಲಾಬಿಒಡೆಯರ ಸೊಸೆ ರಾಜಿಯ ಹತ್ತಿರ ಹೀಗೆ ಹೇಳಿಕೊಂಡಿದ್ದಳು.

"ನಮ್ಗೊಂದ್ ಆಶಾ ಸಣ್ಣಮ್ಮ, ನಮ್ಮ ಚಂದ್ರಂಗೆ, ಇಸ್ಕೂಲಿಗೆ ಹಾಕಿ ಓದು, ಬರ ಕಲಿಸ್ಬೇಕು. ಈ ಮರ ಹತ್ತಾದು ಕೊನೆ ತೆಗೆಯಾದು ನನ್ ಕಾಲಕ್ಕೇ ಸಾಕು ಅಂತ್‌ರು. ಯಾವತ್ತೀದ್ರೂ ಇದು ಜೀವ ಕೈಲ್ ಹಿಡ್ಕಂಡ್ ಮಾಡೊ ಕೆಲ್ಸ ಅಲ್ದ".೨

ಚೀಂಕ್ರನ ಹಾಗೆಯೇ ಪುಟ್ಟ–ಗುಲಾಬಿ ತಮ್ಮ ಮಗನ ಭವಿಷ್ಯವನ್ನು ಬೇರೆ ರೀತಿ ಕಂಡವರು. ಪರಂಪರಾವೃತ್ತಿಯನ್ನು ಮೀರುವ ಬಯಕೆ, ತಮ್ಮ ವೃತ್ತಿ ಕಷ್ಟದಾಯಕ ಮತ್ತು ಅಪಾಯಕಾರಿ ಎಂಬ ತಿಳುವಳಿಕೆ, ಆಧುನಿಕ ಶಿಕ್ಷಣ ಹೊಸ ಉದ್ಯೋಗಗಳ ಭರವಸೆಗಳು ಅವರಲ್ಲಿ ಶಿಕ್ಷಣಕ್ಕೆ ಹಾತೊರೆಯುವಂತೆ ಮಾಡುತ್ತವೆ. ಈ ಕೀಳು ಮತ್ತು ಅಪಾಯದ ವೃತ್ತಿಯಿಂದ ಬಿಡುಗಡೆ ಪಡೆಯುವ ಬಯಕೆ ಮತ್ತು ಆರ್ಥಿಕವಾದ ಕಾರಣವೂ ಸೇರಿಕೊಂಡಿದೆ. ಆದ ಕಾರಣ ಪುಟ್ಟ ತನ್ನ ದುಡಿಮೆಯನ್ನೆಲ್ಲಾ ಮಗನ ವ್ಯಾಸಂಗದ ಉದ್ದೇಶಕ್ಕಾಗಿ ಒಡೆಯರಲ್ಲಿ ಇಡುತ್ತಾ ಬರುತ್ತಾನೆ. ತರಕಾರಿ ಬೆಳೆದು ದೈನಂದಿನ ಜೀವನ ಸಾಗಿಸುತ್ತಾನೆ. ಗುಲಾಬಿ ಹೇಳಿದ ಹಾಗೆ ಜೀವ ಕೈಲಿ ಹಿಡಿದುಕೊಂಡು ಮಾಡುವ ಕೊನೆ ಕೆಲಸದಲ್ಲಿಯೇ ಮರದಿಂದ ಬಿದ್ದು ಪುಟ್ಟ ಮೃತನಾದ. ಆತ ಕೂಡಿಟ್ಟ ಹಣ ಗುಲಾಬಿ ಕೇಳಿದಾಗ ಒಡೆಯ ವಂಚನೆ ಮಾಡುತ್ತಾನೆ. ಈ ಅಮಾನವೀಯತೆಯ ವಿರುದ್ಧ ಕಣ್ಣೀರಿನ, ಶಾಪದ ಪ್ರತಿಭಟನೆ ವ್ಯಕ್ತ ಮಾಡಲು ಮಾತ್ರ ಸಾಧ್ಯವಾಗುತ್ತದೆ. ಪಟ್ಟಣದಲ್ಲಿ ಓದಿದ ಸೊಸೆ ತನ್ನ ಒಡವೆಗಳನ್ನು ನೀಡಿ ಮಾನವೀಯತೆಯನ್ನು ಮೆರೆಯುತ್ತಾಳೆ.

ಹೀಗೆ ಮಲೆನಾಡ ಪರಿಸರದಲ್ಲಿ ತಳ ಸಮುದಾಯದಲ್ಲಿ ಮಕ್ಕಳ ಓದು ಒಡೆಯರ ಮನಸ್ಸನ್ನು

ಅವಲಂಬಿಸಿತ್ತು. ಹಾಗಿದ್ದೂ ಮಕ್ಕಳನ್ನು ಓದಿಸಬೇಕೆಂಬ ಆಸಕ್ತಿ ಈ ಸಮುದಾಯಗಳಲ್ಲಿ ಇತ್ತೀಚೆಗೆ ಬಹುತೇಕ ಮೂಡಿದೆ. ಸರ್ಕಾರದ ಉದಾರ ನೀತಿ ನಿಯಮಗಳು, ಸೌಲಭ್ಯಗಳು ಅವರುಗಳ ಅಭಿಲಾಷೆಯನ್ನು ಹೆಚ್ಚಿಸಿವೆ. ಅದನ್ನು ಪಡೆದುಕೊಳ್ಳುವಲ್ಲಿ ಮೇಲಿನವರ, ಒಡೆಯರ ವಿರೋಧಗಳು ಅಷ್ಟಾಗಿ ಕಂಡು ಬರುವುದಿಲ್ಲ.

ಇದುವರೆಗೆ ಚರ್ಚಿಸಿದಂತೆ ೧೯ನೇ ಶತಮಾನದ ಕೊನೆಯ ಕಾಲಘಟ್ಟವನ್ನು ಗಮನಿಸಿದಾಗ ಈ ಮಲೆನಾಡ ಪರಿಸರದಲ್ಲಿ ಶಿಕ್ಷಣ ವ್ಯವಸ್ಥೆಯೆಂಬುದು ಖಾಸಗೀವಲಯದಲ್ಲಿ ರೂಪದಲ್ಲಿತ್ತಷ್ಟೆ. ಬ್ರಾಹ್ಮಣ ಸಮುದಾಯಕ್ಕೆ ಮಠಗಳಲ್ಲಿ, ಶ್ರೀಮಂತರ ಮನೆಯ ಐಗಳ ಮಠದಲ್ಲಿ ಸಾಮಾನ್ಯವಾಗಿ ಸಾಂಪ್ರದಾಯಿಕ ಶಿಕ್ಷಣವನ್ನು ಪಡೆಯುತ್ತಿದ್ದರು. ಶೂದ್ರ ಸಮುದಾಯದ ಶ್ರೀಮಂತರ ಮನೆಯಲ್ಲಿ 'ಐಗಳಮಠ'ದ ಶಾಲೆಯನ್ನು ವ್ಯವಸ್ಥೆಗೊಳಿಸಿಕೊಂಡಿದ್ದರೂ ಸ್ವಲ್ಪ ಅನುಕೂಲಸ್ಥರು 'ಕೂಲಿಮಠ'ಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದರು. ಇನ್ನು ಆರ್ಥಿಕವಾಗಿ ಬಲಹೀನವಾಗಿರುವಂತವರ, ಹಾಗೆ ತಳ ಸಮುದಾಯಕ್ಕೆ ಸೇರಿರುವ ಜನ ಸಮುದಾಯವರ ಮಕ್ಕಳು ಶಿಕ್ಷಣದಿಂದ ದೂರವೇ ಉಳಿದಿದ್ದರು. ಪರಂಪರಾಗತವಾಗಿ ರೂಢಿಸಿಕೊಂಡು ಬಂದ ಕುಲಕಸುಬುಗಳನ್ನೇ ಕಲಿಯುತ್ತಾ ಬಂದ ಜನಸಮುದಾಯಕ್ಕೆ ಶಿಕ್ಷಣದ ಆಸಕ್ತಿಗಳು, ಕಾಳಜಿಗಳು ಮೂಡಿರಲಿಲ್ಲ. ಪರಿಸರ ರೂಪಿಸಿಕೊಂಡಿದ ಐಗಳಮಠ ಕೂಲಿಮಠಗಳಲ್ಲಿ ಓದು, ಬರಹ ಕಲಿಸುವ ಕ್ರಮ ಕೂಡ ರೂಕ್ಷವಾದುದಾಗಿತ್ತು. ೨೦ನೇ ಶತಮಾನದ ಆರಂಭ ಕಾಲಕ್ಕಾಗಲೇ ಕ್ರೈಸ್ತ ಮಿಷನರಿಗಳು ಮತಪ್ರಚಾರ ಮತ್ತು ಮತಾಂತರದ ಉದ್ದೇಶವನ್ನು ಹಿನ್ನಲೆಯಾಗಿಟ್ಟುಕೊಂಡು ಆರೋಗ್ಯ ಸೇವೆ, ಶೈಕ್ಷಣಿಕ ಸೇವೆಯನ್ನು ನೀಡಲು ತೊಡಗಿದಾಗ ಈ ಪರಿಸರದಲ್ಲಿ ಸಂಚಲನಗಳು, ಪಲ್ಲಟಗಳು ಉಂಟಾಗತೊಡಗಿದವು.

ಕ್ರೈಸ್ತ ಮಿಷನರಿಗಳ ಮೂಲಕ ಶಿಕ್ಷಣವನ್ನು ಪಡೆಯುವ ಕಾಳಜಿಯನ್ನು ಈ ಪರಿಸರದ ಮುಖಂಡರು ಹೊಂದಿದ್ದರಿಂದ ಅನೇಕ ಕಡೆ ಮಿಷನರಿ ಶಾಲೆಗಳು ಪ್ರಾರಂಭವಾದವು. ಕಲಿಕೆಯ ಕೇಂದ್ರವಾದ ಶಿಕ್ಷಣ ಸಂಸ್ಥೆ ವಲಯದಿಂದ ಸಾರ್ವಜನಿಕ ವಲಯಕ್ಕೆ ಸ್ಥಾನಂತರವಾಯಿತು. ಎಲ್ಲರಿಗೂ ಮುಕ್ತವಾದ ಶಿಕ್ಷಣದ ಅವಕಾಶವನ್ನು ನೀಡಬೇಕೆಂದು ಉದ್ದೇಶಿತ ಮಿಷನರಿ ಶಾಲೆಗಳಲ್ಲಿಯೂ ಜಾತಿತಾರತಮ್ಯವನ್ನು ತೊಲಗಿಸಿ ಸಮಾನತೆಯಿಂದ ಕಾಣುವುದು ಕಷ್ಟವಾಯಿತು. ಪುರೋಹಿತಶಾಹಿ ಮತ್ತು ಶೂದ್ರ ಸಮುದಾಯದ ಜಮೀನ್ದಾರಿಶಾಹಿ ತಳಸಮುದಾಯದ ಮಕ್ಕಳನ್ನು ತಮ್ಮ ಮಕ್ಕಳಿಂದ ಅಂತರದಲ್ಲಿರುವಂತೆಯೇ ನೋಡಿಕೊಂಡವು. ಹಾಗೆ ಲಾಗಾಯ್ತಿನಿಂದ ಅಕ್ಷರ ಪರಂಪರೆಯುಳ್ಳ ಮೇಲುವರ್ಗದ ಸಮುದಾಯ ಬಹುಬೇಗ ಇಂಗ್ಲಿಷ್ ಶಿಕ್ಷಣವನ್ನು ತಮ್ಮದಾಗಿಸಿಕೊಂಡು ಮುಂದಿನ ಜನಾಂಗಕ್ಕೆ ಶಿಕ್ಷಣ ನೀಡುವ ಶಿಲ್ಪಿಗಳಾದುದು ಗಮನಿಸಬೇಕಾದ ಸಂಗತಿ.

ಮಲೆನಾಡ ಪರಿಸರದಲ್ಲಿ ಬಹುಸಂಖ್ಯಾತರಾದ ಒಕ್ಕಲಿಗ ಸಮುದಾಯಕ್ಕೆ ಸೇರಿದ ಮುಖಂಡರು ತಮ್ಮ ಮಕ್ಕಳ ಭವಿಷ್ಯ ಆಧುನಿಕ ಶಿಕ್ಷಣದಲ್ಲಿದೆ ಎಂದು ಭಾವಿಸಿದ್ದರಿಂದ ಈ ಪ್ರಾಂತ್ಯದ ಅನೇಕ ಕಡೆಗಳಲ್ಲಿ ಮಿಷನರಿ ಶಾಲೆಗಳನ್ನು ತೆರೆಯಲು ಪ್ರೋತ್ಸಾಹ, ಸಹಕಾರ ನೀಡಿದರು. ಅಲ್ಲದೆ ಮಿಷನರಿಗಳ ಸಹಾಯಪಡೆದು ದೂರದ ಬೆಂಗಳೂರು, ಮೈಸೂರು ನಗರಗಳಿಗೆ ಹೆಚ್ಚಿನ ವ್ಯಾಸಂಗಕ್ಕಾಗಿ ಕೆಲವರು ಕಳುಹಿಸುತ್ತಾರೆ. ಆದ್ದರಿಂದಲೇ ಬಯಲುಸೀಮೆಯ ಪ್ರದೇಶಕ್ಕೆ ಹೋಲಿಸಿದಾಗ ಮಲೆನಾಡ ಶೈಕ್ಷಣಿಕವಾಗಿ

ಮುಂದಿರಲು ಇದೂ ಕಾರಣವಾಗಿದೆ. ಹಾಗೆ ಕ್ರೈಸ್ತ ಮಿಷನರಿ ನೀಡುವ ಆಧುನಿಕ ಶಿಕ್ಷಣ ಮತ್ತೆ ಆರೋಗ್ಯ ಸೇವೆಯನ್ನು ಮೆಚ್ಚುಗೆಯಿಂದ ಸ್ವೀಕರಿಸುತ್ತಾ, ಕ್ರೈಸ್ತ ಮಿಷನರಿಯ ಮತಾಂತರ ಪ್ರಕ್ರಿಯೆಯನ್ನು ನಯವಾಗಿ ತಿರಸ್ಕರಿಸುತ್ತಾ ಬಂದಿರುವುದು ಬಹುಮುಖ್ಯ ಸಂಗತಿಯೆಂಬುದು ಗಮನಿಸಬೇಕಾದುದು.

ಬಹುಮುಖಿ ಸಂಸ್ಕೃತಿಯ ನೆಲೆಯನ್ನು ಹೊಂದಿರುವ ಭಾರತದ ಸಾಮಾಜಿಕ ಜೀವನಕ್ರಮದಲ್ಲಿ ಯಾವುದೇ ಹೊಸಗಾಳಿ ಪ್ರವೇಶ ಮಾಡಿದಾಗ ಉಂಟಾಗಬಹುದಾದ ತಲ್ಲಣ, ಸಂಭ್ರಮ, ಕುತೂಹಲ, ಅನುಮಾನ, ಗೊಂದಲ, ವಿರೋಧ, ಸಂಘರ್ಷ, ಸಾಮರಸ್ಯಗಳು ಮೂಡುವುದು ಸಹಜ. ಅಂತೆಯೇ ಮಲೆನಾಡಿನ ಪರಿಸರದಲ್ಲೂ ಇಂತಹ ವಾತಾವರಣ ಕಂಡುಬರುತ್ತದೆ. ಇದು ಈ ಪರಿಸರದ ಸೃಜನಶೀಲ ಕಥಾ ಜಗತ್ತಿನಲ್ಲಿ ಕಲಾತ್ಮಕವಾದ ಛಾಯೆಯಲ್ಲಿ ಸೂಕ್ಷ್ಮವಾಗಿ ದಾಖಲಾಗಿರುವುದನ್ನು ಕಾಣುತ್ತೇವೆ. ಈ ಬಗೆಯ ಪಲ್ಲಟಗಳು, ವ್ಯಕ್ತಿಗತವಾದ ನೆಲೆಯಲ್ಲಿಯೂ, ಸಾಮೂಹಿಕ ಸಾಮಾಜಿಕ ನೆಲೆಯಲ್ಲಿಯೂ ಕಂಡುಬರುತ್ತದೆ. ವ್ಯಕ್ತಿಗತವಾದ ವಿದ್ಯೆ, ಜಾತಿ, ಧರ್ಮ, ಆರ್ಥಿಕ ಸ್ಥಿತಿಗತಿಗಳನ್ನು ಅವಲಂಬಿಸಿ ಹೊಸಧಾರೆಗಳ ಸ್ವೀಕರಣೆ ಮತ್ತು ನಿರಾಕರಣೆಗಳ ಪ್ರಕ್ರಿಯೆ ಜರಗುತ್ತದೆ. ಇಂತಹ ಪ್ರಕ್ರಿಯೆಯನ್ನು ಆ ಮುಲಕ ಪಲ್ಲಟಗೊಳ್ಳುತ್ತಿರುವ ಜೀವನಕ್ರಮುವನ್ನು ಮಲೆನಾಡ ಕಥಾ ಸಾಹಿತ್ಯದ ಪರಂಪರೆಯಲ್ಲಿ ಗುರುತಿಸಬಹುದಾಗಿದೆ.

ಆಧುನಿಕ ಶಿಕ್ಷಣ ವ್ಯಕ್ತಿಗತವಾದ ಪ್ರಜ್ಞೆ ಬೆಳೆಸಿತು. ಸಮೂಹ ಪ್ರಜ್ಞೆಯಿಂದ ವ್ಯಕ್ತಿಪ್ರಜ್ಞೆಗೆ ಸಾಗುವುದಕ್ಕೆ ಆಧುನಿಕ ಶಿಕ್ಷಣ ಕಾರಣವಾಗುತ್ತದೆ. ಆಧುನಿಕ ಶಿಕ್ಷಣ ಪಡೆದ ಹೂವಯ್ಯ (ಕಾನೂರು ಹೆಗ್ಗಡತಿ), ಶ್ರೀನಿವಾಸ (ವ್ಯಾಮೋಹ)ರಂತವರು ತಮ್ಮ ಪರಿಸರದಲ್ಲಿ ಸುಧಾರಣೆ ತರುವ ಹಂಬಲವುಳ್ಳವರಾಗಿದ್ದರೆ, ಜಗನ್ನಾಥ (ಭಾರತೀಪುರ), ಘನಶ್ಯಾಮ (ದಿವ್ಯ), ಮೋಹನ (ಪಂಜರವಳ್ಳಿ ಪಂಜು)ರಂತವರು ಈ ಪರಿಸರದ ಸಾಂಪ್ರದಾಯಿಕ ಜೀವನದಲ್ಲಿ ಬದಲಾವಣೆಯನ್ನು ತರಬೇಕೆಂದು ಅದಕ್ಕಾಗಿ ಕ್ರಾಂತಿಯೇ ನಡೆಯಬೇಕೆಂದು ಹಂಬಲಿಸಿದವರು.

ಇಂಗ್ಲಿಷ್ ಶಿಕ್ಷಣದ ಮೂಲಕ ಬಂದ ಆಧುನಿಕತೆ ಭಾರತೀಯರ ಮನದಲ್ಲಿ ಗೌರವಸ್ಥಾನ ಪಡೆಯುತ್ತಲೇ ತಾರತಮ್ಯವನ್ನು ಹುಟ್ಟುಹಾಕುತ್ತದೆ. ಹೂವಯ್ಯನನ್ನು ಸುತ್ತಲ ಸಮಾಜ ಗೌರವದಿಂದ ನೋಡುತ್ತದೆ. ಶ್ರೀನಿವಾಸನನ್ನು 'ಇಂಗ್ಲಿಷ್‌ಗೌಡ' ಎಂದೇ ಮೆಚ್ಚುಗೆಯಿಂದ ಹಲವರು ಕರೆಯುತ್ತಾರೆ. ಹೂವಯ್ಯನ ಇಂಗ್ಲಿಷ್ ಪುಸ್ತಕಗಳೊಡನೆ, ಸೀತೆ ತನ್ನ ಕನ್ನಡ ಪುಸ್ತಕಗಳನ್ನು ಹೋಲಿಸಿ ಮೇಲು-ಕೀಳುಗಳ ಭಾವನೆಯನ್ನು ಅನುಭವಿಸುತ್ತಾಳೆ. ಭಾಷಿಕ ನೆಲೆಯಲ್ಲಿ ಹೂವಯ್ಯನಂತಾಗಲು ಪ್ರಯತ್ನಿಸುವುದನ್ನು ನೋಡಬಹುದು.

ಇಂಗ್ಲಿಷ್ ಶಿಕ್ಷಣ ಇತರರನ್ನು ಶೋಷಿಸುವುದಕ್ಕೂ ; ಶೋಷಕರನ್ನು ಎದುರಿಸುವುದಕ್ಕೂ ಅಸ್ತ್ರವಾದುದು ಕುತೂಹಲದ ಸಂಗತಿ. ಕಾನೂರು ಹೆಗ್ಗಡತಿಯ 'ಮಾರ್ಕ್'ನಾಗಲಿ, ಪಂಜರವಳ್ಳಿ ಪಂಜುವಿನ ನಾಗೇಂದ್ರ, ಸಣ್ಣೇಗೌಡರಾಗಲಿ ತಮ್ಮ ಅಲ್ಪವಾದ ಇಂಗ್ಲಿಷ್ ಜ್ಞಾನದಿಂದ ಗ್ರಾಮೀಣ ಪರಿಸರದ ಮುಗ್ಧ ಜನರನ್ನು ಶೋಷಿಸುತ್ತಾರೆ. ಆ ಕಾರಣವಾಗಿಯೇ ಮೋಹನನ ತಂದೆ (ಪಂಜರವಳ್ಳಿ ಪಂಜು) ತನ್ನ ಮಗ ಇಂಗ್ಲಿಷ್ ಶಿಕ್ಷಣ ಪಡೆದು ದೊಡ್ಡ ಅಧಿಕಾರಿಯಾಗಬೇಕೆಂದೂ ಆ ಮೂಲಕ ಇಂತಹ ಶೋಷಕರನ್ನು

ಎದುರಿಸಬೇಕೆಂದು ಬಯಸುತ್ತಾನೆ. ಮೈಕೇಲ್ ತನ್ನ ಸೇವಕ ಸ್ಥಾನವನ್ನು ಮೀರಿ ಕಾಣಿಸಿಕೊಳ್ಳಲು ಇಂಗ್ಲಿಷ್ ಭಾಷೆ, ಆಧುನಿಕ ವೇಷ ಬಳಸುತ್ತಾನೆ.

ಶ್ರೇಣೀಕೃತ ಸಮಾಜದಲ್ಲಿ ಮೇಲ್ಪದರದಲ್ಲಿದ್ದ, ಪರಂಪರಾಗತವಾದ ಅಕ್ಷರ ಸಂಸ್ಕೃತಿಯಲ್ಲಿದ್ದ ಜನಸಮುದಾಯ ಆಧುನಿಕ ಶಿಕ್ಷಣಕ್ಕೆ ಬಹುಬೇಗ ತನ್ನನ್ನು ಒಪ್ಪಿಸಿಕೊಳ್ಳುತ್ತದೆ. ಆ ಮೂಲಕ ಪಡೆಯಬಹುದಾದ ಉದ್ಯೋಗವನ್ನು ಪಡೆಯುತ್ತದೆ. ಆದರೆ ಅದೇ ರೀತಿ ತಮ್ಮ ಕೆಳಗಿನ ಸಮುದಾಯಗಳು ಆಧುನಿಕ ಶಿಕ್ಷಣ ಪಡೆಯಹೊರಟಾಗ ತಲ್ಲಣವನ್ನು ಅನುಭವಿಸುತ್ತದೆ ; ಈರ್ಷೆಯ ಹಿನ್ನಲೆಯಲ್ಲಿ ವಿರೋಧಿಸುತ್ತದೆ. ವೆಂಕಪ್ಪ ಜೋಯಿಸರಂತವರಿಗೆ ತಾವು ಶೂದ್ರರಿಗೆ ಬೋಧಿಸುವಂತ ವಿಚಾರವೇ ಅವರ ಆದಾಯದ ಮೂಲ. ಹಾಗಿರುವಾಗ ಆಧುನಿಕ ಶಿಕ್ಷಣ ಪಡೆದು ವಿಚಾರವಾದಿಯಾದ ಹೂವಯ್ಯನನ್ನು ಕಂಡಾಗ ತಲ್ಲಣ ಅನುಭವಿಸುತ್ತಾನೆ. 'ಕಾಲ' ಕಥೆಯಲ್ಲಿ ಬರುವ (ವಸುಮತಿ ಉಡುಪ) 'ರಾಯರು' ತಮ್ಮ ಮಗನನ್ನು ಆಧುನಿಕ ವ್ಯಾಸಂಗಕ್ಕೆ ಕಳುಹಿಸಿದ್ದಾರೆ. ಆದರೆ ತಮ್ಮ ಮನೆಯ ಜೀತದಾಳುವಿನ ಮಗ ಓದುವ ಬಯಕೆಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಾರೆ. ಆದರೆ ಆಧುನಿಕ ಶಿಕ್ಷಣವೆಂಬುದು ನಿಧಾನವಾಗಿ ಈ ಎಲ್ಲ ವಿರೋಧಗಳನ್ನು ದಾಟಿ ಶೊಷಿತ ಜನ ಸಮುದಾಯವನ್ನು ಮುಟ್ಟುತ್ತಿರುವುದನ್ನು ಗಮನಿಸಬಹುದು.

ಅಂತೆಯೇ ಪರಂಪರಾಗತವಾದ ವೃತ್ತಿಯನ್ನು ಮೀರುವ ಶಕ್ತಿಯನ್ನು ನೀಡುವುದು ಆಧುನಿಕ ಶಿಕ್ಷಣದ ಮುಖ್ಯಗುರಿಗಳಲ್ಲೊಂದು. ಆಧುನಿಕ ಶಿಕ್ಷಣ ಪಡೆದ ಅನೇಕರು ತಮ್ಮ ಪರಂಪರಾಗತವಾದ ವೃತ್ತಿಯನ್ನು ಬಿಟ್ಟು, ತಮ್ಮ ಪರಿಸರದಿಂದ ದೂರವಾಗಿ ಬೇರೆಬೇರೆ ವೃತ್ತಿಯನ್ನು ಅವಲಂಬಿಸಿದ್ದಾರೆ. ಹಾಗೆಯೇ ಆಧುನಿಕ ಶಿಕ್ಷಣ ಕ್ರಮದಿಂದ ತನಗೆ ದತ್ತವಾದ ಜೀವನಕ್ರಮವನ್ನು ತಾನಿರುವ ಪರಿಸರದಲ್ಲಿಯೇ ಅರ್ಥಪೂರ್ಣವಾಗಿ ಬದುಕಲು ಸಾಧ್ಯ ಎಂಬ ಅರಿವನ್ನು ಸಾಮರ್ಥ್ಯವನ್ನು ತಂದುಕೊಡುತ್ತದೆ. ಅವರುಗಳಿಗೆ ಇಲ್ಲಿದ್ದೇ ಜಗತ್ತಿನೊಡನೆ ಸಂವಾದ ನಡೆಸಬಲ್ಲ ಸಾಮರ್ಥ್ಯ ನೀಡಿದೆ. ಮೈಸೂರಿನಿಂದ ಹಿಂತಿರುಗಿದ ಹೂವಯ್ಯ, ಲಂಡನ್‌ನಿಂದ ಹಿಂತಿರುಗಿದ ಜಗನ್ನಾಥ, ಘನಶ್ಯಾಮರು ತಮಗೆ ದತ್ತವಾದ ಜೀವನಕ್ರಮವನ್ನು ತಮ್ಮ ಪರಿಸರದಲ್ಲಿಯೇ ನಿರ್ಮಿಸಿಕೊಳ್ಳಲು ಯತ್ನಿಸುತ್ತಾರೆ.

ಹಾಗೆಯೆ ಆಧುನಿಕ ಶಿಕ್ಷಣದಿಂದ ಪ್ರಭಾವಿತರಾಗಿ ಬದುಕಿನ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಳ್ಳುತ್ತಲೇ ಶೋಷಿತ ನೆಲೆಗಳನ್ನು ಪ್ರಶ್ನಿಸುವ, ಪರಿಶೀಲಿಸುಪ, ಹೋರಾಟ ಮಾಡುವ ಮನೋಭಾವನೆಗಳನ್ನು ತಂದಿದೆ. ಅಂತೆಯೇ ದೈನಂದಿನ ಜೀವನಕ್ರಮದಲ್ಲಿ, ಊಟ, ಉಡುಗೆ, ತೊಡುಗೆ, ಮಾತು, ವ್ಯವಹಾರ ಇತ್ಯಾದಿಗಳು ಕೂಡ ನಿಧಾನಗತಿಯಲ್ಲಾದರೂ ಬದಲಾವಣೆಯ ಹಾದಿಯನ್ನು ಹಿಡಿದಿರುವುದನ್ನು ಈ ಬಗೆಯ ಅಧ್ಯಯನ ಕ್ರಮದಿಂದ ಕಂಡುಕೊಳ್ಳಬಹುದಾಗಿದೆ.

ಹೀಗೆ ಆಧುನಿಕ ಶಿಕ್ಷಣ ತಂದ ಲಾಭಗಳು, ಸಂಸ್ಕಾರಗಳು, ಪ್ರತಿಫಲಗಳ ಜೊತೆ ಜೊತೆಯೇ ಅನೇಕ ವಿಕಾರಗಳನ್ನೂ ತಂದಿತು. ಆಧುನಿಕ ಶಿಕ್ಷಣ ಹೂವಯ್ಯ, ಜಗನ್ನಾಥ, ಘನಶ್ಯಾಮ ಮುಂತಾದವರಲ್ಲಿ ಉತ್ತಮ ಸಂಸ್ಕಾರ, ಮಾನವಪ್ರೀತಿ, ಲೋಕೋದ್ಧಾರದ ಭಾವನೆಗಳನ್ನು ಮೂಡಿಸಿದ್ದರೆ. ರಾಮಯ್ಯ (ಕಾನೂರು ಹೆಗ್ಗಡತಿ) ನಂತರದಲ್ಲಿ ಅತಂತ್ರ ಸ್ಥಿತಿಯನ್ನೂ, ನಾರಾಣಪ್ಪ (ಸಂಸ್ಕಾರ), ರಾಮೇಗೌಡ (ವ್ಯಾಮೋಹ) ಮುಂತಾದವರಲ್ಲಿ ವಿಲಾಸವನ್ನು ತಂದಿದೆ. ಉನ್ನತ ವ್ಯಾಸಂಗ ಮಾಡಿ ಅಮಲ್ದಾರನಾದ

ಬೊಮ್ಮಯ್ಯನಲ್ಲಿ (ನಂಬಿಕೆಟ್ಟರಿಲ್ಲವೊ) ತನ್ನ ಪರಿಸರವನ್ನು, ತಮ್ಮ ತಂದೆ-ತಾಯಿಗಳ ಸಂಸ್ಕೃತಿಯನ್ನು ಹಳಿಯುವ, ತಿರಸ್ಕರಿಸುವ ಮನೋಭಾವನೆಯನ್ನು ಮೂಡಿಸಿದೆ.

ಹಾಗೆಯೇ ಆಧುನಿಕ ಶಿಕ್ಷಣದ ಪರಿಣಾಮವಾಗಿ ಕೌಟುಂಬಿಕ ಬದುಕಿನಲ್ಲಿ ವಿಘಟನೆಗಳು ಕಂಡುಬರುತ್ತವೆ. ಸಹಕಾರ, ಸಹಬಾಳ್ವೆಯಿಂದ ನಡೆಯುತ್ತಿದ್ದ, ಕುಟುಂಬಗಳಲ್ಲಿ ವಿಘಟನೆ ಕಂಡುಬರುತ್ತದೆ. ಆಧುನಿಕತೆಯ ಪ್ರವೇಶದಿಂದಾಗಲಿ ಪರಸ್ಪರದಲ್ಲಿ ಅನುಮಾನ, ಸಂದೇಹಗಳು, ಅಸೂಯೆಗಳು ಎದ್ದು ನಿಲ್ಲುತ್ತವೆ. ಈ ಹಿನ್ನಲೆಯಲ್ಲಿ ಮಲೆನಾಡ ಪರಿಸರದ ಕೌಟುಂಬಿಕ ಜೀವನಕ್ರಮದಲ್ಲಿ ಪಲ್ಲಟಗಳಾಗುವುದನ್ನು, ಚಿಕ್ಕಸಂಸಾರದ ಸೂತ್ರದ ಕಡೆ ಒಲಿಯುತ್ತಿದ್ದುದನ್ನು ಗುರುತಿಸಬಹುದು.

ಆಧುನಿಕ ಶಿಕ್ಷಣ, ಆ ಮೂಲಕ ಬಂದ ಜೀವನ ವಿಧಾನಗಳು ತಳ ಸಮುದಾಯದ ಜನಾಂಗಗಳಿಗೆ ಅಷ್ಟಾಗಿ ಪರಿಣಾಮ ಬೀರಿದಂತೆ ಕಾಣುವುದಿಲ್ಲ. ಇದಕ್ಕೆ ಬಹುಮುಖ್ಯವಾದ ಕಾರಣ ಅವರ ಜಾತಿ ಮತ್ತು ಆರ್ಥಿಕ ಸ್ಥಿತಿಗತಿಗಳು. ಈ ಸಮುದಾಯ ತಮಗಿಂತ ಮೇಲುಜಾತಿ ಸಮುದಾಯಗಳ ಕಪಿಮುಷ್ಟಿಯಲ್ಲಿಯೇ ಬದುಕಬೇಕಾದ ಅನಿವಾರ್ಯತೆಗಳು ಇಲ್ಲಿ ಬಹುಕಾಲದಿಂದಲೂ ನೆಲೆಗೊಂಡಿವೆ. ತಳಸಮುದಾಯಗಳ ಬದುಕಿನ ಯಾವ ಬಗೆಯ ಒಲವು ನಿಲುವುಗಳೇ ಇರಲಿ ಅವು ಒಡೆಯರ ಇಷ್ಟಾನಿಷ್ಟಗಳನ್ನು ಅವಲಂಬಿಸಿವೆ. ಹಾಗಿರುವಾಗ ತಮ್ಮ ಮನೆಗಳಲ್ಲಿ ಸದಾ ದುಡಿದುಕೊಂಡಿರಬೇಕೆಂದು ಬಯಸುವ ವರ್ಗ, ತಳ ಸಮುದಾಯಗಳ ಮಕ್ಕಳ ಶಿಕ್ಷಣವನ್ನು ಪಡೆಯವುದರ ಬಗ್ಗೆ ಉದಾರ ನಿಲುವನ್ನು ತಾಳುವುದಿಲ್ಲ, ಬದಲಿಗೆ ಆ ಕಡೆ ಆಕರ್ಷಿತವಾಗುವುದನ್ನು ತಡೆಯಲೆತ್ನಿಸುತ್ತದೆ. ಸ್ವಾತಂತ್ರ್ಯ ಪೂರ್ವ ಕಾಲಘಟ್ಟದ ಆವರಣವುಳ್ಳ ಮಲೆನಾಡ ಕಥಾ ಪರಂಪರೆಯಲ್ಲಿ ತಳಸಮುದಾಯದ ಆಧುನಿಕ ಶಿಕ್ಷಣಕ್ಕೆ ತಮ್ಮನ್ನು ತೆರೆದುಕೊಂಡ ಬಗ್ಗೆ ಚಿತ್ರಣ ಕಂಡು ಬರುವುದಿಲ್ಲ. ಕಾನೂರು ಹೆಗ್ಗಡತಿಯ ಕೊನೆಯ ಭಾಗದಲ್ಲಿ ಸೀತೆ ನಿಂಗನ ಮಗನಿಗೆ ಅಕ್ಷರ ಕಲಿಸಿದಳು ಎಂಬ ವಿವರಣೆಯಲ್ಲಿ ತಳಸಮುದಾಯ ಅಕ್ಷರ ಲೋಕಕ್ಕೆ ಬರಬೇಕೆಂದು ಆಶಯ ವ್ಯಕ್ತವಾಗುತ್ತದೆ. ಭಾರತೀಪುರದಲ್ಲಿ ಜಗನ್ನಾಥ ಹರಿಜನರು ಅಕ್ಷರ ಕಲಿಯಲೇಬೇಕು, ಆಗ ಮಾತ್ರ ಈ ಸಮಾಜದಲ್ಲಿ ಪಲ್ಲಟವನ್ನು ತರಲು ಸಾಧ್ಯ ಎಂಬುದನ್ನು ಕಂಡುಕೊಳ್ಳುತ್ತಾನೆ. ಪಂಜರವಳ್ಳಿ ಪಂಜು ಕಾದಂಬರಿಯಲ್ಲಿ 'ಕರಿಯ' ಅಕ್ಷರ ಲೋಕಕ್ಕೆ ಬಂದು ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಂಡು ಶೋಷಣೆಯ ವಿರುದ್ಧ ಹೋರಾಡುತ್ತಾನೆ. ಈ ರೀತಿ ತಳಸಮುದಾಯ ಶಿಕ್ಷಣ ಕ್ಷೇತ್ರಕ್ಕೆ ಬರಬೇಕೆಂಬ ಆಶಯಗಳು ಇತ್ತೀಚಿನ ವರ್ಷಗಳಲ್ಲಿ ನಿಧಾನವಾಗಿ ಕಾರ್ಯರೂಪಕ್ಕೆ ಬರುತ್ತಿರುವುದನ್ನು ಗಮನಿಸಬಹುದು.

ಹೀಗೆ ಇಂಗ್ಲಿಷ್ ಶಿಕ್ಷಣ ಆ ಮೂಲಕ ಬಂದ ಆಧುನಿಕತೆ ಮಲೆನಾಡ ಪರಿಸರದ ಜೀವನವಿಧಾನದಲ್ಲಿ ನಿರಂತರವಾದ ಪಲ್ಲಟವನ್ನುಂಟು ಮಾಡುತ್ತಿದೆ. ೨೦ನೇ ಶತಮಾನದ ಆರಂಭ ಕಾಲದಿಂದಲೇ ಅದರ ಪ್ರಭಾವಗಳು ಮತ್ತು ಪ್ರೇರಣೆಗಳು ಇಲ್ಲಿನ ಪರಿಸರದಲ್ಲಿ ನಿಧಾನಗತಿಯಲ್ಲಿ ಪ್ರವೇಶ ಪಡೆಯುತ್ತಾ ಅರವತ್ತು -ಎಪ್ಪತ್ತು ವರ್ಷಗಳಲ್ಲಿ ಅದರೆಲ್ಲಾ ಹೊಯ್ದಾಟ, ದ್ವಂದ್ವಗಳನ್ನು ದಾಟಿ, ಸಹಜ ಸ್ಥಿತಿಯಂತೆ ರೂಪಗೊಳ್ಳುತ್ತಿರುವುದನ್ನು ಹಾಗೂ ಎಲ್ಲ ಸಮುದಾಯದವರ ಜೀವನ ಕ್ರಮದಲ್ಲಿಯೂ ಅದೇ ಸಹಜತೆಯಿಂದ ಬೆರೆಯುತ್ತಿರುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಅಡಿ ಟಿಪ್ಪಣಿ :

೧. ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.ವಿ.ವಿ., ೧೯೭೪, ಪುಟ:೦೯

೨. ಹಾ.ಮಾ.ನಾಯಕ, ಕನ್ನಡ ವಿಷಯ ವಿಶ್ವಕೋಶ (ಪ್ರಸಂ.), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೯, ಪುಟ : ೧೪೦೦

೩. ಕುವೆಂಪು, ನೆನೆಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು ೧೯೯೩, ಪುಟ:೨೧

೪. ಕುವೆಂಪು, ಮಲೆನಾಡಿನ ಚಿತ್ರಗಳು, ಉದಯರವಿ ಪ್ರಕಾಶನ, ಮೈಸೂರು, ೧೯೯೪ ಪುಟ:೬೦.

೫. ಕಡಿದಾಳ್ ಮಂಜಪ್ಪ, ನನಸಾಗದ ಕನಸು, ಕಡಿದಾಳ್ ಪ್ರಕಾಶನ, ಬೆಂಗಳೂರು, ೧೯೯೦ ಪುಟ:೨೬

೬. ಕುವೆಂಪು, ನೆನೆಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು ೧೯೯೩, ಪುಟ:೨೧

೭. ಕುವೆಂಪು, ನೆನೆಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು ೧೯೯೩ ಪುಟ:೨೨

೮. ಕುವೆಂಪು, ನೆನೆಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು ೧೯೯೩ ಪುಟ:೨೫

೯. ಕೌಲಾನಿಧರ್ಮಯ್ಯ, ನಾಮಧಾರಿ (ಸಂ), ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಕರಣ ಗ್ರಂಥ, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ೨೦೦೨, ಪುಟ: ೫೬

೧೦. ನೈಟಿಂಗೇಲ್, ದಿ ಸ್ಟೋರಿ ಆಫ್ ದಿ ನಾಮಧಾರಿಸ್, ನಾಮಧಾರಿ, ಕೌಲಾನಿ ಧರ್ಮಯ್ಯ (ಸಂ) ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ ೧೯೦೧ – ೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ, ಪುಟ ೨೦೦೧, ಪುಟ:೩೬೬

೧೧. ಕುವೆಂಪು, ನೆನೆಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩, ಪುಟ:೭೧

೧೨. ಕಡಿದಾಳ್ ಮಂಜಪ್ಪ, ನನಸಾಗದ ಕನಸು, ಕಡಿದಾಳ್ ಪ್ರಕಾಶನ, ಬೆಂಗಳೂರು, ೧೯೯೦, ಪುಟ:೨೦

೧೩. ಕುವೆಂಪು, ನೆನೆಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩, ಪುಟ–೭೧

೧೪. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧ ಪುಟ:೨೮೦

೧೫. ಶಿವಾರೆಡ್ಡಿ.ಕೆ.ಸಿ. ಕುವೆಂಪು ವಿಚಾರಧಾರೆಯ ಪ್ರಸ್ತುತತೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪುಟ:೪೪.

೧೬. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೧೭೮

೧೭. ರಹಮತ್ ತರೀಕೆರೆ, ಪ್ರತಿಸಂಸ್ಕೃತಿ, ಕನ್ನಡ ಸಂಘ, ಕ್ರೈಸ್ಟ್‌ಕಾಲೇಜು, ಬೆಂಗಳೂರು, ೧೯೯೩, ಪುಟ:೫೪

೧೮. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೭೮

೧೯. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ : ೧೯೩, ೧೯೪

೨೦. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಹೆಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೦೩

೨೧. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೩೪೮

೨೨. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೪೯೨

೨೩. ಕಡಿದಾಳ್ ಮಂಜಪ್ಪ, ಪಂಜರವಳ್ಳಿ ಪಂಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೪, ಪುಟ:೫೧

೨೪. ಅಶೋಕ.ಟಿ.ಪಿ. ಶಿವರಾಮಕಾರಂತ : ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ಪುಟ:೧೧೫.

೨೫. ಬಿಳುಮನೆ ರಾಮದಾಸ್, ವ್ಯಾಮೋಹ, ಮಲೆನಾಡು ಪ್ರಕಾಶನ, ಬೆಂಗಳೂರು, ೧೯೯೦, ಪುಟ:೧೮

೨೬. ಕಡಿದಾಳ್ ಮಂಜಪ್ಪ, ನನಸಾಗದ ಕನಸು, ಕಡಿದಾಳ್ ಪ್ರಕಾಶನ, ಬೆಂಗಳೂರು, ೧೯೯೦, ಪುಟ:೬೧

೨೭. ಬಿಳುಮನೆ ರಾಮದಾಸ್, ವ್ಯಾಮೋಹ, ಮಲೆನಾಡು ಪ್ರಕಾಶನ, ಬೆಂಗಳೂರು ೧೯೯೦, ಪುಟ:೧೨೫

೨೮. ಅನಂತಮೂರ್ತಿ.ಯು.ಆರ್. ಸಂಸ್ಕಾರ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೫, ಪುಟ:೨೧,೨೩

೨೯. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪುಟ:೧೪೫

೩೦. ಅನಂತಮೂರ್ತಿ.ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೧೧೮

೩೧. ವಸುಮತಿ ಉಡುಪ, ಕಾಲ, ತರಂಗ ವಾರಪತ್ರಿಕೆ, ೧೮ ಜನವರಿ, ೧೯೯೭, ಪುಟ:೩೫

೩೨. ವಸುಮತಿ ಉಡುಪ, ಸಮುದ್ಧರಣ, ಬಂದನಾಹುಲಿರಾಯ ಮತ್ತು ಇತರ ಕಥೆಗಳು, ಕರ್ನಾಟಕ ಸಂಘ, ಶಿವಮೊಗ್ಗ, ೧೯೯೬, ಪುಟ:೧೧೦

ಅಧ್ಯಾಯ ೪
ಸಾಂಪ್ರದಾಯಿಕತೆ ಹಾಗೂ ಆಧುನಿಕತೆ : ಕಥಾಸಾಹಿತ್ಯ

ಅಧ್ಯಾಯ ೪. ಸಾಂಪ್ರದಾಯಿಕತೆ ಹಾಗೂ ಆಧುನಿಕತೆ : ಕಥಾಸಾಹಿತ್ಯ

ಮಾನವನಿಗೆ ಅಶನ, ವಸನ, ವಸತಿ ಮೂಲಭೂತವಾದ ಅಗತ್ಯಗಳು ಹಾಗೂ ನೈಸರ್ಗಿಕವಾದ ಅವಶ್ಯಕತೆಗಳು. ಬದುಕಿನ ಕಾಲಗತಿಯಲ್ಲಿ ಇವುಗಳ ಸುಧಾರಣೆ, ಪರಿಷ್ಕರಣೆ, ಶೋಧನೆ ಅಳವಡಿಕೆಗಳೇ ನಾಗರಿಕತೆಯ ಪಥ. ನಾಗರಿಕತೆ ಮುನ್ನೆಡದಂತೆ ಅವುಗಳೆಲ್ಲ ಕೇವಲ ಮೂಲಭೂತ ಅವಶ್ಯಕತೆಗಳಾಗಿ ಮಾತ್ರ ಉಳಿದಿಲ್ಲ ; ಸಾಮಾಜಿಕವಾಗಿ ಸ್ಥಾನ, ಮಾನ, ಅಂತಸ್ತು, ಘನತೆ, ಗೌರವ, ಪ್ರತಿಷ್ಠೆಯ ಸಂಕೇತಗಳಾಗಿಯೂ ಬೆಳದು ಬರುತ್ತಿವೆ. ವಸ್ತು, ಸಂಗತಿ, ಆಚಾರ-ವಿಚಾರ, ಭಾವ, ಭಾಷೆ, ವೇಷ ಮುಂತಾದವು ಒಂದು ಪರಿಸರದಿಂದ ಮತ್ತೊಂದು ಪರಿಸರಕ್ಕೆ ಕಾಲಿಟ್ಟಾಗ, ಆ ಪರಿಸರದಲ್ಲಿ ಬೆರಗು, ತಲ್ಲಣ, ತಿರಸ್ಕಾರ, ಪುರಸ್ಕಾರ, ಗೌರವ, ಕುತೂಹಲ, ಆಸಕ್ತಿ ಮೊದಲಾಗಿ ಒಂದು ಬಗೆಯ ಸಂಚಲನವನ್ನುಂಟು ಮಾಡುವುದು ಪ್ರಾಕೃತಿಕ ಸಹಜತೆ. ಅಂದರೆ 'ಆಧುನಿಕತೆ' ಎಂಬುದು ನಿರಂತರವಾದ ಪ್ರಕ್ರಿಯೆ. ಹೊರಗಿನ ಪ್ರಭಾವ ಒಳಗಿನ ಒತ್ತಡಗಳು ಬೇರೊಂದಕ್ಕೆ ಹೊಸತನಕ್ಕೆ ಹೊರಳಿಕೊಳ್ಳುವಂತೆ ಮಾಡುತ್ತವೆ. ಬೌದ್ಧಿಕವಾದ ಸಾಮರ್ಥ್ಯವುಳ್ಳ ಮಾನವ ತನ್ನ ವೃತ್ತಿ, ಬಯಕೆ, ಭಾವ, ಭಾಷೆ, ವೇಷಗಳಿಗೆ ಕಾಲಕ್ರಮದಲ್ಲಿ ಅಗತ್ಯಕ್ಕೆ ಅನುಗುಣವಾಗಿ, ಅನಿವಾರ್ಯತೆಯಿಂದಾಗಿ, ಕುತೂಹಲಕ್ಕಾಗಿ ಹೊಸ ಶೋಧನೆಗಳನ್ನು ನಡೆಸುತ್ತಾ, ಹೊಸ ಆವಿಷ್ಕಾರಗಳನ್ನು ತರುತ್ತಾ ಬದುಕಿಗೆ ಅಳವಡಿಸಿಕೊಳ್ಳುತ್ತಾ ಹೋಗುವುದು ಜೀವಂತ ಸಮಾಜದ ಸಹಜ ಪ್ರಕ್ರಿಯೆ. ಇಂತಹ ಪ್ರಕ್ರಿಯೆ ತೀವ್ರತರವಾದ ಸ್ವರೂಪವನ್ನು ಪಡೆದುಕೊಂಡದ್ದು ಒಂದು ಶತಮಾನದ ಹಿಂದಿನಿಂದ. ಅದಕ್ಕೆ ಕಾರಣ ವಿಜ್ಞಾನದ ಬೆಳವಣಿಗೆ, ಕೈಗಾರಿಕಾ ಕ್ರಾಂತಿ ಆ ಮೂಲಕ ಬಂದ ಹೊಸ ಆವಿಷ್ಕಾರಗಳು, ವೈಚಾರಿಕತೆ, ಅರಿವು-ವಿವೇಕಗಳ ವಿಸ್ತಾರದಿಂದ.

ಪಶ್ಚಿಮದ ಸೆರಗಿನಲ್ಲಿ ಹಬ್ಬಿರುವ ಮಲೆನಾಡು ಬೆಟ್ಟಗುಡ್ಡಗಳಿಂದಲೂ, ದಟ್ಟವಾದ ಕಾಡುಗಳಿಂದಲೂ, ರಸ್ತೆ-ವಾಹನಗಳು ಇಲ್ಲದೆ ಬಾಹ್ಯ ಸಂಪರ್ಕದಿಂದ ದೂರ ಉಳಿದ ಪ್ರಾಂತ್ಯವಾಗಿತ್ತು. ಇದು ಒಂದು ನೂರು ವರ್ಷಗಳ ಹಿಂದೆ ಇದ್ದಂತಹ ಭೌತಿಕ ಸ್ವರೂಪ. ಶ್ರಮ ಸಂಸ್ಕೃತಿಯೇ ಪ್ರಧಾನವಾಗಿದ್ದ ಈ ಪರಿಸರ ಅನ್ಯಸಂಪರ್ಕದಿಂದ ದೂರವಾಗಿ ತನ್ನದೇ ಆದ ಅನನ್ಯತೆಯನ್ನು ಸ್ಥಾಪಿಸಿಕೊಂಡಿತ್ತು. ಹೀಗೆ ನಿಸರ್ಗದ ಮಡಿಲಿನಲ್ಲಿ ನಿಸರ್ಗ ಜೀವಿಗಳಾಗಿಯೇ ಬದುಕುವ ಹೊತ್ತಿಗೆ ವಸಾಹತುಶಾಹಿ ಪ್ರಭುತ್ವ ಪ್ರವೇಶಿಸುತ್ತದೆ. ಇದು ತಂದ ಆಧುನಿಕತೆ ಈ ಪರಿಸರದಲ್ಲಿ ಅನೇಕ ಪಲ್ಲಟಗಳಿಗೆ ಕಾರಣವಾಗುತ್ತದೆ.

ಯಂತ್ರ ನಾಗರಿಕತೆ

ವಸಾಹತುಶಾಹಿ ತಂದ ಆಧುನಿಕತೆಯು ಸಾಂಪ್ರದಾಯಿಕ ಜೀವನಕ್ರಮದ ಲೋಕಕ್ಕೆ ಎರಡು ರೀತಿಯಲ್ಲಿ ಪ್ರವೇಶಿಸಿತು. ಒಂದು, ವಿಜ್ಞಾನ ಮತ್ತು ಕೈಗಾರಿಕೆಗಳು ಮನುಷ್ಯನ ಭೋಗ ಜೀವನಕ್ಕೆ ಸೃಷ್ಟಿಸಿದ ವಸ್ತುಗಳ ಮೂಲಕ ಪ್ರವೇಶಿಸಿತು. ಇನ್ನೊಂದು, ಸಾಂಸ್ಥಿಕ ರೂಪಗಳಾದ ಸ್ಕೂಲು, ಹೋಟೆಲ್ಲು, ಆಸ್ಪತ್ರೆ, ಪೋಲೀಸು, ಕೋರ್ಟು, ರಸ್ತೆ, ಬಸ್ಸು, ಸೆಲೂನ್ ಮುಂತಾಗಿ ಸಾರ್ವಜನಿಕ ಸ್ಥಳಗಳ ರೂಪದಲ್ಲಿ ಪ್ರವೇಶಿಸಿತು. ಈ ರೂಪಗಳಲ್ಲಿ ಪ್ರವೇಶಿಸಿದ ಆಧುನಿಕತೆಯು ಬಾಹ್ಯವಾದ ಆಕರ್ಷಣೆಯಿಂದ ಸೆಳೆದುಕೊಳ್ಳುತ್ತಾ, ನಂತರ ಅಂತರಂಗದೊಳಗೆ ಪ್ರವೇಶ ಪಡೆದು ಸಾಂಪ್ರದಾಯಿಕ ಜೀವನ ವಿಧಾನವನ್ನು

ಪಲ್ಲಟಿಸಿಯೊ, ಅದರಲ್ಲಿ ಬೆರೆತೊ, ಆ ಪರಿಸರದ ಅವಿಭಾಜ್ಯ ಅಂಗವೆಂಬಂತೆ ಮಾರ್ಪಡುವುದು ಅದರ ವೈಶಿಷ್ಟ್ಯವಾಗಿದೆ. ಈ ರೀತಿ ಪ್ರವೇಶ ಪಡೆದ ಆಧುನಿಕತೆಗೆ ಮಲೆನಾಡ ಸಮುದಾಯಗಳು ವೈಯಕ್ತಿಕ ನೆಲೆಯಲ್ಲಿ ಸಾಂಪ್ರದಾಯಿಕತೆಗೆ ಮತ್ತು ಆಧುನಿಕತೆಗೆ ಎರಡಕ್ಕೂ ಇಂಬುಗೊಡುತ್ತಾ, ಪರಸ್ಪರ ಸಂಘರ್ಷಿಸುತ್ತಾ, ನಿರಾಕರಣೆ–ಸ್ವೀಕರಣೆಗೆ ಎಡೆ ಮಾಡುತ್ತಾ ಬಂದಿರುವುದನ್ನು ಕಾಣಬಹುದು.

೧೯ನೇ ಶತಮಾನದ ಕೊನೆ ೨೦ನೇ ಶತಮಾನದ ಆರಂಭಘಟ್ಟದ ಕಾಲಾವಧಿಯಲ್ಲಿ ಈ ಮಲೆನಾಡ ಪರಿಸರಕ್ಕೆ ಕಾಲಿಟ್ಟ ಕ್ರೈಸ್ತ ಮಿಷನರಿಗಳು ಯಂತ್ರನಾಗರಿಕತೆಯ ಅನೇಕ ಉತ್ಪಾದನೆಗಳನ್ನು ಜೊತೆಯಲ್ಲಿಯೆ ತಂದರು. ಗಡಿಯಾರ, ಲಾಂದ್ರ, ಲ್ಯಾಂಪು, ಸೈಕಲ್ ಮುಂತಾದ ವಸ್ತುಗಳು ಮಲೆನಾಡ ಜನರ ಜೀವನ ಕ್ರಮದೊಳಗೆ ಪ್ರವೇಶಿಸಿ ಸಂಚಲನವನ್ನು, ಒಂದು ಬಗೆಯ ನಾವಿನ್ಯತೆಯನ್ನು ತಂದವು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬೆಟ್ಟಳ್ಳಿ ಮನೆಗೆ ಗಡಿಯಾರ, ಲಾಂದ್ರ, ಲ್ಯಾಂಪು, ಸೈಕಲ್ ಮುಂತಾದವು ದೇವಯ್ಯನಂತ ಯುವಕನನ್ನು ಆಕರ್ಷಿಸಲು ಪಾದ್ರಿಯ ಮೂಲಕ ಬಂದವು. ಅಂಗಳದ ನೆರಳನ್ನು ನೋಡಿ ಕಾಲ ನಿರ್ಣಯ ಮಾಡಿ, ಆಳುಗಳನ್ನು ಕೆಲಸಕ್ಕೆ ಕರೆಯುವ ಸಂಧಿಗ್ಧತೆ ತಪ್ಪಿತಲ್ಲ ಎಂದು 'ಗಡಿಯಾರ' ಬಂದಾಗ ಕಲ್ಲೇಗೌಡರೂ ಸಂತೋಷ ಪಟ್ಟಿದ್ದರು. ಹಾಗೆ ಲಾಟೀನು, ಲಾಂದ್ರ, ಸೈಕಲ್ ಮೊದಲಾದ ಹೊಸ ವಸ್ತುಗಳು ಬಂದಂತೆಲ್ಲ ಕಲ್ಲೇಗೌಡರು ಇದೆಲ್ಲಾ ದುಂದುಗಾರಿಕೆಯೆಂದು ಮಗನ ಮೇಲೆ ಭರ್ತ್ಸನೆ ಮಾಡಿದ್ದುಂಟು. ಆದರೆ ಅಂತರಂಗದೊಳಗೆ ಎಲ್ಲರಂತೆ ಅವರೂ ಬೆರಗಿನಿಂದ ಒಪ್ಪಿಕೊಂಡಿದ್ದರು ; ಸಂತೋಷಪಟ್ಟಿದ್ದರು. ಇದು ಭಾರತೀಯರು ವಿಲಾಯಿತಿ ವಸ್ತುಗಳನ್ನು ಸ್ವೀಕರಿಸಿದ ಪರಿ. ಈ ಎಲ್ಲಾ ವಸ್ತುಗಳಿಂದ ಹಳೆಮನೆ, ಕೋಣೂರು ಮುಂತಾದ ಹಳ್ಳಿಗಳ ಮನೆಗಳಿಗಿಂತ ಬೆಟ್ಟಳ್ಳಿಮನೆ ನವನಾಗರಿಕತೆಯನ್ನು ಪಡೆಯುತ್ತಿದ್ದು, ಸುತ್ತಮುತ್ತಲ ಪರಿಸರಕ್ಕೆ ಬೆರಗಿನ, ಚರ್ಚೆಯ ಸಂಗತಿಯಾಗಿತ್ತು. ಬೆಟ್ಟಳ್ಳಿ ಮನೆಯವರಿಗೆ ಆಳುಕಾಳುಗಳಿಗೆ ಇವೆಲ್ಲ ಬೆರಗಿನ ವಿಚಾರವಾದರೆ, ಹಳೆಮನೆ ಶಂಕರಪ್ಪ ಹೆಗಡೆಗೆ ಕಿಲಸ್ತರ ಪಾದ್ರಿಗಳು ಕೊಟ್ಟ ವಿಲಾಯಿತಿ ವಸ್ತುಗಳಾದ ಲಾಟೀನು, ಬೈಸಿಕಲ್ಲು, ತೋಟಾಕೋವಿ, ಸೀಮೆ ಬಿಸ್ಕತ್ತು, ಕ್ರಾಪು, ಹ್ಯಾಟು, ಬೂಟ್ಸು ಇತ್ಯಾದಿಗಳೆಲ್ಲವನ್ನು ಹೊಂದುತ್ತಿರುವ ಬೆಟ್ಟಳ್ಳಿಮನೆ ಕುಲಗೆಟ್ಟು ಹೋಗಿದೆ ಎಂಬ ಭಾವ ಮೂಡಿಸಿತ್ತು. ಆಚಾರ, ಕಟ್ಟಳೆಗಳಲ್ಲಿ ತೀವ್ರ ಸಂಪ್ರದಾಯನಿಷ್ಠನೂ, ಬ್ರಾಹ್ಮಣರ ಅನುಯಾಯಿಯೂ ಆದ ಶಂಕರಪ್ಪ ಹೆಗಡೆಗೆ ತಿರುಪತಿ ಧರ್ಮಸ್ಥಳಗಳ ದೇವರ ಕಾಣಿಕೆ ಇಟ್ಟಿರುವ ಮನೆಯ ಒಳಕ್ಕೆ ಆ ವಿಲಾಯಿತಿ ವಸ್ತುಗಳನ್ನು ತಂದಿಟ್ಟುಕೊಳ್ಳುವುದು ಮಲೀನವಾದ, ಪಾಪದ ಕಾರ್ಯ. ಈ ಕಾರಣದಿಂದ ಬೆಟ್ಟಳ್ಳಿಯ ಮನೆಯವರು ಆತನ ಪಾಲಿಗೆ ಅಸ್ಪೃಶ್ಯರು. ಆ ಕಾರಣದಿಂದಲೇ ಕಲ್ಲೂರು ದೇವಸ್ಥಾನಕ್ಕೆ ಹೋಗುತ್ತಿರುವ ಬೆಟ್ಟಳ್ಳಿ ಗಾಡಿಯನ್ನು ಏರಲೊಪ್ಪಲಾರ. ಇದೇ ಶಂಕರಪ್ಪ ತನ್ನ ಮನೆಗೆ ಆ ಕಾಲಕ್ಕೆ ಅಪರೂಪವಾದ ಮತ್ತು ಯಾಂತ್ರಿಕ ಉತ್ಪಾದನೆಯಾದ ಹಂಚನ್ನು ಹಾಕಿಸಿದ್ದ. ಬಹುಶಃ ಪಾದ್ರಿ ಮೂಲಕ ಬರುವ ಆ ವಿಲಾಯಿತಿ ವಸ್ತುಗಳು ಈತನ ಪಾಲಿಗೆ ಮೈಲಿಗೆಯಾದವು. ಕಾರಣವೇನೆಂದರೆ ಆ ಪರಿಸರದಲ್ಲಿ ಕಿಲಸ್ತರನ್ನು ಅನ್ಯಧರ್ಮಿಯರು ಎನ್ನುವುದಕ್ಕಿಂತ ಅನ್ಯ ಜಾತಿ ಎಂದೇ ಕಾಣಲಾಗಿತ್ತು. ಅಷ್ಟೆ ಅಲ್ಲ ಅವರೂ ಅಸ್ಪೃಶ್ಯರೇ ಎಂದೇ ತಿಳಿಯಲಾಗಿತ್ತು. ಈ ಮನೋಭಾವನೆಗೆ ಪ್ರಮುಖ ಕಾರಣ ವಿಲಾಯಿತಿ ಜನ. ಇಲ್ಲಿಯ ಹರಿಜನರ ಹಾಗೆ ಗೋಮಾಂಸ ತಿನ್ನುವವರು ಎಂಬ ತಿಳುವಳಿಕೆಯೇ ಈ ಅಸ್ಪೃಶ್ಯತನದಿಂದ ನೋಡುವ ದೃಷ್ಟಿಕೋನ ಮೂಡಿದ್ದು. ಅಂತಹ ಅಸ್ಪೃಶ್ಯರಿಂದ ಮುಟ್ಟಿಸಿಕೊಂಡು

ಬರುವ ಆ ವಿಲಾಯಿತಿ ವಸ್ತುಗಳು ತಮ್ಮ ದೇವರ ಮುಡಿಪನ್ನು ಹೊಂದಿರುವ ಮನೆಗಳಿಗೆ ಪ್ರವೇಶಿಸುವುದು ಮಲಿನವಾದ ವಿಚಾರ ಎಂದು ಶಂಕರಪ್ಪ ಹೆಗಡೆಯಂತವರ ತಿಳುವಳಿಕೆಯಾಗಿತ್ತು.

ಈ ಮೈಲಿಗೆಯ ಪ್ರಶ್ನೆ ಆಧುನಿಕತೆ ತಂದ ಅನೇಕ ಬಳಕೆಯ ವಸ್ತುಗಳನ್ನು ಕಾಡಿದೆ. ಉದಾಹರಣೆಗೆ 'ಸಾಬೂನು' ಕೂಡ ಹೌದು. ಸೀಗೆಕಾಯಿ, ಅಂಟುವಾಳ ಕಾಯಿ, ಚೌಳುಪ್ಪು ಮುಂತಾದುದನ್ನು ಶುಚಿ ಕಾರ್ಯದಲ್ಲಿ ಬಳಸುವುದು ಪರಂಪರಾಗತವಾಗಿ ಬಂದ ರೂಢಿಗತ ಪದ್ಧತಿ. ಸಾಬೂನು ಬಂದಾಗ ಆಕರ್ಷಣೆ, ಆತಂಕ ಎರಡನ್ನೂ ಉಂಟು ಮಾಡಿತು. ಎಂ.ಕೆ.ಇಂದಿರಾ ಅವರ 'ತಗ್ಗಿನಮನೆ ಸೀತೆ' ಎಂಬ ಕಾದಂಬರಿಯಲ್ಲಿ ಬರುವ ಸೀತೆ ತನ್ನ ಗೆಳತಿ ಅಚ್ಚು ಜೊತೆ ಮಾತನಾಡುವಾಗ ಗಂಡಸರ ಬಟ್ಟೆಗೆ ಸಬಕಾರ (ಸಾಬೂನು) ಹಚ್ಚಿ ಒಗೆದರೆ ತುಂಬಾ ಬೆಳ್ಳಗಾಗುತ್ತೆ ಎಂದೂ ಊರಿನ ಸಾಹುಕಾರರ ಮನೆಯಲ್ಲಿ ಅದನ್ನು ಬಳಸುತ್ತಾರೆ ಎಂದೂ ಅದರ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ಹೀಗೆ ನೀಡಿದ್ದಾರೆ.

'ಸಬಕಾರಕ್ಕೆ ಸುಣ್ಣ, ಹಂದಿಕೊಬ್ಬು ಹಾಕಿರ್ತಾರಂತೆ ಬ್ರಾಂಬ್ರು ಅದ್ನ ಮುಟ್ಟಾರ್ದಂತೆ'.

ಯಂತದಿಲ್ಲ, ಈಗೆಲ್ಲ ಬ್ರಾಂಬ್ರೂ ಸಬಕಾರ ಹಚ್ತಾರೆ. ಮೈತೊಳೆಯೊ ಸಬಕಾರ ಬ್ಯಾರೆ ಅದೆ. ಅದ್ನ ಹಚ್ಚಿ ಮೈತ್ವಳದ್ರೆ ಮೈಬೆಳ್ಳಗಾಗತ್ತಂತೆ. ಕಿತ್ತಂದೂರ ಮನೆ ನೀಲವೇಣಿ ಅದರಾಗೆ ಮೈತ್ವಳಿತಾಳಂತೆ.[೧]

– ಮೇಲಿನ ಸಂಭಾಷಣೆ, ಒಟ್ಟು ಭಾರತೀಯ ಸಂದರ್ಭದಲ್ಲಿ ವಿಲಾಯಿತಿ ವಸ್ತುಗಳ ಪ್ರವೇಶದ ಸಂದರ್ಭದಲ್ಲಿ ಅವು ಮೂಡಿಸಿದ ಆಕರ್ಷಣೆ, ಉಂಟು ಮಾಡಿದ ತಲ್ಲಣವನ್ನು ಹೇಳುತ್ತಲೇ ಅವನ್ನು ಸ್ವೀಕರಿಸುವ ಪರಿಯನ್ನು ಅನಾವರಣಗೊಳಿಸುತ್ತದೆ. ಆಧುನಿಕತೆ ತಂದ ವಸ್ತುಗಳೆಲ್ಲ ಕಟ್ಟುನಿಟ್ಟಾಗಿ ಮಡಿ, ಮೈಲಿಗೆಯನ್ನು ಆಚರಿಸುವ ಆರ್ಥಿಕವಾಗಿ ಶ್ರೀಮಂತರ ಮನೆಗಳನ್ನು ಪ್ರವೇಶಿಸಿರುವುದು ಸಹಜ ಮತ್ತು ಕುತೂಹಲದ ಸಂಗತಿ. ಹೊಸ ವಸ್ತುಗಳನ್ನು ಕೊಂಡುಕೊಳ್ಳುವ ಶಕ್ತಿ ಶ್ರೀಮಂತರಿಗೆ ಇದೆ ಅದು ಸಹಜ. ಆದರೆ ಮಡಿ ಮೈಲಿಗೆಯನ್ನು, ಅನೇಕ ಕಟ್ಟುಪಾಡುಗಳನ್ನಿಟ್ಟುಕೊಂಡು ಇತರ ಸಮೂಹಕ್ಕೆ ಮಾದರಿಯೆಂದು ಬದುಕುತ್ತಿರುವ ಕುಟುಂಬಗಳಿಗೆ ಅವುಗಳ ಪ್ರವೇಶ ಕುತೂಹಲವಾದ ಸಂಗತಿ.

ಹೂವಳ್ಳಿಯಲ್ಲಿ (ಮಲೆಗಳಲ್ಲಿ ಮದುಮಗಳು) ಚಿನ್ನಮ್ಮನ ಮದುವೆ ಸಿದ್ಧತೆ ನಡೆದ ಸಂದರ್ಭದಲ್ಲಿ ಬೆಟ್ಟಳ್ಳಿ ಮನೆಗೆ ಬಂದಿದ್ದ ನವನಾಗರಿಕತೆಯ ಲಾಂಛನಗಳಾಗಿದ್ದ ಲಾಟೀನು, ಲ್ಯಾಂಪುಗಳು ಅವುಗಳಿಗೆ ಉಚಿತವಾದ ಸ್ಥಾನಗಳಲ್ಲಿ ಉರಿಯುತ್ತಿದ್ದವು ಎಂಬುದೆ ನಿಧಾನವಾಗಿ ಮಲೆನಾಡ ಪರಿಸರದಲ್ಲಿ ಯಾಂತ್ರಿಕ ವಸ್ತುಗಳು ಹರಡುವ ರೀತಿಯನ್ನು ಸೂಚಿಸುತ್ತದೆ. ಕ್ರಮೇಣ ಈ ವಸ್ತುಗಳೆಲ್ಲ ಶ್ರೀಮಂತಿದಂಬರಿಯಲ್ಲಿ 'ಸೀತೆ' ಮದುವೆಯಾಗಿ ತನ್ನ ಗಂಡ ಕೊಮಾರಿ ಜೊತೆ ಸಜ್ಜೆಮನೆ ಪ್ರವೇಶಿಸಿದಾಗ ಅಲ್ಲಿ ವಿಶೇಷವಾಗಿ ತೋರಿದ್ದು ಗಾಜಿನ ಬುರುಡೆಯ ದೀಪ. ಕಾಲು ದೀಪಗಳಿಲ್ಲದ ನವ್ಯವಾಗಿ ಮಲೆನಾಡು ಪ್ರವೇಶಿಸಿದ ಗಾಜಿನ ಬುರುಡೆಯ ದೀಪವು ಕೋಣೆಯನ್ನೆಲ್ಲಾ ಬೆಳಗಿತ್ತು. ಅದು ಹೊಸ ಶ್ರೀಮಂತಿಕೆಯ ಕುರುಹು ಆಗಿತ್ತು. "ರಾಮಕ್ಕನ ದರ್ಬಾರಿನಲ್ಲಿ ಕಾರುವ ಬುಡ್ಡಿಯ ಲಾಟೀನು ತೊಲೆಗೆ ತೂಗು ಹಾಕಿದ್ದನ್ನು ನೋಡಿ ತನ್ನ ಬೀಗರ ಶ್ರೀಮಂತಿಕೆಯನ್ನು ಮನದಲ್ಲೆ ಅಳೆದ ಸೀತೆ ತಂದೆ ಮಹಾಬಲ".[೨] ಹೀಗೆ ಆಧುನಿಕತೆ ತಂದ ಯಂತ್ರ ನಾಗರಿಕತೆಯ ವಸ್ತುಗಳು ಮೊದಮೊದಲು ಅನೇಕ ಸಂದೇಹ, ನಿರಾಕರಣೆಗೆ

ಒಳಗಾದರೂ ಬಹುಬೇಗ ಇಲ್ಲಿ ಜೀವನ ಕ್ರಮದಲ್ಲಿ ಒಂದಾಗಿ ಸಾಮಾಜಿಕ ಮನ್ನಣೆಗೆ ಪಾತ್ರವಾದವು.

ಬೆಟ್ಟ, ಗುಡ್ಡ, ಕಾಡು, ಕಣಿವೆಯ ಪ್ರದೇಶವಾದ ಮಲೆನಾಡಲ್ಲಿ ಬಹುತೇಕ ಜನ (ಶ್ರೀಮಂತರು ಮಾತ್ರ ಎತ್ತಿನ ಗಾಡಿಯಲ್ಲಿ) ಎಷ್ಟು ದೂರವಾದರೂ ನಡೆದುಕೊಂಡೇ ಓಡಾಡುತ್ತಿದ್ದರು. ಕಾಲು ಹಾದಿಯೇ ಎಲ್ಲೆಲ್ಲೂ ಇದ್ದಂತಹ ಪರಿಸರಕ್ಕೆ ಸೈಕಲ್ ಬಂದುದು, ಅದು ಉಂಟು ಮಾಡಿದ ಸಂಚಲನ ಕುತೂಹಲವಾದುದು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಅದರ ಪ್ರವೇಶದ ಬಗ್ಗೆ, ಅದು ಉಂಟು ಮಾಡಿದ ಬೆರಗಿನ ಬಗ್ಗೆ ಕುವೆಂಪು ರೋಚಕವಾಗಿ ಬರೆಯುತ್ತಾರೆ. ಪಾದ್ರಿ ಜೀವರತ್ನಯ್ಯ ದೇವಯ್ಯನಿಗೆ ತಂದುಕೊಟ್ಟ ವಾಹನ ಸೈಕಲ್. ಈ ಬೈಸಿಕಲ್ ಜನರ ಬಾಯಲ್ಲಿ ಬೀಸೇಕಲ್ಲಾಗಿತ್ತು. ಬೆಟ್ಟಳ್ಳಿ ಹಕ್ಕಲಲ್ಲಿ ಬೀಸೆಕಲ್ಲು ಸವಾರಿ ನೋಡಲು ಸುತ್ತಮುತ್ತಲ ಜನವೆಲ್ಲ ಜಮಾಯಿಸಿದ್ದರು. ಆ ಬಯಲಲ್ಲಿ ಸೈಕಲ್ ಬರುವುದಕ್ಕೂ ಮೊದಲು ಬೀಸೆಕಲ್ಲನ್ನು ನೋಡಿದ್ದ ಜನಕ್ಕೆ ಇದರ ಮೇಲೆ ಕುಳಿತು ಸವಾರಿ ಮಾಡುವುದು ವಿಸ್ಮಯದ ಸಂಗತಿಯಾಗಿತ್ತು. ಅದಕ್ಕೆ ಮಾಯಾವಿದ್ಯೆಯೇ ಬೇಕು, ಪಾದ್ರಿ ಅಂತಹ 'ಮಾಯಾವಿ' ಅಂದುಕೊಂಡಿದ್ದರು ಜನ. ಈ ಸೈಕಲ್‌ನ್ನು ಬಯಲಿಗೆ ಆಳುಗಳ ಮೂಲಕ ಹೊರಿಸಿಕೊಂಡು ಬಂದು ಇಳಿಸಿದ ಸಂದರ್ಭದಲ್ಲಿ ಕುತೂಹಲದಿಂದ ಅದನ್ನು ಮುಟ್ಟಲು ಮುನ್ನುಗ್ಗಿದಾಗ ಅಲ್ಲಿ ಮುಟ್ಟಬಹುದಾದವರು ಮುಟ್ಟುಬಾರದವರು ಎಂಬ ಭೇದಭಾವ ಮರೆಯಾದದ್ದು ವಿಶೇಷ ಸಂಗತಿಯಾಗಿತ್ತು. ಆ ಕ್ಷಣದ ಮಟ್ಟಿಗೆ ಆಧುನಿಕತೆಯ ಸಂಕೇತವಾದ ಆ ವಸ್ತು ತಾರತಮ್ಯವನ್ನು ಅಳಿಸಿ ಹಾಕಿತ್ತು.

ಆ ಸಂದರ್ಭದಲ್ಲಿ ಪಾದ್ರಿ ಜೀವರತ್ನಯ್ಯನ ವೃತ್ತಿ ಬುದ್ಧಿ ತನಗೆ ತಾನೆ ಹೀಗೆ ಹೇಳಿಕೊಂಡಿತು. "ಮತ ಪ್ರಚಾರಕ್ಕೆ ಬೈಬಲ್ಲು ಏಸುಕ್ರಿಸ್ತನಿಗಿಂತಲೂ ಬೈಸಿಕಲ್ಲೆ ಹೆಚ್ಚು ಪ್ರಭಾವಶಾಲಿ!"[೩] ಅನಿಸುತ್ತೆ. ಅಂದರೆ ಜನ ಜಾತಿ ಭೇದವಿಲ್ಲದೆ ಬೈಸಿಕಲ್ಲನ್ನು ಅತ್ಯಂತ ಸಂಭ್ರಮದಿಂದ, ಬೆರಗಿನಿಂದ ಗಮನಿಸುವುದರಿಂದ, ಈ ಸೈಕಲ್ ನೀಡುವ ಆಮಿಷ ಒಡ್ಡಿ ಮತಾಂತರ ಮಾಡುವುದು ಸುಲಭಸಾಧ್ಯ ಎಂದು ಕಂಡುಕೊಳ್ಳುವುದು. ಸೈಕಲ್ ಸ್ಪರ್ಶ ಬೇರೆ ಬೇರೆಯವರಿಗೆ ಭಿನ್ನವಾದ ಅನುಭವವನ್ನು, ಬೆರಗನ್ನು ತರುತ್ತದೆ. ಗುತ್ತಿಗೆ, ಚಕ್ರಕ್ಕೆ ಸುತ್ತಿದ ಟೈರು ಮೆತ್ತಗಿರುವುದು, ಕಪ್ಪಾಗಿರುವುದು ಕಾಳಿಂಗನ ಹಾವು ಸುತ್ತಿರುವಂತೆ ಅನಿಸಿದರೆ, ಐತನಿಗೆ ಸೈಕಲ್‌ನ ನಾನಾ ಭಾಗವನ್ನು ಸ್ಪರ್ಶಿಸಿದ ಅನುಭವ ಪೀಂಚಲುವಿನ ಅಂಗೋಪಾಂಗಗಳನ್ನು ಮದುವೆಯಾದ ಹೊಸದರಲ್ಲಿ ಸ್ಪರ್ಶಿಸಿ ಸುಖಿಸಿದಂತೆ ತೃಪ್ತಿಯ ತುದಿಯನ್ನು ಮುಟ್ಟಿದ್ದ. ಆಧುನಿಕ ವಸ್ತು ಆಕರ್ಷಿಸುವ, ಅದು ನೀಡುವ ಅನುಭವದ ತೀವ್ರತೆಯನ್ನು ಈ ಸಂದರ್ಭ ಅಭಿವ್ಯಕ್ತಿಸುತ್ತದೆ. ತಮ್ಮ ಜೊತೆ ವಾಸಿಸುವ ಜನರನ್ನು ಮುಟ್ಟಲಾಗದವರು ಯಂತ್ರ ವಸ್ತು ಮುಟ್ಟಿ ಪಡೆದ ಅನುಭವ ಕುತೂಹಲದ ಸಂಗತಿಯಾಗಿದೆ.

ಬೆಟ್ಟಳ್ಳಿ ಹಕ್ಕಲಿನಲ್ಲಿ ದೇವಯ್ಯನ ಸೈಕಲ್ ಸವಾರಿ ಕಲಿಯುವಿಕೆಯಾಗಿರಲಿಲ್ಲ. ಅಲ್ಲಿ ಸೇರಿದ ಜನ ಸಮುದಾಯದ ಎದುರಿನಲ್ಲಿ ತನ್ನ ಶ್ರೀಮಂತಿಕೆಯನ್ನು, ವೈಭವವನ್ನು ತೋರಿಸುವ ನಲಿಯುವಿಕೆಯಾಗಿತ್ತು. ಅದು ಶ್ರೀಮಂತನ ದಂಡಿಗೆ ಸವಾರಿಗಿಂತ ಭಿನ್ನವಾಗಿರಲಿಲ್ಲ.

"ದೇವಯ್ಯ ಸೈಕಲ್ ಬ್ಯಾಲೆನ್ಸ್ ಮಾಡುತ್ತಿಲ್ಲ ; ಆಧುನಿಕತೆಯ ಬ್ಯಾಲೆನ್ಸ್ ನಡೆಯುತ್ತಿದೆ".[೪]

ಈ ವ್ಯಾಖ್ಯಾನ ದೇವಯ್ಯನ ಮತಾಂತರದ ಹಿಂದನ ಉದ್ದೇಶವನ್ನು, ಆಸಕ್ತಿಯನ್ನು ಸೂಚಿಸುತ್ತದೆ. ದೇವಯ್ಯ ಮತಾಂತರ ಬಯಸಿದ್ದು ಕ್ರೈಸ್ತ ಧರ್ಮದ ತತ್ತ್ವಗಳಿಗೆ ಮನಸೋತಲ್ಲ ; ಅದು ತರುವ ಇಂತಹ ಆಧುನಿಕ ವಿಲಾಸದ ವಸ್ತುಗಳಿಗೆ ಆಕರ್ಷಿತನಾಗಿ. ಅವುಗಳನ್ನು ಬಳಸಿಕೊಳ್ಳುತ್ತಾ ಸುತ್ತಲ ಸಮಾಜದ ಎದುರಿನಲ್ಲಿ ಆಧುನಿಕವಾಗಿ ಕಾಣಬೇಕೆಂಬ ಹಂಬಲದಿಂದ. ಆದ್ದರಿಂದ ದೇವಯ್ಯನಿಗೆ ಸೈಕಲ್ ಸವಾರಿ ಒಂದು ಷೋಕಿಯಾಗಿತ್ತು. ಈ ಷೋಕಿ ಕುದುರೆ ಸವಾರಿಯ ಷೋಕಿಗಿಂತಲೂ ಹೆಚ್ಚಾಗಿತ್ತು. ಅಷ್ಟೆ ಅಲ್ಲ ಅದು ಆತನಿಗೆ ಎಂತಹ ಪ್ರತಿಷ್ಠೆಯ ಸಂಗತಿಯಾಗಿತ್ತು ಎಂದರೆ ಪಾದ್ರಿ ಉಡುಗೊರೆಯಾಗಿ ನೀಡಿದ್ದರೂ ಇತರರ ಎದುರು ತಾನೇ ಹಣಕೊಟ್ಟು ಕೊಂಡಿರುವುದಾಗಿ ಹೇಳಿಕೊಂಡು ಓಡಾಡುತ್ತಿದ್ದ.

ಈ ರೀತಿ ಸೈಕಲ್ ಹೊಂದಿರುವ ದೇವಯ್ಯನಿಗೆ ಮಾತ್ರ ಪ್ರತಿಷ್ಠೆ ಎಂಬುದು ಅಂಟಿಕೊಂಡಿರಲಿಲ್ಲ ; ಅವನ ಆಪ್ತ ಸೇವಕನಾದ ಬಚ್ಚನಿಗೂ ಅಂಟಿಕೊಂಡಿರುವುದು ಕುತೂಹಲವಾದ ಸಂಗತಿ. ಪಾದ್ರಿಯಿಂದಲೂ ಪಾದ್ರಿಯ ಪ್ರಭಾವಕ್ಕೆ ಒಳಗಾಗಿದ್ದ ಸಣ್ಣಗೌಡರಿಂದಲೂ ಆಗ ತಾನೆ ನವನಾಗರಿಕತೆಗೆ ಪ್ರವೇಶದೀಕ್ಷೆ ಪಡೆಯುತ್ತಿದ್ದೇನೆಂಬ ಭಾವದಿಂದ ಬಚ್ಚ ತನ್ನ ಕೇರಿಯವರನ್ನಲ್ಲಾ ತಿರಸ್ಕಾರದಿಂದ ನೋಡುತ್ತಿರುತ್ತಾನೆ. ತಲೆಗೆ ಕೆಂಪು ವಸ್ತ್ರ, ಅಂಗಿ, ಮೊಣಕಾಲು ದಾಟಿರುವ ಪಂಚೆ ಉಟ್ಟ ಬಚ್ಚ ತನ್ನ ಸ್ಥಾನಮಾನವನ್ನು ಮೀರುವ ಶಕ್ತಿಯನ್ನು ಅವನಿಗೆ ಬಂದ ಆಧುನಿಕತೆ ತಂದುಕೊಟ್ಟಿತ್ತು. ಇದರಿಂದ ತನ್ನ ಜನಾಂಗದ ಇತರರಗಿಂತ ತಾನು ಮೇಲು ಎಂಬ ಅಹಂಭಾವವನ್ನು ತಂದಿತ್ತು. ದೇವಯ್ಯನ ನಡೆವಳಿಕೆಯಲ್ಲಿ ಬಚ್ಚನ ನಡವಳಿಕೆಯಲ್ಲಿ ಆಧುನಿಕತೆಯ ಆಕ್ರಮಣ ಎಂಬುದು ಶ್ರೇಷ್ಠತೆ–ಕನಿಷ್ಠತೆಯ ಕಲ್ಪನೆಯನ್ನು ಅದಕ್ಕೆ ಒಳಗಾದವನಲ್ಲಿ ಮೂಡಿಸುತ್ತಲೇ ಪ್ರವೇಶ ಪಡೆಯುತ್ತದೆ ಎಂಬುದನ್ನು ಕಾಣಬಹುದು. ಇಂತಹ ನಡವಳಿಕೆ ಅಥವಾ ಧೋರಣೆಯಿಂದಲೇ ಬಚ್ಚ ತನ್ನ ಪರಿಸರದಲ್ಲಿ ದ್ವೇಷಕ್ಕೂ ಒಳಗಾಗಿದ್ದ. ಆಧುನಿಕತೆಯನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ತಮ್ಮ ಏಳಿಗೆಗೆ ಅದನ್ನು ಸಮರ್ಥವಾಗಿ ಬಳಸಿಕೊಳ್ಳುವ ಜ್ಞಾನ, ಕೌಶಲ ಮೂಡದೇ ಹೋದರೇ ಆಗುವ ಅನಾಹುತವನ್ನು ಬಚ್ಚ ಸೈಕಲ್ ಎತ್ತಿಕೊಂಡು ಬರಲು ಹೋದಂತಹ ಸಂದರ್ಭದಲ್ಲಿ ಆದಂತಹ ಗೊಂದಲ, ಗಾಬರಿ, ದೇವಯ್ಯ ಫೆಡಲ್‌ತುಳಿದ ರಭಸಕ್ಕೆ ಬಿದಿರುಗಳ ಹೊತ್ತ ದೊಡ್ಡಬೀರ ಬಿದ್ದು ಆದಂತಹ ಅನಾಹುತದ ಘಟನೆಗಳು ಸೂಚಿಸುತ್ತವೆ.

'ಮಲೆಗಳಲ್ಲಿ ಮದುಮಗಳು' ಕಾಲಮಾನಕ್ಕೆ ಬೆರಗು, ಕುತೂಹಲ, ಪ್ರತಿಷ್ಠೆಯನ್ನು ತಂದಂತಹ ಯಂತ್ರನಾಗರಿಕತೆಯ ಕುರುಹು ಆದ ಸೈಕಲ್, 'ಕಾನೂರು ಹೆಗ್ಗಡತಿ' ಕಾಲಕ್ಕಾಗಲೇ ಮಲೆನಾಡ ಪರಿಸರದಲ್ಲಿ ಎಲ್ಲೆಡೆ ಬಳಕೆಗೆ ಬರತೊಡಗಿತ್ತು ಎಂಬುದನ್ನು, ಅದನ್ನು ಬಳಸುವವರಲ್ಲಿ ಮೂಡಿಸಿದ್ದ ಒಣ ಪ್ರತಿಷ್ಠೆಯನ್ನು, ಅವರುಗಳ ಅಕೌಶಲತೆಯಿಂದ ಉಂಟಾಗುತ್ತಿರುವ ಅಧ್ವಾನವನ್ನು ಆ ಕೃತಿಯಲ್ಲಿ ಕಾಣಬಹುದು.

ಹೂವಯ್ಯ ಸರಕಾರಿ ರಸ್ತೆಯಲ್ಲಿ ಬರುತ್ತಿರುವಾಗ ಎದುರಿನಲ್ಲಿ ಸೈಕಲ್ ಸವಾರನೊಬ್ಬ ಇಳಿಜಾರಾದ ರಸ್ತೆಯಲ್ಲಿ ಉನ್ಮತ್ತವೇಗದಿಂದ ಧಾವಿಸುತ್ತಾ ಈತನನ್ನು ಕೀಸಿಕೊಂಡು ಹೋಯಿತೊ ಎನ್ನುವಷ್ಟು ಸನಿಹದಲ್ಲಿ ಹಾದು ಮುಂದಿನ ತಿರುವಿನಲ್ಲಿ ಧರೆಗೆ ಡಿಕ್ಕಿ ಹೊಡೆದು ಉರುಳಿಬಿದ್ದ. ಎದ್ದವನು ಕೊಪ್ಪ–ತೀರ್ಥಹಳ್ಳಿ ರೋಡನಷ್ಟು ಡರ್ಟಿರೋಡ್ ನಾನೆಲ್ಲೂ ಕಾಣಲಿಲ್ಲವೆಂದು ಬೈದ. ತನ್ನ ಬಿಎಸ್‌ಎ ಬೈಸಿಕಲ್ 'ಡಿರೇಂಜ್'

ಆಗೋದಿಲ್ಲವೆಂದು ಹೊಗಳಿಕೊಂಡ. ಈ ಸಂದರ್ಭದಲ್ಲಿ ಆಧುನಿಕತೆ ಯಂತ್ರನಾಗರಿಕತೆ ತರುವ ಅನಾಹುತವನ್ನು ಕುವೆಂಪು ಹೂವಯ್ಯನ ಮೂಲಕ ಹೀಗೆ ಹೇಳುತ್ತಾರೆ.

"ಯಂತ್ರ ನಾಗರಿಕತೆ, ಇಂಗ್ಲಿಷು, ಚಾಂಚಲ್ಯ, ಉದ್ವೇಗ, ವೇಗ–ಈ ಪ್ರಗತಿಗಾಮಿಯಾದ ಪ್ರಪಂಚ.... ಬಹುದೂರದ ಮಲೆನಾಡಿನ ಕೊಂಪೆಯಲ್ಲಿ..... ಕ್ಷಣ ದರ್ಶನ ಕೊಟ್ಟಂತಾಯಿತು. ನಿಲ್ಲದೆ ಮುಂಬರಿಯುತ್ತಿರುವ, ದಿನದಿನವೂ ಬದಲಾಯಿಸುತ್ತಿರುವ ಹೊರಗಣ ವಿಶಾಲ ಜಗತ್ತಿಗೆ ಪ್ರತಿಮೆಗಳಾದರು ಆ ಬೈಸಿಕಲ್ ಮತ್ತು ಸವಾರ..... ಪಟ್ಟಣದ ಬೀದಿಯಲ್ಲಿ ಗಮನಕ್ಕೂ ಬಾರದ ಬೈಸಿಕಲ್ಲು ಕಾಡು ಬೀಡಿನಲ್ಲಿ ವಿಶೇಷಾತಿಥಿಯಾಗಿ ತೋರಿತು. ಎಷ್ಟಾದರೂ ಆಕ್ರಮಣ ಶೀಲವಾದ ಆ ಚಂಚಲಮಾನ ನಾಗರಿಕ ಲೋಕವು ಮಲೆನಾಡಿಗೆ ದಾಳಿಯಿಡುವ ಮೊದಲು ಮುನ್ನಟ್ಟಿದ ರಣಚಾರನಲ್ಲವೆ ಆ ಬೈಸಿಕಲ್ ಸವಾರ!".[8]

ಈ ಸಂದರ್ಭದಲ್ಲಿ ಕುವೆಂಪು ಆಧುನಿಕತೆಯ ಪ್ರವೇಶವನ್ನು ದಾಳಿಯೆಂದು ಯುದ್ಧದ ಪರಿಭಾಷೆಯಲ್ಲಿ ಕರೆಯುತ್ತಾರೆ. ಕಾರಣ ಆಧುನಿಕತೆ ಬಂದದ್ದೇ ಆಕ್ರಮಣ ಮನೋಭಾವದಿಂದ. ಈ ಆಧುನಿಕತೆಗೆ ಒಳಗಾದ ವ್ಯಕ್ತಿ ಸ್ಥಳೀಯತೆಯನ್ನು ಕೀಳಾಗಿ ನೋಡುವಂತ, ಟೀಕಿಸುವಂತ ಮನೋಭಾವ ರೂಪಗೊಳ್ಳುತ್ತಿರುವುದನ್ನು ಈ ಮೇಲಿನ ಘಟನೆ ಸೂಚಿಸುತ್ತದೆ. ಅಂದರೆ ತನ್ನ ಸೈಕಲ್ ಈ ರಸ್ತೆಗೆ ಯೋಗ್ಯವಲ್ಲ ಎಂಬುದಕ್ಕಿಂತ ತನ್ನ ಸೈಕಲ್‌ಗೆ ಈ ರಸ್ತೆ ಯೋಗ್ಯವಲ್ಲ ಎಂಬ ಧೋರಣೆ ಆಧುನಿಕತೆ ತಂದಂತಹ ಮನಸ್ಥಿತಿ. ನೂರಾರು ವರ್ಷಗಳಿಂದ ತನ್ನ ಅನುಕೂಲ ಮತ್ತು ಪರಿಸರಕ್ಕೆ ತಕ್ಕಂತಹ ರೀತಿಯಲ್ಲಿ ರೂಪಗೊಂಡ ಅಥವಾ ರೂಪಿಸಿಕೊಂಡಿದ್ದ ರಸ್ತೆ ಸೈಕಲ್ ಬಂದಾಗ ಏಕಾಏಕಿ ಕಳಪೆಯಾಗಿ ಕಾಣಲು ತೊಡಗುತ್ತದೆ. ಸಹಜವಾಗಿಯೆ ವಸಾಹತು ಸಂಸ್ಕೃತಿಯೊಂದು ಉಂಟು ಮಾಡಬಹುದಾದ ಮನೋಧರ್ಮವೊಂದನ್ನು ಈ ಸಂದರ್ಭದಲ್ಲಿ ಕಾಣಬಹುದು. ಆಧುನಿಕವಾದ ವಸ್ತುವೊಂದು ತನ್ನ ಹೊಸ ಆಕರ್ಷಣೆಯಿಂದ ಸ್ವೀಕೃತವಾದಾಗ ಸಹಜವಾಗಿಯೇ ಸ್ಥಳೀಯ ವಸ್ತು, ವಿಷಯಗಳ ಜೊತೆ ತುಲನಾತ್ಮಕವಾದ ದೃಷ್ಟಿಯೊಂದು ಥುತ್ತನೆ ಎದುರಾಗುತ್ತದೆ. ಇದು ಸ್ಥಳೀಯತೆಯನ್ನು ಇಲ್ಲವೆ ಸ್ಥಳೀಯವಾಗಿ ರೂಪುಗೊಳ್ಳುವ ವಸ್ತು ಪರಿಕರಗಳನ್ನು ತಿರಸ್ಕಾರದ ನೆಲೆಯಲ್ಲಿಯೊ, ಅನುಮಾನದ ನೆಲೆಯಲ್ಲಿಯೊ, ಅಳಿದು ಬಿಡುವ ಮನೋಧರ್ಮವೊಂದು ಈ ಮಲೆನಾಡಿನ ಜೀವನ ಕ್ರಮದಲ್ಲಿ ಮತ್ತೆ ಮತ್ತೆ ಕಂಡುಬರುತ್ತಿದೆ. ಬೈಸಿಕಲ್ ಮೂಲಕ ರಸ್ತೆ ಅಭಿವೃದ್ಧಿಯ ಬಗ್ಗೆ ಸವಾರನ ತುಡಿತ ಇಲ್ಲಿ ಗಮನಾರ್ಹ ಸಂಗತಿ. ಈ ಮೂಲಕ ಆಧುನಿಕತೆಯು ವಿವಿಧ ಆಯಾಮಗಳನ್ನು ಪಡಯುವುದನ್ನು ಗಮನಿಸಬೇಕು. ಹೀಗೆ ಯಂತ್ರ ನಾಗರಿಕತೆಯ ಫಲವಾಗಿ ಈ ದೇಶಕ್ಕೆ ಬಂದ ರೇಡಿಯೋ, ಗಡಿಯಾರ, ಲಾಂದ್ರ ಮೊದಲಾದವು ಸ್ವೀಕಾರ ಯೋಗ್ಯವಾದವು. ಅಷ್ಟೇ ಅಲ್ಲ ನಮ್ಮ ಪರಿಸರಕ್ಕೆ ಅನಿವಾರ್ಯವೇನೊ ಎಂಬಂತೆ ನಮ್ಮ ಸಂಸ್ಕೃತಿಯಲ್ಲಿ ಬೆರತು ಹೋಗಿವೆ.

ಹೋಟೆಲ್ ಉದ್ಯಮ

ಧರ್ಮ ನಿರಪೇಕ್ಷ ಸಂಸ್ಥೆಯಾಗಿ ರೂಪಗೊಂಡ ಆಧುನಿಕತೆಯ ಕೊಡುಗೆ ಎಂದರೆ ಹೋಟೆಲ್ಲು. ಇಂಗ್ಲಿಷ್ ಶಿಕ್ಷಣದ ಮೂಲಕ ಬಂದ ಸಾರ್ವಜನಿಕ ಸಂಸ್ಥೆಗಳಾದ ಶಾಲೆಗಳು ಕೂಡ ಮೊದ ಮೊದಲು

ಎಲ್ಲಾ ಸಮುದಾಯದವರೂ ಬಂದು ಸೇರುವ ತಾಣವಾಗಲಿಲ್ಲ. ಮೇಲು ವರ್ಗದವರಿಗೆ ವಿದ್ಯಾಕೇಂದ್ರಗಳಾಗಿ ಮಠಮಾನ್ಯಗಳು, ಕೂಲಿಮಠಗಳು ಇದ್ದವು. ಶೂದ್ರ ಸಮುದಾಯ ಅಥವಾ ಮಧ್ಯಮ ವರ್ಗದವರಿಗೆ ಇಂತಹ ಖಾಸಗಿ ಸ್ಥಳಗಳಲ್ಲಿ ತೆರೆಯದೆ, ಎಲ್ಲ ಸಮುದಾಯದವರೂ ಭಾಗಿಯಾಗಬೇಕೆಂಬ ಹಿನ್ನೆಲೆಯಲ್ಲಿ ಸಾರ್ವಜನಿಕ ಸಂಸ್ಥೆಯಾಗಿ ಸರಕಾರಿ ಶಾಲೆಯನ್ನು ರೂಪಿಸಿದರು. ಈ ಹಿನ್ನೆಲೆಯಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೇಗರವಳ್ಳಿ ಮಿಶನ್ ಸ್ಕೂಲ್ ಸ್ಥಾಪಿಸಿದರು. ಆದರೆ ಅಲ್ಲಿಗೆ ಎಲ್ಲ ವರ್ಗದವರ ಮಕ್ಕಳು ಬಂದರೆ ಎಂಬ ಬಗ್ಗೆ ವಿವರಣೆಗಳಿಲ್ಲ. ಶೂದ್ರ ಸಮುದಾಯಕ್ಕೆ ಸೇರಿದ ಐಗಳ ಶಾಲೆಯಲ್ಲಿ ಕಲಿಯುತ್ತಿದ್ದ ಮಕ್ಕಳು ಅಲ್ಲಿಗೆ ಸೇರಿದರು. ಅನಂತಐಗಳೇ ಅಲ್ಲಿಯ ಮುಖ್ಯೋಪಾಧ್ಯಾಯರಾದರು. ಇಷ್ಟಾಗಿಯೂ ಕ್ರೈಸ್ತ ಮಿಷನರಿಗಳ ಶೈಕ್ಷಣಿಕ ಸೇವೆಯ ಹಿಂದೆ ಮತಾಂತರ ಆಕರ್ಷಣೆಯೊಡ್ಡುವ ಗುಪ್ತ ಉದ್ದೇಶವೂ ಇರುತ್ತದೆ. ಹಾಗೆ ಆರೋಗ್ಯ ಸೇವೆಯ ಹಿಂದಿರುವ ಆಸ್ಪತ್ರೆ ಎಂಬ ಸಾರ್ವಜನಿಕ ಸಂಸ್ಥೆಯ ಹಿನ್ನೆಲೆಯೂ ಅದೇ ಆಗಿರುತ್ತದೆ. ಆದುದರಿಂದ ಆಧುನಿಕತೆಯ ಸಂದರ್ಭದಲ್ಲಿ ಇದಾವ ಆಶಯವೂ ಇಲ್ಲದೆ, ವ್ಯಾಪಾರಿ ಉದ್ದೇಶವೇ ಮುಖ್ಯವಾಗಿರುವ, ಲೋಕದಲ್ಲಿ ನಡೆಯುವ ಸುದ್ದಿಮಾಧ್ಯಮದ ಕೇಂದ್ರವೂ ಆಗಿ ಒಂದು ಪರಿಸರದ ತೀವ್ರವಾದ ಸ್ಥಿತ್ಯಂತರಗಳಿಗೆ ಹೋಟೆಲ್ ಬಹುಮುಖ್ಯವಾದ ಪಾತ್ರವಹಿಸಿದೆ. ಮಲೆನಾಡ ಪರಿಸರದಲ್ಲಿ ಕೂಡ ತೀವ್ರತರವಾದ ಬದಲಾವಣೆಗೆ 'ಹೋಟೆಲ್' ಕೊಡುಗೆ ಮಹತ್ವದ್ದಾಗಿದೆ.

ಗ್ರಾಮೀಣ ಭಾರತದ ಸಂದರ್ಭದಲ್ಲಿ ಎಂತೊ ಅಂತೆ ಮಲೆನಾಡ ಸಂದರ್ಭದಲ್ಲಿ ಕೂಡ ಹೋಟೆಲ್ ಎಂಬುದರ ಮೂಲ ಸ್ವರೂಪ ನೀರು, ಅನ್ನ, ವಿರಾಮಕ್ಕಾಗಿ ದಾರಿಹೋಕರಿಗೆ ರೂಪಿತವಾದ ಒಂದು ವ್ಯವಸ್ಥೆ. ಇದನ್ನು ಅನ್ನಸತ್ರ, ಅರವಟ್ಟಿಗೆ ಮುಂತಾಗಿ ಕರೆಯಲಾಗುತ್ತಿತ್ತು. ಬೇರೆ ಯಾವ ಉದ್ಯೋಗವನ್ನು ಮಾಡಲು ಸಾಧ್ಯವಾಗದ ನಿಸ್ಸಹಾಯಕರು ಇಂತಹದನ್ನು ಜೀವನೋಪಾಯಕ್ಕಾಗಿ ಮಾಡುವ ಉದ್ಯೋಗವಾಗಿತ್ತು. ಸಮಾಜದ ಕಣ್ಣಲ್ಲಿ ತಾತ್ಸಾರಕ್ಕೆ ಒಳಗಾಗಿದ್ದ ಇಂತಹ ವ್ಯವಸ್ಥೆಯ ಮೇಲೆ ಆಧುನಿಕತೆಯ ಸ್ಪರ್ಶವಾದ ಮೇಲೆ ಸಾರ್ವಜನಿಕ ವಲಯವಾಗಿ, ಪ್ರಮುಖವಾದ ಉದ್ಯೋಗಗಳಲ್ಲಿ ಇದೂ ಒಂದಾಗಿ, ಉದ್ಯಮವಾಗಿ ರೂಪಗೊಳ್ಳುತ್ತ ಬಂದ ಅದರ ಕಲ್ಪನೆಯೇ ಬೆರಗು ಹುಟ್ಟಿಸುವಂತಹದು. ಭಾರತದಂತಹ ಸಂದರ್ಭದಲ್ಲಿ ವರ್ಣಾಶ್ರಮ ಧರ್ಮದ ಅಡಿಯಲ್ಲಿ ಸಾವಿರಾರು ವರ್ಷಗಳಿಂದ ತಾರತಮ್ಯಗಳ ನಡುವೆಯೇ ಬದುಕಿ ಬಾಳಿದ ಸಾಂಪ್ರದಾಯಿಕ ಮನಸ್ಸುಗಳಿಗೆ, ಪರಂಪರಾಗತವಾದ ಉದ್ಯೋಗಕ್ಕೆ ಅನಿವಾರ್ಯವಾಗಿ ತಲತಲಾಂತರದಿಂದ ಅಂಟಿಕೊಂಡು ಬರಬೇಕಾದ ಜೀವಿಗಳಿಗೆ ಈ ಹೋಟೆಲ್‌ಗಳು ನಿಜಕ್ಕೂ ಒಂದು ಬಗೆಯ ಬದಲಾವಣೆಯ ಕೇಂದ್ರವಾಗಿ ರೂಪಗೊಂಡಿದ್ದು ಆಧುನಿಕತೆಯ ಪರಿಣಾಮವೇ ಆಗಿದೆ. ಇಂತಹ ಒಂದು ವ್ಯವಸ್ಥೆ ಅಥವಾ ತಾಣಗಳು ಸಮಾಜದಲ್ಲಿ ಕಟ್ಟಕಡೆಯ ಮನುಷ್ಯನಿಂದ ಹಿಡಿದು ಸಾಮಾಜಿಕ ಶ್ರೇಣಿಯ ತುತ್ತತುದಿಯಲ್ಲಿರುವ ಮೇಲುವರ್ಗದ ವ್ಯಕ್ತಿಯವರೆಗೂ ಬಳಕೆಯಾಗುವ ಸಂಸ್ಥೆಯಾಗುವುದೇ ಹೋಟೆಲ್ಲಿನ ವಿಶಿಷ್ಟತೆಯಾಗಿದೆ. ಅಷ್ಟೆ ಅಲ್ಲ ಪಾನೀಯ, ಆಹಾರ ಸೇವನೆಯ ಹಿನ್ನಲೆಯಲ್ಲಿ ಇಲ್ಲಿಗೆ ಬರುವ ವಿವಿಧ ಸಮುದಾಯದ, ವಿವಿಧ ಪರಿಸರದ ಜನಗಳ ನಡುವೆ ನಡೆಯುವ ಮಾತುಗಳು, ವಿಚಾರಗಳು, ಚರ್ಚೆಗಳು, ತರ್ಕಗಳು ವಾಗ್ವಾದಗಳು ಇವುಗಳಿಂದ ಪ್ರಬಲವಾದ ಸುದ್ದಿ ಕೇಂದ್ರವಾಗುವ ಜೊತೆಗೆ, ಭಾರತದಂತಹ ಜಾತಿನಿಷ್ಠ, ಸಂಪ್ರದಾಯಬದ್ಧ ಸಮಾಜಕ್ಕೆ ಬಿಡುಗಡೆಯ

ಕೇಂದ್ರವಾಗಿ ವಿಶಾಲ ಮನಸ್ಸುಗಳನ್ನು ಸೃಷ್ಟಿಸುವ, ವಿವೇಕವನ್ನು ಮೂಡಿಸುವ ತಾಣವಾಗಿದ್ದುದನ್ನು ನಮ್ಮ ಸೃಜನಶೀಲ ಸಾಹಿತ್ಯದಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಮೇಗರವಳ್ಳಿ ನಾಲ್ಕಾರು ಊರುಗಳ ಕೇಂದ್ರ ಸ್ಥಳ. ಅಲ್ಲಿರುವ ಅಂತಕ್ಕ ಸೆಟ್ತಿಯ ಮನೆ ನಿರೂಪಕ ಹೇಳುವ ಹಾಗೆ "ಒಂದು ರೀತಿಯಲ್ಲಿ ಅರವಟ್ಟಿಗೆ, ಅನ್ನಸತ್ರ, ಭೋಜನಗೃಹ, ಕಳ್ಳಂಗಡಿ, ಜೂಜಿನಕಟ್ಟೆ, ಆಟದಮನೆ ಇತ್ಯಾದಿ ಸಂಸ್ಥೆಗಳ ಸಂಸ್ಕಾರಗಳನ್ನೆಲ್ಲ ಒಳಗೊಂಡ ಸಾಮೂಹಿಕ ಕ್ಷೇತ್ರ"[೬]. ಯಾರು ಯಾರಿಗೆ ಏನು ಬೇಕೋ, ಯಾವ ಆಸಕ್ತಿಯೊ ಅದನ್ನೆಲ್ಲ ಪೂರೈಸುವ ತಾಣ. ಅದಕ್ಕೊಂದು ನಿರ್ದಿಷ್ಟತೆಯೆಂಬುದಿಲ್ಲ. ಹಳೆಮನೆ ಸುಬ್ಬಣ್ಣ ಹೆಗಡೆಯ ಮನೆಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಒಕ್ಕಲುತನಕ್ಕೆ ಬಂದ ಸುಬ್ಬಯ್ಯ ಶೆಟ್ಟಿಯ ಹೆಂಡತಿಯೇ ಅಂತಕ್ಕಸೆಟ್ತಿ. ಗಂಡನನ್ನು ಕಳೆದುಕೊಂಡ ಮೇಲೆ ಜೀವನೋಪಾಯಕ್ಕಾಗಿ ಇಂತಹ ಮನೆಯನ್ನು ನಡೆಸುತ್ತಿದ್ದಾಳೆ. ಹಳೇಮನೆ ಸುಬ್ಬಣ್ಣ ಹೆಗಡೆ, ಬೆಟ್ಟಳ್ಳಿ ಕಲ್ಲೇಗೌಡರಂತಹ ಒಡೆಯರ ಮರ್ಜಿಯಿಂದಲೇ ನಡೆಯುತ್ತಿದ್ದ ಅಂತಕ್ಕನ ಮನೆ, ಪಾದ್ರಿಯ ಪ್ರವೇಶದೊಂದಿಗೆ 'ಓಟ್ಲುಮನೆ'ಯಾಗಿ ಪರಿವರ್ತನೆಯಾಗುತ್ತದೆ. ಅಂದರೆ ಆಧುನಿಕ ವಸ್ತು, ಸಂಗತಿಯನ್ನು ಪ್ರಸಾರ ಮಾಡುವ ಪಾದ್ರಿ ಜೀವರತ್ನಯ್ಯ ಅಂತಕ್ಕ ನಡೆಸುವ ವ್ಯವಹಾರಕ್ಕೆ ಅಥವಾ ಜೀವನ ಮಾರ್ಗಕ್ಕೆ ಒಂದು ನಿರ್ದಿಷ್ಟ ಶೀರ್ಷಿಕೆಯನ್ನು ನೀಡುತ್ತಾನೆ. ತೀರ್ಥಹಳ್ಳಿಯಿಂದ ಅಂತಕ್ಕನಿಗೆ ಕಾಫಿ ಪುಡಿ ತಂದುಕೊಟ್ಟು ಅದನ್ನು ತಯಾರಿಸುವ ಬಗೆಯನ್ನು ತೋರಿಸಿಕೊಟ್ಟಿದ್ದನ್ನು, ಮರು ದಿವಸ ಕಾಗದದ ಮೇಲೆ ಏನೋ ಬರೆದು (ಕಾಫಿ ಹೋಟೆಲ್) ತಂದು ಗೋಡೆಗೆ ಅಂಟಿಸಿದ್ದನ್ನು, ಅದನ್ನು ನೋಡಿ ಜನ ನಗುವುದನ್ನು, ಮುಜುಗರ ಪಟ್ಟುಕೊಂಡು ದೇವಯ್ಯನಂತವರಲ್ಲಿ ಹೇಳುತ್ತಾಳೆ. ಹೋಟೆಲ್ ಎಂಬ ಹೊಸತನ್ನು ನಿರಾಕರಿಸಲಾಗದೆ, 'ಮನೆ' ಎಂಬ ಹಳೆಯದನ್ನು ಬಿಡಲಾಗದೆ ಜನರ ಬಾಯಲ್ಲಿ 'ಓಟ್ಲುಮನೆ' ಎಂದಾಯಿತು. ನಮ್ಮ ಜನ ಆಧುನಿಕತೆಯನ್ನು ಬರಮಾಡಿಕೊಂಡ ಬಗೆ ಈ ರೀತಿಯಿದು. ಇತರರ ಹಸಿವನ್ನು ಇಂಗಿಸಿ ಬದುಕಬೇಕಾದ ಅಂತಕ್ಕನಂತವಳು ಆಧುನಿಕತೆಯ ಸಂಕೇತವಾಗಿ ಬಂದ ಕಾಫಿಯನ್ನು ಚೆನ್ನಾಗಿ ತಯಾರಿಸುವುದನ್ನು ಬಹುಬೇಗ ಕಲಿತಳು. ಪ್ರಾರಂಭದಲ್ಲಿ ಅದು ಆಕೆಗೆ ಮುಜುಗರ ಮತ್ತು ಹೆಮ್ಮೆಯ ಸಂಗತಿಯಾಗಿತ್ತು. ಅದೇ ಬೆಟ್ಟಳ್ಳಿಗೆ ಪಾದ್ರಿ ಮೂಲಕ ಬಂದ ಕಾಫಿಪುಡಿಯಿಂದ ಕಾಫಿಯನ್ನು ಸರಿಯಾದ ರೀತಿಯಲ್ಲಿ ತಯಾರಿಸಲು ಸಾಧ್ಯವಾಗುವುದಿಲ್ಲ. ಅಲ್ಲಿ ದೇವಯ್ಯನ ಒತ್ತಾಯವಿತ್ತೇ ಹೊರತು ದೇವಮ್ಮ-ದೊಡ್ಡಮ್ಮನಿಗೆ ಆಸಕ್ತಿಯಿಲ್ಲದ ಸಂಗತಿ. ಕಲ್ಲಯ್ಯಗೌಡರಂತೂ ಅದನ್ನು ಕುಡಿಯುವ ಬಗ್ಗೆ ವಿರೋಧವಿತ್ತು. ಇಂದು ಮಲೆನಾಡ ಪರಿಸರದಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಕಾಫಿ ಅವಿಭಾಜ್ಯ ಅಂಗವಾಗಿದೆ. ಅದು ಸಾಧ್ಯವಾದುದು, ಅದು ತಲುಪಿದ್ದು ಹೋಟೆಲ್ ಮೂಲಕ. ಹೀಗೆ ಅಂತಕ್ಕನ ಮನೆ ಕಾಫಿ ಪ್ರವೇಶದೊಂದಿಗೆ ಓಟ್ಲುಮನೆಯಾಗುತ್ತದೆ. ಮೇಗರವಳ್ಳಿಯಲ್ಲಿ ಮಿಶನ್ ಸ್ಕೂಲು ಪ್ರಾರಂಭವಾದ ಮೇಲೆ ಊಟ, ವಸತಿ ನೀಡುವ ವಿದ್ಯಾರ್ಥಿನಿಲಯವಾಗಿ ವಿಸ್ತಾರಗೊಳ್ಳುತ್ತದೆ. ಹೀಗೆ ಅಂತಕ್ಕನಿಗೆ ಜೀವನೋಪಾಯಕ್ಕೆ ನೆರವಾಗಿದ್ದ 'ಮನೆ' ಮೇಗರವಳ್ಳಿ ಕೇಂದ್ರವಾಗಿರಿಸಿಕೊಂಡ ಸುತ್ತಮುತ್ತಲ ಎಲ್ಲ ಹಳ್ಳಿಗಳಿಗೆ 'ಓಟ್ಲುಮನೆ' ಎಂದೇ ಮನೆಮಾತಾಗಿತ್ತು. ಸುದ್ದಿ ಮಾಧ್ಯಮದ ಕೇಂದ್ರ, ಸುಬ್ಬಣ್ಣ ಹೆಗಡೆ ತಿರುಪತಿಗೆ ಹೋದ ತನ್ನ ಮಗ ದೊಡ್ಡಣ್ಣ ಹೆಗಡೆ ವಿಚಾರವಾಗಿ ತಿಳಿಯಲು ಬರುವುದು, ಪಾದ್ರಿ ಜೊತೆ ಚರ್ಚಿಸುವುದು ಅಂತಕ್ಕನ ಓಟ್ಲುಮನೆಯಲ್ಲಿ ಅಂತೆಯೆ ಆಧುನಿಕತೆಯ ಪ್ರವೇಶ ಹೆಚ್ಚಿದಂತೆಲ್ಲ ನಾಗರಿಕತೆಯ

ಚಲನೆ ಮಲೆನಾಡನ್ನು ವ್ಯಾಪಿಸುತ್ತಿರುವ ಕುರುಹು ಆಗಿ, ಬದಲಾವಣೆಯ ದ್ಯೋತಕವಾಗಿ ನಿಲ್ಲುತ್ತದೆ.

ಅಂದು ಸಾಮಾಜಿಕವಾಗಿ ಅಂತಹ ಗೌರವಯುತ ಉದ್ಯೋಗವಲ್ಲದ ಕೇವಲ ಜೀವನೋಪಾಯ ಮಾರ್ಗವಾಗಿ ರೂಪಗೊಂಡಿದ್ದಂತಹ ಇಂತಹ ಹೋಟೆಲ್‌ಗಳೆಂಬ ವ್ಯವಸ್ಥೆ ಆಧುನಿಕತೆಯ ಸಂದರ್ಭದಲ್ಲಿ ಪರಂಪರಾಗತವಾದ ಕಸುಬಿನಲ್ಲಿ ಸೋತಂತವರಿಗೆ, ಅದು ಯಾಂತ್ರಿಕವಾದ ಬದುಕೆಂದು ಬೇಸರ ಹೊಂದಿದಂತವರಿಗೆ ಪರ್ಯಾಯ ಉದ್ಯೋಗವಾಗಿ, ಬದುಕಿನ ಹೊಸ ಆಶಾಕಿರಣವಾಗಿ ಬಂದಿರುವುದನ್ನು ಕಾಣಬಹುದು. ಪರಂಪರಾಗತವಾದ ಗ್ರಾಮೀಣ ಬದುಕಿನ ಸ್ಥಿತ್ಯಂತರಕ್ಕೆ ಹೋಟೆಲ್ ರೂಪದ ಆಧುನಿಕತೆ ದೊಡ್ಡ ಪ್ರಮಾಣದ ಕೊಡುಗೆಯನ್ನು ನೀಡಿದೆ ನಿಜ. ಆದರೆ ಅದರ ಪ್ರವೇಶದ ಸಂದರ್ಭದಲ್ಲಾದ ತಲ್ಲಣಗಳು, ಸಂಘರ್ಷಗಳು, ನಿರಾಕರಣೆ–ಸ್ವೀಕರಣೆಗಳು, ಕೌಟುಂಬಿಕ ವಿಘಟನೆಗಳು ಕೂಡ ಅಷ್ಟೆ ಮುಖ್ಯವಾಗುತ್ತದೆ.

ಅನಂತಮೂರ್ತಿ ಅವರ 'ಸಂಸ್ಕಾರ' ಕಾದಂಬರಿಯಲ್ಲಿ ಬರುವ ಪ್ರಾಣೇಶಾಚಾರ್ಯರು ಆಕಸ್ಮಿಕವಾಗಿ ಚಂದ್ರಿಯ ಸಂಬಂಧದ ಬಳಿಕ ಅವರಲ್ಲುಂಟಾದ ಮಾನಸಿಕ ಹೊಯ್ದಾಟದಲ್ಲಿ ಮಾಲೇರ ಪುಟ್ಟನ ಜೊತೆ ಮೇಳಿಗೆ ಜಾತ್ರೆಗೆ ಬಂದವರಿಗೆ ಹೋಟೆಲ್‌ನಲ್ಲಿ ಪುಟ್ಟ ಕಾಫಿಗೆ ಆಹ್ವಾನಿಸಿದಾಗ ಗೊಂದಲಕ್ಕೆ ಒಳಗಾಗುತ್ತಾರೆ. ದಾಹದ ಪರಿಣಾಮ ಕಾಫಿ ಕುಡಿಯುವ ಆಸೆ ಹುಟ್ಟಿದರೆ, ಇನ್ನೊಂದು ಬಗೆಯಲ್ಲಿ ವೇದಾಂತ ಶಿರೋಮಣಿಯೊಬ್ಬ ಹೋಟೆಲ್ಲು ಕಾಫಿ ಕುಡಿಯುವುದು ಸರಿಯೆ? ಅದು ಯಾರದ್ದಾದರೂ ಕಣ್ಣಿಗೆ ಬಿದ್ದರೆ ಎಂದು ದಿಗಿಲು ಅನುಭವಿಸುತ್ತಾರೆ. ಕೊನೆಗೂ ಸಹಜವಾದ ದೈಹಿಕವಾದ ದಾಹ ಕೃತಕವಾದ ಕಟ್ಟುಪಾಡನ್ನು ಮೀರಿ ಕಾಫಿ ಕುಡಿಯುವಂತಾಗುತ್ತದೆ. ಸಾರ್ವಜನಿಕ ಸಂಸ್ಥೆಯಾದ ಹೋಟೆಲ್‌ನಲ್ಲಿ ಮಡಿವಂತರು ಪ್ರವೇಶಿಸುವುದಾಗಲಿ, ಅನ್ನಾಹಾರ ಸೇವಿಸುವುದಾಗಲಿ ನಿಷಿದ್ಧವಾದ ಸಂದರ್ಭದಲ್ಲಿ ಪ್ರಾಣೇಶಾಚಾರ್ಯರಂತವರು ತಲ್ಲಣಕ್ಕೆ ಒಳಗಾಗುತ್ತಾರೆ. ಆಧುನಿಕ ಶಿಕ್ಷಣ ಪಡೆದು ವಿವೇಕದಿಂದ ಹಿಂದಿರುಗಿದ 'ಭಾರತೀಪುರ'ದ ಜಗನ್ನಾಥನಂತವರಿಗೆ ತನ್ನ ವರ್ಗಗುಣವನ್ನು ಕಳಚಿಕೊಳ್ಳಬೇಕಾದರೆ ವಾಸುವಿನೊಡನೆ ತೀರ್ಥಹಳ್ಳಿ ಪೇಟೆಯ ಹೋಟೆಲ್‌ನಲ್ಲಿ ಕಾಫಿ ಕುಡಿಯುವುದರ ಮೂಲಕ ಸಾಧ್ಯವಾಗಿಸಿಕೊಳ್ಳಬೇಕು ಎನಿಸುತ್ತದೆ.

'ಅನ್ನದಾನವೇ ಶ್ರೇಷ್ಠವಾದ ದಾನ' ಎಂದು ಪ್ರತಿಪಾದಿಸಿಕೊಂಡು ಬಂದ ಮೇಲುವರ್ಗದ ಸಮುದಾಯ 'ವೈದಿಕರಿಗೆ ಅನ್ನವಿಕ್ರಯ ನಿಷಿದ್ಧ' ಎಂದು ಹೋಟೆಲ್ ವ್ಯವಸ್ಥೆ ಬಂದ ಸಂದರ್ಭದಲ್ಲಿ ಸಂಪ್ರದಾಯ ಬದ್ಧ ಹಳೆಯ ತಲೆಮಾರು ಪ್ರತಿಕ್ರಿಯಿಸಿತು. ಈ ನಿರಾಕರಣೆಯನ್ನು ನಿರಾಕರಿಸಿ ಹೊಸತಲೆಮಾರು ಮೀರುವ ಪ್ರಯತ್ನ ಮಾಡುತ್ತದೆ. ಇದರ ಫಲವಾಗಿ ಅನ್ಯ ಸಮುದಾಯದ ಹೋಟೆಲ್ಲುಗಳಿಗೆ ಹೋಗುವುದಕ್ಕಿಂತ ತಮ್ಮ ಸಮುದಾಯವೇ ಹೋಟೆಲ್ಲು ಸ್ಥಾಪಿಸುವ ಹೆಜ್ಜೆಯನ್ನು ಇಡುತ್ತದೆ. ಕ್ರಾಂತಿಕಾರಕವಾಗಿ ಕಾಣುವ ಈ ಪ್ರಕ್ರಿಯೆಗೆ ಹಲವು ಕಾರಣಗಳಿವೆ. ಸಂಪ್ರದಾಯನಿಷ್ಠರ ಮಡಿವಂತಿಕೆಯನ್ನು ಪೂರ್ಣವಾಗಿ ಮೀರದಿರಬೇಕಾದರೆ ತಾವೇ ಆ ಉದ್ಯೋಗವನ್ನು ಕೈಗೆತ್ತಿಕೊಳ್ಳುವುದು ಒಂದಾದರೆ, ಆಧುನಿಕತೆಯ ಪ್ರವೇಶದೊಂದಿಗೆ ಜೀವನ ನಿರ್ವಹಣೆಯ ಹೊಸ ಸಾಧ್ಯತೆಗಳು, ಉತ್ಪಾದನೆಯ ಹೊಸ ದಾರಿಗಳು ಕಾಣಲಾರಂಭಿಸಿದುದು ಇನ್ನೊಂದು. ಈ ಎರಡನೇ ಅಂಶ ಬಹಳ ಮುಖ್ಯವಾಗುವುದನ್ನು

ಗಮನಿಸಬಹುದು. ಮಲೆನಾಡ ಪರಿಸರದಲ್ಲಿ ಬ್ರಾಹ್ಮಣ ಸಮುದಾಯದ ಮುಖ್ಯ ಕಸುಬು ಕೃಷಿ ಮತ್ತು ಪೌರೋಹಿತ್ಯ. ಆಧುನಿಕತೆಯ ಪ್ರವೇಶ ಹೆಚ್ಚಿದಂತೆ, ಆಧುನಿಕ ಶಿಕ್ಷಣ ವಿಸ್ತರಿಸಿದಂತೆ ವೈಜ್ಞಾನಿಕತೆ-ವೈಚಾರಿಕತೆ ಬೆಳೆದಂತೆ ಪರಂಪರಾಗತವಾದ ಪೌರೋಹಿತ್ಯದ ಕಸುಬು ಕುಸಿಯತೊಡಗಿತು. 'ಕಾನೂರು ಹೆಗ್ಗಡತಿ'ಯಲ್ಲಿ ಆಧುನಿಕ ಶಿಕ್ಷಣ ಪಡೆದು ತನ್ನ ಪರಿಸರಕ್ಕೆ ಮರಳಿದ 'ಹೂವಯ್ಯ'ನಂತವರ ಮೌಢ್ಯತೆಯ ವಿರುದ್ಧದ ಹೋರಾಟ, ಪುರೋಹಿತಶಾಹಿಯನ್ನು ಖಂಡಿಸುವುದು, ವೆಂಕಪ್ಪಜೋಯಿಸರಂತವರ ಉದ್ಯೋಗಕ್ಕೆ ಕೊಡಲಿಪೆಟ್ಟನಂತಾಗುತ್ತದೆ. ಇಂತಹ ಸಂದರ್ಭದಲ್ಲಿ ಜೀವನ ನಿರ್ವಹಣೆಯ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಆಧುನಿಕತೆಯೆಂಬುದು ಸಾಂಪ್ರದಾಯಿಕ ವೃತ್ತಿ ಕಸುಬನ್ನು ನಾಶ ಮಾಡುವುದರ ಜೊತೆಗೆ ಉತ್ಪಾದನೆಯ ಹೊಸ ದಾರಿಯನ್ನೂ ತೋರಿಸಿತು. ಆಧುನಿಕತೆ ತಂದುಕೊಡಬಹುದಾದ ಸುಖ ಸೌಲಭ್ಯಗಳ, ಹೊಸ ಭರವಸೆಗಳ ನೆಲೆಯಲ್ಲಿ ಮಧ್ಯಮವರ್ಗ ಮತ್ತು ತಳವರ್ಗದ ಸಮುದಾಯಗಳು ಅದರಲ್ಲೂ ಹೊಸ ತಲೆಮಾರು ಬಹುಬೇಗನೆ ಆಧುನಿಕ ಜೀವನಕ್ರಮಕ್ಕೆ ಆಕರ್ಷಿತವಾಗಿ ಹೊರಳಿಕೊಳ್ಳುತ್ತಿರುವ ಸಂದರ್ಭದಲ್ಲಿ ಪರಂಪರಾಗತವಾದ ವೃತ್ತಿಯ, ಸಾಂಪ್ರದಾಯಿಕ ಬದುಕಿಗೆ ಬದ್ಧವಾಗಿದ್ದ ಪರಿಸರದ ಹೊಸ ತಲೆಮಾರು ಕೂಡ ಆಧುನಿಕತೆಯತ್ತ ಹೊರಳತೊಡಗಿತು. ಇಂತಹ ಸಂದರ್ಭದಲ್ಲಿ ಎಲ್ಲೆಡೆಯಂತೆ ಮಲೆನಾಡಿನಲ್ಲಿಯೂ ಕೂಡ ಸಂಪ್ರದಾಯಸ್ಥ ತಲೆಮಾರು ಮತ್ತು ಹೊಸತಲೆಮಾರಿನ ನಡುವೆ ಸಂಘರ್ಷವೆಂಬುದು ನಡೆದೇ ತೀರುತ್ತದೆ. ಈ ಬಗೆಯ ಸಂಘರ್ಷಗಳ ಫಲವಾಗಿ ನಿಧಾನಕ್ಕೆ ಆಧುನಿಕತೆಗೆ ಒಗ್ಗಿಕೊಳ್ಳುತ್ತಾ ಹೋಗುವುದು ಸಹಜ ಪ್ರಕ್ರಿಯೆ. ಅಂತೆಯೆ ಮಲೆನಾಡ ಪರಿಸರದ ಸೃಜನಶೀಲ ನಿರೂಪಕರು ತಮ್ಮ ಕಥೆ-ಕಾದಂಬರಿಗಳಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿರುವುದನ್ನು ಕಾಣಬಹುದಾಗಿದೆ.

ಅನಂತಮೂರ್ತಿ ಅವರ ಸಾಹಿತ್ಯವನ್ನು ಕುರಿತು ವಿಮರ್ಶೆಯ ಮಾತೊಂದನ್ನು ಗಮನಿಸಬಹುದು.

"ಹೋಟೆಲ್ ಆಧುನಿಕ ಸಮಾಜದ ಒಂದು ಪುನರಾವರ್ತಿತ ಪ್ರತಿಮೆ ಎಂಬಂತೆ ಅನಂತಮೂರ್ತಿ ಸಾಹಿತ್ಯದಲ್ಲಿ ಮತ್ತೆ ಮತ್ತೆ ಕಾಣಿಸಿಕೊಂಡಿದೆ"[೭].

ಈ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಕೆಲವು ಉದಾಹರಣೆಗಳನ್ನು ಗಮನಿಸಬಹುದು. 'ಪ್ರಕೃತಿ' ಕಥೆಯಲ್ಲಿ ಬರುವ ಸಂಕಪ್ಪಯ್ಯನಿಗೆ ಕೃಷಿ ಜೀವನ ಯಾಂತ್ರಿಕವಾದುದು ಎನಿಸುವುದಿಲ್ಲ. ಬದಲಿಗೆ ಅದೊಂದು ನಿತ್ಯಕರ್ಮವೆಂಬ ಶ್ರದ್ಧೆಯಿದೆ. ಆದ್ದರಿಂದ ಗದ್ದೆ ತೋಟ ಆತನಿಗೆ ಕರ್ಮಭೂಮಿ. ಈತ ಪರಂಪರಾಗತವಾದ ವೃತ್ತಿ ಬದುಕಿನ ಜೀವನಕ್ರಮಕ್ಕೆ ಸಾಕ್ಷಿಯಂತಿದ್ದಾನೆ. ಅದೇ ಅವನ ಹೆಂಡತಿ ಸೀತಮ್ಮನಿಗೆ, ಮಗ ನಾರಾಯಣನಿಗೆ ಈ ಮಲೆನಾಡಿನ ಹಳ್ಳಿ ಕೊಳೆವ ಕೊಂಪೆಯಾಗಿ ತೋರುತ್ತದೆ. ಆದ್ದರಿಂದ ನಗರಕ್ಕೆ ಹೋಗಿ ಸುಖಜೀವನ ಮಾಡುವ ಹಂಬಲವುಳ್ಳವಳಾಗಿದ್ದಾಳೆ. ಈ ಬದಲಾವಣೆಯ ಆಸೆ ಹುಟ್ಟಿಸಿದ್ದು, ಆಕೆಯ ಅಣ್ಣ ಶಿವಮೊಗ್ಗದಲ್ಲಿ ಹೋಟೆಲ್ ಇಟ್ಟಿದ್ದು. ಅಂದರೆ ಆಧುನಿಕತೆ ತಂದ ಹೊಸ ಭರವಸೆಯಿಂದ ಪರಂಪರಾಗತವಾದುದನ್ನು ಮೀರಲೆತ್ನಿಸುತ್ತಾಳೆ. ಆಧುನಿಕತೆಯ ಸುಖ ಸೌಲಭ್ಯಗಳ ಆಕರ್ಷಣೆ ಸ್ಥಳೀಯತೆಯನ್ನು ಹಳಿಯುವಂತೆ ಮಾಡುತ್ತದೆ. ಮರಕ್ಕೆ ಹಿಡಿದ ಕೊಳೆರೋಗ, ಮನುಷ್ಯನಿಗೆ ಹಿಡಿವ ಮಲೇರಿಯಾ ರೋಗ, ಮೂರುಕಾಸಿನ ಪ್ರಯೋಜನವಿಲ್ಲದ ತೋಟಕ್ಕೆ ಅಂಟಿಕೊಂಡು

ಕೊಳೆಯುತ್ತಿದ್ದೇವೆ ಎಂದು ಸೀತಮ್ಮನಿಗೆ ಅನ್ನಿಸುವುದೇ ಆಧುನಿಕತೆ ಮತ್ತು ಪರಂಪರೆ ಮುಖಾಮುಖಿಯಾದಾಗ.

ಸಂಕಪ್ಪಯ್ಯನಂಥ ಸಾಂಪ್ರದಾಯಿಕವಾಗಿ ಮತ್ತು ಪರಂಪರಾಗತವಾಗಿ ಬಂದ ಗ್ರಾಮೀಣ ಮನಸ್ಸು ಇದನ್ನು ವಿರೋಧಿಸುತ್ತದೆ.

"ವಂಶ ಪಾರಂಪರ್ಯವಾಗಿ ಗುಡ್ಡಗಳ ಜೊತೆ ಸೆಣಸಿ ಬೆಳಸಿದ ತೋಟಗದ್ದೆ ಪರಭಾರೆ ಮಾಡುವುದೆ? ಅದೂ ಶಿವಮೊಗ್ಗದಲ್ಲಿ ವೈದಿಕ ಬ್ರಾಹ್ಮಣನಿಗೆ ಅಯೋಗ್ಯವಾದ ಅನ್ನ ವಿಕ್ರಯಕ್ಕಾಗಿ"[೮].

ಶ್ರಮದಿಂದ ಕಟ್ಟಿದ ಆಸ್ತಿಯ ಜೊತೆ ಇರುವುದು ಭಾವನಾತ್ಮಕ ಸಂಬಂಧ ; ವ್ಯಾವಹಾರಿಕವಲ್ಲ. 'ಅನ್ನವಿಕ್ರಯ ವೈದಿಕನಿಗೆ ಸಲ್ಲದ ಉದ್ಯೋಗ' ಎಂಬ ನಿಲುವು ಹಳೆ ತಲೆಮಾರಿನದು. ಸಂಪೂರ್ಣ ವ್ಯಾವಹಾರಿಕ ನಿಲುವಿನ ನಾರಾಯಣನಿಗೆ ತಂದೆ ಸಹಕರಿಸದಿದ್ದರೆ, ಆಧುನಿಕತೆಯ ವ್ಯವಸ್ಥೆಗಳಲ್ಲಿ ಒಂದಾದ 'ಕೋರ್ಟ್' ಮೂಲಕ ದಾವಾ ಹಾಕಿ ಪಾಲು ಪಡೆಯುತ್ತೇನೆ ಎಂಬ ನಿಲುವು ಆಧುನಿಕತೆಯ ಮೂಲಕ ಬಂದಿರುವಂತಹದು. ಆಧುನಿಕತೆ ವ್ಯಕ್ತಿ ವಿಶಿಷ್ಟತೆಗೆ, ವೈಯಕ್ತಿಕ ಅಭಿಪ್ರಾಯಕ್ಕೆ ಹೆಚ್ಚು ಇಂಬು ನೀಡುತ್ತದೆ. ಅಂದರೆ ಆಧುನಿಕ ಉತ್ಪಾದನೆಯ ಹೊಸ ಸಾಧ್ಯತೆಗಳು ಗ್ರಾಮೀಣ ಪರಿಸರದ ಅವಿಭಕ್ತ ಕುಟುಂಬಗಳ ವಿಘಟನೆಗೆ ಕಾರಣವಾಗುವುದನ್ನು ಕಾಣಬಹುದಾಗಿದೆ. ಮಲೆನಾಡ ಪರಿಸರದ ಕೃಷಿ ಪದ್ಧತಿ, ಪ್ರಕೃತಿಯೊಡನೆ ಹೊಂದಾಣಿಕೆ, ವಿಕೋಪಗಳನ್ನು ಎದುರಿಸಲು ಅವಿಭಕ್ತ ಕುಟುಂಬ ಪದ್ಧತಿ ಭದ್ರವಾಗಿತ್ತು. ಆದರೆ ಯಾವಾಗ ಆಧುನಿಕತೆ ಪ್ರವೇಶಿಸಿತೊ, ಬದುಕಿನ ಹೊಸ ಭರವಸೆಗಳನ್ನು ಮೂಡಿಸಿತೊ ಆಗ ಅವಿಭಕ್ತ ಕುಟುಂಬದಲ್ಲಿ ಒಟ್ಟಾಗಿ ಜೀವಿಸುತ್ತಿದ್ದ ವ್ಯಕ್ತಿಗಳು ಸ್ವಯಂ ಸ್ಫೂರ್ತಿಯಿಂದಲೊ, ಉದ್ಯೋಗದ ಆಕರ್ಷಣೆಯಿಂದಲೊ ಪರಸ್ಪರ ದೂರ ದೂರವಾಗಬೇಕಾಯಿತು. ಆ ಕಾರಣ ಇದುವರೆಗೆ ನಂಬಿಕೊಂಡು ಬಂದ ಮೌಲ್ಯಗಳು ಕುಸಿಯತೊಡಗಿದವು. ಆದ್ದರಿಂದ ಆಧುನಿಕತೆಗೆ ಆಕರ್ಷಿತವಾದ ತರುಣ ಪೀಳಿಗೆಗೆ ಪರಂಪರೆ ಒಂದು ಗೊಡ್ಡು ಎನಿಸಿದರೆ ; ಸಂಪ್ರದಾಯನಿಷ್ಠರಿಗೆ 'ಆಧುನಿಕತೆ' ಕರಾಳವಾಗಿ ತೋರಿತು. ಸಂಕಪ್ಪಯ್ಯನ ಸಮವಯಸ್ಸಿನ 'ಶಾನುಭೋಗ'ನಿಗೆ ಪರಂಪರಾ ವೃತ್ತಿ ಲಾಭದಾಯಕವಾಗಿ ತೋರುವುದಿಲ್ಲ. ಆದ್ದರಿಂದ ಆಧುನಿಕತೆ ತರುವ ಹೊಸ ಸಾಧ್ಯತೆಗಳ ಬಗ್ಗೆ ಆಲೋಚಿಸುತ್ತಾನೆ. ತನ್ನ ಮಗ 'ಕಿಟ್ಟಿ' ಹೊಸ ಉದ್ಯೋಗ ಮಾಡುವ ಬಗ್ಗೆ ಬೆಂಬಲಿಸುತ್ತಾನೆ ; ಅದನ್ನು ಸಂಕಪ್ಪಯ್ಯನಿಗೆ ಹೇಳುತ್ತಾನೆ. ಈ ವ್ಯವಸಾಯದಲ್ಲಿ ಏನು ನಫೆ ಇಲ್ಲವೆಂದೂ, ಗುಡ್ಡಕ್ಕೆ ಸುಮ್ಮನೆ ತಲೆ ಚಚ್ಚಿಕೊಳ್ಳುವ ಬದಲು ಹೋಟೆಲ್ಲಿಟ್ಟರೇ ಫಾಯಿದೆ ಹೆಚ್ಚೆಂದೂ, ತಮ್ಮ ಮಕ್ಕಳು ಸೇರಿ ಹೋಟೆಲ್ಲು ತೆಗೆಯಬೇಕೆಂದ. ಆ ಚಿಕ್ಕವರ ಆಸೆಗೆ ನಾವೇಕೆ ಅಡ್ಡಿಯಾಗಬೇಕೆಂದು ಹೇಳುವ ಮಾತುಗಳು ಸಂಪ್ರದಾಯಕ್ಕೆ ಕಟಿಬದ್ಧನಾದ ಸಂಕಪ್ಪಯ್ಯನಿಗೆ ರುಚಿಸುವುದಿಲ್ಲ. ಪರಂಪರಾಗತವಾದ ವೃತ್ತಿ ಬದುಕಿಗೆ ಭಾವನಾತ್ಮಕ ಸಂಬಂಧ ಹೊಂದಿದ ಸಂಕಪ್ಪಯ್ಯನಂತವರಿಗೆ ಬದಲಾವಣೆ ಇಷ್ಟವಾಗುವುದಿಲ್ಲ. ವ್ಯಾವಹಾರಿಕವಾಗಿ ನೋಡುವ ಶಾನುಭೋಗನಂತವರು ಬದಲಾವಣೆಯನ್ನು ಬಯಸುತ್ತಾರೆ. ಈ ವ್ಯಾವಹಾರಿಕ ದೃಷ್ಟಿಕೋನವನ್ನು ತೀವ್ರಗೊಳಿಸಿರುವುದೇ ಆಧುನಿಕತೆಯ ಪ್ರವೇಶದಿಂದ.

'ಪ್ರಸ್ತ' ಕಥೆಯಲ್ಲಿ ಬರುವ ಪುಂಡರೀಕ – ನೇತ್ರಾವತಿಯರಿಗೆ ಇದೇ ಬಯಕೆ. ಸಾಂಪ್ರದಾಯಿಕ

ವೃತ್ತಿ ಮತ್ತು ಬದುಕಾದ ಪೌರೋಹಿತ್ಯ, ದರ್ಬೆ ತರುವುದು, ದೊನ್ನೆ ತಯಾರಿಸುವುದು, ಶ್ರಾದ್ಧ ನಡೆಸುವುದು, ಊಟಕ್ಕೆ ಹೋಗುವುದು ಯಾರಿಗೆ ಬೇಕು ಈ ಬ್ರಾಹ್ಮಣಾರ್ಥ, ಈ ಅಡಿಕೆ ಸುಲಿತದ ಜೀವನ ಆ ಗಣಪಯ್ಯನಂತೆ ತಾನೂ ಹೋಟೆಲ್ ತೆಗೆದರೆ ಹೇಗೆ ಎಂದು ಯೋಚಿಸುತ್ತಾನೆ. ಆದರೆ ಕಾರ್ಯಗತಕ್ಕೆ ತಾಯಿಯ ಬಲವಾದ ವಿರೋಧವಿದೆ.

ಪರಂಪರಾವೃತ್ತಿ ಮತ್ತು ಆಧುನಿಕ ವೃತ್ತಿಯ ಆಮಿಷಗಳ ನಡುವೆ ಸಂಘರ್ಷ ನಡೆದ ಮೇಲುವರ್ಗದ ಮಧ್ಯಮವರ್ಗದ ಜನ ಸಮುದಾಯದಲ್ಲಿ ಪರಂಪರಾಗತ ವೃತ್ತಿ ಬದುಕಿನ ವಿಫಲತೆಯಿಂದಲೊ ಅಥವಾ ಆ ವೃತ್ತಿಗಿಂತ ಹೆಚ್ಚಿನ ಸಾಫಲ್ಯವನ್ನು ಪಡೆವ ಹಂಬಲದಿಂದಲೊ ನಗರ ಪ್ರದೇಶಗಳಿಗೆ ವಲಸೆ ಹೋಗಿ ಹೋಟೆಲ್ ಉದ್ಯೋಗದಂತಹ ಉದ್ಯಮಗಳನ್ನು ನಡೆಸುವ ಹೊಸ ಮಾರ್ಗಗಳನ್ನು ಕಂಡು ಕೊಂಡರು. ಹಾಗೆ ಯಾವ ಹಳ್ಳಿಯ ಪರಿಸರದಲ್ಲಿ ಕೃಷಿಕರ ಅಡಿಯಲ್ಲಿ ಕೃಷಿ ಕಾರ್ಮಿಕರಾಗಿ ಬದುಕುತ್ತಿದ್ದಂತಹ ತಳ ಸಮುದಾಯದ ಯುವಕರು ಹೋಟೆಲ್ ಉದ್ಯೋಗ ನಡೆಸುವ ಮಾಲೀಕರ ಅಡಿಯಲ್ಲಿ ಕಾರ್ಮಿಕರಾಗಿ ಸೇರಿದ್ದು ಕುತೂಹಲದ ಸಂಗತಿ. 'ಕಾರ್ತಿಕ' ಕಥೆಯಲ್ಲಿ ಬರುವ ಅಬ್ಬಕ್ಕನ ಮಗ ಬೊಂಬಾಯಿಗೆ ಓಡಿ ಹೋಗಿ ಹೋಟೆಲ್ ಸೇರಿದ್ದಾನೆ. ಹಳ್ಳಿಯಲ್ಲಿದ್ದು ಒಡೆಯರ ಮನೆಯ ಎತ್ತಿನಗಾಡಿ ಓಡಿಸುವ ಕಾಯಕ ಬೇಡವಾಗಿದೆ. ಪರಂಪರಾಗತವಾದ ವೃತ್ತಿಯನ್ನೇ ಅವಲಂಭಿಸಿದ್ದರೂ ಇನ್ನೊಬ್ಬರ ಮನೆಯ ಆಳಾದ ಆಕೆಗೆ ಮಗ ಹಿಡಿದ ಹಾದಿಯ ಬಗ್ಗೆ ವಿರೋಧವಿಲ್ಲ. ಅವನು ಎಲ್ಲಾದರೂ ಇರಲಿ ; ಸುಖವಾಗಿರಲಿ ಎಂಬುದೇ ಅವಳ ಹಾರೈಕೆ ಅಂದರೆ ಆಧುನಿಕತೆ ತಳ ಸಮುದಾಯಕ್ಕೆ ಒಂದು ಬಗೆಯ ಬಿಡುಗಡೆಯನ್ನೂ, ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಶಕ್ತಿಯನ್ನು ನೀಡಿದೆ. ಇನ್ನೊಬ್ಬರಿಗಾಗಿ ಬದುಕುವುದಲ್ಲ ; ತಮಗಾಗಿ ಎಂಬ ಅರಿವು ಆ ಮೂಲಕ ವ್ಯಕ್ತಿ ಸ್ವಾತಂತ್ರ್ಯದ ಪ್ರಜ್ಞೆಯನ್ನು ಮೂಡಿಸಿರುವುದೇ ಆಧುನಿಕತೆಗಿರುವ ಶಕ್ತಿ ಎನ್ನಬಹುದು.

ಯಾವ ಗ್ರಾಮೀಣ ಪರಿಸರದಲ್ಲಿ ಜಮೀನ್ದಾರರ ಮನೆಗಳಲ್ಲಿ ಕೂಲಿ ಮಾಡಿ ಬದುಕುತ್ತಿದ್ದ ತಳ ಸಮುದಾಯಗಳ ಜೀವನವನ್ನು ವಸಾಹತುಶಾಹಿ ಆಧುನಿಕತೆ ಕ್ರಾಂತಿಕಾರಕವಾದ ಸ್ಥಿತ್ಯಂತರವನ್ನೇನೂ ತಂದುಕೊಡಲಿಲ್ಲ ; ಆಳು–ಒಡೆಯ ಎಂಬ ನೀತಿ ಬದಲಾಗಲಿಲ್ಲ. ಮೇಲುವರ್ಗದವರ ವೃತ್ತಿ ಬದಲಾದಂತೆ, ಈ ಬದಲಾದ ವೃತ್ತಿಯಲ್ಲಿ ಮೊದಲಿನಂತೆಯೇ ಆಳಾಗಿ ದುಡಿಯುವುದು ತಪ್ಪಲಿಲ್ಲ. ಪರಂಪರಾಗತವಾದ ವೃತ್ತಿ ಬದುಕಿಗೆ ಬೇಸತ್ತು, ಹೆಚ್ಚು ಸಂಪಾದನೆಯ ಆಸೆಯಿಂದ 'ಪ್ರಕೃತಿ' ಕಥೆಯ ನಾರಾಯಣನಂತವರು ನಗರದಲ್ಲಿ ಹೋಟೆಲ್ ಇಟ್ಟರೆ, ಅಂತಹ ಹೋಟೆಲ್‌ನಲ್ಲಿ ಕಾರ್ಮಿಕನಾಗಿ ಅಬ್ಬಕ್ಕನ ಮಗನಂತವರು ಸೇರಿದರು. ಮೇಲುವರ್ಗದ ಅಥವಾ ಮಧ್ಯಮವರ್ಗದ ಮನೆಯಿಂದ ಆಧುನಿಕ ಉನ್ನತ ಶಿಕ್ಷಣ ಪಡೆದವರು ವಸಾಹತುಶಾಹಿ ಆಡಳಿತದಲ್ಲಿ ಅಧಿಕಾರಿಗಳಾದರೆ ತಳ ಸಮುದಾಯದವರು ಅಂತಹ ವ್ಯವಸ್ಥೆಯಲ್ಲಿ ನೌಕರಿ ಬಯಸಿ ಆ ಅಧಿಕಾರಿಗಳ ಅಡಿಯಲ್ಲಿ ಪರಿಚಾರಕರಾದರು. ಅಂದರೆ ಆಧುನಿಕತೆಯ ಪ್ರವೇಶದಿಂದ ತಳ ಸಮುದಾಯಗಳಿಗೆ ಬಿಡುಗಡೆ ತಂದಿತೆಂಬ ಮಾತು ಪೂರ್ಣಸತ್ಯವಲ್ಲ. ಉದ್ಯೋಗದ ಸ್ವರೂಪದಲ್ಲಿ ಪಲ್ಲಟವಾಗಿದೆ ಅಷ್ಟೆ ಮಾಲಿಕ ಪರಂಪರೆಗೆ ವ್ಯವಸಾಯದ ವೃತ್ತಿಗಿಂತ ವ್ಯಾಪಾರ ಹೆಚ್ಚು ಲಾಭ ತರುವುದೆಂಬ ಭಾವ ಕಂಡರೆ, ಜೀತ ಪರಂಪರೆಗೆ ವ್ಯವಸಾಯದಂತಹ ಶ್ರಮದಾಯಕ ವೃತ್ತಿಗಿಂತ ಹೋಟೆಲ್‌ನಂತಹ ಕ್ಷೇತ್ರದಲ್ಲಿನ ದುಡಿಮೆ ಹೆಚ್ಚು ಹಿತಕರವಾಗಿ ತೋರುತ್ತದೆ. ಆದ್ದರಿಂದ ಅಬ್ಬಕ್ಕನಂತವಳಿಗೆ ಗ್ರಾಮೀಣ

ಪರಿಸರದ ವೃತ್ತಿ ತನಗೆ ಕೊನೆಯಾಗಬೇಕೆಂದೂ, ತನ್ನ ಮಗ ನಗರ ಸೇರಿ ಸುಖವಾಗಿರಬೇಕೆಂಬ ನಿಲುವು ತಾಳುತ್ತಾಳು. ಇಂತಹ ನಿಲುವುಗಳೆಲ್ಲ ಮೂಡಿದ್ದು ಆಧುನಿಕತೆ ತಂದಂತಹ ಅನೇಕ ಜೀವನ ಮಾರ್ಗಗಳ ಕಾರಣದಿಂದ.

ಆಧುನಿಕತೆಯ ಸಂದರ್ಭದಲ್ಲಿ ತಳ ಸಮುದಾಯಗಳ ಬದುಕಿನಲ್ಲಿ ವ್ಯಾಪಕವಾದ ಪಲ್ಲಟಗಳು ಆಗದೆ ಹೋದರು ಆಧುನಿಕತೆಯ ಪ್ರವೇಶ ವಿಸ್ತಾರಗೊಂಡಂತೆ ಅವರಲ್ಲಿಯೂ ಅಕ್ಷರ ಜ್ಞಾನ ಪಡೆಯುವ ಬಗ್ಗೆ ಉದ್ಯೋಗದ ಹೊಸ ಸಾಧ್ಯತೆಗಳ ಬಗ್ಗೆ ತಣ್ಣನೆಯ ಚಿಂತನೆಯನ್ನು ತಮ್ಮ ಮಿತಿಯಲ್ಲಿ ನಡೆಸಿವೆ.

'ದಿವ್ಯ' (ಅನಂತಮೂರ್ತಿ) ಕಾದಂಬರಿಯಲ್ಲಿ ಬರುವ ಸಂಭಾವನೆಗೆಂದು ಊರೂರು ಅಲೆಯುವ ಕೃಷ್ಣಶಾಸ್ತ್ರಿ ಮಗ ಆಧುನಿಕ ವೃತ್ತಿ ಹಂಬಲಿಸಿ ಪೇಟೆ ಸೇರಿ ಹೋಟೆಲ್ಲನ್ನು ಇಟ್ಟಿದ್ದಾನೆ. ಇದನ್ನು ಕೃಷ್ಣಶಾಸ್ತ್ರಿ ಮುಜುಗರದಿಂದ ಹೇಳುತ್ತಿಲ್ಲ ; ಅಭಿಮಾನದಿಂದಲೆ ಹೇಳುತ್ತಾನೆ. ಈ ಉದ್ಯೋಗವನ್ನು ಕೇಶವ ಪ್ರಶ್ನೆ ಮಾಡುತ್ತಾನೆ. ಈಚೀಚೆಗೆ ಜಾತಿ ಬ್ರಾಹ್ಮಣರೆಲ್ಲರು ಹೋಟಲಿಟ್ಟು ಅನ್ನ ವಿಕ್ರಯ ಮಾಡುವುದು ಧರ್ಮ ಸಮ್ಮತವೆ? ಎಂದು. ಆಗ ಕೃಷ್ಣಶಾಸ್ತ್ರಿಗಳ ಉತ್ತರ ಕಾಲಕ್ಕೆ ಶರಣಾದಂತಿದೆ.

"ಈ ಕಾಲದಲ್ಲಿ ಯಾರು ಶ್ರೋತ್ರಿಯಾಗಿರಲು ತಯ್ಯಾರಿದ್ದಾರೆ ಹೇಳಿ, ನನ್ನ ತಮ್ಮನ ಮಗನೊಬ್ಬ ಹೋಟೆಲಿಟ್ಟು ಚೆನ್ನಾಗಿ ದುಡ್ಡು ಮಾಡಿದ್ದಾನೆ. ಇನ್ನೊಬ್ಬ ಬಟ್ಟೆಯಂಗಡಿ ತೆರೆದಿದ್ದಾನೆ ; ಅದೂ ವೇದ ಪಾಠವಾದ ಮೇಲೆ ಕಾಲಾಯತಸ್ಮೈ ನಮಃ ಅನ್ನೋದು ಅದಕ್ಕೆ"

ಕೃಷ್ಣಾಶಾಸ್ತ್ರಿಗಳು ಕಟ್ಟಾ ಸಂಪ್ರದಾಯಕ್ಕೆ ಬದ್ಧರಂತೆ ಪೌರೋಹಿತ್ಯ, ಅಡಿಕೆ ಸಂಭಾವನೆ ವೃತ್ತಿಯನ್ನೇ ಕೈಗೊಂಡಿದ್ದರೂ ಅವರ ಮನಸ್ಸು ಆಧುನಿಕವಾಗಿ ಯೋಚಿಸುತ್ತಿದೆ. ಅವರ ಮನೆಯ ಪರಿಸರಕ್ಕೆ ಆಧುನಿಕತೆ ಬಂದು ಬಿಟ್ಟಿದೆ. ವೇದ ಪಾಠವನ್ನು ಕಲಿತಂತಹ ಮಕ್ಕಳು ಕೂಡ ಆ ಪರಂಪರಾಗತ ವೃತ್ತಿ ಬದುಕನ್ನು ತ್ಯಜಿಸಿ, ಇದುವರೆಗೆ ಯಾವ ಪರಂಪರೆ ಧರ್ಮ ಸಮ್ಮತವಲ್ಲ ಎಂದು ನಿರಾಕರಿಸುತ್ತಿತ್ತೊ ಅದೇ ವೃತ್ತಿಯನ್ನು ಕೈಗೊಂಡು ಆರ್ಥಿಕವಾದ ಏಳಿಗೆಯನ್ನು ಸಾಧಿಸುತ್ತಿದ್ದಾರೆ ಎಂದಾಗ ಕೃಷ್ಣಮೂರ್ತಿಯಂತವರಿಗೆ ಆಸೆ ಹುಟ್ಟಿಸುವುದು ಸಹಜ. ಕಾಲಕ್ಕೆ ಶರಣಾಗಿ ವೃತ್ತಿಯನ್ನು ಸ್ವಾಗತಿಸುತ್ತಾರೆ. ಇಂದು ಮಡಿವಾಳ ಬಟ್ಟೆ ತೊಳೆಯುವ ಕಾಯಕಕ್ಕೆ, ನಾಯಿಂದ ಕೂದಲು ಕತ್ತರಿಸುವುದಕ್ಕೆ, ಚಮ್ಮಾರ ಚಪ್ಪಲಿ ಹೊಲೆಯುವ ಕಸುಬಿಗೆ ಅಂಟಿಕೊಂಡಿಲ್ಲ. ಅಂದರೆ ಜಾತಿಗೊಂದು ವೃತ್ತಿ ಎನ್ನುವ ಕಾಲ ಇಲ್ಲವಾಗಿದೆ.

ಈ ಹಿಂದೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೇಗರವಳ್ಳಿ 'ಅಂತಕ್ಕಸೆಟ್ಟಿ' ಹೋಟ್ಲುಮನೆ ಬಗ್ಗೆ ಚರ್ಚಿಸಲಾಗಿದೆ. ಹಳೆಮನೆ ಸುಬ್ಬಣ್ಣ ಹೆಗಡೆಯವರ ಮನೆಗೆ ದಕ್ಷಿಣ ಕನ್ನಡದಿಂದ ಒಕ್ಕಲುತನಕ್ಕೆ ಬಂದ ಸುಬ್ಬಯ್ಯ ಶೆಟ್ಟರು ತೀರಿ ಹೋದ ಮೇಲೆ ಹೆಂಡತಿ ಅಂತಕ್ಕ ತನ್ನ ಮಗಳು ಕಾವೇರಿ ಜೊತೆ ಮೇಗರವಳ್ಳಿಯಲ್ಲಿ ಹೋಟೆಲ್ಲು ನಡೆಸುತ್ತಾಳೆ. ಜೀವನೋಪಾಯಕ್ಕೆ ಮಾಡಿಕೊಂಡ ಆ ಹಾದಿಹೋಕರ ಮನೆ ಪಾದ್ರಿ ಜೀವರತ್ನಯ್ಯನ ಕಾಫಿ ಪ್ರವೇಶ ಮತ್ತು 'ಕಾಫಿ ಹೋಟೆಲ್' ಎಂಬ ನಾಮಫಲಕದಿಂದ ಆ ಪರಿಸರದ ಜನರ ಮೆಚ್ಚುಗೆ, ಕೊಂಕು ಮಾತಿನಿಂದ ಓಟ್ಲುಮನೆಯಾಯಿತು. ಇಂತಹ ಓಟ್ಲುಮನೆ ಮಿಶನ್ ಸ್ಕೂಲು ಬಂದ ಮೇಲೆ ವಿದ್ಯಾರ್ಥಿನಿಲಯವಾಗಿ ವಿಸ್ತಾರಗೊಳ್ಳುವುದರ ಮೂಲಕ ಅಂತಕ್ಕನ ಬದುಕಿಗೂ, ಆ ಮಲೆನಾಡ ಪರಿಸರದ ಸಮಾಜದ ವಿಕಾಸಕ್ಕೂ ಆಸರೆಯಾಗಿ ಮತ್ತು ಪಲ್ಲಟಗಳಿಗೆ

ಸಾಕ್ಷಿಯಾಗಿ ನಿಲ್ಲುತ್ತದೆ.

ಹೀಗೆ ಕುವೆಂಪು ಕಾದಂಬರಿಯಲ್ಲಿ ಅಂತಕ್ಕನ ಹೋಟೆಲ್ ಮೇಗರವಳ್ಳಿ ಪರಿವರ್ತಿತವಾಗುವ ಸಂಕೇತವಾಗಿ ಕಾಣಿಸಿಕೊಳ್ಳುತ್ತದೆ. ಕುವೆಂಪು ನಂತರದ ತಲೆಮಾರಿನ ಮಲೆನಾಡ ಲೇಖಕರಲ್ಲಿ ಒಬ್ಬರಾದ ಬಿಳುಮನೆ ರಾಮದಾಸ್ ಅವರ ಕಾದಂಬರಿಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಮೇಗರವಳ್ಳಿ ವಿಕಾಸವಾಗುವ, ಸ್ಥಿತ್ಯಂತರಗೊಳ್ಳುತ್ತಿರುವ ಚಿತ್ರಣವನ್ನು ಕಾಣಬಹುದು. ಅಂದರೆ ಮೇಗರವಳ್ಳಿ ಎಂಬ ಊರು ಇಡೀ ಮಲೆನಾಡ ಪರಿಸರದಲ್ಲಿ ಚಿಕ್ಕ ಪುಟ್ಟ ಊರುಗಳು ಪೇಟೆಗಳಾಗಿ ಬೆಳೆಯುತ್ತಿರುವ ಸಂಕೇತವಾಗಿ ಕಂಡುಬರುತ್ತದೆ.

ಬಿಳುಮನೆ ರಾಮದಾಸ್ ಅವರ 'ವ್ಯಾಮೋಹ' ಕಾದಂಬರಿಯಲ್ಲಿ ಬರುವ ಮೇಗರವಳ್ಳಿ 'ಪೇಟೆ'ಯಾಗಿ ವಿಕಾಸವಾಗುತ್ತಿದೆ. ಕೊಂಕಣಿಗರ ಒಂದು ಹೋಟೆಲ್ ಮತ್ತು ಒಕ್ಕಲಿಗರ ಒಂದು ಹೋಟೆಲ್ ಇದೆ. ದಕ್ಷಿಣ ಕನ್ನಡದಿಂದ ಬಂದ ಕೊಂಕಣಸ್ತರು, ಬ್ರಾಹ್ಮಣರು ಈ ಭಾಗದಲ್ಲಿ ಹೋಟೆಲ್ ಇಟ್ಟು ಯಶಸ್ವಿಯಾದರು. ಅದೇ ಪರಿಸರದ ವ್ಯವಸಾಯ ಕ್ಷೇತ್ರದಿಂದ ಬಂದ ಬದಲೀ ಉದ್ಯೋಗ ಮಾಡ ಹೊರಟ ಶೂದ್ರನ ಹೋಟೆಲ್‌ನಲ್ಲಿ ಜನ ಅಷ್ಟಾಗಿ ಹೋಗುತ್ತಿರಲಿಲ್ಲ. ಇದಕ್ಕೆ ಕಾರಣ ಸ್ಪಷ್ಟವಿದೆ. ಹೋಟೆಲ್ಲನ್ನು ನಡೆಸಲು ಬ್ರಾಹ್ಮಣರು ಮತ್ತು ಕೊಂಕಣಿಗರು ಮಾತ್ರ ಅರ್ಹರು ಎಂಬ ಆ ಪರಿಸರದ ಭಾವನೆ. ಹಾಗೆ ಜಾತಿ ಶ್ರೇಣಿಯಲ್ಲಿ ಮೇಲಿರುವ, ಕೊಂಕಣಿಗರ ಬಗ್ಗೆ ಇದ್ದ ಸಾಮಾಜಿಕ ಗೌರವ. ಈ ಜಾತಿ ಮನಸ್ಸುಗಳ ಚಿಂತನೆ ಎಂತಹ ವಿಪರ್ಯಾಸದಿಂದ ಕೂಡಿರುತ್ತದೆ ಎಂದರೆ. ಹೋಟೆಲ್‌ನಲ್ಲಿ ಲೋಟ ತೊಳೆಯುವ ಕಾಯಕ ಶೂದ್ರರು ಮಾಡಿದರೆ ಅದು ಕೀಳಾಗಿ ತೋರುತ್ತದೆ. ಅದೇ ಮೇಲುವರ್ಗದ ಹೋಟೆಲ್ ಕಾಯಕ ಶ್ರೇಷ್ಠವಾದುದು ಎನ್ನುವುದಕ್ಕಿಂತ ಶೂದ್ರರಾದ ತಾವು ಅವರುಗಳ ಮನೆಗಳಲ್ಲಿ ಒಳಪ್ರವೇಶಿಸಿ ಸತ್ಕಾರ ಪಡೆಯುವ ಅರ್ಹತೆಯಿಲ್ಲದಿರುವಾಗ, ಅವರು ನಡೆಸುವ ಹೋಟೆಲ್ ಮುಕ್ತವಾಗಿರುವುದು. ಅದರೊಳಗೆ ಪ್ರವೇಶಿಸಿ ಆಹಾರ ಸೇವಿಸುವುದು ತಮಗೆ ಗೌರವದ ವಿಷಯ ಎಂಬ ಭಾವ ಈ ಪರಿಸರದಲ್ಲಿ ಹೊಂದಿರುವುದು. ಆ ಕಾಲದಲ್ಲಿ ಹೋಟೆಲ್‌ಗೆ ಹೋಗುವವರು ವಯಸ್ಸಾದ ಗಂಡಸರೆ ಹೊರತು ; ಯುವಕರಲ್ಲ. ಯುವಕರಾಗಲಿ ಸ್ತ್ರೀಯರಾಗಲಿ ಹೋಟೆಲ್‌ಗೆ ಹೋದರೆ ಕೆಟ್ಟಿದ್ದಾರೆ ಎಂಬ ಕಲ್ಪನೆ ಜನಗಳಲ್ಲಿತ್ತು.

ಈ ರೀತಿ ಹೋಟೆಲ್‌ಗೆ ಸ್ತ್ರೀಯರು ಹೋಗುವಂತಹದು ಸರಿಕಾಣದ ಪರಿಸರದಲ್ಲಿ ಹೆಣ್ಣೊಬ್ಬಳು ಆ ಉದ್ಯೋಗವನ್ನು ನಡೆಸುತ್ತೇನೆಂದು ಬರುವುದು ಕ್ರಾಂತಿಕಾರಕ ವಿಚಾರವಾಗುತ್ತದೆ. ಅಂತಹ ಕ್ರಾಂತಿಕಾರಕವಾದ ಹೆಜ್ಜೆ ಇಡುವ ಪಾತ್ರವನ್ನು 'ಬಿಳುಮನೆ ರಾಮದಾಸ್' ಅವರ 'ಕರಾವಳಿ ಹುಡುಗಿ' ಕಾದಂಬರಿಯಲ್ಲಿ ಕಾಣಬಹುದು. ಮಲೆನಾಡ ಪರಿಸರದ ಸುಮಾರು '೬೦'ರ ದಶಕದ ಕಾಲದ ಮಲೆನಾಡ ಬದುಕಿನ ಆವರಣವನ್ನು ಈ ಕೃತಿ ಒಳಗೊಂಡಿದೆ. ಮಲೆನಾಡ ಪರಿಸರಕ್ಕೆ ದಕ್ಷಿಣ ಕನ್ನಡದಿಂದ ಬರುವ 'ಅಕ್ಕು' ಈಗಾಗಲೇ ಘಟ್ಟದ ಮೇಲೆ ಬಂದು ತಮ್ಮ ಪರಂಪರಾಗತವಾದ ಜಮೀನ್ದಾರರ ಮನೆಯಲ್ಲಿ ಒಕ್ಕಲುಗಳಾಗಿ ದುಡಿಯುವ ಜಾತಿ ಕಸುಬನ್ನು ಬಿಟ್ಟು ಬೇರೆ ಕಸುಬನ್ನು ಆಯ್ದುಕೊಂಡು ಸ್ವತಂತ್ರವಾಗಿ ದುಡಿಯಬೇಕೆಂಬ ಯೋಜನೆಯನ್ನು ಇಟ್ಟುಕೊಂಡು ಬರುತ್ತಾಳೆ. 'ಅಂತಕ್ಕಸೆಟ್ಟಿ' ತನ್ನ ಗಂಡನ ಜೊತೆ

ಕರಾವಳಿಯಿಂದ ಬಂದದ್ದು ಒಕ್ಕಲು ಆಳಾಗಿ. ವಿಧವೆಯಾದ ಮೇಲೆ ಒಡೆಯರ ಕೃಪಾಕಟಾಕ್ಷದಿಂದಲೇ ಮೇಗವರಳ್ಳಿಯಲ್ಲಿ ಜೀವನೋಪಾಯಕ್ಕೆ ದಾರಿಹೋಕರ ಊಟದ ಮನೆಯಾಗಿ ತೆರೆದಳು. ಆದರೆ ಅದೇ ಕರಾವಳಿಯಿಂದ 'ಅಕ್ಕು' ಬಂದದ್ದು ಮೇಗರವಳ್ಳಿಯಲ್ಲಿ ಪರಂಪರಾಗತ ಕಸುಬನ್ನು ಬಿಟ್ಟು ಬೇರೆ ಏನಾದರೂ ಉದ್ಯೋಗ ಮಾಡಬೇಕೆಂಬ ಪ್ರಜ್ಞಾಪೂರ್ವಕವಾದ ಹಠದಿಂದಲೇ ಬಂದವಳು. ಅಂತಕ್ಕನಿಗೆ ಈ ಮಲೆನಾಡ ಪರಿಸರದಲ್ಲಿ ಆಕೆಯ ಕಸುಬಿನ ಬಗ್ಗೆ ವಿರೋಧ ವ್ಯಕ್ತವಾಗಲಿಲ್ಲ. ಇಡೀ ಸಮಾಜ ಒಂದು ರೀತಿಯಲ್ಲಿ ಸ್ವೀಕರಿಸಿತು. 'ಅಕ್ಕು' ಬಂದ ಕಾಲಕ್ಕೆ ಆಧುನಿಕತೆಯ ಸ್ಪರ್ಶ ಪಡೆದ ಹೋಟೆಲ್ ಒಂದು ವ್ಯಾಪಾರಿ ಕಸುಬಾಗಿತ್ತು. ಮಲೆನಾಡ ಪರಿಸರದಲ್ಲಿ ಸಾಮಾನ್ಯವಾಗಿ ಮೇಲುವರ್ಗದ ಕೊಂಕಣಸ್ಥರು, ಬ್ರಾಹ್ಮಣ ಸಮುದಾಯದವರು (ಉಡುಪಿ ಹೋಟೆಲ್) ದಕ್ಷಿಣ ಕನ್ನಡದಿಂದ ಬಂದು ಇಲ್ಲಿ ಹಳ್ಳಿಯ ಕೇಂದ್ರ ಸ್ಥಾನಗಳಲ್ಲಿ ಅಂಗಡಿ, ಹೋಟೆಲ್‌ಗಳನ್ನು ಸ್ಥಾಪಿಸುವುದರ ಮೂಲಕ ಪೇಟೆಯ ಸ್ವರೂಪವನ್ನು ನೀಡಿದರು. ಇಲ್ಲಿಯ ಪರಿಸರದ ಮೂಲನಿವಾಸಿಗಳು ಮೊದ ಮೊದಲು ಅಷ್ಟಾಗಿ (ಇತ್ತೀಚಿನವರೆಗೂ ಕೂಡ) ಇಂತಹ ವ್ಯಾವಹಾರಿಕ ಕ್ಷೇತ್ರಗಳಲ್ಲಿ ಭಾಗಿಯಾಗಲಿಲ್ಲ. ಆದ್ದರಿಂದ ಹೆಚ್ಚಾಗಿ ಕೊಂಕಣಸ್ಥರು ಇಂತಹ ಸ್ಥಳಗಳಲ್ಲಿ ಕುಲಕಸುಬಿನಂತೆ ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುತ್ತಿರುವುದನ್ನು ಕಾಣಬಹುದು.

ಇಂತಹ ಸಂದರ್ಭದಲ್ಲಿ ಕೆಳಕೋಮಿಗೆ ಸೇರಿದ 'ಅಕ್ಕು' ತನ್ನ ಕುಲಕಸುಬನ್ನು ಬಿಟ್ಟು ಬೇರೆ ಸ್ವತಂತ್ರ ಉದ್ಯೋಗ ಮಾಡುವ ವಿಚಾರ ಹಲವರ ಹುಬ್ಬೇರಿಸುತ್ತದೆ. ತಳ ಸಮುದಾಯದ ಅಸಹಾಯಕತೆಯನ್ನೇ ಆರ್ಥಿಕವಾಗಿ ಮತ್ತು ಲೈಂಗಿಕವಾಗಿ ಶೋಷಿಸಿಕೊಂಡು ಬಂದಂತಹ ಶಿವಪ್ಪಗೌಡ ಮತ್ತು ಅಣ್ಣಪ್ಪಗೌಡ ಎಂಬಂತಹ ಜಮೀನ್ದಾರಿ ಕುಳಗಳು ಅಕ್ಕುವಿನ ಸೌಂದರ್ಯಕ್ಕೆ ಮರುಳಾಗಿ ಎಂದಿನಂತೆ ತಮ್ಮ ವಶದಲ್ಲಿಟ್ಟುಕೊಳ್ಳುವ ಮಹದಾಸೆಯಿಂದ ಆಕೆಯನ್ನು ಯಥಾಸ್ಥಿತಿ ಕಸುಬಿಗೆ ಒಳಪಡಿಸುವ ಪ್ರಯತ್ನಗಳನ್ನು ಮಾಡುತ್ತಾರೆ. ಅದೇ ಅವಸ್ಥೆಯಲ್ಲಿ ಬಾಳುವ ಕೆಳಕೋಮಿನ ಸೀತು ಶಿವಪ್ಪಗೌಡನ ಪರವಾಗಿ ಕುಂಟಣಿ ಕೆಲಸವನ್ನು ಮಾಡುವುದು ಅಸಹಾಯಕ ಸ್ಥಿತಿಯ ಜನ ಅನಿವಾರ್ಯವಾಗಿ ಒಪ್ಪಿಕೊಂಡು, ಮುಂದುವರಿಸಿಕೊಂಡು ಹೋಗುವುದು ವ್ಯಕ್ತವಾಗುತ್ತದೆ. ಹಾಗೆ ಸೀತು ಶಿವಪ್ಪಗೌಡನ ಮನೆಯಲ್ಲಿ ಕೆಲಸ ಮಾಡಿಕೊಂಡಿರುವಂತೆಯೂ, ಹೋಟೆಲ್ ಇಟ್ಟು ಇರೋ ದುಡ್ಡನ್ನು ಕಳೆದುಕೊಳ್ಳಬೇಡವೆಂದು ಹೇಳಿದಾಗ 'ಅಕ್ಕು' ಕೊಡುವ ಉತ್ತರ ಯಥಾಸ್ಥಿತವಾದಕ್ಕೆ ಒಡ್ಡಿದ ಪ್ರತಿರೋಧವಾಗಿದೆ.

"ಹೋದರೆ ಹ್ವಾಯಲಿ, ದುಡ್ಡು ಹಾಳಾತ್ತು ಅಂತ ಏನಾದರೂ ಉದ್ಯೋಗ ಮಾಡದೆ ಸುಮ್ಮನೆ ಕೂತಿರೊಕೆ ಆತಿಲ್ಲೆ, ಜೀವನದಲ್ಲಿ ಏನಾದರೂ ಸಾಧನೆ ಮಾಡಕೆ, ಹಜಾಮರು ಹಜಾಮತ್ತೆ ಮಾಡಾದು, ಗೌಡರು ಗದ್ದೆ ತ್ವಾಟ ಮಾಡದು, ಬ್ರಾಂಬರು ಪೂಜೆ ಮಾಡಿಕಂಡು ಇರೂದು, ಹೊಲೇರು ಅವರಿವರ ಮನೇಲಿ ಸತ್ತ ದನ, ಎಮ್ಮೆ ಎಳದು ಹಾಕ್ಕೊಂಡು ಇರಬೇಕಂತಿಯಾ, ಹೊಸಮನೆ ಗೌಡರು ರೈಸ್‌ಮಿಲ್ ಇಟ್ಟಿಲ್ವಾ? ಬೇರೆ ಬೇರೆ ಉದ್ಯೋಗ ಮಾಡಕು"[೧೦]

ಅಕ್ಕು ತನ್ನ ಅಕ್ಕ, ಭಾವ ಅಥವಾ ತನ್ನ ಜಾತಿ ಸಮುದಾಯ ಪರಂಪರಾಗತವಾಗಿ ಇನ್ನೊಬ್ಬರ

ದಾಸರಾಗಿ ಜೀತದ ಕಸುಬನ್ನು ನಡೆಸಿಕೊಂಡು ಬರುವ ಪದ್ಧತಿಯನ್ನು ನಿರಾಕರಿಸುವ ದಿಟ್ಟ ಮಹಿಳೆಯಾಗಿ ಕಂಡು ಬರುತ್ತಾಳೆ. ಸಾಂಪ್ರದಾಯಿಕ ವೃತ್ತಿಗೆ ವಿದಾಯ ಹೇಳಿ, ಸ್ವತಂತ್ರವಾಗಿ ದುಡಿದು ಹೆಚ್ಚು ಸಂಪಾದಿಸುವ ಕನಸು ಕಾಣುತ್ತಾಳೆ. ಈ ಸ್ವತಂತ್ರ ಪ್ರವೃತ್ತಿಗೆ ಸ್ವಂತ ಜಮೀನೋ ಮತ್ತೊಂದೊ ಇಲ್ಲದ ಕಾರಣ 'ಹೋಟೆಲ್ ಉದ್ಯೋಗ, ಸ್ವಾತಂತ್ರ್ಯ ಮತ್ತು ಸಂಪಾದನೆಯ ಮಾರ್ಗವಾಗಿ ಆಕೆಗೆ ಕಂಡುದರಲ್ಲಿ ಆಶ್ಚರ್ಯವಿಲ್ಲ. ಪ್ರಾರಂಭದಲ್ಲೇ ಪ್ರತಿರೋಧ ವ್ಯಕ್ತವಾದಾಗ ತಾನು ಹಾಕಲಿರುವ ಬಂಡವಾಳ ಲಾಭತರದಿದ್ದರೂ ಹೋಟೆಲ್ ಸ್ಥಾಪಿಸುವ ಗುರಿಯಿಂದ ಹಿಂತೆಗೆಯುವುದಿಲ್ಲವೆಂದು ಧೃಢ ನಿಲುವನ್ನು ತಾಳುತ್ತಾಳೆ. ಅಕ್ಕುವಿನ ದೃಢ ಸಂಕಲ್ಪಕ್ಕೆ, ನ್ಯಾಯಯುತ ಹೋರಾಟಕ್ಕೆ ಕಡಿದಾಳ್ ಮಂಜಪ್ಪನಂತವರ, ಶಾಂತವೇರಿ ಗೋಪಾಲಗೌಡರಂತಹ ನಾಯಕರ ಪ್ರಭಾವದಿಂದ ಆಧುನಿಕವಾಗಿ, ವೈಚಾರಿಕವಾಗಿ ನೋಡುವ ಮನೋಭಾವ ಬೆಳಸಿಕೊಂಡಿದ್ದ ಅಂಗಡಿ ಚಿನ್ನಪ್ಪಗೌಡರು ಮತ್ತು ಪಟೇಲ್ ರಂಗಪ್ಪಗೌಡರು ಊಳಿಗಮಾನ್ಯ ಪದ್ಧತಿಯಲ್ಲೇ ಇದ್ದೂ ಕೂಡ ಭಿನ್ನವಾಗಿ ಯೋಚಿಸುವಂತವರು. ಇಂತವರಿಂದ ಅಕ್ಕುವಿಗೆ ನೈತಿಕ ಬೆಂಬಲ ಸಿಗುತ್ತದೆ. ಅಂದರೆ ಮಲೆನಾಡ ಪರಿಸರದಲ್ಲಿ ಒಂದು ಸಮಾಜ ಆ ಕಾಲಕ್ಕಾಗಲೇ ವೃತ್ತಿ, ಜಾತಿ, ಧರ್ಮಗಳ ಬಿಗಿ ನಿಲುವುಗಳು ಸಡಿಲಗೊಳ್ಳುತ್ತಾ, ಬದುಕುವ ಹೊಸ ಸಾಧ್ಯತೆಗಳ ಬಗ್ಗೆ ಚಲನಶೀಲವಾಗುವುದನ್ನು ಕಾಣಬಹುದಾಗಿದೆ. ಆದಕಾರಣ ಸಾಮಾನ್ಯ ತಿಳುವಳಿಕೆ ಹೊಂದಿರುವ ಅಕ್ಕುವಿನ ಈ ಧೃಢ ನಿರ್ಧಾರ ಮಲೆನಾಡ ಪರಿಸರದಲ್ಲಿ ಹೊಸ ಹೆಜ್ಜೆಯ ಗುರುತುಗಳೆಂದೇ ಗುರುತಿಸಬಹುದು.

ಆಧುನಿಕತೆ, ಸ್ವತಂತ್ರ ಭಾರತದ ಹೊಸ ಕಾನೂನುಗಳು ಸಾಮಾನ್ಯಳಾದ ಅಕ್ಕುವಿನಂತವರಿಗೆ ಯೋಚಿಸುವ, ವಾದಿಸುವ ಆ ಮೂಲಕ ಇತರರಂತೆ ಪಡೆದುಕೊಳ್ಳುವ ಶಕ್ತಿಯನ್ನು ನೀಡಿದೆ. ಆದ್ದರಿಂದ ಪಂಚಾಯ್ತಿ ಸಂದರ್ಭದಲ್ಲಿ ಪರಂಪರಾಗತವಾದ ಕೃಷಿ ಕಸುಬನ್ನು ಬಿಟ್ಟು ರೈಸ್‌ಮಿಲ್, ಅಂಗಡಿ ವ್ಯಾಪಾರ ಇಂತಹ ಹೊಸ ಉದ್ಯೋಗಗಳಲ್ಲಿ ತೊಡಗಿಕೊಂಡಿರುವಾಗ ತನ್ನ ಸಮುದಾಯದ ಪರಂಪರಾಗತವಾದ ಕಸುಬನ್ನು ಬಿಟ್ಟು ಹೋಟೆಲ್ ಇಡುವುದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸುತ್ತಾಳೆ. ಇದು ಸಾಂಪ್ರದಾಯಿಕ ಉದ್ಯೋಗ ಕೈ ಬಿಡಬಾರದು. ಆಯಾಯ ಜಾತಿ ಸಮುದಾಯಗಳು ತಮ್ಮ ತಮ್ಮ ಕುಲಕಸುಬನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಪಟ್ಟಭದ್ರ ಹಿತಾಸಕ್ತರ ಯಥಾಸ್ಥಿತವಾದಕ್ಕೆ ಅಕ್ಕುವಿನ ವಾದ ಒಡ್ಡಿದ ಪ್ರತಿರೋಧವಾಗಿದೆ.

ಹೀಗಾಗಿ ಸಾಮಾನ್ಯ ತಿಳುವಳಿಕೆ ಹೊಂದಿರುವ ಅಕ್ಕುವಿನ ಇಂತಹ ದಿಟ್ಟತನದ ನಿಲುವುಗಳು ಮಲೆನಾಡ ಪರಿಸರದಲ್ಲಿ ಆಧುನಿಕತೆಯ ಪ್ರಭಾವದ ಹೊಸ ಹೆಜ್ಜೆಯ ಕುರುಹುಗಳೆಂದು ಗುರುತಿಸಬಹುದಾಗಿದೆ. ಹೀಗೆ ಹತ್ತು ಹಲವು ವಿಧದಲ್ಲಿ ವೈಯಕ್ತಿ ನೆಲೆಗಳಲ್ಲಿ ಬದಲಾವಣೆ ಹಂಬಲಿಸಿದ ವ್ಯಕ್ತಿಗಳು ನಮಗೆ ಕಂಡು ಬರುತ್ತಾರೆ. ಈ ರೀತಿಯ ಬದಲಾವಣೆ ಅಥವಾ ಪಲ್ಲಟ ಮಲೆನಾಡ ಬದುಕಿನ ಆಂತರಿಕ ಒತ್ತಡಗಳಿಂದಾದ ಉತ್ಪನ್ನಕ್ಕಿಂತ ಆಧುನಿಕತೆ ತಂದುಕೊಟ್ಟ ಬಾಹ್ಯ ಒತ್ತಡಗಳೆ ಹೆಚ್ಚು ಎಂದು ಕಂಡುಕೊಳ್ಳಬಹುದಾಗಿದೆ.

ಅಂಚೆ ವ್ಯವಸ್ಥೆ

ಇಡೀ ಭಾರತವನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡ ಮೇಲೆ ಈ ವಿಶಾಲವಾದ ದೇಶದ

ಸಂಪರ್ಕಕ್ಕೆ ಬ್ರಿಟಿಷರು ಜಾರಿಗೆ ತಂದ ಮೊದಲ ವ್ಯವಸ್ಥೆಗಳೆಂದರೆ ಅಂಚೆ ಮತ್ತು ರೈಲ್ವೆ ವ್ಯವಸ್ಥೆ. ವಸಾಹತುಶಾಹಿ ಪ್ರಭುತ್ವದ ನರನಾಡಿಗಳಂತೆ ಹಳ್ಳಿಹಳ್ಳಿಗೂ ಅಂಚೆ ವ್ಯವಸ್ಥೆ ಮೊದಲು ಹರಡಿತು. ಹಾಗೆ ಮಲೆನಾಡಿಗೂ ೧೯ನೇ ಶತಮಾನದ ಉತ್ತರಾರ್ಧದಲ್ಲೇ ಕಾಲಿಟ್ಟಿತು. ಈ ಆಧುನಿಕ ವ್ಯವಸ್ಥೆಗೆ ಪರಂಪರೆಯಿಂದ ಅಕ್ಷರ ಸಂಸ್ಕೃತಿಯಲ್ಲಿ ಬೆಳೆದು ಬಂದ ಮೇಲು ವರ್ಗದವರನ್ನೇ ಹೆಚ್ಚಾಗಿ ಬ್ರಿಟಿಷ್ ಸರಕಾರ ಬಳಸಿಕೊಂಡಿತು ಅಥವಾ ಆ ಆಧುನಿಕ ವ್ಯವಸ್ಥೆಯನ್ನು ಬಹು ಸುಲಭವಾಗಿ ಆ ಸಮುದಾಯ ಬಳಸಿಕೊಂಡಿತು. ಕೃಷಿ ಮತ್ತು ಪೌರೋಹಿತ್ಯ ವೃತ್ತಿಯನ್ನು ಪರಂಪರಾಗತವಾಗಿ ನಡೆಸಿಕೊಂಡು ಬರುತ್ತಿದ್ದ ಕೆಲವರು ತಮ್ಮ ವೃತ್ತಿಯ ಹೊಸ ಸೇರ್ಪಡೆಯಾಗಿ ಅಳವಡಿಸಿಕೊಂಡರು. (ಬ್ರಿಟಿಷರು ತಂದ ಕಂದಾಯ ವ್ಯವಸ್ಥೆಯಲ್ಲಿ ಅಕ್ಷರದ ಅರಿವುಳ್ಳವರೇ ಶಾನುಭೋಗಿಕೆ ಪಡೆದುಕೊಂಡಂತೆ) 'ಫಣಿಯಮ್ಮ' ಕಾದಂಬರಿಯಲ್ಲಿ ಬರುವ ತೀರ್ಥಹಳ್ಳಿ ಸಮೀಪದ ಮಲೆನಾಡ ಹಳ್ಳಿಯ ಮನೆಯಾದ 'ಹೆಬ್ಬಲಿಗೆ' ತಮ್ಮಯ್ಯನವರ ಮನೆಯು 'ಅಂಚೆಮನೆ'ಯೆಂದೇ ಪ್ರಸಿದ್ಧವಾಗಿತ್ತು. ಈ ಹೆಸರು ಒಂದು ರೀತಿಯ ಆ ಮನೆಗೆ ಪರಿಸರ ನೀಡಿದ ಬಿರುದಿನಂತೆ ಇತ್ತು. ಅಂಚೆ, ಶಿವಮೊಗ್ಗ ಕೇಂದ್ರ ಸ್ಥಳದಿಂದ ಕುದುರೆಯ ಗಾಡಿ ಮೇಲೆ ತೀರ್ಥಹಳ್ಳಿಯ ಈ ಮನೆಗೆ ತಲುಪುತ್ತಿತ್ತು. ಆ ಮನೆಯ ಯಜಮಾನ (ತಮ್ಮಯ್ಯ) ಅಂಚೆ ಮಾಸ್ತರ ಬೀಗ ತೆಗೆದು ವಿಳಾಸದಂತೆ ವಿಂಗಡಿಸುವುದು ಅವರ ಕೆಲಸ. ಅವರಡಿಯಲ್ಲಿ ಅಂಚೆ ಪೇದೆಗಳು ಸುತ್ತಮುತ್ತಲ ಹಳ್ಳಿಗಳಿಗೆ ಕಾಲ್ನಡಿಗೆಯಲ್ಲಿಯೇ ಹಂಚಬೇಕಿತ್ತು. ಆತನಿಗೆ ಸರ್ಕಾರವು ವಿಶೇಷವಾದ ಉಡುಗೆಯನ್ನು ನೀಡಿತ್ತು. ಆಧುನಿಕತೆ ತಂದ ಅನೇಕ ಸಂಸ್ಥೆಯ ಉದ್ಯೋಗಗಳಿಗೆ ಆಯಾ ಉದ್ಯೋಗ ಕ್ಷೇತ್ರವನ್ನು ಸಂಕೇತಿಸುವ ರೀತಿಯಲ್ಲಿ ಏಕರೂಪದ ಉಡುಪು ಅಥವಾ ಡ್ರೆಸ್‌ಕೋಡ್ ಪದ್ಧತಿ ಬಂದುದು ಇಂಗ್ಲಿಷರ ಪದ್ಧತಿಯಿಂದಲೇ. ಕಾಲಿಗೆ ಮೆಟ್ಟು, ಕಾಕಿ ಪ್ಯಾಂಟು-ಕೋಟು, ಕಾಕಿಯದೇ ಪಗಡಿ, ಕೈಯಲ್ಲಿ ಕೋಲು ಅದಕ್ಕೆ ಅದರ ತುದಿಗೆ ಹಿತ್ತಾಳೆ ಉಂಗುರ, ಅದರಲ್ಲಿ ಹಿತ್ತಾಳೆ ಬಿಲ್ಲೆ-ಗಗ್ಗರ ಹೊಂದಿರುವ ಅದನ್ನು ಹಿಡಿದು ಸದ್ದು ಮಾಡುತ್ತಾ, ಓಡೋಡುತ್ತಾ ಬರುವುದನ್ನು ನೋಡುವುದೇ ಹಳ್ಳಿಗರಿಗೆ ಸಂಭ್ರಮ. ಆತನನ್ನು ಆತನ ಕಾಯಕದಂತೆ 'ರನ್ನರ್' ಎಂದು ಕರೆಯುತ್ತಿದ್ದರು. ಯಾರ ಮನೆಗೆ ಕಾಗದ ಬಂದರು ಶ್ಯಾನುಬೋಗರ ಮನೆಯಲ್ಲಿ ಬಹಿರಂಗಗೊಳ್ಳುತ್ತಿತ್ತು. ಆ ಕಾರಣ ಪತ್ರವನ್ನು ಶ್ಯಾನುಭೋಗ ಓದಬೇಕು ಇಲ್ಲವೆ ಅಂಚೆಯಣ್ಣ ಓದಬೇಕು. ಇದಕ್ಕೆ ಅನಕ್ಷರತೆ ಕಾರಣ ಅಷ್ಟೆ. ಊರ ಗೌಡ ಪಟೇಲರ ಮನೆಯಲ್ಲೂ ಕೆಲವೊಮ್ಮೆ ಅಂಚೆಯವನೇ ಓದಬೇಕು. ಅಷ್ಟೇಕೆ ಮರು ಓಲೆ ಆತನೇ ಬರೆಯಬೇಕು. ಆದ್ದರಿಂದ ಆತ ತನ್ನ ಚೀಲದಲ್ಲಿ ಕಾಗದ, ಕವರುಗಳನ್ನಿಟ್ಟುಕೊಂಡಿರುತ್ತಿದ್ದ. ಆದ್ದರಿಂದ ಪತ್ರ ವ್ಯವಹಾರವೆಂಬುದು ಖಾಸಗಿಯಾದ ಅಥವಾ ರಹಸ್ಯವಾದ ಸಂಗತಿಯಾಗಿಯೇನೂ ಇರಲಿಲ್ಲ. ವೃತ್ತ ಪತ್ರಿಕೆ ಎಂಬ ಹೆಸರನ್ನೇ ಕೇಳದ ಜನಕ್ಕೆ ಹಲವು ಊರುಗಳನ್ನು ಸುತ್ತಿ ಬರುವ ಆತನೇ ಸುದ್ಧಿ ಮಾಧ್ಯಮ ಕೇಂದ್ರವೂ ಆಗಿದ್ದ.

ಶಿವಮೊಗ್ಗದಿಂದ ಕುದುರೆ ಗಾಡಿಯಲ್ಲಿ ಹೊರಟ ಅಂಚೆ ಚೀಲ ಮಂಡಗದ್ದೆಯಲ್ಲಿ ಬೇರೊಂದು ಗಾಡಿಗೆ, ಮಾಳೂರಿನಿಂದ ಮಗದೊಂದು ಗಾಡಿಗೆ ಸಾಗಿ ತೀರ್ಥಹಳ್ಳಿ ಅಂಚೆ ಮನೆಗೆ ಬರುತ್ತಿತ್ತು. ಹೀಗೆ ವಾರಕ್ಕೆ ಒಂದೊ ಎರಡೊ ಬಾರಿ ಬರುವ ಅಂಚೆ, ಮೋಟಾರು ವಾಹನ ಆರಂಭವಾದ ಮೇಲೆ (೧೯೧೭ರಲ್ಲಿ ಮೋಟಾರು ವಾಹನ ದಯ ಮಾಡಿಸಿತು- ಫಣಿಯಮ್ಮ ೫೮೧೧) ದಿನನಿತ್ಯ ಬರತೊಡಗಿತು. ಅಷ್ಟರಲ್ಲಿ ಸೈಕಲ್ ಪ್ರವೇಶವಾಯಿತು. ಅಂಚೆ ಪೇದೆಗಳು ಪುಷ್ಪಕವಿಮಾನವೇರಿದಂತೆ ಸೈಕಲ್ ಸವಾರಿ

ಮಾಡುತ್ತ ಅಂಚೆ ಹಂಚುತ್ತಿದ್ದರು. ಬಹುಶಃ ಈ ಪರಿಸರದಲ್ಲಿ ಸೈಕಲ್ ಬಳಕೆಯ ಆಕರ್ಷಣೆ ಮತ್ತು ಮಹತ್ವ ಅರಿವಾದುದು ಅಂಚೆ ಪೇದೆಗಳಿಂದ ಎಂದರೆ ತಪ್ಪಾಗಲಾರದು. ಅಕ್ಷರ ಜ್ಞಾನ, ಉಡುಪು, ಸೈಕಲ್ ಇವು ಮೂರನ್ನು ಹೊಂದಿದ ಇವರು ಸಾಮಾಜಿಕವಾಗಿ ಮನ್ನಣೆಗೆ ಪಾತ್ರರಾಗಿದ್ದರು.

ಕ್ರಾಪು – ಉಡುಪು

ಮಾನವನಿಗೆ ಊಟ, ವಸತಿಯಷ್ಟೇ ಮೂಲಭೂತ ಅಗತ್ಯಗಳಲ್ಲಿ 'ಅರಿವೆ'ಯೂ ಒಂದು. ಈ ಊಟ, ವಸತಿಗಳು ಸಾಮಾನ್ಯವಾಗಿ ಹೇಗೆ ಪ್ರಾದೇಶಿಕ ವಿಶಿಷ್ಟತೆಯನ್ನು ಹೊಂದಿವೆಯೊ ಹಾಗೆ ಉಡುಪು ಕೂಡ ಪ್ರಾದೇಶಿಕ ವಿಶಿಷ್ಟತೆಯನ್ನು ಹೊಂದಿದೆ. ಬೆಟ್ಟ–ಗುಡ್ಡಗಳಿಂದಲೂ, ಕಾಡು–ಮೇಡುಗಳಿಂದಲೂ ಆವೃತ್ತವಾದ ಮಲೆನಾಡ ಪರಿಸರದಲ್ಲಿ ಬದುಕುತ್ತಿರುವ ಜನಸಮುದಾಯದ ಜೀವನ ವಿಧಾನ ಸಹಜವಾಗಿಯೇ ಇತ್ತು. ನಾಗರಿಕ ಸೌಲಭ್ಯಗಳಿಲ್ಲದ, ಜನ ಸಂಪರ್ಕದಿಂದ ದೂರವಿರುವ ಈ ಪರಿಸರದ ಜನಸಮುದಾಯ ಆದಷ್ಟು ಈ ಪರಿಸರದಲ್ಲಿಯೇ ದೊರೆಯುವ, ಉತ್ಪಾದಿಸುವ ಆಹಾರ ಸಾಮಾಗ್ರಿಗಳಿಗೆ ಸೀಮಿತವಾಗಿದ್ದರು. ಎಲ್ಲ ಬಗೆಯ ಅಡಿಗೆಗೂ ಅಕ್ಕಿಯೇ ಪ್ರಧಾನ ತೋಟದ ಬೆಳೆ ಅಡಿಕೆ, ಕಾಳುಮೆಣಸು ಇತ್ಯಾದಿಗಳು ವಾಣಿಜ್ಯ ಬೆಳೆಗಳು. ಈ ಬೆಳೆಗಳನ್ನು ದೂರದ ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಯ ಪಟ್ಟಣಗಳಲ್ಲಿ ಮಾರಿ ತಮಗೆ ಬೇಕಾದ ಉಪ್ಪು, ಸೀಮೆಎಣ್ಣೆ, ಒಣಮೆಣಸು, ಕೆಲವು ಬೇಳೆ–ಕಾಳುಗಳನ್ನು ಪಡೆಯುತ್ತಿದ್ದರು. ಹಾಗೆಯೇ ವಸ್ತ್ರವನ್ನು ಕೂಡ ಹೊರಗಿನಿಂದಲೇ ಪಡೆಯಲಾಗುತ್ತಿತ್ತು. ಆದಕಾರಣ ಇಲ್ಲಿಯ ಸಮುದಾಯ ನಾನಾರೀತಿಯ ವಸ್ತ್ರಕ್ಕೆ, ವೈವಿಧ್ಯಮಯವಾದ ಉಡುಪಿನ ವಿನ್ಯಾಸಗಳಿಗೆ ತೀರಾ ಮಾರು ಹೋದವರಲ್ಲ. ಸಹಜವಾಗಿಯೆ ತಮ್ಮ ವೃತ್ತಿಗೆ, ಕಸುಬಿಗೆ ಪೂರಕವಾಗಿ ಸ್ಥಳೀಯವಾಗಿ ದೊರಕುವ ಅಪರೂಪವಾಗಿ ಪಡೆಯುವ ವಸ್ತು ವಿಷಯಗಳಿಗೆ ಬದುಕು ಸೀಮಿತವಾಗಿತ್ತು. ಇಷ್ಟಾಗಿಯೂ ಈ ಪರಿಸರದ ಜನರಲ್ಲಿ ಸೌಂದರ್ಯ ಪ್ರಜ್ಞೆ ಇರಲಿಲ್ಲವೆಂದರ್ಥವಲ್ಲ. ವಿಶೇಷ ಸಂದರ್ಭಗಳಲ್ಲಿ ತಮ್ಮ ಉಡುಗೆ–ತೊಡುಗೆಗಳ ಬಗ್ಗೆ ಕಾಳಜಿಗಳಿದ್ದವು. ಅವರ ವೇಷಭೂಷಣಗಳಿಂದ ಅವರ ಸ್ಥಾನಮಾನ ಸಾಮಾಜಿಕ ಗೌರವ, ಪ್ರತಿಷ್ಠೆಗಳು ಅಭಿವ್ಯಕ್ತವಾಗುತ್ತಿದ್ದುವು.

ಹೀಗೆ ಒಂದು ಶತಮಾನದ ಹಿಂದಿನ ಮಲೆನಾಡ ಪರಿಸರವನ್ನು ಈ ನೆಲದ ಪರಿಸರದಲ್ಲಿ ಹುಟ್ಟಿ ಬಂದ ಕೆಲವು ಬರಹಗಾರರ ಕೃತಿಗಳ ಮೂಲಕ ಅವಲೋಕಿಸಿದಾಗ ಈ ಪರಿಸರದ ಜನಸಮುದಾಯದ ಉಡುಪಿನ ಬಗ್ಗೆ ಕೆಲವು ಸಂಗತಿಗಳನ್ನು ವಿಶ್ಲೇಷಣೆ ಮಾಡಬಹುದು. ಡಾ.ಅಂಬಳಿಕೆ ಹಿರಿಯಣ್ಣ ಅವರ ಮಲೆನಾಡಿನ ವೈಷ್ಣವ ಒಕ್ಕಲಿಗರ 'ಸಂಸ್ಕೃತಿ' ಎಂಬ ಕೃತಿಯಲ್ಲಿ[೧೨] ಮಲೆನಾಡ ಒಕ್ಕಲಿಗರ ಅಂದಿನ ಉಡುಪಿನ ಬಗ್ಗೆ ಎರಡು ರೀತಿಯಲ್ಲಿ ವಿವರಿಸಿದ್ದಾರೆ.

೧. ನಿತ್ಯದ ಉಡುಗೆಗಳು ೨. ವಿಶೇಷ ಸಂದರ್ಭದಲ್ಲಿ ತೊಡುವ ಉಡುಗೆಗಳು

ಸದಾಕಾಲ ಗದ್ದೆ–ತೋಟಗಳಲ್ಲಿ ಕೆಲಸ ಮಾಡುತ್ತಿರುವುದರಿಂದ ಉಡುಪು ಧಾರಣೆ ಅತ್ಯಂತ ಸರಳ. ಸಾಮಾನ್ಯವಾಗಿ ಒಳ ಉಡುಪಾದ ಲಂಗೋಟಿ ಮೇಲೆ ಮೊಣಕಾಲಿನಿಂದ ಮೇಲಕ್ಕೆ ಮುಚ್ಚುವಂತೆ, ಸೊಂಟಕ್ಕೆ ಮೋಟು ಪಂಜೆಯನ್ನು ಪುರುಷರು ಸುತ್ತಿಕೊಳ್ಳುತ್ತಿದ್ದರು. ಮೈಗೆ ಕಸೆ ಅಂಗಿ, ತಲೆಗೆ ಟೋಪಿ, ಕಿವಿಗೆ ಒಂಟಿ, ಕೈಗೆ ಬೆಳ್ಳಿ ಪಾಟ್ಲಿ, ಕಾಲಿಗೆ ಬೆಳ್ಳಿಸರಿಗೆ ಇಷ್ಟರ ಮೇಲೆ ಹೆಗಲ ಮೇಲೊಂದು 'ಕಂಬಳಿ'

ಇದು ಸರ್ವೋಪಯೋಗಿ, ಚಳಿಯಾದರೆ ಹೊದೆಯಲು, ಮಳೆ ಬಂದಾಗ ಸೂಡಲು, ಮಲಗುವಾಗ ಹಾಸಲು ಬಳಕೆಯಾಗುವಂತಹದು. ಜೊತೆಗೆ ಸೊಂಟದಲ್ಲಿ ಎಲೆ ಅಡಿಕೆ ಚೀಲ ಸದಾ ಸಿಲುಕಿಕೊಂಡಿರುತ್ತಿತ್ತು.

ವಿಶೇಷ ಸಂದರ್ಭಗಳೆಂದರೆ ಪೇಟೆ–ಪಟ್ಟಣಕ್ಕೊ, ಸಂಬಂಧಿಕರ ಮನೆಗೊ, ಮದುವೆ ಇತ್ಯಾದಿ ಸಮಾರಂಭಗಳಿಗೊ ಹೋಗುವಾಗ ಉಡುಗೆಯಲ್ಲಿ ವಿಶೇಷವಿರುತ್ತಿತ್ತು. ಒಳ ಉಡುಪಾದ ಲಂಗೋಟಿ ಮೇಲೆ ಮೊಳಕಾಲಿನಿಂದ ಸ್ವಲ್ಪ ಕೆಳಕ್ಕೆ ಇಳಿದಿರುವಂತೆ ಕಚ್ಚೆ, ಸಡಿಲತೋಳಿನ ಕಸೆ ಅಂಗಿ, ಕರಿಯಕೋಟು, ಕೆಂಪು ರುಮಾಲು, ಹೆಗಲ ಮೇಲೆ ಶಲ್ಯ, ಕಿವಿಯಲ್ಲಿ ದೊಡ್ಡ ಹರಳೊಂಟಿಗಳು, ಬೆರಳಲ್ಲಿ ಚಿನ್ನದ ಉಂಗುರ, ಕಾಲಿಗೆ ಹೂಕೂರಿಸಿದ ಚಪ್ಪಲಿ ಧರಿಸುತ್ತಿದ್ದರು.

ಈ ಮೇಲಿನ ವಿವರಣೆಗೆ ಉದಾಹರಣೆಯಾಗಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಹಳೆಮನೆ ಸುಬ್ಬಣ್ಣ ಹೆಗಡೆ ಅವರು ಮೇಗವರಳ್ಳಿ ಪೇಟೆಗೆ ಹೊರಟ ಸಂದರ್ಭದಲ್ಲಿ ಅವರ ವೇಷ ಹೀಗಿತ್ತು.

"ತಲೆಗೆ ಮುಂಡಾಸು ಸುತ್ತಿದ್ದರು. ಒಂದು ಕಸೆಕಟ್ಟುವ ನಿಲುವಂಗಿಯನ್ನು ಮೊಳಕಾಲು ಮೀರುವಂತೆ ತೊಟ್ಟಿದ್ದರು, ಕೆಂಪಂಚಿನ ಕಚ್ಚೆ ಹಾಕಿದ್ದರು. ಕೈಯಲ್ಲಿ ಉದ್ದವಾದ ಬೆತ್ತದ ದೊಣ್ಣೆಯನ್ನು ಹಿಡಿದಿದ್ದರು".[೧೩]

ಇದು ಅಂದಿನ ಮಲೆನಾಡಿನ ಒಕ್ಕಲಿಗ ಸಮುದಾಯದ ಹಿರಿಯರ ವೇಷದ ಮಾದರಿಯನ್ನು ತಿಳಿಸುತ್ತದೆ. 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಬರುವ ಕೆಲವು ಪಾತ್ರಗಳ ವೇಷಗಳ ನಿರೂಪಣೆ ಆ ಪರಿಸರದ ಜನರ ಸಂಸ್ಕೃತಿ, ಸಂಪತ್ತು, ಅಂತಸ್ತು, ಸ್ಥಾನಮಾನ ಮೊದಲಾದುದನ್ನು ಪ್ರತಿನಿಧಿಸುವಂತೆ ಚಿತ್ರಿತವಾಗಿದೆ. ಚಂದ್ರೇಗೌಡರ ದರ್ಬಾರು ಎಂಬ ಭಾಗದಲ್ಲಿ ಚಂದ್ರೇಗೌಡನ ಮನೆಯ ಹಜಾರದಲ್ಲಿ ಕುಳಿತಿರುವ ಚಿತ್ರಗಳು ಹೀಗಿವೆ. ಶ್ರೇಣೀಕೃತ ಸಮಾಜದ ಮೇಲು ವರ್ಗದ ವೆಂಕಪ್ಪ ಜೋಯಿಸರ ಚಿತ್ರ–

"ಒಂದು ಮಣೆಯ ಮೇಲೆ ಪದ್ಮಾಸನ ಹಾಕಿ ಕುಳಿತಿದ್ದರು. ಶೂದ್ರರ ಮನೆಯ ಜಮಖಾನ ಮೊದಲಾದ ವಸ್ತ್ರಾದಿಗಳನ್ನು ಮುಟ್ಟುವುದು ಸಂಪ್ರದಾಯ ಬ್ರಾಹ್ಮಣರಾಗಿದ್ದ ಅವರ ಮಡಿ ಮೈಲಿಗೆ ಎಂದು ಅವರ ಮತವಾಗಿತ್ತು. ಅವರು ಅಂಗಿ ಮೊದಲಾದ ನವೀನ ವಸ್ತುಗಳನ್ನು ತೊಟ್ಟಿರಲಿಲ್ಲ. ಆರ್ಷೇಯವಾಗಿ ಬಂದಿದ್ದ ಮೈ ಚರ್ಮವೇ ಅವರಿಗೆ ವಸನವಾಗಿತ್ತು. ಆದರೆ ಗೌರವಾರ್ಥವಾಗಿ ಬಂದ ಬಿಳಿಯ ಬಟ್ಟೆಯನ್ನು ಹೊದೆದಿದ್ದರು. ಮೊಳಕಾಲಿನವರೆಗೆ ಕಚ್ಚೆ ಹಾಕಿದ್ದರು........

ಅವರ ಉದ್ಯೋಗಗಳಲ್ಲಿ ಮುಖ್ಯವಾದುದು ದೇವರ ಪೂಜೆ, ನಿಮಿತ್ತ ನೋಡುವುದು, ಭವಿಷ್ಯತ್ತು ಹೇಳುವುದು.

ಚಂದ್ರೇಗೌಡನ ಒಕ್ಕಲು ಮತ್ತು ಸಾಲಗಾರನಾದ ಅಣ್ಣಯ್ಯಗೌಡ ಜಮಖಾನದ ಮೇಲೆ ಕುಳಿತಿದ್ದ. 'ಒಂದು ಅಂಗಿ ಹಾಕಿ, ಮೊಳಕಾಲವರೆಗೆ ಅಡ್ಡಪಂಚೆ ಸುತ್ತಿದ್ದರು. ಬಟ್ಟೆಯೊಗೆಯದೆ ಎಷ್ಟೋ ವರ್ಷಗಳಾಗಿದ್ದವೊ ಏನೊ! ಅಂಗಿಗೆ ಮೇಲಿನ ಗುಂಡಿಗಳಿರಲಿಲ್ಲ, ಷರ್ಟು ಅವರ ಭಾಗಕ್ಕೆ ಮೊಲದ ಕೊಂಬಾಗಿತ್ತು........ ತಲೆಗೆ ಒಂದು ಕೆಂಪು ವಸ್ತ್ರ ಸುತ್ತಿದ್ದರು.........

ಚಂದ್ರೇಗೌಡನ ಮನೆಯ ಹಲಗೆಯ ಮೇಲೆ ಕೂತಿದ್ದ ಹಳೇಪೈಕದ ತಿಮ್ಮನ ವೇಷ 'ಹತ್ತಾರು

ತೇಪೆ ಹಾಕಿದ್ದ ಹರಕು ಅಂಗಿಯನ್ನು ತೊಟ್ಟು ಕಸೆ ಹಾಕಿದ್ದನು. ಅವನು ಸುತ್ತಿಕೊಂಡಿದ್ದ ಕೊಳೆಪಂಚೆ ಎಷ್ಟು ಮೋಟಾಗಿತ್ತೆಂದರೆ ಕೌಪೀನ ಪ್ರಪಂಚವೂ ಗೊತ್ತಾಗುತ್ತಿತ್ತು".

ಕಾದಂಬರಿಯ ಆರಂಭದಲ್ಲಿ ಹೂವಯ್ಯ ರಾಮಯ್ಯನ ಟ್ರಂಕು ಹೊತ್ತು ಬರುವ ಗಾಡಿನಿಂಗ ಮತ್ತು ಪುಟ್ಟಣ್ಣರ ವೇಷ–

ಗಾಡಿನಿಂಗ 'ತಲೆಗೆ ಸುತ್ತಿದ್ದ ಕೆಂಪು ವಸ್ತ್ರ......... ಯಾರೋ ದಾನ ಮಾಡಿದ್ದ ಗುಂಡಿಯಿಲ್ಲದ ಕೋಟು..... ಮೊಳಕಾಲವರೆಗೆ ಸುತ್ತಿದ ಪಂಚೆ ಕೊಳೆಯ ಬೀಡಾಗಿತ್ತು.......

ಜಾತಿಯಲ್ಲಿ ನಿಂಗನಿಗಿಂತ ಮೇಲುವರ್ಗದ ಪುಟ್ಟಣ್ಣನ ವೇಷ ಬಹಳ ಭಿನ್ನವಾಗಿಯೇನೂ ಇರಲಿಲ್ಲ "ತಲೆಯ ಮೇಲೊಂದು ಕರಿಯ ಹಾಸನದ ಟೋಪಿ......... ಅವನು ಸುತ್ತಿದ್ದ ಪಂಚೆಯೇನೊ ಕಾಲಿನ ತುದಿಯುವರೆಗೂ ಇತ್ತು. ಅದು ಬಿಳಿಯುದು ಎನಿಸಲು ಪ್ರಯತ್ನ ಪಡುತ್ತಿತ್ತೇ ಹೊರತು ಬಿಳಿಯದಾಗಿರಲಿಲ್ಲ."[೧೪]

ಮೇಲ್ಕಂಡ ವಿವಿಧ ಜನ ತೊಟ್ಟಿರುವ ಉಡುಪು ಕೇವಲ ಉಡುಪಾಗಿರಲಿಲ್ಲ ; ಅವರು ತೊಟ್ಟ ಉಡುಪು ಮತ್ತು ಕುಳಿತ ಜಾಗಗಳು ಭಾರತೀಯ ಸಮಾಜದ ಶ್ರೇಣೀಕೃತ ವ್ಯವಸ್ಥೆಯನ್ನೇ ಅಭಿವ್ಯಕ್ತಿಸುತ್ತದೆ. ಮಡಿವಂತರಾದ ವೆಂಕಪ್ಪ ಜೋಯಿಸರು ಶೂದ್ರರ ಮನೆಯ ಬಟ್ಟೆಯನ್ನು ಮುಟ್ಟುವುದು ಮೈಲಿಗೆ ಎಂಬ ಕಾರಣಕ್ಕೆ ಮರದ ಮಣೆಯ ಮೇಲೆ ಪದ್ಮಾಸನ ಹಾಕಿ ಕುಳಿತಿದ್ದಾರೆ. ಚಂದ್ರೇಗೌಡನ ಸಾಲಗಾರರೇ ಆದರೂ ಜಾತಿ ಶ್ರೇಣಿಯಲ್ಲಿ ಮೇಲಿರುವುದರಿಂದ ಸಾಲಿಗ ಎಂಬ ಮುಜುಗರ ಕಾಡುವುದಿಲ್ಲ. ಅದೇ ಜಮಖಾನದ ಮೇಲೆ ಕುಳಿತ ಅಣ್ಣಯ್ಯಗೌಡ ಚಂದ್ರೇಗೌಡರಂತೆ ಒಕ್ಕಲಾಗಿದ್ದರೂ ಚಂದ್ರೇಗೌಡನ ಜಮೀನ್ದಾರಿ ಕೈಕೆಳಗಿರುವ ಬಡಗೇಣಿದಾರ, ಸಾಲಗಾರ–ಸಾಲದ ಶೂಲಕ್ಕೆ ಸಿಲುಕಿ, ಅಸಹಾಯಕತೆಯಿಂದ ತೊಳಲಾಡುವ ದುಃಸ್ಥಿತಿಯನ್ನು ಆತನ ಉಡುಗೆಯೇ ಎತ್ತಿ ತೋರಿಸುತ್ತದೆ. ಮರದ ಹಲಗೆ ಬೆಂಚಿನ ಮೇಲೆ ಕುಳಿತ ಹಳೇ ಪೈಕದ ತಿಮ್ಮ ಸ್ವಂತ ಜಮೀನು ಹೊಂದದ, ಕಳ್ಳು ಕುಯ್ಯುವ ಕಾಯಕವೆ ಮುಖ್ಯ ಕಸುಬಾಗಿ ಹೊಂದಿರುವ ಈತನಿಗೆ ಉಡುಪಿನ ಬಗ್ಗೆಯಾಗಲಿ, ಶುಚಿತ್ವದ ಬಗ್ಗೆ ಅರಿವಿಲ್ಲ ; ಬೇಕಾಗಿಲ್ಲ ಹಾಗೆಯೇ ಜಾತಿ ಶ್ರೇಣಿಯಲ್ಲಿ ಒಕ್ಕಲಿಗ ಸಮುದಾಯದ ಪುಟ್ಟಣ್ಣ ಮತ್ತು ತಳ ಸಮುದಾಯ ನಿಂಗರ ಉಡುಪಿನಲ್ಲಿ ಗಮನಾರ್ಹ ವ್ಯತ್ಯಾಸವೇನೂ ಇಲ್ಲ. ಕಾರಣ ಇಬ್ಬರ ದುಡಿಮೆ, ಒಡೆಯರ ಅವಲಂಬನೆ ಒಂದೇ ಒಂದೇ ರೀತಿಯಾದ್ದಾದರಿಂದ, ಅದು ಉಡುಪಿನಲ್ಲೂ ವ್ಯಕ್ತವಾಗುತ್ತಿತ್ತು.

ಎಂ.ಕೆ.ಇಂದಿರಾ ಅವರು 'ಫಣಿಯಮ್ಮ' ಕಾದಂಬರಿಯಲ್ಲಿ ಬ್ರಾಹ್ಮಣರ ಉಡುಪಿನ ಬಗ್ಗೆ ಹೀಗೆ ದಾಖಲಿಸುತ್ತಾರೆ – "ಪಿಳ್ಳೆಜುಟ್ಟು, ಧೋಟಾ ಪಂಚೆ, ಹೆಗಲ ಮೇಲೊಂದು ಅಂಗವಸ್ತ್ರ ಇಷ್ಟೇ ಅಂದಿನವರ ದಿನನಿತ್ಯದ ಉಡುಪು. ತೀರ್ಥಹಳ್ಳಿ ಎಳ್ಳಮಾವಾಸೆಗೆ, ಉಡುಪಿ ಪರ್ಯಾಯಕ್ಕೆ, ಶೃಂಗೇರಿ ನವರಾತ್ರಿ ಉತ್ಸವಕ್ಕೆ ಹೋಗುವಾಗ ಮಾತ್ರ ಅವರ ಜನ್ಮದ ಏಕೈಕ ವೈಭವದ ಉಡುಪಾದ ತುಂಬು ತೋಳಿನ ಕಸೆ ಅಂಗಿ ತೊಟ್ಟು ಕಚ್ಚೆ ಪಂಚೆ ಉಟ್ಟು, ತಲೆಗೆ ಕೆಂಪು ವಸ್ತ್ರ ಸುತ್ತುತ್ತಿದ್ದರು........"[೧೫]

ಈ ಮೇಲಿನ ಚಿತ್ರಣಗಳನ್ನೆಲ್ಲಾ ಗಮನಿಸಿದಾಗ ಮಲೆನಾಡ ಪರಿಸರದಲ್ಲಿ ಜೀವನಕ್ರಮದಲ್ಲಿ

ಉಡುಪು ವಿಶಿಷ್ಟವಾದುದು ಎಂದುಕೊಂಡರೂ ಸೂಕ್ಷ್ಮವಾಗಿ ಅವಲೋಕಿಸಿದಾಗ ಒಟ್ಟು ಭಾರತೀಯ ಜೀವನ ಕ್ರಮದಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ವೇಷ ಭೂಷಣವೂ ನೆಲಸಿತ್ತು ಎಂಬುದು ಕಂಡುಬರುತ್ತದೆ. ಮಣ್ಣಿನ ಕೆಲಸಕ್ಕೆ ಅಂಟಿಕೊಳ್ಳದೆ, ಪೌರೋಹಿತ್ಯ, ಸಂಭಾವನೆ ವೃತ್ತಿಯವರ ಉಡುಪಿನಲ್ಲಿ ಸರಳತೆ ಇದೆ ; ಸ್ವಚ್ಛತೆಯೆಂಬುದು ಸಹಜವಾಗಿದೆ. ಈ ಹಿನ್ನೆಲೆಯಲ್ಲಿ ವೈದಿಕರ ಉಡುಪು ಒಂದು ಬಗೆಯದಾಗಿದ್ದರೆ, ಬಹುಸಂಖ್ಯಾತ ಒಕ್ಕಲಿಗರಲ್ಲಿ ಆರ್ಥಿಕ ಸಬಲತೆ ಮತ್ತು ದುರ್ಬಲತೆಯನ್ನು ಅವಲಂಬಿಸಿದ ಉಡುಪಿನ ಬಳಕೆ ಇನ್ನೊಂದು ರೀತಿಯದು. ಹಳೆಮನೆ ಸುಬ್ಬಣ್ಣ ಹೆಗಡೆ (ಮಲೆಗಳಲ್ಲಿ ಮದುಮಗಳು) ಚಂದ್ರೇಗೌಡರಂತಹ ಜಮೀನ್ದಾರರ ಅಂತಸ್ತು, ದರ್ಪದ ಹಿನ್ನೆಲೆಯಲ್ಲಿ ಅವರ ಉಡುಪುಗಳಿದ್ದರೆ, ಅಣ್ಣೇಗೌಡ, ಪುಟ್ಟಣ್ಣನಂತವರು ಜಾತಿ ಶ್ರೇಣಿಯಲ್ಲಿ ಒಕ್ಕಲಿಗರೇ ಆದರೂ ಆರ್ಥಿಕ ದೌರ್ಬಲ್ಯ, ಒಕ್ಕಲಾಗಿರುವುದು-ಆಳಾಗಿರುವುದು ತಳ ಸಮುದಾಯದ ಜನರ ಉಡುಪಿಗಿಂತ ಭಿನ್ನವಾಗಿಯೇನೂ ತೋರುವುದಿಲ್ಲ. ಇಲ್ಲಿ ಕೆಲಸ ಮಾಡುವುದು ಜಾತಿ ತಾರತಮ್ಯವಲ್ಲ ; ವರ್ಗತಾರತಮ್ಯ

ಮಲೆನಾಡ ಪರಿಸರದ ಪುರುಷರಂತೆ ಸ್ತ್ರೀಯರು ತೊಡುವ ಉಡುಪಿನಲ್ಲಿ ಕೂಡ ಅಂತಹ ವೈವಿಧ್ಯವೇನೂ ಇರಲಿಲ್ಲ. ಒಕ್ಕಲಿಗ ಸಮುದಾಯದ ಸ್ತ್ರೀಯರು ಜಡ್ಡು ಸೀರೆ ಅಥವಾ 'ಕಾಗಿನಸೀರೆ' ಎಂದು ಪ್ರಸಿದ್ಧವಾಗಿದ್ದ ಕೈಮಗ್ಗದ ಹದಿನೆಂಟು ಮೊಳದ ಸೀರೆಯನ್ನು ಗೊಬ್ಬೆ ಹಾಕಿ ಉಡುತ್ತಿದ್ದರು. ಮೇಲು ಸೆರಗು ಹಾಕಿ ಉಡುತ್ತಿದ್ದವರ ಬಗ್ಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ. ವೇಶ್ಯೆಯರು ಮಾತ್ರ ಮೇಲು ಸೆರಗು ಹಾಕಿ ಉಡುವುದೆಂಬ ಭಾವನೆ ಆಗಿನ ಸಮಾಜದಲ್ಲಿ ಬೆಳೆದಿತ್ತು. ಸಾಮಾನ್ಯವಾಗಿ ಕುಪ್ಪಸ ಅಥವಾ ರವಿಕೆಯನ್ನು ತೊಡುತ್ತಿರಲಿಲ್ಲ. ಗೊಬ್ಬೆಯ ಮೇಲೆ ಬೆನ್ನು ಮುಚ್ಚಿಕೊಳ್ಳುವಂತೆ, 'ವಲ್ಲಿ' ಕಟ್ಟಿಕೊಳ್ಳುತ್ತಿದ್ದರು. ಮೂಗಿಗೆ ಬಟ್ಟು, ಕೆಳಕಿವಿಗೆ ಬೆಂಡೋಲೆ, ಮೇಲುಕಿವಿಗೆ ಕೊಟ್ಟಿಗೆ ಮುರ, ಕೈಗೆ ಬೆಳ್ಳಿಕಡಗ, ಮಣ್ಣಿನ ಬಳೆ, ಕಾಲುಂಗುರ ತೊಡುತ್ತಿದ್ದರು. ಅವಿವಾಹಿತ ಹೆಣ್ಣು ಮಕ್ಕಳು ಹನ್ನೆರಡು ಮೊಳದ ಜಡ್ಡುಸೀರೆ, ಮೂಗುಬಟ್ಟು, ಕೈಬಳೆ ಇತ್ಯಾದಿ ತೊಡುಗೆಗಳಿದ್ದವು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಹಳೆಮನೆ ಸುಬ್ಬಣ್ಣ ಹೆಗಡೆ ಮಗಳು ಮಂಜಮ್ಮ "ಗೊಬ್ಬೆ ಸೆರಗು ಬಿಗಿದು ಕಟ್ಟಿ, ಸೀರೆಯ ಬಹುಭಾಗದ ವಿಸ್ತೀರ್ಣವನ್ನೆಲ್ಲಾ ಸೊಂಟಕ್ಕೆ ಸುತ್ತಿ, ಉಳಿದಿದ್ದನ್ನು ಆದಷ್ಟು ಕೃಪಣತೆಯಿಂದ ನಿರಿಮಾಡಿ ಹರಡಿಗೆ ಮೇಲೆ ಮೊಳಕಾಲಿನವರೆಗೆ ನೀಡಿ ಉಟ್ಟಿದ್ದಳು. ಮಗಳು ತೊಟ್ಟಿದ್ದ ಮೂಗುತಿ, ಬುಗುಡಿಸರ, ಎಸಳ ಸರಪಣಿ ಮೊದಲಾದ ಆಗಿನ ಕಾಲದ ಮೆಚ್ಚಿನ ಸ್ಥೂಲಾಭಿರುಚಿಯ ಭಾರಾಲಂಕಾರಗಳನ್ನು ನೋಡುತ್ತಾ......... ತಂದೆ ಸುಬ್ಬಣ್ಣ ಹೆಗಡೆ ಕುಣ್ತುಂಬಿ ಬಂದವು"[೧೬] ಉಡುವ ಸೀರೆಯಾಗಲಿ, ತೊಡುವ ಆಭರಣಗಳಾಗಲಿ ಸೂಕ್ಷ್ಮಕ್ಕಿಂತ ಸ್ಥೂಲತೆಗೆ ಹೆಚ್ಚು ಮಹತ್ವ ನೀಡುತ್ತಿದ್ದರು. ಅಲ್ಲದೆ ಪುರುಷನ ನಿರ್ದೇಶನವೂ ಇದೆ.

ಎಂ.ಕೆ.ಇಂದಿರಾ ಅವರ 'ಫಣಿಯಮ್ಮ' ಕಾದಂಬರಿಯಲ್ಲಿ ಬರುವ ವಸ್ತ್ರದ ಬಗ್ಗೆ ಮಾಹಿತಿ ಹೀಗಿದೆ "ಹಳ್ಳಿಗೆ ಬಳೆಗಾರ ಬಂದಾಗ ಆತ ತರುವ ಒಂದು ಬಗೆಯ ಕರಿಪಟ್ಟೆ ಬಳೆಯನ್ನು ಮನೆ ಮಂದಿಯೆಲ್ಲಾ ಹೆಣ್ಣುಮಕ್ಕಳು ತೊಟ್ಟುಕೊಳ್ಳುತ್ತಿದ್ದರು. ಸಣ್ಣ ಮಕ್ಕಳಿಗೆ ಪೇಟೆಯಿಂದ 'ಪರಕಾರ' ಹೊಲಿಸಿ ತರುತ್ತಿದ್ದರು........ ಎಂಟು ವರ್ಷಕ್ಕೆ ಹದಿನೆಂಟು ಮೊಳದ 'ಕೊರನಾಡ ಕಿರಗಿ' ಉಡಿಸುತ್ತಿದ್ದರು........

ಒಂಬತ್ತು ತುಂಡಿನ ರವಿಕೆಯನ್ನು ಮನೆಯ ಮುದಕಿಯರು ಯಾರಾದರೂ ಕತ್ತರಿಸಿ ಕೊಟ್ಟರೆ ಅದನ್ನು ಹುಡುಗಿಯರು ತಮಗೆ ಬಂದ ಹಾಗೆ ಹೊಲಿದುಕೊಳ್ಳಬೇಕು. ಅಂದ-ಚಂದ ಕೇಳುವವರಾರು......... ಧರ್ಮಾವರ, ಕಂಚಿ, ಕುಂಭಕೋಣ ಸೀರೆಗಳೆಂದರೆ ಅಂದಿನ ಸಾಹುಕಾರರ ಮನೆಗಳಲ್ಲಿ ಮಾತ್ರ ಕಾಣಬೇಕು. ಮಧ್ಯಮ ವರ್ಗದವರಿಗೆ ಕುತ್ತಾಲದ ಸೀರೆಯ ಪೀತಾಂಬರ. ಅದೂ ಮದುವೆ ಮುಂಜಿಗಳಲ್ಲಿ ಮಾತ್ರ ಉಡುವುದು".[೧೭]

ಮಲೆನಾಡ ಪರಿಸರದ ಭಾರಿ ಶ್ರೀಮಂತರ ಮನೆಗಳಲ್ಲಿ ಬಿಟ್ಟು ಹೆಚ್ಚು ಕಡಿಮೆ ಎಲ್ಲ ಸಮುದಾಯದ ಸ್ತ್ರೀಯರು ಕೈಮಗ್ಗದ ಜಡ್ಡು ಸೀರೆಯನ್ನೇ ಉಡುತ್ತಿದ್ದರು ಎಂಬುದು ತಿಳಿಯುತ್ತದೆ. ಹಾಗೆ ಕುಪ್ಪಸ ತೊಡುವ ಕ್ರಮ ಏಕಿರಲಿಲ್ಲವೆಂದರೆ ಅದನ್ನು ಒಪ್ಪುವಂತೆ ಹೊಲಿದು ಕೊಡುವವ ಕಸುಬಿನವರು ಈ ಮಲೆನಾಡಿನಲ್ಲಿ ಯಾರೂ ಇರಲಿಲ್ಲ. ಇನ್ನು ಕೆಲವರು ತಮಗೆ ತೋಚಿದಂತೆ ಕೈ ಹೊಲಿಗೆಯ ಮೂಲಕ ನಿರ್ಮಿಸಿಕೊಂಡು ತೊಡುತ್ತಿದ್ದರು.

ಆರ್ಥಿಕ ಹಿನ್ನಲೆಯುಳ್ಳ ಮೇಲುವರ್ಗ, ಮಧ್ಯಮ ವರ್ಗದವರ ಉಡುಪಿನ ರೀತಿ ಈ ಬಗೆಯದಾದರೆ ತಳ ಸಮುದಾಯದ ಪಾಡು ಇನ್ನೂ ಶೋಚನೀಯವಾಗಿತ್ತು.

"ಗೌಡರ ಗದ್ದೆ ತೋಟಗಳಲ್ಲಿ ಕೆಲಸ ಮಾಡುವ ಗಟ್ಟದತಗ್ಗಿನ ಹೆಣ್ಣಾಳುಗಳಿಗೂ ಮೈಯನ್ನು ಮುಚ್ಚಿಕೊಳ್ಳುವಷ್ಟು ಬಟ್ಟೆ ಇರುವುದಿಲ್ಲ. ಕಪ್ಪುಸವನ್ನಂತೂ ಅವರು ಕಂಡೇ ಅರಿಯರು. ಸೊಂಟಕ್ಕೆ ಸುತ್ತಿಕೊಂಡ ಅಂತಿಮ ತುಂಡಿನ ಒಂದು ಸೆರಗೇ ಅವರ ಎದೆಯನ್ನೆಲ್ಲಾ ಗೋಪ್ಯವಾಗಿಡುವ ಕರ್ತವ್ಯವನ್ನು ಹಾಗೂ ಹೀಗೂ ಹೊರತ್ತಿತ್ತು. ವಯಸ್ಸಾದ ಹೆಣ್ಣಾಳುಗಳಂತೂ ಆ ಗೋಪ್ಯವನ್ನೂ ರಕ್ಷಿಸುವ ಶ್ರಮ ತೆಗೆದುಕೊಳ್ಳಲಾರದಷ್ಟು ಅಸಡ್ಡೆಯಿಂದಿರುತ್ತಿದ್ದರು".[೧೮] ಹೆಣ್ಣಾಳುಗಳ ಸ್ಥಿತಿ ಹೀಗಾದರೆ ಗಂಡಾಳುಗಳು ಸಾಮಾನ್ಯವಾಗಿ ಸದಾ ಗದ್ದೆ-ತೋಟಗಳಲ್ಲಿ ಕೆಲಸದಲ್ಲಿ ನಿರತವಾಗಿರುವುದರಿಂದ ಸೊಂಟಕ್ಕೆ ಸುತ್ತಿದ ಲಂಗೋಟಿ ಮಾತ್ರವೇ ಉಡುಪಾಗಿತ್ತು. ಅದೇ ಕೂಲಿ ಆಳುಗಳಿಗೆಲ್ಲಾ ಮುಖಂಡರಾದ ಮೇಸ್ತ್ರಿಯ ಉಡುಪು ಒಡೆಯರ ಉಡುಪಿಗೆ ಸಮೀಪಾಗಿತ್ತು. 'ಕಾನೂರು ಹೆಗ್ಗಡತಿ'ಯಲ್ಲಿ ಬರುವ ರಂಗಪ್ಪಶೆಟ್ಟಿ ಸುಬ್ಬಮ್ಮನ ತವರು ಮನೆಗೆ ಹೋಗುವಾಗ 'ಹೂಕೂರಿಸಿದ ಹುಂಚದ ಕಟ್ಟೆಯ ಗಿರ್ಕಿಮೆಟ್ಟು, ಕನ್ನಡ ಜಿಲ್ಲೆಯ ಕಚ್ಚೆಪಂಚೆ, ಕಪ್ಪುಗೀಟಿನ ಕೋಟು, ಹೆಗಲ ಮೇಲೆ ಕೆಂಪು ವಸ್ತ್ರ, ತಲೆಗೆ ನೀಲಿ ಬಣ್ಣದ ಕೋರೆ ರುಮಾಲು ಹಣೆಯಲ್ಲಿ ಕುಂಕುಮ, ಕಿವಿಗಳಿಗೆ ಹರಳೊಂಟಿ ಧರಿಸಿ ಹೊರಟಿದ್ದ. ಒಡೆಯ ಮತ್ತು ಆಳುಗಳು ಮಧ್ಯವರ್ತಿಯಾದ ಸೇರಿಗಾರ, ಆಳುಗಳ ಮುಖಂಡನಾಗಿ ಶೋಷಕ ಪ್ರತಿ ನಿಧಿಯಾಗಿರುವುದನ್ನು ಅವನ ಉಡುಪೇ ಹೇಳುತ್ತದೆ. ಈ ಉಡುಪೆ ಸದಾ ಯಜಮಾನರ ಪಕ್ಕದಲ್ಲಿ ಸರಿಸಮವಾಗಿ ನಡೆದುಕೊಳ್ಳುವಂತೆ ಮಾಡುತ್ತಿತ್ತು ಎಂಬುದನ್ನು ಗಮನಿಸಬಹುದು.

ಹೀಗೆ ಆಧುನಿಕತೆ ಪ್ರವೇಶವಾಗುವವರೆಗೆ ಮೇಲೆ ವಿವರಿಸಿದ ಮಲೆನಾಡ ಪರಿಸರದ ಉಡುಗೆ ತೊಡುಗೆಗಳಲ್ಲಿ ತೀವ್ರವಾದ ಬದಲಾವಣೆಗಳು ಕಂಡುಬರುವುದಿಲ್ಲ. ಆದರೆ ಸ್ಥಿತ್ಯಂತರವೆಂಬುದು ಕಾಲಗತಿಯಲ್ಲಿ ನಿರಂತರವಾದ ಪ್ರಕ್ರಿಯೆ. ಯಾವುದೇ ಕಾಲ, ದೇಶ, ಜನಾಂಗಗಳ ಬದುಕು ನಿಧಾನಗತಿಯಲ್ಲಿ ಸ್ಥಿತ್ಯಂತರ ಹೊಂದುವ ಪ್ರಕ್ರಿಯೆ ನಡೆಯುತ್ತಿರುತ್ತದೆ. ಅದಕ್ಕೆ ಬಾಹ್ಯವಾದ ಅಥವಾ ಒಳಗಿನ ಒತ್ತಡದ

ಅನಿವಾರ್ಯತೆಯಿಂದ ಈ ಹೊರಳಿಕೊಳ್ಳುವ ಕ್ರಿಯೆ ನಡೆಯುತ್ತಿರುತ್ತದೆ ಎಂಬುದನ್ನು ಬಲ್ಲೆವು. ಇಂಗ್ಲಿಷರ ಆಳ್ವಿಕೆಯಿಂದ ಆರಂಭವಾದ ಆಧುನಿಕತೆಯ ರಕ್ತದ ಹರಿವು ಭಾರತದ ನರನಾಡಿಗಳಲ್ಲಿ ಹರಿಯತೊಡಗಿದಾಗ, ಕಾಡು–ಬೆಟ್ಟಗಳಿಂದ ಆವೃತ್ತವಾದ ಮಲೆನಾಡಿನ ಬದುಕಿನೊಳಗೂ ಪ್ರವೇಶಿಸಿತು. ಆದ ಕಾರಣ ಎಲ್ಲೆಡೆಯಂತೆ ಇಲ್ಲಿಯೂ ಕೂಡ ತೀವ್ರವಾದ ಸ್ವರೂಪದಲ್ಲಿ ಸ್ಥಿತ್ಯಂತರಗಳು ಕಾಣಿಸತೊಡಗಿದವು. ಅಂತಹ ಆಧುನಿಕತೆ ಎದ್ದು ತೋರುತ್ತಿದ್ದುದು ವೇಷ ಭೂಷಣದಲ್ಲಿ.

ವೇಷ ಭೂಷಣದ ಮೂಲಕ ಪ್ರವೇಶಿಸಿದ ಆಧುನಿಕತೆ ಪರಂಪರಾಗತ ಬದುಕಿನ ಪರಿಸರದಲ್ಲಿ ಉಂಟುಮಾಡಿದ ಬೆರಗು, ಸಂಭ್ರಮ, ಆತಂಕ, ಸಂಘರ್ಷ, ಸಂಮಿಲನವನ್ನು ಈ ಪರಿಸರದಿಂದ ಬಂದ ಲೇಖಕರ ಕೃತಿಗಳಲ್ಲಿ ನಾವು ಗುರುತಿಸಿಕೊಳ್ಳಬಹುದಾಗಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪಾದ್ರಿಯ ಜೊತೆಯಲ್ಲಿ ಬೆಟ್ಟಳ್ಳಿ ಪ್ರವೇಶಿಸುವ ಸಿಂಧುವಳ್ಳಿ ಚಿನ್ನಪ್ಪ ಕ್ರೈಸ್ತಧರ್ಮದ ಪ್ರಭಾವಕ್ಕೆ ಒಳಗಾಗಿ ಆತನ ವೇಷ ಭೂಷಣಗಳಲ್ಲಿ ಹೊಸತನ ಕಾಣಿಸಿಕೊಂಡಿತ್ತು. ಮತಾಂತರದ ಉದ್ದೇಶವನ್ನು ಹಿನ್ನಲೆಯಾಗಿಟ್ಟುಕೊಂಡ ಕ್ರೈಸ್ತ ಮಿಷನರಿಗಳು ಹೊಸ ಬಗೆಯ ವಸ್ತು, ಉಡುಪಿನ ಮೂಲಕ ಈ ಪರಿಸರದ ಯುವ ಜನಾಂಗವನ್ನು ಮೊದಲಿಗೆ ಆಕರ್ಷಿಸಿದರು. ಇಲ್ಲಿಯ ಚಿನ್ನಪ್ಪ–ದೇವಯ್ಯನಂತಹ ಯುವಕರು ಕ್ರೈಸ್ತಧರ್ಮಕ್ಕೆ ಮನಸೋತುದು ಅದು ತರುವ ಆಧುನಿಕತೆಗಾಗಿ, ವಸ್ತು ಉಡುಪುಗಳಿಗಾಗಿ. "ಆಗ ತಾನೆ ಪೇಟೆಗಳಲ್ಲಿ ರೂಢಿಗೆ ಬರುತ್ತಿದ್ದ ಬನೀನು ತೊಟ್ಟು, ಅಂಗಿಕೋಟು ಹಾಕಿದ್ದನು. ಕಾಲಿಗೆ ಶಿವಮೊಗ್ಗದ ಕಡೆಯ ಮೆಟ್ಟನ್ನು ಹಾಕಿದ್ದನು. ಜುಟ್ಟಿಗೆ ಬದಲಾಗಿ ಕಿರಾಪು ; ಕಿವಿಗಳಲ್ಲಿ ಒಂಟಿ ಮಾಯವಾಗಿದ್ದವು".[೧೯]

ಬೆಟ್ಟಳ್ಳಿ ದೇವಯ್ಯನ ಬಂಧುವಾದ ಚಿನ್ನಪ್ಪ ಇಂತಹ ಹೊಸ ವೇಷಭೂಷಣದಲ್ಲಿ ಬಂದದ್ದು ಅಥವಾ ಪಾದ್ರಿ ಕರೆತಂದದ್ದು ಹೊಸತನವನ್ನು ಬಯಸುವ ದೇವಯ್ಯನನ್ನು ಆಕರ್ಷಿಸಲು. ನಿರೂಪಕರು ಈ ಸಂದರ್ಭವನ್ನು ಕಾಡಾನೆಯನ್ನು ಹಿಡಿಯಲು ಸಾಕಿದಾನೆ ಹಿಡಿದು ತರುವಂತೆ ಎಂದು. ಆಕರ್ಷಣೆಯನ್ನೊಡ್ಡುವ ಮತ್ತು ಆಕರ್ಷಿತನಾಗುವವರ ಉದ್ದೇಶದ ಹಿನ್ನಲೆ ಬೇರೆ ಬೇರೆಯಾಗಿರುವುದು ಆಧುನಿಕತೆಯ ಆಕರ್ಷಣೆಯ ವಿಪರ್ಯಾಸ. ದೇವಯ್ಯನಂತ ಯುವಕನಿಗೆ ಕ್ರೈಸ್ತನಾಗುವುದೆಂದರೆ ಆಧುನಿಕನಾಗುವುದೆಂದೇ ಅರ್ಥ. ಆ ಮೂಲಕ ಅದು ತರುವ ವೇಷಭೂಷಣ, ಕಟ್ಟುಪಾಡಿನ ಸಡಿಲ ಜೀವನ, ಮೋಜಿನ ಬದುಕನ್ನು ಆತ ಬಯಸಿದ್ದು. ಪಾದ್ರಿಯ ಪ್ರಭಾವದಿಂದ ಮನೆಗೆ ಗಡಿಯಾರ, ಲ್ಯಾಂಪು ಮೊದಲಾದ ವಸ್ತುಗಳನ್ನು ತಂದಾಗ ಬೆಟ್ಟಳ್ಳಿ ಮನೆ ಬೆರಗಿನಿಂದ ಸ್ವಾಗತಿಸುತ್ತದೆ. ಚಿನ್ನಪ್ಪನಂತೆ ಹೊಸ ರೀತಿ ಉಡುಪನ್ನು ಹಾಕಿಕೊಂಡು ಬಂದಾಗ ತಾಯಿ ಮತ್ತು ಹೆಂಡತಿಗೆ ಒಳಗೊಳಗೆ ಆನಂದವನ್ನುಂಟು ಮಾಡಿತ್ತು. ಆದರೆ ಜುಟ್ಟು ಬೋಳಿಸಿ ಕ್ರಾಪು ಬಿಟ್ಟಿದ್ದು ಆ ಮನೆಗೆ ಭಯಂಕರವಾಗಿಯೇ ಕಂಡಿತ್ತು. ತಂದೆ ಸತ್ತಾಗ ಮಾತ್ರ ಮಗನ ತಲೆಬೋಳಿಸುವ ಆಚಾರವಿರುವಾಗ, ತಂದೆ ಬದುಕಿರುವಾಗಲೇ ಹೀಗೆ ಮಾಡಿದ್ದು ಅಪಶಕುನದಂತೆ ಕಂಡಿತು. ಹೆಂಡತಿ ಮತ್ತು ತಾಯಿ ತಲ್ಲಣಗೊಂಡು ದೇವರಿಗೆ ತಪ್ಪುಕಾಣಿಕೆ ಕಟ್ಟಿದ್ದರು. ಆದರೆ ದಿನಗಳೆದಂತೆಲ್ಲ ದೇವಯ್ಯನ ಹೆಂಡತಿಗೆ ಜುಟ್ಟಿಗಿಂತಲೂ ಕ್ರಾಪೇ ತನ್ನ ಗಂಡನಿಗೆ ಲಕ್ಷಣವಾಗಿ ಕಾಣುವಂತೆ ತೋರಿತು.

ಆಧುನಿಕತೆ ನಮ್ಮೊಳಗೆ ಪ್ರವೇಶಿಸುವಾಗ ತರುವ ಆತಂಕ, ಆಕರ್ಷಣೆ ಈ ಬಗೆಯದು. ಎಲ್ಲ ಕಾಲಕ್ಕೂ ಹಳತು ಮತ್ತು ಹೊಸದರ, ಸಂಪ್ರದಾಯ ಮತ್ತು ಆಧುನಿಕತೆ ಸಂಘರ್ಷ ನಡದೇ ಇರುತ್ತದೆ. ಅಂತೆಯೇ ಮಲೆನಾಡ ಪರಿಸರದ ಒಂದು ಸಮುದಾಯದ ಪರಂಪರಾಗತವಾದ ಜೀವನ ಕ್ರಮದೊಳಗೆ ಆಧುನಿಕತೆ ತಂದ ಬಿಳಿವಸ್ತ್ರ, ಕ್ರಾಪು, ನಗರದ ಚಪ್ಪಲಿ ಮುಂತಾಗಿ ಆಧುನಿಕ ವೇಷ ಭೂಷಣಗಳು ಒಂದು ಕೌಟುಂಬಿಕ ಪರಿಸರದಲ್ಲಿ ಗೊಂದಲವನ್ನು, ದ್ವಂದ್ವವನ್ನು ಹುಟ್ಟುಹಾಕಿತು. ದೇವಯ್ಯನಲ್ಲಾಗುವ ಬಾಹ್ಯ ಬದಲಾವಣೆಗೆ ತಂದೆ ಕಲ್ಲೇಗೌಡರ ಪ್ರತಿಕ್ರಿಯೆ ತಟಸ್ಥವಾದುದು. ತಾಯಿ ಬಟ್ಟೆಗೆ ಮನಸೋತರೂ ಕ್ರಾಪಿಗೆ ಕಂಗಾಲಾಗುತ್ತಾಳೆ. ಆದರೆ ಹೊಸತಲೆಮಾರಿನ ಹೆಣ್ಣಾದ ಮುಗ್ಧಳಾದ, ಸಂಪ್ರದಾಯದ ಕಟ್ಟುಪಾಡುಗಳಲ್ಲಿ ಬೆಳೆದು ಬಂದ ದೇವಮ್ಮನಿಗೆ ಸಾಂಪ್ರದಾಯಿಕ ಹಿನ್ನೆಲೆಯ ಕಾರಣ ಮೊದಲಿಗೆ ಕ್ರಾಪು ಅಪಶಕುನದಂತೆ ಕಂಡರೂ ಕ್ರಮೇಣ ಹಿತವಾಗಿ ಚೆಲುವಾಗಿ ಕಾಣತೊಡಗುತ್ತದೆ. ಅಂತಕ್ಕನ ಮಗಳು ಕಾವೇರಿ ದೇವಯ್ಯನಿಗೆ ಸೋಲುವುದು ಆತನ ಶ್ರೀಮಂತಿಗೆಗಾಗಿಯಲ್ಲ ; ಆತನ ಕ್ರಾಪಿಗೆ, ಹೊಸ ರೀತಿಯ ಬಟ್ಟೆಗೆ.

ವಸಾಹತುಶಾಹಿ ತಂದ ಆಧುನಿಕತೆಯ ಪ್ರಮುಖ ಲಕ್ಷಣವೇನೆಂದರೆ ಯಾರು ಅದರ ವಶನಾಗುತ್ತಾನೊ ಆತ ತನ್ನ ಪರಂಪರಾಗತವಾದ ಜೀವನಕ್ರಮ ಅಥವಾ ಸ್ಥಳೀಯ ರೂಢಿ, ಆಚರಣೆಗಳ ಬಗ್ಗೆ ಕೀಳಾದ ಮನಸ್ಥಿತಿಯನ್ನು ಮೂಡಿಸುವುದು. ಕ್ರಾಪು ಬಿಟ್ಟ ದೇವಯ್ಯನಿಗೆ ಹೆಂಡತಿಯ ಮುಂಗೈ ಹಚ್ಚೆ ಕುಚ್ಚಿಸಿಕೊಳ್ಳದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಅಷ್ಟೇ ಅಲ್ಲ ಇಲ್ಲಿಯ ರೀತಿ ಗೊಬ್ಬೆ ಕಟ್ಟಿ ಸೇರೆ ಉಡುವುದಕ್ಕಿಂತ ಆ ಪಾದ್ರಿ ಮನೆಯವರು ಉಡುವ ಹಾಗೆ ಉಟ್ಟರೆ ಎಷ್ಟು ಚೆನ್ನಾಗಿರುತ್ತದೆ ಎಂದು ಹೆಂಡತಿಯನ್ನು ಪ್ರಶ್ನಿಸುವುದರ ಮೂಲಕ ಆಕೆಯನ್ನು ಆಧುನಿಕ ವೇಷ ಭೂಷಣಕ್ಕೆ ಸೆಳೆಯುವ ಪ್ರಯತ್ನ ಮಾಡುತ್ತಾನೆ.

ಹೀಗೆ ಆಧುನಿಕತೆ ತಂದ ನವೀನ ಮಾದರಿಯ ವೇಷ ಭೂಷಣ ವಸ್ತುಗಳ ಬಗ್ಗೆ ಹಿರಿಯ ತಲೆಮಾರು ಅಂತಹ ಗೌರವವನ್ನೇನೂ ತೋರಿಸಲಿಲ್ಲ. ಆದರೆ ಹೊಸ ತಲೆಮಾರಿಗೆ ವಯೋಮಾನಕ್ಕೆ ಅನುಗುಣವಾಗಿ ಸಹಜವಾಗಿಯೇ ರೋಮಾಂಚನವನ್ನುಂಟು ಮಾಡಿದವು. ಅಂತೆಯ ಹಿರಿಯರ ಆಕ್ಷೇಪಣೆಗಳ ನಡುವೆಯೂ ಯುವಕರು ತಮ್ಮ ಬದುಕಿನ ವಿನ್ಯಾಸದೊಳಗೆ ಅಳವಡಿಸಿಕೊಳ್ಳುವ ಪರಿ, ಆಧುನಿಕತೆ ಎಂಬುದು ಸಂಪ್ರದಾಯದೊಳಗೆ ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದ್ದುದನ್ನು ಕಾಣಬಹುದು. ಸಾಂಪ್ರದಾಯಿಕತೆ ಮತ್ತು ಆಧುನಿಕತೆ ಮುಖಾಮುಖಿಯಾಗುತ್ತಲೇ ಸಾಂಪ್ರದಾಯಕತೆಯನ್ನು ಹಿಂದಿಕ್ಕಿ ಆಧುನಿಕತೆ ಜನಪ್ರಿಯವಾಗಿರುತ್ತಿರುವುದನ್ನು ಗಮನಿಸಬಹುದು. ಕ್ರಾಪಿನ ಕ್ರಾಂತಿ ಎಂತಹ ಬಹುಮುಖ ಸಂಗತಿಯಾಗುತ್ತದೆ ಎಂದರೆ ಭಾರತೀಯ ಸಾಮಾಜಿಕ ಜೀವನದಲ್ಲಿ ಕೆಳಜಾತಿಯೊಬ್ಬನ ವೇಷಭೂಷಣಗಳು ಮೇಲುಜಾತಿಯವರಲ್ಲಿ ಎಂದೂ ಪ್ರಿಯವಾಗಿ, ಮೋಹಕವಾಗಿ, ಆದರಣೀಯವಾಗಿ ಕಂಡಿಲ್ಲ. ಆದರೆ ದೇವಯ್ಯನ ಆಧುನಿಕ ವೇಷ ಕಲ್ಲೂರು ದೇವಸ್ಥಾನದ ಪರಿಸರದಲ್ಲಿ ಹೊಸ ಸಂಚಲನವನ್ನೇ ಉಂಟು ಮಾಡಿತು.

"ಕೆದರು ಕ್ರಾಪಿನ ತಲೆ, ಹರಳೊಂಟಿನಿಂದ ಹೊಳೆವ ಕಿವಿ, ಕರಿಯ ಕುಡಿಮೀಸೆ, ಹೊನ್ನುಂಗರದ

ಬೆರಳು, ನಶ್ಯಬಣ್ಣದ ಕೋಟು ಬಿಳಿಮಲ್ಲಿನ ಕಚ್ಚೆ ಪಂಚೆ......... ಕ್ರೈಸ್ತ ಪಾದ್ರಿಗಳ ಮೂಲಕ ಆಗತಾನೆ ಮೆಲ್ಲಗೆ ಪ್ರವೇಶಿಸುತ್ತಿದ್ದ ನವನಾಗರಿಕತೆಯ ಸ್ಥೂಲರುಚಿಯ ಲಕ್ಷಣಗಳಿಂದ ಸಮನ್ವಿತರಾದ ದೇವಯ್ಯಗೌಡರನ್ನು ನೋಡಿ ನೆರೆದವರೆಲ್ಲರೂ ಹೆಂಗಸರೂ, ಗಂಡಸರೂ ಎಲ್ಲರು ಬೆರಗಾದರು ; ಕೆಲವರಲ್ಲಿ ಕರುಬು ತಲೆ ಹಾಕಿತ್ತು".[೨೦]

ದೇವಯ್ಯನ ಆಧುನಿಕ ವೇಷ ಮೇಲುಜಾತಿಯ ಐತಾಳನ ಹೆಂಡತಿಗೆ ಅತೀವ ಆಕರ್ಷಣೀಯವಾಗಿ ತೋರುತ್ತದೆ. ದೇವಯ್ಯನ ಹಾಗೆ ತನ್ನ ಪ್ರಿಯಕರ ನಾರಾಯಣ ಭಟ್ಟನೂ ಕ್ರಾಪು ಬಿಟ್ಟಿದ್ದಾದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಆ ರೂಪವನ್ನು ಮನದಲ್ಲಿ ಕಲ್ಪಿಸಿಕೊಂಡಳು.

ದೇವಯ್ಯನ ಪ್ರಭಾವದಿಂದ ಆತನ ಆಳು ಬಚ್ಚ ತಲೆಗೆ ಕೆಂಪು ವಸ್ತ್ರ, ಅಂಗಿ, ಮೊಳಕಾಲು ದಾಟಿದ ಅಡ್ಡ ಪಂಚೆ ತೊಟ್ಟಿದ್ದು ತಳ ಸಮುದಾಯದಕ್ಕೆ ಹುಬ್ಬೇರಿಸುವಂತೆ ಮಾಡಿತ್ತು.

ಒಟ್ಟಾರೆ ಈ ಆಧುನಿಕತೆಯ ಪರಿಣಾಮ ಮಲೆನಾಡ ಮನೆ ಮನೆಯಲ್ಲಿ ಚರ್ಚೆಯ ಸಂಗತಿಯಾಗಿ ಮೆಚ್ಚುಗೆ, ಅಸಡ್ಡೆಗೆ, ವ್ಯಂಗ್ಯಕ್ಕೆ ಒಳಗಾದ ವಿಚಾರವಾಗಿ ಕ್ರಾಪು-ಉಡುಪುಗಳು ಒಂದು ಬಗೆಯ ಸ್ಥಗಿತ ಅಥವಾ ನಿಧಾನಗತಿಯ ಪ್ರಪಂಚಕ್ಕೆ ತೀವ್ರತರವಾದ ಸಂಚಲವನ್ನುಂಟು ಮಾಡಿದವು. ಈ ಹಿನ್ನೆಲೆಯಲ್ಲಿ ಭಾರತದಂತಹ ಹಳ್ಳಿಗಳ ಪರಿಸರದ ಜೀವನ ಕ್ರಮದಲ್ಲಿ ಪರಕೀಯ ಸಂಸ್ಕೃತಿಯ ಪ್ರವೇಶ ಉಂಟು ಮಾಡಿದ ತಲ್ಲಣಗಳು, ಅದು ತಂದ ಪರಿವರ್ತನೆಗಳು ಗಮನಾರ್ಹವಾದುದು.

'ಕಾನೂರು ಹೆಗ್ಗಡತಿ' ಕಾದಂಬರಿಯು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ನಂತರದ ಕಾಲಘಟ್ಟದ ಅಂದರೆ ಸರಿ ಸುಮಾರು ೧೯೨೦-೩೦ರ ದಶಕದ ಕಾಲಾವಧಿಯ ಸಂದರ್ಭವನ್ನು ಒಳಗೊಂಡಿದೆ. ಈ ಕೃತಿಯ ಆರಂಭದಲ್ಲೇ ತೀರ್ಥಹಳ್ಳಿ ಕಲ್ಲುಸಾರ ದಾಟಿಕೊಂಡು ಬರುವ ಹೂವಯ್ಯ ರಾಮಯ್ಯರಿಬ್ಬರ ಪ್ರವೇಶದ ಚಿತ್ರವೇ ಮಲೆನಾಡಿಗೆ ಆಧುನಿಕತೆ ಪ್ರವೇಶದ ಸಂಕೇತದಂತಿದೆ. ಆಧುನಿಕ ಶಿಕ್ಷಣ ಬಯಸಿ ಹಳ್ಳಿಯಿಂದ ನಗರಕ್ಕೆ ನಿರ್ಗಮಿಸಿ ಆಧುನಿಕತೆಯನ್ನು ಮೈಗೂಡಿಸಿಕೊಂಡು ಹಳ್ಳಿಗೆ ಪುನರಾಗಮನವಾದ ಸಂದರ್ಭ. ಇಬ್ಬರೂ ಆಧುನಿಕತೆಯ ಪ್ರಭಾವಕ್ಕೆ ಒಳಗಾದರೂ ಅದನ್ನು ತಮ್ಮದಾಗಿಸಿಕೊಂಡ ಬಗೆ ಮಾತ್ರ ಭಿನ್ನವಾಗಿತ್ತು. ಕಾದಂಬರಿಯ ಮುಂದಿನ ಘಟನಾವಳಿಗಳಲ್ಲಿ ಇವರ ಪಾತ್ರವನ್ನು ಆರಂಭದ ಬಾಹ್ಯ ಚಿತ್ರಣದಲ್ಲೇ ಧ್ವನಿಸಿಬಿಡುತ್ತದೆ. ಹೂವಯ್ಯ ತಲೆಗೆ ಟೋಪಿ ಧರಿಸಿರಲಿಲ್ಲ. ಆತನ ಕ್ರಾಪು ಪೊದೆ ಪೊದೆಯಾಗಿ ತಲೆಯನ್ನೆಲ್ಲಾ ಆವರಿಸಿತ್ತು. ಒಂದು ತೆರನಾದ ಧೀರ ಸ್ವಚ್ಛಂದತೆಯಿಂದ ಮನೋಹರವಾಗಿ ಕಾಣುತ್ತಿದ್ದ. ಅವನ ವೇಷಭೂಷಣ ಆತನ ವ್ಯಕ್ತಿತ್ವವನ್ನು ಸಾರುತ್ತಿತ್ತು. ಆತನ ತಮ್ಮ ರಾಮಯ್ಯ ಖಾದಿ ಬಟ್ಟೆ ತೊಟ್ಟಿದ್ದ ; ತಲೆಗೊಂದು ಬಿಳಿಯ ಖಾದಿ ಟೋಪಿ, ಮೈಗೆ ನೀಲಿ ಬಣ್ಣದ ಕೋಟು, ಕೋಟಿನ ಕಿಸೆಯಲ್ಲಿ ಫೌಂಟನ್ ಪೆನ್ನು, ಕೈಯಲ್ಲೊಂದು ಕೈ ಗಡಿಯಾರ, ಅಂಚಿನ ಖಾದಿ ಪಂಚೆ ತೊಟ್ಟಿದ್ದ. ಲೌಕಿಕ ಸುಖಕ್ಕೆ ಹೆಚ್ಚು ಒಲಿದಂತೆ ಕಾಣುವ ಆತನಲ್ಲಿ ಮುಗ್ಧತೆ ಎದ್ದು ಕಾಣುತ್ತಿತ್ತೆ ಹೊರತು ಧೃಢತೆ ಕಾಣುತ್ತಿರಲಿಲ್ಲವೆಂದು ನಿರೂಪಕರೇ ಹೇಳುತ್ತಾರೆ. ಒಟ್ಟಿನಲ್ಲಿ ಈ ಸಹೋದರರ ಆಧುನಿಕ ಶಿಕ್ಷಣ ಮತ್ತು ನಗರ ಪರಿಸರದ ಪ್ರಭಾವದಿಂದ ಇವರ ವೇಷಭೂಷಣದಲ್ಲಿ ಆಧುನಿಕತೆ ಮತ್ತು ಗಾಂಧಿ ಚಿಂತನೆ ಒಟ್ಟಿಗೆ ಪ್ರವೇಶ ಮಾಡಿದ್ದವು ಎನ್ನಬಹುದು.

ಇವರ ವೇಷಭೂಷಣದ ಬಗ್ಗೆ ಪರಿಸರದ ಇತರೆಡೆಗಳಲ್ಲಿ ಯಾವ ಪ್ರತಿಕ್ರಿಯೆಯೂ ಅಷ್ಟಾಗಿ ಕಂಡು ಬರುವುದಿಲ್ಲ. ವಿದ್ಯಾವಂತರು ಎಂಬ ನೋಟದಲ್ಲಿ ಮೆಚ್ಚುಗೆ ಗೌರವವಿತ್ತು. ಆದರೆ ಚಂದ್ರೇಗೌಡನಿಗೆ ಮಾತ್ರ ಮಕ್ಕಳ ಈ ವೇಷಗಳ ಬಗ್ಗೆ ಕಟುವಾದ ವಿರೋಧವಿತ್ತು. ಅಣ್ಣಂದಿರ ಹಾಗೆ ಕ್ರಾಪು ಬಿಡಲು ಹೊರಟ ಬಾಲಕ ವಾಸುವನ್ನು ತಡೆದಿದ್ದರು. ಹೂವಯ್ಯ ರಾಮಯ್ಯರ ಸರಳ ನಿರ್ಮಲ ಉಡುಪು ಕೂಡ ಚಂದ್ರೇಗೌಡನ ಪಾಲಿಗೆ ಷೋಕಿಯಾಗಿ ತೋರುತ್ತಿತ್ತು.

"ನೆಲಾ ಗುಡಿಸುವಂತೆ ಬಿಳೀಪಂಚೆ ಉಟ್ಕಂಡು ಷೋಕಿ ಮಾಡಿ ಬಿಟ್ರೆ ಎಲ್ಲಾ ಬಂತು! ಆ ವೆಂಕಪ್ಪಯ್ಯ ಹೇಳ್ದಾಂಗೆ ಮಣ್ಣು ಕೆರೆಯೋ ಜಾತಿಗಳ ಕೈಗೆ ಲೇಖನಿ ಕೊಟ್ಟರೆ ಇನ್ನೇನಾಗ್ತದೆ".[೨೧]

ಕೃಷಿಯನ್ನೇ ಅವಲಂಬಿಸಿರುವ ಶೂದ್ರ ಸಮುದಾಯದ ಮಕ್ಕಳು ಬಿಳಿ ಉಡುಪಾಗಲಿ, ಶುಭ್ರತೆಯಿಂದ ಇರುವುದಾಗಲಿ ತರವಲ್ಲ ಎಂಬ ಪರಂಪರಾಗತ ಮತ್ತು ಮೌಢ್ಯದ ಮನಸ್ಸಿನ ಸ್ಥಾಪಿತ ನಿಲುವು ಇದು. ಶಿಕ್ಷಣ ಹೇಗೆ ನಿರಾಕರಣೆಗೆ ಒಳಗಾಗಿತ್ತೊ ಹಾಗೆ ಉಡುಪು ಕೂಡ ಇಂತಹ ನಿರಾಕರಣೆಗೆ ಒಳಗಾಗಿತ್ತು. ಶಿಕ್ಷಣ ಹೇಗೊ ಹಾಗೆ ಶುಚಿತ್ವ ಮತ್ತು ಅದರ ಸಂಕೇತವಾದ ಬಿಳಿಯುಡಿಗೆ ಕೇವಲ ಮೇಲುವರ್ಗ ಸೀಮಿತ ಎಂಬ ಪೂರ್ವಗ್ರಹ ಈ ಪರಿಸರದಲ್ಲಿ ಮನೆ ಮಾಡಿತ್ತು. ಹಾಗೆ ಸದಾ ಮಣ್ಣಲ್ಲಿ ಕೆಲಸ ಮಾಡುವ ಜನ ಶುಚಿತ್ವಕ್ಕೆ ಗಮನ ನೀಡಿದರೆ ಕಸುಬಿನಿಂದ ದೂರವಾಗುತ್ತಾರೆಂಬ ಆತಂಕ ನೆಲೆಸಿತ್ತು. ಆದ್ದರಿಂದ ಸ್ತ್ರೀ ಪುರುಷರಾದಿಯಾಗಿ ಶೂದ್ರಾದಿ ಸಮುದಾಯಗಳಲ್ಲಿ ವಾರಕ್ಕೆ ಒಂದು ದಿವಸ ಸ್ನಾನ ಮಾಡುವ ಪದ್ಧತಿ ಇತ್ತು. ಮಲೆನಾಡ ಒಕ್ಕಲಿಗರ ಪಾಲಿಗೆ ಶನಿವಾರ, ಸ್ನಾನದ ವಾರವಾಗಿತ್ತು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹಳೆಮನೆ ಶಂಕರಪ್ಪ ಹೆಗಡೆ ಬ್ರಾಹ್ಮಣ ಪ್ರಭಾವದಿಂದ ತಾನು ತನ್ನ ಹೆಂಡತಿ ಪ್ರತಿನಿತ್ಯ ಸ್ನಾನ ಮಾಡುತ್ತಿದ್ದರು. ಆತ ಬಿಳಿ ಉಡುಪನ್ನು ಧರಿಸುತ್ತಿದ್ದ. ಮಿಂದು ಮಡಿ ಉಟ್ಟು ತುಳಸಿ ಪೂಜೆ ಮಾಡುತ್ತಿದ್ದ ತಾನು ಸಂಸ್ಕಾರವಂತನಾಗಿದ್ದೇನೆಂದೂ, ತನ್ನ ಚಿಕ್ಕಪ್ಪ ಸುಬ್ಬಣ್ಣ ಹೆಗಡೆ ಇನ್ನೂ ಅಸಂಸ್ಕೃತರೆಂಬ ಭಾವನೆ ತಳೆದಿದ್ದ. ಈ ನಡವಳಿಕೆ ಸುಬ್ಬಣ್ಣ ಹೆಗಡೆಗೆ ಮನೆಹಾಳು ಕೆಲಸವಾಗಿ ಕಂಡಿತ್ತು. ತನ್ನ ಮಗ ತಿಮ್ಮಪ್ಪ ಹೆಗಡೆ ಬಿಳಿ ಬಟ್ಟೆ ಹಾಕಿಕೊಂಡಿದ್ದಕ್ಕೆ ಚೀಮಾರಿ ಹಾಕಿದ್ದರು. "ನೆರಮನೆ ಅಣ್ಣನ ಹಾಗೆ ಮನೆಹಾಳ್ ಬಾಳೇನಲ್ಲಾ ಕಲೀತಾ ಬರ್ತಿಯಲ್ಲೊ! ನಿನ್ನ ಈ ಕರಿ ಬೂಲಕ್ಕೆ ಯಾಕೋ ಈ ಬಿಳಿ ಬಟ್ಟೆ"[೨೨] ಎಂದು ಬ್ರಾಹ್ಮಣರ ಸಂಪ್ರದಾಯ ಅನುಸರಿಸುವ ಶಂಕರಪ್ಪ ಹೆಗಡೆ ಮತ್ತು ಅವನನ್ನು ಅನುಸರಿಸಲು ಹೊರಟ ತಿಮ್ಮಪ್ಪ ಹೆಗಡೆಯ ನಡವಳಿಕೆಯನ್ನು ಆತಂಕ ಮತ್ತು ಕೋಪದಿಂದ ವಿರೋಧಿಸುವ ಸುಬ್ಬಣ್ಣ ಹೆಗಡೆಯ ಮನದ ಹಿಂದಿರುವುದು ರೈತ ಮಕ್ಕಳಿಗೆ ಬಿಳಿಯುಡಿಗೆ ತರವಲ್ಲ ಎಂಬ ಪಾರಂಪರಿಕ ಮನಸ್ಥಿತಿ. ಸುಂದರವಾಗಿ ಕಾಣಬೇಕೆಂಬ ಮನೋಭಾವ ಮನೆ ಹಾಳು ಮಾಡುತ್ತದೆ ಎಂಬ ಆ ಕಾಲದ ಹಿರಿಯರ ಭೀತಿ ಕೆಲಸ ಮಾಡುತ್ತದೆ. ಸುಬ್ಬಣ್ಣ ಹೆಗಡೆ ಇತರರ ಹತ್ತಿರ ಶಂಕರಪ್ಪ ಹೆಗಡೆಯನ್ನು ವ್ಯಂಗ್ಯವಾಗಿ 'ಬಿರಾಂಬರು' ಎಂದೇ ಸಂಬೋಧಿಸುವುದು. ಇದೇ ರೀತಿಯ ಸಂದರ್ಭವನ್ನು ಬಿಳುಮನೆ ರಾಮದಾಸ್ ಅವರ 'ವ್ಯಾಮೋಹ' ಕಾದಂಬರಿಯಲ್ಲಿ ಬರುವ ರಾಮಯ್ಯನಲ್ಲೂ ಕಾಣಬಹುದು. 'ನೇರಲಮನೆ' ರಾಮಯ್ಯ ಬ್ರಾಹ್ಮಣರ ಹಾಗೆ ತಾನಾಗಬೇಕೆಂದು ನಾಲ್ಕು ಅಕ್ಷರ ಕಲಿತು ಎಫ್.ಎ.ವರೆಗೆ ಓದಿ ಪಾಸು ಮಾಡಿದವನು. ಇಂತವರು ಒಕ್ಕಲಿಗ ಸಮುದಾಯದಲ್ಲಿ

ತೀರ ವಿರಳವಾಗಿತ್ತು. ಅಂತಹ ವಿರಳರಲ್ಲಿ ಒಬ್ಬರಾದ ರಾಮಯ್ಯ ರಾಮಾಯಣ, ಮಹಾಭಾರತ ಕಥೆಗಳನ್ನು ಬ್ರಾಹ್ಮಣಗಿಂತಲೂ ಚೆನ್ನಾಗಿ ಹೇಳುತ್ತಿದ್ದರಿಂದಲೂ, ಹೊರಗಡೆ ಹೋಗುವಾಗಲೆಲ್ಲಾ ಕಚ್ಚೆ ಪಂಚೆ ಸರಿಗೆ ಪೇಟ ಬಿಳಿ ನಿಲುವಂಗಿ ಹಾಕಿಕೊಂಡು ಓಡಾಡುತ್ತಿರುವುದರಿಂದ ಸುತ್ತಮುತ್ತ ಪರಿಸರದಲ್ಲಿ ಪ್ರಸಿದ್ಧನಾಗಿದ್ದ. ಆ ಮೂಲಕ ಗೌರವ ಘನತೆಯನ್ನು ಪಡೆದುಕೊಂಡಿದ್ದ. ಆದರೆ ಇದು ಅಣ್ಣ ಪುಟ್ಟಪ್ಪಗೌಡನಿಗೆ ಸಹಿಸದ ಸಂಗತಿ. ಈ ಓದು, ಈ ವೇಷ ಮನೆಹಾಳು ಕೆಲಸವಾಗಿ ತೋರಿತು. ಆ ಕಾರಣಕ್ಕೆ ಮನೆಯೂ ಪಾಲಾಗಿತ್ತು. ಈ ಪರಿಸರದಲ್ಲಿ ರಾಮಯ್ಯನಂತಹ ವ್ಯಕ್ತಿಗಳು ಶಿಕ್ಷಣ ಪಡೆದು, ಆ ಮೂಲಕ ತಾವು ಇತರರಿಗಿಂತ ಭಿನ್ನವಾಗಿ ತೋರಲು ಬಿಳಿ ಪಂಚೆ, ಬಿಳಿ ಅಂಗಿ ಹಾಕಿಕೊಂಡು ದುಡಿಮೆಗಿಂತ ವಿಲಾಸದಲ್ಲಿ ಜೀವನ ಕಳೆದು ಮನೆಹಾಳುಮಾಡಿಕೊಂಡವರಿದ್ದರು. ರಾಮಯ್ಯ ಶಿವಮೊಗ್ಗದಲ್ಲಿ ಅಕ್ಕಿ ವ್ಯಾಪರ ಮಾಡಲು ಹೋಗಿ, ನಗರದ ವಿಲಾಸ ಜೀವನಕ್ಕೆ ಆಕರ್ಷಿತನಾಗಿ ವ್ಯಾಪಾರದಲ್ಲಿ ಸೋಲುಂಡು ಹಳ್ಳಿಗೆ ಹಿಂತಿರುಗಿದವನು. ಇಲ್ಲಿಯೂ ಇತರರಂತೆ ಕಷ್ಟಪಟ್ಟು ದುಡಿಯದೇ ಊರೂರು ಸುತ್ತಿಕೊಂಡು ವಿಲಾಸದಲ್ಲಿ ಕಳೆಯುತ್ತಿದ್ದ. ಆದ್ದರಿಂದ ಪುಟ್ಟಯ್ಯನಂತ ಅನಕ್ಷರಸ್ಥ ಮತ್ತು ದುಡಿಮೆಗೆ ತನ್ನನ್ನು ತೆತ್ತುಕೊಂಡವನಿಗೆ ಸೋಮಾರಿ ರಾಮಯ್ಯನ ನಡವಳಿಕೆಯನ್ನು ವಿರೋಧಿಸುವುದು ಸಹಜವಿದೆ. ಆದ್ದರಿಂದಲೇ ಅಣ್ಣನ ಮಗ ಶ್ರೀನಿವಾಸನ ಓದನ್ನು ನಿರಾಕರಿಸುತ್ತಾನೆ. ಆಧುನಿಕ ರೀತಿ ಉಟೋಪಾಚಾರ, ಉಡುಗೆ-ತೊಡುಗೆ ಇತ್ಯಾದಿಯನ್ನು ವ್ಯಂಗ್ಯವಾಗಿ ವಿರೋಧಿಸುತ್ತಾನೆ.

"ಶ್ರೀನಿವಾಸನನ್ನು ಪುಟ್ಟೇಗೌಡರು ಇಂಗ್ಲಿಷ್ ಗೌಡರು ಎಂದು ಕರೆಯುತ್ತಿದ್ದರು. ಅದಕ್ಕೆ ಕಾರಣ ಅವನು ನಿತ್ಯ ಸ್ನಾನ ಮಾಡುವುದರಿಂದ, ಬೆಳಗಿನ ಹೊತ್ತು ಗಂಜಿಯೂಟ ಮಾಡದೆ ಕಾಫಿ ತಿಂಡಿ ಮಾಡುವುದರಿಂದ, ನವೀನ ರೀತಿಯಲ್ಲಿ ಕ್ಷೌರ ಮಾಡಿಸಿಕೊಳ್ಳುವುದರಿಂದ, ಕಾಲಿಗೆ ಬೂಟಿಸ್ ಹಾಕುವುದರಿಂದ ಮತ್ತು ಯಾವಾಗಲೂ ಓದಲಿಕ್ಕೆಂದು ಶಿವಮೊಗ್ಗ, ಮೈಸೂರು, ಬೆಂಗಳೂರು ತಿರುಗುವುದರಿಂದ ಅವನಿಗೆ ಆ ಹೆಸರು ಬಂದಿತ್ತು".[೨೩]

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸುಬ್ಬಣ್ಣ ಹೆಗಡೆಯಾಗಲಿ, 'ಕಾನೂರು ಹೆಗ್ಗಡತಿ'ಯ ಚಂದ್ರೇಗೌಡ ಆಗಲಿ, 'ವ್ಯಾಮೋಹ'ದ ಪುಟ್ಟೇಗೌಡನಾಗಲಿ ತಮ್ಮ ಮಕ್ಕಳು ಆಧುನಿಕ ಶಿಕ್ಷಣದ ಮೂಲಕ ಪಡೆದುಕೊಂಡು, ಮಲೆನಾಡ ಪರಿಸರದಲ್ಲಿ ಹೊಸ ರೀತಿಯ ಜೀವನಕ್ರಮವನ್ನು ರೂಢಿಸಲು ಪ್ರಯತ್ನ ಪಡುವುದು ಮನೆಹಾಳು ಕೆಲಸವೆಂಬ ಆತಂಕದಿಂದ ಅದನ್ನು ವ್ಯಂಗ್ಯವಾಗಿ ವಿರೋಧಿಸುವುದನ್ನು ಕಾಣಬಹುದು. ಒಂದು ಕಾಲಕ್ಕೆ, ಶುಚಿತ್ವ, ಬಿಳಿಯ ಉಡುಗೆ ಕೇವಲ ಮೇಲುವರ್ಗದ ಸ್ವತ್ತು, ಅದನ್ನು ಅವರು ಮಾತ್ರ ತೊಡಲು ಅರ್ಹರೆಂಬ ಭಾವನೆ ಬೆಳೆದು ಬಂದಿತ್ತು. ಅಷ್ಟೇ ಅಲ್ಲ ಪರಂಪರಾಗತವಾದ ವೃತ್ತಿಯಿಂದ ತಮ್ಮ ಮಕ್ಕಳು ಎಲ್ಲಿ ದೂರವಾಗುತ್ತಾರೊ ಎಂಬ ಆತಂಕವೂ ಕಾಡುತ್ತದೆ. ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಬೇಕೆಂಬುದು ಅವರ ದೃಷ್ಟಿ. ಪೌರೋಹಿತ್ಯವೇ ಪ್ರಧಾನ ಕಸುಬಾದ ಮೇಲುವರ್ಗದಲ್ಲಿ ಬಿಳಿಯ ಉಡುಪು ಸರ್ವೇಸಾಧಾರಣ ಸಂಗತಿಯಾಗಿತ್ತು. ವ್ಯವಸಾಯದ ಬದುಕೇ ಪ್ರಧಾನವಾದ ಸಮುದಾಯಗಳಲ್ಲಿ ಅದರ ಅನುಕರಣೆ ಮತ್ತು ಅನುಸರಣೆ ಹೆಚ್ಚೇನು ನಡೆಯಲಿಲ್ಲ. ಅವರವರ ವೇಷಭೂಷಣಗಳು ಆರ್ಥಿಕ ಸ್ಥಿತಿ ಮತ್ತು ಕಸುಬನ್ನು ಅವಲಂಬಿಸಿರಬೇಕೆಂಬುದು ಅಲಿಖಿತ

ಸಂವಿಧಾನದಂತೆ ಈ ಸಮಾಜ ಗ್ರಹಿಸಿಕೊಂಡು ಬರಲಾಗಿತ್ತು. ಇಂತಹ ಪಾರಂಪರಿಕ ನಂಬಿಕೆಯನ್ನು ಆಧುನಿಕತೆ ತಂದುಕೊಟ್ಟ ತಿಳುವಳಿಕೆ, ಹೊಸತನದ ಬಯಕೆಗಳು ಒಡೆದು ಹಾಕಿದವು. ಅಂದರೆ ಭಾರತೀಯ ಶ್ರೇಣೀಕೃತ ವ್ಯವಸ್ಥೆಯ ಸಂದರ್ಭದಲ್ಲಿ ಅದನ್ನು ಮೀರಿ ಎಲ್ಲ ಸಮುದಾಯಗಳಿಗೂ ಕಲಿಕೆಗೆ ಮುಕ್ತವಾದ ಅವಕಾಶವಾಯಿತೊ ಹಾಗೆ ಉಡುಪು, ಕ್ರಾಪುಗಳು ಕೂಡ ಎಲ್ಲರೂ ಧರಿಸುವಂತಹ ರೂಢಿ ಬರತೊಡಗಿತು. ಅದನ್ನು ನೋಡುವ ಮತ್ತು ಸ್ವೀಕರಿಸುವ ಸಂದರ್ಭಗಳಲ್ಲಿ ಆದ ಸಂಘರ್ಷ ಸಹಜವಾದುದಾಗಿದೆ.

'ಕಾನೂರು ಹೆಗ್ಗಡತಿ'ಯ ಹೂವಯ್ಯನಾಗಲಿ, 'ವ್ಯಾಮೋಹ' ಕಾದಂಬರಿಯ ಶ್ರೀನಿವಾಸನಾಗಲಿ ಮೈಸೂರು, ಶಿವಮೊಗ್ಗ ನಗರಗಳಂತ ಪ್ರದೇಶದಿಂದ ಶಿಕ್ಷಣ ಪಡೆದು ಮರಳಿ ಮಲೆನಾಡು ಪ್ರವೇಶಿಸಿದ ಯುವಕರಲ್ಲಿ ಬಾಹ್ಯವಾಗಿ ಮತ್ತು ಆತಂರಿಕವಾಗಿ ಬದಲಾವಣೆಗಳು ಸಹಜವಾಗಿಯೇ ಗೋಚರಿಸುತ್ತದೆ. ಆಧುನಿಕ ಶಿಕ್ಷಣ ಪಡೆದು ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವ ಬೆಳಸಿಕೊಂಡ ಅವರಲ್ಲಿ ಈ ಪರಿಸರದ ಮೌಢ್ಯ, ಕಂದಾಚಾರ, ಜಾತೀಯತೆ ಮೊದಲಾದ ಸಂಗತಿಗಳ ಬಗ್ಗೆ ವಿರೋಧದ ನೆಲೆಯಲ್ಲಿ ದನಿ ಎತ್ತುತ್ತಾರೆ. ಅಸಹಾಯಕರ-ದಲಿತರ ಪರವಾದ ದೃಷ್ಟಿಕೋನದಿಂದ ಸುಧಾರಣೆ ತರಲು ಪ್ರಯತ್ನಿಸುತ್ತಾರೆ. ಆದಕಾರಣ ಅವರುಗಳು ಖಾದಿ ಉಡುಪು, ಸ್ವಚ್ಛತೆ, ನಡವಳಿಕೆಗಳಿಂದ ಆ ಪರಿಸರದ ಮೇಲೆ ಪ್ರಭಾವ ಬೀರಬಲ್ಲವರಾಗಿದ್ದರು.

ಹೂವಯ್ಯನ ಕ್ರಾಪು, ಖಾದಿ ಉಡುಪು, ಗ್ರಂಥಗಳ ಅಧ್ಯಯನ ಚಂದ್ರೇಗೌಡನಂತವರಿಗೆ ಷೋಕಿ ಮತ್ತು ಕುಟುಂಬದ ದುಡಿಮೆ-ವ್ಯವಹಾರಗಳ ಬಗ್ಗೆ ಬೇಜವಾಬ್ದಾರಿತನವಾಗಿ ಕಾಣಿಸುತ್ತದೆ. ಮನೆ ಪಾಲಾಗಲು ಅನೇಕ ಕಾರಣಗಳಲ್ಲಿ ಚಂದ್ರೇಗೌಡನಿಗೆ ಇದೂ ಒಂದು ಕಾರಣವಾಗುತ್ತದೆ. ಆದರೆ ಹೂವಯ್ಯ ಹೊಸ ಬಗೆಯ ಜೀವನಕ್ರಮವನ್ನು ನಡೆಸುತ್ತಲೇ ವ್ಯವಸಾಯವನ್ನೂ ಚೆನ್ನಾಗಿಯೆ ಮಾಡುತ್ತಾನೆ. ಆಳುಕಾಳುಗಳ ಜೊತೆ ಸೌಹಾರ್ದವಾಗಿ ಬೆರತು, ಅವರೊಂದಿಗೆ ತಾನೂ ಕೆಲಸ ಮಾಡುತ್ತಾನೆ. ಅವರಲ್ಲಿರುವ ಮೌಢ್ಯವನ್ನು ಹೋಗಲಾಡಿಸಲು ಪ್ರಯತ್ನಿಸುತ್ತಾನೆ ; ಸುಧಾರಣೆ ತರಲು ಪ್ರಯತ್ನಿಸುತ್ತಾನೆ. ಇದರ ಪರಿಣಾಮವಾಗಿ ಹೂವಯ್ಯನ ಸಂಪರ್ಕದಲ್ಲಿದ್ದ ಮುಗ್ಧ, ಅನಕ್ಷರಸ್ಥ, ಹುಂಬನಾದ ಸೋಮು ಬದಲಾಗುತ್ತಾನೆ.

ಸಾಮಾನ್ಯವಾಗಿ ಒಂದು ಕೌಪೀನ ಕಟ್ಟಿಕೊಂಡು, ಹೊಟ್ಟೆ ಬಿಟ್ಟುಕೊಂಡು, ಹಾಳೆ ಟೋಪಿ ಹಾಕಿಕೊಂಡು ಇರುತ್ತಿದ್ದ. ಹೆಚ್ಚೆಂದರೆ ಒಂದೂವರೆ-ಎರಡು ಗೇಣು ಅಗಲದ ಪಾಣಿಪಂಚೆಯನ್ನು ಸೊಂಟಕ್ಕೆ ಸುತ್ತಿಕೊಂಡಿರುತ್ತಿದ್ದ. ಇದು ಯಾವುದೇ ಆಳು ಮಗನೊಬ್ಬನ ಸಾಮಾನ್ಯ ಚಿತ್ರ. ಆದರೆ ಈ "ಒಂದು ಸೊಗಸಾದ ಹಳೆಯಕೋಟು ಹಾಕಿದ್ದಾನೆ ; ಮೊಣಕಾಲುದಾಟಿದ ಪಂಚೆಯುಟ್ಟಿದ್ದಾನೆ, ತಲೆಗೆ ಹಾಳೆ ಟೋಪಿಗೆ ಬದಲಾಗಿ ಹಳೆ ಹಾಸನದ ಟೋಪಿ ಹಾಕಿಕೊಂಡಿದ್ದಾನೆ! ಹೂವಯ್ಯನ ಸಂಪರ್ಕದಿಂದ ಇದ್ದಕ್ಕಿದ್ದ ಹಾಗೆ ಸೋಮನಿಗೂ ನಾಗರಿಕತೆ ಬಂದು ಬಿಟ್ಟಿದೆ".[೨೪]

ಹೂವಯ್ಯನ ಬೋಧನೆ, ಸಾಮಿಪ್ಯ ಸೋಮನಲ್ಲಿ ಇಂತಹ ಬದಲಾವಣೆಯನ್ನು ವೇಷಭೂಷಣದಲ್ಲಿ ಮಾತ್ರವಲ್ಲ ; ಈ ಉಡುಪು ಅವನಲ್ಲಿ ಆತ್ಮವಿಶ್ವಾಸವನ್ನೂ ತಂದಿದೆ. ಸೇರಗಾರನ ಎದುರಿನಲ್ಲಿ ವಾದಿಸುವ ಧೈರ್ಯ ತುಂಬಿದೆ. ಮುಂದಿನ ವರ್ಷ ತಾನೇ ಸೇರೆಗಾರನ ಗಟ್ಟದ ಕೆಳಗಿನಿಂದ ಜನ ತರುವ ಭರವಸೆಯೂ

ಮೂಡಿದೆ. ಹೀಗೆ ಆಧುನಿಕತೆಯಿಂದ ರೂಪಗೊಂಡ ಹೂವಯ್ಯನ ವ್ಯಕ್ತಿತ್ವ ಸುತ್ತಲ ಪರಿಸರದಲ್ಲಿ ಪ್ರಭಾವ ಬೀರುತ್ತ ಒಂದು ಬಗೆಯ ನಾವಿನ್ಯತೆಯನ್ನು, ಸುಧಾರಣೆಯನ್ನುಂಟು ಮಾಡುತ್ತಿತ್ತು. ಆದರೆ ಹೂವಯ್ಯನ ಸಂಗಡವೇ ಆಧುನಿಕ ಶಿಕ್ಷಣ ಪಡೆದು ಬಂದ 'ರಾಮಯ್ಯ'ನಲ್ಲಿ ಇಂತಹ ವ್ಯಕ್ತಿತ್ವ ಕಾಣಲಾರೆವು. ಕೃತಿಯ ಪ್ರಾರಂಭದಲ್ಲಿ ರಾಮಯ್ಯನ ವೇಷಭೂಷಣವೇ ಆಧುನಿಕತೆಯನ್ನು ಆತ ಮೈಗೂಡಿಸಿಕೊಂಡ ಬಗೆಯನ್ನು ಹೇಳುತ್ತಿತ್ತು. ಖಾದಿ ಅಂಗಿ ಹಾಕಿದ್ದ ಮೇಲೆ ಕೋಟು ಹಾಕಿದ್ದ, ಕ್ರಾಪು ಬಿಟ್ಟಿದ್ದ, ಟೋಪಿಯನ್ನು ಹಾಕಿದ್ದ, ಕೈ ಗಡಿಯಾರ, ಫೌಂಟನ್‌ಪೆನ್ನು ತೊಟ್ಟಿದ್ದ. ಆಧುನಿಕತೆ ತಂದ ವಸ್ತುಗಳಿಗೆ ಆತ ಹೆಚ್ಚು ಮಾರು ಹೋಗಿದ್ದ ಎನ್ನಬಹುದು. ಕಾನೂರು ಮನೆ ಪಾಲಾದ ಮೇಲೆ ಹೂವಯ್ಯನಿಂದ ದೂರವಾದಂತೆ, ತಂದೆ ಹಿಡಿತ ಹೆಚ್ಚಾದಂತೆ ಬದುಕಿನಲ್ಲಿ ಸೋಲುತ್ತಾ ಹೋಗುತ್ತಾನೆ. ಮದುವೆ ಸಂದರ್ಭದಲ್ಲಿ ಆತ ತೊಟ್ಟಿದ ಉಡುಪೇ ಅವನ ಅಧೋಗತಿಯನ್ನು ಹೇಳುತ್ತಿತ್ತು. "ಅವನ ಉಡುಪು ! ಅದರಲ್ಲಿ ನವೀನತೆ ಎನ್ನುವುದು ಲವಲೇಶವೂ ಕಾಣುತ್ತಿರಲಿಲ್ಲ......... ತಂದೆಯ ಅಭಿರುಚಿಗೆ ಸಂಪೂರ್ಣ ಶರಣಾಗಿದ್ದಂತೆ ತೋರುತ್ತಿತ್ತು......... ಜರಿಯ ಪೇಟದ ಒಳಗಡೆ ಕ್ರಾಪಿನ ಹೊಸ ರೋಗಕ್ಕೆ ಜುಟ್ಟಿನ ಹಳೆಯ ರೋಗ ಹಿಡಿದಿತ್ತು. ಗಾಂಧಿ ಟೋಪಿ, ಸ್ವದೇಶಿಗಳೆಲ್ಲ ಎಲ್ಲಿಯೇ ಗಾಳಿಯಲ್ಲಿ ಹಾರಿ ಹೋಗಿದ್ದವು.......... ಹೂವಯ್ಯನ ಸಹವಾಸದಿಂದ.......... ಖಾದಿ ಬಟ್ಟೆಗಳನ್ನು ಧರಿಸಲು ಪ್ರಾರಂಭಿಸಿದ್ದ ಸಿಂಗಪ್ಪಗೌಡರಿಗೂ ಇಸ್ಸಿ ಎನಿಸಿಬಿಟ್ಟಿತು! ಒಟ್ಟಿನಲ್ಲಿ ಕನಿಕರಕ್ಕೆ ಯೋಗ್ಯವಾಗಿದ್ದನು ರಾಮಯ್ಯ!"[೨೫]

ಇದೊಂದು ರೂಪಕ ಎನ್ನಬಹುದು. ಆಧುನಿಕ ಶಿಕ್ಷಣ ಪಡೆದು, ಆಧುನಿಕತೆಯು ತರುವ ವಸ್ತು ಸಂಗತಿಗಳನ್ನು ಸ್ವೀಕರಿಸಿಯೂ ಅದನ್ನು ತನ್ನದನ್ನಾಗಿ ಮಾಡಿಕೊಳ್ಳದೇ ಹೋದರೆ ಆಗುವ ಅನಾಹುತವನ್ನು ಅನಾವರಣಗೊಳಿಸುತ್ತದೆ. ಮಲೆನಾಡಿನಿಂದ ನಗರ ಪ್ರದೇಶಗಳಿಗೆ ವ್ಯಾಸಂಗಕ್ಕೆ ತೆರಳಿ ಹಿಂತಿರುಗಿದ ಅನೇಕ ಯುವಕರು ಇಲ್ಲಿಯ ಪರಿಸರದ ಜೀವನ ವಿಧಾನಕ್ಕೆ ಹೊಂದಿಕೊಳ್ಳಲಾಗದೆ, ಹೊಸಬಗೆಯ ಜೀವನವನ್ನು ಕಟ್ಟಿಕೊಳ್ಳಲಾಗದೆ ವಿಲಾಸಿಗಳಾಗಿ, ಅಸಮರ್ಥವಾಗಿ ಮನೆಯ ಅಧೋಗತಿಗೆ ಕಾರಣರಾದವರಿದ್ದಾರೆ. ಆದ್ದರಿಂದ ಕುವೆಂಪು ಹೂವಯ್ಯನಂತ ಪಾತ್ರ ಮೂಲಕ ಆಧುನಿಕತೆಯನ್ನು ತಮ್ಮ ಸಂಸ್ಕಾರಕ್ಕೆ ಬಳಸಿಕೊಂಡು ಪರಿಸರದ ಸುಧಾರಣೆಗೆ ಯತ್ನಿಸಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

'ಸಂಸ್ಕಾರ' ಕಾದಂಬರಿಯ ಕಾಲಾವಧಿ ಸುಮಾರು ಸ್ವಾತಂತ್ರ್ಯ ಪಡೆದ ಒಂದೆರಡು ವರ್ಷಗಳ ಹಿಂದಿನ ಅವಧಿ ಎನ್ನಬಹುದು. ಈ ಕಾಲಮಾನಕ್ಕೆ ಭಾರತದ ಒಟ್ಟಾರೆ ಚಿತ್ರಣ ಬೇರೊಂದು ರೂಪವನ್ನು ಪಡೆಯುತ್ತಿತ್ತು ಎನ್ನಬೇಕು. ನಮ್ಮ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡು ಸ್ವಾತಂತ್ರ್ಯಗಳಿಸುವ ಭರವಸೆ ಮತ್ತು ಸಮೀಪವಿದ್ದಂತಹ ಸಂದರ್ಭ ಮತ್ತು ಸ್ವತಂತ್ರ ಭಾರತ ಹೇಗಿರಬೇಕೆಂಬ ಚಿಂತನೆಯ ಕಾಲ ಕೂಡ ಹೌದು. ಈ ಹೊತ್ತಿಗಾಗಲೇ ಇಂಗ್ಲಿಷ್ ಶಿಕ್ಷಣ ಒಂದು ಭಿನ್ನವಾದ ಮನೋಧರ್ಮವನ್ನು ರೂಪಿಸಿತ್ತು. ಆಧುನಿಕತೆ ತಂದ ವಸ್ತುಗಳು, ಸೌಲಭ್ಯಗಳು ಹಳ್ಳಿಹಳ್ಳಿಗಳಿಗೆ ತಲುಪುತ್ತಿತ್ತು. 'ಕಾನೂರು ಹೆಗ್ಗಡತಿ' ಕಾದಂಬರಿಯ ಕೊನೆಯಲ್ಲಿ ಹತ್ತು ವರ್ಷಗಳ ನಂತರ ನೋಡುವಾಗ ಮಲೆನಾಡಿಗೆ ನವಜೀವನ ಕಾಲಿಟ್ಟಿದ್ದನ್ನು ವಿವರಿಸುತ್ತದೆ.

"ಕಾನೂರು ಮುತ್ತಳ್ಳಿಗಳಿಗೆ ಮಧ್ಯೆ, ರಸ್ತೆಗೆ ಸಮೀಪವಾಗಿ ಕಾಡಿನ ನಡುವೆ ಇದ್ದ ಕಳ್ಳಂಗಡಿ

ಕುಸಿದುಬಿದ್ದು......... ಪಾಳಾಗಿತ್ತು. ನಾಲ್ಕಾರು ಗ್ರಾಮಗಳಿಗೆ ಅನುಕೂಲವಾಗುವಂತೆ ಒಂದು ಆಸ್ಪತ್ರೆ, ಸ್ಕೂಲು, ಪೋಸ್ಟಾಫೀಸು, ಅಂಗಡಿಗಳು ಮೂಡಿ ವರ್ಧಿಸುತ್ತಿದ್ದವು. ಹಿಂದೆ ಬೈಸಿಕಲ್ಲಿನ ಪರಿಚಯಕ್ಕೂ ಪರದೇಶಿಯಾಗಿದ್ದ ಆ ರಸ್ತೆ ಮೋಟಾರುಕಾರು......... ಸ್ವದೇಶಿ ಖಾದಿಗಳ ಪ್ರಚಾರವೂ ತಕ್ಕಮಟ್ಟಿಗೆ ನಡೆದಿತ್ತು. ಗಾಂಧಿ ಟೋಪಿಗಳು ಆಗಾಗ ಬಂದು ಉಪನ್ಯಾಸ ಕೊಡುತ್ತಿದ್ದುವು. ಅಕ್ಷರ ಬಲ್ಲವರು ಪತ್ರಿಕೆಗಳನ್ನು ಓದಲು ಅಭ್ಯಾಸ ಮಾಡಿ ವಿಶಾಲ ಪ್ರಪಂಚದ ವಿಚಾರಗಳನ್ನು ಕುರಿತು ಮಾತಾಡುತ್ತಿದ್ದರು......... ಮೂಢಾಚಾರಗಳಿಗೆ ಬದಲಾಗಿ ಉತ್ಕೃಷ್ಟವಾದ ಮತವಿಧಾನಗಳು ಆಚರಣೆಗೆ ಬರುತ್ತಿದ್ದವು. ಕಾಡಿಗೆ ನಾಗರಿಕತೆ ಕಾಲಿಟ್ಟಿತು."[೨೬]

ಹೀಗೆ ಮಲೆನಾಡಿಗೆ ಆಧುನಿಕತೆ ಎಲ್ಲೆಲ್ಲೂ ಕಾಲಿಟ್ಟಂತಹ ಸಂದರ್ಭದಲ್ಲಿ ದೂರ್ವಾಸಪುರದಂತಹ ಅಗ್ರಹಾರದಲ್ಲಿ ಪುರಾತನ ಸಂಸ್ಕೃತಿಯೊಂದು ಒಳಗಿನಿಂದಲೇ ಕುಸಿಯ ತೊಡಗಿದೆ. ಅಗ್ರಹಾರದ ಹೊರಗೆ ನಡೆಯುತ್ತಿರುವ ಆಧುನೀಕರಣದ ಪ್ರಕ್ರಿಯೆ ನಿಧಾನವಾಗಿ ಅಗ್ರಹಾರವನ್ನು ಸಮೀಪಿಸಿದೆ. ಆಹಾರ, ವೇಷಭೂಷಣಗಳಂತಹ ಪ್ರಾಥಮಿಕ ನೆಲೆಯಲ್ಲಿ ಅದು ಗೋಚರಿಸುತ್ತದೆ. ನಾರಾಣಪ್ಪ ಮದ್ಯಪಾನ, ಮಾಂಸಾಹಾರ ಸೇವನೆ ಮಾಡುತ್ತಿದ್ದ. ಅಷ್ಟಿಷ್ಟು ಕಾಂಗ್ರೇಸ್ ವಿಷಯಗಳನ್ನು ಅಲ್ಲಿಂದ ಇಲ್ಲಿಂದ ಕಿವಿಯ ಮೇಲೆ ಹಾಕಿಕೊಂಡು ಬಂದು ಯುವಕರಿಗೆ ಖಾದಿ ಜುಬ್ಬ ಪಾಯಜಾಮ, ಬಿಳಿ ಟೋಪಿಯ ಫ್ಯಾಶನ್ ಕಲಿಸಿದ್ದ, ಲಕ್ಷ್ಮಣಾಚಾರ್ಯ ಅಳಿಯ ಶ್ರೀಪತಿ ಜುಟ್ಟನ್ನು ತೆಗೆಸಿ ನಾರಾಣಪ್ಪನಂತೆ ಕ್ರಾಪು ಬಿಟ್ಟಿದ್ದ. ನಾರಾಣಪ್ಪ ಪ್ರಜ್ಞಾಪೂರ್ವಕವಾಗಿ ಆಧುನಿಕತೆಯನ್ನು ಬಳಸಿಕೊಂಡು ಅಗ್ರಹಾರದ ಪರಂಪರಾಗತವಾದ ಸಂಪ್ರದಾಯವನ್ನು ಅಪವಿತ್ರಗೊಳಿಸಿ ನಾಶ ಮಾಡುತ್ತೇನೆಂಬ ಭ್ರಮೆಯನ್ನು ಹೊಂದಿದ್ದ. ಅವನ ಶಿಷ್ಯಂದಿರು ಅಗ್ರಹಾರದ ಕಟ್ಟುಕಟ್ಟಳೆಯನ್ನು ಮೀರಲು, ಭೋಗ ಜೀವನ ನಡೆಸಲು ಆತ ಬೋಧನೆಯನ್ನು ಬಳಸಿಕೊಂಡರು.

'ಕಾನೂರು ಹೆಗ್ಗಡತಿ'ಯಲ್ಲಿ ಹೂವಯ್ಯ ಮೈಸೂರಿನಂತ ನಗರಕ್ಕೆ ನಿರ್ಗಮಿಸಿ ಆಧುನಿಕ ರೀತಿಯ ಶಿಕ್ಷಣ-ಸಂಸ್ಕಾರ ಪಡೆದು ಮಲೆನಾಡಿಗೆ ಪುನರಾಗಮನದ ಕಥೆ ಇದೆ. ಅನಂತಮೂರ್ತಿ ಅವರ ಭಾರತೀಪುರದಲ್ಲಿ ಜಗನ್ನಾಥ ಇಂಗ್ಲೆಂಡಿಗೆ ನಿರ್ಗಮಿಸಿ ಉನ್ನತ ವ್ಯಾಸಂಗ ಪಡೆದು ಮಲೆನಾಡಿಗೆ ಪುನರಾಗಮನವಾದ ಕಥೆ ಇದೆ. ಈ ಎರಡೂ ಕೃತಿಗಳ ನಡುವೆ ಕಾಲದ ಅಂತರವಿದೆ. ಒಂದು ಸ್ವಾತಂತ್ರ್ಯ ಪೂರ್ವದ ಕಥೆಯಾದರೆ ಮತ್ತೊಂದು ಸ್ವಾತಂತ್ರ್ಯನಂತರದ ಕಥೆಯಾಗಿದೆ. ಆದ ಕಾರಣ ಲೇಖಕರ ಉದ್ದೇಶವು ಭಿನ್ನವಾದ ನೆಲೆಯಲ್ಲಿ ಸಮಾಜದ ಗ್ರಹಿಕೆ ಮತ್ತು ಚಲನಶೀಲತೆಯನ್ನು ಆಧುನಿಕ ಪ್ರಕ್ರಿಯೆಯನ್ನು ಚಿತ್ರಿಸುವುದನ್ನು ಕಾಣುತ್ತೇವೆ. ಆಧುನಿಕ ಶಿಕ್ಷಣ ಪಡೆದ ಹೂವಯ್ಯ ಆ ಮಲೆನಾಡ ಪರಿಸರಕ್ಕೆ ಹೊಸಬನಾಗಿ ಕಾಣುತ್ತಾನೆ. ಆತನಲ್ಲಿ ಉಂಟಾದ ಸಹಜವಾದ ಬದಲಾವಣೆ ಇತರರ ಅನುಕರಣೆಗೆ ಮತ್ತು ಅನುಸರಣೆಗೆ ಕಾರಣವಾಗುವುದನ್ನು ಗಮನಿಸಬಹುದು. ಹೂವಯ್ಯನ ಆಧುನಿಕತೆ ಈ ಪರಿಸರದಲ್ಲಿ ಕ್ರಾಂತಿಕಾರಕವಾದ ರೀತಿಯಲ್ಲಿ ಬದಲಾವಣೆ ತರಬೇಕೆಂಬ ಯಾವ ಹೋರಾಟಕ್ಕೂ ತೊಡಗಿಕೊಳ್ಳುವುದಿಲ್ಲ. ತನ್ನ ವೇಷ ಭೂಷಣ, ಬೋಧನೆಗಳಿಂದ ಇತರರಲ್ಲಿ ತಣ್ಣನೆಯ ಬದಲಾವಣೆಯನ್ನು, ಸುಧಾರಣೆಯನ್ನು ತರುತ್ತಾನೆ. ಆತ ಇತರರಿಗೆ ಮಾದರಿಯಂತೆ ಕಂಡು ಬರುತ್ತಾನೆ ಹೊರತು ಕ್ರಾಂತಿಕಾರಿಯಂತೆಯಲ್ಲ.

ಆದರೆ ಭಾರತೀಪುರ ಜಗನ್ನಾಥ ಸಾಮಾಜಿಕವಾಗಿ ಜಾತಿ ಶ್ರೇಣಿಯಲ್ಲಿರುವ ಬ್ರಾಹ್ಮಣ ಸಮುದಾಯಕ್ಕೆ ಸೇರಿದವನೂ, ಆರ್ಥಿಕವಾಗಿ ಜಮೀನ್ದಾರಿ ಪದ್ಧತಿಯ ವಾರಸುದಾರನೂ ಆದವನು. ಇಂಗ್ಲೆಂಡಿನಲ್ಲಿ ಉನ್ನತ ಶಿಕ್ಷಣ ಪಡೆದ ಜಗನ್ನಾಥನಲ್ಲಿ ಪ್ರಾಪ್ತವಾಗಿರುವ ವೈಚಾರಿಕತೆ ಮತ್ತು ವೈಜ್ಞಾನಿಕತೆಯಿಂದ ಒಟ್ಟು ಭಾರತೀಯ ಸಂದರ್ಭದಲ್ಲಿ ಜಾತಿ, ಧರ್ಮ, ಶ್ರೀಮಂತಿಕೆಯನ್ನು ಮೀರಿ ಸಾಮಾಜಿಕ ಕ್ರಾಂತಿಯನ್ನು, ಸಮಾನತೆಯನ್ನು ತರಬೇಕೆಂಬ ಪ್ರಜ್ಞಾಪೂರ್ವಕ ನೆಲೆಯಿಂದ ಕ್ರಿಯೆಯಲ್ಲಿ ತೊಡಗುತ್ತಾನೆ. ವಿದ್ಯಾವಂತ, ಶ್ರೀಮಂತ, ಒಡೆಯನ ಮಗ ಎಂಬ ಭಾವನೆಯಿಂದ ಮಲೆನಾಡ ಪರಿಸರದ ಜನ ಒಂದು ಅಂತರದಿಂದ ಜಗನ್ನಾಥನನ್ನು ನೋಡುತ್ತಾರೆ. ಆದ್ದರಿಂದ ಆತನಿಗೆ ಜನರನ್ನು ತಿಳಿಯುವುದೆಂದರೇನು? ಅವರ ಜೊತೆ ತೊಡಗುವುದೆಂದರೇನು? ಎಂಬ ಚಿಂತೆಗಳು, ಆಂತಕಗಳು ಅವನನ್ನು ಕಾಡಿದವು. ಒಡೆಯ ಆಳಿನ ಅಂತರವನ್ನು ಒಡೆಯಬೇಕೆಂಬ ಹಂಬಲದಿಂದ ಉಡುಪಿನಲ್ಲಿ ಸರಳತೆಯನ್ನು ತಂದುಕೊಳ್ಳುತ್ತಾನೆ.

"ಭಾರತೀಪುರಕ್ಕೆ ಬಂದವನೆ ಬಿಳಿಯ ಅಂಗಿ ಅಡ್ಡಪಂಚೆ ಉಡಲು ಪ್ರಾರಂಭಿಸಿದ ಸಾಹುಕಾರ್ರು ಎಷ್ಟು ಸರಳ ವ್ಯಕ್ತಿ ಎಂದು ಜನ ಹೊಗಳಿದರು. ಶಾನುಭೋಗರೇ ಸಾಹುಕಾರ, ಹಾಗೆ ಕಾಣ್ತಾರೆ ಎಂದು ಆಡಿಕೊಂಡರು."[೨೭]

ಈ ರೀತಿ ತನ್ನ ಮನೆಯ ಆಳುಗಳು ತನ್ನಂತೆಯೆ ಉಡುಗೆ ತೊಡಬೇಕೆಂದು ಬಿಳಿ ಪಂಚೆಯನ್ನು ಅವರುಗಳಿಗೆ ನೀಡುವುದಾಗಲಿ, ಮೊದಲಿಗೆ ಅವರ ಎದುರಿನಲ್ಲಿ ತಾನೇ ಸ್ವತಃ ಸರಳ ಉಡುಗೆ ತೊಡುವುದಾಗಲಿ ಆ ಮೂಲಕ ಸಮಾನತೆಯ ಆಶಯವನ್ನು ಸಾಧಿಸ ಬಯಸುತ್ತಾನೆ. ಸದಾ ಜಬರದಸ್ತಿನ, ಆಡಂಬರದ ವೇಷದಲ್ಲಿ ಒಡೆಯರನ್ನು ಕಂಡ ಜನಕ್ಕೆ ಜಗನ್ನಾಥನ ಸರಳತೆಯನ್ನು ಕಂಡು ಬೆರಗಿನಿಂದ ಮೆಚ್ಚಿ ಹೊಗಳುತ್ತಾರೆ. ಅದೇ ವೇಳೆ ಸಾಹುಕಾರ್ರು ತಮ್ಮ ಎಂದಿನ ವೇಷದಲ್ಲಿ ಇದ್ದರೆ ಅದು ಅವರಿಗೆ ಘನತೆಯೆಂತಲೂ, ಹಾಗೆ ಶಾನುಭೋಗ ಆ ವೇಷ ಹಾಕಿದ್ದಾನೆ ಎಂಬ ವ್ಯಂಗ್ಯವೂ ಕೆಲಸ ಮಾಡುತ್ತದೆ. ಆದ್ದರಿಂದ ವೇಷಭೂಷಣವೆಂಬುದು ವ್ಯಕ್ತಿತ್ವ ಮತ್ತು ಸ್ಥಾನಮಾನಗಳನ್ನು ಅಳೆದು ನೋಡುವ ದ್ವಂದ್ವಾತ್ಮಕ ನೆಲೆಯಲ್ಲಿ ನಿಂತಿರುತ್ತದೆ.

ಸಮಾನತೆಯ ಆಶಯದಿಂದ, ತಳ ಸಮುದಾಯದಲ್ಲಿ ಆತ್ಮಾಭಿಮಾನ ತುಂಬುವ ಬಯಕೆಯಿಂದ ಜಗನ್ನಾಥ ಇಡುವ ಹೆಜ್ಜೆಗೆ ಸ್ಪಂದಿಸಲಾರದೆ ಹೋಗುವಂತಹದನ್ನು ಕಾಣಬಹುದು. ಶತಶತಮಾನಗಳ ಜೀವನಕ್ರಮದಲ್ಲಿ ಅಕ್ಷರ ಲೋಕಕ್ಕೆ ವಂಚಿತರೂ, ಆಸ್ತಿಯ ಹಕ್ಕಿಗೆ ದೂರಾದವರೂ ಆದ ತಳ ಸಮುದಾಯ ಏಕಾಏಕಿ ಸಂಪ್ರದಾಯದಿಂದ ಕಳಚಿಕೊಳ್ಳಲಾರರು. ಅಂತೆಯೆ ಜಗನ್ನಾಥ ಕೊಟ್ಟ ಬಿಳಿ ಪಂಚೆಯನ್ನು ಮನೆಮಂದಿ ಹರಿದು ತುಂಡು ಹಂಚಿಕೊಂಡು 'ಕೌಪೀನ ಧರಿಸಿ' ಬಂದು ಜಗನ್ನಾಥನೆದುರಿಗೆ ನಿಲ್ಲುವುದು ಅದಕ್ಕೆ ಕನ್ನಡಿಯಂತಿದೆ. ಇದರಿಂದ ದಲಿತ, ಅಸ್ಪೃಶ್ಯ ಸಮಾಜಗಳು ತೊಟ್ಟು ಕಳಚಿದಂತೆ ಬದಲಾಗಲೊಲ್ಲರು. ಅಂತದ್ದೊಂದು ಸಾಮಾಜಿಕ ಬದಲಾವಣೆಗೆ ಕಾಲ ಪಕ್ವವಾಗದೆ ಇರುವುದು ಎದ್ದು ಕಾಣುತ್ತದೆ. ಜಗನ್ನಾಥ ಮತ್ತೆ ಆ ಹರಿಜನ ಯುವಕರಿಗೆ ಪಂಚೆಯನ್ನು ನೀಡಿ ಇಡಿಯಾಗಿ ತನ್ನಂತೆ ಉಟ್ಟುಕೊಂಡು ಬರುವಂತೆ ಹೇಳಿದಾಗ, ಅದರಂತೆ ಬಂದ ಆ ಯುವಕರಲ್ಲಿ ಉಂಟಾಗಿದ್ದ ಮುಜುಗರ, ಕಿರಿಕಿರಿ, ಅಪರಾಧಿ ಮನೋಭಾವದ ಚಿತ್ರ ಹೀಗಿದೆ.

"ಬಟ್ಟೆತೊಟ್ಟು ವಿಕಾರವಾಗಿ ಹೆಜ್ಜೆ ಹಾಕುತ್ತಾ, ಹತ್ತು ಜನ ಹೊಲೆಯರ ಯುವಕರು ಪೆಚ್ಚುಮುಖ ಹೊತ್ತು ಬಂದವು. ಬಟ್ಟೆ ಕೊಳೆಯಾದಿತೆಂದು ನೆಲದ ಮೇಲೆ ಕೂರಲೊಲ್ಲವು ; ಸಿಮೆಂಟ್ ಜಿಟ್ಟೆ ಹತ್ತಿ ಕೂರುವ ಧೈರ್ಯ ಮಾಡಲೊಲ್ಲವು. ದೊಡ್ಡ ತಪ್ಪನ್ನು ತಲೆಯ ಮೇಲೆ ಹೊತ್ತವರಂತೆ ಅಂಗಳದಲ್ಲಿ ನಿಂತವು.......... ಯಾರಾದರೂ ಬಿಳಿ ಬಟ್ಟೆಯಲ್ಲಿದ್ದ ತಮ್ಮನ್ನು ಕಂಡಾರೆಂದು ದಿಗಿಲು ಪಡುತ್ತಾ ನಿಂತಿವೆ........."[೨೮]

ಲಾಗಾಯ್ತಿನಿಂದಲೂ ತುಂಡುಬಟ್ಟೆ, ಮಾಸಿದ ಬಟ್ಟೆ ತೊಟ್ಟೆ ಅಭ್ಯಾಸವಿದ್ದ ದಲಿತ ಸಮುದಾಯಕ್ಕೆ ಬಿಳಿಬಟ್ಟೆ ಆಕರ್ಷಣೆಯ ಸಂಗತಿಯಾಗುವ ಬದಲು ಆತಂಕದ ಸಂಗತಿಯಾಗುತ್ತದೆ. ಸಹಜವಾಗಿ ಬದುಕುತ್ತಿದ್ದ ಅವರುಗಳಿಗೆ ಬಂಧನವೆನಿಸುತ್ತದೆ. ತಮ್ಮ ಬಿಳಿ ಬಟ್ಟೆಯನ್ನು ಇತರರು ಮೇಲು ವರ್ಗದವರು ತಮ್ಮನ್ನು ನೋಡು ಮಾಡಬಹುದಾದ ವ್ಯಂಗ್ಯ ಪರಿಹಾಸ್ಯವನ್ನು ಕಲ್ಪಿಸಿಕೊಂಡು ದಿಗಲು ಪಡುತ್ತವೆ. ದಾಸ್ಯವನ್ನೇ ಹಾಸಿ ಹೊದ್ದವನಿಗೆ ಸಮಾನತೆ ಬಯಸುವುದು ಅಪರಾಧ ಎನಿಸುತ್ತದೆ. ಅಪರೂಪಕ್ಕೆ ಕೆಳವರ್ಗದವ ತನ್ನ ವೇಷಭೂಷಣದಲ್ಲಿ ಬದಲಾವಣೆ ಕಂಡು ಆತನಿಗಿಂತ ಮೇಲುವರ್ಗಕ್ಕೆ ಅಹಸನೀಯವಾಗಿ ಕಾಣುತ್ತೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆರಂಭದಲ್ಲಿ ಪ್ರಯಾಣ ಹೊರಟ ಗುತ್ತಿಯ ಉಡುಪಿನಲ್ಲಿ ಮಾರ್ಪಾಟಾಗಿತ್ತು. ತಲೆಗೆ ಕೆಂಪು ವಸ್ತ್ರ ಸುತ್ತಿದ್ದ, ಮೈಗೆ ಕಸೆ ಅಂಗಿ ಹಾಕಿದ, ಪಂಚೆತುದಿ ಮೊಣಕಾಲನ್ನು ದಾಟಿತ್ತು. ಮುಖ ಕ್ಷೌರ ಮಾಡಿಕೊಂಡಿದ್ದ, ಗುತ್ತಿಯನ್ನು ಜಾತಿ ಶ್ರೇಣಿಯಲ್ಲಿ ಈತನಿಗಿಂತ ಸ್ವಲ್ಪ ಮೇಲಿರುವ ಈತನಂತೆಯೇ ಜೀತದಾಳಾಗಿರುವ ಮರಾಟಿ ಮಂಜನಿಗೆ ಹುಬ್ಬೇರಿಸುವಂತೆ ಮಾಡಿ 'ಒಳ್ಳೆದರೋಬಸ್ತಾಗಿದೀಯಲ್ಲಾ! ಎಂದು ಅಸೂಯೆ, ವ್ಯಂಗ್ಯದಿಂದಲೇ ಕೇಳಿದ್ದ. ಹಾಗೆ ಹೂವಳ್ಳಿ ಚಿನ್ನಮ್ಮನ ಮದುವೆ ಸಂದರ್ಭದಲ್ಲಿ ಹಳೆಮನೆ ಐಗಳ ಶಾಲೆ ಹುಡುಗರಾದ ತಿಮ್ಮ, ಕಾಡು, ಧರ್ಮರು ವಾಲಗದ ದನಿಗೆ ಮನಸೋತು ತಲೆಗೆ ಕೆಂಪು ಪಟ್ಟೆ ಎಲೆವಸ್ತ್ರ ಕರಿಗೀರಿನ ಅದ್ದಿ ಮೊಣಕಾಲಿವರೆಗೆ ಅಡ್ಡ ಪಂಚೆ ತೊಟ್ಟಿದ್ದು ವಾಲಗ ಊದುತ್ತಿರುವವನು ನಮ್ಮ ಕೆಲಸದಾಳು 'ಭೈರ' ಎಂದು ಗೊತ್ತಾದಾಗ ಅವನ ವಾಲಗವನ್ನು ಬೆರಗಿನಿದ ಆಲಿಸಿದ್ದು, ತನ್ನ ಗೌಡಕೆಯ ಗೌರವಕ್ಕೆ ಮಸಿ ಬಳಿದುಕೊಂಡಂತಾಗಿ ಅವಮಾನದಿಂದ ಹಿಂದಿರುಗುತ್ತಾರೆ. ಜಾತಿ ತಾರತಮ್ಯ ಕಿರಿಯ ಮಕ್ಕಳಲ್ಲೂ ಯಾವ ರೀತಿ ಮನೆ ಮಾಡಿತ್ತು ಎಂದರೆ ದಲಿತರ ಹುಡುಗನ ಕಲೆಯಾಗಲಿ, ಉಡುಪಾಗಲಿ ಆ ಕಾರಣಕ್ಕೆ ಕೀಳಾಗಿಯೂ, ವ್ಯಂಗ್ಯವಾಗಿಯೂ ಕಾಣುತ್ತದೆ.

ಇಂತಹ ಪರಿಸರದಲ್ಲಿ ಬೆಳೆದು ಬಂದ ಭಾರತೀಪುರ ಹರಿಜನ ಯುವಕರಲ್ಲಿ ಬಿಳಿಬಟ್ಟೆಯನ್ನು ತೊಟ್ಟುಕೊಳ್ಳುವುದು ಮುಜುಗರದ, ಹಾಸ್ಯಾಸ್ಪದದ, ಅಪರಾಧಿತನವಾಗಿ ಕಾಡುವುದು ಸಹಜವಾದ ಕ್ರಿಯೆಯಾಗಿದೆ. ಇದನ್ನು ಹೋಗಲಾಡಿಸಿ, ಅವರಲ್ಲಿ ಆತ್ಮಾಭಿಮಾನ, ಸ್ವಾಭಿಮಾನ ತುಂಬಬೇಕೆಂಬುದೇ ಜಗನ್ನಾಥನ ಆಶಯ. ಆದಕಾರಣ ಜಾತಿ, ಮತ, ಧರ್ಮ, ಅಂತಸ್ತನ್ನು ಮೀರಿ ನಿಲ್ಲಬೇಕೆಂಬ ಸದುದ್ದೇಶ ಹೊಂದಿ ಈ ಕ್ರಿಯೆಯಲ್ಲಿ ತೊಡಗುತ್ತಾನೆ. ಇಂತಹದ್ದೊಂದು ಚಿತ್ರಣ ಮಲೆನಾಡಿನ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಮಹತ್ತರವಾದ ಬದಲಾವಣೆ ಎನ್ನಬೇಕು. ಈ ಮಲೆನಾಡ ಲೇಖಕರು ಅಂತಹ ಆಶಯವನ್ನಿಟ್ಟುಕೊಂಡೇ ಕೃತಿಗಳನ್ನು ರಚಿಸಿದರು. ಭಾರತೀಪುರ ಮಲೆನಾಡ ಪರಿಸರದ ಒಂದು

ಹಳ್ಳಿಯ ಹೆಸರಾದರೂ ಅಥವಾ ಒಂದು ಊರಿನ ಕಥೆಯಾದರೂ ಅದಕ್ಕೆ ಒಂದು ಸಾರ್ವತ್ರಿಕವಾದ, ಸಾರ್ವಕಾಲಿಕವಾದ ಆಧುನಿಕವಾದ ಗುಣ ಪ್ರಾಪ್ತವಾಗಿ ಬಿಡುತ್ತದೆ. ಅದರ ಹೆಸರೇ ಹೇಳುವಂತೆ ಭಾರತದ ಒಂದು ಪುರದ ಕಥೆಯ ಆಶಯ ಇಡೀ ಭಾರತದ ಕಥೆಯ ಆಶಯವೂ ಆಗಿ ಬಿಡುವುದರಲ್ಲೆ ಈ ಕೃತಿಯ ಮಹತ್ವ ಅಡಗಿದೆ.

ಭಾರತೀಪುರ ಕಾದಂಬರಿಯಲ್ಲಿ ಬರುವ ಶಾನುಭೋಗ ವಿಶ್ವನಾಥ ಶಾಸ್ತ್ರಿ ಉಡುಪು ಸಂಪ್ರದಾಯ ಮತ್ತು ಆಧುನಿಕತೆಯ ಕಲಿಸು ಮೇಲೋಗರವಾಗಿತ್ತು.

ಕಚ್ಚೆಪಂಚೆ, ಅದರೊಳಗೆ ತೂರಿಸಿದ ಶರ್ಟು, ಟೈ, ಗ್ಯಾನರ್ಡೀನ್ ಕೋಟು, ಕರಿಟೊಪ್ಪಿ, ಶಿವಮೊಗ್ಗಕ್ಕೆ ಹೋಗುವಾಗ ಜರಿಪೇಟೆ. ಈ ವೇಷಭೂಷಣ ಆಧುನಿಕತೆ ಮತ್ತು ಸಂಪ್ರದಾಯದ ದ್ವಂದ್ವವನ್ನೊ ವಿಪರ್ಯಾಸವನ್ನೊ, ಅಥವಾ ಹೊಂದಾಣಿಕೆಯನ್ನು ಸೂಚಿಸುತ್ತದೆ. ವಸಾಹತುಶಾಹಿ ಪ್ರಭುತ್ವದ ಒಂದು ಭಾಗವಾದ ಶಾನುಭೋಗಿಕೆಯ ನೌಕರಿ ಪಡೆದಿರುವುದರಿಂದ ಅಧಿಕಾರಿ ಸಂಕೇತವಾದ ಟೈ ಒಳತೂರಿದ ಶರ್ಟು, ಗ್ಯಾಬರ್ಡೀನ್ ಕೋಟು ಮತ್ತು ಪರಂಪರಾಗತವಾದ ಕಚ್ಚೆಪಂಚೆ, ಜರಿಪೇಟ ಮೊದಲಾವು – ಎರಡನ್ನೂ ಮೇಳೈಸಿಕೊಂಡ ವೇಷವಿದು. ಇದು ಸಂಪ್ರದಾಯವನ್ನು ಬಿಡದೆ, ಆಧುನಿಕತೆಯನ್ನು ನಿರಾಕರಿಸಲಾಗದ ವ್ಯಕ್ತಿತ್ವವು ಎರಡನ್ನೂ ಮೇಳೈಸಿಕೊಂಡ ಬಗೆಯಿದು. ಸಾಮಾನ್ಯವಾಗಿ ಭಾರತೀಯರು ಆಧುನಿಕತೆಯನ್ನು ಮೈಗೂಡಿಸಿಕೊಂಡು ಪರಿಯೇ ಹೀಗೆ.

ಜಗನ್ನಾಥನ ಆಶಯದ ಚಲನೆ ಸಾಧ್ಯವಾಗಿದೆ ಎಂಬುದಕ್ಕೆ ಪಿಳ್ಳನ ಸಂದರ್ಭ ನೋಡಬಹುದು. ಜಗನ್ನಾಥ ಬಿಳಿ ಪಂಚೆ ನೀಡಿದ ಯುವಕರಲ್ಲಿ ಪಿಳ್ಳನೂ ಒಬ್ಬ. ಪಿಳ್ಳ ಒಡೆಯರ ಅಂಗಳದಲ್ಲಿ ತನ್ನ ಉಡುಪಿನ ಬಗ್ಗೆ ಇತರರಂತೆ ಮುಜುಗರಕ್ಕೆ ಒಳಗಾಗಿದ್ದ. ಪಿಳ್ಳ ಉಟ್ಟಿದ್ದ ಬಿಳಿ ಬಟ್ಟೆ ನೋಡಿ ಹೆಂಡದಂಗಡಿಯಲ್ಲಿ ಎಲ್ಲರೂ ಹಾಸ್ಯ ಮಾಡಿದ್ದರು. ಒಡೆಯರ ಅಂಗಳ ಬೇರೆ, ಪಾನಪ್ರಿಯರ ಸಾರ್ವಜನಿಕ ತಾಣವಾದ ಹೆಂಡದ ಅಂಗಡಿ ಅಂಗಳ ಬೇರೆ. ಆದ ಕಾರಣ ಅವರ ಹಾಸ್ಯ ಆತನಿಗೆ ಮುಜುಗರವನ್ನುಂಟು ಮಾಡಲಿಲ್ಲ ; ಸಿಟ್ಟು ಭರಿಸಿತ್ತು. ಜೊತೆಗೆ ಆ ಪಂಚೆ ಉಟ್ಟಿದ್ದಕ್ಕೆ ಈ ಸಂದರ್ಭದಲ್ಲಿ ಖುಷಿಯೂ ಆಗಿತ್ತು. ಹೆಂಡದ ನಿಶೆ ಮತ್ತು ಪಂಚೆ ಉಟ್ಟ ಖುಷಿ ಆತನಲ್ಲಿ ಅದುವರೆಗಿನ ಮುಜುಗರವನ್ನು ಬಿಟ್ಟು, ಜಾತಿ ಕಟ್ಟಳೆಯನ್ನು ಮೀರಿ ತನಗಿಂತ ಮೇಲು ಜಾತಿಯ ಒಡೆಯರ ಮನೆಯ ಕೆಲಸದಾಳು ಕಾವೇರಿಯನ್ನು ಬಯಸುವಂತೆ ಮಾಡಿತ್ತು. ಅಂದರೆ ಒಬ್ಬ ವ್ಯಕ್ತಿಗೆ ಆಸ್ತಿ, ಉದ್ಯೋಗ ಹೇಗೋ ಹಾಗೆ ಉಡುಪು ಕೂಡ ತಾರತಮ್ಯವನ್ನು ಮೀರಿನಿಲ್ಲುವ ಆತ್ಮ ಸ್ಥೈರ್ಯವನ್ನು ನೀಡಬಲ್ಲದು. ಇದು ಸಾಧ್ಯವಾಗಿರುವುದು ಆಧುನಿಕತೆಯಿಂದ. (ಅಂಬೇಡ್ಕರ್ ಗಾಂಧಿಯ ಖಾದಿ–ದೇಶೀ ಚಳುವಳಿಯ ನಡುವೆಯೂ ಸದಾ ಪಾಶ್ಚಾತ್ಯ ಶೈಲಿಯ ಕೋಟು, ಪ್ಯಾಂಟು, ಟೈ, ಷೂಗಳನ್ನು ಧರಿಸಿಯೇ ಇರುತ್ತಿದ್ದರು ಎಂಬುದನ್ನು ನೆನಪಿಸಬಹುದು)

ಅನಂತಮೂರ್ತಿ ಅವರ 'ದಿವ್ಯ' ಕಾದಂಬರಿಯಲ್ಲಿ ಬರುವ ದೇವನಹಳ್ಳಿ ಸಾಹುಕಾರ್‍ರು ಮನೆಯ ಭೂವರಾಹ ದೇವರ ಅರ್ಚಕ ಕೇಶವಭಟ್ಟ ಒಂದೇ ಮನೆಯಲ್ಲಿರುವ ಬಾವನ ಮಗಳು ಗೌರಿಯನ್ನು ಅಕ್ಕು ತಮ್ಮ ಕೇಶವನನ್ನು ಮದುವೆಯಾಗು ಎಂದು ಒತ್ತಾಯಿಸುವಾಗ ಗೌರಿ ಆಡುವ ತಮಾಷೆಯ

ಮಾತು ಆಳದಲ್ಲಿ ತಮಾಷೆಯಾಗಿ ಕಾಣುವುದಿಲ್ಲ.

"ನಾನೇನಾದರೂ ಇವನನ್ನು ಮದುವೆ ಆದದ್ದೇ ಆದರೆ ಜುಟ್ಟು ಕತ್ತರಿಸ್ತನಾ? ಅಂಗಿ ಹಾಕ್ಕೋತಾನಾ? ಪಟ್ಟಣಗಳ ಬೀದಿಗಳ ಮೇಲೆ ಈ ಗೊಡ್ಡು ವೈದಿಕನ ಜೊತೆ ನಾನು ಹೇಗೆ ಅಡ್ಡಾಡಬಹುದು ಹೇಳು....."[೨೯]

ಗೌರಿ ಆಡುವ ಈ ತಮಾಷೆಯ ಮಾತು ಮಲೆನಾಡ ಬ್ರಾಹ್ಮಣ ಸಮುದಾಯದ ಹೆಣ್ಣು ಮಕ್ಕಳ ಸಂದರ್ಭದಲ್ಲಿ ಗಂಭೀರವಾದ ಸಂಗತಿಯೆ. ಪರಂಪರಾಗತವಾದ ಪೌರೋಹಿತ್ಯ, ಜೋತಿಷ್ಯ ವೃತ್ತಿ, ಅದರ ಗುರುತಿಗಾಗಿ (ಐಡಂಟಿಟಿ) ವೇಷಭೂಷಣದ ಬಗ್ಗೆ ಆ ಸಮಾಜದೊಳಗೆ ವಿಶೇಷವಾಗಿ ಹೆಣ್ಣುಮಕ್ಕಳಲ್ಲಿ ಆಕರ್ಷಣೆಯನ್ನು ಕಳೆದುಕೊಂಡಿತ್ತು ಎನ್ನಬಹುದು. ಇಂತಹ ಮನೋಭಾವ ಸಾಧ್ಯವಾದದ್ದು, ಆಧುನಿಕ ಸಾಹಿತ್ಯ ಪ್ರಕಾರಗಳಾದ ಕಾದಂಬರಿಗಳ ಓದಿನಿಂದ ಎನ್ನಬಹುದು. ಗೌರಿ ಬಿಡುವಿನ ವೇಳೆಯಲ್ಲಿ ಗಳಗನಾಥರ, ಕಾರಂತರ, ಕುವೆಂಪು ಅವರ ಕೃತಿಗಳನ್ನು ಓದಿ ವಿಚಾರ ಮಾಡುತ್ತಿದ್ದಳು. ಇದಕ್ಕೆ ಪೂರಕವಾಗಿ ಅನಂತಮೂರ್ತಿ ಅವರ 'ಪ್ರಶ್ನೆ' 'ಪ್ರಸ್ತ' ಮುಂತಾದ ಕಥೆಗಳಲ್ಲೂ ಇಂತಹ ಪ್ರಸ್ತಾಪವನ್ನು ಕಾಣಬಹುದು.

'ಪ್ರಶ್ನೆ' ಕಥೆಯಲ್ಲಿ ಮಲೆನಾಡ ಕುಗ್ರಾಮವೊಂದರಲ್ಲಿ ವಾಸ ಮಾಡುತ್ತಿರುವ 'ಶಾರದೆ' ತನ್ನನ್ನು ಪ್ರೀತಿಸಿರುವ ಇದೇ ಹಳ್ಳಿಯಿಂದ ನಗರಕ್ಕೆ ಹೋಗಿ ಉದ್ಯೋಗ ಹಿಡಿದಿರುವ ರಂಗನಾಥ ಹಳ್ಳಿಗೆ ಬಂದಾಗ ಆತ ಬದಲಾಗಿರುವಂತೆ ಆಕೆಗೆ ತೋರುತ್ತದೆ. ಅದರ ಮುಖ್ಯ ಕುರುಹು ಆಗಿ ನಡುವೆ ಬೈತಲೆ ತೆಗೆಯುತ್ತಿದ್ದವನು ಓರೆಯಾಗಿ ತೆಗೆದಿದ್ದಾನೆ. ಕೂದಲನ್ನು ಸಣ್ಣಗೆ ಕತ್ತರಿಸಿದ್ದಾನೆ. ಅವಳಿಗೆ ಇದು ಹಿತವಾಗಿ ಕಾಣುತ್ತದೆ. ರಂಗನಾಥನಿಂದ ಅನೇಕ ಕನ್ನಡ ಪುಸ್ತಕಗಳನ್ನು ತರಿಸಿಕೊಂಡು ಓದುತ್ತಿದ್ದ ಆಕೆಯಲ್ಲಿ ಆಧುನಿಕತೆ ತಂದಿರುವ ವೇಷಭೂಷಣದ ಬಗ್ಗೆ ಆಸಕ್ತಿ ಮೂಡಿದೆ.

'ಪ್ರಸ್ಥ' ಕಥೆಯಲ್ಲಿ ಬರುವ ಪುಂಡರೀಕ ಶಾಲೆಯ ಮೆಟ್ಟಿಲು ಹತ್ತಿ ನಾಲ್ಕು ಅಕ್ಷರ ಕಲಿತ ಹೆಂಡತಿ ನೇತ್ರಾವತಿಗೆ ಇಷ್ಟವಾಗಲೆಂದು ಕ್ರಾಪು ಮಾಡಿಸಿ, ಸಂಪ್ರದಾಯಬದ್ಧಳಾದ ತಾಯಿಗೆ ಸಿಟ್ಟು ಬರದಿರಲೆಂದು ಹಿಂದಕ್ಕೆ ಒಂದು ಜುಟ್ಟು ಬಿಟ್ಟಿದ್ದಾನೆ. ದಿನೇ ದಿನೇ ಆ ಜುಟ್ಟು ಸಣ್ಣವಾಗುವುದನ್ನು ನೋಡಿ ತಾಯಿ ವೆಂಕಮ್ಮ ಏನು ಬಂತಪ್ಪ ಕಾಲ ಎಂದು ನಿಟ್ಟಿಸಿರು ಬಿಡುತ್ತಾಳೆ. ಹೆಂಗಸರ ಹಾಗೆ ಬೈತಲೆ ತೆಗೆಯುತ್ತಾನೆ, ಶುದ್ಧ ಹೆಣ್ಣಿಗ ಎಂದು ನಿಂದಿಸುವುದಲ್ಲದೆ, ಅದಕ್ಕೆ ಕಾರಣಳಾದ ನೇತ್ರಾವತಿಯನ್ನು ಟೀಕಿಸದೆ ಬಿಡಲಾರಳು. ಒಳ್ಳೆ ಮುತ್ತೈದೆ ಹಾಗೆ ನಡುವೆ ಬೈತಲೆ ತೆಗೆಯುವುದು ಬಿಟ್ಟು, ವಾರೆ ಬೈತಲೆ ತೆಗೆಯುತ್ತಾಳೆ ಎಂದು ನಿಂದನೆ. ನೇತ್ರಾವತಿಯ ಒತ್ತಾಯ ಆ ಹಾಳು ಜುಟ್ಟನ್ನು ಕತ್ತರಿಸಿ, ಸಂಪೂರ್ಣ ಕ್ರಾಪು ಬಿಡಿಬೇಕೆಂದು. ಇದಕ್ಕೆ ಆತ ನೀಡುವ ಪ್ರತಿಕ್ರಿಯೆಯಲ್ಲಿ ಅವನ ಅಡ್ಡಕತ್ತರಿಯಲ್ಲಿ ಸಿಲುಕಿದ ಪರಿಸ್ಥಿತಿಯನ್ನು ಕಾಣಬಹುದು.

"ಸಂಪೂರ್ಣ ಕ್ರಾಪು ಮಾಡಿಸಿದರೆ ಹೊಟ್ಟೆಪಾಡು ಹೊರೆಯೋದು ಹೇಗೆ ನೇತ್ರಾ? ಜುಟ್ಟು ಬಿಟ್ಟಿದ್ದರೆ ಮಾತ್ರ ಬ್ರಾಹ್ಮಣಾರ್ಥ ಪೌರೋಹಿತ್ಯ ಸಿಗೋದು, ಸಂಭಾವನೆಗೆ ಹೋದರೆ ಅಡಿಕೆ ಸಿಗೋದು".[೩೦]

ಬ್ರಾಹ್ಮಣ ಸಮುದಾಯ ಜುಟ್ಟನ್ನು ಕತ್ತರಿಸಿ ಕ್ರಾಪು ಬಿಡುವುದು ಮಧ್ಯಮ-ತಳ ಸಮುದಾಯದಷ್ಟು ಸುಲಭವಲ್ಲ. ಈಗ ಒಕ್ಕಲಿಗ ಸಮುದಾಯದ ದೇವಯ್ಯ (ಮಲೆಗಳಲ್ಲಿ ಮದುಮಗಳು) ಜುಟ್ಟನ್ನು

ಕತ್ತರಿಸಿ ಕ್ರಾಪು ಬಿಟ್ಟಿದ್ದು ಒಂದು ನಂಬಿಕೆಗೆ (ತಂದೆ ಬದುಕಿರುವಾಗಲೆ ತಲೆ ಬೋಳಿಸುವುದು ಅಮಂಗಳ) ಧಕ್ಕೆಯಾಗುತ್ತದೆ. ಆದರೆ ಕೇಶವನಂತಹ (ದಿವ್ಯ), ಪುಂಡರೀಕನಂತಹ (ಪ್ರಸ್ಥ) ಪುರೋಹಿತ ಯುವಕರಿಗೆ ಏಕಾಏಕಿ ಜುಟ್ಟನ್ನು ಕತ್ತರಿಸುವುದು ಸಾಧ್ಯವಾಗದ ಸಂಗತಿ. ಅದು ಪರಂಪರಾಗತವಾಗಿ ಬಂದ ಅರ್ಚಕರ ಅನನ್ಯತೆ ಮತ್ತು ಲಾಂಛನ. ಅದನ್ನು ಮೀರುವುದೆಂದರೆ ಪರಂಪರಾಗತ ವೃತ್ತಿಯನ್ನು ಮೀರಿದಂತೆಯೇ, ಅದು ಹೊಟ್ಟೆಪಾಡಿನ ಪ್ರಶ್ನೆ. ಆದರೆ ನೇತ್ರಾವತಿ ತನ್ನ ಗಂಡ ಆಕರ್ಷವಾಗಿ ಕಾಣಬೇಕು ಅದಕ್ಕಾಗಿ ಪೂರ್ಣ ಜುಟ್ಟನ್ನು ಕತ್ತರಿಸಬೇಕೆಂದು ಬಯಸುವುದು ಒಂದಾದರೆ, ಪರಂಪರಾಗತವಾದ ಪದ್ಧತಿ ಬಗ್ಗೆ ಅಂಥ ಶ್ರದ್ಧೆಯನ್ನು ಇಟ್ಟುಕೊಂಡ ಅತ್ತೆಯ ಮನಸ್ಸನ್ನು ನೋಯಿಸಿ ತನ್ನ ಸೇಡನ್ನು ತೀರಿಸಿಕೊಳ್ಳಬೇಕೆಂಬ ಒಳ ಆಸೆ ಮತ್ತೊಂದು. ಆದ್ದರಿಂದ ಪುಂಡರೀಕ ಅತ್ತೆ–ಸೊಸೆಯರ ಇಬ್ಬರಿಗೂ ಸಮಾಧಾನ ಪಡಿಸುವಂತೆ ಮತ್ತು ತನ್ನ ಸಂಭಾವನೆ ವೃತ್ತಿಯನ್ನು ಉಳಿಸಿಕೊಳ್ಳುವಂತ ನಿಲುವಿನಿಂದ ಆಧುನಿಕತೆ ಮತ್ತು ಸಂಪ್ರದಾಯದ ಬ್ಯಾಲೆನ್ಸ್ ಮಡುತ್ತಾನೆ. ಇಂತಹ ಸಂದಿಗ್ಧತೆಯನ್ನು ಸಂಘರ್ಷವನ್ನು ತಂದುದು ಆಧುನಿಕತೆ.

ಮದ್ಯಪಾನ

೨೦ನೇ ಶತಮಾನದ ಆರಂಭಕಾಲಘಟ್ಟದ ಮಲೆನಾಡ ಪರಿಸರದಲ್ಲಿ ಶೂದ್ರ ಸಮುದಾಯದ ತಳಸಮುದಾಯದ ಬದುಕಿನ ಒಂದು ಭಾಗವಾಗಿಯೇ ಮದ್ಯಪಾನವಿತ್ತು ಎಂದರೆ ಅತಿಶಯೋಕ್ತಿಯಲ್ಲ. 'ಬಗನಿ' ಮರದಿಂದ ಇಳಿಸುವ ಕಳ್ಳು ಮತ್ತು ಬೆಳೆದ ಭತ್ತದ ಮೂಲಕ ತಯಾರಿಸುವ ಹೆಂಡ (ಅಕ್ಕಿಬೋಜ) ಇವೇ ಮುಖ್ಯವಾದ ಮದ್ಯಪಾನೀಯ. ಮನೆಗೆ ಬಂದ ಅತಿಥಿ ಬಂಧುಗಳಿಗೆ ನೀಡಿ ಸತ್ಕರಿಸುವುದು ಸಹಜವಾದ ರೂಢಿಗತ ಪದ್ಧತಿಯಾಗಿತ್ತು ನಿಜ. ಹಾಗೆಂದು ಅದು ಗೌರವದ ಸಂಗತಿ ಏನೂ ಆಗಿರಲಿಲ್ಲ. ಈ ಬಗ್ಗೆ ವಿಮರ್ಶಕರೊಬ್ಬರ ಮಾತನ್ನು ಪೂರ್ಣ ಒಪ್ಪಲು ಸಾಧ್ಯವಿಲ್ಲ.

"ಕಳ್ಳು–ಹೆಂಡಗಳ ಸೇವನೆ ಸಾರ್ವತ್ರಿಕವಾಗಿತ್ತು. ಮಕ್ಕಳು ಮದುಕರು ಸ್ತ್ರೀಯರು ಪಡೆಯರು ಆಳುಗಳು ಎಲ್ಲರೂ ಕುಡಿಯುತ್ತಿದ್ದರು......... ಕುಡಿತ ಸಾಮಾಜಿಕ ಪ್ರತಿಷ್ಠೆಯ ವಿಷಯವೂ ಆಗಿರಲಿಲ್ಲ. ಹೀನಾಯದ ಅವಮರ್ಯಾದೆಯ ವಿಚಾರವೂ ಆಗಿರಲಿಲ್ಲ. ಊಟ, ತಿಂಡಿಗಳಂತೆ ಅದೊಂದು ಸಹಜವಾದ ನಿತ್ಯ ಚಟುವಟಿಕೆಯೆನಿಸಿತ್ತು".[೩೧]

ಬ್ರಾಹ್ಮಣ ಸಮುದಾಯದಲ್ಲಿ ಮದ್ಯಸೇವನೆ ಪೂರ್ಣ ನಿಷಿದ್ಧ. ಶೂದ್ರಾದಿ ಸಮುದಾಯಗಳಲ್ಲಿ ಎಲ್ಲೆಡೆ ಬಳಕೆಯಾಗಿತ್ತು ಎಂಬುದೇನೋ ನಿಜ. ಮಧ್ಯ ವಯಸ್ಕರು, ವಯಸ್ಸಾದವರು ನಿತ್ಯ ಕುಡಿಯುವ ಪರಿಪಾಠ ಬೆಳಸಿಕೊಂಡಿದ್ದರು. ಆದರೆ ಮಕ್ಕಳು, ಯುವಕರು, ಸಾಧಾರಣವಾಗಿ ಮದ್ಯಪಾನ ಮಾಡುತ್ತಿರಲಿಲ್ಲ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಮುಕುಂದಯ್ಯ, ದೇವಯ್ಯ, ಶಂಕರಪ್ಪ ಹೆಗಡೆಯರಂತ ಯುವಕರಾಗಲಿ, ಧರ್ಮು, ತಿಮ್ಮು ಮುಂತಾದ ಮಕ್ಕಳಾಗಲಿ ಸೇವಿಸುವುದು ಕಂಡುಬರುವುದಿಲ್ಲ. ಹಾಗೆ ಚಿನ್ನಮ್ಮ, ಲಕ್ಕಮ್ಮ, ಮಂಜಮ್ಮ ಮುಂತಾದ ಯುವತಿಯರು ಸೇವಿಸುವುದು ಕಂಡು ಬರುವುದಿಲ್ಲ. ಹಾಗೆ ಊಟ, ತಿಂಡಿಯಂತೆ ಸಹಜವಾದ ನಿತ್ಯ ಚಟುವಟಿಕೆಯೂ ಅಲ್ಲ. ಸಾಮಾನ್ಯವಾಗಿ ಹಿಂದಿನ ಜನ ಒಂದು ಶಿಸ್ತನ್ನು ಪರಿಪಾಲಿಸುತ್ತಿದ್ದರು ಎಂಬುದು ತೋರುತ್ತದೆ. ಅದೆಂದರೆ ಮಧ್ಯವಯಸ್ಕರು, ವಯೋವೃದ್ಧರು ಈ ಕುಡಿತದ ಹವ್ಯಾಸವನ್ನು ಹೆಚ್ಚಾಗಿ ಬೆಳಸಿಕೊಂಡಿದ್ದರು. ಸಾಧಾರಣವಾಗಿ ರಾತ್ರಿಯ ಆತಿಥ್ಯದಲ್ಲಿ

ಮಾಸಂದೂಟದ ಜೊತೆ ಕಳ್ಳು-ಹೆಂಡದ ಸಮಾರಾಧನೆಯಾಗುತ್ತಿತ್ತು. ಬೆಳಗಿನ ಹೊತ್ತಿನ ಸೇವನೆಯ ಹವ್ಯಾಸ ಬೆಳಸಿಕೊಂಡವರಲ್ಲ. ಅದರಲ್ಲೂ ಕಳ್ಳು ಸೇವನೆ ಆರೋಗ್ಯ ಪಂಡಿತರ ಸಲಹೆಯಂತೆ ಬಗನಿ ಮರದಿಂದ ಇಳಿಸಿದ ತಾಜಾ ಕಳ್ಳನ್ನು ತಕ್ಷಣ ಕುಡಿಯುವುದು ಆರೋಗ್ಯಕ್ಕಾಗಿ ಎಂಬ ತಿಳುವಳಿಕೆ ಇತ್ತು. ಸಿಂಭಾವಿ ಭರಮೈ ಹೆಗಡೆ ತನ್ನ ಕಾಯಿಲೆಗೆ ಪಂಡಿತರ ಸಲಹೆಯಂತೆ ಬೆಳಿಗ್ಗೆಯೇ ಬೈರ ಹುಡುಗನ ಮೂಲಕ ಕಳ್ಳು ತರಿಸಿ ಬಾಯಿ ಮುಕ್ಕಳಿಸಿ ಹೀರುತ್ತಿದ್ದರು. ತಳ ಸಮುದಾಯದಲ್ಲೂ ಕೂಡ ಒಡೆಯರ ಮನೆಯಲ್ಲಿ ದುಡಿದ ದಣಿದ ಜನ ಮಧ್ಯಕ್ಕೆ ಶರಣಾಗುತ್ತಿದ್ದರು. ಮೇಲು, ಮಧ್ಯಮವರ್ಗದ ಮಕ್ಕಳಿಗೆ ಹೋಲಿಸಿಕೊಂಡಾಗ ತಳ ಸಮುದಾಯದ ಮಕ್ಕಳು ತಮ್ಮ ಹಿರಿಯರನ್ನು ಅನುಸರಿಸಿ ಈ ದುಶ್ಚಟವನ್ನು ಬಹುತೇಕವಾಗಿ ಅಂಟಿಸಿಕೊಂಡಿದ್ದರು. ಕಾರಣ ಸ್ಪಷ್ಟವಿದೆ ತಮ್ಮ ತಂದೆ-ತಾಯಿಗಳಂತೆ ಮಕ್ಕಳೂ ಕೂಡ ಒಡೆಯರ ಮನೆಯ ಕೆಲಸದಾಳುಗಳೇ ಆಗಿದ್ದರು.

'ಮಲೆಗಳಲ್ಲಿ ಮದುಮಗಳು' ಕಾಲ ಸಂದರ್ಭಕ್ಕೆ ಮದ್ಯಸೇವನೆ ಪ್ರತಿಷ್ಠೆಯ ಸಂಗತಿಯೂ ಅಲ್ಲ ; ತೀರ ಅಗೌರವದ ಸಂಗತಿಯೂ ಅಲ್ಲ. ಆದರೆ 'ಕಾನೂರು ಹೆಗ್ಗಡತಿ' ಕಾಲಘಟಕ್ಕೆ ಅಗೌರವದ ಸಂಗತಿಯಾಗಿತ್ತು. ಅಕ್ಕಿಬೋಜದಂತಹ ಹೆಂಡ ಅಡಿಗೆ ಮನೆಗೆ ಸೀಮಿತವಾಗಿತ್ತು. ಕಳ್ಳು ಹಳೇ ಪೈಕದವರ ಮೂಲ ಕಸುಬು. ಅದಕ್ಕೆ ಆ ಜನಾಂಗ ಮಾತ್ರ ಹಕ್ಕುಳ್ಳವರಾಗಿದ್ದರು. ಕಾಡಿನ ಮಧ್ಯೆ ನಾಲ್ಕಾರು ಊರುಗಳು ಸೇರುವ ಭಾಗದಲ್ಲಿ ಕಳ್ಳನ್ನು ಮಾರಲಾಗುತ್ತಿತ್ತು. 'ಕಳ್ಳುಗೊತ್ತು' ಕಳ್ಳು ಕಾಯಿಸಿ ಕೊಡುವ ಸ್ಥಳ. ಕುಡಿಯುವ ಹವ್ಯಾಸ ಉಳ್ಳವರೆಲ್ಲ ಇಲ್ಲಿಗೆ ಬಂದು ಕುಡಿದು ಹೋಗುತ್ತಿದ್ದರು. ಕುವೆಂಪು ಅದನ್ನು 'ಕಾಡು ಮಜ್ಜಿಗೆಯ ಹೋಟೆಲ್' ಎಂದು ಅರ್ಥಪೂರ್ಣವಾಗಿಯೇ ಕರೆಯುತ್ತಾರೆ. ಈ ಜಾಗದಲ್ಲಿ ತಾರತಮ್ಯ, ಮೇಲುಕೀಳುಗಳ ಭೇದ ಅಷ್ಟಾಗಿ ಗೋಚರವಾಗುತ್ತಿರಲಿಲ್ಲ. ಚಂದ್ರೇಗೌಡ, ಶಾಮಯ್ಯ ಗೌಡನಂತವರು ಈ ಕಳ್ಳು ಗೊತ್ತಿಗೆ ಸಂಜೆ ಹೊತ್ತಿನಲ್ಲಿ ಬಂದು ಹೋಗುತ್ತಿದ್ದರು. ಸೀತೆಯನ್ನು ಮದುವೆಯಾಗಲು ಸಿದ್ಧವಿದ್ದ ಕೃಷ್ಣಪ್ಪ ಜಾಕಿ, ಓಬಯ್ಯರೊಡನೆ ಕಳ್ಳು ಕುಡಿಯುತ್ತಿದ್ದಾಗ ಮುತ್ತಳ್ಳಿಗಾಡಿ ಬಂದುದು ನೋಡಿ ಮುಜುಗರಕ್ಕೆ ಒಳಗಾಗಿ ಮರೆಯಾಗುತ್ತಾನೆ. ಅಂದರೆ ಈ ಪರಿಸರದಲ್ಲಿ ಅಷ್ಟರಮಟ್ಟಿಗೆ ಮದ್ಯಪಾನದ ವಿಚಾರವಾಗಿ ಮರ್ಯಾದೆ ಬೆಳೆದಿತ್ತು. ಇದಕ್ಕೆ ಕಾರಣ ಆಧುನಿಕತೆಯ ಪ್ರವೇಶ, ರಾಷ್ಟ್ರೀಯ ಹೋರಾಟ ಗಾಂಧೀಜಿಯ ಪ್ರಭಾವ ಮಲೆನಾಡನ್ನು ಮುಟ್ಟುತ್ತಿತ್ತು ; ತಟ್ಟುತ್ತಿತ್ತು.

ಮಲೆನಾಡ ಪ್ರಾಂತ್ಯದ ಒಕ್ಕಲಿಗ ಮುಖಂಡರೆಲ್ಲಾ ಸೇರಿ ಈ ಸಮುದಾಯದ ಅಭಿವೃದ್ಧಿಯ ದೃಷ್ಟಿಯಿಂದ "ನಾಮಧಾರಿ ಅನ್ಯೋನ್ಯಾಭಿವೃದ್ಧಿ ಸಭಾ ಎಂಬ ಸಂಘ ಸ್ಥಾಪಿಸಿ, ದಿನಾಂಕ :೦೫-೦೫-೧೯೦೧ರಲ್ಲಿ 'ಆರಗ' ಎಂಬಲ್ಲಿ ಸಭೆ ಸೇರಿ ಕೆಲವು ಸುಧಾರಣೆಯ ಯೋಜನೆಗಳನ್ನು ರೂಪಿಸಿದರು".[೩೨] ಅವುಗಳಲ್ಲಿ ಮದ್ಯಪಾನ ತ್ಯಜಿಸುವಂತೆ ಪ್ರಚಾರ ಮಾಡುವುದು ಕೂಡ ಒಂದು. ಈ ಸಂಘದ ಪ್ರಯತ್ನದಿಂದ ಈ ಪರಿಸರದಲ್ಲಿ ಸ್ವಲ್ಪ ಮಟ್ಟಿನ ಜಾಗೃತಿ ಉಂಟಾಗಿತ್ತು. ೧೯೨೭ರಲ್ಲಿ ಗಾಂಧೀಜಿ ತೀರ್ಥಹಳ್ಳಿ ಬಂದಿದ್ದರು. ಈ ಎಲ್ಲಾ ಪ್ರಭಾವಗಳಿಂದ ಮದ್ಯದ ಸೇವನೆ ಅದೂ ಬಹಿರಂಗ ಸೇವನೆ ಸಾಮಾಜಿಕವಾಗಿ ಒಳ್ಳೆಯ ಸಂಸ್ಕೃತಿಯಲ್ಲ ಎಂಬ ತಿಳುವಳಿಕೆಯನ್ನು, ಮರ್ಯಾದೆಯ ಪ್ರಶ್ನೆಯಾಗಿ ಪಲ್ಲಟವಾಗುವುದನ್ನು ಕಾಣಬಹುದು. ಇಂತಹ ಸಂಘಟನೆಗಳ ಪ್ರಯತ್ನ, ಗಾಂಧೀಜಿಯ ಪ್ರಭಾವದಿಂದ ಪಾನ ನಿರೋಧವನ್ನು ಅಳವಡಿಸಿಕೊಳ್ಳುವ

ಸಂದರ್ಭದ ದ್ವಂದ್ವವನ್ನು ಸೋಲು-ಗೆಲುವನ್ನು ಹಾಸ್ಯವಾಗಿ ಮಾರ್ಮಿಕವಾಗಿ ಕುವೆಂಪು ಚಿತ್ರಿಸಿದ್ದಾರೆ.

"ಆ ನಾಡಿನ ಒಕ್ಕಲಿಗರಲ್ಲಿ ಬಹುಪುರಾತನದಿಂದಲೂ ಹೆಂಡ, ಕಳ್ಳು ಮೊದಲಾದ ಮಾದಕ ಪದಾರ್ಥಗಳನ್ನು ಸೇವಿಸುವುದು ಅತಿ ಸಾಮಾನ್ಯವಾದ ರೂಢಿಯಾಗಿತ್ತು. ಈಗಲೂ ಅದು ಸಂಪೂರ್ಣವಾಗಿ ತೊಲಗಿಲ್ಲ. ಮೊದಲು ಎಲ್ಲಿಲ್ಲಿಯೂ ಬಹಿರಂಗವಾಗಿ ನಡೆಯುತ್ತಿದ್ದುದು ಈಗ ಅಲ್ಲಲ್ಲಿ ಅಂತರಂಗವಾಗಿ ಸಾಗುತ್ತಿದೆ. ಅಂತೂ ಮದ್ಯಪಾನ ಮಾಡುವುದು ನಾಚಿಕೆಗೇಡಿನ ಕೆಲಸವೆಂದೇನೊ ಎಲ್ಲರಿಗೂ ಗೊತ್ತಾಗಿದೆ. ಸುಮಾರು ಮೂವತ್ತೈದು ವರ್ಷಗಳ ಹಿಂದೆ ನಾಡಿನ ಒಕ್ಕಲಿಗ ಮುಖಂಡರಲ್ಲಿ ಒಂದು ಚಳುವಳಿಯೆದ್ದಿತು. ಆ ಚಳುವಳಿ ಕ್ರೈಸ್ತ ಪಾದ್ರಿಗಳ ಉಪದೇಶವೂ, ಮೈಸೂರು ಸರಕಾರದ ಮಲೆನಾಡು ಅಭಿವೃದ್ಧಿ ಇಲಾಖೆಯ ಬೋಧನೆಯೂ, ಬ್ರಿಟೀಷ್ ಆಳ್ವಿಕೆಯಿಂದುಂಟಾದ ನಾಗರಿಕತೆಯ ಆಗಮನವೂ, ಕಾಫಿ, ವೈನು, ವಿಸ್ಕಿ ಇತ್ಯಾದಿಯಾದ ವಿದೇಶಿಯ ಪಾನೀಯಗಳ ಆಮದೂ, ಸನ್ನಿವೇಶ ಪ್ರಭಾವದಿಂದ ಜನರಲ್ಲಿ ಸ್ವಾಭಾವಿಕವಾಗಿಯೆ ಉತ್ಪನ್ನವಾದ ಜಾಗ್ರುತಿಯೂ ಕಾರಣಗಳೆಂದು ಊಹಿಸಬಹುದು".[೩೩]

ಮಲೆನಾಡ ಪರಿಸರದಲ್ಲಿ ಇದ್ದಂತಹ ಮತ್ತು ಸ್ಥಿತ್ಯಂತರಗೊಳ್ಳುತ್ತಿರುವ ಮದ್ಯಪಾನದ ಸಂಗತಿಯನ್ನು ಈ ಮೇಲಿನ ಕುವೆಂಪು ಅವರ ಮಾತು ದಾಖಲಿಸುತ್ತದೆ. ಮಲೆನಾಡ ಪರಿಸರದಲ್ಲಿ ಹಿಂದೆ ಮನೆಗೆ ಬಂದ ಅತಿಥಿಗಳಿಗೆ ಮಧ್ಯಮ, ಕೆಳ ಸಮುದಾಯದವರು ಹೆಂಡ-ಕಳ್ಳುಗಳನ್ನು ಆದರ ಪೂರ್ವಕವಾಗಿ ನೀಡುತ್ತಿದ್ದರು. 'ಈಗಿನವರು ಕಾಫಿ ಕೊಡುವುದನ್ನೂ, ಕುಡಿಯುವುದನ್ನೂ ಹೇಗೆ ಸುಧಾರಣೆಯ ಚಿಹ್ನೆಯೆಂದೂ, ನಾಗರಿಕತೆಯ ಗೌರವವೆಂದೂ ಭಾವಿಸುತ್ತಿರುವರೋ ಹಾಗೆಯೆ ಅಂದು ಭಾವಿಸಿಕೊಂಡಿದ್ದರು. ಹಾಗಿದ್ದೂ ಯಥೇಚ್ಛವಾಗಿ ಹಾಲು ಇರುತ್ತಿತ್ತು. 'ಕುನ್ನೇರ್ಲು' ಕುಡಿಯ ಕಷಾಯ ಬಳಕೆಯಲ್ಲಿತ್ತು ಎಂಬುದನ್ನು ಕೂಡ ಮರೆಯಬಾರದು. ಹಳೆಮನೆ ಸುಬ್ಬಣ್ಣ ಹೆಗಡೆ ಬೆಟ್ಟಳ್ಳಿಗೆ ಬಂದಾಗ ಆ ವಯೋವೃದ್ಧರಿಗೆ ಮೊದಲಿಗೆ ನೀಡಿದ್ದು ಹೆಂಡವಲ್ಲ ; ಕುನ್ನೇರ್ಲುಕುಡಿ ಕಷಾಯ. ರಾತ್ರಿಯ ಊಟಕ್ಕೆ ಮದ್ಯ ನೀಡುತ್ತಾರೆ. 'ಕಾನೂರು ಹೆಗ್ಗಡತಿ'ಯ ಹೂವಯ್ಯ, ರಾಮಯ್ಯರಂತವರು ಆಧುನಿಕತೆ ಪಡೆದುಕೊಂಡು ಬಂದಂತಹ ಯುವಕರ ಪ್ರಭಾವದಿಂದ, ಸಂಘದ ಚಟುವಟಿಕೆಯ ಪ್ರಭಾವದಿಂದ ಬಹಿರಂಗವಾದ ವಿಚಾರವು ಅಂತರಂಗವಾಯಿತು ; ಮರೆಯಾಗಲಿಲ್ಲ. ಅಂತರಂಗವಾಗಿ ಬಹಿರಂಗಬಾಹಿರವಾಗಿ ಆದ ಸಂದರ್ಭವನ್ನು ತುಂಬಾ ಹಾಸ್ಯವಾಗಿ, ಮಾರ್ಮಿಕವಾಗಿ ಕುವೆಂಪು 'ಶೂದ್ರ ಮಹಾಸಂಘದ' ಸಂದರ್ಭದ ಚಿತ್ರಣದಲ್ಲಿ ನೀಡಿದ್ದಾರೆ. ಅಲ್ಲಿ ಕುಡಿಯುವುದನ್ನು ಬಿಡಬೇಕೆಂಬ ಭಾಷಣಗಳಾದವು ಅದೇ ವ್ಯಂಗ್ಯವಾಗಿತ್ತು. ಸಂಘದ ಠರಾವಿಗೆ ಸಹಿ ಮಾಡಿದ ಚಂದ್ರೇಗೌಡ, ಶಾಮಯ್ಯಗೌಡರಂತವರು ಒಂದೆರಡು ದಿವಸವೇನೂ ಭೀಷ್ಮ ಪ್ರಯತ್ನದಿಂದ ತಡೆದರು. ಕೊನೆಗೆ ಶರಣಾಗಿ ದೇವರ ಮೇಲಿನ ಭಾಷೆಯನ್ನು ಮುರಿದದ್ದಕ್ಕೆ ತಪ್ಪು ಮುಡಿಪು ಕಟ್ಟಿ ಲೋಕಕ್ಕೆ ತಿಳಿಯದಂತೆ ಮುಂದುವರಿಸಿದರು. ಇಂದೂ ಕೂಡ ಅಂತಹ ಚಂದ್ರೇಗೌಡ, ಶಾಮಯ್ಯಗೌಡ ಅಂತವರೇ ಮುಂದುವರಿದಿದ್ದಾರೆ.

ಪಾಶ್ಚಾತ್ಯ ಆಗಮನದೊಂದಿಗೆ ಬಂದ ಬ್ರಾಂಡಿ, ವಿಸ್ಕಿ, ವೈನು ಮುಂತಾದ ಪಾನೀಯಗಳ ಮುಂದೆ ಕಳ್ಳು-ಹೆಂಡಗಳು ಕಳಪೆಯಾದವು. ಕಳ್ಳು ಮರದಿಂದ ಇಳಿಸಿದ್ದು, ಹೆಂಡ ಭತ್ತದಿಂದ ಮಾಡಿದ್ದು ಅದು

ಆರೋಗ್ಯಕರವಾದುದು ಎಂದು ಅದರ ಪರವಾಗಿರುವವರು ವಾದಿಸಿದರೂ ಆಕರ್ಷಕವಾದ ಬಾಟಲಿಗಳಲ್ಲಿ ಬಂದ ವಿದೇಶಿ ಪಾನೀಯಕ್ಕೆ ವಶರಾದುದಲ್ಲದೆ, ಅದನ್ನು ಸೇವಿಸುವುದು ಸಾಮಾಜಿಕವಾದ ಪ್ರತಿಷ್ಠೆಯ ಸಂಗತಿಯಾಯಿತು.

ಅನಂತಮೂರ್ತಿ ಅವರ ಭಾರತೀಪುರದಲ್ಲಿ ಬರುವ 'ಪುರಾಣಿಕ್' ಎಂಬ ಜಮೀನ್ದಾರ ವಿದೇಶದಲ್ಲಿ ವ್ಯಾಸಂಗ ಮಾಡಿ ಬಂದವನು. ಇಡಿ ತನ್ನ ಮನೆಯನ್ನೇ ಪಾಶ್ಚಾತ್ಯ ಶೈಲಿಯಲ್ಲಿ ರೂಪಿಸಿಕೊಂಡಿದ್ದ. ಆ ಕೃತಕ ಆವರಣದಲ್ಲಿ ಒಂದು ಕಡೆ ವಿದೇಶಿ ಮಾದರಿಯ ಬೀರುವಿನಲ್ಲಿ ವಿಲಾಯಿತಿ ಬ್ರಾಂಡಿ, ವಿಸ್ಕಿ, ಜಿನ್‌ವೈನ್ ಮೊದಲಾದವನ್ನು ಆಕರ್ಷವಾಗಿ ಇಟ್ಟಿದ್ದ. ಇಂಡಿಯಾಕ್ಕೆ ಬಂದ ಮೇಲೆ ಕುಡಿಯುವುದನ್ನು ಬಿಟ್ಟ ಜಗನ್ನಾಥನಿಗೆ ಕಟ್‌ಗ್ಲಾಸ್ ಟಂಬ್ಲರ್‌ಗಳಲ್ಲಿ ವ್ಹಿಸ್ಕಿಯನ್ನು ನೀಡಿ ಅತಿಥಿ ಸತ್ಕಾರ ಮಾಡುತ್ತಾನೆ. ಅಂದರೆ ಯಾವ ಸಮುದಾಯ ಹೆಚ್ಚಾಗಿ ಮದ್ಯಪಾನವನ್ನು ನಿಷೇಧಿಸಿಕೊಂಡು ಬಂದಿತ್ತೋ ಅದು ಆಧುನಿಕತೆಯ ಸಂದರ್ಭದಲ್ಲಿ ಪ್ರತಿಷ್ಠೆಯ ರೂಪದಲ್ಲಿ ಒಳಗಾಗುವ ಬಗೆಯನ್ನು ಸೂಚಿಸುತ್ತದೆ.

'ದಿವ್ಯ' ಕಾದಂಬರಿಯಲ್ಲಿ ಬರುವ ಜಮೀನ್ದಾರರೂ, ರಾಜಕೀಯ ಮುಖಂಡರೂ ಆದ ದೇವನಹಳ್ಳಿ ಮಂಜಯ್ಯ ರಾಜಕೀಯ ಗೆಳೆಯರ ಜೊತೆ ನಗರದ ಹೋಟೆಲ್‌ಗಳಲ್ಲಿ ಪಾರ್ಟಿ ಮಾಡುತ್ತಿದ್ದರು. ಕುಂದಾಪುರದ ಉಪಪತ್ನಿಯ ಜೊತೆ ಬ್ರಾಂಡಿ ಕುಡಿಯುವುದು ಸಂತೋಷದ ಸಂಗತಿಯಾಗಿತ್ತು. ಆಧುನಿಕತೆಯ ಮೂಲಕ ಮದ್ಯ ಸಾಮಾಜಿಕವಾಗಿ ಮೇಲುಸ್ತರದ ಜನರಲ್ಲಿ ಸಂತೋಷ ಮತ್ತು ಪ್ರತಿಷ್ಠೆಯ ಸಂಗತಿಯಾಗಿತ್ತು. ಇದೆಲ್ಲಾ ಮಡಿ ಆವರಣದ ಆಚೆ ನಡೆಯುವಂತಹದು. ಆದರೆ ವಿದೇಶದಲ್ಲಿ ವ್ಯಾಸಂಗ ಮಾಡಿದ ಘನಶ್ಯಾಮ ಮತ್ತು ವಿಧವೆಯಾದರೂ ಆ ಲಕ್ಷಣ ತಾಳದೆ ಓದು ಮುಂದುವರಿಸಿ, ಕ್ರಿಶ್ಚಿಯನ್ ಹುಡುಗನನ್ನು ಪ್ರೀತಿಸುವ ಆತನ ಸಹೋದರಿ ವಿಮಲೆ ಮನೆಯಲ್ಲೇ ಕುಡಿಯುವುದು ಪ್ರತಿಷ್ಠೆಯ ಸಂಗತಿಯಾಗಿತ್ತು. ಈ ಮಲೆನಾಡ ಪರಿಸರದ ಬ್ರಾಹ್ಮಣರ ಮನೆಗಳಲ್ಲಿ ಬ್ರಾಂಡಿ ಪ್ರವೇಶದ ಬಗ್ಗೆ ವಿಮಲೆ ಮಾತನ್ನು ನೋಡಬಹುದು.

"ಬ್ರಾಂಡಿ ಔಷಧಿಕಣೇ, ಈ ಮಲೆನಾಡಿನ ಬ್ರಾಹ್ಮಣರ ಎಲ್ಲ ಮನೇಲೂ ಇಟ್ಟಿರ್ತಾರೆ, ಬಾಣಂತೀರಿಗೆ ಸೀತ ಆಗಬಾರ್ದು ಅಂತ ನಿತ್ಯ ಒಂದೊಂದು ಚಮಚ ಕೊಡ್ತಾರೆ ಗೊತ್ತ".[೩೪]

ಮಲೆನಾಡ ಪರಿಸರದಲ್ಲಿ ರಾಷ್ಟ್ರೀಯ ಚಳುವಳಿ, ಗಾಂಧೀಜಿಯ ಮದ್ಯಪಾನದ ವಿರೋಧ, ಈ ನೆಲದ ಪ್ರಾಮಾಣಿಕ ನಾಯಕರ ಪ್ರಭಾವ, ಆಧುನಿಕ ಶಿಕ್ಷಣ ಕಲಿತವರ ನಡವಳಿಕೆಗಳಿಂದ, ಸರ್ಕಾರದ ನೀತಿಯ ಕಾರಣದಿಂದ ಕಳ್ಳು-ಹೆಂಡಗಳು ಅಪರೂಪವಾಗುತ್ತಾ ಹೋದವು. ಹೀಗೆ ಇವು ಅವಮಾನ, ಅಗೌರವ ಮುಂತಾದ ಹೀನವಾದ ಎಲೆಯಲ್ಲಿ ದೂರವಾಗುತ್ತಾ ಹೋದಂತೆ, ಆ ಕಡೆಯಿಂದ ಆಧುನಿಕತೆಯ ಕಾರಣದಿಂದ ಪ್ರತಿಷ್ಠಿತವಾದ ನೆಲೆಯಲ್ಲಿಯೇ ಬ್ರಾಂಡಿ, ವಿಸ್ಕಿ, ವೈನ್‌ಗಳು ಬಂದು ನೆಲೆಯೂರ ತೊಡಗಿದವು. ಇಂಥ ಸಂದರ್ಭದಲ್ಲಿ ಬಡವರು ಕಂಡುಕೊಂಡ ಮಾರ್ಗ ಕಳ್ಳಭಟ್ಟಿ ಸಾರಾಯಿ. ಇದನ್ನು ತಪ್ಪಿಸಲು ಸರಕಾರ ತಂದ ನೀತಿ ಏನು ಎಂದರೆ ಕಳ್ಳಭಟ್ಟಿ ಸ್ಥಾನದಲ್ಲಿ ಸರ್ಕಾರವೇ ಮದ್ಯ ತಯಾರಿಸಿ ನೀಡುವ ಸರ್ಕಾರಿ ಸಾರಾಯಿ ಎಲ್ಲೆಡೆ ವಿರಾಜಮಾನವಾಗಿದೆ. ಇಷ್ಟಾದರು ಮದ್ಯಪಾನ ಸೇವನೆ ಸಾರ್ವತ್ರಿಕವಾಗಿ ಇಲ್ಲ ; ಜೀವನದ ಭಾಗವೂ ಆಗಿಲ್ಲ. ಅದು ಸಮಾಜದಲ್ಲಿ ಅಗೌರವ, ಅನೀತಿಯ ಮಾರ್ಗ, ಮನೆಹಾಳು

ಹವ್ಯಾಸ ಎಂಬುದು ಎಲ್ಲರಿಗೂ, ಸ್ವತಃ ಕುಡುಕರಿಗೂ ಮನದಟ್ಟಾಗಿದೆ. ಇದು ಸಾಧ್ಯವಾದದ್ದು ಕೂಡ ಆಧುನಿಕತೆಯ ವಿಚಾರಧಾರೆಯಿಂದಲೇ.

ಕಾಫಿಯ ಪ್ರವೇಶ

ಕಾಫಿ ಮಲೆನಾಡ ಪರಿಸರದ ಬದುಕಿನಲ್ಲಿ ಸರ್ವೇಸಾಮಾನ್ಯವಾದ ದೈನಂದಿನ ಪಾನೀಯ. ಒಂದು ಶತಮಾನಕ್ಕೂ ಹಿಂದೆ ಈ ಕಾಫಿ ಮಲೆನಾಡ ಪರಿಸರಕ್ಕೆ ಅಪರಿಚಿತವಾಗಿತ್ತು. ಕುರ್ನ್ೇಲು ಕುಡಿ ಕಷಾಯ, ಕೊತ್ತಂಬರಿ ಬೀಜದ ಕಷಾಯ, ಕಾಳುಮೆಣಸಿನ ಕಷಾಯ ಮುಂತಾದವು ಈ ಪರಿಸರದ ದೈನಂದಿನ ಬದುಕಿನ ಪಾನೀಯಗಳಾಗಿದ್ದವು. ಮಧ್ಯಮ ಮತ್ತು ಕೆಳ ಸಮುದಾಯಗಳಲ್ಲಿ ಅಕ್ಕಿಬೋಜ ಎಂಬ ಮದ್ಯ ಸಹಜವಾಗಿ ಮನೆಗೆ ಬಂದ ಅತಿಥಿಗಳಿಗೆ ನೀಡುವ ಪಾನೀಯವಾಗಿತ್ತು. ಕ್ರೈಸ್ತ ಮಿಷನರಿಗಳು ಯಾವಾಗ ಈ ಮಲೆನಾಡನ್ನು ಪ್ರವೇಶ ಮಾಡಿದರೊ ಜೊತೆಗೆ ಕಾಫಿಯ ಪ್ರವೇಶವೂ ಆಯಿತು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪಾದ್ರಿ ಜೀವರತ್ನಯ್ಯ ತನ್ನ ಮತಾಂತರ ಪ್ರಕ್ರಿಯೆಗೆ ಆಮಿಷ ಒಡ್ಡಿದ ಸೈಕಲ್, ಗಡಿಯಾರ ಮುಂತಾದ ಆಧುನಿಕ ವಸ್ತು ರೂಪಗಳ ಜೊತೆ 'ಕಾಫಿ'ಯನ್ನೂ ಬಳಸಿದ. ಪಾದ್ರಿಯ ಮಗಳು ಮಾಡಿಕೊಡುವ ಕಾಫಿಯ ರುಚಿಗೆ ದೇವಯ್ಯ ಮಾರುಹೋದ. ಪಾದ್ರಿ ನೀಡಿದ ಕಾಫಿಪುಡಿ ತಂದು ಬೆಟ್ಟಳ್ಳಿ ಮನೆಯ ಅಡಿಗೆ ಮನೆಯಲ್ಲಿ ಕಾಫಿ ಮಾಡುವ ವಿಧಾನವನ್ನು ಹೆಂಡತಿಗೆ ಕಲಿಸುವ ಪ್ರಯತ್ನ ಮಾಡಿದ. ಆ ಕಾಫಿ ಕುಡಿದ ಕಲ್ಲೇಗೌಡರು ವಾಕರಿಕೆಯಿಂದ ವಾಂತಿ ಮಾಡಿಕೊಂಡು ಬಾಯಿಗೆ ಬಂದಂತೆ ಬೈಯ್ದು ಕ್ಯಾಕರಿಸಿ ತುಪ್ಪಿದ್ದನ್ನು ದೇವಯ್ಯ ಅಂತಕ್ಕನಲ್ಲಿ ನೆನಪಿಸುತ್ತಾನೆ. ಪಾದ್ರಿ ಜೀವರತ್ನಯ್ಯ ತೀರ್ಥಹಳ್ಳಿಯಿಂದ ಕಾಫಿ ಪುಡಿಯನ್ನು, ಕಾಫಿ ಹೋಟೆಲ್ ಎಂಬ ನಾಮಫಲಕವನ್ನು ಮೇಗರವಳ್ಳಿ ಅಂತಕ್ಕಶೆಟ್ಟಿ ಮನೆಗೆ ತರುತ್ತಾನೆ. ಸಹಜವಾಗಿಯೇ ವ್ಯಾಪಾರಿವೃತ್ತಿಯ ಅಂತಕ್ಕ ಬಹುಬೇಗ ಒಳ್ಳೆ ಕಾಫಿ ಮಾಡುವುದನ್ನು ಕಲಿತು ದೇವಯ್ಯನಂತವರ ಮೆಚ್ಚುಗೆ ಪಡೆಯುತ್ತಾಳೆ. ಅದುವರೆಗೆ ಅನ್ನಛತ್ರ, ಅರವಟ್ಟಿಗೆ ಇತ್ಯಾದಿ ನಾಮಧೇಯಗಳಿಂದ ಕರೆಯಲ್ಪಡುತ್ತಿದ್ದ ಅಂತಕ್ಕನ ಮನೆಗೆ ಒಂದು ಸ್ಪಷ್ಟವಾದ ಹೆಸರು ಬಂದದ್ದೇ ಕಾಫಿಯಿಂದ. 'ಕಾಫಿ ಹೋಟೆಲ್' ಎಂಬ ಪಾದ್ರಿಯು ಅಂಟಿಸಿದ ನಾಮಫಲಕವನ್ನು ಜನ ಓದಿ 'ಓಟ್ಲುಮನೆ' ಎಂಬ ಹೆಸರು ನೀಡಿದರು. ಅಂತಕ್ಕ ತನ್ನ ಮನೆಗೆ ಕಾಫಿ ಮೂಲಕ ಬಂದ ಹೆಸರನ್ನು ಮುಜುಗರದಿಂದ, ಒಳಗೆ ಸಂತೋಷ ಪಡುತ್ತಾ ಇತರರಲ್ಲಿ ಹೇಳಿಕೊಳ್ಳುತ್ತಾಳೆ. ಮೇಗರವಳ್ಳಿ ಪೇಟೆಗೆ ಬಂದ ಹಳೇ ಮನೆ ಸುಬ್ಬಣ್ಣ ಹೆಗಡೆಯವರಿಗೆ ಅಂತಕ್ಕ ಶ್ರಮದ ಪರಿಹಾರವಾಗಿ ಕಾಫಿ ತಂದುಕೊಟ್ಟಾಗ ಅದರ ವಾಸನೆ ನೋಡಿ ಮುಖ ಸಿಂಡರಿಸಿ 'ಇದು ಎಂಥದೇ ಕಷಾಯ' ಎಂಬ ಮಾತಿಗೆ ವಿವರಣೆ ನೀಡುತ್ತಾಳೆ. "ಕಾಫಿ.......... ಅದೊಂದು ತರದ ಬೀಜ ಹುರಿದು ಪುಡಿ ಮಾಡಿ ಬೆಲ್ಲದ ನೀರು ಹಾಕಿ ಕುದಿಸಿ ಕಷಾಯ ಮಾಡಿ ಅದಕ್ಕೆ ಹಾಲು ಹಾಕಿ ಮಾಡಿದ್ದು.......... ತೀರ್ಥಹಳ್ಳಿ......... ಗೀರ್ಥಳ್ಳಿ ಪ್ಯಾಟೆ ಕಡೆಲೆಲ್ಲಾ ದಿನಾ ಹೊತಾರೆ ಕುಡಿಯೋಕೆ ಸುರು ಮಾಡಿದ್ದಾರಂತೆ.......... ಸರೀರಕ್ಕೆ ಬಾಳ ಒಳ್ಳೆಯದಂತೆ.......... ಆ ಪಾದ್ರಿ ತಂದುಕೊಟ್ಟಿದ್ದು.........." "ಅಂತಕ್ಕ ಕಾಫಿ ಮಾಡುವ ವಿಧಾನ, ಅದರ ಪ್ರಭಾವ, ಅದರ ಒಳ್ಳೆಯ ಮುಖವನ್ನು ಬೆರಗಿನಿಂದ ಉತ್ಸಾಹದಿಂದ ಹೇಳುತ್ತಾಳೆ. ಅದಕ್ಕೆ ಸುಬ್ಬಣ್ಣ ಹೆಗ್ಗಡೆಯವರಂತ ಹಿರಿಯರ ಪ್ರತಿಕ್ರಿಯೆ 'ಸ್ವಲ್ಪ ಕುಡಿದಿದ್ದರೂ ಏನೊ ವಾಕರಿಸಿ ಉಗಿದು

ಇದನ್ಯಾರು ಕುಡಿದರೆ? ಈ ಔಸ್ತೀನ? ಹಾಲು ಕಾಫೀನಾ ಬಿಸಾಕ?"[೩೫] – ಹೀಗೆ ಕಾಫಿ ದೇವಯ್ಯನಂತವರಿಗೆ ಆಕರ್ಷಣೆಯನ್ನು ಅಂತಕ್ಕನಂತವರಿಗೆ ಹೆಮ್ಮೆ ಮುಜುಗರವನ್ನುಂಟು ಮಾಡಿದರೆ, ಸುಬ್ಬಣ್ಣ ಹೆಗಡೆ, ಕಲ್ಲೇಗೌಡನಂತವರಿಗೆ ಔಷಧಿಗಿಂತ ಕೆಟ್ಟದ್ದಾಗಿ, ತಿರಸ್ಕಾರಕ್ಕೂ ಒಳಗಾಯಿತು. ಕ್ರಮೇಣ ಮಲೆನಾಡ ತಂಪು ಪರಿಸರಕ್ಕೆ ಹೆಚ್ಚು ಸೂಕ್ತವೆಂದೂ, ಶರೀರಕ್ಕೆ ಒಳ್ಳೆಯದೆಂದೂ ಉಲ್ಲಾಸದಾಯಕವೆಂದು ಪ್ರಚಾರ ಪಡೆದು ಪ್ರತಿಷ್ಠೆಯಿಂದಲೇ ಸೇವನೆಯ ಪದ್ಧತಿಯೊಳಗೆ ಸೇರಿತು.

ಎಂ.ಕೆ.ಇಂದಿರಾ ಅವರ 'ಫಣಿಯಮ್ಮ' ಕಾದಂಬರಿಯಲ್ಲಿ ಪ್ರಾರಂಭದಲ್ಲಿಯೇ ಕಾಫಿ ವಿಚಾರ ನೋಡುತ್ತೇವೆ. "ಕಾಫಿ ಎಂಬ ಪಾನೀಯ ಆ ಪ್ರಾಂತ್ಯದಲ್ಲಿ ಅದರಲ್ಲೂ ಬ್ರಾಹ್ಮಣ ಮನೆಗಳಲ್ಲಿ ಜಾರಿಗೆ ಬಂದಿರಲಿಲ್ಲ. ಆಗಿನ ಮಟ್ಟಿಗೆ ಅದು ಅಸ್ಪೃಶ್ಯ ವಸ್ತುವಾಗಿತ್ತು. ಮಕ್ಕಳಿಗೆ ಹಾಲು ಮುದುಕರಿಗೆ ಬೇಕೆಂದರೆ ಶುಂಠಿಯ ಕಷಾಯ ಅಷ್ಟೆ..... ಕ್ರೈಸ್ತ ಮತದ ಪ್ರಚಾರಕ್ಕಾಗಿ ಮೈಸೂರು ರಾಜ್ಯದ ಎಲ್ಲಡೆಯಲ್ಲಿಯೂ ಪ್ರಸರಿಸಿದ್ದರೂ. ಇನ್ನೂ ಮಲೆನಾಡಿಗೆ ಅದರ ಪಾದ ಬೆಳೆದಿರಲಿಲ್ಲ. ಕಾಫಿ ಬೀಜ, ಕಾಫಿ ಬಗ್ಗೆ ಜನ ಕೇಳಿದ್ದರಷ್ಟೆ. ಅದನ್ನು ನೋಡಿಯೂ ಇರಲಿಲ್ಲ".[೩೬] ಹೀಗೆ 'ಫಣಿಯಮ್ಮ' ಕಾದಂಬರಿ ೧೯ನೇ ಶತಮಾನದ ಉತ್ತರಾರ್ಧ ಕಾಲಮಾನದ ಸಂದರ್ಭದಲ್ಲಿ ಕಾಫಿ ಎಂಬುದು ಮಲೆನಾಡ ಪರಿಸರಕ್ಕೆ ದೂರದ ಮಾತಾಗಿತ್ತು ಎಂಬುದನ್ನು ದಾಖಲಿಸಿದರೆ, ೨೦ನೇ ಶತಮಾನ ಆರಂಭಕ್ಕಾಗಲೇ ಆಕರ್ಷಕವಾಗಿ ದಾಳಿ ಮಾಡಿರುವುದನ್ನು ತಗ್ಗಿನಮನೆ ಸೀತೆ ಕಾದಂಬರಿ ದಾಖಲಿಸುತ್ತದೆ.

ಮೊದಮೊದಲು ಐರೋಪ್ಯರ ಮೂಲಕ ಬಂದ ಕಾರಣ ಕಾಫಿ ಮಡಿಮೈಲಿಗೆಗೆ ಒಳಗಾಯಿತು. ಅದರ ಆಕರ್ಷಣೆಯನ್ನು ಕಡೆಗಣಿಸಲಾಗದೆ ಇದ್ದಾಗ ಅದಕ್ಕೆ ಪೌರಾಣಿಕ ದೀಕ್ಷೆ ಕೊಟ್ಟು ಸಂಪ್ರದಾಯದೊಳಗೆ ಸೇರಿಸಿಕೊಂಡದ್ದು ಮಾತ್ರ ಕುತೂಹಲಕಾರಿಯಾದ ಸಂಗತಿ. ಎಂ.ಕೆ.ಇಂದಿರಾ ಅವರ 'ತಗ್ಗಿನಮನೆ ಸೀತೆ' ಕಾದಂಬರಿಯಲ್ಲಿ ಜನ ಸಮುದಾಯದಲ್ಲಿದ್ದ ಸಂಗತಿಯನ್ನು ದಾಖಲಿಸಿದ್ದಾರೆ. ಕಷಾಯ ಕುಡಿದು ಅಭ್ಯಾಸವಿದ್ದ ಮಂದಿ ಇದಕ್ಕೆ 'ಕೈಲಾಸದ ಕಷಾಯ' ಎಂಬ ನಾಮಧೇಯ ನೀಡಿ ಪೌರಾಣಿಕ ಆವರಣ ಕಲ್ಪಿಸಲಾಯಿತು ಎಂಬುದನ್ನು ಕಾದಂಬರಿ ಹೇಳುತ್ತದೆ. "ಭಗೀರಥನ ಪ್ರಾರ್ಥನೆಯ ಮೇರೆಗೆ ಆಕಾಶದಿಂದ ಗಂಗೆ ಪರಶಿವನ ಜಡೆಯ ಮೇಲೆ ಜಾರಿ ಭೂಮಿಗಿಳಿದಳು. ಇದರಿಂದ ಶಿವನಿಗೆ ವಿಪರೀತ ನೆಗಡಿಯಾಯಿತು. ಇದನ್ನು ಹೋಗಲಾಡಿಸಲು ಅಗ್ನಿ ದೇವ ಧಗೆ ಎಬ್ಬಿಸಿದರೂ ಜಗ್ಗಲಿಲ್ಲ. ಧನ್ವಂತರಿ ಹನುಮಂತನನ್ನು ಸಂಜೀವಿನಿ ಪರ್ವತಕ್ಕೆ ಕಳುಹಿಸಿದ ಅಲ್ಲಿ ಹನುಮ ಕೆಂಪು ಬಣ್ಣದ ಸಣ್ಣ ಹಣ್ಣಿನ ರುಚಿ ನೋಡಿದ. ಪರಿಣಾಮ ಆತನ ಬಾಲ ಉದ್ಧವಾಯಿತು. ಆ ಮೂಲಕ ಅಲ್ಲಿ ಗಿಡವನ್ನೆಲ್ಲಾ ಬಾಲದಲ್ಲಿ ಕಟ್ಟಿ ಹೊತ್ತು ತರುವಾಗ ಅದರಲ್ಲಿರುವ ಹಣ್ಣುಗಳಲ್ಲಿ ಕೆಲವು ಭರತಖಂಡದ ಮೇಲೆ ಅಲ್ಲಲ್ಲಿ ಬಿದ್ದವು. ಹನುಮಂತ ತಂದ ಒಣಗಿದ ಬೀಜ ಪುಡಿ ಮಾಡಲಾಯಿತು. ಕೆಲವು ದೇವಲೋಕದಿಂದ ಸಕ್ಕರೆ, ಕ್ಷೀರಸಾಗರದಿಂದ ಹಾಲು ಬಂದು ಬಿಸಿ ಕಷಾಯ ತಯಾರಿಸಿ ಶಿವನಿಗೆ ನೀಡಿದಾಗ ಶಿವನ ಮೂಗಿನ ಪ್ರವಾಹ ನಿಂತು ಹಗುರಾದ. ತೃಪ್ತನಾದ ಶಿವ ಇದನ್ನು ಕುಡಿದವರಿಗೆ ಜಡತೆ ಹರಿದು ಶಕ್ತಿ ಉತ್ಸಾಹಗಳು ತುಂಬಲಿ, ನಿರಂತರ ಪ್ರಯೋಜನಕ್ಕೆ ಬರಲಿ ಎಂದು ವರ ನೀಡಿದ. ಈ ಬೀಜದ ಹೆಸರಿನ ಬಗ್ಗೆ ಧನ್ವಂತರಿ ಚಿಂತಿಸಿ 'ಕಪಿ' ತಂದ ಬೀಜವಾದುದರಿಂದ 'ಕಪಿ ಬೀಜ' ಎಂದು ಕರೆದ. ಹನುಮ ಕೆಡವಿದ ಜಾಗದಲ್ಲಿ ಬೆಳೆದ

ಈ ಹಣ್ಣುಗಳನ್ನು ಮೊದಲು ಮಂಗಗಳೇ ತಿನ್ನುತ್ತಿದ್ದವು. ಮಂಗನ ಹಾಗೆ ಕೆಂಪು ಮೂತಿಯ ಆಂಗ್ಲರು ಇದನ್ನು ಹುಡುಕಿ ತೆಗೆದರು. ಅವರಿಗೆ ಕಫಿ ಎಂದು ಹೇಳಲುಬಾರದೆ ಕಾಫಿ ಎಂದರು. ಕಾಫಿಯನ್ನು ಜಾರಿಗೆ ತಂದವರು ಆಂಗ್ಲರಾದರೂ ಅದು ಭಾರತದ ಬೆಳಸು, ಈಶ್ವರನ ಕಷಾಯ"[೩೭] ಇಂತಹ ಸುಂದರವಾದ ಕಲ್ಪಿತ ಪುರಾಣವನ್ನು ಹೊತ್ತು ಕಾಫಿ ಮಡಿವಂತರ ಮನೆಮನವನ್ನು ಪ್ರವೇಶಿಸಿತು. ಇದು ಮತ್ತು ಭರಿಸುವ ವಸ್ತುವಲ್ಲ ; ದೇಹದ ಶಕ್ತಿ, ಉಲ್ಲಾಸ ನೀಡುವ ಔಷಧಿ ಎಂದು ತಿಳಿದ ಮೇಲೆ ವಿದೇಶದಿಂದ ಸ್ವದೇಶಿ ಹೋಟೆಲ್ ಪ್ರವೇಶಿಸಿ, ಈ ಕಾಫಿ ಹೋಟೆಲ್ ಮೂಲಕ ಮನೆ ಪ್ರವೇಶಿಸಿ, ಮನೆಗೆ ಬರುವ ಸಾಮಾನ್ಯ ಜನರಿಂದ ಮುಖ್ಯ ಅತಿಥಿಗಳವರೆಗೆ ಈ ಕಾಫಿ ಬಾಯಾರಿಕೆ ಇಂಗಿಸುವ, ಉಲ್ಲಾಸ ನೀಡುವ, ಸತ್ಕಾರದ ಮುಖ್ಯ ಅಂಶವಾಗಿ ನಮ್ಮ ಸಂಸ್ಕೃತಿಯ, ಸೇವಾ ಪದ್ಧತಿಯ ಒಂದು ಭಾಗವಾಗಿ ಬೆರೆತು ಹೋಗಿದೆ. ಅಷ್ಟೆ ಅಲ್ಲಾ ಮಲೆನಾಡ ಕೆಲವು ಭಾಗಗಳಲ್ಲಿ ಮುಖ್ಯ ವಾಣಿಜ್ಯ ಬೆಳೆಯಾಗಿ, ಇನ್ನು ಕೆಲವು ಕಡೆ ಅಡಿಕೆ ತೋಟಗಳಲ್ಲಿ ಆ ಮನೆಗಾಗುವಷ್ಟು ಕಾಫಿ ಬೆಳೆಯುವ ಕೃಷಿ ಪದ್ಧತಿಯಲ್ಲಿ ಅಳವಟ್ಟಿದೆ.

ಹಬ್ಬಗಳು : ಭೂಮಿ ಹುಣ್ಣಿಮೆ

"ಭಾರತೀಯರಲ್ಲಿ ಸಮಾಜದ ಒಳಿತಿಗಾಗಿ, ಸಮೂಹದ ಹೊಂದಾಣಿಕೆಗಾಗಿ, ಯಾಂತ್ರಿಕ ಬದುಕಿನಿಂದ ಅಲ್ಪಕಾಲ ಬಿಡುಗಡೆ ಪಡೆಯುವುದಕ್ಕೆ ವರ್ಷದಲ್ಲಿ ಕೆಲವು ವಿಶೇಷ ದಿನಗಳೆಂದು ಪರಿಗಣಿಸಿ ನಿಯತವಾಗಿ ಪ್ರತಿ ವರ್ಷವೂ ನಡೆಸುವ ಸಂಪ್ರದಾಯಾಚರಣೆಗಳೇ ಹಬ್ಬಗಳು. ಹಬ್ಬಗಳನ್ನು ಎರಡು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು. 'ಸಾರ್ವತ್ರಿಕ ಮತ್ತು ಸಾಂಘಿಕ'. ಏಕಕಾಲದಲ್ಲಿ ಏಕ ರೀತಿಯಲ್ಲಿ ಏಕ ರೂಪದ ಕಟ್ಟುಪಾಡುಗಳಿಗನುಸಾರವಾಗಿ ನಡೆಸುವಂಥವು ಸಾರ್ವತ್ರಿಕ ಹಬ್ಬಗಳು. ಯುಗಾದಿ, ದೀಪಾವಳಿ, ಶಿವರಾತ್ರಿ ಮುಂತಾದವು ಸಾರ್ವತ್ರಿಕ ಹಬ್ಬಗಳು ಆಯಾ ಊರುಗಳು ಸಾಂಘಿಕವಾಗಿ ನಡೆಸುವ ಏಕಕಾಲದಲ್ಲಿ ಮನೆ ಹೊರಗೆ, ಮನೆಯೊಳಗೆ ಮಾಡುವ ಹಬ್ಬಗಳು ಸಾಂಘಿಕ ಹಬ್ಬಗಳು. ಮಾರಿಹಬ್ಬ, ದೊಂಬರ ಹಬ್ಬ ಆ ರೀತಿಯವು".[೩೮]

ಭಾರತೀಯರಲ್ಲಿ ಯುಗಾದಿ, ಶ್ರಾವಣ, ನಾಗರಪಂಚಮಿ, ಗೌರಿ–ಗಣೇಶ, ದೀಪಾವಳಿ ಮುಂತಾದವು ವಿಶಿಷ್ಟವಾದ ಹಬ್ಬಗಳು. ಮಲೆನಾಡ ಪರಿಸರದಲ್ಲಿ ಈ ಎಲ್ಲಾ ಹಬ್ಬಗಳ ಜೊತೆ 'ಭೂಮಿ ಹುಣ್ಣಿಮೆ' ಎಂಬ ಹಬ್ಬವೂ ಒಂದು. ದೀಪಾವಳಿ ಹಬ್ಬಕ್ಕಿಂತ ಹದಿನೈದು ದಿವಸ ಮೊದಲು ವಾಲ್ಮೀಕಿ ಹುಣ್ಣಿಮೆಯಲ್ಲಿ ಬರುವ ಈ ಹಬ್ಬ ಪ್ರಧಾನವಾಗಿ ರೈತಾಪಿ ಸಮುದಾಯಕ್ಕೆ ಹೆಚ್ಚು ಸೀಮಿತವಾದುದು. ಬಯಲು ಸೀಮೆಯಲ್ಲಿ ವಿರಳ. "ಭೂಮಿ ಎಂಬುದಕ್ಕೆ ವಿಶೇಷವಾದ ಊಟ ಎಂಬರ್ಥವೊಂದಿದೆ. ಭೂಮಿಗೆ ಸಲ್ಲಿಸುವ ಆಹಾರ ರೂಪದ ಗೌರವದಿಂದ 'ಭೂಮಿ ಹುಣ್ಣಿಮೆ' ಬಂದಿರಬಹುದೆ ಎಂದು ಊಹೆಯೂ ಇದೆ. ಚಿಕ್ಕಮಗಳೂರು ಪ್ರಾಂತ್ಯದಲ್ಲಿ ಇದನ್ನು ಅಂಬಲಿಹಬ್ಬ ಎನ್ನುವ ಪದ ಪ್ರಚಲಿತದಲ್ಲಿದೆ".[೩೯]

ನಿಸರ್ಗದಲ್ಲೇ ದೊರೆಯುವ ಗೆಡ್ಡೆ, ಗೆಣಸು, ನೂರೊಂದು ಕುಡಿ ಸೊಪ್ಪು (ಬೆರಕಿ ಸೊಪ್ಪಿನ ಪಲ್ಯ) ತರಕಾರಿಗಳನ್ನು ಬಳಸಿ ವಿಶೇಷ ಅಡಿಗೆ ಮಾಡಿ ಬೆಳಗಿನ ಕೋಳಿ ಕೂಗುವ ಸಮಯದಲ್ಲಿ ಬೆಳೆದ ಭೂಮಿಗೆ ಎಡೆ ಮಾಡುವ ಆಚರಣೆ. ಬಹುಶಃ ರೈತಾಪಿ ಸಮುದಾಯವು ಹೆಚ್ಚು ವೆಚ್ಚವಿಲ್ಲದೆ

ಸಂತೋಷದಿಂದ ಮಾಡುವ ಹಬ್ಬ ಎಂದರೆ ಭೂಮಿ ಹುಣ್ಣಿಮೆ ಎಂದರೆ ಅತಿಶಯೋಕ್ತಿಯಲ್ಲ. ಇದನ್ನು ಕುವೆಂಪು 'ಕಳಮ ಶ್ರೀಯ ಪೂಜೆ'[೪೦] ಎಂದು ಕರೆಯುತ್ತಾರೆ. ಭೂಮಿಯು ಬೆಳೆದ ಪೈರಿನ ಗರ್ಭದಲ್ಲಿ ಹೊಡೆಯನ್ನು ಅಡಗಿಸಿಕೊಂಡಿರುವ ಭೂಮಿ ರೈತಾಪಿ ಸಮುದಾಯಕ್ಕೆ ಗರ್ಭ ಹೊತ್ತ ತಾಯಿ. ಆಕೆಗೆ ಸೀಮಂತ ಮಾಡುವ ಕಲ್ಪನೆ ಎಷ್ಟು ಉದಾತ್ತವಾದುದು ಎಂಬುದನ್ನು ಗಮನಿಸಬಹುದು. ಭೂಮಿ ಹುಣ್ಣಿಮೆಯಲ್ಲಿ ಅರ್ಪಿಸಿದ ಆಹಾರವು ಭೂಮಿ ತಾಯಿ ದೀಪಾವಳಿ ಹಬ್ಬದ ಬೆಳಕಿನಲ್ಲಿ ಉಂಡು ಸಂಪ್ರೀತಳಾಗುತ್ತಾಳೆ ಎಂಬ ನಂಬಿಕೆಯ ಮೂಲಕ ಭೂಮಿಯ ಜೊತೆ ರೈತಾಪಿ ವರ್ಗದ್ದು ಭಾವನಾತ್ಮಕವಾದ ಸಂಬಂಧ ಗಮನಿಸಬಹುದು.

"ಈಗಲೂ ಭೂಮಿ ಹುಣ್ಣಿಮೆ ಆಚರಣೆ ಉಳಿದು ಬಂದಿದೆಯಾದರೂ ಅದು ಬಹುತೇಕ ಯಾಂತ್ರಿಕವಾಗಿದೆ. ಇಡೀ ರಾತ್ರಿ ನಿದ್ದೆ ಮಾಡದೆ ಅಡಿಗೆ ಮಾಡಬೇಕೆ ಎಂಬುದನ್ನು ಯಾರೂ ಒಪ್ಪುವುದಿಲ್ಲ. ಗೃಹಣಿ ನಿದ್ರಿಸಿದರೆ ಫಸಲು ಕೆಡುತ್ತದೆ ಎಂಬುದು ಮೂಢನಂಬಿಕೆಯಿಂದ ಪರಿಗಣಿಸಲ್ಪಟ್ಟಿದೆ. ಬೋರ್ಡಿಂಗ್‌ನಿಂದ ಬಂದ ಮಕ್ಕಳು ಬೆರಕೆ ಸೊಪ್ಪು ತರಲು ಹೋಗುವುದಿಲ್ಲ. ಗದ್ದೆಯ ಪೂಜೆಗೂ ಆ ಬೆಳಗಿನ ಹೊತ್ತು ಹೋಗಲಿಚ್ಚಿಸುವುದಿಲ್ಲ. ಹುಳ ಹುಪ್ಪಟೆ ಇರಬಹುದೆಂಬ ಭಯ, ಬೆಳಗಿನ ಇಬ್ಬನಿಯಿಂದ ನೆಗಡಿಯಾಗಬಹುದು ಕಾಲಕ್ಕೆ ತಕ್ಕಂತೆ ಬದಲಾಗಬೇಕು, ಎಲ್ಲವೂ ಬದಲಾಗಿದೆ"[೪೧] ಎಂಬ ಮಾತು ಭೂಮಿ ಹುಣ್ಣಿಮೆ ಹಬ್ಬಕ್ಕೆ ಮಾತ್ರವಲ್ಲ ; ಎಲ್ಲ ಹಬ್ಬಗಳೂ ಯಾಂತ್ರಿಕತೆಯನ್ನು ಪಡೆದಿವೆ.

ಹೀಗೆ ಕೃಷಿ ಬದುಕಿನ ಹಿನ್ನೆಲೆಯಲ್ಲಿ ರೂಢಿಗತವಾಗಿ ಬಂದ ಆಚರಣೆಗಳಾದ ಭೂಮಿ ಹುಣ್ಣಿಮೆಯಾಗಲಿ, ಯುಗಾದಿ-ದೀಪಾವಳಿಯಂತ ಸಾರ್ವತ್ರಿಕವಾದ ಹಬ್ಬಗಳಾಗಲಿ ಆಧುನಿಕ ಜೀವನಕ್ರಮದ ಹಿನ್ನಲೆಯಲ್ಲಿ ಯಾಂತ್ರಿಕ ಆಚರಣೆಗಳಾಗಿವೆ. ಅದೇ ಹೊತ್ತಿಗೆ ನಗರ ಜೀವನಕ್ರಮದಲ್ಲಿ ರೂಢಿಗತವಾಗಿರುವ ವರಲಕ್ಷ್ಮೀ ಪೂಜೆ, ಮಂಗಳಗೌರಿ ವ್ರತ, ಸಂಕಷ್ಟ ಚತುರ್ಥಿ, ಹುಟ್ಟಿದ ಹಬ್ಬಗಳು ಮುಂತಾದವು ಮಲೆನಾಡಿನಂತಹ ಹಳ್ಳಿ ಪರಿಸರದಲ್ಲೂ ಪ್ರವೇಶ ಮಾಡುತ್ತಿರುವುದು ಕುತೂಹಲ ಸಂಗತಿಯಾಗಿದೆ.

ಆಧುನಿಕ ಶಿಕ್ಷಣ, ಈ ಮೂಲಕ ರೂಢಿಸಿಕೊಂಡ ಆಧುನಿಕ ಜೀವನಕ್ರಮ ಆರ್ಥಿಕ ಸ್ಥಿತಿಯ ಸುಧಾರಣೆ, ಬೇರೆ ಬೇರೆಯ ಉದ್ಯೋಗಗಳು, ಈ ಹಿನ್ನಲೆಯಲ್ಲಿ ಈ ಪರಿಸರದಿಂದ ವಲಸೆ, ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿರುವುದು, ಸ್ವತಂತ್ರ್ಯವಾಗಿ ಬದುಕಬೇಕೆಂಬ ಮನೋಭಾವ ಇತ್ಯಾದಿಗಳಿಂದಾಗಿ ಮಲೆನಾಡ ಪರಿಸರದಲ್ಲಿ ಪರಂಪರಾಗತವಾಗಿ ಬಂದ ಹಬ್ಬಗಳ ಆಚರಣೆಗಳೆಲ್ಲ ಸಾಮೂಹಿಕವಾದ ಸಂತೋಷಗಳನ್ನೆಲ್ಲಾ ಕಳೆದುಕೊಂಡು ಯಾಂತ್ರಿಕವಾದ ಆಚರಣೆಗಳಾಗಿ ಮಾತ್ರ ಉಳಿದಿವೆ.

ಮದುವೆ ಆಚರಣೆ

'ಮದುವೆ' ಎಂಬುದು ಒಂದು ಸಾಮಾಜಿಕ ವ್ಯವಸ್ಥೆ, ಮನುಷ್ಯನ ಸುಸಂಸ್ಕೃತಿಯ ಸಂಕೇತ. ಸಮಾಜದ ಮೂಲ ಘಟಕ ಕುಟುಂಬ. ಈ ಕುಟುಂಬದ ಮೂಲವೇ ಹೆಣ್ಣು ಗಂಡು ತಮ್ಮ ಕಾಮನೆಗಳನ್ನು ನೈತಿಕ ಚೌಕಟ್ಟಿನೊಳಗೆ ತೃಪ್ತಿಪಡಿಸಿಕೊಳ್ಳುವ, ವಂಶಾಭಿವೃದ್ಧಿಯ ಉದ್ದೇಶ ಹೊಂದಿರುವ ಸಾಂಸಾರಿಕ ವ್ಯವಸ್ಥೆಗೆ ಪ್ರವೇಶಿಸಲು ಸಾಮಾಜಿಕವಾಗಿ ಒಪ್ಪಿಗೆ ನೀಡುವ ಕ್ರಿಯಾಚರಣೆಯೇ ಮದುವೆ. ಜನ ಸಮೂಹದ

ನಡುವೆ ಅಥವಾ ಜನ ಸಮೂಹದ ಗಮನಕ್ಕೆ ಬರುವಂತೆ ಬಂಧುಬಾಂಧವರು, ಆಪ್ತೇಷ್ಟರ ಸಮ್ಮುಖದಲ್ಲಿ ನಡೆಯುವ ಕ್ರಿಯೆ ಒಂದು ಸಾಂಸ್ಕೃತಿಕ ಆಚರಣೆ, ವಾಸ್ತವವಾಗಿ ಮದುವೆಯೆಂಬುದು ಗಂಡು-ಹೆಣ್ಣನ್ನು ಒಂದುಗೂಡಿಸುವ ನೆಪದಲ್ಲಿ ಅಳವಡಿಸಿಕೊಂಡು, ಆಚರಿಸಿಕೊಂಡು ಬರುತ್ತಿರುವ ಸಾಂಸ್ಕೃತಿಕ ಆಚರಣೆ ಸಾಮಾಜಿಕವಾಗಿ ಮಹತ್ವವನ್ನು ಪಡೆದಿರುತ್ತದೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಯಾದ ಮದುವೆ ಪ್ರತಿಯೊಂದು ಭೌಗೋಳಿಕ ಪರಿಸರ, ಸಾಮಾಜಿಕ ಪದ್ಧತಿ, ಆರ್ಥಿಕ ಸ್ಥಿತಿಗತಿ, ಮನೋಭಾವ ಇತ್ಯಾದಿಯನ್ನು ಅವಲಂಭಿಸಿ ವೈವಿಧ್ಯವಾಗಿ ಆಚರಣೆಯಲ್ಲಿರುತ್ತದೆ. ಮನುಷ್ಯ ಜೀವಿಯ ಹುಟ್ಟು-ಸಾವಿನ ನಡುವೆ ಬದುಕಿನ ಹಾದಿಯಲ್ಲಿ ಒಂದು ತಿರುವು ತರುವ ಈ ಮದುವೆ ಸಾವಿರಾರು ವರ್ಷಗಳಿಂದ ನಡೆದುಕೊಂಡು, ಸಾಮೂಹಿಕ ಅಂಗೀಕಾರದ ಮುದ್ರೆಯನ್ನು ಪಡೆದುಕೊಂಡು ಬರುತ್ತಿರುವುದರಿಂದ ರೂಢಿಗತವಾದ ಸಾಂಪ್ರದಾಯಿಕ ಆಚರಣೆಯಾಗಿದೆ. ಮಾನವ ಇತಿಹಾಸವನ್ನು ಅವಲೋಕಿಸಿದರೆ ಆರಂಭದಲ್ಲಿ ಸರಳ ನಿರಾಡಂಬರ ಸಾಂಕೇತಿಕ ಕ್ರಿಯಾಚರಣೆಯಾಗಿದ್ದಿರಬಹುದಾದ ಮದುವೆ ಸಾಮಾಜಿಕವಾಗಿ ಅಥವಾ ವ್ಯಕ್ತಿಗತವಾದ ಪ್ರತಿಷ್ಠೆಯ ಹಿನ್ನಲೆಯಲ್ಲಿ ವೈಭವೀಕರಣಗೊಳ್ಳುತ್ತಾ ಬಂದಂತೆ ತೋರುತ್ತದೆ. ಅಂತೆಯೆ ಮಲೆನಾಡ ಪರಿಸರದ ಜನಸಮುದಾಯಗಳಲ್ಲಿ ತಮ್ಮ ಆರ್ಥಿಕ, ಸಾಮಾಜಿಕ, ಮನೋಭಾವದ ಹಿನ್ನೆಲೆಯಲ್ಲಿ ಮದುವೆಗಳು ನಡೆದುಕೊಂಡು ಬರುತ್ತಿರುವುದನ್ನು ಕಾಣಬಹುದು.

ಈ ಹಿನ್ನೆಲೆಯಲ್ಲಿ ಸುಮಾರಾಗಿ ಒಂದು ಶತಮಾನದಿಂದ ಈ ಮಲೆನಾಡ ಪರಿಸರದಲ್ಲಿ ನಡೆದುಕೊಂಡು ಬರುತ್ತಿರುವ ಮದುವೆ ಕ್ರಿಯಾಚರಣೆ ಬಗ್ಗೆ ಈ ಪರಿಸರದ ಲೇಖಕರ ಕಥನಗಳ ಆಧಾರದ ಮೇಲೆ ಇಲ್ಲಿ ಚರ್ಚಿಸಲಾಗಿದೆ ಮತ್ತು ಆದಂತಹ ಸ್ಥಿತ್ಯಂತರವನ್ನು ಗುರುತಿಸಲು ಪ್ರಯತ್ನಪಡಲಾಗಿದೆ.

ಭಾರತದ ಬಹುತೇಕ ಇತರ ಪರಿಸರಗಳ ಪದ್ಧತಿಯಂತೆಯೇ ಮಲೆನಾಡ ಪರಿಸರದ ಸಾಂಪ್ರದಾಯಿಕ ಮದುವೆಗಳಲ್ಲಿ ಹೆಣ್ಣು-ಗಂಡಿನ ಒಪ್ಪಿಗೆ ಅಷ್ಟು ಪ್ರಧಾನವಾಗಿರುವುದಿಲ್ಲ. ಸಮುದಾಯದಲ್ಲಿ ಪರಂಪರಾಗತವಾಗಿ ಬಂದಂತಹ ಪೂರ್ವ ನಿರ್ಧಾರ, ಗುರು-ಹಿರಿಯರ ನಿರ್ಣಯವೇ ಪ್ರಧಾನವಾಗಿರುತ್ತದೆ. ಸಾಮಾನ್ಯವಾಗಿ ಯಾವುದೇ ವಿವಾಹ ಪತ್ರಿಕೆಯಲ್ಲಿ 'ಗುರು-ಹಿರಿಯರು ನಿಶ್ಚಯಿಸಿದಂತೆ' ಎಂಬ ವಾಕ್ಯವೇ ಇದನ್ನು ದೃಢೀಕರಿಸುತ್ತದೆ. ಅವಿಭಕ್ತ ಕುಟುಂಬದ ವ್ಯವಸ್ಥೆಯಲ್ಲಂತೂ ಅತಿ ಕಟ್ಟುನಿಟ್ಟಾದುದು. ಹಾಗೆಯೆ ಪ್ರತಿಯೊಂದು ಜಾತಿ, ಸಮುದಾಯಗಳು ಎಷ್ಟೇ ಪರಸ್ಪರ ಕೊಡುಕೊಳುವಿಕೆ ವ್ಯವಹಾರಗಳಿದ್ದರೂ ತಮ್ಮ ತಮ್ಮ ಸಾಂಪ್ರದಾಯಿಕ ಅನನ್ಯತೆಯ ಮುಲಾಶಯಗಳನ್ನು ಹಾಗೆಯೇ ಕಾಪಾಡಿಕೊಂಡು ಬಂದಿವೆ. ಈ ನೆಲೆಯಲ್ಲಿ ಮಲೆನಾಡ ಪರಿಸರದಲ್ಲಿ ಬದುಕುತ್ತಿರುವ ಬ್ರಾಹ್ಮಣರು, ಒಕ್ಕಲಿಗರು, ಹಳೆ ಪೈಕದವರು, ಹರಿಜನರು ಮೊದಲಾದ ಸಮುದಾಯಗಳೆಲ್ಲ ತಮ್ಮ ಪರಂಪರೆಯ ಮೂಲಾಶಯಗಳನ್ನು ಕಾಪಾಡಿಕೊಂಡು ಬರುತ್ತಿವೆ.

ಮಲೆನಾಡ ಪರಿಸರದ ಬ್ರಾಹ್ಮಣ ಸಮುದಾಯದಲ್ಲಿ ಹಿಂದೆ ಬಾಲ್ಯವಿವಾಹ ಪದ್ಧತಿ ಹೆಚ್ಚು ರೂಢಿಯಲ್ಲಿತ್ತು ಎಂಬುದನ್ನು ಈ ಪರಿಸರದ ಕಥನಗಳು ಹೇಳುತ್ತವೆ. "ಅಂದಿನ ಕಾಲಕ್ಕೆ ಗಂಡು

ಮಕ್ಕಳಿಗೆ ಐದು ವರ್ಷಕ್ಕೆ ಉಪನಯನ, ಹದಿನಾಲ್ಕು ವರ್ಷಕ್ಕೆ ಮದುವೆ, ಹೆಣ್ಣು ಮಕ್ಕಳಿಗೆ ಒಂಭತ್ತು ವರ್ಷದೊಳಗೆ ಮದುವೆ ಮಾಡಿ ಮುಗಿಸುವರು. ಹತ್ತು ವರ್ಷವಾಯಿತೆಂದರೆ ಹಾಹಾಕಾರ ಹತ್ತುವುದು".[೪೨] 'ಫಣಿಯಮ್ಮ' ಕಾದಂಬರಿಯ ಫಣಿಯಮ್ಮನಿಗೆ ಮದುವೆಯಾಗುವಾಗ ಒಂಬತ್ತು ವರ್ಷ, ಪತಿ ನಂಜುಂಡನಿಗೆ ಹದಿನೈದು ವರ್ಷ. (ಮದುವೆ ಸಂಸಾರ ಏನೂ ಎಂಬುದು ತಿಳಿಯದ ಮೊದಲೇ ವಿಧವೆಯಾದಳು.) ರೂಢಿಗತ ಪದ್ಧತಿಯಂತೆ ಸಕಾಲದಲ್ಲಿ ಮದುವೆಯಾಗದಿದ್ದರೆ ಆ ಹೆಣ್ಣನ್ನು ಮತ್ತು ಆಕೆಯನ್ನು ಪಡೆದ ಮನೆಯನ್ನು ಆ ಸಮಾಜ ಒಂದು ರೀತಿ ಅವಮಾನದಿಂದ ನೋಡುತ್ತಿತ್ತು. ಅವರೂ ಕೂಡ ಏನೊ ಅಪರಾಧದ ಭಾವನೆಯಿಂದ ನರಳುತ್ತಿದ್ದರು. ಶತ್ರುಗಳ ದಾಳಿ, ಅಪಹರಣದ ಭಯ, ಕಾಮದೃಷ್ಟಿಗೆ ಒಳಗಾಗಬಾರದೆಂಬ ಕಾಳಜಿಗಳು, ಸಾಮಾಜಿಕವಾಗಿ ಮೇಲುಸ್ತರದಲ್ಲಿರುವ ಬ್ರಾಹ್ಮಣ ಸಮುದಾಯ ಇಂತಹ ಸಂದರ್ಭಗಳಿಂದ ಮನೆತನದ ಗೌರವವನ್ನು ಕಾಪಾಡಿಕೊಂಡು ಬರಬೇಕೆಂಬ ಮನೋಭಾವನೆಗಳು 'ಬಾಲ್ಯ ವಿವಾಹ'ಕ್ಕೆ ಕಾರಣಗಳಾಗಿವೆ ಎನ್ನಬಹುದು.

ಈ ಬ್ರಾಹ್ಮಣ ಸಮುದಾಯದಲ್ಲಿ ಹೆಣ್ಣು ಮದುವೆಗೆ ಮೊದಲೇ ಋತುಮತಿಯಾದರೆ ಹೆಣ್ಣನ್ನು ಮನೆಯಿಂದ ಹೊರ ಹಾಕುತ್ತಿದ್ದರೆ? ಕಾಡಿಗೆ ಕಳುಹಿಸುತ್ತಿದ್ದರೆ? ಎಂಬ ಸಂಶಯಗಳು ಏಳುತ್ತವೆ. ಮಲೆನಾಡ ಪರಿಸರದ ಜನರ ಮಾತುಗಳಲ್ಲಿ ಅಂತಹ ಸಂಶಯಕ್ಕೆಡೆಯಾಗುವ ಅಂಶಗಳಿವೆ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸುಬ್ಬಣ್ಣ ಹೆಗಡೆ ವಯಸ್ಸಿಗೆ ಬಂದ ಮಗಳ ಬಗ್ಗೆ ಹೀಗೆ ವಿಚಾರ ಮಾಡುತ್ತಾನೆ.

"ನೆರೆಹೊರೆಯವರು ಮಗಳಿಗೆ ಮದುವೆ ವಯಸ್ಸು ಮೀರಿತೆಂದು ಹೇಳುತ್ತಿದ್ದರೂ ಸುಬ್ಬಣ್ಣ ಹೆಗಡೆಗೆ ಹಾಗೇನೂ ತೋರುವುದಿಲ್ಲ. ಚೆನ್ನಾಗಿ ಕೆಲಸ ಮಾಡಿ ಹೊಟ್ಟೆ ತುಂಬಾ ತಿನ್ನುವ ಹಳ್ಳಿಯ ಹೆಣ್ಣು ಬೆಳೆಯುವಂತೆ ಮಂಜಮ್ಮ ಸುಪುಷ್ಟವಾಗಿ ಬೆಳೆದಿದ್ದ ಮಾತ್ರಕ್ಕೆ ಮದುವೆಯ ವಯಸ್ಸು ಮೀರುವುದೆಂದರೆ ಅರ್ಥವಾದರೂ ಏನು? ಅವಳೇನು ಹಾರುವರ ಹೆಣ್ಣೆ? ಮದುವೆಯಾಗುವುದಕ್ಕೆ ಮೊದಲೆ ದೊಡ್ಡವಳಾಗಿ ಬಿಟ್ಟರೆ ಕಾಡಿಗಟ್ಟಬೇಕೆಂಬ ಹೆದರಿಕೆಯೇನು ತಮಗೆ?[೪೩]

ಈ ಬಗ್ಗೆ ಡಾ.ಗುರುಪಾದ ಮರಿಗುದ್ದಿ ಅವರು "ಇದು ಬಹುಶಃ ಹೆಣ್ಣು ಹೆತ್ತ ಬ್ರಾಹ್ಮಣರ ಲೋಕರೂಢಿಯ ಭಯವಾಗಿತ್ತೊ ಅಥವಾ ಹಿಂದೊಂದು ಕಾಲಕ್ಕೆ ಅಂಥ ಆಚರಣೆ ಏನಾದರೂ ರೂಢಿಲ್ಲಿದ್ದು ಬರುಬರುತ್ತ ಹೇಳಿಕೆಯಾಗಿ ಉಳಿದು ಬಿಟ್ಟಿತ್ತೊ"[೪೪] ಎಂದು ಸಂಶಯ ವ್ಯಕ್ತಪಡಿಸುತ್ತಾರೆ. ಆದರೆ ಋತುಮತಿಯಾಗುವ ಮೊದಲೇ ತಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಕೊಡಬೇಕೆಂಬ ಪದ್ಧತಿ ಇರುವ ಬಗ್ಗೆ ಮಧ್ಯಕಾಲೀನ ಇತಿಹಾಸ ಹೇಳುತ್ತದೆ. ಹಾಗೆ ಮಲೆನಾಡ ಪರಿಸರದಲ್ಲಿರುವ ಅನೇಕ ದೇವತೆಗಳು ಅಂದರೆ ಹೊಸಳ್ಳಿ, ಗುತ್ತಿಯಡೇಹಳ್ಳಿ, ಸಮಕಾನಿ, ಆರಗ ಮುಂತಾದ ಸ್ಥಳಗಳ ಅಮ್ಮನವರ ಹಿಂದಿನ ಐತಿಹ್ಯಗಳು ಬ್ರಾಹ್ಮಣ ಸಮುದಾಯದ ಹೆಣ್ಣು ಮಕ್ಕಳು ಕಾಡು ಪಾಲಾಗಿ ಅಲ್ಲಲ್ಲಿ ದೇವತೆಗಳಾಗಿ ನೆಲಸಿವೆ ಎಂಬ ಕಥೆ ಹೇಳುತ್ತವೆ. ಸಾಗರದಲ್ಲಿನ ಅಸಾದಿ ಹೇಳಿದ 'ಮಾರಮ್ಮ'ನ ಬಗ್ಗೆ ಇರುವ ದಂತಕಥೆ ಪುರಾವೆ ಒದಗಿಸುತ್ತದೆ. "ಬ್ರಾಹ್ಮಣರ ಮನೆಯ ಹುಡುಗಿಯ ಕಣ್ಣುಕಟ್ಟಿ ಕಾಡಿನಲ್ಲಿ ಕ್ರೂರ ಮೃಗಗಳ ಬಾಯಿಗೆ ಬಿದ್ದು ಸಾಯಲು ಬಿಟ್ಟು ಬಿಡುತ್ತಾರೆ. ಆ ದಾರಿಯಲ್ಲಿ ಬರುತ್ತಿದ್ದ ಮಾದಿಗರ

ಹುಡುಗನೊಬ್ಬ ಅವಳನ್ನು ನೋಡಿ ರಕ್ಷಿಸುತ್ತಾನೆ. ತಾನು ಬ್ರಾಹ್ಮಣರವನೆಂದು ಹೇಳಿ ಅವಳನ್ನು ಮದುವೆಯಾಗುತ್ತಾನೆ. ಇದು ಬ್ರಾಹ್ಮಣ ಸಮಾಜದಲ್ಲಿದ್ದ ಕ್ರೂರ ಸಂಪ್ರದಾಯಯೊಂದರ ಮೇಲೆ ಬೆಳಕು ಚೆಲ್ಲುತ್ತದೆ".[೪೫] ಹೀಗೆ ಮಲೆನಾಡ ಪರಿಸರದ ಅಮ್ಮನವರ ದೇವಾಲಯಗಳ ಬಗ್ಗೆ ಇರುವ ಇಂತಹ ಸಂಗತಿಗಳು ಹಿಂದೆ ಬಾಲ್ಯವಿವಾಹ ಪದ್ಧತಿ ಕಟ್ಟುನಿಟ್ಟಾಗಿ ಪಾಲನೆಯಾಗುತ್ತಿದ್ದುದನ್ನು ತಿಳಿಯಪಡಿಸುತ್ತದೆ.

ಬ್ರಾಹ್ಮಣ ಸಮುದಾಯದಲ್ಲಿ ವಧುದಕ್ಷಿಣೆ ಅಥವಾ ವರದಕ್ಷಿಣೆ ನೀಡುವ ಪದ್ಧತಿ ಇರಲಿಲ್ಲ. ಈಗಲೂ ಇತರ ಸಮುದಾಯಗಳಿಗೆ ಹೋಲಿಸಿಕೊಂಡರೆ ಕಡಿಮೆ ಎಂದೇ ಹೇಳಬಹುದು. ಆದರೆ ವರೋಪಚಾರ ಎಂಬುದು ಸರಳವಾಗಿತ್ತು. ಎಂಥ ಶ್ರೀಮಂತರಾದರೂ ಅಳಿಯನಿಗೆ ಕೊಡುತ್ತಿದ್ದದ್ದೇನೆಂದರೆ ತಾಮ್ರದ ತಟ್ಟೆ, ಪಂಚಪಾತ್ರೆ, ಸಂಕಲ್ಪೆಪಂಚೆ, ಪೇಟ, ಕಾಶಿಯಾತ್ರೆ ಕೋಲು, ಛತ್ರಿ, ಮೆಟ್ಟು ; ಮುಗಿಯಿತು ಅಳಿಯನಿಗೆ ಕೊಡುವ ಬಳುವಳಿ ಎಲ್ಲರ ಮನೆಯ ಸಂಪ್ರದಾಯವೂ ಅದೇ ಆಗಿದ್ದರಿಂದ ಅದರಲ್ಲಿ ಆಕ್ಷೇಪಣೆ ಇರಲಿಲ್ಲ.[೪೬]

ಬ್ರಾಹ್ಮಣ ಸಮುದಾಯದಲ್ಲಿ ಒಂದೇ ಗೋತ್ರದವರು ಮದುವೆಯಾಗುವುದಿಲ್ಲ. ಜಾತಕ ಹೊಂದಿಕೆಯಾಗುವುದು ಕಡ್ಡಾಯ ನಿಯಮ. ಫಣಿಯಮ್ಮನವರ ಜಾತಕ ಹದಿನಾರೂ ಗುಣಗಳು ಕೂಡಿರುವ ಅಖಂಡಡ ಸೌಭಾಗ್ಯ ಸೂಚಿಸುವ ಉತ್ತಮ ಹೊಂದಿಕೆಯಾಗಿತ್ತು. ಮದುವೆಯಾಗಿ ಮೂರು ತಿಂಗಳಲ್ಲೇ ವಿಧವೆಯಾದದ್ದು ವ್ಯಂಗ್ಯವಾಗಿತ್ತು. ಆದಕಾರಣ ಫಣಿಯಮ್ಮ ಈ ಜಾತಕದ ಬಗ್ಗೆ ನಂಬಿಕೆ ಕಳೆದುಕೊಂಡು ಅದರ ಬಗ್ಗೆ ತಣ್ಣನೆಯ ಪ್ರತಿರೋಧವನ್ನು ವ್ಯಕ್ತಪಡಿಸುತ್ತಲೇ ಬರುವುದನ್ನು ಕಾದಂಬರಿಯ ಉದ್ದಕ್ಕೂ ನೋಡಬಹುದು.

ರಾಜರಾಂ ಮೋಹನ್‌ರಾಯ್ ಮುಂತಾದ ಸಮಾಜ ಸುಧಾರಕರ ಹೋರಾಟ ಮಲೆನಾಡ ಪ್ರದೇಶಕ್ಕೂ ನಿಧಾನವಾಗಿ ತಟ್ಟಿ, ಇಲ್ಲಿಯ ಪರಿಸರದಲ್ಲಿ ಶಿಕ್ಷಣ ಹೆಚ್ಚಿದಂತೆ ಬಾಲ್ಯವಿವಾಹ ಪದ್ಧತಿ ನಿಲ್ಲುತ್ತಾ ಬಂತು. ಹಾಗಿದ್ದೂ ಗಂಡು–ಹೆಣ್ಣು ಒಬ್ಬರನ್ನೊಬ್ಬರು ನೋಡುವ ಮತ್ತು ಒಪ್ಪುವ ಸಂಪ್ರದಾಯವೇ ಇರಲಿಲ್ಲ. "ಮನೆಯ ಹಿರಿಯರು ಎದುರಿಗೆ ತಂದು ನಿಲ್ಲಿಸಿದ ಗಂಡಿನ ಕೊರಳಿಗೆ ಮಾಲೆ ಹಾಕುವುದಷ್ಟೇ, ಗೊತ್ತು. ಮದುವಣಗಿತ್ತಿ ಗಂಡನ ಮುಖ ನೋಡಬಾರದು, ನಾಚಿಕೊಳ್ಳಲೇಬೇಕು ಎಂಬುದು ಗೊತ್ತು".[೪೭] ಈ ತರಹದ ಕಟ್ಟುಪಾಡುಗಳು, ನಡೆಗಳು ಬಹುತೇಕ ಎಲ್ಲ ಸಮುದಾಯಗಳಲ್ಲೂ ಸಾಧಾರಣವಾಗಿ ಇರುವ ರೂಢಿಗತವಾದ ನಡವಳಿಕೆಯಾಗಿತ್ತು. ಅಂತೆಯೇ ಬ್ರಾಹ್ಮಣ ಸಮುದಾಯದಲ್ಲಿ ತುಸು ಹೆಚ್ಚೆ ಎಂಬಂತಿತ್ತು. ಎಂ.ಕೆ.ಇಂದಿರಾ ಅವರ 'ತಗ್ಗಿನ ಮನೆ ಸೀತೆ' ಕಾದಂಬರಿಯಲ್ಲಿ ಸೀತೆಗೆ ಕೂಡ ಮೈನೆರವ ಮೊದಲೇ ವಿವಾಹ ಕುರುವಳ್ಳಿ ರಾಮಕ್ಕನ ಮನ ಕೊಮಾರಿಯೊಂದಿಗೆ. ಈ ಮದುವೆ ಎಂಟು ದಿನಗಳ ಕಾಲ ನಡೆಯಿತು. ಆ ನಂತರ ಆಕೆ ಗಂಡನ ಮನೆಗೆ ಹೋದದ್ದು ಮೈನೆರೆದು ಪ್ರಸ್ತವಾಗಿ ನಾಲ್ಕು ವರ್ಷದ ನಂತರ.

ಶಿಕ್ಷಣದ ಅವಕಾಶಗಳು ಹೆಚ್ಚಿದಂತೆ, ಉದ್ಯೋಗವಕಾಶಗಳು ದೊರೆತಂತೆ ಬಾಲ್ಯವಿವಾಹ ಬ್ರಾಹ್ಮಣ ಸಮುದಾಯದಲ್ಲಿ ಕಡಿಮೆಯಾಗುತ್ತಾ ಬಂತು. ಜಾತಕವೇ ಮುಖ್ಯವಾದ ಆ ಸಮುದಾಯದಲ್ಲಿ ಅದರ ಬಗ್ಗೆ ವಿರೋಧಗಳು ಕಾಣಿಸುತ್ತವೆ. ವಸುಮತಿ ಉಡುಪ ಅವರ 'ಋಣ' ಕಥೆಯಲ್ಲಿ ಅಂತಹ ಸಂದರ್ಭ

ಬರುತ್ತದೆ. ಬೆಂಗಳೂರಿನಲ್ಲಿ ಹುದ್ದೆ ಪಡೆದವನ ತಂದೆಯಾದ ಪದ್ದ ಭಟ್ಟರ ಮಾತು "ಈ ಜಾತಕದ ಮುಂಡಾಮೊಚ್ತು, ಹಿಂಗದ್ದಕ್ಕೆ ಜೋತು ಬಿದ್ದೇ ನಮ್ ಬ್ರಾಂಬ್ರು ಕೆಟ್ಟಿದ್ದು. ಎಲ್ಲಾ ಜಾತಿಯೋರೂ ಜಾತಕ ನೋಡಿಯೇ ಮದುವೆ ಮಾಡ್ಕಂತಾರಾ? ಅವ್ರೇನು ಸಂಸಾರ ಮಾಡ್ಕಂಡಿರಲ್ವಾ"[೪೮] ಎಂಬ ಮಾತುಗಳಲ್ಲಿ ಕೆಳ ಸಮುದಾಯಗಳ ಬದುಕು ಮೇಲುಸ್ತರದ ಪದ್ದ ಭಟ್ಟರಂತಹ ಚಿಂತಕರಿಗೆ ಮಾರ್ಗದರ್ಶನ ನೀಡಿರುವಂತಹದು ವಿಶೇಷವಾಗಿ ಗಮನಿಸಬೇಕಾದುದು. ಅನೇಕ ಕಟ್ಟುಕಟ್ಟಳೆಗಳನ್ನು ರೂಪಿಸುವವರೂ ಅವರೇ ಮೀರುವವರೂ ಅವರೇ. ಈ ಮೀರುವಿಕೆಗೆ ಆಧುನಿಕ ಶಿಕ್ಷಣ, ವೈಚಾರಿಕತೆಯ ಜೊತೆಗೆ ತಳ ಸಮುದಾಯದ ಪ್ರಭಾವವೂ ಇದೆ ಎಂದರೆ ತಪ್ಪಾಗಲಾರದು.

ಬ್ರಾಹ್ಮಣ ಸಮುದಾಯದಂತೆ ಒಕ್ಕಲಿಗ ಸಮುದಾಯದಲ್ಲಿ ಬಾಲ್ಯವಿವಾಹವೊ ಅಥವಾ ಕಿರು ವಯಸ್ಸಿನಲ್ಲೇ ಮದುವೆ ಮಾಡುವ ಪದ್ಧತಿಯೊ ಇಲ್ಲ. "ಗಂಡು ಸಂತಾನವಿಲ್ಲದ ಮನೆಗಳಲ್ಲಿ, ಮೈನೆರೆಯುವುದಕ್ಕೆ ಮುಂಚೆಯೇ ಮದುವೆ ಮಾಡಿಕೊಟ್ಟರೆ ಪೋಷಕರಿಗೆ ಶ್ರೇಯಸ್ಸು"[೪೯] ಎಂಬ ನಂಬಿಕೆಯ ಹಿನ್ನಲೆಯಲ್ಲಿ ಅಪ್ರಾಪ್ತ ವಯಸ್ಸಿಗೆ ಮದುವೆಗೆ ಮಾಡುವ ಪದ್ಧತಿ ಬಹಳ ಹಿಂದಿನ ಕಾಲದಲ್ಲಿ ಒಕ್ಕಲಿಗ ಸಮುದಾಯದಲ್ಲಿ ಇದ್ದಂತೆ ತೋರುತ್ತದೆ. ಅದಕ್ಕೆ 'ಕನ್ನೆಧಾರೆ' ಎಂದು ಕರೆಯುವ ಮಾತು ವಾಡಿಕೆಯಲ್ಲಿದೆ. ಆದರೆ ೨೦ನೇ ಶತಮಾನದ ಆರಂಭ ಘಟ್ಟದ ಕಾಲಕ್ಕೆ ನಾವಿದನ್ನು ಕಾಣುವುದಿಲ್ಲ. ಕೃಷಿಯನ್ನೇ ಪ್ರಧಾನವಾಗಿ ಅವಲಂಭಿಸಿರುವ ಒಕ್ಕಲಿಗರ ಕುಟುಂಬದಲ್ಲಿ ಹೆಣ್ಣು ಒಂದಾಳು. ಆದ್ದರಿಂದ ಬೇಗನೆ ಮದುವೆ ಮಾಡಿಕೊಡುವುದು ಆ ಕುಟುಂಬದಕ್ಕೆ ಒಂದಾಳು ಕಡಿಮೆಯಾದಂತೆ. ಆದ್ದರಿಂದ ಪ್ರಾಪ್ತ ವಯೋಮಾನದಲ್ಲೇ ಮದುವೆ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಅದಕ್ಕೆ 'ಮನೆಗಳಲ್ಲಿ ಮದುಮಗಳು' ಕಾದಂಬರಿಯ ಹಳೆಮನೆ ಸುಬ್ಬಣ್ಣ ಹೆಗಡೆಗೆ ಮಗಳಿಗೆ ಬೇಗ ಮದುವೆ ಮಾಡಿಬಿಡಬೇಕೆಂಬ ತವಕವೇನೂ ಇಲ್ಲದ್ದನ್ನು ಕಾಣಬಹುದು.

ಒಕ್ಕಲಿಗ ಸಮುದಾಯದಲ್ಲಿ 'ವಧುದಕ್ಷಿಣೆ' ಎಂಬುದು ಪದ್ಧತಿಯಾಗಿ ರೂಢಿಯಲ್ಲಿತ್ತು. ಮಲೆನಾಡ ಅನೇಕ ಮಂದಿ ಸಾಹುಕಾರರಲ್ಲಿ ಶಾಶ್ವತ ಸಾಲಗಾರರಾಗಿದ್ದು, ಈ ತೆರ ಕೊಟ್ಟು ಮದುವೆಯಾಗುವುದರಿಂದ, ಮಲೆನಾಡ ಪರಿಸರದಲ್ಲಿ ಮಾರಿಯಂತೆ ಕಾಡುವ ಮಲೇರಿಯಾದಿ ರೋಗರುಜಿನಿಗಳಿಂದ, ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದ, ಅಜ್ಞಾನದ ನಡವಳಿಕೆಯಿಂದ ಅನೇಕ ಹೆಣ್ಣು ಮಕ್ಕಳು ಹೆರಿಗೆಯ ಸಂದರ್ಭದಲ್ಲಿ ಸಾಯುತ್ತಿದ್ದರು. ಆದಕಾರಣ ಪುರುಷ ಮತ್ತೆ ಮತ್ತೆ ಮದುವೆಯಾಗುತ್ತಿದ್ದ. ಅದಕ್ಕೆ ಮತ್ತೆ ಮತ್ತೆ ತೆರ ನೀಡಿ ಸಾಲದಲ್ಲಿ ಬೀಳುತ್ತಿದ್ದ. 'ಕಾನೂರು ಹೆಗ್ಗಡತಿ'ಯ ಕೆಳ ಕಾನೂರು ಅಣ್ಣಯ್ಯ ಗೌಡನ ಬದುಕು ಇದಕ್ಕೆ ಸಾಕ್ಷಿ.

ಮೈಮುರಿದು ದುಡಿಯುವ ಅದರ ಪ್ರತಿಫಲದಿಂದ ಪೂರ್ಣ ಹೊಟ್ಟೆಯವರಾಗಿಯೊ ಇಲ್ಲವೆ ಅರೆ ಹೊಟ್ಟೆಯವರಾಗಿಯೊ ಬದುಕನ್ನು ಸಾಗಿಸುತ್ತಿದ್ದ ಜನ ಸಮುದಾಯ ಸಾಲಕ್ಕೆ ಬೀಳುವುದು ಮದುವೆಗಾಗಿ. ಅಣ್ಣಯ್ಯಗೌಡನ ಮಗ ಓಬಯ್ಯನಿಗೆ ಇಪ್ಪತ್ತೈದು ವರ್ಷವಾಗಿದ್ದರೂ ವಿವಾಹವಾಗದಿದ್ದಕ್ಕೆ ಕಾರಣ ತೆರಕೊಡಲು ಹಣವಿಲ್ಲದಿರುವುದು. ಈ ಕಾರಣದಿಂದ ಆತನಿಗೆ ಎಲ್ಲಿಯೂ ನೆಲೆಯೂರಲು ಸಾಧ್ಯವಾಗುವುದಿಲ್ಲ. ಚಂದ್ರೇಗೌಡನ ಪ್ರೇಯಸಿ ಗಂಗೆಯಲ್ಲಿ ತನ್ನ ಕಾಮದ ಆಸೆಯನ್ನು

ಇಂಗಿಸಿಕೊಳ್ಳಬೇಕಾಗುತ್ತದೆ. ಅಂದರೆ ತೆರ ಪದ್ಧತಿ ಓಬಯ್ಯನಂತವರಿಗೆ ಸಾಧ್ಯವಾಗದೆ ಅನೈತಿಕ ಮಾರ್ಗಕ್ಕೂ ಕಾರಣವಾಗುತ್ತದೆ.

'ತೆರ' ಎಂಬುದು ಮದುವೆಯಾಗುವ ಗಂಡು ಹೆಣ್ಣಿನ ಮನೆಯವರಿಗೆ ನೀಡಬೇಕಾದಂತಹ ಹಣ, ವಸ್ತು, ಒಡವೆಗಳ ಮೊತ್ತ, ವಾಸ್ತವವಾಗಿ ಈ ತೆರ ಪದ್ಧತಿ ಮಾತೃಪ್ರಧಾನ ಸಂಸ್ಕೃತಿಯಿಂದ ಬಂದಿದ್ದು, ಇದು ಹೆಣ್ಣಿಗೆ ನೀಡುವ ಗೌರವ. ಆಕೆಯ ಸೌಂದರ್ಯ, ಗುಣಗಳನ್ನವಲಂಬಿಸಿ ನಿಗದಿ ಮಾಡಲಾಗುತ್ತಿತ್ತು. ಮಲೆನಾಡ ಪರಿಸರದಲ್ಲಿ ಶೂದ್ರ ಸಮುದಾಯದಲ್ಲಿ ತೆರ ಪದ್ಧತಿಯ ಹಿಂದೆ ಸರ್ವೇಸಾಮಾನ್ಯ ಸಂಗತಿಯಾಗಿ ಆಚರಣೆಯಲ್ಲಿತ್ತು. ಏಕೆಂದರೆ ಗಂಡು ಹೆಣ್ಣಿಗೆ ತೆರ ಕೊಡುವುದರಿಂದ ಹೆಣ್ಣನ್ನು ಸಾಕುವ ಯೋಗ್ಯತೆ ಇದೆಯೆಂಬುದನ್ನು ಸಾಬೀತು ಪಡಿಸುವ ಕುರುಹು ಎನ್ನಬಹುದು. ಹಾಗೆಯೇ ಒಂದು ಕುಟುಂದಲ್ಲಿ ಸಾಕಿ ಬೆಳಸಿದ ಒಂದು ವ್ಯಕ್ತಿಯನ್ನು ಮದುವೆ ಮಾಡಿ ಪರ ಊರಿಗೆ ಕಳುಹಿಸುವುದು ದುಡಿಯುವ ಒಂದು ವ್ಯಕ್ತಿಯನ್ನು ನಷ್ಟ ಮಾಡಿಕೊಂಡಂತೆ. ಆದ್ದರಿಂದ ಸಾಕಿದ ಮನೆಗೆ ಒಂದು ಗೌರವಯುತ ಪರಿಹಾರದ ರೂಪದಲ್ಲಿ ತೆರ ಪದ್ಧತಿ ರೂಢಿಗೊಂಡಿತ್ತು ಎಂದೂ ಕೂಡ ತಿಳಿಯಬಹುದು. ಆದರೆ ಒಂದು 'ವ್ಯಾಪಾರ'ದಂತೆ ಪರಿಗಣಿತವಾದದ್ದು ವಿಪರ್ಯಾಸ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ನಾಯಿಗುತ್ತಿ ಮಾತಿನಲ್ಲಿ ಗಮನಿಸುವುದಾರೆ –

"ಏನ್ರಯ್ಯ ಹೆಣ್ಣು ಕೊಡೋರಿಗೇನು ಬರಗಾಲ? ದುಡ್ಡೊಂದ್ದಿದ್ರೆ ? ಕೈತುಂಬ ತೆರಕೊಟ್ರೆ ದಮ್ಮಯ್ಯ ಅಂತ ಕೊಡ್ತಾರೆ.........".[೨೦]

ಅಂದರೆ ತೆರ ಕೊಡುವ ಸಾಮರ್ಥ್ಯವುಳ್ಳವನು ಯಾವ ಹೆಣ್ಣನ್ನು ಬೇಕಾದರೂ ಪಡೆಯಬಹುದೆಂಬ ಅಹಂಕಾರವೂ ಇದೆ. ಈ ಅಹಂಕಾರದ ಹಿನ್ನಲೆಯಲ್ಲಿ ಸಿಂಭಾವಿ ಭರಮ್ಮೈ ಹೆಗಡೆಯಂತಹ ಸಾಹುಕಾರನಿಗೆ ಮಧ್ಯ ವಯಸ್ಸು ದಾಟಿದೆ. ಆತ ತನ್ನ ಅರ್ಧ ವಯಸ್ಸಿಗಿಂತಲೂ ಚಿಕ್ಕವಳಾದ ಎಳೆಯ ಪ್ರಾಯದ ಚಿನ್ನಮ್ಮನನ್ನು ಮದುವೆಯಾಗಲು ಮುಂದಾಗುತ್ತಾನೆ. ಆತನಿಗೆ ಹೆಣ್ಣು ಕೊಡಲು ಮುಂದಾದ ವೆಂಕಟಪ್ಪ ನಾಯಕ ಸಾಲದ ಸುಳಿಯಿಂದ ಮುಕ್ತನಾಗಲು ಬಯಸಿದ್ದ. ಅಂದರೆ ತೆರ ಎನ್ನುವ ಪದ್ಧತಿಯಲ್ಲಿ ಹಣವುಳ್ಳವನ ಮತ್ತು ಹಣವನ್ನು ಆಶಿಸುವ ವ್ಯಕ್ತಿಗಳ ನಡುವೆ ಹೆಣ್ಣು ವ್ಯಾಪಾರದ ವಸ್ತುವಾಗುತ್ತಾಳೆ. ಕಾನೂರು ಚಂದ್ರೇಗೌಡರ ಇಬ್ಬರ ಹೆಂಡಂದಿರನ್ನು ಕಳೆದುಕೊಂಡು ನೆಲ್ಲಳ್ಳಿಯ ಬಡ ರೈತನ ಮಗಳನ್ನು ಮೂರನೇ ಹೆಂಡತಿಯಾಗಿ ಪಡೆಯುವುದು ಈ ಹಿನ್ನಲೆಯಿಂದಲೇ. ಹಾಗೆಯೇ ತೆರವನ್ನು ಕೊಟ್ಟು ಮತ್ತೆ ಮತ್ತೆ ಮದುವೆಯಾಗಲು ಹೋಗಿ ಸಾಲದ ಶೂಲಕ್ಕೆ ಅಣ್ಣಯ್ಯ ಗೌಡನಂತವರು ಸಿಲುಕಿದರು. ಅಂದರೆ ಹೆಣ್ಣಿಗೆ ಗೌರವ ರೂಪದಲ್ಲಿ ನೀಡಲಾಗುತ್ತಿದ್ದ 'ತೆರ' ಪದ್ಧತಿ ಒಂದು ಸಾಮಾಜಿಕ ಪಿಡುಗಾಗಿ ರೂಪ ತಾಳಿತ್ತು.

ಆಧುನಿಕತೆ ಪ್ರವೇಶ ಮಾಡಿದ ಮೇಲೆ ಸ್ಕೂಲುಗಳು, ಆಸ್ಪತ್ರೆಗಳು ಅಲ್ಲಲ್ಲಿ ಸ್ಥಾಪಿತವಾದ ಮೇಲೆ, ಮಲೇರಿಯಾದಂತ ಖಾಯಿಲೆ ದೂರವಾದ ಮೇಲೆ ಹೆಣ್ಣುಗಳ ಹೆರಿಗೆಯ ಸಾವು ಕಡಿಮೆಯಾದಂತೆಲ್ಲ ಮರುಮದುವೆಯ ಸಂದರ್ಭಗಳು ಕಡಿಮೆಯಾದವು. ಆದಕಾರಣ ಪುರುಷ ಸಂಖ್ಯೆಗೆ ಅನುಪಾತವಾಗಿ ಸ್ತ್ರೀ ಸಂಖ್ಯೆಯೂ ವೃದ್ಧಿಸಿತು. ಆಧುನಿಕವಾದ ಉದ್ಯೋಗಗಳನ್ನು ಅವಲಂಬಿಸಿ ಸರ್ಕಾರಿ ನೌಕರಿಯಂತಹ

ವೃತ್ತಿಗಳಲ್ಲಿ ಪುರುಷ ಭಾಗಿಯಾದಂತೆ ಅವನ ದುಡಿಮೆ, ವೃತ್ತಿ ಮರ್ಯಾದೆ ಗೌರವಗಳು ಸಮಾಜದಲ್ಲಿ ದೊರಕಿಸಿಕೊಳ್ಳ ತೊಡಗಿದಾಗ ತೆರ ಪದ್ಧತಿಯ ಸ್ಥಾನದಲ್ಲಿ ವರದಕ್ಷಿಣೆ ಪದ್ಧತಿ ಪ್ರಚಲಿತವಾಯಿತು. ಬ್ರಾಹ್ಮಣ ಸಮುದಾಯದಲ್ಲಿ ಯಾವ 'ವರೋಪಚಾರ' ಎಂಬ ಪದ್ಧತಿ ಇದೆಯೋ ಅದು ಶೂದ್ರ ಸಮುದಾಯದಲ್ಲಿ ವರದಕ್ಷಿಣೆಯ ಸ್ವರೂಪ ಪಡೆಯಿತು.

ಹೀಗೆ ವಧುದಕ್ಷಿಣೆ-ವರದಕ್ಷಿಣೆಗಳ ಸ್ಥಾನಪಲ್ಲಟಗಳು ಏನೇ ಆದರೂ ಸಾಮಾಜಿಕವಾಗಿ ಮದುವೆಯಂತಹ ಆಚರಣೆಯನ್ನು ಹೆಣ್ಣು ಗಂಡುಗಳ ಒಪ್ಪಿಗೆಯನ್ನು ನಿರ್ಧರಿಸುವ ಸಂಗತಿ ಹಿರಿಯರದ್ದೇ ಆಗಿತ್ತು. ಸಾಮಾನ್ಯವಾಗಿ ಗಂಡಿನ ಕಡೆಯವರೇ ಹೆಣ್ಣಿನ ಮನೆಗೆ ಹೋಗಿ ಹೆಣ್ಣನ್ನು ನಿರ್ಧರಿಸಿಕೊಂಡು ಬರುತ್ತಿದ್ದರು. ಸಾಮಾನ್ಯವಾಗಿ ಹೆಣ್ಣು-ಗಂಡು ಪರಸ್ಪರ ನೋಡುವುದೇ ತಾಳಿಕಟ್ಟುವ ಸಂದರ್ಭದಲ್ಲಿ ಇಂತಹ ಸಂದರ್ಭದಲ್ಲಿ ಕೆಲವು ಉದ್ದೇಶಪೂರ್ವಕವಾದ ಅಚಾತುರ್ಯಗಳು ನಡೆಯುತ್ತಿದ್ದವು. ಒಂದು ಹೆಣ್ಣನ್ನು ಗಂಡಿನ ಕಡೆಯವರಿಗೆ ತೋರಿಸಿ, ಮದುವೆ ದಿನ ಇನ್ನೊಂದು ಹೆಣ್ಣನ್ನು ಕೊಟ್ಟು ಮದುವೆ ಮಾಡುತ್ತಿದ್ದರು. ಬಿಳುಮನೆ ರಾಮದಾಸ್ ಅವರ 'ವ್ಯಾಮೋಹ' ಕಾದಂಬರಿಯಲ್ಲಿ ಒಂದು ಕಡೆ "ಚಿನ್ನಮ್ಮನ ಒಂದು ಕಣ್ಣು ಮೆಳ್ಳೆಗಣ್ಣಾದ್ದರಿಂದ ಅಂದಿನ ಕಾಲದಲ್ಲಿ ಪದ್ಧತಿಯಂತೆ ಸ್ಫುರದ್ರೂಪಿಯಾದ ಅಕ್ಕನನ್ನೋ, ತಂಗಿಯನ್ನೋ ತೋರಿಸಿ ಮದುವೆ ಮಾಡುವಂತೆ ತಂಗಿಯನ್ನು ತೋರಿಸಿ ಚಿನ್ನಮ್ಮನನ್ನು ಅಪ್ಪಯ್ಯಗೌಡರಿಗೆ ಮದುವೆ ಮಾಡಿ ಕೊಡಲಾಗಿತ್ತು. ಮೆಳ್ಳೆಗಣ್ಣಿನ ಹುಡುಗಿಯನ್ನು ಮೋಸ ಹೋಗಿ ಮದುವೆಯಾದ್ದರಿಂದ ತರುಣ ಅಪ್ಪಯ್ಯಗೌಡ್ರು ತುಂಬಾ ಚಿಗುಪ್ಸೆಗೊಂಡಿದ್ದನು. ಮದುವೆಯಾದ ನಾಲ್ಕು ವರ್ಷ ಹೆಂಡತಿಯ ಮುಖವನ್ನೇ ನೋಡಲಿಲ್ಲ".[೫೧] ಎಂಬ ವಿವರಣೆ ಇದೆ. 'ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಿಸು' ಎಂಬ ನಾಣ್ಣುಡಿಗೆ ಬದ್ಧರಾಗಿ ಕೆಲವು ಜನ ಪ್ರಜ್ಞಾಪೂರ್ವಕವಾಗಿಯೇ ಇಂತಹ ವಂಚನೆಯನ್ನು ಮಾಡುತ್ತಿದ್ದರು. ವಿಚಿತ್ರವೆಂದರೆ ಇದು ಬಹಳ ದೊಡ್ಡ ಅಪರಾಧವಾಗಿ ತೋರದಿರುವುದು. ಆದರೆ ಇದರ ಪರಿಣಾಮವನ್ನು ಎದುರಿಸುವುದು ಮದುವೆಯ ಸಂಕೋಲೆಗೆ ಸಿಲುಕಿದ ಆ ಹೆಣ್ಣು-ಗಂಡುಗಳು ಮಾತ್ರ.

ಇದೇ ಕೃತಿಯ ಶ್ರೀನಿವಾಸನ ತಾಯಿ ಚಿನ್ನಮ್ಮ ಮಗನ ಮದುವೆಯನ್ನು ಕನಸಿನಲ್ಲಿ ಕಾಣುತ್ತಾಳೆ. ಇಳಿಮನೆ ಶಂಕರಪ್ಪಗೌಡನ ಮಗಳಿಗೆ ಮೂರುಬಾರಿ ಮದುವೆ ಗೊತ್ತಾದರೂ ಆಕೆ ಉಬ್ಬುಹಲ್ಲಿವನಳೆಂದು ಮದುವೆಗಳು ನಿಂತು ಹೋಗಿದ್ದವು. ಈ ಬಾರಿ ಶ್ರೀನಿವಾಸನಿಗೆ ಬೇರೊಂದು ಹೆಣ್ಣನ್ನು ತೋರಿಸಿ ತನ್ನ ಮಗಳನ್ನು ಕೊಡುವಲ್ಲಿ ಶಂಕರಪ್ಪಗೌಡ ಯಶಸ್ವಿಯಾಗಿದ್ದ. ಇಂತಹ ಚಿತ್ರಣಗಳು ಆ ಕಾಲದಲ್ಲಿ ಇದ್ದಿರಬಹುದಾದ ಇಂತಹ ಮೋಸದ ಮದುವೆಗಳ ಬಗ್ಗೆ ಕಾದಂಬರಿ ಬೆಳಕು ಚೆಲ್ಲುತ್ತದೆ. ಆದ ಕಾರಣ ಆಧುನಿಕ ಶಿಕ್ಷಣ ಪಡೆದ ಶ್ರೀನಿವಾಸನಂತವರು ಪರಂಪರಾಗತವಾಗಿ ಹಿರಿಯರು ಮಾತ್ರ ನಿರ್ಧರಿಸುವ ಪದ್ಧತಿಯನ್ನು ವಿರೋಧಿಸುತ್ತಾನೆ. ಈ ಹಿನ್ನಲೆಯಲ್ಲಿ ಶ್ರೀನಿವಾಸ ಮತ್ತು ಸೋದರಳಿಯನ ಮದುವೆಯ ವಿಚಾರದಲ್ಲಿ ಹೆಚ್ಚಿನ ಜವಾಬ್ದಾರಿ ಇರುವ ಚಿನ್ನಯ್ಯಗೌಡನ ನಡುವೆ ನಡೆಯುವ ವಾಗ್ವಾದ ಗಮನಿಸಬಹುದು.

"ನಾವು ಹೆಣ್ಣು ನೋಡ್ತೀವಿ ಮದುವೆಯಾಗ್ತಿಯಾ.

ಹೆಣ್ಣು ನೀವು ಯಾರು ನೋಡಾದು ಬೇಡ, ನಾನು ನೋಡಿ ನಿಮಗೆ ಹೇಳತೀನಿ.

ನಮ್ಮಲ್ಲಿ ಅದೇ ಪದ್ಧತಿ ಇರಾದಾ.

ನಮ್ಮಲ್ಲಿರೊ ಪದ್ಧತಿ ನಮಗೆ ಬೇಡ, ನನಗೆ ಇಷ್ಟವಾದ ಹುಡುಗಿ ನಾನು ಮದುವೆಯಾಗಬೇಕು.

ನಾಳೆ ಸಂಸಾರ ಮಾಡುವವನು ನಾನು.

ಈಗ ನಾವೆಲ್ಲ ನಾವೆ ನೋಡಿ ಲಗ್ನ ಆಗಿದ್ದಾ? ಹಿರಿಯರಾಗಿದ್ದವರು ಹೇಳದ್ ಹೆಣ್ಣನ್ನು ಲಗ್ನ ಆಗಿದ್ದಲ್ಲವಾ?

ನಿಮಗೆಲ್ಲ ವಟ್ಟು ಲಗ್ನ ಆಗಬೇಕಿತ್ತಷ್ಟೇ, ಮಾಡಿಕೊಂಡಿರಿ, ನೀವು ಮಾಡಿಕೊಂಡಂತೆ ನಾನು ಮಾಡಿಕೊಳ್ಳಬೇಕಂತ ನೀವು ಇಷ್ಟಾಪಡಾದು ತಪ್ಪು.........

ಹಂಗಾದ್ರೆ ಹಿರಿದಾಗಿದ್ದವನ ಮಾತಿಗೆ ಏನು ಬೆಲೆ........

ಹಿರಿಯರ ಮಾತಿಗೆ ಯಾವುದಕ್ಕೆ ಬೆಲೆ ಕೊಡಬೇಕೊ ಅದಕ್ಕೆ ಕೊಡೋಣ ಹಿರಿಯರು ಹೇಳಿದ್ದಕ್ಕೆಲ್ಲಾ ಕೋಲೆ ಬಸವನಂತೆ ತಲೆತೂಗಾಕೆ ನಾನೇನು ಹೆಬ್ಬೆಟ್ಟು ಒತ್ತುವವನೆ? ಓದಿ ಕೊಂಡಿದ್ದೀನಿ ಯಾವುದು ಸರಿ ಯಾವುದು ತಪ್ಪು ಅಂತ ನಿರ್ಧಾರ ಮಾಡುವ ಶಕ್ತಿ ನನಗಿದೆ.[೫೨]

ಆಧುನಿಕ ಶಿಕ್ಷಣ ಅಥವಾ ಪಶ್ಚಿಮದ ಪ್ರಭಾವದಿಂದ ಭಾರತೀಯನಲ್ಲಿಯಾದಂತಹ ಮುಖ್ಯವಾದ ಸಾಮಾಜಿಕ ಸ್ಥಿತ್ಯಂತರವೆಂದರೆ ವ್ಯಕ್ತಿಗತವಾದ ದೃಷ್ಟಿಕೋನ. ಹಿರಿಯರ ಪೂರ್ವನಿರ್ಧಾರಿತ ಮದುವೆ ಸಂಬಂಧಗಳು ಏರ್ಪಡುತ್ತಿದ್ದ ಸ್ಥಿತಿಗಿಂತ ಭಿನ್ನವಾದ ಆಲೋಚನೆ, ವಿಚಾರಗಳು ಆಧುನಿಕ ಶಿಕ್ಷಣದಿಂದ ಮೊಳೆತಂತಹವು. ಕಾದಂಬರಿಯಲ್ಲಿ ಬರುವ ಮೇಲ್ಕಂಡ ಸಂದರ್ಭ ಅದನ್ನು ಸೂಚಿಸುತ್ತದೆ. ಇಲ್ಲಿ ಪರಂಪರೆ ಮತ್ತು ಆಧುನಿಕತೆ ಮುಖಾಮುಖಿಯಾಗಿರುವುದನ್ನು ಕಾಣಬಹುದು. ತನ್ನ ಇಷ್ಟಾನಿಷ್ಟೆಗಳನ್ನು ತೀರ್ಮಾನ ಮಾಡುವ, ತಮಗಿರುವ ಹಕ್ಕು ಬಾಧ್ಯತೆಗಳನ್ನು ವೈಯಕ್ತಿಕ ನೆಲೆಯಲ್ಲಿ ಜಾರಿಗೊಳಿಸುವ ಇಲ್ಲವೆ ಪ್ರತಿಪಾದಿಸುವ ಮನೋಭಾವ ಎದ್ದು ಕಾಣುತ್ತದೆ. ಹಾಗೆಯೇ ಪರಂಪರೆಯ ನಡವಳಿಕೆಯನ್ನು ಪ್ರಶ್ನಿಸುತ್ತದೆ.

ಹೆಣ್ಣಿನ ಮತ್ತು ಗಂಡಿನ ಮನೆಯ ಹಿರಿಯರ ನಿರ್ಧಾರ ಮದುವೆಯ ವಿಚಾರದಲ್ಲಿ ಎಷ್ಟು ಮುಖ್ಯವಾಗಿತ್ತೊ, ಪುರೋಹಿತರ ನಿರ್ಧಾರ ಕೂಡ ಅಷ್ಟೇ ಮುಖ್ಯವಾಗಿತ್ತು. ಹೆಣ್ಣು ಗಂಡಿನ ಹುಟ್ಟಿನ ಆಧಾರದ ಜಾತಕದ ಮೇಲೆ ಮದುವೆ ನಿರ್ಧಾರವಾಗುತ್ತದೆ. ಆ ಜಾತಕ ನೋಡುವವರೂ, ಮದುವೆ ಮುಹೂರ್ತ ಇಟ್ಟು ಕೊಡುವವರೂ ಮತ್ತು ಮದುವೆ ಮಾಡಿಸುವವರು ಪುರೋಹಿತರೇ ಆದ್ದರಿಂದ ಅವರ ಪಾತ್ರ ಇಲ್ಲಿ ಪ್ರಧಾನವಾಗಿರುತ್ತದೆ. ಸಾಂಸಾರಿಕ ಬಾಳಿನ ಭವಿಷ್ಯ ಜೀವನದಲ್ಲಿ ಏನಾದರೂ ಕೆಡುಕಾದೀತು, ಹಾಗಾಗದಿರಲಿ ಎಂಬ ಭಯ ಅನುಮಾನಗಳನ್ನು ನಿವಾರಿಸಿಕೊಳ್ಳಲು ಮಾನವ ಅವಲಂಬಿತವಾದ ಅಥವಾ ಅವಲಂಬಿತವಾಗುವಂತೆ ಮಾಡಿದ ವ್ಯವಸ್ಥೆಯೇ ಜ್ಯೋತಿಷ್ಯ. ಹಲವು ಪುರೋಹಿತರು ಶಾಸ್ತ್ರದಲ್ಲಿ ಹೇಳಿದ್ದನ್ನು ಅಥವಾ ಕಲಿತದ್ದನ್ನಷ್ಟು ಹೇಳಿ ತಮ್ಮ ಜೀವನೋಪಾಯವನ್ನು ಮಾಡುವ ಉದ್ಯೋಗವಾಗಿ ಹೊಂದಿದ್ದರು. ಆದರೆ ಕೆಲವರು ಅದನ್ನೇ ದುರುಪಯೋಗಪಡಿಸಿಕೊಂಡು ಇನ್ನೊಬ್ಬರ ಬಾಳಿನಲ್ಲಿ ಚೆಲ್ಲಾಟವಾಡಿದ್ದಿದೆ. 'ಕಾನೂರು ಹೆಗ್ಗಡತಿ'ಯಲ್ಲಿ ಬರುವ ವೆಂಕಪ್ಪ ಜೋಯಿಸ

ಈ ರೀತಿಯವನು. ಉದ್ದೇಶಪೂರ್ವಕವಾಗಿ ಹೂವಯ್ಯನಿಗೂ ಸೀತೆಗೂ ಜಾತಕ ಬರುವುದಿಲ್ಲವೆಂದು ಹೇಳಿ ಮುಂದಿನ ದುರಂತಕ್ಕೆಲ್ಲಾ ಕಾರಣವಾಗುತ್ತಾನೆ. ಈ ರೀತಿ ಪುರೋಹಿತಶಾಹಿಯ ಕ್ರೌರ್ಯವನ್ನು ತಮ್ಮ ಸಾಹಿತ್ಯದ ಮೂಲಕ ಖಂಡಿಸಿದ್ದಾರೆ ; ಜನರನ್ನು ಎಚ್ಚರಿಸಿದ್ದಾರೆ. ಹಾಗಿದ್ದೂ ಮಲೆನಾಡ ಪರಿಸರದಲ್ಲಿ ಜಾತಕ ನೋಡುವ ಪದ್ಧತಿ ಕಡಿಮೆಯಾಗಿಲ್ಲ, ಬದಲಾಗಿ ಮತ್ತಷ್ಟು ಹೆಚ್ಚಾಗುತ್ತಿರುವುದು ಈ ವೈಜ್ಞಾನಿಕ ಯುಗದ ವಿಪರ್ಯಾಸ.

ಬ್ರಾಹ್ಮಣ ಸಮುದಾಯದ ಗೋತ್ರ ಪದ್ಧತಿಯಂತೆ ಒಕ್ಕಲಿಗ ಸಮುದಾಯದಲ್ಲಿ 'ಬಳಿ' ಪದ್ಧತಿಯಿದೆ. ಬಳಿ ಎಂದರೆ ವಂಶ. ಸ್ತ್ರೀಯೇ ಕುಟುಂಬದ ಮೂಲ ಪೀಳಿಗೆ. ಸಂಬಂಧ ಕುದುರಿದ ನಂತರ ಬಳಿ ವಿಚಾರಿಸಲಾಗುತ್ತದೆ. ವೈಷ್ಣವ ಒಕ್ಕಲಿಗರ ಸಂಪ್ರದಾಯದಲ್ಲಿ ಗಂಗರ ಬಳಿ, ಸೆಟ್ಟಿ ಬಳಿ, ತೊಳಾರಬಳಿ, ಬಾಲೆಬಳಿ ಮುಂತಾಗಿ ಅವರವರ ವಂಶ ಚಾಲ್ತಿಯಲ್ಲಿತ್ತು. ಈ ಬಳಿ ಎರಡೂ ಕಡೆ ಒಂದೇ ಆದರೆ ಮದುವೆ ನಿಷಿದ್ಧ. ಒಂದೇ ಬಳಿಗೆ ಸೇರಿದ ಅವರು ಸಹೋದರ ಸಂಬಂಧಿಗಳೆಂಬ ಅರ್ಥ. 'ವ್ಯಾಮೋಹ' ಕಾದಂಬರಿಯಲ್ಲಿ ಶ್ರೀನಿವಾಸನ ಸೋದರ ಮಾವ ಚಿನ್ನಯ್ಯಗೌಡನಿಗೂ ಪುಟ್ಟೇಗೌಡನ ಈಗಿನ ಹೆಂಡತಿ ಪುಟ್ಟಮ್ಮನಿಗೂ ಪ್ರೀತಿ ಬೆಳೆದಿತ್ತು. ಆದರೆ ಬಳಿ ಒಂದೇ ಆದುದರಿಂದ ಹಿರಿಯರು ಒಪ್ಪದೆ ಮದುವೆ ಮುರಿದು ಹೋಯಿತು. ತಾನು ಬಯಸಿ ಪಡೆಯಲಾರದ ಪುಟ್ಟಮ್ಮನನ್ನು ತನ್ನ ಭಾವನ ತಮ್ಮ ಪುಟ್ಟೇಗೌಡ ಆದದ್ದು, ಈ ಮನೆಯಲ್ಲಿ ಪರಸ್ಪರ ಹತ್ತಿರದಿಂದ ಆ ಹಳೆಯ ಪ್ರೇಮಿಗಳು ನೋಡಿದಾಗ ಹಿಂದಿನ ನೆನಪಿನ ರೋಮಾಂಚನ, ಎಲ್ಲಿ ಎಚ್ಚರ ತಪ್ಪಿ ಮುಟ್ಟಿಬಿಡುವೆನೊ ಎಂಬ ಆತಂಕವನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸಂಬಂಧ ಏರ್ಪಡಲು ಈ ಬಳಿ ಗೋಡೆಯಿಲ್ಲ.

ಹೆಣ್ಣು–ಗಂಡು ಪರಸ್ಪರ ಒಲಿಯದೆ, ಹಿರಿಯರ ಒತ್ತಾಯಕ್ಕೆ ಅನ್ಯಮಾರ್ಗವಿಲ್ಲದೆ ಒಪ್ಪಿ ಮದುವೆಯಾಗುವ ರೂಢಿಗತವಾದ ಸಂಪ್ರದಾಯದ ಮದುವೆಗಳ ಬಗ್ಗೆ ಕುವೆಂಪು ಅವರಿಗೆ ಬಹಳ ವಿರೋಧವಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯೆ ಮಲೆನಾಡ ಪರಿಸರದ ಮದುಮಕ್ಕಳ ಬದುಕಿನ ರೂಪಕದಂತಿದೆ. ಚಿನ್ನಮ್ಮ ಮತ್ತು ಮುಕುಂದಯ್ಯನ ಆ ಕಾಲದ ಎಲ್ಲಾ ಸಾಮಾಜಿಕ ಕಟ್ಟುಕಟ್ಟಳೆಗಳನ್ನು ಮೀರಿ, ಆ ಕಾಲದಲ್ಲಿ ದುಸ್ಸಾಧ್ಯವಾದ ಕಾರ್ಯ ಮಾಡುವುದರ ಮೂಲಕ ತಮ್ಮ ಮದುವೆಯನ್ನು ಸಾಧಿಸಿಕೊಳ್ಳುತ್ತಾರೆ. ಸಿಂಭಾವಿ ಭರಮ್ಮೈ ಹೆಗ್ಗಡೆಯಂತ ಶ್ರೀಮಂತರನ್ನು ಎದರಿಸಿದ್ದು ಬಹುಶಃ ಅಷ್ಟೇ ಆಧುನಿಕವಾಗಿ ಸಬಲವಾದ ಮುಕುಂದಯ್ಯನಂತವರಿಗೆ ಮಾತ್ರ ಸಾಧ್ಯವಾಯಿತೊ? ಭಾಗಶಃ ಸತ್ಯವಿದೆ. ಮುಕುಂದಯ್ಯನ ಮೇಲೆ ನೇರವಾಗಿ ಆಧುನಿಕತೆಯ ಪ್ರಭಾವ ಆಗದಿದ್ದರೂ ಒಳಗಿನ ಒತ್ತಡ, ಸಂಸ್ಕಾರಗಳು ಆ ಪರಿಸರದಲ್ಲಿ ಸಾಮಾನ್ಯವಾಗಿ ಯಾರೂ ಮಾಡದ ಸಾಹಸದ ಮೂಲಕ ತಾನು ಪ್ರೀತಿಸಿದವಳನ್ನೇ ಪಡೆಯುವಂತಾದ. ಆದರೆ 'ಕಾನೂರು ಹೆಗ್ಗಡತಿ'ಯ ಹೂವಯ್ಯ ಆಧುನಿಕ ಶಿಕ್ಷಣ ಪಡೆದವನಾದರೂ, ವೈಯಕ್ತಿಕ ದೃಷ್ಟಿಕೋನವುಳ್ಳವನಾದರೂ ಅವನಲ್ಲಿ ಮನೆಮಾಡಿರುವ ಸೌಜನ್ಯ, ವಿನಯ, ಮುಜುಗರ, ಹಿರಿಯರ ಮುಂದೆ ಮಲೆನಾಡ ಕಿರಿಯರ ಮರ್ಜಿತನ ಮುಂತಾದ ಕಾರಣಗಳಿಂದ ತಾನೊಲಿದ ಸೀತೆಯನ್ನು ಪಡೆಯಲಾರದೆ ಹೋದ. 'ಮದುವೆಯಾಗುವವನೇ ಹೆಣ್ಣು ಕೇಳುವುದೇ' ಎಂಬ ಆತನ ಮನದ ಹೊಯ್ದಾಟದಲ್ಲಿ ಆಧುನಿಕ ಶಿಕ್ಷಣ ಪಡೆದ ಆತನಲ್ಲಿ ಒಂದು ರೀತಿ ಅಹಂ

ಇರಬಹುದು ಅಥವಾ ಹಾಗೆ ಮಾಡುವುದು ದಾರ್ಷ್ಟ್ಯವೂ ಆಗಬಹುದೆಂಬ ಆತಂಕವೊ ಹಿರಿಯರ ಮುಂದೆ ತನ್ನ ಇಷ್ಟಾರ್ಥವನ್ನು ಹೇಳದೆ ಹೋದ. ಆಧುನಿಕತೆ ತಂದ ದ್ವಂದ್ವಾತ್ಮಕತೆ ಹೂವಯ್ಯನಲ್ಲಿ ಮನೆ ಮಾಡಿದ್ದರಿಂದ ಸೀತೆಯನ್ನು ಪಡೆಯಲಾರದೆ ಹೋದ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ತಿಮ್ಮಪ್ಪ ಹೆಗಡೆ ಉದ್ಧಟ, ಮೂರ್ಖ, ಅಸೂಯಾ ಪರವಾದ ನಡವಳಿಕೆಯುಳ್ಳವನು. ತನ್ನ ಕಾಮದ ಹಸಿವಿಗೆ ಜಾತಿ ಭೇದವಿಲ್ಲದೆ, ಮಡಿಮೈಲಿಗೆಯಿಲ್ಲದೆ ಕೆಳಜಾತಿ ಹೆಣ್ಣುಗಳ ಜೊತೆ ಸಂಬಂಧವಿರಿಸಿಕೊಂಡವನು. ಆದರೆ ಸಮಾಜದ ಕಣ್ಣಲ್ಲಿ ಪ್ರತಿಷ್ಠೆಯನ್ನು ಬಯಸಿರುವ ಆತ ತನ್ನ ಮಡದಿಯಾಗಿ ಬರುವವಳು ಪ್ರತಿಷ್ಠಿತ, ತಮ್ಮ ಕುಟುಂಬದ ಗೌರವಕ್ಕೆ ಸಮನಾದ ಹೆಣ್ಣೇಬೇಕೆಂದು ಬಯಸುತ್ತಾನೆ. ಆದಕಾರಣ ತನ್ನ ತಂಗಿ ಮಂಜಮ್ಮನನ್ನು ಸಿಂಭಾವಿ ಭರಮೈ ಹೆಗಡೆಗೆ ಕೊಟ್ಟು, ಅಲ್ಲಿಯ ಲಕ್ಕಮ್ಮನನ್ನು ತಾನು ಪಡೆಯುವ ಬಗ್ಗೆ ದೊಡ್ಡ ತಂತ್ರವನ್ನೇ ಹೂಡುತ್ತಾನೆ. ಇಲ್ಲಿ ಮಂಜಮ್ಮನಿಗಾಗಲಿ, ಲಕ್ಕಮ್ಮನಿಗಾಗಲಿ ಆಯ್ಕೆಯ ಸ್ವಾತಂತ್ರ್ಯವೇ ಇಲ್ಲ.

ಮಲೆನಾಡ ಪರಿಸರದಲ್ಲಿ 'ವಿನಿಮಯ ವಿವಾಹ' ಪದ್ಧತಿಯೂ ರೂಢಿಯಲ್ಲಿತ್ತು. ಇದು ಹೆಣ್ಣು ಕೊಟ್ಟು-ತರುವ ಪದ್ಧತಿ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೋಣೂರು ಹಳೇ ಮನೆಯ ರಂಗಪ್ಪಗೌಡ-ದೊಡ್ಡಣ್ಣ ಹೆಗಡೆಗೆ ಹೆಣ್ಣು ಕೊಟ್ಟು ತರಲಾಗಿತ್ತು. 'ಕಾನೂರು ಹೆಗ್ಗಡತಿ'ಯಲ್ಲಿ ರಾಮಯ್ಯನಿಗೆ ಮುತ್ತಳ್ಳಿ ಸೀತೆಯನ್ನು, ಮುತ್ತಳ್ಳಿ ಚಿನ್ನಯ್ಯನಿಗೆ ಪುಟ್ಟಮ್ಮನನ್ನು ವಿನಿಮಯ ವಿವಾಹ ಪದ್ಧತಿಯಲ್ಲಿ ಮದುವೆ ನಡೆದಿತ್ತು. ಸೀತೆಗೆ ಒಪ್ಪಿಗೆ ಇಲ್ಲದ್ದರಿಂದ ಆ ಸಂಸಾರ ದುರಂತಕ್ಕೆ ಒಳಗಾಯಿತು. ಚಿನ್ನಯ್ಯ-ಪುಟ್ಟಮ್ಮರ ನಡುವೆ ಹೊಸ ಆಯ್ಕೆಯ ಪ್ರಶ್ನೆಯೇ ಉದ್ಭವಿಸದ ಕಾರಣ ಹಿರಿಯರ ನಿರ್ಧಾರದಂತೆ ಮದುವೆಯಾದರು ಹೊಂದಿಕೊಂಡು ಬಾಳಿದರು.

ಈ ವಿನಿಮಯ ವಿವಾಹ ಪದ್ಧತಿ ಕೆಳವರ್ಗದ ಹರಿಜನರ ಸಮುದಾಯದಲ್ಲಿ ಇತ್ತು. ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವವರು ಹರಿಜನ ಸಮುದಾಯದ ಹಿರಿಯರಲ್ಲ ; ಅವರ ಒಡೆಯರು. ತಮ್ಮ ಮನೆಯ ಕೆಲಸದ ಆಳೊಬ್ಬಳ ಮಗಳನ್ನು ಇನ್ನೊಂದು ಊರಿಗೆ ಒಡೆಯರ ಅಪ್ಪಣೆಯಿಲ್ಲದೆ ಮದುವೆ ಮಾಡಿಕೊಡುವಂತಿಲ್ಲ. ಹಾಗೆ ಮಾಡಿದರೆ ಒಡೆಯನಿಗೆ ಆಳಿನ ಕೊರತೆಯಾಗುತ್ತದೆ. ಆದ್ದರಿಂದ ಇಲ್ಲಿನ ಹರಿಜನ ಕೇರಿಗೆ ಹೆಣ್ಣುಕೊಟ್ಟು, ಇಲ್ಲಿನ ಹೆಣ್ಣನ್ನು ಮದುವೆ ಮಾಡಿಕೊಂಡು ಕರೆದೊಯ್ದರೆ ಸಮ್ಮತಿಯಿರುತ್ತಿತ್ತು. ನಾಯಿಗುತ್ತಿ ತಂದೆ ಕರಿಸಿದ್ದನಿಗೆ ಬೆಟ್ಟಳ್ಳಿ ದೊಡ್ಡ ಬೀರನ ತಂಗಿ 'ಗಿಡ್ಡಿ'ಯನ್ನು ತಂದು ಮದುವೆ ಮಾಡಿದಾಗ ಬೆಟ್ಟಳ್ಳಿ ಕಲ್ಲಯ್ಯಗೌಡರಿಗೂ ಸಿಂಭಾವಿ ದುಗ್ಗಣ್ಣ ಹೆಗಡೆಯವರಿಗೂ ಹೊಡೆದಾಟವಾಗುವುದರಲ್ಲಿತ್ತಂತೆ, ಕಲ್ಲೂರು ಸಾಹುಕಾರ ಮಂಜಭಟ್ಟರಿಂದ ಸಿಂಭಾವಿ ಕರಿಸಿದ್ಧನ ತಂಗಿ ಸೇಸಿಯನ್ನು ಬೆಟ್ಟಳ್ಳಿ ದೊಡ್ಡ ಬೀರನಿಗೆ ಮದುವೆ ಮಾಡಿದಿ ಒಡೆಯರನ್ನು ಸಮಾಧಾನಗೊಳಿಸಲಾಗಿತ್ತು. ಹಾಗಿರುವಾಗ ಬೆಟ್ಟಳ್ಳಿ ಹರಿಜನ ಕೇರಿಯ ಬಚ್ಚನಿಗೆ ಕೊಡಮಾಡಿದ್ದ ಒಡೆಯರ ತೀರ್ಮಾನವನ್ನು ಮೀರಿ 'ತಿಮ್ಮಿ' ಸೋದರ ಮಾವನ ಮಗ ಗುತ್ತಿಯೊಂದಿಗೆ ಓಡುವುದು ಚಿನ್ನಮ್ಮ-ಮುಕುಂದಯ್ಯರ ಸಾಹಸಕ್ಕಿಂತ ಮಿಗಿಲಾದುದು. ಕೊನೆಗೂ ನಾಯಿಗುತ್ತಿ ತಿಮ್ಮಿಯನ್ನು ಕರೆದುಕೊಂಡು ಆ ಪ್ರಾಂತ್ಯವನ್ನು ಬಿಟ್ಟು ತಲೆಮರೆಸಿಕೊಂಡು ಹೋಗಬೇಕಾಗುತ್ತದೆ.

ಹಳೇ ಪೈಕದ ಸೇಸಾನಾಯ್ಕ ಅಪರೂಪವಾಗಿ ಆ ಸಮುದಾಯದಲ್ಲಿ ಸ್ವಂತ ಜಮೀನನ್ನು ಹೊಂದಿದ್ದ. ಆದಕಾರಣ ಆತನಲ್ಲಿ ಸ್ವಾಭಿಮಾನ ಬೆಳೆದಿತ್ತು. ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೊ ಹಾಗೆ ಸ್ವಂತ ಜಮೀನು ಹೊಂದುವುದು, ಒಕ್ಕಲಿಗರನ್ನು ಎಲ್ಲ ವಿಧದಲ್ಲೂ ಅನುಸರಿಸುವುದು ತಪ್ಪು ಎಂಬ ನಿರ್ಣಯವನ್ನು ಒಕ್ಕಲಿಗರ ಮುಖಂಡರು ಕಟ್ಟಳೆಯನ್ನು ಹೇರಿದ್ದರು. ಆದರೆ ಸ್ವಂತ ಜಮೀನಿನ ಒಡೆಯನಾದ ಸೇಸಾನಾಯ್ಕ ಆರ್ಥಿಕವಾಗಿ ಪ್ರಬಲ, ಈ ಹಿನ್ನಲೆಯಲ್ಲಿ ಸಾಮಾಜಿಕ ಪ್ರಾಬಲ್ಯಗಳಿಸಲು ತನ್ನ ಮಗನ ಮದುವೆ ಸಂದರ್ಭದಲ್ಲಿ ಮದುವೆ ಗಂಡನ್ನು ದಂಡಿಗೆಯಲ್ಲಿಯಾಗಲಿ, ಕುದುರೆ ಮೇಲಾಗಲಿ ಕೂರಿಸಿ ತನ್ನ ಹಕ್ಕನ್ನು ಚಲಾಯಿಸುವ ಇಚ್ಛೆಯನ್ನು ತೋರಿಸುತ್ತಾನೆ. ಇದು "ಬದಲಾಗುತ್ತಿರುವ ಸಮಾಜದಲ್ಲಿ, ಸಾಮಾಜಿಕ ತಾರತಮ್ಯಗಳ ವಿರುದ್ಧ ಏಳುವ ಸಂಘರ್ಷದ ಕಿಡಿಯನ್ನು ಪ್ರತಿನಿಧಿಸುತ್ತಾನೆ".[೯೩] ಈ ಸಂಬಂಧ ಕಾದಂಬರಿಯಲ್ಲಿ ಯಾವ ಘಟನೆಯೂ ನಡೆಯುವುದಿಲ್ಲ. ಆದರೆ ಕಾದಂಬರಿಕಾರರ ಸಮಾನತೆಯ ಆಶಯವನ್ನು ಕಾಣುತ್ತೇವೆ.

ವಿವಾಹವು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲೇ ನಡೆಯುತ್ತಿತ್ತು. ಸಿಂಭಾವಿ ಭರಮೈ ಹೆಗಡೆ ಜೊತೆ ಚಿನ್ನಮ್ಮನ ಮದುವೆ ಸಿದ್ಧತೆಯಾಗಲಿ, ಕಾನೂರು ಹೆಗ್ಗಡತಿಯಲ್ಲಿ ರಾಮಯ್ಯ-ಸೀತೆ, ಚಿನ್ನಯ್ಯ ಪುಟ್ಟಮ್ಮರ ಮದುವೆ ನಡೆದದ್ದಾಗಲಿ ಆಯಾ ಹೆಣ್ಣಿನ ಮನೆಯಲ್ಲಿ. ಆದರೆ ಕಾರಣ ಗಂಡಿನ ಕಡೆಯವರು ಸಾಗುವುದನ್ನು 'ದಿಬ್ಬಣ' ತೆಗೆದುಕೊಂಡು ಹೋಗುವುದು ಎನ್ನುತ್ತಾರೆ. ಎತ್ತಿನಗಾಡಿ ಬಳಕೆಗೆ ಬಂದಿದ್ದರೂ ದಂಡಿಗೆಯನ್ನೇ ಬಳಸುತ್ತಿದ್ದರು. ಈ ದಂಡಿಗೆಯನ್ನು ಬೋವಿ ಜನಾಂಗವೇ ಹೊರಬೇಕಿತ್ತು. 'ಕಾರು' ಬಂದ ಮೇಲೆ ಈ ಬೋವಿ ಜನಾಂಗದ ಹೊರೆ ಇಳಿದಿದೆ. ದಂಡಿಗೆಯ ಮುಂದೆ ವಾದ್ಯದವರು, ಕಹಳೆಯವರು, ಗರ್ನಾಲು, ಬಿರುಸು-ಬಾಣ, ಮದ್ದು ಸುಡುವವರೊಂದಿಗೆ ದಿಗ್ವಿಜಯಕ್ಕೆ ಹೋಗುವ ಹಾಗೆ ಹೋಗುತ್ತಿತ್ತು. ಇದರ ಉದ್ದೇಶ ಮಲೆನಾಡ ಕಾಡಿನ ಅಲ್ಲಲ್ಲಿ ಇರುವ ಮನೆಗಳಿಗೆ ಮಾಹಿತಿ ಸಾರುವುದು. ಇನ್ನೊಂದು ರೀತಿಯಲ್ಲಿ ನೋಡಿದರೆ ದಿಬ್ಬಣದ ವಿಜೃಂಭಣೆ ಶ್ರೀಮಂತಿಕೆಯನ್ನು ತೋರಿಸುವ, ತಮ್ಮ ಘನತೆ-ಪ್ರತಿಷ್ಠೆ ಬಿಂಬಿಸುವ ಮಾಧ್ಯಮವೂ ಹೌದು. ಶೂದ್ರ ಸಮುದಾಯಗಳ ಮದುವೆ ಮುಹೂರ್ತ ರಾತ್ರಿ ಕಾಲದಲ್ಲಿ. ಈ ನಿಶಾಲಗ್ನವನ್ನು ಪುರೋಹಿತರು ಈ ಸಮುದಾಯಕ್ಕೆ ಏಕೆ ಇಟ್ಟುಕೊಡುತ್ತಿದ್ದರು ಎಂಬುದಕ್ಕೆ ಸ್ಪಷ್ಟತೆಯಿಲ್ಲ. ಬ್ರಾಹ್ಮಣ ಸಮುದಾಯದಲ್ಲಿ ದಿವಾಲಗ್ನ, ಗೋಧೂಳಿಲಗ್ನ ಇರುವಾಗ ಪುರೋಹಿತರೇ ನಡೆಸಿಕೊಡುವ ಈ ನಿಶಾಲಗ್ನಕ್ಕೆ ಕಾರಣಗಳು ಸ್ಪಷ್ಟವಿಲ್ಲ. ಕೃಷಿ ಬದುಕೇ ಪ್ರಧಾನವಾಗಿರುವಾಗ ಹಗಲಿನ ಸಮಯದಲ್ಲಿ ಬಂಧು-ಬಾಂಧವರಾಗಲಿ, ಆಳು-ಕಾಳುಗಳಾಗಲಿ ಬಂದು ನೆರೆಯಲು ಸಾಧ್ಯವಿಲ್ಲದ್ದರಿಂದಲೂ, ವಾಹನ ಸೌಕರ್ಯಗಳು, ರಸ್ತೆಗಳು ಸರಿಯಾಗಿಲ್ಲದ ಕಾರಣ ಒಂದೇ ದಿನದಲ್ಲಿ ಬಂದು ಹೋಗುವ ತೊಂದರೆ ಇದ್ದದ್ದರಿಂದಲೂ, ಮಾಂಸಾಹಾರ-ಮದ್ಯಸೇವನೆಯಂತ ಮದುವೆ ಊಟದ ಪದ್ಧತಿ ಇರುವುದರಿಂದಲೂ, ಮದುವೆಗೆ ರಾತ್ರಿಯೇ ಪ್ರಶಸ್ತವಾದ ಸಮಯವಾಗಿದ್ದಿರಬಹುದೆಂದು ಶೂದ್ರರ ಬದುಕಿನ ಹಿನ್ನಲೆಯಲ್ಲಿ ಹೇಳಬಹುದು. ಪುರೋಹಿತ ಉದ್ದೇಶದ ಹಿನ್ನಲೆಗೆ ಸಂಬಂಧಿಸಿದಂತೆ ಶೋಧನೆ ನಡೆಯಬೇಕಿದೆ.

ಹೆಚ್ಚು ಕಡಿಮೆ ಹೆಣ್ಣಿನ ಮನೆಯ ದೂರದ ಅಂತರದ ಹಿನ್ನಲೆಯಲ್ಲಿ ಮದುವೆ ಸಡಗರ ಸಂಭ್ರಮ

ಮೂರು ದಿವಸಗಳು ನಡೆಯುತ್ತಿತ್ತು. ಹೆಣ್ಣಿನ ಮನೆಯವರು ಬಹಳ ಮುತವರ್ಜಿಯಿಂದ ಗಂಡಿನ ಕಡೆಯವರಿಗೆ ಆದರಾತಿಥ್ಯವನ್ನು ಮಾಡಬೇಕಿತ್ತು. ಗಂಡಿನ ಕಡೆಯ ಗಾಡಿ ಎತ್ತುಗಳಿಗೆ ಸರಿಯಾದ ರೀತಿಯಲ್ಲಿ ಹುರುಳಿಕೊಡಲಿಲ್ಲವೆಂಬುದೇ ದೊಡ್ಡ ಜಗಳಕ್ಕೆ ಕಾರಣವಾಗುವಂತಹ ಕಥೆಗಳನ್ನು ಹಿರಿಯರು ಹೇಳುವುದನ್ನು ಕೇಳಬಹುದು. ಮದುವೆಯ ದಿನದ ಹಿಂದಿನ ದಿನ ಮದುವೆ ಶಾಸ್ತ್ರ ಮಾಡುವ ಸಂದರ್ಭದಲ್ಲಿ 'ಮುಯ್ಯಿ' ಮಾಡುವ ಕಾರ್ಯಕ್ರಮವಿತ್ತು. 'ಮುಯ್' ಎಂದರೆ ಪ್ರತಿಯಾಗಿ ಕೊಡುವುದು ಎಂದರ್ಥ. ಅಂದರೆ ಕುಲಬಾಂಧವರು, ಸೀಮೆ ಸಮಸ್ತರು ತಮ್ಮ ಶಕ್ತ್ಯಾನುಸಾರ ಹಣ ವಸ್ತುಗಳನ್ನು ಉಡುಗೊರೆಯಾಗಿ ನೀಡುವುದು. ಮದುವೆ ಮಾಡುವ ಮನೆಗೆ ಒಂದು ರೀತಿ ಆರ್ಥಿಕವಾದ ಸಹಾಯ. ಆದರೆ ಇದನ್ನು ಅವರೆಲ್ಲರ ಮದುವೆಗಳಲ್ಲಿ ಇವರೂ ನೀಡಬೇಕು. ಆದ್ದರಿಂದ ಇದು ಉಡುಗೊರೆಯಲ್ಲ ; 'ಮುಯ್ಯಿ'. ಮುಯ್ಯಿ ಪಟ್ಟಿಯಲ್ಲಿ ಹೆಸರುಗಳನ್ನು ಬರೆದಿಡುತ್ತಿದ್ದರು. ಈಗ ಇದು ಮಾಯವಾಗಿ ಉಡುಗೊರೆಯಾಗಿ ಇಲ್ಲಿಯೂ ಅಂತಸ್ತನ್ನು, ಶ್ರೀಮಂತಿಕೆಯನ್ನು ಬಿಂಬಿಸುವ ಕುರುಹು ಆಗಿ ರೂಪ ತಾಳಿದೆ.

ಹೀಗೆ ಮಲೆನಾಡ ಪರಿಸರದಲ್ಲಿ 'ಮದುವೆ' ಎಂಬುದು ವೈಭವದ ಆಚರಣೆಯಾಗಿದೆ. ಅದರ ಹಿಂದೆ ಪ್ರತಿಷ್ಠೆಯ ಸಂಗತಿಯಾಗಿ, ಅಂತಸ್ತನ್ನು ಕಾಯ್ದುಕೊಳ್ಳುವ, ಶ್ರೀಮಂತಿಕೆಯನ್ನು ಪ್ರದರ್ಶಿಸುವ ಕ್ರಿಯಾಚರಣೆಯಾಗಿ ಬೆಳೆದು ಬರುತ್ತಾ, ವಧುದಕ್ಷಿಣೆ ನಂತರ ವರದಕ್ಷಿಣೆ ಮುಂತಾದ ಪದ್ಧತಿಗಳು ಕೆಟ್ಟ ರೂಪ ಪಡೆದು ಈ ಪರಿಸರದ ಸುಲಿಗೆಯ ಅಸ್ತ್ರಗಳಾಗಿ, ಅಮಾನವೀಯತೆಯ ನರ್ತನವಾಗಿ ಈ ಮೂಲಕ ಸಾಮಾಜಿಕ ಪಿಡುಗಾಗಿ ಪಡಿಣಮಿಸುತ್ತಾ ಬಂದಿರುವುದನ್ನು ಕಾಣಬಹುದು. ಇಂದು ಮದುವೆಗಳು ಹೆಣ್ಣಿನ ಮನೆಯಲ್ಲಿ ನಡೆಯುವುದು ತೀರ ವಿರಳ. ವಾಹನ ಸೌಕರ್ಯ, ಸಾರಿಗೆ ವ್ಯವಸ್ಥೆ ಹೆಚ್ಚಿದಂತೆ ಸಂಬಂಧಗಳು ದೂರದೂರದವರೆಗೂ ಏರ್ಪಡುತ್ತಿವೆ. ಸಂಬಂಧಗಳು ವಿಸ್ತಾರವಾಗುತ್ತಲೇ ಇರುತ್ತದೆ. ವೈಭವದ ವಿಸ್ತರಣೆಯಾದಂತೆ ಹಳ್ಳಿಗಳಲ್ಲಿ ಕೊರತೆಯುಂಟಾಗುತ್ತದೆ. ಈ ಎಲ್ಲಾ ಕಾರಣಗಳಿಂದ ನಗರ ಕೇಂದ್ರೀತವಾಗಿ ಕಲ್ಯಾಣ ಮಂಟಪಗಳು ತಲೆ ಎತ್ತಿವೆ. ಆಧುನಿಕತೆಯ ಸಂಕೇತಗಳಂತಿರುವ ಇವು ಸಾಂಸ್ಕೃತಿಕ ಕೇಂದ್ರಗಳು ಎಂಬುದಕ್ಕಿಂತ ಉದ್ಯಮ ಕೇಂದ್ರಗಳು ಎಂಬುದು ಹೆಚ್ಚು ಸಮಂಜಸ. ವೈಭವದಿಂದ ಆಚರಿಸಬೇಕೆಂಬುವವರಿಗೆ ಎಲ್ಲವನ್ನು ಒದಗಿಸಲು ಮುಂದಾಗಿರುವ ವ್ಯವಸ್ಥೆಯಾದ ಕಲ್ಯಾಣ ಮಂಟಪ ಒಂದು ಉದ್ಯಮ. ಆದಕಾರಣ ಮದುವೆ ಎಂಬ ಸಾಂಸ್ಕೃತಿಕ ಆಚರಣೆ ಒಂದು ಉದ್ಯಮವಾಗಿ ಪರಿಣಮಿಸಿದೆ. ಹಳ್ಳಿಯ ಸಮಸ್ತರು ಭಿನ್ನಾಭಿಪ್ರಾಯಗಳನ್ನು ಮರೆತು ಒಗ್ಗೂಡಿ ಪರಸ್ಪರ ಸಹಕಾರದಿಂದ ಮಾಡುವಂತಹ ಸಾಂಸ್ಕೃತಿಕ ಆಚರಣೆಯಾಗಿದ್ದ ಮದುವೆ ಇಂದು ಮರೆಯಾಗಿದೆ. ಸಾಮಾಜಿಕವಾದ ಮರ್ಯಾದೆಯನ್ನು ತೊಟ್ಟಂತಹ ಬಡವರು ಕೂಡ ಉಳ್ಳವರನ್ನು ಅನುಕರಿಸಲು ಹೋಗಿ ಅಥವಾ ಅನುಕರಿಸಲೇಬೇಕಾದ ಅನಿವಾರ್ಯತೆಗೆ ಒಳಗಾಗಿ ಸಾಲಕ್ಕೆ ತುತ್ತಾಗಿ, ಅವಮಾನಕ್ಕೆ ಗುರಿಯಾಗಿ ಕೊನೆಗೆ ಪ್ರಾಣ ಹಾನಿಗೂ ಒಳಗಾಗುತ್ತಿರುವುದು ದುರಂತದ ಸಂಗತಿ. ಆದಕಾರಣ ಮದುವೆ ಎಂಬುದು ಒಂದು ರೀತಿ ಮನೆಹಾಳು ಬದುಕಾಗಿದೆ.

ತಿಳಿದು ತಿಳಿದೂ ಮಾಡುವ ಈ ದುಂದುವೆಚ್ಚದ ಬಗ್ಗೆ ಎಪ್ಪತ್ತು ವರ್ಷಗಳ ಹಿಂದೆಯೇ (೧೯೪೪) ಕುವೆಂಪು ಮಲೆನಾಡ ಯುವಕರನ್ನು ಕುರಿತು ತಿಳಿ ಹೇಳಿದ ಮಾತುಗಳು ಮತ್ತು ಈ ಬಗ್ಗೆ ಪರ್ಯಾಯ

ವ್ಯವಸ್ಥೆಯನ್ನು ರೂಪಿಸಿದ್ದು, ಸರ್ವಕಾಲಕ್ಕೂ ಸಲ್ಲುವಂತಹ ಸಂಗತಿಯಾಗಿದೆ. ಮದುವೆಯ ಬಗ್ಗೆ ಕುವೆಂಪು ಅವರಿಗೆ ತುಂಬ ಪವಿತ್ರವಾದ ಭಾವನೆಯಿದೆ. "ಹುಟ್ಟುವುದು ಸಾಯುವುದರಂತೆಯೇ ವಿವಾಹವೂ ಜೀವನದ ಮಹಾಘಟನೆಗಳಲ್ಲಿ ಒಂದು" ಎಂದು ಭಾವಿಸುತ್ತಾರೆ. ವಿವಾಹ ಜೀವನದ ಒಂದು ಸಂಧಿಕಾಲ ನಿಜ. ಅದರ ಆಚರಣೆ, ಸಂಭ್ರಮ ಸರಳವಾಗಿರಬೇಕೇ ಹೊರತು ಜೀವನದಲ್ಲಿ ಮೆರೆದು ಮೂರ್ಖರಾಗಬಾರದೆಂಬುದಕ್ಕೆ ಸುಂದರವಾದ ಉಪಮೆ ನೀಡುತ್ತಾರೆ.

"ಸಂಸಾರ ಸರೋವರದಲ್ಲಿ ಜಲಕ್ರೀಡೆಯಾಡಲೆಂದು ಉಲ್ಲಾಸದಿಂದ ಧುಮುಕುವ ಅನುಭವ ಸಾಲದ ನವದಂಪತಿಗಳ ಕೊರಳಿನಲ್ಲಿ ಸಾಲವೆಂಬ ದೊಡ್ಡ ಅರೆ ಬಂಡೆಯನ್ನು ಕಟ್ಟಿ ಬಿಟ್ಟರೆ........ ಮುಂದಿನ ಭಯಂಕರ ಚಿತ್ರಗಳ ಪರಂಪರೆಯನ್ನು ಊಹಿಸಿಕೊಳ್ಳಿ........ ಮದುವೆಯೆಂಬುದು ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಇಡಬೇಕಾದ ಹೆಜ್ಜೆ. ಅದು ನಡೆಯುವ ಹಾದಿಯೇ ಹೊರತು, ಸೇರುವ ಮನೆಯಲ್ಲ. ಮದುವೆಗೆ ಮದುವೆ ಸಂಭ್ರಮವೆ ಗುರಿಯಲ್ಲ"[೫೪] ಎಂದು ಕುವೆಂಪು ಆ ಕಾಲಕ್ಕೆ ಹೇಳಿದ ಎಚ್ಚರಿಕೆ ಮಾತುಗಳು ಎಂದಿಗೂ ಸತ್ಯ

ಈ ಹಿನ್ನಲೆಯಲ್ಲಿ ಇಡೀ ಸಮಾಜಕ್ಕೆ ಮಾದರಿಯಾಗಬಹುದಾದ ವಿವಾಹ ಪದ್ಧತಿಯನ್ನು ಆರ್ಷೇಯ ವಿಚಾರಗಳನ್ನು ಇಟ್ಟುಕೊಂಡೆ ಪುರೋಹಿತಶಾಹಿ ಮತ್ತು ದುಂದುಗಾರಿಕೆಯನ್ನು ದೂರವಿಡುವಂತಹವನ್ನು ರೂಪಿಸಿದ ಕುವೆಂಪು ಸ್ವತಃ ತಮ್ಮ ಮನೆಯಿಂದಲೇ ಅದನ್ನು ಅನುಷ್ಠಾನಗೊಳಿಸಿದರು. ಅದು 'ಮಂತ್ರಮಾಂಗಲ್ಯ'.[೫೫]

'ಮಂತ್ರಮಾಂಗಲ್ಯ' ಎಂಬುದು ಒಂದು ಪುಸ್ತಕದ ಹೆಸರು. ಹಾಗೆಯೇ ಇದೊಂದು ವಿವಾಹ ವಿಧಾನ. ಈ ದೇಶದ ಋಷಿಗಳೂ, ದಾರ್ಶನಿಕರೂ, ಸಂತರೂ ರಚಿಸಿದ ಮಂತ್ರ, ಪ್ರಾರ್ಥನೆಗಳು ಇಲ್ಲಿವೆ. ಹಾಗೆ ಮದುಮಕ್ಕಳಿಗೆ ಹಿರಿಯರು ಬೋಧಿಸಬೇಕಾದ ಮಾರ್ಗದರ್ಶಕ ನಡವಳಿಕೆಯ ಸಂಹಿತೆಯೂ ಇದೆ. 'ಈ ವಿವಾಹ ವಿಧಾನವು ಕ್ರಮೇಣ ವಧೂವರ ಸಮ್ಮುಖದಲ್ಲಿ ಈ ಪವಿತ್ರ ವಿಧಿ ನಡೆಯಬೇಕು. ಉಡುಗೊರೆಗಳು ನಿಷಿದ್ಧ, ಸರಳವಾದ ಊಟ ಅಥವಾ ಉಪಹಾರ ಅಥವಾ ಸಿಹಿ ಹಂಚಿಕೆ ಇರಬೇಕಷ್ಟೆ. ವಿವಾಹಕ್ಕೆ ರಾಹುಕಾಲ, ಗುಳಿಕಾಲ ನೋಡಬಾರದು. ಮನುಷ್ಯನ ಬದುಕೇ ಸಾರ್ಥಕ್ಯವಾದ ಕಾಲವಾದ್ದರಿಂದ ಅದರಲ್ಲಿ ಸುಮುಹೂರ್ತ ಹುಡುಕಬಾರದು. ಯ್ಯಾವ ವೃತ್ತಿ ಪುರೋಹಿತನಿಗೂ ಪ್ರವೇಶವಿಲ್ಲ. ಮದುವೆಗೆ ಮಂಟಪಬೇಡ ಚಿಕ್ಕವೇದಿಕೆ ಸಾಕು, ಹಳ್ಳಿಯ ಅರಳೀಕಟ್ಟೆಯಾದರೂ ಸರಿ. ಆಧ್ಯಾತ್ಮಿಕ ಸಾಕ್ಷಿಗಳಾಗಿ ಮಹಾಪುರುಷರ ಅಥವಾ ಪುರಾಣದ ಆದರ್ಶ ದಂಪತಿಗಳ ಭಾವಚಿತ್ರವೊ ಸಾಕು. ಧಾರೆಯ ಕುಕ್ಕೆ ಬೇಕಾಗಿಲ್ಲ, ಹರಿವಾಣದ ಮೇಲೆ ಇಟ್ಟ ಹಣ್ಣು ಹೂಗಳ ಮೇಲೆ ವಧು ಧರಿಸುವ ಮಂತ್ರಮಾಂಗಲ್ಯವನ್ನಿಟ್ಟು ಆ ಮಹಾಪುರುಷರ ಕೃಪೆಗಾಗಿ ಸಮರ್ಪಿಸಿ, ವಧು–ವರರ ತಂದೆ ತಾಯಿಗಳನ್ನೂ ಪಕ್ಕದಲ್ಲಿ ಕುಳ್ಳಿರಿಸಿ ವಧು–ವರರಿಗೆ ಮಂತ್ರಮಾಂಗಲ್ಯ ಪುಸ್ತಕದ ಮಂತ್ರಗಳನ್ನು ಹಿರಿಯರೊಬ್ಬರು ಬೋಧಿಸಬೇಕು. ನಂತರ ವಧುವು ಮಾಂಗಲ್ಯಧಾರಣೆ ಮಾಡಬೇಕು. ವಿವಾಹ ಸಂಹಿತೆ ಬೋಧಿಸಿದ ನಂತರ ಮಂತ್ರಮಾಂಗಲ್ಯ ಪುಸ್ತಕದಲ್ಲಿ ಮದುಮಕ್ಕಳು, ಪೋಷಕರು ಸಹಿ ಮಾಡಬೇಕು. ಅದನ್ನು ವಧು–ವರರು ಇಟ್ಟುಕೊಳ್ಳಬೇಕು. ಇದು ಭಾರತ ರಾಜ್ಯಾಂಗಕ್ಕೆ ಬದ್ಧವಾಗಿಯೂ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಅನುಗುಣವಾಗಿಯೂ ಇದೆ ಎಂಬುದನ್ನು

ಸ್ಪಷ್ಟಪಡಿಸಿದ್ದಾರೆ. ಈ ವಿಧಾನವೇ ಆಗಲಿ ಅಥವಾ ಇನ್ನ್ಯಾವುದೇ ವಿಧಾನವಾಗಲಿ ನೋಂದಣಿಯಾಗಬೇಕೆಂಬುದನ್ನು ಕುವೆಂಪು ಬಯಸುತ್ತಾರೆ.

ಈ ರೀತಿ ಸರಳವಾದ ಮತ್ತು ಪ್ರಗತಿಪರವಾದ ವಿವಾಹ ವಿಧಾನವು ಮಲೆನಾಡ ಪರಿಸರದಲ್ಲಿ ಅಲ್ಲಲ್ಲಿ ನಡೆಯುತ್ತಿದೆ. ಬಡವರ ಪಾಲಿಗೆ ವರದಾನವಾಗಿದ್ದ ಇದು ಪ್ರಾಜ್ಞರಲ್ಲಿ, ಪ್ರಗತಿಪರವಾದ ಮನೋಭಾವದವರಲ್ಲಿ ಹಾಗೂ ಮಹತ್ವವನ್ನರಿದ ಶ್ರೀಮಂತರು ಈ ವಿವಾಹ ವಿಧಾನವನ್ನು ಅನುಸರಿಸಿದ್ದಾರೆ ; ಅನುಸರಿಸುತ್ತಿದ್ದರೆ. 'ತೀರ್ಥಹಳ್ಳಿಯ ಸುತ್ತ ಇದನ್ನು ಆಚರಣೆಗೆ ತಂದವರಲ್ಲಿ ಕಡಿದಾಳ್ ರಾಮಪ್ಪಗೌಡರು' ಮುಖ್ಯರಾಗುತ್ತಾರೆ. ತಮ್ಮ ಹಲವು ಮಂದಿ ಮಕ್ಕಳು ಮೊಮ್ಮಕ್ಕಳಿಗೆ ತಾವೇ ಮುಂದೆ ನಿಂತು 'ಮಂತ್ರಮಾಂಗಲ್ಯ' ಮದುವೆ ಮಾಡಿಸಿದ್ದಾರೆ. ಅವರಿಂದ ಪ್ರಭಾವಿತರಾದ ಅನೇಕರು ಈ ಕೈಂಕರ್ಯವನ್ನು ಮುಂದುವರಿಸಿದ್ದಾರೆ.

ಕುವೆಂಪು ಅಂತಹ ಸಾಂಸ್ಕೃತಿಕ ನಾಯಕರನ್ನು, ಧೀಮಂತ ಸಮಾಜವಾದಿ ನಾಯಕರಾದ ಶಾಂತವೇರಿ ಗೋಪಾಲಗೌಡರನ್ನು, ಸರಳ–ಪ್ರಾಮಾಣಿಕ ರಾಜಕಾರಣಿ ಕಡಿದಾಳ್ ಮಂಜಪ್ಪನವರಂತಹ ನಾಯಕರನ್ನು ನೀಡಿದ ನೆಲವಿದು. ಅನೇಕ ಚಿಂತಕರನ್ನು, ಹೋರಾಟಗಾರರನ್ನು ಪಡೆದಂತಹ ನೆಲಕೂಡ ಹೌದು. ಇಂತಹ ಪರಿಸರದಲ್ಲಿ 'ಮಂತ್ರಮಾಂಗಲ್ಯ' ವ್ಯಾಪಕವಾದ ಪ್ರಚಾರವನ್ನು, ಬಳಕೆಯನ್ನು ಪಡೆಯಲಿಲ್ಲವೆಂಬುದು ವಿಪರ್ಯಾಸದ ಸಂಗತಿ. ಅದಕ್ಕೆ ಈ ರೀತಿ ಕೆಲವು ಕಾರಣಗಳನ್ನು ಕಂಡುಕೊಳ್ಳಬಹುದು.

೧. ಪುರೋಹಿತ ವರ್ಗ ಜಾತಕ ನೋಡುವುದು, ಶಾಸ್ತ್ರ ಮಾಡಿಸುವುದು, ನಿಮಿತ್ತ ಹೇಳುವುದು ಸತ್ಯನಾರಾಯಣವ್ರತ ಮಾಡಿಸುವುದು ಮುಂತಾದ ತಮ್ಮ ವೃತ್ತಿಗೆ ಹಳ್ಳಿಗಳನ್ನು ವಿಭಾಗಿಸಿಕೊಂಡಿದ್ದರು. ತಮ್ಮ ತಮ್ಮ ಹಳ್ಳಿಯ ಜೋಯಿಸರ ಮಾತನ್ನು ಜನ ಮೀರುತ್ತಿರಲಿಲ್ಲ. ತನ್ನದಲ್ಲದ ಹಳ್ಳಿಗೆ ಇವರು ಹೋಗುತ್ತಿರಲಿಲ್ಲ ; ಇತರರು ಬರುತ್ತಲೂ ಇರಲಿಲ್ಲ. ಆಯಾಯ ಜೋಯಿಸರ ವ್ಯಾಪ್ತಿಯಲ್ಲಿ ಬರುವ ಶೂದ್ರ ಸಮುದಾಯ ಬೇರೆಲ್ಲ ಸಂಪ್ರದಾಯಕ್ಕೆ ಬಳಸಿಕೊಂಡು ಮದುವೆ ವಿಚಾರದಲ್ಲಿ ಜೋಯಿಸರಿಲ್ಲದೆ ಇರುವುದು ಅಪಶಕುನದಂತೆ ಕಂಡರು.

೨. ವ್ಯಾಪಕವಾದ ರೀತಿಯಲ್ಲಿ ಕಲಿಕೆ, ಉನ್ನತ ಶಿಕ್ಷಣ ಪಡೆಯುವುದು ಸಂಖ್ಯೆ ಕಡಿಮೆ ಇದ್ದದ್ದರಿಂದ ಕೆಲವು ವಿದ್ಯಾವಂತರ ಕೆಲವು ಶ್ರೀಮಂತರ ಮನೆಗಳಲ್ಲಿ ನಡೆಯುತ್ತಿದ್ದ ಈ ವಿವಾಹವು ಮಾದರಿಯಾಗುವ ಬದಲು ಇದು ಹಣವುಳಿಸುವ ತಂತ್ರವೆಂದು ಬೇರೆ ರೀತಿ ಯೋಚಿಸಿದರು.

೩. ಭೂ ಸುಧಾರಣೆ ಬಂದಂತೆ ಜಮೀನಿನ ಸ್ವತಂತ್ರ ಒಡೆತನ ಪ್ರಾಪ್ತವದಂತೆ, ಅಡಿಕೆಯ ಬೆಲೆ ಹೆಚ್ಚಾದಂತೆ ನವಶ್ರೀಮಂತಿಕೆಯಲ್ಲಿ ಪ್ರತಿಷ್ಠೆ–ಘನತೆಗಳು ಮೈದಾಳಿದವು. ಅದನ್ನು ಪ್ರದರ್ಶಿಸುವ ದೊಡ್ಡ ಅವಕಾಶವೆಂದರೆ ಮದುವೆ.

೪. ಮಂತ್ರಮಾಂಗಲ್ಯದ ಆಶಯಕ್ಕೆ ವಿರುದ್ಧವಾದ ವರದಕ್ಷಿಣೆ, ಅದ್ದೂರಿ ಊಟ ಇವನ್ನೆಲ್ಲಾ ಬಿಡುವ ಬದಲು ಮತ್ತಷ್ಟು ಹೆಚ್ಚೇ ಆಯಿತು.

೫. ಕೆಲವು ಮಂತ್ರಮಾಂಗಲ್ಯದ ಮದುವೆಗಳಲ್ಲಿ ಹೆಚ್ಚಿನ ಜನ, ಅದ್ದೂರಿ ಊಟ ಇತ್ಯಾದಿಯಾಗಿ

ಪುರೋಹಿತರ ಬಿಟ್ಟು ಉಳಿದದ್ದೆಲ್ಲಾ ನಡಸಿ ಅಪಹಾಸ್ಯಕ್ಕೂ ಒಳಗಾದದ್ದಿದೆ.

೬. ಹೆಣ್ಣಿನ ಕಡೆಯವರೋ ಅಥವಾ ಗಂಡಿನ ಕಡೆಯವರೊ ಸಂಪ್ರದಾಯಬದ್ಧ ಮದುವೆಗೆ ಜೋತು ಬಿದ್ದಾಗ ಆಸಕ್ತಿಯಿದ್ದರೂ ಅಸಹಾಯಕತೆಗಳ ಸಂದರ್ಭಗಳೇ ಹೆಚ್ಚು.

ಈ ಮೊದಲಾದ ಕಾರಣಗಳು ಮಂತ್ರಮಾಂಗಲ್ಯದ ಬಗ್ಗೆ ಒಲವಿದ್ದರೂ, ರೈತ ಸಂಘದಂತಹ ವೇದಿಕೆಗಳೂ ಅಲ್ಲಲ್ಲಿ ನಡೆಸುತ್ತಿದ್ದರೂ ಮಲೆನಾಡ ಪರಿಸರದಲ್ಲಿ ವ್ಯಾಪಕವಾಗಲಿಲ್ಲ ; ಹಾಗೆಂದು ಮೂಲೆಗುಂಪೂ ಆಗಿಲ್ಲ. ಮಿತವ್ಯಯಾಸಕ್ತರಲ್ಲಿ, ಪ್ರಗತಿಪರ ಚಿಂತಕರಲ್ಲಿ ಅಲ್ಲಲ್ಲಿ ಬಳಕೆಯಲ್ಲಿದೆ.

ಹೀಗೆ ಹೆಣ್ಣು–ಗಂಡನ್ನು ಒಂದು ಗೂಡಿಸುವ ನೆಪ ಮಾತ್ರದ ಆಚರಣೆ ವೈಭವೀಕರಣಗೊಂಡು ಆಚರಣೆಗೆ ಒಳಗಾಗಿ ಜಾಗತೀಕರಣದ ಸಂದರ್ಭದಲ್ಲಿ ಉದ್ಯಮವಾಗಿ ಬೆಳೆದು ಸಾಮಾನ್ಯರೇಕೆ ಸಾಮಾನ್ಯ ಶ್ರೀಮಂತರೂ ಕಂಗಾಲಾಗುವ ; ಅಸಹಾಯಕತೆಯಿದ ಪಾಲ್ಗೊಳ್ಳಲೇಬೇಕಾದ ದುಃಸ್ಥಿತಿಯನ್ನು ಸಾಮಾಜಿಕ ಪ್ರತಿಷ್ಠೆ ಮೈಗೂಡಿಸಿಕೊಂಡಿದ್ದೇ ಕಾರಣವಾಗಿದೆ. ನವ ಆಧುನಿಕತೆಯು ತಂದ ಮಾಧ್ಯಮಗಳು ಹೊಸ ಹೊಸ ಸುಖಲೋಲುಪ ವಸ್ತುಗಳು, ಲೌಖಿಕವಾದ ಅತಿನಿರೀಕ್ಷೆಗಳು, ವೃತ್ತಿ ಶಿಕ್ಷಣ ಆ ಮೂಲಕ ಪಡೆದುಕೊಳ್ಳಬಹುದಾದ ಉದ್ಯೋಗಗಳು ಹೊಸ ಸಂಚಲವನ್ನುಂಟು ಮಾಡುತ್ತಿದೆ.

ಒಟ್ಟಿನಲ್ಲಿ ವಸಾಹತುಶಾಹಿಯ ಪ್ರವೇಶದೊಂದಿಗೆ ಅನೇಕ ಬಗೆಯಲ್ಲಿ ಮಲೆನಾಡಿನ ಸಾಂಸ್ಕೃತಿಕ ಬದುಕು ಬದಲಾವಣೆಯನ್ನು ಪಡೆಯಿತು. ಈ ಪರಿಸರದ ಜನರನ್ನು ಆಕರ್ಷಿಸಲು ಯಂತ್ರನಾಗರಿಕತೆಯ ಅನೇಕ ವಸ್ತುಗಳಾದ ಗಡಿಯಾರ, ಲಾಂದ್ರ, ಲ್ಯಾಂಪು, ಸಾಬೂನು, ಸೈಕಲ್ ಮೊದಲಾದವು ಬಂದವು. ಕೆಲವು ಮಡಿವಂತರು ವಿಲಾಯಿತಿ ವಸ್ತುಗಳೆಂದು ಮೊದ ಮೊದಲು ಅವುಗಳ ಬಗ್ಗೆ ಒಂದು ಬಗೆಯ ಕೀಳರಿಮೆಯನ್ನು ತೋರಿದರೂ ಕ್ರಮೇಣ ಎಲ್ಲ ಸಮುದಾಯದವರೂ ಆಕರ್ಷಿತರಾಗಿ, ಘನತೆ–ಪ್ರತಿಷ್ಠೆಯ ಸಂಕೇತಗಳಾಗಿ ಹಲವರ ಜೀವನಕ್ರಮದಲ್ಲಿ ಬೆರತು ಹೋದವು. ಇವುಗಳನ್ನು ಹೊಂದಿರುವವರ ಮನೆ–ಮನಗಳಲ್ಲಿ ನಾವಿನ್ಯತೆಯನ್ನುಂಟು ಮಾಡಿದವು. ಹಾಗೆ ಇವುಗಳನ್ನು ಹೊಂದಿರುವ ಮತ್ತು ಹೊಂದಿಲ್ಲದವರ ನಡುವೆ ಶ್ರೇಷ್ಠ–ಕನಿಷ್ಠತೆಯ ಭಾವನೆಯನ್ನು ತಂದವು. ಆದರೆ ಇಂತಹ ವಸ್ತುಗಳು ಇಂತವರಿಗೆ ಮೀಸಲು ಎಂಬ ಮನೋಭಾವನೆಯನ್ನು ಯಂತ್ರನಾಗರಿಕತೆ ಒಡೆದು ಹಾಕಿತು.

'ಸೈಕಲ್' ಪ್ರವೇಶ ಇಲ್ಲಿನ ಸಾಮಾಜಿಕ ಜೀವನದಲ್ಲಿ ಹೊಸ ಆಯಾಮವನ್ನೇ ಸೃಷ್ಟಿಸಿತು. 'ಸೈಕಲ್' ಅನ್ನು ಜಾತಿ ತಾರತಮ್ಯವಿಲ್ಲದೆ ಎಲ್ಲರು ಮುಟ್ಟುತ್ತಾರೆ. ಇದು ಜಾಗತಿಕ ವಸ್ತುವಾದುದರಿಂದ ಅದು ಸಾಧ್ಯವಾಗಿದೆ ಎನ್ನಬಹುದು. ಒಂದು ಪಕ್ಷ ಸೈಕಲ್ ಈ ದೇಶದಲ್ಲೇ ತಯಾರಾಗಿದ್ದರೆ ಪಲ್ಲಕ್ಕಿಯ ಹಾಗೆ ಕೆಲವೇ ವರ್ಗವು ಏರುವಂತಹದಕ್ಕೆ ಸೀಮಿತವಾಗಿ ಬಿಡುತ್ತಿತ್ತು ಎಂದು ತೋರುತ್ತದೆ. ಮಲೆನಾಡ ಪರಿಸರದಲ್ಲಿ ಎತ್ತು, ಕುದುರೆ, ಗಾಡಿ, ನಡಿಗೆಯಿಂದಲೇ ಎಲ್ಲೆಡೆ ಸಂಚಾರ ಮಾಡುತ್ತಿರುವ ಸಂದರ್ಭದಲ್ಲಿ ಈ ಪರಿಸರದಲ್ಲೂ ವ್ಯವಸ್ಥಿತವಾದ ರಸ್ತೆ ಬೇಕೆಂಬ ಹಂಬಲವನ್ನು ಸೈಕಲ್ ಉಂಟುಮಾಡುವುದು ವಿಶೇಷ.

'ಹೋಟೆಲ್' ಧರ್ಮನಿರಪೇಕ್ಷ ಸಂಸ್ಥೆಯಾಗಿ, ಸುದ್ಧಿ ಮಾಧ್ಯಮದ ಕೇಂದ್ರವಾಗಿ ಬೆಳೆದು ಬರುತ್ತದೆ.

ಅಲ್ಲದೆ ಯಾವ ಸಮುದಾಯ ಅನ್ನ ವಿಕ್ರಯ ನಿಷಿದ್ಧವೆಂದು ಭಾವಿಸಿತ್ತೊ, ಆ ಸಮುದಾಯದ ಹೊಸ ತಲೆಮಾರು ಉದ್ಯೋಗದ ಹೊಸ ಸಾಧ್ಯತೆಯನ್ನು ಅದರಲ್ಲಿ ಕಂಡರು. ಮನೆಯಲ್ಲಿ ಇಲ್ಲದ ಸಮಾನತೆ ಹೋಟೆಲ್‌ನಲ್ಲಿ ಕಾಣಿಸಿಕೊಂಡಿತು. (ಆದಾಗ್ಯೂ ಇತ್ತೀಚಿನವರೆಗೂ ಗ್ರಾಮೀಣ ಪ್ರದೇಶದ ಹೋಟೆಲ್‌ಗಳಲ್ಲಿ ಅಸ್ಪೃಶ್ಯರಿಗಾಗಿ ಪ್ರತ್ಯೇಕ ಸ್ಥಳ ರೂಪಿಸಿದ್ದರು.) ಹೋಟೆಲ್‌ನಂತಹ ಉದ್ಯೋಗದ ಹೊಸ ಸಾಧ್ಯತೆಗಳು ಅವಿಭಕ್ತ ಕುಟುಂಬಗಳ ವಿಘಟನೆಗೂ ಕಾರಣವಾಗಿದೆ. ಕಾರಣ ವ್ಯಾವಹಾರಿಕ ದೃಷ್ಟಿಕೋನವನ್ನು ಆಧುನಿಕತೆ ತೀವ್ರಗೊಳಿಸಿರುವುದು. ಮೇಲುವರ್ಗ ಮತ್ತು ಮಧ್ಯಮ ವರ್ಗ ಪರಂಪರಾವೃತ್ತಿಗೆ ವಿಮುಖರಾಗಿ ಹೊಸ ಉದ್ಯೋಗದ ಸಾಧ್ಯತೆಗಳನ್ನು ಕಂಡುಕೊಂಡಾಗ ತಳಸಮುದಾಯದ ಜನತೆ ಅಲ್ಲಿಯೂ ದುಡಿಯುವ ಆಳಾಗಿರುವುದನ್ನು ಗಮನಿಸಬಹುದು. ಕಾರಣ ಸ್ಪಷ್ಟವಿದೆ, ಹೊಸ ಉದ್ಯೋಗಕ್ಕೆ ಹೂಡಲು ಇವರಲ್ಲಿ ಬಂಡವಾಳವಿಲ್ಲ. ಅಂದರೆ ವೃತ್ತಿ ಪಲ್ಲಟವಾಯಿತೇ ಹೊರತು ಸ್ಥಾನಪಲ್ಲಟವಾಗಲಿಲ್ಲ. ಆದರೆ ತಳಸಮುದಾಯದಲ್ಲಿ ತಮ್ಮ ದುಡಿಮೆ ಒಡೆಯರಿಗಾಗಿಯಲ್ಲ ; ತಮಗಾಗಿ ಎಂಬ ಅರಿವು ಬೆಳೆದದ್ದು, ಕ್ರಮೇಣ ಆ ಸಮುದಾಯವೂ ಬಂಡವಾಳ ಹೂಡಿ ಮಾಲಿಕರಾಗುವ ಪ್ರಯತ್ನ ಮಾಡಿದ್ದು ಆಧುನಿಕತೆಯು ತಂದ ಸ್ಥಿತ್ಯಂತರದ ಕುರುಹು.

ಕ್ರಾಪು–ಉಡುಪಿನಂತ ಹೊಸ ವೇಷ ಕೂಡ ಪ್ರಭಾವ ಬೀರಿ ಹೊಸ ಸಂಚಲವನ್ನುಂಟು ಮಾಡಿದೆ. ಕೌಟುಂಬಿಕ ಪರಿಸರದಲ್ಲಿ ಗೊಂದಲ ಸೃಷ್ಟಿ ಮಾಡಿದೆ. ಸಾಮಾಜಿಕ ವಲಯದಲ್ಲಿ ಸಮಾನತೆಯನ್ನು ಸಾಧಿಸಲು ಪ್ರಯತ್ನಕ್ಕೆ ಇಂಬು ನೀಡಿದೆ. ಮೇಲುವರ್ಗದ ನಾರಾಯಣಭಟ್ಟನ ಹೆಂಡತಿ ಶೂದ್ರನಾದ ದೇವಯ್ಯನನ್ನು ಬ್ರಾಹ್ಮಣ ಹೆಣ್ಣು ಲಕ್ಷ್ಮೀ, ಶೂದ್ರನಾದ ಶ್ರೀನಿವಾಸನನ್ನು ಮೆಚ್ಚುವುದು, ಕ್ರಾಪು–ಉಡುಪಿಗೆ ಎಂದ ಮೇಲೆ ಸೌಂದರ್ಯ ಪ್ರಜ್ಞೆ, ವರ್ಗ ಪ್ರಜ್ಞೆಯನ್ನು ದೂರ ಮಾಡುವ ಸಂಕೇತವಿದು. ಒಂದು ಸಂಗತಿಯನ್ನು ಗಮನಿಸಬೇಕು. ಬಿಳಿಯ ಉಡುಪಾಗಲಿ, ಬಿಳಿ ಪಂಚೆಯಾಗಲಿ ಉಡುವ ಸಂಸ್ಕೃತಿ ಪಾಶ್ಚಾತ್ಯಾ ಮಾದರಿಯಿಂದ ಬಂದದ್ದಲ್ಲ. ಆದರೆ ಎಲ್ಲ ಸಮುದಾಯದವರೂ ಅದನ್ನು ತೊಡುವಂತ ಆಕರ್ಷಣೆಗೆ ಒಳಗಾದದ್ದು ಆಧುನಿಕತೆಯ ಪ್ರವೇಶದಿಂದ ಎನ್ನಬಹುದು. ಪಾದ್ರಿಯ ಬಿಳಿಯ ಉಡುಪು ಶೂದ್ರನ ಮನೆಯೊಳಗಿನ ಮೈಲಿಗೆಯನ್ನು ದೂರ ಮಾಡುತ್ತದೆ. ಹೂವಯ್ಯ, ರಾಮಯ್ಯ, ಶ್ರೀನಿವಾಸ ತೊಡುವ ಬಿಳಿ ಉಡುಪು ಆಧುನಿಕ ಶಿಕ್ಷಣದ ಸಂಸ್ಕಾರದಿಂದ ಬಂದದ್ದು. ಇದು ಹಿರಿಯರಿಗೆ ಷೋಕಿಯಾಗಿ, ಮೈಗಳ್ಳತನವಾಗಿ ತೋರುತ್ತದೆ. ಅಲ್ಲದೆ ಪರಂಪರಾಗತವಾದ ವೃತ್ತಿ ಬದುಕಿನಿಂದ ದೂರವಾದರೆಂಬ ತಲ್ಲಣವನ್ನುಂಟು ಮಾಡುತ್ತದೆ. ಜಗನ್ನಾಥ ಸರಳವಾದ ಬಿಳಿ ಉಡುಪು ಧರಿಸುವುದರ ಮೂಲಕ ಹಾಗೂ ನೀಡುವುದರ ಮೂಲಕ ತಳ ಸಮುದಾಯದ ಜೊತೆ ಸಮಾನತೆಯನ್ನು ಸಾಧಿಸಲು ಪ್ರಯತ್ನಿಸುತ್ತಾನೆ. ತಳ ಸಮುದಾಯಕ್ಕೆ ಆ ಉಡುಪು ಮುಜುಗರವನ್ನುಂಟು ಮಾಡಿದರೂ, ಪಿಳ್ಳನಂತವರಲ್ಲಿ ಮೇಲರಿಮೆಯನ್ನು ತುಂಬುತ್ತದೆ.

ಮಲೆನಾಡು ಪರಿಸರದಲ್ಲಿ ಮದ್ಯಪಾನ ಎಲ್ಲೆಡೆ ಸಾಮಾನ್ಯ ಸಂಗತಿಯಾಗಿದ್ದರೂ ಅದರ ಸೇವನೆ ಗೌರವದ ಸಂಗತಿಯೇನೂ ಆಗಿರಲಿಲ್ಲ. ೨೦ನೇ ಶತಮಾನದಲ್ಲಿ ರಾಷ್ಟ್ರೀಯ ಚಳುವಳಿ, ಗಾಂಧಿ ಪ್ರಭಾವ ಮದ್ಯಪಾನ ನಿರೋಧದ ಬಗ್ಗೆ ಪ್ರಚಾರ, ಜಾಗೃತಿ, ಚಳುವಳಿ ಈ ಪರಿಸರದಲ್ಲೂ ನಡೆದವು. ಪರಿಣಾಮವಾಗಿ

ಅದರ ಸೇವನೆ ಉತ್ತಮ ಸಂಸ್ಕೃತಿಯಲ್ಲ ಎಂಬ ಅರಿವು ಮೂಡಿದೆ. ಆದರೆ ಪಾಶ್ಚಾತ್ಯರ ಮೂಲಕ ಬಂದ ಪಾನೀಯಗಳು ಸ್ಥಳೀಯ ಪಾನೀಯಗಳನ್ನು ಹೀನಗೊಳಿಸಿ ಸಾಮಾಜಿಕವಾದ ಪ್ರತಿಷ್ಠೆ, ಘನತೆಯ ಹಿನ್ನಲೆಯಲ್ಲಿ ವಿರಾಜಮಾನವಾಗಿವೆ.

ಕ್ರೈಸ್ತ ಮಿಷನರಿಗಳ ಮೂಲಕ ಪ್ರವೇಶಿಸಿದ ಕಾಫಿ ಬಹುಬೇಗ ಮಲೆನಾಡ ಪರಿಸರದ ಸಾಮಾಜಿಕ ಜೀವನದಲ್ಲಿ ಪ್ರತಿಷ್ಠೆಯಿಂದಲೇ ಬೆರೆತು ಹೋಯಿತು. ಮಡಿವಂತರಿಗೆ ಮೊದ ಮೊದಲು ವಿದೇಶಿ ವಸ್ತು ಎಂದು ನಿರಾಕರಿಸಿದರೂ, ಆಕರ್ಷಣೆಯನ್ನು ದೂರ ಮಾಡಲಾಗಲಿಲ್ಲ. ಧಾರ್ಮಿಕ ಚೌಕಟ್ಟು ನೀಡಿ ಸ್ವೀಕರಿಸಿದರು. ಇದು ದೈನಂದಿನ ಸಹಜ ಪಾನೀಯವಾಗಿಯೂ, ಅತಿಥಿ ಸತ್ಕಾರದ ಪಾನೀಯವಾಗಿಯೂ ಇಲ್ಲಿ ಪರಿಸರದಲ್ಲಿ ಬೆರೆತು ಹೋಗಿರುವುದಲ್ಲದೆ, ಅದೊಂದು ಉಪ ಬೆಳೆಯಾಗಿಯೂ ನೆಲೆಯೂರಿತು.

ಮಲೆನಾಡಿನ ನಿಸರ್ಗಕ್ಕೆ ಪೂರಕವಾದ ಜೀವನ ಕ್ರಮದಲ್ಲಿನ ಭಾಗವಾಗಿ ಇಲ್ಲಿಯ ಪರಿಸರದ ಸಾಂಸ್ಕೃತಿಕ ವಲಯದೊಳಗೆ ಹಬ್ಬಗಳು ಆಚರಿಸಲ್ಪಡುತ್ತವೆ. ಅವುಗಳಲ್ಲಿ 'ಭೂಮಿ ಹುಣ್ಣಿಮೆ'ಯನ್ನು ಗಮನಿಸಬಹುದು. ಆಧುನಿಕತೆಯು ಇಲ್ಲಿಯ ಜೀವನಕ್ರಮದಲ್ಲಿ ಬೆರತುಕೊಳ್ಳುತ್ತಿದ್ದಂತೆ, ಆಧುನಿಕ ಶಿಕ್ಷಣ, ಉದ್ಯೋಗಾವಕಾಶಗಳು ಹೆಚ್ಚಿದಂತೆ ಈ ಪರಿಸರದ ಹಬ್ಬಗಳೆಲ್ಲ ಯಾಂತ್ರಿಕವಾಗಿವೆ. ವಿಚಿತ್ರವೆಂದರೆ ಇಲ್ಲಿಯ ಪರಿಸರಕ್ಕೆ ವಲ್ಲದ ಅನೇಕ ಅಚರಣೆಗಳು ನಗರ ಸಂಸ್ಕೃತಿಯಿಂದ ಬಂದು ಸೇರಿಕೊಳ್ಳುತ್ತವೆ. ಆ ಮೂಲಕ ಇಲ್ಲಿಯ ಪರಿಸರದ ಸಾಂಸ್ಕೃತಿಕ ಬದುಕನ್ನು ಪಲ್ಲಟಗೊಳಿಸುತ್ತಿವೆ.

ಮಲೆನಾಡ ಪರಿಸರದಲ್ಲಿ ಜಮೀನ್ದಾರಿ ಶೋಷಣೆಗೆ 'ಮದುವೆ' ಸಂದರ್ಭದಲ್ಲಿ ನೀಡಬೇಕಾಗಿದ್ದ 'ತೆರ' ಪದ್ಧತಿಯೂ ಕಾರಣವಾಗಿತ್ತು. ಒಂದು, ಮತ್ತೆ ಮತ್ತೆ ಮದುವೆಯಾಗಿ ಸಾಲ ಮಾಡಿ ಮಾಡಿ ನಿರ್ಗತಿಕರಾಗುತ್ತಿದ್ದರೆ, ಮತ್ತೊಂದು ಹಣ ಬಲದಿಂದ ಯಾವ ಹೆಣ್ಣನ್ನು ಬೇಕಾದರು ಕೊಳ್ಳುವ ದಾರ್ಷ್ಟ್ಯವನ್ನು ಬೆಳಸಿತ್ತು. ಯಾವುದೇ ಸಮುದಾಯವಾಗಲಿ ಮದುವೆ ವಿಷಯದಲ್ಲಿ ಹೆಣ್ಣಿನ ನಿರ್ಧಾರ ಮುಖ್ಯವಾಗಿರಲಿಲ್ಲ. ಒಂದು ಹೆಣ್ಣನ್ನು ತೋರಿಸಿ, ಇನ್ನೊಂದು ಹೆಣ್ಣನ್ನು ಮದುವೆ ಮಾಡುವುದು ಒಡೆಯರ ಇಚ್ಛೆಯನ್ನೇ ಅವಲಂಬಿಸಿ ಮದುವೆ ನಿರ್ಧಾರ ಮಾಡಬೇಕಾದುದು ಇವೆಲ್ಲಾ ಶೋಷಣೆಯನ್ನು ಒಳಗೊಂಡಿತ್ತು. ಆಧುನಿಕತೆ ಪ್ರವೇಶ ಪಡೆದಂತೆ ಅಲ್ಲಲ್ಲಿ ವ್ಯಕ್ತಿಗತವಾದ ನಿರ್ಧಾರಗಳು, ವಿರೋಧ ನೆಲೆಗಳು ಕಾಣಿಸಿಕೊಳ್ಳುತ್ತವೆ.

ಈ ಪರಿಸರದಲ್ಲಿ ಮದುವೆ ಆಚರಣೆಯೆಂಬುದು ದುಂದುಗಾರಿಕೆಯಾಗಿ ತಮ್ಮ ಘನತೆ, ಪ್ರತಿಷ್ಠೆ ಮೆರೆಯುವ ಸದಾವಕಾಶವಾಗಿ ಬಿಟ್ಟಿದೆ. ಇದನ್ನು ತಡೆಯಲು ಕುವೆಂಪು ಅಂತಹ ಸಾಮಾಜಿಕ ಚಿಂತಕರಿಂದ 'ಮಂತ್ರಮಾಂಗಲ್ಯ'ವೆಂಬ ಸರಳ ವಿವಾಹ ಪದ್ಧತಿ ಬಳಕೆಯಲ್ಲಿ ಬಂದರೂ ಅದು ಎಲ್ಲೆಡೆ ಈ ಪರಿಸರದಲ್ಲಿ ವ್ಯಾಪಿಸಲಿಲ್ಲ. ಕಾರಣ ಶೈಕ್ಷಣಿಕವಾಗಿ ಮುಂದುವರಿದಂತೆ, ಉದ್ಯೋಗಾವಕಾಶಗಳು ಹೆಚ್ಚಿದಂತೆ, ಅಭಿವೃದ್ಧಿಯಾದಂತೆ ಸಾಮಾಜಿಕ ಪ್ರತಿಷ್ಠೆ, ಘನತೆಗಳು ಸಾಮಾನ್ಯ ಜನರಲ್ಲೂ ಬೆಳೆಯುತ್ತಿರುವುದರಿಂದ ಮತ್ತೆ ಅದ್ದೂರಿ ಮದುವೆಗಳು ಹೆಚ್ಚಾಗಿ ಕಲ್ಯಾಣ ಮಂಟಪಗಳು ತಲೆಯೆತ್ತಿವೆ.

ಹೀಗೆ ಮಲೆನಾಡ ಪರಿಸರದಲ್ಲಿ ಯಂತ್ರನಾಗರಿಕತೆ ತಂದ ವಸ್ತುಗಳು ಮನೆ–ಮನವನ್ನು ಸೇರಿವೆ. ಹೋಟೆಲ್, ಅಂಚೆ, ಹೊಸ ಬಗೆಯ ಉದ್ಯೋಗಾವಕಾಶಗಳು ಪರಂಪರಾ ವೃತ್ತಿ ಬದುಕಿಗೆ ಬದಲಾವಣೆಯನ್ನು ತಂದವು. ವೇಷ ಭೂಷಣಗಳು ಆತ್ಮ ವಿಶ್ವಾಸ, ಸೌಂದರ್ಯ ಪ್ರಜ್ಞೆಯೊಡನೆ

ಸಮಾನತೆಯತ್ತಾ ಮುಖ ಮಾಡಿವೆ. ಹಬ್ಬಗಳು ಯಾಂತ್ರಿಕವಾಗಿವೆ. ಮದುವೆ ಅದ್ದೂರಿತನ ಪಡೆದುಕೊಂಡಿದೆ. ಹೀಗೆ ಆಧುನಿಕತೆ ಮಲೆನಾಡ ಪರಿಸರದ ಜೀವನ ವಿಧಾನದಲ್ಲಿ ಸ್ಥಿತ್ಯಂತರವನ್ನು ತಂದಿದೆ.

ಅಡಿ ಟಿಪ್ಪಣಿ

೧. ಇಂದಿರಾ.ಎಂ.ಕೆ., ತಗ್ಗಿನಮನೆ ಸೀತೆ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೬೦

೨. ಇಂದಿರಾ.ಎಂ.ಕೆ., ತಗ್ಗಿನಮನೆ ಸೀತೆ, ಪ್ರಕಾಶನ ಸಾಹಿತ್ಯ, ಬೆಂಗಳೂರು, ೨೦೦೪, ಪುಟ:೭೬

೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೫೬

೪. ಅಶೋಕ.ಟಿ.ಪಿ., ಕುವೆಂಪು ಕಾದಂಬರಿ:ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪, ಪುಟ:೬೨

೫. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩ ಪುಟ:೩೧೮

೬. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೫೧

೭. ಅಶೋಕ.ಟಿ.ಪಿ., ಅನಂತಮೂರ್ತಿ.ಯು.ಆರ್. ಒಂದು ಅಧ್ಯಯನ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೧೯

೮. ಅನಂತಮೂರ್ತಿ.ಯು.ಆರ್, ಪ್ರಕೃತಿ : ಐದು ದಶಕದ ಕಥೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೯೬

೯. ಅನಂತಮೂರ್ತಿ.ಯು.ಆರ್, ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೪೩

೧೦. ಬಿಳುಮನೆ ರಾಮದಾಸ್, ಕರಾವಳಿಯ ಹುಡುಗಿ, ಸಿವಿಜಿ ಪಬ್ಲಿಕೇಷನ್, ಬೆಂಗಳೂರು, ೨೦೦೪, ಪುಟ:೮೭

೧೧. ಇಂದಿರಾ.ಎಂ.ಕೆ., ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೫೮

೧೨. ಡಾ.ಅಂಬಳಿಕೆ ಹಿರಿಯಣ್ಣ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ ೧೯೯೯, ಪುಟ:೫೭, ೫೮

೧೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೨೭೯

೧೪. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪು:೭೩,೭೪,೦೮

೧೫. ಇಂದಿರಾ.ಎಂ.ಕೆ., ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೨೪

೧೬. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧ ಪುಟ:೪೨

೧೭. ಇಂದಿರಾ.ಎಂ.ಕೆ., ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೬೧

೧೮. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೪೦೬

೧೯. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೯೮

೨೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೪೩೦

೨೧. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ: ೧೯೩

೨೨. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೩೮

೨೩. ಬಿಳುಮನೆ ರಾಮದಾಸ್, ವ್ಯಾಮೋಹ, ಮಲೆನಾಡು ಪ್ರಕಾಶನ, ಬೆಂಗಳೂರು, ೧೯೯೦, ಪುಟ:೧೧

೨೪. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೪೫೧

೨೫. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೪೯೨

೨೬. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೬೫೬

೨೭. ಅನಂತಮೂರ್ತಿ.ಯು.ಆರ್. ಭಾರತೀಪುರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೮, ಪುಟ:೪೩

೨೮. ಅನಂತಮೂರ್ತಿ.ಯು.ಆರ್. ಭಾರತೀಪುರ, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೮ ಪು:೧೩೨,೧೩೩

೨೯. ಅನಂತಮೂರ್ತಿ.ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೨೩

೩೦. ಅನಂತಮೂರ್ತಿ.ಯು.ಆರ್., ಪ್ರಸ್ತ, ಐದುದಶಕದ ಕಥೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೧೭೭

೩೧. ಗುರುಪದ ಮರಿಗುದ್ದಿ, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೮೯, ಪುಟ: ೬೩

೩೨. ಕೌಲಾನಿಧರ್ಮಯ್ಯ, ನಾಮಧಾರಿ, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ, ೧೯೦೧-೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ (ರಿ.), ೨೦೦೨, ಪುಟ:೫೬

೩೩. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೨೨೦

೩೪. ಅನಂತಮೂರ್ತಿ.ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೧೬೭

೩೫. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೨೯೮

೩೬. ಇಂದಿರಾ.ಎಂ.ಕೆ., ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು ೧೯೯೬ ಪುಟ:೩೦

೩೭. ಇಂದಿರಾ.ಎಂ.ಕೆ., ತಗ್ಗಿನಮನೆ ಸೀತೆ, ಪ್ರಕಾಶನ ಸಾಹಿತ್ಯ, ಬೆಂಗಳೂರು, ೨೦೦೪,ಪು:೧೯,೨೦,೨೧

೩೮. ಡಾ.ಅಂಬಳಿಕೆ ಹಿರಿಯಣ್ಣ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ ೧೯೯೯, ಪುಟ:೧೯೭

೩೯. ಶ್ರೀಕಂಠಕೂಡಿಗೆ, ಭೂಮಿ ಹುಣ್ಣಿಮೆ, ಲಕ್ಷ್ಮೀನರಸಿಂಹ ಪ್ರೆಸ್, ಮೈಸೂರು, ೧೯೯೬, ಪುಟ:೪೨

೪೦. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೩೯೪

೪೧. ಸುಮಿತ್ರಾ.ಎಲ್.ಸಿ. ಪರಿಸರ ಪ್ರೀತಿಯ ಭೂಮಿಹುಣ್ಣಿಮೆ, ನಾಮಧಾರಿ, ಕೌಲಾನಿಧರ್ಮಯ್ಯ (ಸಂ), ನಾಮಧಾರಿ, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ, ೧೯೦೧-೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ (ರಿ.), ೨೦೦೨, ಪುಟ:೨೬೪

೪೨. ಇಂದಿರಾ.ಎಂ.ಕೆ., ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೨೩

೪೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೪೧

೪೪. ಡಾ. ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಸಹ್ಯಾದ್ರಿಗಳ ಪ್ರಕಾಶನ, ೧೯೮೯, ಪುಟ:೨೫

೪೫. ಡಾ.ಗುರುರಾವ್ ಬಾಪಟ್, ಜನಸಂಸ್ಕೃತಿ ಶೋಧ, ರವೀಂದ್ರ ಪುಸ್ತಕಾಲಯ, ಸಾಗರ, ೨೦೦೭ ಪುಟ:೭೭

೪೬. ಇಂದಿರಾ.ಎಂ.ಕೆ., ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೨೭

೪೭. ಇಂದಿರಾ.ಎಂ.ಕೆ., ತಗ್ಗಿನಮನೆ ಸೀತೆ, ಪ್ರಕಾಶನ ಸಾಹಿತ್ಯ, ಬೆಂಗಳೂರು, ೨೦೦೪ ಪುಟ:೨೬

೪೮. ವಸುಮತಿ ಉಡುಪ, ಋಣ, ಬಂದನಾಹುಲಿರಾಯನು ಮತ್ತು ಇತರ ಕಥೆಗಳು ಕರ್ನಾಟಕ ಸಂಘ, ಶಿವಮೊಗ್ಗ, ೧೯೯೬, ಪುಟ:೭೫

೪೯. ಡಾ.ಅಂಬಳಿಕೆ ಹಿರಿಯಣ್ಣ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ ಕನ್ನಡ ಪುಸ್ತಕ ಪ್ರಾಧಿಕಾರ, ೧೯೯೯, ಪುಟ:೨೬೬

೫೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೩೧

೫೧. ಬಿಳುಮನೆ ರಾಮದಾಸ್, ವ್ಯಾಮೋಹ, ಮಲೆನಾಡು ಪ್ರಕಾಶನ, ಬೆಂಗಳೂರು, ೧೯೯೦, ಪುಟ:೨೫

೫೨. ಬಿಳುಮನೆ ರಾಮದಾಸ್, ವ್ಯಾಮೋಹ, ಮಲೆನಾಡು ಪ್ರಕಾಶನ, ಬೆಂಗಳೂರು, ೧೯೯೦, ಪುಟ:೧೮೦

೫೩. ಡಾ. ಉದ್ದಂಡಯ್ಯ, ಕುವೆಂಪು ಕಥನ, ಅಧ್ಯಯನ ಮಂಡಲ, ಬೆಂಗಳೂರು, ೨೦೦೪, ಪುಟ:೧೫೭

೫೪. ಕುವೆಂಪು, ಮಲೆನಾಡಿನ ಯುವಕರಲ್ಲಿ, ಸಮಗ್ರ ಗದ್ಯ, ಸಂ.ಕೆ.ಸಿ. ಶಿವಾರೆಡ್ಡಿ, ಕನ್ನಡ, ವಿ.ವಿ.ಹಂಪಿ, ೨೦೦೪, ಪುಟ:೮೧

೫೫. ಕುವೆಂಪು, ಮಂತ್ರಮಾಂಗಲ್ಯ, ಸಮಗ್ರ ಗದ್ಯ, ಸಂ.ಕೆ.ಸಿ. ಶಿವಾರೆಡ್ಡಿ, ಕನ್ನಡ, ವಿ.ವಿ.ಹಂಪಿ, ೨೦೦೪, ಪುಟ:೧೨೧೧

ಅಧ್ಯಾಯ ೫

ಸ್ತ್ರೀ ಜೀವನ : ಕಥಾಸಾಹಿತ್ಯ

೫. ಸ್ತ್ರೀ ಜೀವನ : ಕಥಾಸಾಹಿತ್ಯ

ಭಾರತದಲ್ಲಿ ಶತಶತಮಾನಗಳಿಂದ ಶೋಷಣೆಗೆ ಒಳಗಾದ ಎರಡು ವರ್ಗಗಳೆಂದರೆ ಒಂದು ದಲಿತರು ಮತ್ತೊಂದು ಎಲ್ಲ ಸಮುದಾಯಗಳಿಗೂ ಸೇರಿದ ಸ್ತ್ರೀಯರು ಎಂಬುದು ಸಾಮಾನ್ಯವಾದ ಮಾತಾಗಿದೆ. 'ಸ್ತ್ರೀಯರನ್ನು ಗೌರವಿಸದ ಮತ್ತು ಅವರಿಗೆ ಅರ್ಹವಾದ ಅಂತಸ್ತು ಮತ್ತು ಅವಕಾಶಗಳನ್ನು ಕಲ್ಪಿಸಿಕೊಡದೇ ಇರುವ ಸಮಾಜವು ಎಂದೂ ಪ್ರಗತಿಯನ್ನು ಸಾಧಿಸಲಾರದು' ಎಂಬುದು ಸ್ವಾಮಿ ವಿವೇಕಾನಂದರ ಖಚಿತವಾದ ನಂಬಿಕೆಯಾಗಿತ್ತು. ಮೂಲತಃ ನಮ್ಮ ಸಮಾಜ ಮಾತೃಪ್ರಧಾನ ವ್ಯವಸ್ಥೆಯಿಂದಲೇ ರೂಪಗೊಂಡಿದ್ದು. ಎಲ್ಲಿಯವರೆಗೆ ಇದು ಅಸ್ತಿತ್ವದಲ್ಲಿತ್ತೊ ಅಲ್ಲಿಯವರೆಗೆ ಕುಟುಂಬ ಮತ್ತು ಸಮಾಜದ ಕೇಂದ್ರ ಬಿಂದು ಸ್ತ್ರೀಯಾಗಿದ್ದಳು. ನಾಗರಿಕತೆ ಬೆಳೆದಂತೆ ಕಾಲ ಬದಲಾದಂತೆ ಸ್ತ್ರೀಯ ಪಾತ್ರ ಹಿನ್ನೆಲೆಗೆ ಸರಿಯುತ್ತಾ ಹೋಯಿತು. ಇಂದಿಗೂ ನಮ್ಮ ಸಂಸ್ಕೃತಿಯ ಆಚರಣೆಗಳನ್ನು ಕೂಲಂಕಷ ವಿಶ್ಲೇಷಣೆಗೆ ಒಳಪಡಿಸಿದರೆ ಮಾತೃ ಸಂಸ್ಕೃತಿಯ ಕುರುಹುಗಳು ಕಂಡುಬರುತ್ತದೆ. ಯಾವಾಗ, ಪುರುಷಪ್ರಧಾನ ಅಥವಾ ಪಿತೃಪ್ರಧಾನ ಸಂಸ್ಕೃತಿ ಮತ್ತು ಕುಟುಂಬಗಳು ಅಸ್ತಿತ್ವಕ್ಕೆ ಬರತೊಡಗಿತೋ ಆಗ ಹೆಣ್ಣು ಅಂಚಿಗೆ ಸರಿಯಲ್ಪಟ್ಟಳು. ಪುರುಷಪ್ರಾಧಾನ್ಯತೆಯ ಹಿಡಿತದಿಂದ ಅವನತಿಯ ಹಾದಿ ಶುರುವಾಯಿತು. ಅಂದರೆ ಪ್ರಧಾನ ಸಂಸ್ಕೃತಿಯಾಗಿ ಬೆಳೆಯಬೇಕಾದುದು ಕಿರುಸಂಸ್ಕೃತಿ, ಉಪ ಸಂಸ್ಕೃತಿಯಾಗಿ ಅಸ್ತಿತ್ವದಲ್ಲಿರುವುದನ್ನು ಕಾಣಬಹುದು.

ವೇದಗಳ ಕಾಲದಲ್ಲಿ ಸ್ತ್ರೀ ಮತ್ತು ಪುರುಷ ಸಮಾನರೆಂದೂ, ಪರಸ್ಪರ ಪೂರಕರೆಂದೂ ಹೇಳಲಾಗಿದೆ. ಶಿಕ್ಷಣದಲ್ಲಿ ಅವಕಾಶವಿತ್ತೆಂದೂ, ಬಾಲ್ಯವಿವಾಹ ಪದ್ಧತಿ ಇರಲಿಲ್ಲವೆಂದೂ, ವರನನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿತ್ತೆಂದೂ, ಹಾಗೆ ಅವಿವಾಹಿತಳಾಗಿಯೇ ಉಳಿಯುವ ಸ್ವಾತಂತ್ರ್ಯವಿತ್ತೆಂದೂ ಗುರುತಿಸುತ್ತಾರೆ. ಆದರೆ ರಾಜಕೀಯ, ಆರ್ಥಿಕ ಕ್ಷೇತ್ರಗಳಲ್ಲಿ ಕೆಲವು ಇತಿಮಿತಿಗಳಿದ್ದವು. ಪುರಾಣ-ಧರ್ಮಶಾಸ್ತ್ರಗಳ ಕಾಲದಲ್ಲಿ ಅವತರಿಸಿದ ಮನುಧರ್ಮಶಾಸ್ತ್ರ ಸ್ತ್ರೀಗೆ ಇರುವ ಸ್ವಾತಂತ್ರ್ಯವನ್ನು ಕಳೆದು ಹಲವು ಕಟ್ಟುಪಾಡುಗಳನ್ನು ವಿಧಿಸಿತು. ಬಹುಶಃ ಇಲ್ಲಿಂದಲೇ ಪುರುಷ ಪ್ರಧಾನತೆಯು ಸ್ತ್ರೀ ಮೇಲೆ ಹಿಡಿತ ಸಾಧಿಸುತ್ತ, ಸಾಮಾಜಿಕ ನಿಯಮಗಳ ಸಂಕೋಲೆ ರೂಪತಾಳುತ್ತಾ ಬಂತೆಂದು ಹೇಳಬಹುದು.

ವೈದಿಕ ಧರ್ಮಕ್ಕೆ ಪರ್ಯಾಯವಾಗಿ ಬಂದ ಜೈನಧರ್ಮ ವಿಶೇಷವಾಗಿ ಬೌದ್ಧ ಧರ್ಮ ಸ್ತ್ರೀಗೆ ಮಹತ್ವ ನೀಡಿದವು. ಸ್ತ್ರೀಯರಿಗೆ ವಿವಾಹವು ಅನಿವಾರ್ಯವೂ ಅಲ್ಲ ; ವೈಧವ್ಯವು ಅವಹೇಳನವೂ ಅಲ್ಲ ಎಂದು ಸಾರಿದ ಬೌದ್ಧಧರ್ಮ ವಿಧವೆಯರು ಮಠಕ್ಕೆ ಸೇರಬಹುದಾದ ಅವಕಾಶವನ್ನು ನೀಡಿತು.

ಧರ್ಮಶಾಸ್ತ್ರಗಳ ಅವಧಿಯಲ್ಲಿಯೇ ಬಾಲ್ಯವಿವಾಹ ಬೆಳೆದು ಬಂದಿದ್ದರೂ ಮಧ್ಯಕಾಲೀನ ಯುಗದಲ್ಲಿ ಅದೊಂದು ಅನಿವಾರ್ಯವಾದ, ಪರಿಹಾರವಿಲ್ಲದ ಪಿಡುಗಾಗಿ ಮಾರ್ಪಟ್ಟಿತು. ಪರಕೀಯರ ಧಾಳಿಯಿಂದ ಶೀಲಹರಣಕ್ಕೆ ಒಳಗಾಗಬಹುದು ಎಂಬ ಭಯ ಬಾಲ್ಯವಿವಾಹ ಮಾಡುವುದರ ಮೂಲಕ ಪುರುಷನ ರಕ್ಷಣೆಗೆ ಒಳಪಡಿಸಲಾಯಿತು. ಆ ಮೂಲಕ ಪಾತಿವ್ರತ್ಯವನ್ನು ವೈಭವೀಕರಣಗೊಳಿಸಿದರು. ಇದು ವಿಧವಾ ವಿವಾಹ ನಿಷೇಧಕ್ಕೆ ಕಾರಣವಾಯಿತು, ಸತಿಪದ್ಧತಿ ಆಚರಣೆ ತೀವ್ರಗೊಳ್ಳಲು ಮಾರ್ಗವಾಯಿತು. ಪರಕೀಯರ ಆಕ್ರಮಣ, ಸ್ತ್ರೀಯರ ಅಪಹರಣ – ಅತ್ಯಾಚಾರಗಳು ಹೆಚ್ಚಾದಂತೆ ಹೆಣ್ಣಿಗೆ ಆಕೆಯ ರೂಪ ಸೌಂದರ್ಯಗಳೇ

ಮಾರಕವೆಂದು ಭಾವಿಸಿ, ಅದನ್ನು ಮರೆಯಲ್ಲಿಡಲು ಪರಧಾಪದ್ಧತಿ ಬಂತು. ಈ ಪರದಾಪದ್ಧತಿಯೇ ಸ್ತ್ರೀಯರ ಶಿಕ್ಷಣಕ್ಕೆ, ಸಾರ್ವಜನಿಕ ಜೀವನಕ್ಕೆ, ಮುಕ್ತವಾದ ಬದುಕಿಗೆ ತೆರೆಬೀಳಲು ಅವಕಾಶವಾಯಿತು.

ಬ್ರಿಟೀಷರ ಆಗಮನ ತಳ ಸಮುದಾಯಗಳಿಗೆ ಒಂದು ರೀತಿಯ ಬಿಡುಗಡೆಯನ್ನು ಹೇಗೆ ತಂದಿತೊ ಹಾಗೆ ಸ್ತ್ರೀಯರಿಗೂ ರಕ್ಷಣೆಯ ನೆಪದ ಸಂಕೋಲೆಯಿಂದ ಬಿಡುಗಡೆಗೊಳ್ಳಲು ರಹದಾರಿಯಾಯಿತು. ಬ್ರಿಟೀಷರ ಅವಧಿಯಲ್ಲಿ ಭಾರತದ ಆರ್ಥಿಕ–ಸಾಮಾಜಿಕ–ರಾಜಕೀಯ ಜೀವನದಲ್ಲಿ ಅನೇಕ ಬದಲಾವಣೆಗಳಾದವು. ಪಾಶ್ಚಾತ್ಯರ ಉದಾರತತ್ತ್ವಗಳು, ವೈಚಾರಿಕ ದೃಷ್ಟಿ, ಅಭಿವ್ಯಕ್ತಿಯ ಸ್ವಾತಂತ್ರ್ಯ, ಸ್ಥಾಪಿತ ಮೌಲ್ಯ ಮತ್ತು ಅಧಿಕಾರಗಳನ್ನು ಪ್ರಶ್ನಿಸುವ ಹಕ್ಕು, ಸಮಾನತೆಯ ಎಚ್ಚರ ಮುಂತಾದವೆಲ್ಲ ಭಾರತೀಯ ಸ್ತ್ರೀಯರ ಬಗ್ಗೆ ಅದುವರೆಗೆ ಹೊಂದಿದ್ದ ಧೋರಣೆಗಳನ್ನು ಬದಲಿಸಿಕೊಳ್ಳಲು ಕಾರಣವಾದವು. ಈ ಹಿನ್ನೆಲೆಯಲ್ಲಿ ಅನೇಕ ಸುಧಾರಣಾ ಆಂದೋಲನಗಳು ನಡೆದಿರುವುದನ್ನು ಸ್ಮರಿಸಬಹುದು.

ರಾಜಾರಾಮ್ ಮೋಹನ್‌ರಾಯ್ ಅವರು ಸತಿಪದ್ಧತಿ, ಪರದಾಪದ್ಧತಿ, ಬಾಲ್ಯವಿವಾಹ ವಿರುದ್ಧ ದನಿ ಎತ್ತಿದರು. ಈಶ್ವರಚಂದ್ರ ವಿದ್ಯಾಸಾಗರ ಅವರು ವಿಧವಾ ವಿವಾಹದ ಬಗ್ಗೆ, ಸ್ತ್ರೀ ಶಿಕ್ಷಣದ ಬಗ್ಗೆ ಒತ್ತುಕೊಟ್ಟು ಅಭಿಯಾನ ನಡೆಸಿದರು. ವಿವೇಕಾನಂದರು ಸ್ತ್ರೀ ಪುರುಷ ಸಮಾನತೆ ಸಾಧ್ಯವಾಗದೇ, ಸಮಾನ ಶಿಕ್ಷಣ ನೀಡದೇ ರಾಷ್ಟ್ರದ ಉತ್ಕರ್ಷ ಸಾಧ್ಯವಾಗದು ಎಂದು ಸಾರಿದರು. ಮಹಾರಾಜ ಸಯ್ಯಾಜಿರಾವ್ ಗಾಯಕವಾಡ ಅವರು ಬಾಲ್ಯವಿವಾಹ, ಬಹುಪತ್ನಿತ್ವ ಆಚರಣೆಯನ್ನು ನಿಲ್ಲಿಸಲು, ಸ್ತ್ರೀ ಶಿಕ್ಷಣ ವಿಧವಾ ವಿವಾಹಕ್ಕೆ ಅವಕಾಶ ಕಲ್ಪಿಸಲು ಶ್ರಮಿಸಿದರು. ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಸಾರ್ವಜನಿಕ ಜೀವನದಲ್ಲಿ ಸ್ತ್ರೀಯರ ಸಹಭಾಗಿತ್ವ ಮತ್ತು ಶಿಕ್ಷಣಕ್ಕಾಗಿ ಶ್ರಮಿಸಿದರು.

ವಸಾಹತುಶಾಹಿಯ ಪ್ರವೇಶ ಆ ಮೂಲಕ ಬಂದ ಆಧುನಿಕತೆ ಹಾಗೂ ಒಳಗಿನ ಒತ್ತಡದಿಂದಲೇ ಆಸ್ಫೋಟಗೊಂಡ ಹೊಸ ಬಗೆಯ ಆಲೋಚನೆಗಳು ಸ್ತ್ರೀ ಸಮುದಾಯದಲ್ಲಿ ಸಂಚಲನವನ್ನುಂಟು ಮಾಡಿದವು. ಪುರುಷ, ಕುಟುಂಬ, ಸಮಾಜ, ಜಾತಿ–ಧರ್ಮ ಮುಂತಾದವೆಲ್ಲ ತನ್ನನ್ನು ನಿರ್ಬಂಧಿಸುವ ಬಗ್ಗೆ, ಪುರುಷ ಪ್ರಧಾನತೆಯ ಹಿನ್ನೆಲೆಯಲ್ಲೇ ತನ್ನ ವ್ಯಕ್ತಿತ್ವ ರೂಪಿತವಾಗಿರುವ ಬಗ್ಗೆ, ಸಹಜ ಬದುಕಿನಿಂದ ತನ್ನತನ ದೂರವಾಗಿರುವ ಬಗ್ಗೆ ಎಚ್ಚರವುಂಟಾಯಿತು. ಮತ್ತು ಆ ಅರಿವು, ಎಚ್ಚರವನ್ನುಂಟು ಮಾಡುವ ಹೊಣೆ ಪ್ರಜ್ಞಾವಂತ ನಾಗರಿಕರ, ಸಾಂಸ್ಕೃತಿಕ ನಾಯಕರ ಸಾಹಿತಿಗಳ ಕರ್ತವ್ಯವಾಯಿತು. ಹೀಗೆ ಪಾಶ್ಚಾತ್ಯರ ಆಗಮನ, ಆಧುನಿಕ ಶಿಕ್ಷಣ, ಉದ್ಯೋಗ, ಮೀಸಲಾತಿ ಮೊದಲಾದವುಗಳು ಹೇಗೆ ಸ್ಥಗಿತಗೊಂಡಂತಿದ್ದ ಅಥವಾ ಜಡಸ್ಥಿತಿಯಲ್ಲಿದ್ದಂತಿದ್ದ ವರ್ಗಗಳಲ್ಲಿ ಸ್ಥಿತ್ಯಂತರವನ್ನುಂಟು ಮಾಡಿತೊ ಹಾಗೆ ಸ್ತ್ರೀಯರ ಬದುಕಿನಲ್ಲಿ ಹೊಸ ಸಂಚಲನಕ್ಕೂ ಸ್ಥಿತ್ಯಂತರಕ್ಕೂ ರಹದಾರಿಯಾಯಿತು.

ಒಟ್ಟು ಭಾರತದ ಬೇರೆ ಬೇರೆ ಭೂ ಪ್ರದೇಶದ ಪರಿಸರದಲ್ಲಿ, ಸಾಮಾಜಿಕ ಜೀವನಕ್ರಮದಲ್ಲಿ ಸ್ತ್ರೀಯ ಸ್ಥಾನಮಾನ, ಲಿಂಗತಾರತಮ್ಯ, ಅಧೀನತೆ, ತವಕ–ತಲ್ಲಣಗಳು, ತುಡಿತಗಳು, ಹೋರಾಟಗಳು ಹೇಗಿವೆಯೋ ಹಾಗೆ ಮಲೆನಾಡ ಪರಿಸರದಲ್ಲೂ ಇರುವಂತಹದೇ ಆಗಿದೆ. ೨೦ನೇ ಶತಮಾನದ ಆರಂಭ ಘಟ್ಟದ ದಶಕಗಳಲ್ಲಿ ಮಲೆನಾಡಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಿನ್ನಲೆಯಲ್ಲಿ ಸ್ತ್ರೀಯ ಸ್ಥಾನಮಾನಗಳ ಕುರಿತು ಅವಲೋಕಿಸಿದಾಗ ಹಲವು ಸಂಗತಿಗಳನ್ನು ತಿಳಿಯಬಹುದಾಗಿದೆ.

ಸ್ತ್ರೀಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ

ಈ ಪರಿಸರದ ಹೆಣ್ಣು ಪಿತೃಪ್ರಧಾನ ಸಂಸ್ಕೃತಿಯಲ್ಲಿ, ಊಳಿಗಮಾನ್ಯ ಪದ್ಧತಿಯಲ್ಲಿ, ಪುರೋಹಿತಶಾಹಿಯ ಹಿಡಿತದಲ್ಲಿ ಅಧೀನವಾಗಿಯೇ ಬದುಕುತ್ತಾ ಬಂದಿದ್ದಾಳೆ. "ಸಂಸ್ಕೃತಿಯೆಂದರೆ ವಿಶಾಲವಾದ ಅರ್ಥದಲ್ಲಿ ಉಣ್ಣುವ-ಉಡುವ, ಜನನ-ಮರಣ, ಮದುವೆ-ಮುಂಜಿ, ಹಬ್ಬ-ಹುಣ್ಣಿಮೆ ಮುಂತಾದ ಸಂಸ್ಕಾರಗಳೆಲ್ಲಾ ಸೇರುತ್ತವೆ. ಈ ಸಂಸ್ಕೃತಿಯಲ್ಲಿ ಗಂಡು-ಹೆಣ್ಣು ಇಬ್ಬರ ಸಮಾನ ಕ್ರಿಯೆ ಇರುತ್ತದೆ. ಆದರೆ ಈ ಎಲ್ಲ ಆಚಾರ-ವಿಚಾರಗಳಲ್ಲಿ ಹೆಣ್ಣಿಗೆ ಎರಡನೇ ಸ್ಥಾನ".[೧] ಇದು ಇತರೆ ಕಡೆ ಹೇಗಿದೆಯೋ ಹಾಗೆಯೇ ಇಲ್ಲಿಯೂ ಇದೆ. ಮಲೆನಾಡ ಪರಿಸರದಲ್ಲಿ ನಾನಾ ಜನ ಜಾತಿ ಸಮುದಾಯಗಳು ನೆಲಸಿವೆ. ಈ ಎಲ್ಲ ಸಮುದಾಯಗಳ ಸ್ತ್ರೀಯರ ಸಾಮಾಜಿಕವಾದ ಸ್ಥಾನಮಾನಗಳಲ್ಲಿ ಅಂತಹ ಭಿನ್ನತೆಗಳೇನೂ ಕಂಡುಬರುವುದಿಲ್ಲ. ಎಲ್ಲರು ಪುರುಷಪ್ರಧಾನತೆಯ ಅಧೀನದಲ್ಲೇ ಬರುವಂತವರು. ಸಮಾಜದ ಪ್ರಾಥಮಿಕ ಘಟಕ ಕುಟುಂಬ. ಆ ಕುಟುಂಬದ ಯಜಮಾನನ ಹೆಂಡತಿ (ಒಕ್ಕಲಿಗ ಸಮುದಾಯದಲ್ಲಿ ಹೆಗ್ಗಡ್ತಿ) ಇತರರ ಗೌರವಕ್ಕೆ ಭಾಜನಳೇ ಹೊರತು ಆ ಕುಟುಂಬದ ಎಲ್ಲ ಆಗುಹೋಗುಗಳಲ್ಲಿ ಅವಳ ಪಾತ್ರವೇನಿಲ್ಲ. 'ಅಡುಗೆ' ಮನೆಗೆ ಸೀಮಿತಗೊಂಡಂತೆ ತನ್ನ ಓರಗಿತ್ತಿಯರ ಮೇಲೆ, ಸೊಸೆಯಂದಿರ ಮೇಲೆ ತನ್ನ ಅಧಿಕಾರವನ್ನು ಹೇರಬಲ್ಲಳಷ್ಟೆ ಉಳಿದೆಲ್ಲ ವಿಚಾರಗಳು ಪುರುಷ ಯಜಮಾನಿಕೆಯ ನಿರ್ದೇಶನದಂತೆ ನಡೆಯುತ್ತಿತ್ತು. ಆ ಮನೆಯ ಸೊಸೆಯಂದಿರು ತವರು ಮನೆಗೂ, ಸಂಬಂಧಿಕರ ಮನೆಗೆ ಹೋಗಬೇಕಾದಲ್ಲಿ ಯಜಮಾನನ ಅಪ್ಪಣೆ ಬಹಳ ಮುಖ್ಯವಾಗಿತ್ತು. ಹೆಣ್ಣುಮಕ್ಕಳಿಗೆ ವರನನ್ನು ಆಯ್ಕೆ ಮಾಡುವ ಯಾವ ಸ್ವಾತಂತ್ರ್ಯವೂ ಇರಲಿಲ್ಲ. ತಂದೆ, ಹಿರಿಯರ ತೀರ್ಮಾನವೇ ಮುಖ್ಯ, ಅಂತಿಮವಾದವು. ಅವರಿಷ್ಟದಂತೆ ಒಡವೆ, ವಸ್ತ್ರಗಳನ್ನು ಹೊಂದುವಂತಿಲ್ಲ. ಅದನ್ನು ನಿರ್ಧರಿಸುವವನು, ತಂದುಕೊಡುವವನು ಯಜಮಾನನೇ ಆಗಿದ್ದ. ಸಾಮಾನ್ಯವಾಗಿ ಮೇಲುವರ್ಗದ ಸಮುದಾಯದ ಸ್ತ್ರೀಯರು ಅಡುಗೆಯ ಕೆಲಸದ ಜೊತೆ ಜಪ-ತಪ, ವ್ರತಾಚರಣೆ, ಪೂಜಾ ಕಾರ್ಯಗಳ ಸಿದ್ಧತೆ, ಮಕ್ಕಳ ಪಾಲನೆ-ಪೋಷಣೆ ಇತ್ಯಾದಿಯಾಗಿ ಮನೆಯೊಳಗೆ ಬಂಧಿಯಾಗಿರುತ್ತಿದ್ದರು. ಶೂದ್ರಾದಿ ಸಮುದಾಯಗಳ ಸ್ತ್ರೀಯರು ಮನೆಯೊಳಗಿನ ಮಕ್ಕಳ ಪಾಲನೆ, ಪೋಷಣೆಯ ಜೊತೆ, ಗದ್ದೆ-ತೋಟಗಳಂತಹ ಹೊರಗಿನ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕಿತ್ತು. ಪುರುಷನ ಕೆಲಸಕ್ಕೆ ಪೂರಕವಾಗಿ, ಸರಿ ಸಮಾನನಾಗಿ ಕೆಲಸ ಮಾಡುತ್ತಿದ್ದರೂ ಅದಕ್ಕೆ ಸಿಗುವ ಶ್ರಮದ ಮೌಲ್ಯ ಪುರುಷ ಶ್ರಮದ ಮೌಲ್ಯದ ಅರ್ಧಕ್ಕಿಂತ ಕಡಿಮೆ. ಉಪಕಸುಬುಗಳಾದ ಕೋಳಿ, ಕುರಿ, ಹಂದಿ ಸಾಕಣೆಯಲ್ಲಿ ಸ್ತ್ರೀಯರೇ ಪ್ರಧಾನಪಾತ್ರವಹಿಸಿದ್ದರೂ, ಅದರ ಪ್ರತಿಫಲ ಅವರಿಗೆ ಶೂನ್ಯ ಅಥವಾ ತೀರಕಡಿಮೆ. ಅವಳಿಗಿರುವ ಖರ್ಚುವೆಚ್ಚದ ಅಗತ್ಯತೆಯನ್ನು ಪುರುಷ ಕಂಡುಕೊಂಡೆ ಇಲ್ಲ. ಊಟ, ನಿಗಧಿತ ಅವಧಿಯಲ್ಲಿ ನೀಡುವ ಬಟ್ಟೆ, ಹೆಚ್ಚೆಂದರೆ ಒಡವೆ (ಅದು ವಿವಾಹದ ಸಂದರ್ಭದಲ್ಲಿ) ನೀಡಲಾಗುತ್ತದೆ. ಆದಕಾರಣ ಸ್ತ್ರೀ ಕುಟುಂಬದ ಆರ್ಥಿಕ ಪ್ರಗತಿಯಲ್ಲಿ, ನಿಭಾವಣೆಯಲ್ಲಿ ಪುರುಷನಿಗೆ ಸಮಾನವಾಗಿ ದುಡಿದರೂ ಆರ್ಥಿಕವಾಗಿ ಪರಾವಲಂಬಿ. ತನ್ನ ಆರ್ಥಿಕ ಅಗತ್ಯದ ಹಿನ್ನೆಲೆಯಲ್ಲಿ ಕದರಡಿಕೆ (ಬಿದ್ದ ಅಡಿಕೆ ಆಯ್ದುಕೊಂಡು ಸಂಗ್ರಹಿಸುವುದು) ಕದರುಭತ್ತ (ಗದ್ದೆಕೊಯ್ಲಿನ ನಂತರ ಗದ್ದೆಯಲ್ಲಿ ಬಿದ್ದಿರುವುದನ್ನು ಆಯ್ದು ಸಂಗ್ರಹಿಸುವುದು)ದಂತಹ ಸಣ್ಣ ಆರ್ಥಿಕ ಸಂಪತ್ತನ್ನು ಅಲ್ಲಲ್ಲಿ ಕೆಲವು ಸ್ತ್ರೀಯರು ಬಳಸುತ್ತಿದ್ದರು. ಆದರೆ

ಇದು ಪುರುಷರಿಗೆ ಆದಷ್ಟು ತಿಳಿಯದಂತೆ ನಡೆಸಬೇಕಾದ ವ್ಯವಹಾರವಾದುದರಿಂದ ವ್ಯಾಪಾರಸ್ಥರ ವಂಚನೆಗೆ ಒಳಗಾಗುತ್ತಿದ್ದರು.

ಹೀಗೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅಂಚಿಗೆ ಸರಿಸಲ್ಪಟ್ಟ ಸ್ತ್ರೀಯರಿಗೆ ಶಿಕ್ಷಣದ ಮಾತಂತು ದೂರವೇ ಸರಿ. "ಐಗಳ ಮಠ ಗಂಡು ಮಕ್ಕಳಿಗೆ ಮಾತ್ರ, ಹೆಣ್ಣು ಮಕ್ಕಳಿಗೆ ಅಕ್ಷರದ ದರ್ಶನವೂ ಇಲ್ಲ. ಮನೆಯ ತುಂಬ ಅಜ್ಜಿಯರು, ಚಿಕ್ಕಮ್ಮ, ದೊಡ್ಡಮ್ಮ, ಅತ್ತಿಗೆ ಹೀಗೆ ನೂರೆಂಟು ಜನ ಹೆಂಗಸರು ಇರುತ್ತಿದ್ದರಿಂದ ಹೆಣ್ಣು ಮಕ್ಕಳಿಗೆ ಅದೇ ತರಬೇತಿ ಕೇಂದ್ರ, ಹಾಡು, ಹಸೆ ಮನೆಗೆಲಸ, ದೇವರ ಉಪಕರಣಿ ತೊಳೆಯುವುದು, ಮನೆ ಸಾರಿಸಿ ರಂಗವಲ್ಲಿ ಇಡುವುದು"[1] ಎಂದು ಅಂದಿನ ಕಾಲದ ಹೆಣ್ಣುಮಕ್ಕಳ ಶಿಕ್ಷಣದ ಬಗೆಗಿನ ಧೋರಣೆಯನ್ನು 'ಫಣಿಯಮ್ಮ' ಕಾದಂಬರಿ ದಾಖಲಿಸುತ್ತದೆ. ಹೀಗೆ ಶೈಕ್ಷಣಿಕವಾಗಿ ಸ್ವಲ್ಪ ಮೇಲಿದ್ದ ಬ್ರಾಹ್ಮಣರ ಮನೆಗಳಲ್ಲಿನ ಹೆಣ್ಣು ಮಕ್ಕಳ ಸ್ಥಿತಿಯೇ ಶಿಕ್ಷಣದ ವಿಚಾರದಲ್ಲಿ ಹೀಗಾದರೆ ಶೂದ್ರ ಸಮುದಾಯದ ಪುರುಷರಿಗೆ ಶಿಕ್ಷಣದ ಸೌಲಭ್ಯಗಳು ಕಡಿಮೆ ಇರುವಾಗ ಅಲ್ಲಿನ ಸ್ತ್ರೀಯರ ಶಿಕ್ಷಣವೆಂಬುದು ಗಗನ ಕುಸುಮವಾಗಿತ್ತು.

ಮೈಸೂರು ಪ್ರಾಂತ್ಯಕ್ಕಿಂತ, ಕರಾವಳಿ ಪ್ರಾಂತ್ಯದವರು ವಿದ್ಯಾಭ್ಯಾಸದಲ್ಲಿ ಮುಂದಿದ್ದರು. ಕಾರಣ ಆ ಪ್ರಾಂತ್ಯ ನೇರವಾಗಿ ಇಂಗ್ಲೀಷರ ಆಡಳಿತಕ್ಕೆ (ಮದ್ರಾಸ್ ಪ್ರಾಂತ್ಯ) ಒಳಪಟ್ಟಿದ್ದರಿಂದ ಹೆಚ್ಚಿನ ಜನ ಆ ಸರ್ಕಾರದ ಪ್ರೋತ್ಸಾಹದಿಂದ ಶಿಕ್ಷಣ ಪಡೆದರು. ದಟ್ಟವಾದ ಕಾಡು-ಗುಡ್ಡು-ಕಣಿವೆಗಳಿಂದ ತುಂಬಿದ ಮಲೆನಾಡಿಗೆ ಶಾಲೆಯ ಸೌಲಭ್ಯಗಳು ತಡವಾಗಿ ಬಂದವು. ಆದಕಾರಣ ದಕ್ಷಿಣ ಕನ್ನಡದಿಂದ ಸೇರೇಗಾರಿಕ ಕೆಲಸಕ್ಕೆ ಬಂದಂತಹ ಕೆಲವು ಅಕ್ಷರಸ್ಥರು ಐಗಳ ಮಠ, ಕೂಲಿಮಠದಲ್ಲಿ ಪಾಠ ಹೇಳುವಂತಹ ಕೆಲಸವನ್ನು ಮಾಡಿದರು. ಸ್ವಲ್ಪ ಓದು-ಬರಹ ಕಲಿಯುವ ಇಂತಹ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ಇದು ಅಗತ್ಯವೇ ಇಲ್ಲವೆಂಬಂತೆ ನಿಕಾರಿಸಲ್ಪಟ್ಟಿತ್ತು. ಕುವೆಂಪು ಹೇಳುವ ಹಾಗೆ 'ಸ್ತ್ರೀಯರು ಓದು ಗಂಡಸರು ಸೀರೆ ಉಟ್ಟಂತೆ' ಹಾಸ್ಯಸ್ಪದವಾಗಿಯೂ, 'ಓದಿ ಯಾವ ಮಣಿಗಾರಿಕೆ ಮಾಡಬೇಕಾಗಿದೆ' ಎಂಬ ತಿರಸ್ಕಾರದ ಹಿನ್ನಲೆಯಲ್ಲಿ ಸ್ತ್ರೀಯನ್ನು ಶಿಕ್ಷಣದಿಂದ ದೂರವೇ ಇಡಲಾಗಿತ್ತು. ಇನ್ನು ಒಡೆಯರ ಆಸ್ತಿಯಾದ ತಳಸಮುದಾಯವಂತೂ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಹಳ ದೂರವೇ ಉಳಿದಿತ್ತು. ಹಾಗಿರುವಾಗ ಅಲ್ಲಿನ ಸ್ತ್ರೀಯರ ಬದುಕು ಈ ಹಿನ್ನಲೆಯಲ್ಲಿ ಅತ್ಯಂತ ಶೋಚನೆಯ ಸ್ಥಿತಿಯಲ್ಲಿತ್ತು ಎನ್ನಬಹುದು.

ಸಾಮಾಜಿಕವಾಗಿ ಮೇಲಿನ ಹಂತದಲ್ಲಿರುವ ಬ್ರಾಹ್ಮಣ ಸಮುದಾಯದಿಂದ ಹಿಡಿದು ತಳಸಮುದಾಯದ ಹಂತದಲ್ಲಿರುವ ಸಮುದಾಯಗಳವರೆಗೆ ಸ್ತ್ರೀಯರ ಮಧ್ಯೆ ಸಾಮಾಜಿಕವಾದ ಸ್ಥಾನಮಾನಗಳಲ್ಲಿ ವ್ಯತ್ಯಾಸಗಳಿರಬಹುದೇ ಹೊರತು ಲಿಂಗ ತಾರತಮ್ಯದ ಹಿನ್ನಲೆಯಲ್ಲಿ ನೋಡಿದಾಗ ಎಲ್ಲ ಸಮುದಾಯದ ಸ್ತ್ರೀಯರೂ ಶೋಷಿತರೇ. ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ಮಹಿಳೆಯ ಬಗ್ಗೆ ಇರುವ ವಿಧಿ, ನಿಷೇಧಗಳು ಕಟ್ಟು-ಕಟ್ಟಳೆಗಳು ಸಾಮಾಜಿಕವಾಗಿ ಮೇಲುಸ್ತರದಲ್ಲಿದ್ದ ಬ್ರಾಹ್ಮಣ ಸಮುದಾಯದಲ್ಲಿ ತೀವ್ರವಾಗಿದ್ದು, ಸಾಮಾಜಿಕವಾಗಿ ಕೆಳಕೆಳ ಹಂತಕ್ಕೆ ಬಂದಂತೆಲ್ಲ ಸಡಿಲಗೊಳ್ಳುತ್ತಾ ಬಂದಿರುವುದನ್ನು ಕಾಣಬಹುದು. ಬಾಲ್ಯವಿವಾಹ, ವಿಧವಾ ಪದ್ಧತಿ ಮುಂತಾದವೆಲ್ಲ ಬಿಗಿಯಾಗಿ

ಆಚರಣೆಗೊಳ್ಳುತ್ತಿದ್ದುದು ಸಾಮಾಜಿಕವಾಗಿ ಮೇಲುಸ್ತರ ಸಮುದಾಯಗಳಲ್ಲಿ ಎಂಬುದನ್ನು ಗಮನಿಸಬೇಕು. ಆದ್ದರಿಂದ ಬಾಲ್ಯವಿವಾಹ, ವಿಧವಾ ಪದ್ಧತಿ ಭಾರತೀಯ ಎಲ್ಲ ಸಮುದಾಯಗಳಲ್ಲಿನ ಸ್ತ್ರೀ ಸಮುದಾಯಕ್ಕೆ ಅಂಟಿದ ಶಾಪವಾಗಿಯೇನೂ ಇರಲಿಲ್ಲ. ಆದರೆ ಇದರ ಆಚರಣೆಯ ಬಿಗಿಯಾದ ಕಟ್ಟುಕಟ್ಟಳೆಗಳ ಜಾರಿಯ ಹಿಂದಿನ ಮನಸ್ಸಾಗಲಿ ಅಥವಾ ಅದನ್ನು ಬಿಗಿಯಾಗಿ ಜಾರಿಗೊಳಿಸದ, ಪಾಲಿಸದ ತಳಸಮುದಾಯಗಳ ಮನಸ್ಸಾಗಲಿ ಅದರ ಹಿಂದಿರುವುದು ಪುರುಷ ಪ್ರಧಾನವಾದ ಅಧಿಕಾರಶಾಹಿ ಧೋರಣೆ ಎಂಬುದನ್ನು ಗಮನಿಸಬೇಕು.

ಸ್ತ್ರೀ : ಬ್ರಾಹ್ಮಣ ಸಮುದಾಯ

ಮಲೆನಾಡಿನಲ್ಲಿ ಬ್ರಾಹ್ಮಣ ಸಮುದಾಯದಲ್ಲಿ ಬಾಲ್ಯ ವಿವಾಹದ ಪದ್ಧತಿ ಹೆಚ್ಚಾಗಿ ಬಳಕೆಯಲ್ಲಿತ್ತು. ಗಂಡಿಗೆ ಹದಿನಾಲ್ಕು, ಹೆಣ್ಣಿಗೆ ಹತ್ತು ವರ್ಷ ತುಂಬುವ ಮೊದಲು ವಿವಾಹ ಏರ್ಪಾಡಾಗುತ್ತಿತ್ತು. ಎಂ.ಕೆ.ಇಂದಿರಾ ಅವರ 'ಫಣಿಯಮ್ಮ' ಕಾದಂಬರಿಯಲ್ಲಿ ಬಂದಿರುವ ಆ ಸಮಸ್ಯೆಯನ್ನು ಮುಂದೆ ಚರ್ಚೆಗೆ ಎತ್ತಿಕೊಳ್ಳಲಾಗುವುದು. ಆ ಸಮುದಾಯದಲ್ಲಿ ಮದುವೆಗೆ ಮೊದಲೇ ಋತುಮತಿಯಾದರೆ ಅಥವಾ ಹತ್ತು-ಹನ್ನೆರಡು ವರ್ಷದೊಳಗೇ ಮದುವೆಯಾಗದಿದ್ದರೆ ಮನೆಯಿಂದ ಹೊರ ಹಾಕುವ ಅಥವಾ ಕಾಡಿಗೆ ಅಟ್ಟುವ ಕ್ರೂರ ಪದ್ಧತಿ ಬಹಳ ಹಿಂದೆ ಏನಾದರೂ ಇತ್ತೆ ಎಂಬ ಶಂಕೆಗೂ ಆಸ್ಪದವಿದೆ. ಮಲೆನಾಡಿನಲ್ಲಿರುವ ಅನೇಕ ಮಾತೃದೇವತೆಗಳ ಹಿಂದೆ ಅಂತಹ ಐತಿಹ್ಯವಿದೆ. ಕುವೆಂಪು ಕಾದಂಬರಿಯಲ್ಲಿ ಆ ಬಗ್ಗೆ ಪ್ರಾಸಂಗಿಕವಾಗಿ ಮಾತುಬರುತ್ತದೆ. ಹಳೇಮನೆ ಸುಬ್ಬಣ್ಣ ಹೆಗಡೆಗೆ ತನ್ನ ಮಗಳ ಮದುವೆ ಬಗ್ಗೆ ಬಂಧುಗಳು ಯಾರಾದರೂ ವಿಚಾರಿಸಿದಾಗ ಅದು ಆತನಿಗೆ ಕಿರಿಕಿರಿಯೆನಿಸಿ ತನಗೆ ತಾನೆ ಹೇಳಿಕೊಳ್ಳುವ ಮಾತಿನಲ್ಲಿ ಈ ಅಂಶ ಅಡಗಿರುವುದನ್ನು ಗಮನಿಸಬಹುದು.

"ಚೆನ್ನಾಗಿ ಕೆಲಸ ಮಾಡಿ ಹೊಟ್ಟೆ ತುಂಬಾ ತಿನ್ನುವ ಹಳ್ಳಿಯ ಹೆಣ್ಣು ಬೆಳೆಯುವಂತೆ ಮಂಜಮ್ಮ ಸುಪುಷ್ಟವಾಗಿ ಬೆಳೆದಿದ್ದ ಮಾತ್ರಕ್ಕೆ ಮದುವೆಯ ವಯಸ್ಸು ಮೀರಿತೆಂದು ಹೇಳುವುದು ಯಾವ ನ್ಯಾಯ? ಮದುವೆ ವಯಸ್ಸು ಮೀರಿತೆಂದರೆ ಅರ್ಥವಾದರೂ ಏನು? ಅವಳೇನು ಹಾರವರ ಮನೆಯ ಹೆಣ್ಣೆ? ಮದುವೆಯಾಗುವುದಕ್ಕೆ ಮೊದಲೇ ದೊಡ್ಡವಳಾಗಿ ಬಿಟ್ಟರೆ ಕಾಡಿಗಟ್ಟಬೇಕೆಂಬ ಹೆದರಿಕೆಯೇನು?"[3]

ಇಲ್ಲಿ ಒಂದು ಸಮುದಾಯಕ್ಕೆ ಹೆಣ್ಣಿಗೆ ಬೇಗ ಮದುವೆ ಮಾಡಿಬಿಡಬೇಕೆಂಬ ತವಕವಿದೆ. ಆದರೆ ಕೃಷಿ ಅವಲಂಬಿತ ಶೂದ್ರ ಸಮುದಾಯಕ್ಕೆ ಮನೆಯೊಳಗಿನ ಕೆಲಸದಾಳನ್ನು ಬೇಗ ಮದುವೆ ಮಾಡಿಬಿಡಬೇಕೆಂಬ ತವಕವಿಲ್ಲ. ಇದು ಸ್ತ್ರೀ ಬಗೆಗಿನ ಹಿತಾಸಕ್ತಿಯಲ್ಲ. ಇಲ್ಲಿರುವುದು ಊಳಿಗಮಾನ್ಯ ಪದ್ಧತಿಯ ಹಿತಾಸಕ್ತಿ ಎಂಬುದನ್ನು ಗಮನಿಸಬೇಕು.

ಮಲೆನಾಡ ಪರಿಸರದ ಬ್ರಾಹ್ಮಣ ಸಮುದಾಯದಲ್ಲಿನ ಸ್ತ್ರೀ ಬದುಕನ್ನು ಕುರಿತು ಎಂ.ಕೆ.ಇಂದಿರಾ, ವಸುಮತಿ ಉಡುಪ ಮತ್ತು ಯು.ಆರ್.ಅನಂತಮೂರ್ತಿ ಅವರ ಕಥಾಸಾಹಿತ್ಯದಲ್ಲಿ ಚಿತ್ರಿತವಾದ ಬಗೆಯನ್ನು ಮೊದಲಿಗೆ ಚರ್ಚೆಗೆ ತೆಗೆದುಕೊಂಡು ನೋಡಲಾಗಿದೆ.

ಎಂ.ಕೆ.ಇಂದಿರಾ ಅವರ 'ಫಣಿಯಮ್ಮ' ಕಾದಂಬರಿ ಬಾಲವಿಧವೆಯಾದ ಫಣಿಯಮ್ಮನನ್ನು ಕೇಂದ್ರವಾಗಿಟ್ಟುಕೊಂಡು ವಿಧವೆಯ ಸಮಸ್ಯೆಯನ್ನು ಚಿತ್ರಿಸುತ್ತಾ ಒಂದು ಸಮುದಾಯವು ನಿಧಾನವಾಗಿ

ಆಧುನಿಕತೆಗೆ ತೆರೆದುಕೊಳ್ಳುತ್ತಾ ಬಂದ ಬಗೆಯನ್ನು ಅನಾವರಣಗೊಳಿಸುತ್ತದೆ.

ಹಿಂದೆ ಮಲೆನಾಡಿನ ಬ್ರಾಹ್ಮಣ ಸಮುದಾಯದ ಬಹುತೇಕ ಮನೆಗಳಲ್ಲಿ ಒಬ್ಬರಾದರೂ ವಿಧವೆಯರು ಇರುತ್ತಿದ್ದರು. ಇದಕ್ಕೆ ಮುಖ್ಯವಾದ ಕಾರಣಗಳಲ್ಲಿ ಬಾಲ್ಯವಿವಾಹವೂ ಒಂದು. ಏಳರಿಂದ ಒಂಭತ್ತು ವರ್ಷದೊಳಗೆ ಹೆಣ್ಣಿಗೆ ಮದುವೆ ಮಾಡಿಬಿಡಬೇಕೆಂಬ ಮೌಢ್ಯಕ್ಕೆ ಕಟ್ಟುಬೀಳಲಾಗಿತ್ತು. ಹತ್ತು ವರ್ಷ ಪ್ರಾಯಕ್ಕೆ ತಲುಪಿ ಬಿಟ್ಟರೆ ಮನೆಯಲ್ಲಿ ಆತಂಕ ಶುರುವಾಗುತ್ತಿತ್ತು. ಹೆತ್ತವರ ಆತಂಕ, ಪಕ್ಕದವರ ತಿರಸ್ಕಾರದ ನೋಟವೇ ಪ್ರಧಾನವಾಗಿ ಮುದುಕನೊ ತದುಕನೊ ಜಾತಕ ಕೂಡಿದರಾಯಿತು. ಮದುವೆ ಮಾಡಿ, ಹೆತ್ತವರು ತಮ್ಮ ಭಾರ ಕಳೆದುಕೊಂಡವರಂತೆ ಸಮಾಧಾನದ ಉಸಿರು ಬಿಡುತ್ತಿದ್ದರು. ಎಷ್ಟೊ ಸಲ ಮದುವೆ, ಗಂಡ ಮನೆ ಎಂಬ ಅರಿವು ಮೂಡುವ ಮೊದಲೇ ವಿಧವೆಯಾಗಿರುತ್ತಿದ್ದರು. ಕೆಲವರು ಕೊಟ್ಟಮನೆಗೆ, ಹಲವರು ಹುಟ್ಟಿದ ಮನೆಗೆ ಋಣ ತೀರಿಸುವವರಂತೆ ಅಡಿಗೆ ಕೆಲಸ, ಮಕ್ಕಳ ಆರೈಕೆ, ಜಪ–ತಪ ಮಾಡಿಕೊಂಡು ಒಪ್ಪತ್ತಿನ ಊಟ ಮಾಡಿಕೊಂಡು 'ಮಡಿಹಿಡಿದು' ಕಾಲಯಾಪನೆ ಮಾಡುತ್ತಾ ತಮ್ಮ ಇಡೀ ಬದುಕನ್ನೇ ಸವೆಸುತ್ತಾರೆ. ಕೆಲವರು ನಾಟಿ ವೈದ್ಯೆಯಾಗಿಯೂ ಸೇವೆಯಲ್ಲಿ ತೊಡಗಿಸಿಕೊಂಡವರಿದ್ದರು. ಬಹಳ ಕ್ರೂರವಾದ ವ್ಯಂಗ್ಯವೆಂದರೆ ಕಿರುಹರೆಯದಲ್ಲೇ ವಿಧವೆಯಾದ ಮಗಳಿಂದ ತಾಯಿಯಾದವಳು ನಾಲ್ಕಾರು ಬಾಣಂತನಗಳ ಆರೈಕೆಯನ್ನು ಮಾಡಿಸಿಕೊಂಡಿರುವುದು ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಈ ರೀತಿ ಕಾದಂಬರಿ ಆ ಕಾಲದ ಬ್ರಾಹ್ಮಣ ಸಮುದಾಯದ ವಿಧವೆಯರ ಬದುಕಿನ ಹಿನ್ನಲೆಯನ್ನು ನೀಡುತ್ತಲೇ ಫಣಿಯಮ್ಮನ ಬದುಕಿಗೆ ಪ್ರವೇಶ ಮಾಡುತ್ತದೆ.

ಫಣಿಯಮ್ಮನಿಗೆ ಎಂಟು ವರ್ಷವಿರುವಾಗಲೇ ಹದಿನೆಂಟು ವರ್ಷದ ನಂಜುಂಡನಿಗೆ ಮದುವೆ ಮಾಡಿದ್ದರು. ಸ್ವಲ್ಪ ಕಾಲಕ್ಕೆ ಆತ ಹಾವು ಕಚ್ಚಿ ತೀರಿಕೊಂಡ. ಪತಿಯ ಮುಖವನ್ನೇ ಸರಿಯಾಗಿ ನೋಡದ ಫಣಿಯಮ್ಮ ವಿಧವೆಯಾದಳು. ಬಾಳ ಇಳಿ ಸಂಜೆಯಲ್ಲಿ ಬರಬಹುದಾದ ಸ್ಥಿತಿಗೆ ಬಾಲ್ಯದಿಂದ ಒಮ್ಮೆಲೆ ದಾಟಿದಳು. ಸಂಪ್ರದಾಯಕ್ಕೆ ಬದ್ಧವಾದ ದೊಡ್ಡ ಕುಟುಂಬದಲ್ಲಿ ಬದುಕುವ ಪೋಷಕರಿಗೆ ನೋವಿನ ವಿಚಾರವೇ ಆದರೂ ಸಂಪ್ರದಾಯಕ್ಕೆ ನಿಷ್ಠರಾಗಿ, ಸಮಾಜಕ್ಕೆ, ಮಿಗಿಲಾಗಿ ಶೃಂಗೇರಿ ಮಠಕ್ಕೆ ಬದ್ಧರಾಗಲೇಬೇಕಾಗಿದ್ದರಿಂದ ಫಣಿಯಮ್ಮನಿಗೆ ಮಡಿ ಹಿಡಿಸಿದರು.

"ಹುಡುಗಿ ಇನ್ನೂ ಕನ್ನೆಯಾಗಿರುವುದರಿಂದ ಹನ್ನೊಂದನೆಯ ದಿನ ಸೌಮಾಂಗಲ್ಯದ ಚಿನ್ನಗಳನ್ನೆಲ್ಲಾ ತೆಗೆದು, ಬಿಳಿಸೀರೆ ಉಡಿಸಿರಬೇಕು. ಮೈನೆರೆಯುವವರೆಗೂ ಯಾರಿಗೂ ಮುಖತೋರಿಸಕೂಡದು ಮೈನೆರದ ನಾಲ್ಕನೆ ದಿನವೇ ಶಿರೋಮುಂಡನ ಮಾಡಿಸಿ, ಆ ಜನ್ಮ ಮಡಿ ಹಿಡಿಸಬೇಕು. ಇದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಇಡೀ ಮನೆತನಕ್ಕೆ ಬಹಿಷ್ಕಾರ".[೪]

ಇದು ಶೃಂಗೇರಿ ಮಠದ ಶಾಸನ. ವಿಧವಾ ಪದ್ಧತಿ ಕೇವಲ ವಿಧವೆಯೊಬ್ಬಳ ಸಮಸ್ಯೆಯಲ್ಲ ; ಕುಟುಂಬ ಕೂಡ ಎದುರಿಸಬೇಕಾದ ಸಮಸ್ಯೆ ಈ ಬಗ್ಗೆ ಫಣಿಯಮ್ಮನೇ ಒಂದು ಕಡೆ ಹೀಗೆ ಹೇಳುತ್ತಾಳೆ.

"ಎಲ್ಲ ಗಂಡ ಸತ್ತವರಿಗೆ ಮಾಡುವಂತೆ ತನಗೂ ಮಾಡಿದರು. ಇದರಲ್ಲಿಯೂ ಯಾರ ತಪ್ಪೂ ಇಲ್ಲ.... ತಪ್ಪಿದ್ದರೆ ಶೃಂಗೇರಿ ಮಠದಿಂದ ಬಹಿಷ್ಕಾರ ಬೀಳುತ್ತಿತ್ತಲ್ಲ"[೫]

ಬಹಿಷ್ಕಾರದ ಭಯ ಕುಟುಂಬ ಮತ್ತು ಹೆಣ್ಣು ಸಂಪ್ರದಾಯವನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವಂತೆ ಮಾಡಿತ್ತು. ಈ ಬಗ್ಗೆ ಫಣಿಯಮ್ಮನ ಮಾತಿನಲ್ಲಿ ನೋವಿನ ದನಿಯನ್ನು ಕಾಣಬಹುದು.

ತುಂಬು ತಾರುಣ್ಯದಲ್ಲಿಯೇ ಅಪ್ಪಟ ತಪಸ್ವಿಯಾದ ಫಣಿಯಮ್ಮನಿಗೆ ಮಾನವ ಸಹಜವಾದ ಯಾವ ಬೇಕು ಬೇಡಗಳಾಗಲಿ, ಮೋಹ ಕಾಮನೆಗಳಾಗಲಿ ಕಾಡಲಿಲ್ಲ. ಸಹಜ ಬದುಕಿನಿಂದ ದೂರವುಳಿದು ಆ ಬಗ್ಗೆ ಜಡಗೊಂಡಿದ್ದಳು. ತನ್ನ ಪರಿಸರದ ಪ್ರತಿಕ್ರಿಯೆ ಕೂಡ ಹಾಗೇ ಇತ್ತು. ಫಣಿಯಮ್ಮನ ಗಂಡ ತೀರಿಕೊಂಡು ಆಕೆ ವಿಧವೆಯಾದಾಗ ಅದೊಂದು ಸಮಸ್ಯೆಯೋ ಅಥವಾ ಕ್ರೌರ್ಯವೋ ಆಗದೆ ಸಹಜವಾಗಿ ಎಂದಿನ ಸಂಪ್ರದಾಯದಂತೆ ಕೇಶ ಮುಂಡನವಾಗಿ, ಮಡಿಹಿಡಿದು ಮನೆಯ ಒಳಗಿನ ಇತರ ಮಡಿ ಹೆಂಗಸರೊಂದಿಗೆ ಸೇರಿ ಹೋದಳು. ಆಕೆಯ ಜಡ ಸ್ಥಿತಿಗೆ, ಸಹಜ ಬದುಕಿನ ಲಹರಿಯಿಂದ ದೂರವುಳಿಯಲು ಆಕೆಗೆ ವಿಧಿಸಿದ ಆಹಾರ ಪದ್ಧತಿಗಳು ಕೂಡ ಕಾರಣವೆನ್ನಬಹುದು. ಹಾಗಿದ್ದೂ ಸಾತ್ವಿಕ ಸ್ವರೂಪಿಣಿಯಾದ ಫಣಿಯಮ್ಮ ತನ್ನ ಸುತ್ತಮುತ್ತ ನಡೆಯುತ್ತಿದ್ದ ತಾರತಮ್ಯಭಾವಗಳಿಗೆ, ಅಕ್ರಮ ಲೈಂಗಿಕ ಸಂಬಂಧಗಳಿಗೆ ಸಂಪೂರ್ಣ ಕುರುಡಾಗಿರಲಿಲ್ಲ. ತನ್ನ ಒಳಮನಸ್ಸು ತನಗಾದ ಅನ್ಯಾಯವನ್ನು ನೆನೆದುಕೊಳ್ಳತ್ತಲೇ, ಸಮಾಜದ ಹುಳುಕುಗಳ ಬಗ್ಗೆ ಸಂಪ್ರದಾಯದ ಹೆಸರಿನಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ಕ್ರೌರ್ಯವನ್ನು ತನ್ನ ಮಿತಿಯಲ್ಲಿ ವಿರೋಧಿಸುವುದನ್ನು ಕಾಣಬಹುದು.

"ಏನು ವಿಚಿತ್ರ ಸಂಪ್ರದಾಯ ನಮ್ಮದು? ಗಂಡಸು ಹೊಲತಿಯರನ್ನು ಮುಟ್ಟಿ ಬಂದರೂ ಸ್ನಾನ ಮಾಡಿ ಜನಿವಾರ ಬದಲಾಯಿಸಿದರೆ ಶುದ್ಧ. ಹೆಂಗಸು ಅಪ್ಪಿ ತಪ್ಪಿ ಪುರುಷನನ್ನು ನೋಡಿದರೆ ಕುಟಿಲೆ........ ಶೌಚ ತೊಳೆಯುವ ಎಡಗೈ ಪೂಜೆ ಮಾಡುವಾಗ ಗಂಟೆ ಬಾರಿಸಬೇಕು........ ನಮಸ್ಕರಿಸುವಾಗ ಎರಡೂ ಕೈ ಜೋಡಿಸಬೇಕು, ಅದು ಬಿಟ್ಟರೆ ಯಾವ ಶುಭಕಾರ್ಯಗಳಿಗೂ ಎಡಗೈ ಮೊದಲು ಹಾಕಬಾರದು. ಇಂಥ ಕುರುಡು ಸಂಪ್ರದಾಯಗಳು ತಮ್ಮಲ್ಲಿ ಅಸಂಖ್ಯ ಇವೆ. ಅಪ್ಪ ನೆಟ್ಟ ಆಲದ ಮರವೆಂದರೆ ಎಲ್ಲರೂ ಅದಕ್ಕೆ ನೇಣು ಹಾಕಿಕೊಳ್ಳುವವರೇ ಹೊರತು ಅದನ್ನು ಬದಲಾಯಿಸಬೇಕೆಂಬ ಬುದ್ಧಿ ಇಲ್ಲವಲ್ಲ?"[೬]

ಈ ಮಾತುಗಳಲ್ಲಿ ಲಿಂಗ ತಾರತಮ್ಯವನ್ನು ವಿರೋಧಿಸಿ, ಮೌಢ್ಯಾಚರಣೆಯನ್ನು ತಿರಸ್ಕರಿಸಿ ಮನುಷ್ಯ ಸಹಜ ಸಂದರ್ಭಗಳನ್ನು ಬೆಸೆಯುವುದರ ಬಗ್ಗೆ ಫಣಿಯಮ್ಮ ನೇರವಾಗಿಯೇ ತನ್ನ ಮುಲಾಜಿಲ್ಲದೆ ಅಭಿವ್ಯಕ್ತ ಮಾಡುತ್ತಾಳೆ. ಸಂಪ್ರದಾಯದ ಅನೀತಿಯನ್ನು ಪ್ರಶ್ನಿಸುತ್ತಾಳೆ. ಇದಕ್ಕೆ ಪೂರಕವಾಗಿ ಮಡಿಯಾಗುವುದಿಲ್ಲವೆಂದು ಹಠ ಹಿಡಿದ ದ್ರಾಕ್ಷಿಣೆಯನ್ನು ಬೆಂಬಲಿಸುತ್ತಾಳೆ.

"ನೀವು ತುಸು ಯೋಚನೆ ಮಾಡ್ಬೇಕು..... ಪ್ರಾಯದ ಹೆಣ್ಣು ನೆಟ್ಟಗೆ ಎರಡು ವರ್ಷ ಗಂಡನ ಜೊತೆ ಬಾಳಲಿಲ್ಲ..... ಈಗಿಂದ್ಲೇ ಪ್ರಾಯದ ಹೆಣ್ಣು ಚೌರದೋನ ಮುಂದೆ".

ಇಲ್ಲಿ ಫಣಿಯಮ್ಮನ ಅಂತರಾಳದ ಅಸಹನೆ ದಾಕ್ಷಾಯಿಣಿಗೆ ನೀಡಿದ ಬೆಂಬಲದ ಹಿನ್ನಲೆಯಲ್ಲಿ ಸ್ಫೋಟಗೊಳ್ಳುವುದನ್ನು ಕಾಣಬಹುದು. ಹಾಗೆ ಹೊರಗಿನ ಸಮಾಜ ಬದಲಾಗುತ್ತಿರುವ ಸೂಚನೆಯೂ ಇದೆ.

"ಪಟ್ನವಾಸದಾಗೆ ಮಕ್ಳು ಮೊಮ್ಮಕ್ಳು ಇದ್ದೋರೆಲ್ಲ ಹಂಗೇ ಇರ್ತಾರಪ್ಪ. ತಲೆ ಕೂದ್ಲಿದ್ರೆ ನಷ್ಟೆಂತದು ಅದರಾಗೆ"[೬]

ಎಂದು ಹೇಳುವ ಫಣಿಯಮ್ಮನ ಮಾತಲ್ಲಿ ಬದಲಾದ ಕಾಲಕ್ಕೆ ಹೆಣ್ಣು ತನ್ನ ಬದುಕಿನ ದಾರಿಯಲ್ಲಿ ಹೊಸತನಕ್ಕಾಗಿ ತುಡಿಯುವ ಹಂಬಲ ಕಾಣಸಿಗುತ್ತದೆ.

"ಫಣಿಯಮ್ಮ ಜೀವವಿರೋಧಿ ವ್ಯವಸ್ಥೆಯನ್ನು ತಿರಸ್ಕರಿಸುತ್ತಾಳೆ, ಅಸಹ್ಯಿಸುತ್ತಾಳೆ. ಆದರೆ ಅದು ಸಿಟ್ಟಿನ ರೂಪ ತಾಳುವುದಿಲ್ಲವಾದ್ದರಿಂದ ಸಾಮಾಜಿಕ ಕ್ರಾಂತಿಯ ಮಟ್ಟಕ್ಕೇರದೆ ಗುಟ್ಟಾಗಿ ಬುಸುಗುಡುವಷ್ಟಕ್ಕೆ ಮಾತ್ರ ಸೀಮಿತವಾಗಿ ಬಿಡುತ್ತದೆ".[೭] ಹಾಗೆ ಫಣಿಯಮ್ಮನ ಬದುಕು ಸಂಪ್ರದಾಯದ್ದಾದರೂ ವಿಚಾರದಲ್ಲಿ ಆಧುನಿಕತೆ ಇದೆ. ತನಗೆ ವೈಚಾರಿಕ ಅರಿವು ಮೂಡುವ ಮೊದಲೆ ಸಂಪ್ರದಾಯದ ಬದುಕಿಗೆ ಒಳಗಾಗಿತ್ತು. ಆಕೆಗೆ ತನ್ನ ಅನುಭವದ ಮೂಲಕ ವೈಚಾರಿಕವಾಗಿ ಆಲೋಚನೆ ಮಾಡುವ ಹಂತದಲ್ಲಿ ಮಧ್ಯವಯಸ್ಸು ದಾಟಿತ್ತು. ಆದ್ದರಿಂದ ಸಂಪ್ರದಾಯದ ರೀತಿಯಲ್ಲಿ ಬದುಕಿದರೂ ತನ್ನ ಹಾಗೆ ಮುಂದಿನ ಹೆಣ್ಣು ಮಕ್ಕಳ ಬದುಕು ಹಾಗಾಗದಿರಲಿ ಎಂಬ ಕಾಳಜಿಯನ್ನು ಕಾಣಬಹುದು. ಆದ್ದರಿಂದ ದಾಕ್ಷಾಣಿಯನ್ನು ಬೆಂಬಲಿಸಿ ಆಡಿದ ಮಾತುಗಳಲ್ಲಿ ಮಲೆನಾಡ ಪರಿಸರದಲ್ಲಿ ಸಂಪ್ರದಾಯದ ಕಟ್ಟು ಸಡಿಲವಾಗುವುದನ್ನು, ಸಡಿಲವಾಗಬೇಕಾದುದನ್ನು ಸೂಚಿಸುತ್ತದೆ.

ಫಣಿಯಮ್ಮ ಮಡಿ ಮೈಲಿಗೆಗಳ ಬಗ್ಗೆ ನಿರಾಕರಣೆಯ ಮಾತುಗಳನ್ನಾಡಿದರೂ ಸಂಪ್ರದಾಯ ನಿಷ್ಠರು ದಾಕ್ಷಾಯಿಣಿಗೆ ಮಡಿ ಮಾಡಿಸಿ ಗಂಡನ ಮನೆಗೆ ಕಳುಹಿಸಿದಾಗ ಆಕೆ ತಕ್ಕ ಪ್ರತಿಕಾರವನ್ನು ತೆಗೆದುಕೊಳ್ಳುತ್ತಾಳೆ. ತನ್ನ ಮೈದುನನ ಜೊತೆ ಸಂಬಂಧ ಬೆಳಸಿ ಆ ಮನೆಯ ವಾರಸುದಾರನಾಗಲಿರುವ ಮಗುವಿಗೆ ತಾಯಿಯಾಗುವ ಪ್ರಕ್ರಿಯೆ ಸಾಮಾನ್ಯವಾದುದಲ್ಲ. ಬಹಿಷ್ಕಾರದಂತಹ ಬೆದರಿಕೆಗೂ ಬಗ್ಗದೆ ಎಲ್ಲ ಬಗೆಯ ಸಾಂಪ್ರದಾಯಿಕ ಚೌಕಟ್ಟನ್ನು ಮುರಿದು ಧೈರ್ಯದಿಂದ ಎದುರಿಸುವ ಛಲಗಾರಿಕೆ ಗರಿಗಟ್ಟುತ್ತಾ ಹೋಗುತ್ತದೆ. ಶೃಂಗೇರಿ ಮಠಕ್ಕೆ ದೂರೊಯ್ಯುವ, ಬಹಿಷ್ಕಾರ ಹಾಕುವ ಪ್ರಯತ್ನ ಮಾಡಿದರೆ ಹೊಲೆಮಾದಿಗರನ್ನು ಕರೆತಂದು ಮನೆಯೊಳಗೆ ಸೇರಿಸುವೆನೆಂಬ ಸವಾಲ್ ಎಸೆಯುವುದು ಪ್ರತಿತಂತ್ರವಾಗಿ ಕಾಣಿಸುತ್ತದೆ. "ಬಾಯಿಸತ್ತ ಸಹಸ್ರಾರು ಫಣಿಯಮ್ಮಂದಿರುಗಳ ಸಮಾಧಿಯಿಂದ ಎದ್ದು ಬಂದ ಜೀವಂತಿಕೆಯ ಪ್ರತೀಕವಾದ ದಾಕ್ಷಾಯಿಣಿ, ಹೆಣ್ಣಿನ ಧೈರ್ಯ, ಸ್ಥೈರ್ಯ, ಶಕ್ತಿ, ಸಾಹಸಗಳ ಉತ್ತುಂಗ ದರ್ಶನ ಮಾಡಿಸುತ್ತಾಳೆ".[೮] ಇದನ್ನೆಲ್ಲಾ ಒಪ್ಪಿಕೊಳ್ಳುವ ಹೊಸ ತಲೆಮಾರೊಂದು ಆ ಸಮುದಾಯದಲ್ಲಿ, ಆ ಸಮಾಜದಲ್ಲಿ ನಿರ್ಮಾಣವಾಗಿರುವುದನ್ನು ಕೂಡ ಕಾಣಬಹುದು. ಆಧುನಿಕ ಶಿಕ್ಷಣ ಪಡೆದು ಶಿವಮೊಗ್ಗದಲ್ಲಿ ವಕೀಲ ವೃತ್ತಿ ಮಾಡುತ್ತಿರುವ ಕೃಷ್ಣಪ್ಪ ಈ ಕಾಲದಲ್ಲಿ ಮುದುಕಿಯರೇ ಕೆಲವರು ಮಡಿಯಾಗೊಲ್ಲ. ಹಾಗಿರುವಾಗ ಎಳೆಯಪ್ರಾಯದ ಹುಡುಗಿಗೆ ಮಡಿ ಮಾಡುವ ಪ್ರಯತ್ನ ಮೂರ್ಖತನದ್ದು ಎಂದು ಬೆಂಬಲಿಸುವುದು ಸಂಪ್ರದಾಯದ ಸಡಿಲತೆಯನ್ನು, ಸಂಪ್ರದಾಯದ ಈ ಅತಿಯೇ ಆಸ್ಫೋಟಕ್ಕೆ ಕಾರಣ ಎಂಬುದನ್ನು ಕಾದಂಬರಿ ಅಭಿವ್ಯಕ್ತಿಸುತ್ತದೆ. ಬದಲಾದ ಪರಿಸರದಲ್ಲಿ ಹೆಣ್ಣಿನ ನೋವು-ನಲಿವುಗಳಿಗೆ, ಬಂಧನ-ಬಿಗಿಗಳಿಗೆ ದನಿಯಾಗುವ ಆಧುನಿಕ ಪ್ರಭಾವಗಳಿಗೆ ಒಳಗಾದ ಪುರುಷ ಜಗತ್ತು ನಿಧಾನವಾಗಿ ಒಪ್ಪಿಕೊಳ್ಳುವ ಬೆಂಬಲಿಸುವ ಔದಾರ್ಯವನ್ನು ತೋರಿಸುತ್ತಿದ್ದರು ಎಂಬುದನ್ನು ಈ ಕಾದಂಬರಿ

ದಾಖಲಿಸುತ್ತದೆ.

ಮಲೆನಾಡ ಪರಿಸರದ ಹೆಣ್ಣಿನ ಬದುಕನ್ನು ಅದರಲ್ಲೂ ವಿಧವಾ ಪದ್ಧತಿಯನ್ನು ಎಂ.ಕೆ.ಇಂದಿರಾ ಅವರು ಚಿತ್ರಿಸುವ ಹಾಗೆ ಅವರ ನಂತರ ಬಂದ 'ವಸುಮತಿ ಉಡುಪ' ಅವರು ಕೂಡ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಅವರ 'ಅನವರತ' ಕಾದಂಬರಿ ವಿಧವೆಯ ಬದುಕಿನ ಇನ್ನೊಂದು ಮಗ್ಗಲನ್ನು ಅನಾವರಣಗೊಳಿಸುತ್ತದೆ. ನಲವತ್ತೈದರ ದೊಡ್ಡಭಟ್ಟ ಹದಿನಾರು ವರ್ಷದ ಗೌರಿಯನ್ನು ಮದುವೆಯಾಗುವುದು ಸಮಾಜದ ಒಪ್ಪಿತ ನೆಲೆಯಲ್ಲಿಯೆ. ಮದುವೆಯಾದ ಮಗನಿದ್ದೂ ಊಟೋಪಚಾರಕ್ಕೆ ಕೊರತೆಯಿಲ್ಲದಿದ್ದರೂ ಕಾಮತೃಷೆಯೇ ಮುಖ್ಯವಾಗುತ್ತದೆ. ಅಲ್ಪ ಕಾಲದಲ್ಲಿಯೇ ವಿಧವೆಯಾದ ಗೌರಿ ಸವತಿಯ ಮಗ ಕೃಷ್ಣಭಟ್ಟನ ಬಲವಂತ ಮತ್ತು ತನ್ನಲ್ಲಿ ಸಹಜವಾಗಿಯೇ ಇರುವ ಕಾಮನೆಗಳಿಂದ ಪ್ರತಿರೋಧ ಒಡ್ಡದೇ ಸಹಕರಿಸುವ ಗೌರಿ-ಕೃಷ್ಣಪ್ಪರ ಸಂಬಂಧ ಅನೈತಿಕವಾದುದು ; ಸಮಾಜಬಾಹಿರವಾದುದು. ಆದರೆ ಗೌರಿಗೆ ಹಾಗೇನೂ ಅನಿಸುವುದಿಲ್ಲ ; ಪಾಪಪ್ರಜ್ಞೆ ಕಾಡುವುದಿಲ್ಲ. ಹಾಗೆಂದು ಗೌರಿಯ ದಾರಿ ಕ್ರಾಂತಿಕಾರಿಯಾದುದಲ್ಲ ; ಬದುಕುವ ಒಳದಾರಿ ಅಷ್ಟೆ. ಸಂಪ್ರದಾಯದ ದೃಷ್ಟಿಯಲ್ಲಿ ಕಳ್ಳಮಾರ್ಗ. ತನ್ನ ಕಾಮನೆಯನ್ನು ನೈತಿಕ ಚೌಕಟ್ಟು ಮೀರಿ ಈಡೇರಿಸಿಕೊಳ್ಳುವ ಆಕೆ, ವಿಧಿಬದ್ಧ ಬದುಕಿನಲ್ಲಿ ಜೀವನ ಸಾಫಲ್ಯಕ್ಕಾಗಿ ಒಳದಾರಿ ಹಿಡಿದಿದ್ದಾಳೆ. ಸಾಮಾಜಿಕ, ನೈತಿಕ ಕಟ್ಟುಪಾಡುಗಳನ್ನು ಮೀರಿ ನಿಲ್ಲುವ ಕಾಮ ಜೀವನ ಕಾದಂಬರಿಯ ಮುಖ್ಯ ಜೀವಾಳವೆನಿಸುತ್ತದೆ. ದೂರದ ಬೆಂಗಳೂರಿನಲ್ಲಿ ನೆಲಸಿರುವ ಸುಬ್ಬಣ್ಣ ತನ್ನ ಮಡದಿಯ ಜೊತೆಗಿನ ಲೈಂಗಿಕ ಕ್ರಿಯೆಯ ತುರಿಯಾವಸ್ಥೆಯಲ್ಲಿ ಗೌರಿ ತನ್ನ ತಂದೆ ಜೊತೆ ಲೈಂಗಿಕ ಸಂಬಂಧ ಹೊಂದಿರುವುದು ಸರಿಯೋ ತಪ್ಪೋ ಎಂಬ ಜಿಜ್ಞಾಸೆಗೆ ಒಳಗಾಗುತ್ತಾನೆ. ಈ ಜಿಜ್ಞಾಸೆಯಲ್ಲಿ ಹೆಣ್ಣು-ಗಂಡಿನ ವಯಸ್ಸಿನ ಅಸಮಾನತೆಯ ತಪ್ಪನ್ನು ಹುಡುಕುತ್ತಾನೆ.

ಸುಬ್ಬಣ್ಣನ ತಂಗಿಯ ನಾದಿನಿ 'ನಳಿನಿ'ಯನ್ನು ಶ್ರೀಮಂತರ ಮನೆಗೆ ನೀಡಿದ್ದೇವೆ ಎಂದು ಪೋಷಕರು ಬೀಗುತ್ತಿದ್ದರು. ನಳಿನಿ ಕೆಲವೇ ದಿನಗಳಲ್ಲಿ ಗಂಡನ ಮನೆಯಿಂದ ಹಿಂತಿರುಗಿದಳು. ಪತಿಯೇ ಬಂದು ಕರೆದರೂ ಹೋಗಲಿಲ್ಲ. ಕೆಲದಿನಗಳಲ್ಲಿ ವಿಧವೆಯಾದರೂ ಆಕೆ ಮಡಿಯಾಗಲಿಲ್ಲ. ಬದಲಿಗೆ ಚಿನ್ನದ ಬಳೆತೊಟ್ಟು, ಬಣ್ಣದ ಸೀರೆ ಉಡುವ ಆಕೆ ತಾನೊಬ್ಬಳು ವಿಧವೆ ಅಂದುಕೊಳ್ಳಲೇ ಇಲ್ಲ. ಸಂಪ್ರದಾಯಕ್ಕೆ ಆಕೆಯ ಪ್ರತಿರೋಧ ಈ ರೀತಿಯದಾಗಿತ್ತು. ಬದುಕಿಗೆ ಸಹಜವಾಗಿರುವ ಕಾಮ, ಹಸಿವು, ನಿದ್ರೆ, ಬಾಯಾರಿಕೆ – ಈ ಜೀವನಕ್ಕೆ ಮುಖ್ಯ ಎಂಬ ನೆಲೆಯಲ್ಲಿ ಯೋಚಿಸುವ ಈಕೆ ಹಣ, ಅಧಿಕಾರ, ಶ್ರೀಮಂತಿಕೆ ಅಸಹಜವಾದವು ಮತ್ತು ಅವೇ ಬದುಕಲ್ಲ ಎಂಬುದನ್ನು ತೋರಿಸಿಕೊಡುತ್ತಾಳೆ.

ಮಲೆನಾಡ ಪರಿಸರದಲ್ಲಿ ಮಹಿಳೆ ಅದರಲ್ಲೂ ವಿಧವೆಗೆ ಸಂಬಂಧಿಸಿದ ಲೈಂಗಿಕ ಶೋಷಣೆ, ಕ್ರೂರವಾದ ಆಚರಣೆ, ವಿಧಿನಿಷೇಧಗಳು ಹಾಗೂ ಅದನ್ನು ಮೀರಿ ನಿಲ್ಲುವ ವಿವಿಧ ಮುಖಗಳನ್ನು ಫಣಿಯಮ್ಮ ಮತ್ತು ಅನವರತ ಕಾದಂಬರಿಗಳು ಅನಾವರಣಗೊಳಿಸುತ್ತವೆ. ವಸುಮತಿ ಉಡುಪ ಅವರ 'ಬಂದನಾಹುಲಿರಾಯನು' ಎಂಬ ಕಥಾಸಂಕಲನದಲ್ಲಿ ಬರುವ 'ಅಂಬೆ' ಕಥೆಯಲ್ಲಿ ವಿಧವೆ ಪುಣ್ಯಮ್ಮ ಆರ್ಥಿಕ ಶೋಷಣೆಗೆ ಒಳಗಾದ ವಿಧವೆ. ಈ ಪುಣ್ಯಮ್ಮ ಒಪ್ಪಿತ ಸಮಾಜದ ಸಾಮಾನ್ಯ ವಿಧವೆಯರಂತಲ್ಲ. ಬಾಲ ವಿಧವೆಯಾದ ಈಕೆಯಲ್ಲಿ ಒಡವೆಗಳಿರುವಾಗ ಆದರಿಸಿದ ಗಂಡನ ಮನೆಯಲ್ಲಿ ಗಾಣದೆತ್ತಿನಂತೆ

ದುಡಿದಳು. ನಿರ್ಗತಿಕಳಾದ ಮೇಲೆ ತವರುಮನೆಯವರೂ ಸ್ವೀಕರಿಸಲಿಲ್ಲ. ಇಂತಹ ಸಂದರ್ಭದಲ್ಲಿ ಆಧುನಿಕತೆಯು ಒದಗಿಸಿದ ಶಿಕ್ಷಣ-ಸೌಲಭ್ಯಗಳ ಮೂಲಕವೇ ತನ್ನ ಬದುಕನ್ನು ಎದುರಿಸುವ ಪ್ರಯತ್ನ ಮೆಚ್ಚತಕ್ಕದ್ದಾಗಿದೆ. ಕೋರ್ಟು ಮೂಲಕ ತನಗೆ ಬರಬೇಕಾದ ಪಾಲುಪಡೆದು ಅನಾಥಾಶ್ರಮಕ್ಕೆ ದೇಣಿಗೆ ಕೊಡುವ ಮೂಲಕ ತನ್ನ ಪ್ರತಿಭಟನೆ ವ್ಯಕ್ತಮಾಡಿದಳು. ತನಗಾದ ಅನ್ಯಾಯವನ್ನು ಪ್ರತಿಭಟಿಸಿ ನಿಲ್ಲುವ ಪುಣ್ಯಮ್ಮ ಬದಲಾದ ಮಲೆನಾಡಿನ ಮಹಿಳೆಯರ ಪ್ರತಿನಿಧಿಯಾಗಿ ಕಂಡು ಬರುತ್ತಾಳೆ.

ಯು.ಆರ್.ಅನಂತಮೂರ್ತಿ ಅವರು ತಮ್ಮ ಕಥಾಸಾಹಿತ್ಯದಲ್ಲಿ ಪುರುಷಪಾತ್ರಗಳಿಗೆ ನೀಡುವ ಪ್ರಾಧಾನ್ಯತೆಯನ್ನು ಸ್ತ್ರೀಪಾತ್ರಗಳಿಗೆ ನೀಡುವುದು ಕಡಿಮೆಯೇ. ವಿಧವೆಯ ಪಾತ್ರಗಳಂತೂ ಫಣಿಯಮ್ಮ, ಅನವರತ ಕಾದಂಬರಿಗಳಲ್ಲಿ ಬರುವ ಹಾಗೆ ತಮ್ಮ ಸ್ಥಿತಿಯನ್ನು ಮೀರುವುದಾಗಲಿ, ಕ್ರಾಂತಿಕಾರಕವಾದ ಹೆಜ್ಜೆಯನ್ನಿಡುವ ರೀತಿಯಲ್ಲಾಗಲಿ ಚಿತ್ರಿತವಾಗುವುದಿಲ್ಲ. ಪಿರಿಪಿರಿಯ, ಅರೆಹುಚ್ಚುತನದ, ಮಾನವದ್ವೇಷಿಯ ಪಾತ್ರಗಳಾಗಿಯೇ ವಿಧವೆ ಪಾತ್ರಗಳು ಹೆಚ್ಚಾಗಿ ಚಿತ್ರಿತವಾಗಿವೆ. 'ಸಂಸ್ಕಾರ' ಕಾದಂಬರಿಯಲ್ಲಿ ಬರುವ ಲಕ್ಷ್ಮಿದೇವಮ್ಮ ಎಂಟರ ವಯಸ್ಸಿನಲ್ಲಿ ಮದುವೆಯಾಗಿ ಹತ್ತು ವರ್ಷವಿರುವಾಗ ಗಂಡನನ್ನು ಕಳೆದುಕೊಂಡ ಬಾಲವಿಧವೆ. ಕುಟುಂಬದವರಿಂದ ಆರ್ಥಿಕ ಶೋಷಣೆಗೆ ಒಳಗಾಗಿ ಅನಾಥಳಂತೆ ಕಾಲಯಾಪನೇ ಮಾಡುತ್ತಾ ವಯಸ್ಸಾದಂತೆ ಮಾನವದ್ವೇಷಿಯಾಗಿ ಅಗ್ರಹಾರದವರ ಕೈಯಲ್ಲಿ ಪಿರಿಪಿರಿ ಮುದುಕಿ, ಅರೆಹುಚ್ಚಿ ಎಂಬ ಹೆಸರಿಗೆ ಪಾತ್ರಳಾದಳು. ತನಗಾದ ಅನ್ಯಾಯದ ವಿರುದ್ಧ ಆಕೆಯ ಪ್ರತಿಭಟನೆ ಮಾನಸಿಕ ಅಸ್ಥವ್ಯಸ್ಥತೆಯ ರೂಪದಲ್ಲಿ ಪ್ರಕಟವಾಗುತ್ತದೆ.

ಭಾರತೀಪುರದಲ್ಲಿ ಬರುವ ಸುಬ್ರಾಯ ಅಡಿಗರ ಬಾಲವಿಧವೆಯಾಗಿದ್ದ ತಂಗಿ ಬಸುರಾದಳು. ಇದಕ್ಕೆ ಕಾರಣರಾದವರನ್ನು ಕೆದಕಲಿಲ್ಲ. ಪೌರೋಹಿತ್ಯದಿಂದಲೇ ಜೀವನ ನಡೆಯಬೇಕಾದ್ದರಿಂದ ಘಟಶ್ರಾದ್ಧವನ್ನೇನೊ ಮಾಡಿದರು. ಆದರೆ ಜಾತಿಯಿಂದ ಹೊರಹಾಕಿದರೂ ; ಮನೆಯಿಂದ ಹೊರ ಹಾಕಲಿಲ್ಲ. ಮನೆಯ ಚಾವಡೆಯಲ್ಲಿ ಅಸ್ಪೃಶ್ಯಳಂತೆ ಬದುಕುತ್ತಾಳೆ, ಇದನ್ನು ಊರು ಒಪ್ಪಿಕೊಂಡಿತು. ಈಕೆಗೆ ಘಟಶ್ರಾದ್ಧದ ಯಮುನಕ್ಕನ ಪಾಡಾಗಲಿಲ್ಲ. ತಮ್ಮ ನೆರೆಯಲ್ಲೆ ಬದುಕುವ ಅವಕಾಶ ನೀಡಿದ್ದು ಈ ಪರಿಸರದಲ್ಲಾದ ಒಂದು ಬದಲಾವಣೆಯ ಹೆಜ್ಜೆ ಎನ್ನಬಹುದು.

ಯು.ಆರ್.ಅನಂತಮೂರ್ತಿ ಅವರು ಮಲೆನಾಡ ಪರಿಸರದಿಂದಲೇ ಬಂದವರು. ಇದೇ ಪರಿಸರದಿಂದ ಬಂದ ಕುವೆಂಪು ಅವರ ಹಾಗೆಯಾಗಲಿ, ಅದೇ ಪರಿಸರದಿಂದ ಬಂದ ಎಂ.ಕೆ.ಇಂದಿರಾ ಅವರ ಹಾಗೆಯಾಗಲಿ ಅನಂತಮೂರ್ತಿ ಅವರು ತಮ್ಮ ಕಥಾಸಾಹಿತ್ಯದಲ್ಲಿ ಸ್ತ್ರೀಪಾತ್ರವನ್ನು ಚಿತ್ರಿಸುವುದಿಲ್ಲ. ಬಹುಶಃ ಡಾ.ಪ್ರಹ್ಲಾದ ಅಗಸನಕಟ್ಟೆ ಅವರು ಹೇಳುವ ಹಾಗೆ –

"ಹೆಣ್ಣನ್ನು ಕಾಮದ ಕೇಂದ್ರದಲ್ಲಿಟ್ಟು ಬದುಕನ್ನು, ಸಮಾಜವನ್ನು ಅದರ ಮೌಲ್ಯಗಳನ್ನು ಶೋಧಿಸುವ ತಂತ್ರವನ್ನು ನವ್ಯರು ಪ್ರಧಾನ ನಿಕಷವನ್ನಾಗಿ ಮಾಡಿಕೊಂಡಿದ್ದಿರಬೇಕು"[೧೦]

ಎಂಬ ಮಾತಿನಂತೆ ನವ್ಯಪಂಥದಲ್ಲಿ ಬಂದ ಅನಂತಮೂರ್ತಿ ಅವರ ಧೋರಣೆ ಕೂಡ ಇದೇ ಎನ್ನಬಹುದು. ಆದರೆ ಈ ಮಾತಿಗೆ ಅಪವಾದವೆಂಬಂತೆ ಅವರ ದಿವ್ಯ ಕಾದಂಬರಿಯಲ್ಲಿ ಬರುವ

'ವಿಧವೆ' ಅಕ್ಕು ಪಾತ್ರವಾಗಲಿ, ಅತಿಮಾನುಷ ನಡವಳಿಕೆಯಂತೆ ತೋರುವ 'ಗೌರಿ' ಪಾತ್ರದಲ್ಲಾಗಲಿ ಹೆಣ್ಣಿಗೆ ಮಹತ್ವದ ಸ್ಥಾನವನ್ನು ಕೊಟ್ಟಿರುವುದನ್ನು ಕಾಣಬಹುದು.

ಅನಂತಮೂರ್ತಿ ಅವರ ದಿವ್ಯ ಕಾದಂಬರಿ ಒಂದು ಬಗೆಯ ವಾಸ್ತವವಾದಿ ನಿಲುವಿನಿಂದ ರಚಿತಗೊಂಡ ಕೃತಿ ಎನ್ನಬಹುದು. ಮಲೆನಾಡ ಪರಿಸರದಲ್ಲಿ ತಮ್ಮ ಸಂಪ್ರದಾಯ ಆಚರಣೆ ವಿಧಿಶಾಸ್ತ್ರಗಳ ಚೌಕಟ್ಟಿನಲ್ಲಿ ಬದುಕುತ್ತಿರುವ, ಜೊತೆ ಜೊತೆಗೆ ಆಧುನಿಕ ಸಂಬಂಧ ಸಂಪರ್ಕಗಳನ್ನು ಪಡೆದುಕೊಂಡು ಬಾಳುವ ಅನೇಕ ಪಾತ್ರಗಳನ್ನು ಇಲ್ಲಿ ಕಾಣಬಹುದು. ಆಂತರ್ಯದಲ್ಲಿ ವೈಚಾರಿಕತೆಯ ನೆಲೆಯನ್ನು ಪಡೆದಿದ್ದು ; ಬಾಹ್ಯದಲ್ಲಿ ಸಾಂಪ್ರದಾಯಿಕ ನೆಲೆಯಲ್ಲಿ ಬದುಕುವಂತಹ ಪಾತ್ರಗಳೆನಿಸುತ್ತಾರೆ. ಇಂತಹ ಸಂದರ್ಭದಲ್ಲಿ ವೈಯಕ್ತಿಕ ನೆಲೆಯಲ್ಲಿ ಸಂಘರ್ಷಕ್ಕೆ ಇಂಬುಕೊಡುವುದನ್ನು ನಾವು ಗುರುತಿಸಬಹುದು. 'ಅಕ್ಕು' ವೈಧವ್ಯದ ಎಲ್ಲ ಬಗೆಯ ಆಚರಣೆಯನ್ನು ಪಾಲಿಸುತ್ತಲೇ ಉದಾರವಾಗಿ ಯೋಚಿಸಬಲ್ಲ ಪುರೋಹಿತನಾದ ತನ್ನ ತಮ್ಮ ಕೇಶವನಿಗೆ ಸವಾಲ್ ಹಾಕುವ ಸಂಭಾಷಣೆಯನ್ನು ಗಮನಿಸಬಹುದು.

"ಗಂಡನ ಜೊತೆ ವೇದಾಂತದ ಚರ್ಚೆ ಮಾಡುವ ಹೆಂಗಸರು ಉಪನಿಷತ್ತುಗಳಲ್ಲಿ ಬರ್ತಾರೆ.

ಆ ಕಾಲಕ್ಕೆ ಅದು ಸರಿಯಾದರೆ ಈ ಕಾಲಕ್ಕೂ ಸರಿಯ? ನನ್ನ ತಲೆ ಯಾಕೆ ಬೋಳಿಸಿ ಕೂರಿಸಿದಿರಿ.

ಬೋಳಿಸಿದ್ದು ನಮ್ಮ ತಪ್ಪು, ಯಾವ ಶಾಸ್ತ್ರದಲ್ಲೂ ತಲೆ ಬೋಳಿಸಬೇಕಂತ ಇಲ್ಲ....

ಹಾಗಾದರೆ ಕೂದಲನ್ನು ಬೆಳಸಿಕೊಂಡು ಬಿಡ್ತೀನೊ ತಮ್ಮಯ್ಯ

ಯಾರು ಬೇಡಾಂದರೆ ಅಕ್ಕಯ್ಯ

ಆಗ ನಿನ್ನ ಹೊಟ್ಟೆ ಪಾಡು? ಯಾರು ಇಲ್ಲಿಗೆ ನಿಮಿತ್ತ ಕೇಳಲಿಕ್ಕೆ ಬರ್ತಾರೊ ತಮ್ಮಯ್ಯ"[೧೧]

ವೈಧವ್ಯದ ವಿಧಿ ನಿಷೇಧಗಳನ್ನು ಪಾಲಿಸುತ್ತಲೇ ಸ್ತ್ರೀ ಕೇಳುವ ತಾತ್ವಿಕ ಪ್ರಶ್ನೆಗಳಿವು. ಶಾಸ್ತ್ರ, ಸಂಪ್ರದಾಯಗಳ ಚೌಕಟ್ಟನ್ನು ಮೀರುವ ತುಡಿತ ಹೊಂದಿರುವ ಈ ಮಾತುಗಳು ಸ್ತ್ರೀ ಸಮುದಾಯದ ಬದುಕಿನಲ್ಲಿ ಆಗುತ್ತಿರುವ ಸ್ಥಿತ್ಯಂತರಗಳ ಹಿನ್ನಲೆಯಲ್ಲಿ ಬಹಳ ಮುಖ್ಯವೆನಿಸುತ್ತದೆ.

ಈ ಕಾದಂಬರಿಯಲ್ಲಿ ಬರುವ ಕಟ್ಟಾ ಸಂಪ್ರದಾಯವಾದಿ ಮತ್ತು ಧೂರ್ತತನದ ಪ್ರತಿನಿಧಿಯಾದ ಗಣಪಯ್ಯನೆಂಬುವವನ ಮಗಳು ಬಾಲವಿಧವೆಯಾದ ಸರಸ್ವತಿಗೆ ಕೇಶಮುಂಡನವಾಗದಿರುವುದು. ಶಾಲೆಗೆ ಸೇರಿದ್ದು ಸುಧಾರಣೆಯ ಹೆಜ್ಜೆಗಳಾಗಿದ್ದವು. ಬಯಲುಸೀಮೆಯಿಂದ ಬಂದ ಹರಿಜನ ಸಮಾಜಕ್ಕೆ ಸೇರಿದ ಟೀಚರ್ ದುರಗಪ್ಪನನ್ನು ಪ್ರೀತಿಸಿದಳು. ಪ್ರೀತಿ ಪ್ರಣಯಕ್ಕೆ ತಿರುಗಿತು. "ನಾಡಿನಲ್ಲಿ ವಂಚಿತಳಾದ ಸರಸ್ವತಿ ಕಾಡಿನ ಒಳದಾರಿಗಳಲ್ಲಿ ಸಫಲತೆ ಕಂಡುಕೊಂಡಳು".[೧೨] ಈ ರೀತಿ ಸಫಲತೆಯನ್ನು ಇದೇ ಕಾದಂಬರಿಯ ವಿಮಲೆ, ಪ್ರಕೃತಿ ಸಣ್ಣಕತೆಯಲ್ಲಿ ಬರುವ ಬಾಲವಿಧವೆ ಲಕ್ಷ್ಮೀ, ಭಾರತೀಪುರದ ಸುಬ್ರಾಯ ಅಡಿಗರ ತಂಗಿ ಮೊದಲಾದ ಪಾತ್ರಗಳಲ್ಲಿ ಕಾಣಬಹುದು. ಮೇಲ್ನೋಟಕ್ಕೆ ಸಂಪ್ರದಾಯಕ್ಕೆ ಬದ್ಧವಾದಂತೆ ಕಂಡರೂ ಆಂತರ್ಯದಲ್ಲಿ ವಿದ್ರೋಹಾತ್ಮಕವಾದ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ಗಮನಿಸಬಹುದು.

ದಿವ್ಯ ಕಾದಂಬರಿಯ ಬಾಲವಿಧವೆ ಸರಸ್ವತಿ ಜಾತ್ಯತೀತ ನೆಲೆಯಲ್ಲಿ ಕ್ರಾಂತಿಕಾರಕ ಹೆಜ್ಜೆಯನ್ನು ಇಡುತ್ತಾಳೆ. ತನ್ನೂರಿಗೆ ಕರೆದೊಯ್ಯುವ ಸಂದರ್ಭದಲ್ಲಿ ಗಣಪಯ್ಯನಿಂದ 'ದುರುಗಪ್ಪ ಕೊಲೆಯಾದರೂ, ಅವನಿಂದ ತನ್ನ ಗರ್ಭದಲ್ಲಿ ಬೆಳೆಯುತ್ತಿರುವ ಕುಡಿಯನ್ನು ರಕ್ಷಿಸಲು ಕಂಕಣಬದ್ಧಳಾದಳು. ಮಗಳ ಮೇಲಿನ ಹಲ್ಲೆಯನ್ನು ಪ್ರತಿಭಟಿಸಿ ತಾನು ವಿಧವೆಯಾದರೂ ಚಿಂತೆಯಿಲ್ಲವೆಂದು ಯಮುನಮ್ಮ ಕತ್ತಿ ಹಿಡಿದು ಮುನ್ನುಗ್ಗುವುದು ಸಾಮಾನ್ಯ ಸಂಗತಿಯಲ್ಲ. ಮಗಳ ಬಾಣಂತನ ತಾನೇ ಮಾಡುವೆನೆಂದು ಸವಾಲ್ ಹಾಕಿ ತೌರಿಗೆ ಕರೆದೊಯ್ಯುವುದು ಸ್ತ್ರೀ ಶೋಷಣೆಯ ವಿರುದ್ಧದ ಉಗ್ರಪ್ರತಿಭಟನೆಯೇ ಆಗಿದೆ. ೨೦ನೇ ಶತಮಾನದ ಆರಂಭ ಘಟ್ಟದಲ್ಲಿ ವಿಧವೆಯಾದವಳಿಗೆ ತಾಯಿಯೂ ಸೇರಿದಂತೆ ಮಡಿ ಹಿಡಿಸುತ್ತಿದ್ದರು. ಸ್ವಾತಂತ್ರ್ಯನಂತರ ಕಾಲದಲ್ಲಿ ಸಾಕಷ್ಟು ಪಲ್ಲಟಗಳಾಗುತ್ತಾ ಬಂದಿವೆ. ವಿಧವೆಯಾದ ಮಗಳ ಪುನರ್ ವಿವಾಹಕ್ಕೆ, ಸಾಂಸಾರಿಕ ಜೀವನಕ್ಕೆ ತಾಯಿಯಾದವಳು ಸಂಪ್ರದಾಯದ ಚೌಕಟ್ಟನ್ನು ಮೀರಿ ಆಸರೆಯಾಗುವುದು ಬಹಳ ಮುಖ್ಯವಾದ ಸಾಂಸ್ಕೃತಿಕ ಸ್ಥಿತ್ಯಂತರವಾಗಿದೆ. ವಿಧವೆ ಚಿತ್ರಣದ ದೃಷ್ಟಿಯಿಂದ ನೋಡಿದಾಗ ಅವರ ಆರಂಭಿಕ ಕಥಾಸಾಹಿತ್ಯ ಮತ್ತು ನಂತರದ ಕಥಾಸಾಹಿತ್ಯದ ಚಿತ್ರಣಕ್ಕೆ ಕಾಲದ ಒತ್ತಡವೇ ಪ್ರಧಾನವಾಗಿ ಕಾಣುತ್ತದೆ.

ಎಂ.ಕೆ.ಇಂದಿರಾ ಅವರು 'ಫಣಿಯಮ್ಮ' ಕಾದಂಬರಿಯಲ್ಲಿ ವಿಧವೆಯೊಬ್ಬ ಸಾಂಪ್ರದಾಯಿಕ ಬದುಕು ವೈಚಾರಿಕ ಚಿಂತನೆಯಲ್ಲಿ ಬದುಕುವ ಚಿತ್ರಣವನ್ನು ಒಳಗೊಂಡಿದ್ದರೆ, ಅವರ 'ತಗ್ಗಿನಮನೆ' ಸೀತೆ ಕಾದಂಬರಿಯಲ್ಲಿ 'ಸೀತೆ' ಎಂಬ ಹೆಣ್ಣೊಂದು ಸಾಂಪ್ರದಾಯಿಕ ವಾತಾವರಣದಲ್ಲಿನ ಅಸೂಯೆ, ಕಿರಿಕುಳಗಳ, ದರ್ಪ ದಬ್ಬಾಳಿಕೆಯ ನಡುವೆ ನಲುಗಿ ಹೋಗದೆ ಅದನ್ನು ವಿಶಿಷ್ಟವಾಗಿ ಎದುರಿಸುತ್ತ, ತೀರಾ ಸಂಘರ್ಷಕ್ಕೆ ಅವಕಾಶ ನೀಡದೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡು, ತನ್ನತನ ಉಳಿಸಿಕೊಂಡು ಮಾದರಿಯಂತೆ ಬಾಳಿದ ಕಥೆಯನ್ನು ಒಳಗೊಂಡಿದೆ. ಸೀತೆಯ ಸೌಂದರ್ಯ ತನ್ನ ಮಕ್ಕಳಿಗಿಲ್ಲವೆಂಬ ಅಸೂಯೆಯಿಂದಲೂ, ಮದುವೆ ಮಾಡಬೇಕಾದ ನಷ್ಟದ ಚಿಂತೆಯಿಂದಲೂ, ಸವತಿ ಮಗಳೆಂಬ ಅಸಡ್ಡೆಯಿಂದಲೂ ನೆಪ ಸಿಕ್ಕಾಗಲೆಲ್ಲ ಕಿರುಕುಳ ನೀಡುವ ಮೋಟಮ್ಮನ ಮಾತಿಗೆ ಸರಿಯಾದ ಉತ್ತರ ನೀಡಿ, ನಂತರ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ನಿಶ್ಚಿಂತಳಾಗಿರುತ್ತಿದ್ದಳು ಸೀತೆ. ಮಲೆನಾಡ ಸಂಪ್ರದಾಯದಂತೆ ಹೆಣ್ಣನ್ನು ಏನೂ ಕೇಳದೆ ಗಂಡನ್ನು ಹಿರಿಯರು ಗೊತ್ತು ಮಾಡಿದ್ದರು. ಗಂಡಿನ ಮುಖ ನೋಡದೆ ಮದುಮಗಳಾಗಿ ಸೀತೆ ಹಸೆಮಣೆಯಲ್ಲಿ ಕುಳಿತಿದ್ದಳು. ಸಹಜವಾಗಿ ನಿರೀಕ್ಷಿಸುವ ನಾಚಿಕೆ ಸೀತೆಯಲ್ಲಿ ವ್ಯಕ್ತವಾಗಲಿಲ್ಲ ; ಸೀತೆಯ ಸ್ವಭಾವಕ್ಕೆ ಅದು ಬರಲೂ ಇಲ್ಲ. ಮದುವೆ ಶಾಸ್ತ್ರಗಳೆಲ್ಲ ಹಾಸ್ಯವಾಗಿ, ಕುಚೋದ್ಯವಾಗಿ ಇದ್ದರೂ ಸೀತೆಗೆ ಅದು ಬರೀ ಸಂಪ್ರದಾಯವೆನಿಸಿತೇ ಹೊರತು ನಾಚಿಕೆಯಾಗಲಿ, ನಗುವಾಗಲಿ ಆಕೆಯಲ್ಲಿ ಮೂಡಲಿಲ್ಲ. ತನ್ನ ಗಂಡ ಎತ್ತರವಾಗಿದ್ದಾನೆ, ಬೆಳ್ಳಗಿದ್ದಾನೆ ಎಂಬುದನ್ನಷ್ಟೇ ಗ್ರಹಿಸಿದಳು. ಚಿಕ್ಕಮ್ಮನ ಬಂಧನದ ನಡುವೆಯೂ ಸ್ವತಂತ್ರವಾದ ಹಕ್ಕಿಯಂತೆ ಬಾಲ ಸಹಜವಾದ ಎಲ್ಲ ಚಟುವಟಿಕೆಯಿಂದ ಓಡಾಡಿಕೊಂಡಿದ್ದ ಸೀತೆಗೆ ಮಾಂಗಲ್ಯ ಬಂಧನಕ್ಕೆ ಒಳಗಾದ ಮೇಲೆ ನಿಧಾನವಾಗಿ ಗರತೀತನ 'ಮೈಗೂಡಿತು. ಋತುಮತಿಯಾಗಿ ಅತ್ತೆ ಮನೆಗೆ ಹೋಗುವಾಗ ಸಂಭ್ರಮವಾಗಲಿ, ಕುತೂಹಲವಾಗಲಿ ಆಕೆಯಲ್ಲಿ ಮೂಡುವುದಿಲ್ಲ. ಹಾಗೆ ತಾಯಿಯ ಅಧೀನಲ್ಲಿರುವ ಗಂಡನ ಮೇಲೆ ಒಳ್ಳೆಯ ಭಾವನೆಯಾಗಲಿ, ಗೌರವವಾಗಲಿ ಮೂಡುವುದಿಲ್ಲ. ಅಂದರೆ ಪ್ರೀತಿ ಪ್ರೇಮದಿಂದ ಸಹಜವಾಗಿ

ನಡೆದುಕೊಳ್ಳಲು ಸಾಧ್ಯವಾಗದ ಪರಿಸರದಲ್ಲಿ ಎಲ್ಲ ಮನೆಯ ಸೊಸೆಯರಂತೆ ಅತ್ತೆ ಹೇಳಿದಂತೆ ಕೇಳಬೇಕು, ಗಂಡನ ಮನೆಯಲ್ಲಿ ಮರ್ಯಾದೆಯಾಗಿ ಬಾಳಬೇಕು ಎಂಬ ನಿಯಮಕ್ಕೆ ಬದ್ಧಳಾಗಿದ್ದಳಷ್ಟೆ ಆ ಬಗ್ಗೆ ಭಯ, ಆತಂಕಗಳನ್ನು ಹೊಂದಿದವಳೇನಲ್ಲ. ಆಕೆಯ ಹಿರಿಯ ಓರಗಿತ್ತಿಯರು ಅತ್ತೆಯ ಕೈಯಲ್ಲಿ ಸಿಲುಕಿ ಒದ್ದಾಡುವ ಸರದಿ ಇನ್ನು ಮುಂದೆ ನಿನ್ನದೆಂದು ಹೇಳಿದಾಗ 'ನಿಮಗೆಲ್ಲಾ ಆದ್ದೇ ನಂಗೂ ಸೈಯಲ' ಎಂದು ನಗುತ್ತಾ ನಿರ್ಲಿಪ್ತವಾಗಿ ಉತ್ತರ ನೀಡುವ ಸೀತೆಯ ಮಾತು ಸಾಮಾನ್ಯ ಹೆಣ್ಣಿನಂತಲ್ಲದ ನಡವಳಿಕೆಯಾಗಿದೆ. ಚಿಕ್ಕಮ್ಮನ ಯಜಮಾನಿಕೆ, ಅಸೂಯೆ, ಕುತಂತ್ರಗಳ ನಡುವೆ ಬದುಕಿ ಬಂದ ಸೀತೆಗೆ ಅತ್ತೆ ರಾಮಕ್ಕನ ಯಜಮಾನಿಕೆಯನ್ನು ಸುಲಭವಾಗಿ ಎದುರಿಸುತ್ತಾಳೆ ರಾಮಕ್ಕ, ಕುಟುಂಬದ ಸದಸ್ಯರೆಲ್ಲ ನಾನು ಹೇಳಿದ ಹಾಗೆಯೇ ನಡೆಯಬೇಕು ಎಂದು ಯಜಮಾನಿಕೆಯ ನಡವಳಿಕೆಯಲ್ಲಿ ಬಾಯಿ ಜೋರಾಗಿತ್ತೇ ಹೊರತು ; ಹೃದಯ ಸಂಕುಚಿದ್ದಾಗಿರಲಿಲ್ಲ. ಆದಕಾರಣ ಸೀತೆ ರಾಮಕ್ಕನ ಸ್ವಭಾವವನ್ನು ಅರಿತುಕೊಂಡು ವಿರೋಧಕಟ್ಟಿಕೊಳ್ಳದೆ ಅತ್ತೆಯ ಮನೆಯನ್ನು ತನಗೆ ಆಪ್ಯಾಯಮಾನವಾಗುವಂತೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡವಳು. ಹೆಣ್ಣುಮಕ್ಕಳು ತವರಿನಿಂದ ಹೋಗುವಾಗ ದುಃಖಿಸುತ್ತಾ ಹೋಗುವುದು ಸಾಮಾನ್ಯ ಸಂಗತಿ. ಆದರೆ ಸೀತೆಗೆ ತವರಿನ ನಿಸರ್ಗ ಮನ ಸೆಳೆಯುತ್ತಿತ್ತೇ ಹೊರತು ತವರು ಮನೆಯಲ್ಲ. ಮಾತೃ ವಾತ್ಸಾಲ್ಯದಲ್ಲಿ ಅರಳದ ತವರು ಮನೆ ಸೆಳೆಯಲಿಲ್ಲ. ನಿರೂಪಕಿ ಹೇಳುವ ಹಾಗೆ "ಅವಳು ವಾಸ್ತವ ವಾದಿ, ದಿಟ್ಟೆ, ಧೀಮಂತೆ, ಯಾವುದೇ ನಾಟಕೀಯತೆ ಅವಳಿಗೆ ಬೇಕಿಲ್ಲ. ತಗ್ಗಿನ ಮನೆಯಂತ ಕೂಪದಿಂದ ಬಾಲ್ಯದ ಬಾಲಿಶ ಭಾವನೆಗಳಿಂದ ತಾರುಣ್ಯದ ಜಗತ್ತಿಗೆ ; ಆಗಿನ ಕಾಲದಲ್ಲಿ ನಾಗರಿಕ ಎನಿಸಿಕೊಂಡಿಂತೆ ತೀರ್ಥಹಳ್ಳಿ-ಕುರುವಳ್ಳಿಯ ನಿಸರ್ಗರಮ್ಯ ಮುಕ್ತವಾತಾವರಣಕ್ಕೆ ಬಂದಾಗ ಸೀತೆಯ ದೇಹ, ಮನಸ್ಸು, ವಯಸ್ಸುಗಳು ವಿಕಾಸಹೊಂದಿ ಅವಳು ತನ್ನಂತೇ ಪರಿವರ್ತನೆಗೊಂಡಳು".[೧೩]

ತುಂಗಾನದಿಯಲ್ಲಿ ಪಾತ್ರೆ ತೊಳೆಯಲು ಹೋದಾಗ ಅಲ್ಲಿ ನೆರೆದಿದ್ದ ಪುಂಡು ಹುಡುಗರ ಕುಚೋದ್ಯದ ಮಾತುಗಳಿಗೆ ಹೆದರಲಿಲ್ಲ. ಗೆಳತಿಯ ಕೊಡಪಾನ ತೇಲಿ ಹೋದಾಗ ತಾನು ಅಬಲೆಯೆಂದಾಗಲಿ, ರಾಮಕ್ಕನ ಸೊಸೆಯೆಂಬುದನ್ನಾಗಲಿ ಯೋಚಿಸದೆ ನೀರಿಗೆ ಹಾರಿ ಕೊಡ ತಂದಳು. ಈ ದಿಟ್ಟತನವನ್ನು ಪ್ರಶಂಸಿಸುವ ಬದಲಿಗೆ ಅತ್ತೆ-ಗಂಡನಿಂದ ಹಲ್ಲೆಗೊಳಗಾದಳು. ಆದರೆ ಇದಕ್ಕೆ ನೋಯದೆ ತನ್ನ ಸಾಹಸಕ್ಕೆ ತಾನೇ ಅಭಿಮಾನ ಹೊಂದಿದ್ದಳು. ದುಃಖ ವ್ಯಕ್ತಪಡಿಸದ ಬೇಸರಿಸದ ಆಕೆಯ ನಡವಳಿಕೆ ಇತರರಿಗೆ ಬೆರಗು ತರುತ್ತದೆ. ತನ್ನನ್ನು ಬಯಸಿ ಬಂದ 'ಅಪ್ಪು' ಎಂಬ ಪುಂಡನಿಗೆ ಪೊರಕೆಯಿಂದ ಯಾರ ಕಲಿಸದ ಬುದ್ಧಿಕಲಿಸಿರುವುದು, ತುಂಗಾನದಿಯ ತುಂಬ ಪ್ರವಾಹದಲ್ಲಿ ದೋಣಿಗನ ಮಾತು ಲೆಕ್ಕಿಸದೆ ಹರಿಗೋಲು ತೆಗೆದುಕೊಂಡು ಹೋಗಿ ಅನ್ನಪೂರ್ಣೆಯ ಗಂಡನನ್ನು ವೇಶ್ಯೆಯ ಮನೆಯಿಂದ ಕರೆತಂದು ಸಾಯುವ ಕಾಲದಲ್ಲಿ ದರ್ಶನಮಾಡಿಸಿರುವುದು ಎಂತಹ ಸಂದರ್ಭದಲ್ಲೂ ಆಕೆಯ ದಿಟ್ಟ ನಿಲುವು, ಸಾಹಸವನ್ನು ಅಭಿವ್ಯಕ್ತಿಸುತ್ತದೆ. ಆಕೆ ಶಾಲೆಯಲ್ಲಿ ಓದಿದವಳು ಅಲ್ಲ ; ಪಂಡಿತೆಯೂ ಅಲ್ಲ. ಹಾಗೆ ಒಳ್ಳೆಯ ಪರಿಸರದಲ್ಲಿ ಹುಟ್ಟಿದವಳಲ್ಲ ; ಹೊಕ್ಕವಳೂ ಅಲ್ಲ. ಆದರೆ ಹೆಣ್ಣಿನ ಅಬಲತೆಯನ್ನು ಅಧೀನತೆಯನ್ನು ಮೀರುವ, ಸುಂದರ ಬದುಕನ್ನು ರೂಪಿಸಿಕೊಳ್ಳುವ ಹಿನ್ನಲೆಯಲ್ಲಿ ನಿರಂತರವಾಗಿ ಹೋರಾಡಿದವಳು. ಸೀತೆಯ ಸುತ್ತಲಿನ ಜಗತ್ತು ಅವಳಿಗೆ ಸ್ಪಂದಿಸದಿದ್ದರೂ ಆ ಜಗತ್ತಿಗೆ ತಾನು ಸ್ಪಂದಿಸುವುದು ಆಕೆಯ

ವೈಶಿಷ್ಟ್ಯತೆ.

ಎಂ.ಕೆ.ಇಂದಿರಾ ಅವರ ಚೊಚ್ಚಲ ಕಾದಂಬರಿಯಾದ ತುಂಗ-ಭದ್ರದಲ್ಲಿ ೨೦ನೇ ಶತಮಾನದ ಆದಿಯಲ್ಲಿ ಮಲೆನಾಡ ಪರಿಸರದ ತೀರ್ಥಹಳ್ಳಿಯಲ್ಲಿ ನೆಲೆಸಿದ್ದ ಮೂರು ಬ್ರಾಹ್ಮಣ ಕುಟುಂಬಗಳ ಬದುಕಿನ ಏರಿಳಿತಗಳ ಸರಳವಾದ ನಿರೂಪಣೆಯೇ ಇದರ ಕಥಾವಸ್ತು. ತುಂಗ-ಭದ್ರಾ ಎಂಬ ಹೆಸರು ಹೊತ್ತಿದ್ದರೂ ಹುಟ್ಟು ಕುರುಡಿಯರಾದ ತುಂಗ-ಭದ್ರೆಯರು ಹೆಚ್ಚಿನ ಪ್ರಾಮುಖ್ಯತೆಯನ್ನು ಇಲ್ಲಿ ಪಡೆಯುವುದಿಲ್ಲ. ಈ ಕಾದಂಬರಿಯ ಕೇಂದ್ರ ಪಾತ್ರ ಮುದ್ದುರಾಮ.

"ಮಲೆನಾಡ ಬದುಕಿನ ಸತ್ವವನ್ನು ಕುರಿತು ಹೇಳುವುದು ಈ ಕೃತಿಯ ಮುಖ್ಯ ಆಶಯವಾಗಿದೆ. ಸತ್ವಯುತ ಬದುಕೆಂದರೆ ವಿವಾಹ ಸಂಸ್ಕಾರದಿಂದ ಪರಿಪೂರ್ಣತೆಗೇರುವ ವಿವೇಕಯುತ ಬದುಕು ಎಂಬುದು ಈ ಕೃತಿಯಲ್ಲಿ ಸಿದ್ಧವಾಗುವ ವಿಚಾರ"[೧೪]

ಈ ಮಾತನ್ನು ವಿಸ್ತರಿಸುವುದಾದರೆ, ಪಿತೃಪ್ರಧಾನ ಕುಟುಂಬದ ವ್ಯವಸ್ಥೆಯಲ್ಲಿ ಹೆಣ್ಣಾದವಳು ಯಾರಾದರೊಬ್ಬ ಪುರುಷನ ಆಶ್ರಯವನ್ನು ಪಡೆಯಲೇಬೇಕು ಆ ಬದುಕು ಸಾರ್ಥಕ ಎಂಬ ಮೌಲ್ಯ ಸ್ಥಿರವಾಗಿರುತ್ತದೆ. ಆ ಪರಿಸರವೂ ಋತುಮತಿಯಾಗುವ ಮೊದಲೇ ವಿವಾಹವಾಗಬೇಕು ಇಲ್ಲದಿದ್ದರೆ ಶೃಂಗೇರಿ ಮಠದ ಬಹಿಷ್ಕಾರದ ಭಯ ಆ ಕುಟುಂಬಗಳಿಗೆ. ಈ ಕೊರಗು ಶ್ರೀಮಂತಳು, ಸುಂದರಿಯೂ ಆದ ಕೃಷ್ಣವೇಣಿಗೆ ಕಾಡಲಿಲ್ಲ. ಆಕೆ ಮುದ್ದರಾಮನಿಗೆಂದೇ ನಿಶ್ಚಿತಳಾದವಳು. ಆದರೆ ಮಂದಾಕಿನಿಯ ಸ್ಥಿತಿ ಬೇರೆಯೇ ಆಗಿದೆ. ಕೃಷ್ಣವೇಣಿಯಂತೆ ಆಕೆ ಸುಂದರಳಾದರೂ ಆಕೆಯ ಅಕ್ಕಂದಿರಾದ ತುಂಗ-ಭದ್ರೆ, ಹುಟ್ಟು ಕುರುಡಿಯರು. ಇವರ ಮದುವೆಯಾಗದೆ ಅವಳ ಮದುವೆಯಾಗುವುದು ವಿವೇಕಯುತವಲ್ಲ ಎಂಬ ಭಾವನೆ ಆ ಪರಿಸರದಲ್ಲಿ ಮನೆಮಾಡಿದೆ. ಸಾಯುವ ಸಂದರ್ಭದಲ್ಲಿ ಕೃಷ್ಣವೇಣಿ, ಮುದ್ದುರಾಮನಲ್ಲಿ ಮಂದಾ ಮತ್ತು ಆಕೆಯ ಅಕ್ಕಂದಿರನ್ನು ಕೈ ಹಿಡಿಯಬೇಕೆಂದು ಭಾಷೆ ತೆಗೆದುಕೊಳ್ಳುತ್ತಾಳೆ. ಅದೇ ರೀತಿ ಮಂದಾ ಕೂಡ ಪರಿಹಾರ ಕಾಣದ ತನ್ನ ಕುರುಡು ಅಕ್ಕಂದಿರನ್ನು ತನ್ನ ಕೈ ಹಿಡಿವಾತ ಧಾರೆ ಎರಸಿಕೊಳ್ಳಬೇಕೆಂದು ಬಯಸುತ್ತಾಳೆ. ಬದುಕಿನ ಹೊಣೆಯನ್ನರಿತ ಮುದ್ದುರಾಮ ಆ ಮೂರು ಜನರನ್ನು ಮದುವೆಯಾಗುವುದರ ಮೂಲಕ ದೊಡ್ಡ ಸಮಸ್ಯೆ ಸರಳವಾಗಿ ಪರಿಹಾರವಾಗುತ್ತದೆ. ಇಂದಿರಾ ಅರವತ್ತರ ದಶಕದಲ್ಲಿ ನಿಂತು ಹಳೆಯ ಕಾಲದ ಬದುಕಿನ ಮೌಲ್ಯಗಳಲ್ಲಿ ಇರಬಹುದಾದ ಮಾನವೀಯತೆಯ ಅನುಕಂಪವನ್ನು ಗುರುತಿಸಲು ಪ್ರಯತ್ನಿಸುತ್ತಾರೆ.

"ವೈವಾಹಿಕ ಬದುಕೇ ಹೆಣ್ಣಿನ ಅಸ್ತಿತ್ವದ ಸಾರ್ಥಕ ಸ್ಥಿತಿ ಎಂದು ನಂಬಿರುವ ಸಮಾಜದಲ್ಲಿ ಇಂದಿರಾ ಅವರಂಥ ಲೇಖಕಿಯರು ಈ ಗುರಿಗೆ ಭಂಗ ಬರುವುದನ್ನು ದುರಂತವಾಗಿ ಚಿತ್ರಿಸುತ್ತಾರೆ. ಹಾಗೆಯೇ ಆ ದುರಂತವು ವಿವಾಹದ ಮೂಲಕ ಸರಿ ಹೋಗುತ್ತದೆ"[೧೫]

ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು ಯೋಚಿಸಿದರೆ ಬಹುತೇಕ ಸತ್ಯವಿದೆ. ತುಂಗ-ಭದ್ರೆಯರ ಒಳತೋಟಿಗಳಾಗಲಿ, ಮಂದಾಳ ವೈಯಕ್ತಿಕ ತಾಕಲಾಟಗಳಾಗಲಿ ಇಲ್ಲಿ ಚಿತ್ರಿತವಾಗುವುದಿಲ್ಲ. ಅಂದರೆ ಒಂದು ಗಂಭೀರವಾದ ಮಾನಸಿಕ ಸಂಘರ್ಷದ ಸಂಗತಿಗಳಾಗಿ ಪಾತ್ರಗಳ ಹೋರಾಟ ನಡೆಯದೆ ಸರಳವಾದ ನೇರವಾದ ಸುಖಾಂತವನ್ನು ತಲಪುತ್ತದೆ. ತುಂಗ-ಭದ್ರೆಯರ ಸಮಸ್ಯೆ ಇಲ್ಲಿ

ವಿಷಮವಾದ ಸಾಮಾಜಿಕ ಸಮಸ್ಯೆಯಾಗಿ ಉಳಿದಿಲ್ಲ. ಕಾರಣವೆಂದರೆ ಈ ವ್ಯಕ್ತಿಗಳು ಸಿಕ್ಕ ಬಾಳ್ವೆಯನ್ನು ಸಂತೋಷದಿಂದ ಸ್ವೀಕರಿಸುವಂತವರು. ಆದ್ದರಿಂದ ಇಂದಿರಾ ಅವರ ಕೃತಿಗಳಲ್ಲಿ ನಾವು ಪ್ರಧಾನವಾಗಿ ಕಾಣುವುದು ಹೆಣ್ಣಿನ ತ್ಯಾಗ, ಸಹನೆ ಮತ್ತು ಔದಾರ್ಯಗಳನ್ನು ಚಿತ್ರಿಸುತ್ತಾ ಪರಂಪರೆಯ ಚೌಕಟ್ಟನ್ನು ಮೀರುವ ಬಯಕೆಯಿದ್ದರೂ ಮೀರಲಾರದೆ ಸುಧಾರಿಸಿಕೊಂಡು ಹೋಗುವ, ತೀವ್ರವಾದ ಸಂಘರ್ಷವಿಲ್ಲದೆ ಹೊಂದಾಣಿಕೆಯ ಸೂತ್ರ ಅನುಸರಿಸಿರುವುದನ್ನು ಕಾಣಬಹುದು. ಇದು ಅವರ ಕಲಾತ್ಮಕನಿರ್ವಹಣೆಯ ಮಿತಿ ಕೂಡ ಹೌದು.

"ಇಂದಿರಾ ಅವರ ಕೃತಿಗಳಲ್ಲಿ ಹೆಣ್ಣಿನ ತ್ಯಾಗ, ಔದಾರ್ಯಗಳ ವಿಜೃಂಭಣೆಯಿದೆ. ಪ್ರಧಾನ ಸಂಸ್ಕೃತಿ ಮಹಿಳೆಯರಿಂದ ಬಹಳ ಮುಖ್ಯವಾಗಿ ನಿರೀಕ್ಷಿಸುವ ಗುಣಗಳನ್ನು ಕೆಲವೊಮ್ಮೆ ಇಂದಿರಾ ಎತ್ತಿಹಿಡಿಯುತ್ತಾರೆ. ಇದು ಆಶ್ಚರ್ಯವಾದರೂ ವಾಸ್ತವದ ಸಂಗತಿಯಾಗಿದೆ. ಅವರ ಕಥೆ ಕಾದಂಬರಿಗಳಲ್ಲಿ ನವೋದಯದ ಆದರ್ಶವಾದ ಅದರ ಮೇಲೆ ತೆಳುವಾದ ವಾಸ್ತವವಾದದ ಪರದೆಯಿದೆ. ಇಂದಿರಾ ಅವರ ಕೃತಿಗಳು ಸಾಂಪ್ರದಾಯಿಕ ಇಬ್ಬಗೆಯ ಮೌಲ್ಯಗಳನ್ನು ಪ್ರಶ್ನಿಸಿ, ಮೀರುವ ಚಿಹ್ನೆಗಳನ್ನು ತೋರಿದರೂ ಪುರುಷ ನಿರ್ಮಿತ ಮೌಲ್ಯ ಪ್ರಪಂಚದಾಚೆ ಹೊರಬರುವುದಿಲ್ಲ. ಆದರೆ ಆ ಶೋಷಣ ಚಕ್ರದಿಂದ ಹೊರಬರಬೇಕೆನ್ನುವ ಬಯಕೆಯಿದ್ದರೂ, ಅದರ ರಹದಾರಿಗಳನ್ನು ಕಾಣದೆ ಒದ್ದಾಡುತ್ತಾರೆ"[೧೬]

ಎಂಬ ಮಾತನ್ನು ಫಣಿಯಮ್ಮ, ತಗ್ಗಿನಮನೆ ಸೀತೆ, ಸದಾನಂದ ಈ ಮುಂತಾದ ಕಾದಂಬರಿಗಳಿಗೂ ಅನ್ವಯಿಸಿ ನೋಡಬಹುದು. ಸದಾನಂದದ ಕಮಲೆ ವೈಧವ್ಯಕ್ಕೆ ಸಂಬಂಧಿಸಿದಂತೆ ಸಮಾಜ ಹೇರುವ ನಿರ್ಬಂಧಗಳನ್ನು ಒಪ್ಪಿ, ತಂದೆ ತಾಯಿಯರ ಸೇವೆಯಲ್ಲಿ, ಕತೆ ಪುಸ್ತಕಗಳ ಓದಿನಲ್ಲಿ ತನ್ನನ್ನು ತಾನು ಮರೆಯಲು ಪ್ರಯತ್ನಿಸುತ್ತಾಳೆ. ಆಧುನಿಕ ವಿಚಾರಪರನಾದ ಸದಾನಂದ ತಾನು ಕಣ್ಣಿಂದ ನೋಡಿರದ ಕಮಲೆಯನ್ನು ರಾಜುವಿನ ಸಲಹೆಯಂತೆ ಉದ್ಧಾರದ ಮನೋಭಾವದಲ್ಲಿ ಮದುವೆಯಾಗುತ್ತಾನೆ. ಅಂಗವಿಕಲೆಯಾದ ಗೌರಿಯನ್ನು ರಾಜು ಅದೇ ಔದಾರ್ಯದ ಹಿನ್ನಲೆಯಲ್ಲಿ ಮದುವೆಯಾಗುತ್ತಾನೆ. ಅಂದರೆ ಕಮಲೆ-ಗೌರಿಯರ ಬದುಕಿಗೆ ವಿವಾಹವೊಂದು ಪರಿಹಾರವಿರುವಂತೆ ಚಿತ್ರಿತವಾಗಿದೆ. ಅಂದರೆ ಪಿತೃಪ್ರಧಾನ ಧೋರಣೆ ಹಿನ್ನಲೆಯಲ್ಲೇ ಇಂದಿರಾ ಅವರು ಹೆಣ್ಣಿನ ಸಾರ್ಥಕ ಬಾಳನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ. ತಗ್ಗಿನ ಮನೆಯ ಸೀತೆ ಕೂಡ ಸ್ವಾಭಿಮಾನದ ಹೆಣ್ಣಾದರೂ ಪುರುಷಪ್ರಧಾನ ಮೌಲ್ಯಗಳಾಚೆ ದಾಟಲು ಸಾಧ್ಯವಾಗುವುದಿಲ್ಲ. ತುಂಗಭದ್ರೆಯಲ್ಲಿ ಆ ಮೂರೂ ಹೆಣ್ಣುಮಕ್ಕಳು ಒಬ್ಬನನ್ನು ಮದುವೆಯಾಗುವಾಗ ಹೆಣ್ಣು ಮಕ್ಕಳ ಮನಸ್ಸಿನ ಹಾಗೂ ದೈಹಿಕ ಅಗತ್ಯಗಳನ್ನು ನಿರ್ಲಕ್ಷಿಸಲಾಗಿದೆ ಎಂಬ ಆರೋಪವಿದೆ. 'ವಿವಾಹ ಸಂಸ್ಥೆಯ ಉದ್ದೇಶವನ್ನು ಒಂದು ರೀತಿ ಗೇಲಿ ಮಾಡಿದಂತೆ' ಎಂಬ ಟೀಕೆಯೂ ಇದೆ. ಎಂ.ಕೆ.ಇಂದಿರಾ ಅವರ ದೃಷ್ಟಿಕೋನಕ್ಕೆ ಕಾರಣ ಅವರು ಮಲೆನಾಡ ಪರಿಸರದ ಒಂದು ದೊಡ್ಡ ಅವಿಭಕ್ತ ಕುಟುಂಬದಲ್ಲಿ ಜನಿಸಿದರು. ಅಲ್ಲಿ ಹೊಂದಾಣಿಕೆ, ಸಹನೆ, ತ್ಯಾಗಗಳೇ ಮುಖ್ಯ ಮೌಲ್ಯಗಳಾಗುತ್ತವೆ. ಚಿಕ್ಕಂದಿನಿಂದ ಪುರುಷ ಪ್ರಧಾನ ಸಂಸ್ಕೃತಿಯೊಳಗೆ ಅವಿಭಕ್ತಕುಟುಂಬದಲ್ಲಿ ಬೆಳೆದು ಬಂದವರು. ಅಲ್ಲದೆ ಆರಂಭಿಕ ಹಂತದಲ್ಲಿ ಸ್ತ್ರೀ ಬರಹಗಾರರು ಎದುರಿಸಿದ ಸಮಸ್ಯೆಗಳು ಮತ್ತು ಚಾರಿತ್ರಿಕ ಸಂದಿಗ್ಧಗಳ ಕಾರಣದಿಂದ ಸಂಪ್ರದಾಯವನ್ನು ಮೀರಿ ಕ್ರಾಂತಿಕಾರಕವಾದ ಪಾತ್ರಗಳನ್ನು ಸೃಷ್ಟಿಸಲು ಸಾಧ್ಯವಾಗಲಿಲ್ಲವೆಂದು ತೋರುತ್ತದೆ.

ಮಲೆನಾಡ ಪರಿಸರದ ಕನ್ನಡ ಮಹತ್ವದ ಲೇಖಕರೆನಿಸಿದ ಯು.ಆರ್.ಅನಂತಮೂರ್ತಿ ಅವರ ಬಹುತೇಕ ಕಥಾಸಾಹಿತ್ಯದಲ್ಲಿ ಮಲೆನಾಡಿನ ಆವರಣವಿದೆ. ಬ್ರಾಹ್ಮಣ ಸಮುದಾಯದ ಪರಿಸರವೇ ಇದೆ. ಅನಂತಮೂರ್ತಿ ಅವರ ಪುರುಷ ಪ್ರಧಾನ ಪಾತ್ರಗಳು ವೈಚಾರಿಕತೆಯನ್ನು ಮೈಗೂಡಿಸಿಕೊಂಡಿರುವ ಹಾಗೆ, ಕ್ರಾಂತಿಕಾರಕವಾದ ನಿಲುವನ್ನು ತಾಳಿರುವ ಹಾಗೆ, ಸ್ತ್ರೀ ಪಾತ್ರಗಳು ಚಿತ್ರಿತವಾಗುವುದಿಲ್ಲ. ಎಂ.ಕೆ.ಇಂದಿರಾ ಮತ್ತು ಅನಂತಮೂರ್ತಿ ಅವರು ಒಂದೇ ಪರಿಸರದಿಂದ ಬಂದಿದ್ದರೂ 'ಫಣಿಯಮ್ಮ'ನಂತಹ ವೈಚಾರಿಕ ಪಾತ್ರಗಳು ಅನಂತಮೂರ್ತಿ ಅವರ ಸಾಹಿತ್ಯದಲ್ಲಿ ಕಂಡು ಬರುವುದಿಲ್ಲ. ಅವರ ಬಹುತೇಕ ಸ್ತ್ರೀ ಪಾತ್ರಗಳಲ್ಲಿ ಹುಡುಗಿಯರೆಲ್ಲ ಬಚ್ಚುಗಲ್ಲದ, ಬತ್ತಿದ ಮೋರೆಯ, ಬೇಳೆ ಹುಳಿ ವಾಸನೆ ಬರುವ ಬಾಯಿಯರಾಗಿಯೆ'[೧೭] ಚಿತ್ರಿತವಾಗುತ್ತಾರೆ ಎಂಬ ಆಕ್ಷೇಪಣೆಯಿದೆ. ಸಂಸ್ಕಾರ ಕಾದಂಬರಿಗಿಂತ ಮೊದಲು ಬಂದ ಘಟಶ್ರಾದ್ಧದ ಯಮುನಕ್ಕ ತನ್ನ ಸ್ಥಿತಿಯನ್ನು ಮೀರುವುದು ಬೇರೆ ಕಡೆಯಿಂದ ಬಂದು ಮೇಷ್ಟ್ರು ಜೊತೆ ಗುಪ್ತ ಸಂಬಂಧವನ್ನು ಹೊಂದುವುದರ ಮೂಲಕ ಆಕೆ ತನ್ನ ವಿಧಿಬದ್ಧ ಬದುಕಿನಲ್ಲಿ ಜೀವನ ಸಾಫಲ್ಯಕ್ಕಾಗಿ ಒಳದಾರಿ ಹಿಡಿಯುತ್ತಾಳೆ. ಅವರ ಇತ್ತೀಚಿನ ದಿವ್ಯ ಕಾದಂಬರಿಯಲ್ಲೂ ಸರಸ್ವತಿ ಅದೇ ದಾರಿ ಹಿಡಿಯುತ್ತಾಳೆ. ನಿರೂಪಕ 'ನಾಡಿನಲ್ಲಿ ವಂಚಿತಳಾದ ಸರಸ್ವತಿ ಕಾಡಿನ ಒಳದಾರಿಗಳಲ್ಲಿ ಸಫಲತೆ ಕಂಡುಕೊಂಡಳು[೧೮] ಎಂದಿದ್ದಾರೆ. ಪ್ರಕೃತಿ ಕಥೆಯಲ್ಲಿ ಬರುವ ಬಾಲವಿಧವೆ ಲಕ್ಷ್ಮೀ ಶಾನುಭೋಗನ ಮಗ ಸುಬ್ಬನ ಜೊತೆ ಗುಪ್ತ ಸಂಬಂಧ ಹೊಂದಿದ್ದಳು. ಅಂದರೆ ಸಂಪ್ರದಾಯ ವಿಧಿ ನಿಷೇಧಗಳಲ್ಲಿ ಬದುಕುತ್ತಲೇ ಸಹಜ ಕಾಮನೆಗಳನ್ನು ಈಡೇರಿಸಿಕೊಳ್ಳಲು ಅನಿವಾರ್ಯವಾಗಿ ಕಂಡುಕೊಂಡ ಮಾರ್ಗಗಳೇ ಹೊರತು. ಪರಂಪರಾ ವ್ಯವಸ್ಥೆಗೆ ಬಂಡೆದ್ದ ಪ್ರತಿಭಟನೆಗಳಲ್ಲ. ಕೇವಲ ಕಾಮದ ಮಟ್ಟಿಗೆ ಮಾತ್ರ ಸಂಪ್ರದಾಯವನ್ನು ಗುಪ್ತವಾಗಿ ಮೀರುವ ಬಾಲವಿಧವೆಯರು ಇವರು.

ಆಧುನಿಕತೆ ಪ್ರವೇಶ ಮಾಡಿದಾಗ ಆರ್ಥಿಕವಾದ ಹಿನ್ನಲೆಯಲ್ಲಿ ತಮ್ಮ ನೆಲೆಯನ್ನು ಮೀರುವ ಆಲೋಚನೆಗಳು. ತಮ್ಮ ಮಕ್ಕಳ ಮೂಲಕವಾದರೂ ಸಾಧಿಸಿಕೊಳ್ಳಬೇಕೆಂಬ ಹಠದ ಸ್ತ್ರೀ ಪಾತ್ರಗಳನ್ನು ಗಮನಿಸಬಹುದು. ಪ್ರಕೃತಿ ಕಥೆಯ ಸೀತಕ್ಕ, ಸೂರ್ಯನ ಕುದುರೆಯಲ್ಲಿ ಬರುವ ರುಕ್ಕುವಿನಂತಹ ಸ್ತ್ರೀಯರಿಗೆ ಈ ಮಲೆನಾಡ ಹಳ್ಳಿ ಹಾಳುಕೊಂಪೆಯೆಂದೂ ತಮ್ಮ ಮಕ್ಕಳು ಪಟ್ಟಣದಲ್ಲಿ ಸಂಪಾದಿಸಿ ಮೇಲೆರಬೇಕು ಎಂಬ ಹಂಬಲವುಳ್ಳವರು. ಇವರ ನೇರ ಅಥವಾ ಪರೋಕ್ಷ ಒತ್ತಾಸೆಗಳಿಂದಲೇ ನಾರಾಯಣ-ಸುಬ್ಬು ಅಂತಹ ಮಕ್ಕಳು ನಗರದಲ್ಲಿ ಬದುಕಬೇಕೆಂದು ತಂದೆಯ ಜೊತೆ ಸಂಘರ್ಷಕ್ಕೆ ಇಳಿಯುವುದು. 'ಪ್ರಶ್ನೆ' ಕಥೆಯಲ್ಲಿ ನಗರದಲ್ಲಿ ಉದ್ಯೋಗ ಹಿಡಿದಿರುವ ರಂಗನಾಥ ಶಾರದಳನ್ನು ಮದುವೆಯಾಗಲು ಬಯಸಿದ್ದಾನೆ. ಅದು ಆಕೆಗೆ ಇಷ್ಟವೂ ಇದೆ. ನಿಮಿತ್ತ, ಪೂಜೆ-ಪುನಸ್ಕಾರ ಕಲಿತ ಮಾಣಿಯೊಂದನ್ನು ತಂದು ಮದುವೆ ಮಾಡುತ್ತೇನೆ ಎಂದು ತನ್ನ ಹಿತ ದೃಷ್ಟಿಯಿಂದ ಸಾಕು ತಂದೆ ಶಂಕರಯ್ಯ ಹೇಳುವ ಮಾತನ್ನು ಶಾರದ ಒಪ್ಪಲಾರಳು. ಆದರೆ ಸಾಯುವ ಕಾಲದಲ್ಲಿ ಆತನನ್ನು ಒಬ್ಬನನ್ನೇ ಬಿಟ್ಟು ಹೋಗಲಾರಳು. ಈ ಎರಡು ಸೆಳೆತಗಳಿಂದ ಶಾರದೆ ತೀವ್ರ ಸಂಕಟಕ್ಕೆ ಒಳಗಾಗುತ್ತಾಳೆ. ಇದು ಕೇವಲ ಶಾರದೆಯಂತವಳ ಸಂಕಟ ಮಾತ್ರವಲ್ಲ ಮೂರು ಜನರ (ರಂಗನಾಥ-ಶಾರದ-ಶಂಕರಯ್ಯ) ಸಂಕಟ. ಇದು ಆಧುನಿಕತೆ ತರುವಂತಹ ಸಂಕಟಕ್ಕೆ ಸಾಕ್ಷಿಯಾಗಿದೆ.

'ಪ್ರಸ್ತ' ಕಥೆಯಲ್ಲಿ ಬರುವ ನೇತ್ರಾವತಿ ಸಂಪ್ರದಾಯದ ವಿರೋಧಿಯಂತೆ ನಡೆದುಕೊಳ್ಳುತ್ತಾಳೆ. ಮುಖ್ಯವಾಗಿ ಅವಳ ವಿರೋಧದ ನೆಲೆ ಅತ್ತೆ ಹೇಳುವುದನ್ನು ವಿರೋಧಿಸುವುದರಲ್ಲಿದೆ. ವಾರೆ ಬೈತಲೆ ತೆಗೆಯುತ್ತಾಳೆ, ಸಣ್ಣನೆ ಕುಂಕುಮವಿಡುತ್ತಾಳೆ. ಗಂಡನಿಗೆ ಕ್ರಾಪು ಬಿಡಿ ಎಂದು ಒತ್ತಾಯಿಸುವಲ್ಲಿಯೂ ಯಶಸ್ವಿಯಾಗುತ್ತಾಳೆ. ಆಧುನಿಕ ಶಿಕ್ಷಣ ಪಡೆದ ನೇತ್ರಾವತಿಯ ಸಂಪ್ರದಾಯದ ವಿರೋಧದ ನಡವಳಿಕೆಗಳು ಸಹಜವಾಗಿಯೇ ಅತ್ತೆ ವೆಂಕಮ್ಮನಿಗೆ ಅಹಂಕಾರದ ನಡವಳಿಕೆಗಾಗಿ ತೋರುತ್ತವೆ. ಗಂಡನ ಜೊತೆ ವೈಯ್ಯಾರದಿಂದ ಇರುವುದಾಗಲಿ, ಗಂಡ ಹೆಂಡತಿಯ ಹೆಸರು ಹಿಡಿದು ಕರೆಯುವುದಾಗಲಿ ಸಂಪ್ರದಾಯದ ಕಣ್ಣಿಗೆ ಅಪರಾಧವಾಗಿ ತೋರುತ್ತದೆ.

"ಒಳ್ಳೆ ಇಟ್ಟುಕೊಂಡ ಸೂಳೆಯನ್ನು ಕರೆಯುವ ಹಾಗೆ, ನಾಚಿಕೆಬೇಡವೇ....... ನಮ್ಮ ಕಾಲದಲ್ಲಿ ಹೆಂಡರು ಗಂಡಾಂತ ಅಂದರೆ ಗಡಗಡ ನಡಗ್ತ ದೂರ ನಿಲ್ಲುತ್ತಿದ್ದರು. ನಾನು ಹುಡುಗಿಯಾಗಿದ್ದಾಗ ಅವರ ಜೊತೆ ಮುಖಕ್ಕೆ ಮುಖಕೊಟ್ಟು ಮಾತನಾಡಿದ್ದಿಲ್ಲ. ಈಗಿನ ಕಾಲವೆ ಬೇರೆಯಾಗಿದೆ........ ಗಂಡನೆಂದರೆ ಏನು ಸಲಿಗೆ ಯಾರು ಇರಲಿ ಬಿಡಲಿ ಗಂಡನ ಹತ್ತಿರ ಮಾತಾಡುತ್ತಾಳೆ. ಅವನೋ ಹೆಂಡತಿಯ ಜೊತೆ ಸೂಳೆಯರ ಜೊತೆ ಆಡುವ ಹಾಗೆ ಆಡುತ್ತಾನೆ"[೨೯]

ಇಲ್ಲಿ ಸ್ವಾತಂತ್ರ್ಯ ಮತ್ತು ಸ್ವೇಚ್ಛಾಚಾರದ ತಾಕಲಾಟಗಳು ತೋರುತ್ತವೆ. ಯಾವುದು ನೇತ್ರಾವತಿಗೆ ಸ್ವಾತಂತ್ರ್ಯದ ಸಹಜ ಆಕಾಂಕ್ಷೆಯಾಗಿ ತೋರುತ್ತದೋ ಅದು ಅತ್ತೆಯ ದೃಷ್ಟಿಯಲ್ಲಿ ಸ್ವೇಚ್ಛಾಚಾರವಾಗಿ ಕಾಣುತ್ತದೆ. ಆದಕಾರಣ ಇಲ್ಲಿ ಸಂಘರ್ಷಕ್ಕೆ ಎಡೆಯಾಗಿದೆ. ಸಾಂಪ್ರದಾಯಿಕ ಮತ್ತು ತಾನು ನಡೆದು ಬಂದ ಹಾಗೆಯೇ ತನ್ನ ಸೊಸೆ ಇರಬೇಕೆಂಬ ಯಥಾಸ್ಥಿತಿವಾದವಿದು. ವಿಪರ್ಯಾಸವೆಂದರೆ ತಾನು ಸೊಸೆಯಾಗಿರುವಾಗ ಯಾವ ಹಿಂಸೆಯನ್ನು ಅನುಭವಿಸಿದ್ದಳೊ ಈಗ ಆಕೆಯೇ ಹಿಂಸಾ ಸ್ವರೂಪಿಣಿಯಾದದ್ದು. ವೆಂಕಮ್ಮನಿಗೆ ತಾಯಿಯ ಮತ್ತು ಅತ್ತೆಯ ಅಧಿಕಾರಬೇಕು. ಆದರೆ ನೇತ್ರಾವತಿಗೆ ಹೊಸ ಬದುಕಬೇಕು. ಆಕೆ ಸ್ವಲ್ಪ ಆಧುನಿಕ ಶಿಕ್ಷಣವನ್ನು ಪಡೆದವಳು, ಆಧುನಿಕವಾಗಿ ಯೋಚಿಸುವಂತವಳು. ಅತ್ತೆಯ ಯಜಮಾನಿಕೆಯಿಂದ ವಿಮೋಚನೆಗಾಗಿ ಆಕೆ ಪ್ರತಿಭಟನೆಯ ನಡವಳಿಕೆಗಳು ಇವೆ. ತನ್ನ ನೆಲೆಯನ್ನು ಮೀರಲು ಯತ್ನಿಸುವ, ಹೊಸತನ್ನು ಹಂಬಲಿಸುವ ನೇತ್ರಾವತಿ ಒಂದು ಕಡೆಯಾದರೆ ಆಕೆಯ ಎದುರಿನಲ್ಲಿ ಆಕೆಯ ಅತ್ತಿಗೆ ಸೀತಕ್ಕ ಗಂಡನಿಂದ ಪರಿತಕ್ತಳಾದವಳು ಇದ್ದಾಳೆ. ಈಕೆಗೆ ತನ್ನ ನೆಲೆಯನ್ನು ಮೀರಲು ಸಾಧ್ಯವಾಗದ ದೌರ್ಬಲ್ಯವಿದೆ. ಆಕೆ ಗೊಡ್ಡು, ನಿಷ್ಪ್ರಯೋಜಕ, ಪಿರಿಪಿರಿ ವ್ಯಕ್ತಿಯಾಗಿ ಮಾತ್ರ ಚಿತ್ರಿತವಾಗಿದ್ದಾಳೆ. ತಾಯಿಯ ಪಿತೂರಿಯಲ್ಲಿ ಪಾಲುದಾರಳು, ಚಾಡಿಕೋರತನ ಬೆಳೆಸಿಕೊಂಡವಳಾಗಿ ತೋರುವ ಸೀತಕ್ಕನ ಮನಸ್ಥಿತಿಯ ಬಗ್ಗೆ ಕುಟುಂಬದ ಇತರ ಸದಸ್ಯರು ಗಮನಕೊಡುವುದಿಲ್ಲ. ಆಕೆಯ ತಮ್ಮ ಪುಂಡರೀಕನಿಗೆ ತಮ್ಮ ಸಂಪ್ರದಾಯದ ವಿಧಿ ನಿಷೇಧಗಳು ತನ್ನ ಬಾಳನ್ನು ಕುಂದಿಸಿವೆ ಎಂಬುದನ್ನು ಕಾಣಬಲ್ಲ. ಆದರೆ ಅದೆ ಮೌಲ್ಯ ವ್ಯವಸ್ಥೆ ತನ್ನ ಅಕ್ಕನ ಬಾಳನ್ನು ಮುರುಟಿಸಿವೆ ಎಂಬುದನ್ನು ಯೋಚಿಸಲಾರ.

'ಮೌನಿ' ಕಥೆಯ ಗೌರಮ್ಮ ಸಾತ್ವಿಕ ಪಾತ್ರ, ಗಂಡನ ಪ್ರಾಮಾಣಿಕತೆ, ಸ್ವಾಭಿಮಾನ ಮತ್ತು ಸಿಟ್ಟನ್ನು ಬಲ್ಲವಳು. ತನ್ನ ವ್ಯವಹಾರಕ್ಕೆ ಹೆಂಡತಿಯಿಂದ ಬಂಗಾರವನ್ನು ಅನುಮಾನದಿಂದಲೇ ಕುಪ್ಪಣ್ಣಭಟ್ಟ ಕೇಳಿದಾಗ ಒಡವೆಯನ್ನು ಕೊಡುತ್ತಾಳೆ. ಆದರೆ ಅವಳಿಗೆ ತನ್ನ ಬಂಗಾರದ ಮೇಲೆ ವ್ಯಾಮೋಹವಿಲ್ಲ.

ಗಂಡನ ಮನೆಗೆ ಹೋಗುವಾಗ ಮಗಳಿಗೆಂದು ಇಟ್ಟುಕೊಂಡ ಬಂಗಾರ ವ್ಯವಹಾರದಲ್ಲಿ ಮುಳುಗಿದರೆ ಮುಂದಿನ ಗತಿಯೇನು ಎಂಬ ಆತಂಕ. ಈ ಆತಂಕ ಹೊರಗೆಡವಿದ್ದರೆ ಕುಪ್ಪಣ್ಣಭಟ್ಟನ ಸ್ವಾಭಿಮಾನ ಕೆರಳುತ್ತಿತ್ತು. ಅದನ್ನರಿತೆ ಆಕೆ ಪ್ರತಿರೋಧಿಸದೆ, ತನ್ನ ಆತಂಕ ತೋರಗೊಡದೆ ತ್ಯಾಗಮೂರ್ತಿಯಾಗುತ್ತಾಳೆ.

ಅನಂತಮೂರ್ತಿ ಅವರ ಒಟ್ಟು ಸಾಹಿತ್ಯವನ್ನು ಕುರಿತು ವಿಮರ್ಶೆಯ ಮಾತೊಂದು ಹೀಗೆ ಬರುತ್ತದೆ. "ಅನಂತಮೂರ್ತಿ ಅವರ ಕೃತಿಗಳಲ್ಲಿ ಪೂರ್ವ-ಪಶ್ಚಿಮ ಸಂಸ್ಕೃತಿಗಳ ಮುಖಾಮುಖಿಯನ್ನು ಹೆಚ್ಚಾಗಿ ಕಾಣುತ್ತೇವೆ. ಅವರ ಸಂಸ್ಕಾರ, ಭಾರತೀಪುರ, ಪ್ರಶ್ನೆ, ಪ್ರಕೃತಿ ಮುಂತಾದ ಕಾದಂಬರಿ ಕಥೆಗಳಲ್ಲಿ ಭಾರತೀಯ ಸಂಸ್ಕೃತಿಯ ಕೊಳೆತು ಹೋದ ಅಂಶಗಳನ್ನು ; ಪಾಶ್ಚಾತ್ಯ ಸಂಸ್ಕೃತಿಯ ಅತ್ಯುತ್ತಮ ಅಂಶಗಳನ್ನು ಕಂಡರೆ, ಇತ್ತೀಚಿನ ದಿವ್ಯ ಸೂರ್ಯನ ಕುದುರೆ ಇತ್ಯಾದಿ ಕೃತಿಗಳಲ್ಲಿ ಭಾರತೀಯ ಸಾಂಸ್ಕೃತಿಕ ಅತ್ಯುತ್ತಮ ಅಂಶಗಳನ್ನು, ಪಾಶ್ಚಿಮಾತ್ಯ ಸಂಸ್ಕೃತಿಯ ಕೊಳೆತ ಅಂಶಗಳನ್ನು ಎತ್ತಿ ಹಿಡಿಯುತ್ತಿದ್ದಾರೆ.[೨೦]

ಈ ಮಾತನ್ನು ಅನಂತಮೂರ್ತಿ ಕಥಾಸಾಹಿತ್ಯದ ಸ್ತ್ರೀಯರಿಗೆ ಅನ್ವಯಿಸಿ ನೋಡಿದಾಗ ಅವರ ಮೊದಲಘಟ್ಟದ ಬರವಣಿಗೆಯಲ್ಲಿ ಸಂಪ್ರದಾಯದ ಚೌಕಟ್ಟನ್ನು ಮೀರಲಾರದ ಸ್ತ್ರೀಯರೇ ಹೆಚ್ಚಾಗಿದ್ದು, ಭಾರತೀಯ ಸಂಸ್ಕೃತಿಯ ಕೊಳೆತು ಹೋದ ಅಂಶಗಳ ಬಗ್ಗೆ ಬೆಳಕು ಚೆಲ್ಲುವ ದೃಷ್ಟಿಕೋನದಿಂದ ಹಾಗೆ ಚಿತ್ರಿತವಾಗಿದ್ದಾರೆ ಎನ್ನಬಹುದು. ಸಂಸ್ಕಾರದ ವಿಧವೆ ಲಕ್ಷ್ಮಿದೇವಮ್ಮನಿಗೂ ದಿವ್ಯದಲ್ಲಿ ಬರುವ 'ಅಕ್ಕು'ವಿಗೂ ವ್ಯತ್ಯಾಸವಿದೆ. 'ಅಕ್ಕ' ಅರೆಪಿರ್ಕಿಯಲ್ಲ ವಿಧವೆಯಾಗಿ ಸಂಪ್ರದಾಯಸ್ಥ ರೀತಿಯಲ್ಲಿ ಬದುಕಿದ್ದೂ ತನ್ನದಲ್ಲದ ಸವತಿ ಮಕ್ಕಳನ್ನು ಅತ್ಯಂತ ವಾತ್ಸಲ್ಯದಿಂದ ಸಾಕುತ್ತಾ ವಿಶಾಲವಾಗಿ ಚಿಂತಿಸುವ, ಬದಲಾದ ವಾತಾವರಣಕ್ಕೆ ಹೊಂದಿಕೊಳ್ಳಬೇಕೆಂಬ ಮನೋಭಾವ ಹೊಂದಿದವಳು. ವಿಧವೆ ವಿಮಲೆ ಉನ್ನತ ವ್ಯಾಸಂಗ ಮಾಡಿದವಳು, ಅನ್ಯಧರ್ಮಿಯ ತನ್ನ ಮನೆಯ ಕಾರು ಡ್ರೈವರನ ಜೊತೆ ಸಂಬಂಧ ಹೊಂದಿ ಮಗು ಪಡೆದು ಎಲ್ಲರ ಒಪ್ಪಿಗೆಯ ಮೇಲೆ ಆತನನ್ನು ಮನೆಯ ಅಳಿಯನನ್ನಾಗಿ ಸ್ವೀಕರಿಸುವಂತೆ ಮಾಡಿದಳು. ಹಳ್ಳಿಯ ಕೊಂಪೆಯಲ್ಲೇ ಹುಟ್ಟಿ ಬೆಳೆದ 'ಗೌರಿ' ಸುತ್ತಲ ಪರಿಸರದಲ್ಲಿ ತನ್ನ ವಿಶಾಲಮನೋಭಾವದ, ವೈಚಾರಿಕ ತರ್ಕದಿಂದ ವಿದೇಶದಲ್ಲಿ ಓದಿ ಬಂದ ಘನಶ್ಯಾಮನು ತಲೆಬಾಗುವಂತೆ ನಡೆದುಕೊಳ್ಳುವ ವ್ಯಕ್ತಿತ್ವ ಪಡೆದಿದ್ದಳು.

ಸಂಸ್ಕಾರ ಕಾದಂಬರಿಯ ಸೀತಾದೇವಿ (ಗರುಡಾಚಾರ್ಯನ ಹೆಂಡತಿ) ಅನಸೂಯ (ಲಕ್ಷ್ಮಣಾಚಾರ್ಯನ ಹೆಂಡತಿ) ಲೀಲಾವತಿ (ಶ್ರೀಪತಿಯ ಹೆಂಡತಿ) ಇವರ್‍ಯಾರು ಸಂಪ್ರದಾಯದ ಚೌಕಟ್ಟಿನ ಆಚೆ ಯೋಚಿಸುವವರಲ್ಲ. ಆದರೆ ಶೂದ್ರ, ಕೆಳಜಾತಿ ಸ್ತ್ರೀಯರು ಸಂಸಾರಿಕ ಚೌಕಟ್ಟನ್ನು ಮೀರಿ ನಡೆದುಕೊಳ್ಳುವವರಾಗಿ ಚಿತ್ರಿತವಾಗುತ್ತಾರೆ. ಶೂದ್ರಳಾದ ಚಂದ್ರಿಗೂ ಅಗ್ರಹಾರದ ಇತರ ಹೆಂಗಸರಿಗೂ ಇರುವ ವ್ಯತ್ಯಾಸಗಳು ಆಕೆಯ ಹೆಣ್ತನವನ್ನು ಗಮನಕ್ಕೆ ತರುತ್ತದೆ. ನಾರಾಣಪ್ಪ ಇರುವವರೆಗೆ ಅವನಿಗೆ ನಿಷ್ಠಳಾಗಿ ಬದುಕುತ್ತಾಳೆ. ಆ ಮನೆಯ ಗೃಹಿಣಿಯಾಗಿದ್ದವಳು, ಯಾವೆಲ್ಲ ಕಾಳಜಿಗಳನ್ನು ಹೊಂದಿರಬಹುದೊ ಆ ಎಲ್ಲ ಕಾಳಜಿಗಳನ್ನು ಹೊಂದಿದ್ದಳು ; ಮೈಮಾರಿಕೊಳ್ಳುವ ವೇಶ್ಯೆಯಾಗಿರಲಿಲ್ಲ. ಆತನ ಶವ ಸಂಸ್ಕಾರಕ್ಕೆ ಆಕೆಯ ಪರದಾಟ, ತಾನು ಧಕ್ಕಿಸಿಕೊಳ್ಳಬಹುದಾದ ಒಡವೆಯನ್ನು ಶವಸಂಸ್ಕಾರ ಮಾಡುವಂತವರಿಗೆ

ಕೊಡಲು ಮುಂದಾಗುವುದು, ಇಡೀ ಅಗ್ರಹಾರ ಸೇರಿ ಮಾಡಬೇಕಾದ ಶವಸಂಸ್ಕಾರವನ್ನು ಯಾರಿಗೂ ತಿಳಿಯದಂತೆ ಮಾಡಿ ನಾರಾಣಪ್ಪನ ಋಣ ತೀರಿಸಿಕೊಳ್ಳುವುದು. ಇವೆಲ್ಲಾ ಚಂದ್ರಿಯ ಮಾನವೀಯತೆ ತ್ಯಾಗ, ಸಾಹಸಕ್ಕೆ ಸಾಕ್ಷಿಯಾಗಿದೆ. ಪ್ರಾಣೇಶಾಚಾರ್ಯರ ಬಳಿ ಕಾಪಾಡುವ ತಾಯಿಯಾಗಿ, ತಾಯ್ತನವನ್ನು ಬಯಸುವ ಹೆಣ್ಣಾಗಿ ಕಂಡುಬರುತ್ತಾಳೆ. ಅದೇ ಕೆಳಸ್ತರದ ಬೆಳ್ಳಿ ಶ್ರೀಪತಿಯಂತವನಿಗೆ ಕೇವಲ ದೇಹದ ಬಯಕೆ ತೀರಿಸುವ ವಸ್ತು ಮಾತ್ರವಾಗಿ ಕಂಡುಬರುತ್ತಾಳೆ. ತಮ್ಮ ಕೇರಿಯ ಸಾವಿನ ಸಂಗತಿಯನ್ನು ಭಾವಕವಾಗಿ ಹೇಳುತ್ತಿದ್ದರೂ ಕೇಳುವ ವ್ಯವದಾನ ಇವನದಲ್ಲ. "ಬೆಳ್ಳಿ ಮಲಗಲಿಕ್ಕೆ ಸರಿಯೇ ಹೊರ್ತು ಮಾತಾಡಲಿಕ್ಕಲ್ಲ".[೨೧] ಈ ಮಾತು ಮೇಲು ಜಾತಿ ಜನಾಂಗ ತನ್ನ ಜಾತಿಯ ಮೇಲರಿಮೆಯಿಂದ ಕೆಳಜಾತಿಯನ್ನು ಯಾವ ಬಗೆಯಲ್ಲಿ ಶೋಷಿಸುತ್ತಿದ್ದರೂ, ಆ ಸಮಾಜವು ಯಾವ ಪ್ರತಿಭಟನೆಯೂ ಇಲ್ಲದೆ ಒಪ್ಪಿಸಿಕೊಳ್ಳುವಲ್ಲಿ ತಮ್ಮ ಕೈಂಕರ್ಯ ಮೆರೆಯುತ್ತಿದ್ದರು ಎಂಬುದು ವ್ಯಕ್ತವಾಗುತ್ತದೆ. ಅದೇ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಪದ್ಮಾವತಿ ಮೇಲುಸ್ತರದ ವೇಶ್ಯೆ ಮಾಲೇರಪುಟ್ಟನ ವಿವರಣೆ ಗಮನಿಸಿದರೆ "ಅದು ಕಳಪೆ ಜನವೆಂದು ತಿಳಿಯಬೇಡಿ ಮಾರಾಯರೆ, ಶೂದ್ರರಾರೂ ಸುತ್ತಮುತ್ತ ಸುಳಿದಿದ್ದಿಲ್ಲ. ಅಂತಿಂಥ ಸಾಮಾನ್ಯ ಬ್ರಾಹ್ಮಣರಿಗೂ ಒಪ್ಪುವ ಜೀವವಲ್ಲ".[೨೨] ಕಟ್ಟು ಕಟ್ಟಳೆ ಮೀರಿ ಸಫಲ ಬಾಳು ಕಂಡುಕೊಳ್ಳುವಲ್ಲಿಯೂ ಮೇಲರಿಮೆ ಹೋಗಿಲ್ಲವೆಂಬುದು ಚಂದ್ರಿ, ಬೆಳ್ಳಿಗಿಂತ ಭಿನ್ನವಾಗಿ ಚಿತ್ರಿತವಾಗಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಮೇಲು ಜಾತಿಗೆ ಸೇರಿದ ವೇಶ್ಯೆಯೊಬ್ಬಳು ಆ ಜಾತಿಗೆ ಸೇರಿದ ವ್ಯಕ್ತಿಗಳಲ್ಲಿ ಮಾತ್ರ ಸಂಬಂಧವನ್ನು ಹೊಂದಬೇಕೆಂಬ ಮಡಿಮಂತಿಕೆಯ ಧೋರಣೆಯಿಂದ ಚಿತ್ರಿತವಾಗುವ ಪ್ರಜ್ಞೆ ಯಾವ ನೆಲೆಯದು?

ಭಾರತೀಪುರ ಕಾದಂಬರಿಯಲ್ಲಿ ಬರುವ ನಾಗರಾಜ ಜೋಯಿಸನ ಸೊಸೆ ನಾಗಮಣಿಗೆ ಯೌವನ, ಸೌಂದರ್ಯ ಒಳ್ಳೆಯತನಗಳೆಲ್ಲ ಇವೆ ನಿಜ. ಅವೇ ಅವಳಿಗೆ ಮುಳುವಾಗಿವೆ. ಅವಿಭಕ್ತ ಕುಟುಂಬದ ಮನೆವಾರ್ತೆಯನ್ನು ನಡೆಸಿಕೊಂಡು ಹೋಗಬೇಕಾದುದರಿಂದ ಶಿವಮೊಗ್ಗದಲ್ಲಿ ವಕೀಲವೃತ್ತಿ ಮಾಡುತ್ತಿರುವ ಗಂಡನ ಜೊತೆ ಬಾಳುವೆ ಮಾಡುವಂತಿಲ್ಲ. ಆಗಿನ ಪರಿಸರದಲ್ಲಿ ಗಂಡನ ಜೊತೆ ಸಂಸಾರ ಮಾಡುತ್ತಾ ಬದುಕುವುದು ಮುಖ್ಯವಲ್ಲ ; ಅವಿಭಕ್ತ ಕುಟುಂಬ ನಡೆಯಬೇಕಾದದ್ದು ಮುಖ್ಯ. ಹೆಣ್ಣು ಅದಕ್ಕೆ ಆದ್ಯತೆಯನ್ನು ಕೊಡಬೇಕಾಗಿದ್ದ ಕಾಲ. ಮನೆಗೆ ಬಂದ ಅತಿಥಿಗಳ ಸೇವೆ ಮಾಡುವುದು ಅವರ ಕೈಂಕರ್ಯ. ಬದುಕಿನ ಎಲ್ಲ ಆಸೆ–ಆಕಾಂಕ್ಷೆಗಳು ವಿಷಯುಕ್ತ ವಾತಾವರಣದಲ್ಲಿ ಉಸಿರುಗಟ್ಟಿಸುತ್ತಿವೆ. ಜಡ್ಡುಹಿಡಿದ ಅವಳ ಚೈತನ್ಯಕ್ಕೆ ತನ್ನ ನೋಟದಿಂದ ಜಗನ್ನಾಥ ಚೈತನ್ಯ ತುಂಬಲು ಪ್ರಯತ್ನಿಸುತ್ತಾನೆ. ಆದರೆ ಆ ನೋಟ ಆಕೆಯನ್ನು ಅರಳಿಸಲಾರದು. ಆದರೆ ಆಕೆ ಒಳಗೊಳಗೇ ಉರಿಯುತ್ತಿದ್ದಳು. ಅದು ಹೊರಬರದೆ ನಂದಿತು. ಅವಳು ಜಾತಿಯಲ್ಲಿ ಮೇಲಿನವಳಷ್ಟೆ ವ್ಯವಸ್ಥೆಯ ಅಡಿಯಲ್ಲಿ ದಲಿತರ ಹಾಗೆಯೇ ಮೂಖವೇದನೆಯಿಂದ ನರಳಿ ಬಲಿಯಾದಳು.

ಪ್ರಸ್ತ ಕಥೆಯಲ್ಲಿ ಸೀತಕ್ಕ ಗಂಡನಿಂದ ಚಿಕ್ಕಂದಿನಲ್ಲೇ ಪರಿತ್ಯಕ್ತಳಾಗಿ ತವರು ಮನೆಯಲ್ಲಿ ಗೊಡ್ಡಾಗಿ, ನಿಷ್ಪ್ರಯೋಜಕಳಾಗಿ, ಪಿರಿಪಿರಿ ವ್ಯಕ್ತಿಯಾಗಿ, ತನ್ನ–ತಮ್ಮನ ಹೆಂಡತಿಗೆ ಒಂದು ರೀತಿ ಅನಿಷ್ಟವಾಗಿ ಚಿತ್ರಿತವಾಗಿದ್ದರೆ, ಇದೇ ಸೀತಕ್ಕನಂತಹ ಅಕ್ಕಯ್ಯ 'ಅಕ್ಕಯ್ಯ' ಕಥೆಯಲ್ಲಿ ಭಿನ್ನವಾದ ನೆಲೆಯಲ್ಲಿ

ಗ್ರಹಿತವಾಗುತ್ತಾಳೆ. ಆ ಕಥೆ ಬರೆಯುವಾಗ ಪೂರ್ವದ ಕೊಳಕಿನ ಬಗ್ಗೆ ಬೆಳಕು ಚೆಲ್ಲಿದ್ದರೆ, ಅಕ್ಕಯ್ಯ ಕಥೆಯಲ್ಲಿ ಪೂರ್ವದ ಅತ್ಯುತ್ತಮವಾದುದರ ಕಡೆ ಬೆಳಕನ್ನು ಚೆಲ್ಲಿದ್ದಾರೆ. ಹಿರಿಯರ ಮುಂದಾಲೋಚನೆಯ ತಪ್ಪಿನಿಂದ ಅಕ್ಕಯ್ಯ ಚಿಕ್ಕಂದಿನಲ್ಲೇ ಗಂಡಿನಿಂದ ಪರಿತ್ಯಕ್ತಳಾಗಿ ತವರು ಸೇರಿ, ತಾಯಿಯಿಲ್ಲದ ತಮ್ಮ-ತಂಗಿಯರಿಗೇ ತಾನೇ ತಾಯಿಯಾಗಿ ಅಕ್ಕಯ್ಯನಾಗಿಬಿಟ್ಟಳು. ತನ್ನ ವೈಯಕ್ತಿಕ ಆಸೆ-ಆಕಾಂಕ್ಷೆಗಳಿಗೆ ತಿಲಾಂಜಲಿ ನೀಡಿ, ಅವರನ್ನು ಸಲಹುವುದರಲ್ಲಿಯೇ ಜೀವನದ ಸಾಫಲ್ಯವನ್ನು ಕಂಡುಕೊಂಡಳು. ತಮ್ಮ ಶ್ರೀನಿವಾಸನ ಎಲ್ಲ ತುಂಟಾಟಗಳನ್ನು ಸಹಿಸಿ ಓದಲು ನೆರವಾದಳು. ಪರೋಕ್ಷವಾಗಿ ಹಿಂದೂ ಸಂಸ್ಕೃತಿಯ ಗೊಡ್ಡು ನಂಬಿಕೆಗಳ ಬಗ್ಗೆ ತಮ್ಮ ಶ್ರೀನಿವಾಸನಲ್ಲಿ ಕ್ರಾಂತಿಯ ಕಿಚ್ಚು ಹತ್ತಲು ಅವಳು ಬದುಕು ಕಾರಣವಾಗುತ್ತದೆ. ಮೊದಲಿಗೆ ತಮ್ಮ ಮತಶ್ರದ್ಧೆಯ, ಅಂಧಾಭಿಮಾನದ ದುಷ್ಫಲ ಎಂದು ಸೀತಕ್ಕನ ಬಗ್ಗೆ ಯೋಚಿಸುತ್ತಿದ್ದವನಿಗೆ ಕ್ರಮೇಣ ಅಕ್ಕಯ್ಯ ತನ್ನದೇ ಆದ ಜೀವನ ಕ್ರಮವನ್ನು ರೂಪಿಸಿಕೊಂಡಿದ್ದಾಳೆ. ಅದರಲ್ಲಿಯೇ ಆಕೆ ಸಫಲತೆಯನ್ನು ಕಂಡುಕೊಂಡಿದ್ದಾಳೆ ಎಂಬುದು ಅವನ ಅರಿವಿಗೆ ಬರತೊಡಗುತ್ತದೆ. ಅದು ಆರ್ಥಿಕ ಹಿನ್ನಲೆ, ಭೋಗವಸ್ತುಗಳ ಹಿನ್ನಲೆಯಲ್ಲಿ ಸುಖವನ್ನು ಅರಸಿಹೊರಟ ಆಧುನಿಕ ಸಮಾಜದ ಮನಸ್ಥಿತಿಯು ಗುರುತಿಸಲಾರದ ಜೀವನಕ್ರಮವದು.

ವಸುಮತಿ ಉಡುಪ ಅವರ ಚೊಚ್ಚಲ ಕಥಾಸಂಕಲನ 'ಬಂದನಾಹುಲಿರಾಯನು ಮತ್ತು ಇತರ ಕಥೆಗಳು'. ಇಲ್ಲಿನ ಕಥೆಗಳು ಗ್ರಾಮೀಣ ಬದುಕಿನ ಸೌಂದರ್ಯ, ಅಲ್ಲಿನ ನಿಸರ್ಗ ಸಂಪತ್ತು, ಬೆಸೆದು ವಿಶಿಷ್ಟವಾದ ರೀತಿಯಲ್ಲಿ ಪರಿಣಾಮ ಬೀರುತ್ತವೆ. ಇಲ್ಲಿಯ ಕಥೆಗಳಲ್ಲಿ ಮಲೆನಾಡ ಪರಿಸರದ ಸ್ತ್ರೀಯ ಬದುಕಿನ ನಾನಾ ಮುಖಗಳು ಅನಾವರಣಗೊಳ್ಳುತ್ತವೆ. ಪಾತ್ರ ಪ್ರಧಾನವೆನಿಸಿದ ಇವರ ಕಥೆಗಳಲ್ಲಿ ಕೇವಲ ಓದುಗರ ಸಹಾನುಭೂತಿ ಪಡೆಯುವ ವ್ಯಕ್ತಿಚಿತ್ರಗಳಲ್ಲ ; ಬದುಕಿನ ಸಂದರ್ಭಗಳ ಸೂಕ್ಷ್ಮವಾದ ವಿಶ್ಲೇಷಣೆಯಿದೆ. ಹಾಗೆ ಸಾಂಸ್ಕೃತಿಕ ಬದುಕಿನ ಸ್ಥಿತ್ಯಂತರದ ಕುರುಹು ಇದೆ. ಎಂ.ಕೆ.ಇಂದಿರಾ ಅವರ ನಂತರ ಬಂದ ವಸುಮತಿ ಉಡುಪ ಅವರ ಕಥೆಗಳಲ್ಲಿ ಕೂಡ ಸ್ತ್ರೀಯರು ತಮ್ಮ ಸಮುದಾಯದ ಸಾಂಪ್ರದಾಯಿಕ ಚೌಕಟ್ಟನ್ನು ಮೀರಲೆತ್ನಿಸುತ್ತಾರೆ. ಆದರೆ ಆ ಚೌಕಟ್ಟಿನಿಂದ ಹೊರಬರಲು ಸಾಧ್ಯವಾಗದೆ, ಆ ಒಪ್ಪಿತ ಬದುಕನ್ನು ಅನಿವಾರ್ಯವಾಗಿ ಅಪ್ಪಿಕೊಂಡು ಹೋಗಲೇಬೇಕಾದ ಸ್ಥಿತಿಯನ್ನು ಕಾಣಬಹುದು. ೬೦ರ ದಶಕದಲ್ಲಿ ಬರವಣಿಗೆಯನ್ನು ಆರಂಭಿಸಿದ ಎಂ.ಕೆ.ಇಂದಿರಾ ಅವರ ಸ್ತ್ರೀಯರ ಚಿತ್ರಣಗಳಲ್ಲಿ ಹಾಗೂ ಸುಮಾರು ೯೦ರ ದಶಕದ ಹೊತ್ತಿಗೆ ಬರೆಯಲಾರಂಭಿಸಿದ ವಸುಮತಿ ಉಡುಪ ಅವರ ಸ್ತ್ರೀಯರ ಚಿತ್ರಣಗಳಲ್ಲಿ ಸಮಾನ ದೃಷ್ಟಿಕೋನವಿರುವುದನ್ನು ಅಂದರೆ ವಸುಮತಿ ಉಡುಪ ಅವರು ಎಂ.ಕೆ.ಇಂದಿರಾ ನಂತರದ ತಲೆಮಾರಾದರೂ ಚಿಂತನೆಯಲ್ಲಿ ಅವರಿಗಿಂತ ಮುಂದಿಲ್ಲವೆಂಬುದು ತಿಳಿಯುತ್ತದೆ.

ಮಾನದಂಡ ಕಥೆಯಲ್ಲಿ ಬರುವ 'ಅಕ್ಕಮ್ಮ' ಗಂಡನ ಹಿಂಸೆ ತಾಳಲಾರದೆ ತೌರಿಗೆ ತಪ್ಪಿಸಿಕೊಂಡು ಬಂದವಳು. ಗಂಡನೇ ಬಂದು ಕರೆದರೂ, ಮರುಮದುವೆಯಾಗುವೆನೆಂದು, ತಲೆಬೋಳಿಸುವೆನೆಂದು ಬೆದರಿಕೆ ಹಾಕಿದರೂ ಹೋಗದಿರುವಂತಹ ಗಟ್ಟಿತನವನ್ನು ತಾಳಿದಳು. ಆದರೆ ಈ ದಿಟ್ಟತನ ಮೇಲುನೋಟದ್ದು ಸಂಪ್ರದಾಯವನ್ನು ಮೀರಬೇಕೆಂಬ ಹಠವಲ್ಲ ; ಆ ಹಿಂಸೆಯನ್ನು ಅನುಭವಿಸಲಾರೆನೆಂಬ ಅಸಹಾಯಕತೆ.

ಆದ್ದರಿಂದ ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಬೆಳೆದ ತಾನು ಹಾಗೆ ಮಾಡಿದ್ದು ಸರಿಯೇ ಎಂಬ ಆತಂಕದ ಮುಳ್ಳು ಚುಚ್ಚುತ್ತಲೇ ಇತ್ತು. ಗಂಡನ ಮನೆಗೆ ಹೋಗದೇ ಇರುವಂತಹದು ಆಕೆಗೆ ಅನಿವಾರ್ಯವಾದ ನಿಲುವಾಗಿತ್ತೇ ಹೊರತು, ಸಂಪ್ರದಾಯವನ್ನು ಮೀರುವಿಕೆಯಲ್ಲ. ಆದಕಾರಣ ಮಾನಸಿಕ ಅಸ್ವಸ್ಥತೆಗೆ ಒಳಗಾಗುತ್ತಾಳೆ. ಇದರಿಂದ ಬಿಡುಗಡೆಗೊಳ್ಳಲು ನಿರೂಪಕಿಯ ಮನೆಯ ಹಂಗಾಮಿ ಕೆಲಸಕ್ಕೆ ಸೇರುತ್ತಾಳೆ. ಇವರ ಸಂಕಷ್ಟವನ್ನು ಅರಿತುಕೊಳ್ಳಲಾರದ ಇಲ್ಲಿನ ಸಂಪ್ರದಾಯದ ಮನಸ್ಸುಗಳು ಆಕೆಯ ಬಗ್ಗೆ ಭಿನ್ನವಾದ ರೀತಿಯಲ್ಲಿ ಯೋಚಿಸುತ್ತವೆ. ಅವರ ಕುಹಕ ನಿಂದೆಗಳಿಗೆಲ್ಲ ಕಿವುಡಾಗಿ, ನಿರೂಪಕಿಯಲ್ಲಿ ಮಾನವಪ್ರೀತಿಯನ್ನು ಕಂಡು ಜೀವನ ಸಾಗಿಸುತ್ತಾಳೆ. ದುರಂತವೆಂದರೆ ಇಂತಹ ಕಷ್ಟದಲ್ಲೂ ಮಗನ ಏಳಿಗಾಗಿ ದುಡಿದ ಆಕೆಯನ್ನು ನಗರದಲ್ಲಿ ನೌಕರಿ ಪಡೆದ ಮಗ ದೂರ ಇರಿಸಿದ್ದು, ಪುರುಷಪ್ರಧಾನ ಕ್ರೌರ್ಯ ಯಾವ ಬಗೆಯದು ಎಂಬುದನ್ನು ಸೂಚಿಸುತ್ತದೆ.

ಸಮುದ್ಧರಣ ಕಥೆಯಲ್ಲಿ ರಾಜಿ ಮತ್ತು ಗುಲಾಬಿಯರು ಸಾಮಾಜಿಕ ಸ್ತರಗಳಲ್ಲಿ ತುಂಬಾ ಅಂತರವಿದ್ದರೂ ಹೆಣ್ಣುಗಳಾಗಿ ಅವರ ಪಾಡಿನಲ್ಲಿ ಕೆಲವು ಸಮಾನ ಅಂಶಗಳಿವೆ. ಪುರುಷಪ್ರಧಾನ ಮತ್ತು ಜಮೀನ್ದಾರಿ ವ್ಯವಸ್ಥೆಯಲ್ಲಿ ಹೆಣ್ಣಿನ ಪಾಡನ್ನು ಈ ಕಥೆ ಸೂಕ್ಷ್ಮವಾಗಿ ಚಿತ್ರಿಸುತ್ತದೆ. ನಗರದಲ್ಲಿ ಹುಟ್ಟಿ, ಕಾಲೇಜು ಮೆಟ್ಟಿಲು ಹತ್ತಿದ 'ರಾಜಿ' ಮಲೆನಾಡಿನ ಕೃಷಿಕ ಸದಾಶಿವನನ್ನು ಮದುವೆಯಾದಾಗ ಈ ಪರಿಸರದ ಬಗ್ಗೆ ಸಂತೋಷ ಹೊಂದಿದ್ದಳು. ಜಮೀನ್ದಾರಿ ಕುಟುಂಬದಲ್ಲಿ ಬಂದ ಸದಾಶಿವ ಹೆಚ್ಚು ಓದಿದವನೂ ಅಲ್ಲ ; ಸಂಸ್ಕೃತಿ ಸಭ್ಯತೆ ಕಲಿತವನೂ ಅಲ್ಲ. ತನ್ನ ಮನೆಯಲ್ಲೇ ತಂದೆಯ ಮರೆಮಾಚಿ ತಾಯಿ–ಮಗ ಕದಿಯುವ ಸಂಸ್ಕಾರ ಹೊಂದಿದ್ದರು. ಕದ್ದ ಸಂಪಾದನೆಯಲ್ಲಿ ವ್ಯಭಿಚಾರಕ್ಕೆ ಬಿದ್ದಿದ್ದ. ಮದುವೆ ಮಾಡಿದರೆ ಸರಿ ಹೋದಾನೆಂದು ಕುಟುಂಬ ಈತನಿಗೆ ಬೇಗನೆ ಮದುವೆ ಮಾಡಿತ್ತು. ರಾಜಿಯ ಸೌಂದರ್ಯ, ಸಭ್ಯತೆಯನ್ನು ಅರ್ಥಮಾಡಿಕೊಳ್ಳದೆ ದುಶ್ಚಟವನ್ನು ಮರೆಯಲ್ಲಿ ಮುಂದುವರಿಸಿದ್ದ. ಇವನ ಲೈಂಗಿಕ ಶೋಷಣೆಯನ್ನು ತಿರಸ್ಕರಿಸಿದ ಗುಲಾಬಿ ಒಡತಿಗೆ ಆಗುತ್ತಿರುವ ಅನ್ಯಾಯವನ್ನು ತಿಳಿಸುತ್ತಾಳೆ. ಸಾಕ್ಷಿ ಸಮೇತ ಕಂಡುಹಿಡಿದ ರಾಜಿ ಪ್ರತಿಭಟಿಸುತ್ತಾಳೆ. ಆತ ತನ್ನನ್ನು ಸಮರ್ಥಿಸಿಕೊಳ್ಳಲಿಲ್ಲ ; ಬದಲಾಗಿ ಕ್ಷಮೆಯಾಚಿಸುವ ಸುಲಭದ ದಾರಿ ಹಿಡಿದ. ಹಾಗೆಂದು ರಾಜಿ ಸುಲಭವಾಗಿ ಕರಗಲಿಲ್ಲ. ನಗರದಿಂದ ಬಂದ ಹೆಣ್ಣು ; ತನಗಿಂತ ಹೆಚ್ಚು ಓದಿದವಳು ಎಂಬ ತಿಳುವಳಿಕೆಯಿಂದ ಕ್ಷಮೆಯಾಚಿಸುವ ಮಾರ್ಗ ಹಿಡಿದನೆನ್ನಬಹುದು. ಈ ಮೇಲುಜಾತಿ ದಂಪತಿಗಳ ಎದುರಿನಲ್ಲಿ ಕೆಳವರ್ಗದ ಗುಲಾಬಿ–ಪುಟ್ಟರ ಆದರ್ಶ ದಾಂಪತ್ಯವಿದೆ. ಸದಾಶಿವನ ಕುಟುಂಬ ರಾಜಿಯನ್ನು ಆ ರೀತಿ ಶೋಷಿಸಿದರೆ, ಅದೇ ಜಮೀನ್ದಾರಿ ಕ್ರೌರ್ಯ ಗುಲಾಬಿಯನ್ನು ಶೋಷಿಸಿದ ಬಗೆ ಬೇರೆ. ತಮ್ಮ ಮಗನನ್ನು ಓದಿಸಬೇಕೆಂದು ಕೂಲಿ ಹಣವನ್ನು ಕೂಡಿಟ್ಟು, ಪುಟ್ಟ ಆಕಸ್ಮಿಕ ದುರಂತದಲ್ಲಿ ಮಡಿದಾಗ ಆ ಹಣವನ್ನು ಗುಲಾಬಿಗೆ ನೀಡುವಲ್ಲಿ ವಂಚಿಸುತ್ತದೆ. ಇಲ್ಲಿ ಗಮನಿಸಬೇಕಾದ ವಿಚಾರವೇನೆಂದರೆ ರಾಜಿಯ ತೀರ್ಮಾನಗಳು ಒಟ್ಟು ಭಾರತೀಯ ಮಧ್ಯಮ ವರ್ಗದ ಹೆಣ್ಣುಗಳ ತೀರ್ಮಾನಗಳೇ ಆಗಿರುತ್ತದೆ. ಅಂದರೆ ಆರ್ಥಿಕ ಸ್ವಾವಲಂಭನೆಯಿಲ್ಲದ 'ರಾಜಿ'ಯಂತ ಹೆಣ್ಣು ಸದಾಶಿವನಂತವನ ಲಂಪಟತನಕ್ಕೆ ಧಿಕ್ಕಾರ ಹೇಳಿ ತೌರಿಗೆ ಹೋದರೆ ಬೆಂಕಿಯಿಂದ ಬಾಣಲೆಗೆ ಬಿದ್ದಂತೆಯೆ. ಕೆಳಸ್ತರದ ಗುಲಾಬಿಗೆ ಆರ್ಥಿಕ ಸ್ವಾಲಂಬನೆಯಿದೆ. ಎಲ್ಲಿ ಹೋದರೂ ದುಡಿದೇ ತಿನ್ನಬೇಕು. ಈ ಊರಲ್ಲದಿದ್ದರೆ ಇನ್ನೊಂದು ಊರಿಗೆ ಹೋಗಿ ನೆಲಸುತ್ತಾಳೆ. ಅದು ರಾಜಿಯಂತ ಹಿನ್ನಲೆಯುಳ್ಳವಳಿಗೆ

ಅಸಾಧ್ಯವೆನಿಸಿದೆ. ಆದ್ದರಿಂದ ತನಗೆ ನೆರಳುಬೇಕು, ರಕ್ಷಣೆಬೇಕು, ಭೌತಿಕವಾಗಿ ಸುಖವಾಗಿರಬೇಕು ಎಂದು ಬಯಸುವ ವ್ಯಕ್ತಿತ್ವಕ್ಕೆ, ಸ್ವಂತಿಕೆಗೆ, ಸ್ವಾಭಿಮಾನಕ್ಕೆ ಭಂಗಬಂದರೂ ಸಹಿಸಿಕೊಳ್ಳುವ ಸಹನೆಬೇಕಾದ್ದರಿಂದ ರಾಜಿ ಹೊಂದಾಣಿಕೆಯ ಸೂತ್ರಕ್ಕೆ ಬದ್ಧಳಾಗಬೇಕಾಗುತ್ತದೆ. ಜಮೀನ್ದಾರಿ ಕ್ರೌರ್ಯದಲ್ಲಿ ಗುಲಾಬಿ ಒಡೆಯನನ್ನು ಶಪಿಸಬಲ್ಲಳೇ ಹೊರತು ಉಳಿದಂತೆ ನಿಸ್ಸಹಾಯಕತೆ. ಇನ್ನೊಂದು ಊರಲ್ಲಿ ಬದುಕಲು ಹೊರಟು ನಿಂತವಳಿಗೆ ಗಂಡ–ಮಾವ ಮಾಡಿದ ಮೋಸಕ್ಕೆ ಪ್ರತಿಯಾಗಿ ಗುಲಾಬಿಗೆ ರಾಜಿ ಗುಟ್ಟಾಗಿ ತನ್ನ ಒಡವೆಗಳನ್ನು ನೀಡಿ ಮಾನವೀಯತೆಯನ್ನು ಮೆರೆಯುತ್ತಾಳೆ.

ಈ ಕೃತಿಯ ಮುನ್ನುಡಿಯಲ್ಲಿ "ಮಲೆನಾಡಿನಲ್ಲಿ ಕಂಡೂ ಕಾಣದಂತಿರುವ ಹುಲಿಯ ಹಾಗೆ ಮನುಷ್ಯನ ಜೀವನನ್ನು ಕ್ರೌರ್ಯ ಸುತ್ತುವರಿದಿದೆ ಎಂಬುದು ಕಥೆಯ ಒಟ್ಟಾರೆ ಆಶಯ"[೨೩] ಎಂದು 'ಬಂದನಾಹುಲಿರಾಯನು' ಕಥೆಗೆ ಸಂಬಂಧಿಸಿದಂತೆ ಹೇಳಿದ ಮಾತಾದರೂ ಇದು ಕೃತಿಯ ಬಹುತೇಕ ಕಥೆಗಳಿಗೂ ಅನ್ವಯವಾಗುತ್ತದೆ. ಪುರುಷಪ್ರಧಾನ ಮತ್ತು ಜಮೀನ್ದಾರಿ ಕ್ರೌರ್ಯದಲ್ಲಿ ಸ್ತ್ರೀ ಮೇಲು–ಕೀಳೆನ್ನದೆ ಶೋಷಣೆಗೆ ಒಳಗಾಗಿದ್ದಾಳೆ. ರಾಜಿ, ಅಕ್ಕಮ್ಮ ಮೊದಲಾದ ಸ್ತ್ರೀಯರು ಶೋಷಣೆಗೆ ಒಳಗಾದರೂ ತಮ್ಮ ತಮ್ಮ ಮಿತಿಯಲ್ಲಿ ಮೀರುವ ಪ್ರಯತ್ನ ಮಾಡಿದ್ದಾರೆ. ಆದರೆ ಚೌಕಟ್ಟನ್ನು ಮೀರಿ ಹೊರಬಾರಲಾಗದೆ ಅಶಕ್ತರಾಗಿದ್ದಾರೆ.

ಸ್ತ್ರೀ : ಶೂದ್ರ ಸಮುದಾಯ

ಮಲೆನಾಡ ಪರಿಸರದ ಶೂದ್ರ ಸಮುದಾಯದ ಸ್ತ್ರೀಯರ ಬದುಕನ್ನು ಕುವೆಂಪು ತಮ್ಮ ಕಥಾಸಾಹಿತ್ಯದಲ್ಲಿ ಸಮಗ್ರವಾಗಿಯೇ ತಂದಿದ್ದಾರೆನ್ನಬಹುದು. ವಸಾಹತುಶಾಹಿಯ ಫಲವಾಗಿ ಸಾಂಸ್ಕೃತಿಕ ಸ್ಥಿತ್ಯಂತರದ ಬಹುಸೂಕ್ಷ್ಮರೂಪಗಳನ್ನು ಪ್ರತಿನಿಧಿಸುವಂತ ಸ್ತ್ರೀಯರು ಚಿತ್ರಿತರಾಗಿದ್ದಾರೆ. ಹಾಗೆಯೇ ಸ್ತ್ರೀ ಶೋಷಣೆಯ ಬಹುಮುಖ ಆಯಾಮಗಳನ್ನು ಕೂಡ ಅವರ ಕೃತಿಗಳಲ್ಲಿ ಕಾಣಬಹುದಾಗಿದೆ. ಶೂದ್ರ ಸಮುದಾಯದ ಒಕ್ಕಲಿಗರ ಸ್ತ್ರೀಯರ ಬದುಕು ಪ್ರಧಾನವಾಗಿದೆ ಎಂಬುದನ್ನು ಗಮನಿಸಬೇಕು. ಮಲೆನಾಡ ಪರಿಸರದ ಒಕ್ಕಲಿಗ ಸಮುದಾಯದ ಜಮೀನ್ದಾರಿ ಪದ್ಧತಿಯಲ್ಲಿ ಮತ್ತು ಪುರುಷಪ್ರಧಾನ ಶೋಷಣೆಯ ಅಡಿಯಲ್ಲಿ ಬರುವ ಸ್ತ್ರೀಯರ ಬದುಕು ಅತ್ಯಂತ ಧಾರುಣವಾದದ್ದು ಮತ್ತು ಆ ಶೋಷಣೆಯನ್ನು ಅಂತಸ್ಥವಾಗಿಸಿಕೊಂಡು ಆ ಶೋಷಣೆಯ ಮುಂದುವರಿಕೆಯ ವಾರಸುದಾರರೂ ವಾಹಕರೂ ಆಗಿ ಸ್ತ್ರೀಯರೇ ಇರುವುದು ಗಮನಿಸಬೇಕಾದ ಸಂಗತಿ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಜಟ್ಟಮ್ಮ, ಲಕ್ಕಮ್ಮ, ನಾಗತ್ತೆ, ನಾಗಕ್ಕ, ರಂಗಮ್ಮ, ಮಂಜಮ್ಮನಂತವರು ಪುರುಷಪ್ರಧಾನ ಮತ್ತು ಜಮೀನ್ದಾರಿ ಯಜಮಾನಿಕೆಯ ಕ್ರೌರ್ಯಕ್ಕೆ ಒಳಗಾದವರು. ಜಟ್ಟಮ್ಮನಂತಹ ಸುಂದರಳಾದ ಹೆಂಡತಿಯಿದ್ದೂ ಗುಹ್ಯರೋಗಕ್ಕೆ ತುತ್ತಾದ 'ಸಿಂಭಾವಿ ಭರಮೈ ಹೆಗಡೆ' ಎಂಬ ಶ್ರೀಮಂತ ತನ್ನ ಪುರುಷತ್ವವನ್ನು ಪರೀಕ್ಷಿಸಲು ಇನ್ನೊಂದು ಹೆಣ್ಣನ್ನು ಬಯಸಿದ್ದಾನೆ. ಜಟ್ಟಮ್ಮ ಈ ಮತ್ತೊಂದು ಮದುವೆಯನ್ನು ವಿರೋಧಿಸುವುದಿಲ್ಲ. ಇದಕ್ಕೆ ಕಾರಣ ಈ ಪರಿಸರದಲ್ಲಿ ಪುರುಷಪ್ರಧಾನತೆಯನ್ನು ವಿರೋಧಿಸುವಲ್ಲಿ ಸ್ತ್ರೀಯರು ಅಶಕ್ತರಾಗಿರುವುದು. ಇನ್ನೊಂದು ಕಾರಣ ಮಕ್ಕಳು ಹುಟ್ಟದಿರಲು ಸ್ತ್ರೀಯಲ್ಲಿಯೇ ದೋಷವಿದೆ ಎಂಬ ನಂಬಿಕೆ ಬಲವಾಗಿರುವುದು. ಆದರೆ ಯಾವ ಹೆಣ್ಣನ್ನು ತರಬೇಕೆಂಬ ಬಗ್ಗೆ ಆಕೆಯ ವಾದವಿದೆ. ದಾಯಾದಿಮತ್ಸರದ ಹಿನ್ನೆಲೆಯಲ್ಲಿ

ತನ್ನ ಚಿಕ್ಕಪ್ಪನ ಮಗಳಾದ ಮಂಜಮ್ಮನನ್ನು ತರುವ ವಿಷಯದಲ್ಲಿ ಕಟುವಾಗಿ ವರ್ತಿಸುತ್ತಾಳೆ. ಯಾವಾಗ ತಾನು ತರಬಯಸಿದ ಚಿನ್ನಮ್ಮ ತನ್ನ ವೈಧವ್ಯಕ್ಕೆ ಕಾರಣವಾಗಬಹುದು ಎಂಬ ಶಂಕೆ ಉಂಟಾಯಿತೊ ಆಗ ಮಂಜಮ್ಮನನ್ನು ಸ್ವೀಕರಿಸುತ್ತಾಳೆ. ಲಕ್ಕಮ್ಮ ಅತ್ತಿಗೆಯ ಮೇಲಿನ ದ್ವೇಷದಿಂದ ಯಾವ ಹಳೆಮನೆಯನ್ನೂ, ಅಲ್ಲಿನ ಮಂಜಮ್ಮನನ್ನು ಟೀಕಿಸಿದ್ದಳೊ ಅದೇ ಮನೆಯನ್ನು ಆಕೆ ಸೇರುವಂತಾಯಿತು. ಇಲ್ಲಿ ಜಟ್ಟಮ್ಮ-ಲಕ್ಕಮ್ಮ-ಮಂಜಮ್ಮರಿಗೆ ಆಯ್ಕೆಯ ಅವಕಾಶಗಳಿಲ್ಲ. ಅವರ ಬೇಕುಬೇಡಗಳು ಪುರುಷಪ್ರಧಾನ ಅಧೀನತೆಯಲ್ಲಿ ಮುಖ್ಯವಾಗದ ಸಂಗತಿಗಳಾಗಿವೆ. ಆದ್ದರಿಂದ ಅವರ ಪ್ರತಿಭಟನೆ ಅಡಿಗೆ ಮನೆಯೊಳಗಿನ, ಹಿತ್ತಲಿನ ಜಗಳ, ನೋವು, ನಿರಾಶೆಗಳಲ್ಲಿ ವ್ಯಕ್ತವಾಗುತ್ತದೆ ಎಂಬುದು ಸೂಕ್ಷ್ಮವಾಗಿ ಗಮನಿಸಬಹುದು. ಸಿಂಭಾವಿ ಭರಮೈ ಹೆಗಡೆ ಶ್ರೀಮಂತ ಜಮೀನ್ದಾರ. ಆದರೆ ಆತನ ಮನೆಯ ಸ್ತ್ರೀಯರು ಆರ್ಥಿಕವಾದ ಹಿನ್ನಲೆಯಲ್ಲಿ ಸಾಮಾನ್ಯ ಸ್ತ್ರೀಯರ ಪಾಡಿಗಿಂತ ಮೇಲೇನಿರಲಿಲ್ಲ. ಜಟ್ಟಮ್ಮ ಮತ್ತು ಲಕ್ಕಮ್ಮ ತಮ್ಮ ಪುಟ್ಟ ಖರ್ಚುಗಳಿಗೆ 'ಕದರಡಿಕೆ'ಯನ್ನು ಅವಲಂಭಿಸಿದ್ದರು. ಯಜಮಾನನಿಗೆ ತಿಳಿಯದಂತೆ ಹಾಗೂ ಪರಸ್ಪರ ಕದ್ದುಮುಚ್ಚಿ ಸಂಚಾರಿ ವ್ಯಾಪಾರಿಯಾದ ಕರ್ಮೀನುಸಾಬರಿಗೆ ಮಾರುತ್ತಿದ್ದರು. ತಮಗೆ ಬೇಕಾದ ಸಣ್ಣಪುಟ್ಟ ವಸ್ತುಗಳನ್ನು, ತಿಂಡಿ-ತಿನಿಸುಗಳನ್ನು ಪಡೆಯುತ್ತಿದ್ದರು. ಈ ವ್ಯವಹಾರ ಕೂಡ ನೇರವಾಗಿಯಲ್ಲ. ತಾವು ನಂಬಿದ ಆಳುಗಳ ಮೂಲಕ ನಡೆಯುವಲ್ಲಿ ಆ ಆಳುಗಳು ಮತ್ತು ಇದು ರಹಸ್ಯವಾಗಿ ನಡೆಯುವ ವ್ಯವಹಾರವಾದುದರಿಂದ ವ್ಯವಸ್ಥಿತವಾಗಿಯೇ ವ್ಯಾಪಾರಿಗಳು ಮೋಸ ಮಾಡುತ್ತಿದ್ದರು. ಇದನ್ನು ವಿರೋಧಿಸಲು ಸಾಧ್ಯವಾಗದೆ ತಮ್ಮ ಪಾಲಿಗೆ ಬಂದದ್ದನ್ನು ಪಡೆಯುತ್ತಿದ್ದರು. ಅತ್ತಿಗೆ ನಾದಿನಿಯರಲ್ಲಿ ಪೈಪೋಟಿಯಾಗಿರುವ ಕದರಡಿಕೆಯ ಸಂಗತಿಯೂ ಅವರಲ್ಲಿ ಆಗಾಗ ನಡೆಯುವ ಜಗಳಕ್ಕೆ ದಾರಿ ಮಾಡಿಕೊಡುತ್ತಿತ್ತು. ಮಲೆನಾಡಿನ ಪರಿಸರದಲ್ಲಿ ಇತ್ತೀಚಿನವರೆಗೂ ಕೂಡ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ತಮಗೆ ಬೇಕಾದ ಬಳೆ, ರಿಬ್ಬನ್, ಪೌಡರು, ಸೋಪು ಇತ್ಯಾದಿ ಅಲಂಕಾರ ಸಾಧನಗಳನ್ನು ಪಡೆಯುವಲ್ಲಿ ಕದರಡಿಕೆ, ಕದರುಭತ್ತ ಅಥವಾ ಅಕ್ಕಿಯನ್ನು ಪುರುಷರಿಗೆ ತಿಳಿಯದಂತೆ ಸಂಚಾರಿ ವ್ಯಾಪಾರಸ್ಥರಿಗೆ ನೀಡಿ ಪಡೆಯಬೇಕಾದ ಸ್ಥಿತಿ ಇತ್ತು. ಇದು ಮಲೆನಾಡ ಪರಿಸರದ ಸ್ತ್ರೀ ಆರ್ಥಿಕವಾಗಿ ಪರಾವಲಂಬಿಯಾಗಿ ಬದುಕುತ್ತಿದ್ದ ಶೋಚನೀಯ ಸ್ಥಿತಿಯನ್ನು ಸೂಚಿಸುತ್ತದೆ.

ಕೋಣೂರು ರಂಗಮ್ಮ ಹಳೆಮನೆ ದೊಡ್ಡಣ್ಣ ಹೆಗಡೆಗೆ ಪಣವಾಗಿ ಬಂದ ವಧು. ಹಳೆಮನೆಯ ಅಸಂಸ್ಕೃತ ವಾತಾವರಣದಲ್ಲಿ ಸುಸಂಸ್ಕೃತವಾಗಿ ಬದುಕಲು ಪ್ರಯತ್ನಪಟ್ಟವಳು. ತಿರುಪತಿಯಾತ್ರೆಗೆ ಹೋದ ಗಂಡನ ನಿರೀಕ್ಷೆಯಲ್ಲಿ ಮಾನಸಿಕ ಸ್ಥಿಮಿತ ಕಳೆದುಕೊಂಡ ಆಕೆಗೆ ಪ್ರೀತಿಯನ್ನು ತೋರುವರಿಲ್ಲದೆ ಮೈದುನ ತಿಮ್ಮಪ್ಪ ಹೆಗಡೆಯ ಧೂರ್ತವರ್ತನೆಯಿಂದ ಬಂಧಿಯಾದವಳು. 'ಹುಚ್ಚು ಹೆಗ್ಗಡತಿ' ಬಿರುದು ಪಡೆದುಕೊಂಡು ಪಡಬಾರದ ಪಾಡುಪಟ್ಟವಳು. ನಾದಿನಿ ಮಂಜಮ್ಮ ಸಿಂಭಾವಿಯ ಲಕ್ಕಮ್ಮನಂತಾಗದೆ ಅತ್ತಿಗೆಯ ಕಷ್ಟಕ್ಕೆ ನೊಂದವಳು ; ನೆರವಾದವಳು. ಆದರೆ ತಂದೆ-ಅಣ್ಣರ ಯಜಮಾನಿಕೆಯಲ್ಲಿ ನಿಸ್ಸಹಾಯಕಳಾದ ಈಕೆ ಇಳಿ ವಯಸ್ಸಿನ ಭರಮೈ ಹೆಗಡೆಯನ್ನು ಮದುವೆಯಾಗಬೇಕಾಗುತ್ತದೆ. ಮಂಜಮ್ಮನ ಮೇಲೆ ತಂದೆಯ ಬಿಗಿ ಹಿಡಿತ ಹೇಗಿತ್ತು ಎಂದರೆ ಆಕೆ ಪಾದದವರೆಗೆ 'ಸೀರೆ' ಉಡುವಂತಿರಲಿಲ್ಲ. ಮೊಳಕಾಲಿನ ನಡುವರೆಗೆ ಮಾತ್ರ ನೀಡಿರುವ ಗೊಬ್ಬೆ ಸೆರಗನ್ನು ಹಾಕಬೇಕಿತ್ತು. ಮೀಯುವುದರಲ್ಲಿಯೂ, ಬಟ್ಟೆ ಒಗೆಯುವುದರಲ್ಲಿಯೂ ಹೊತ್ತು ಕಳೆಯಬಾರದೆಂದು ಸದಾ ತಾಕೀತು ಮಾಡುವುದರಿಂದ ಆಕೆಯ

ಸೀರೆ ಕೊಳಕಾಗಿರುತ್ತಿತ್ತು. ಆ ಬಗ್ಗೆ ಆಕೆಗೆ ಲಕ್ಷ್ಯವೇ ಇರಲಿಲ್ಲ. ಹಾಗೆಯೇ ಆಕೆ ತೊಟ್ಟಿರುವ ಸ್ಥೂಲಾಭಿರುಚಿಯ ಭಾರಾಲಂಕಾರಗಳು (ಒಡವೆಗಳು) ಕೂಡ ತಂದೆಯ ಇಷ್ಟವನ್ನೇ ಅವಲಂಬಿಸಿತ್ತು. ಆ ಕಾಲದ ಬಹುತೇಕ ಮಲೆನಾಡ ಹೆಣ್ಣು ಮಕ್ಕಳಿಗೆ ಉಡುವ-ತೊಡುವ ಅಭಿರುಚಿಯು ಪುರುಷನ ಇಚ್ಛೆಯನ್ನೇ ಅವಲಂಬಿಸಿತ್ತು ಎಂಬುದರ ಕಡೆ ಮಂಜಮ್ಮನ ಸಂದರ್ಭ ಬೆಳಕು ಚೆಲ್ಲುತ್ತದೆ. ಮೇಲುಜಾತಿಯ ಆಚಾರಗಳನ್ನು ಕುರುಡಾಗಿ ಆಚರಿಸುವ ಹಳೆಮನೆ ಶಂಕರಪ್ಪ ಹೆಗ್ಗಡೆಯ ಹೆಂಡತಿ ಸೀತಮ್ಮ ಮಾನಸಿಕವಾಗಿ ತೃಪ್ತಿಯಿಲ್ಲದೆ, ಬಂಧು ಬಳಗದವರ ಜೊತೆ ಮಡಿವಂತಿಕೆಯ ಕಾರಣ ಸೇರಲಾಗದೆ ಗಾಣಕ್ಕೆ ಕಟ್ಟಿದ ಕೋಣದಂತೆ ಯಾವ ಸಂವೇದನೆಯಿಲ್ಲದೆ ಬದುಕುತ್ತಾಳೆ.

ಪಿತೃಪ್ರಧಾನವಾದ ಯಜಮಾನಿಕೆಯ ಸಂಸ್ಕೃತಿಯೊಳಗೇ ಅರಳಿದ ಹೆಣ್ಣು ಚಿನ್ನಮ್ಮ. ತಾಯಿಯ ಚೆಲುವನ್ನೆಲ್ಲ ಪಡೆದ ಆಕೆಯ ಸೌಂದರ್ಯವನ್ನು ಗಮನಿಸದ ಪರಿಸರದಲ್ಲಿ ಸಂಸ್ಕೃತಿ ದಾರಿದ್ರ್ಯದಿಂದ ಕಾಡುಕಾಡಾಗಿ ಕೊಳಕುಕೊಳಕಾಗಿದ್ದಳು. ತಂದೆ ಒಬ್ಬ ಗೇಣಿದಾರನಾಗಿದ್ದು, ಮನೆತನದ ಹೆಸರೊಂದು ದೊಡ್ಡದಾಗಿರುವ ವೆಂಕಟಪ್ಪನಾಯಕ ಧೂರ್ತ, ವಂಚಕ. ಅಜ್ಜಿಯ ಆರೈಕೆಯಲ್ಲಿ ಹುಲುಸಾಗಿ ಬೆಳೆದ 'ಚಿನ್ನಮ್ಮ' ಮಲೆನಾಡ ಪರಿಸರದ ಇತರ ಹುಡುಗಿಯರಂತೆಯೆ ನಯ ನಾಜೂಕುಗಳಿಂದ ದೂರವಾಗಿ ಒರಟು ಒರಟಾಗಿ ಬೆಳೆದವಳು. ಇವಳಿಗೆ ತಕ್ಕಮಟ್ಟಿಗೆ ರಾಮಾಯಣ-ಮಹಾಭಾರತ ಓದಬಲ್ಲ, ಸುಸಂಸ್ಕೃತ ನಡವಳಿಕೆಯನ್ನು ರೂಪಿಸಿಕೊಂಡಿದ್ದ 'ಮುಕುಂದಯ್ಯ' ಬಾಲ್ಯದ ಗೆಳೆಯ. ಅವನ ಸಂಪರ್ಕ, ಸಾಮಿಪ್ಯಗಳು ಚಿನ್ನಮ್ಮನಲ್ಲಿಯೂ ಸುಸಂಸ್ಕೃತ ನಡವಳಿಕೆಗಳು ರೂಪಗೊಳ್ಳಲು ಕಾರಣವಾಗುತ್ತದೆ. ಆದಕಾರಣ ಅವನ ಜೀವನ ಸಂಗಾತಿಯಾಗಲು ಮಲೆನಾಡ ಪರಿಸರದಲ್ಲಿ ಊಹಿಸಿಕೊಳ್ಳಲು ಸಾಧ್ಯವಾಗದಂತಹ ರೀತಿಯಲ್ಲಿ ಸಂಪ್ರದಾಯಸ್ಥ, ಪುರುಷಪ್ರಧಾನ ಯಜಮಾನಿಕೆಯ ಎಲ್ಲ ಕಟ್ಟುಪಾಡುಗಳನ್ನು ಮೀರಿ ಸಾಹಸಮಾಡುವುದು ಸಾಮಾನ್ಯ ಸಂಗತಿಯಲ್ಲ. ಇದು ಬದಲಾಗುತ್ತಿದ್ದ ಕಾಲಘಟ್ಟದಲ್ಲಿ ಸಾಮಾಜಿಕ ಧೋರಣೆಗಳು ಸ್ತ್ರೀಯ ಹಿನ್ನಲೆಯಲ್ಲಿ ಪಲ್ಲಟವಾಗುತ್ತಿರುವುದರ ದ್ಯೋತಕವಾಗಿ ಚಿತ್ರಿತವಾಗಿದೆ. ಶಿಷ್ಟಾಚಾರದ ಪರಿಸರದಲ್ಲೇ ಬೆಳೆದ ಚಿನ್ನಮ್ಮ ಮದುವೆಯ ಶಿಷ್ಟಾಚಾರಗಳನ್ನೆಲ್ಲಾ ತಣ್ಣನೆಯ ರೀತಿಯಲ್ಲಿ ಮೀರುತ್ತಾಳೆ. ಹಾಗೆ ತಾನು ಬಯಸಿದವನನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾಳೆ. ಈ ಬಗ್ಗೆ ಕೋಣೂರು ರಂಗಪ್ಪಗೌಡ ತನ್ನ ಮನೆತನದ ಹೆಸರಿಗೆ ಮಸಿ ಬಳಿವ ಘಟನೆಯೆಂದು ಕುಪಿತನಾಗುತ್ತಾನೆ. ಹೆಣ್ಣನ್ನು ಅಪಹರಿಸುವುದು ಕೆಳಕೋಮಿನ ಜನರ ನಡವಳಿಕೆ, ಇದು ತಮ್ಮಂತಹ ಉತ್ತಮ ಜಾತಿಯವರಿಗೆ ಅವಮಾನಕರವಾದ ಮತ್ತು ಹೇಯವಾದ ಕಾರ್ಯವಾಗಿತ್ತು. ಅಂತಹದನ್ನು ತನ್ನ ತಮ್ಮ ಮಾಡಿದನೆಂದು ಅಪಮಾನದಿಂದ ಬುಸುಗುಡುತ್ತಿದ್ದ. ಆದರೆ ತಮ್ಮನ ನಡವಳಿಕೆಗಿಂತಲೂ ಹೆಣ್ಣಿನ ನಡವಳಿಕೆ ಇನ್ನಷ್ಟು ಹೇಯವಾದುದೆಂದು ಭಾವಿಸುತ್ತಾನೆ.

"ಮದುವೆಯಾಗುವ ಮುನ್ನ, ಮತ್ತೊಬ್ಬ ಗಂಡಸಿನ ಜೊತೆ ಓಡಿ ಹೋಗುವ ಹೆಂಗಸಂತೂ ಖಂಡಿತವಾಗಿಯೂ ಗರತಿಯಾಗಿರಲು ಯೋಗ್ಯಳೇ ಅಲ್ಲ. ಅಂಥವಳ ಜೊತೆ ಸಂಸಾರ ಮಾಡುವುದೂ ಒಂದೇ, ಸೂಳೆ ಕಟ್ಟಿಕೊಳ್ಳುವುದೂ ಒಂದೆಯಾಗಿ"[೨೪] ತೋರುತ್ತದೆ. ರಂಗಪ್ಪಗೌಡನಿಗೆ ತನ್ನ ಜಾತಿಯ ಹೆಣ್ಣು ಆ ರೀತಿ ಮಾಡುವುದು ಮಹಾ ಅಪರಾಧವಾಗಿಯೂ, ತುಚ್ಛವಾಗಿಯೂ, ಸಂಸಾರಮಾಡಲು

ಯೋಗ್ಯಳಲ್ಲವಾಗಿ ಕಾಣುತ್ತಾನೆ. ಇದು ಬರೀ ರಂಗಪ್ಪಗೌಡನ ಮಾತಲ್ಲ ಇಡೀ ಆ ಸಮುದಾಯವೇ ಹಾಗೆ ಯೋಚಿಸುತ್ತದೆ. ಇಂತಹ ರೀತಿಯಲ್ಲಿ ಯೋಚಿಸುವ ಪರಿಸರದಲ್ಲಿ ಮುಕುಂದಯ್ಯ ಎದುರಾಗುವ ಸಮಸ್ಯೆಯನ್ನು ಎದುರಿಸಲು ಸಿದ್ಧವಾಗಿದ್ದಾನೆ. ಆದರೆ ಹೆಚ್ಚು ಆತಂಕಕ್ಕೆ ಒಳಗಾದವಳು ಚಿನ್ನಮ್ಮ. "ಮುಕುಂದಯ್ಯ ಗಂಡಸು ; ಅವನ ಪೂರ್ವ ಚರಿತ್ರೆ ಏನೆ ಇರಲಿ ಅದನ್ನು ಸಮಾಜ ಲೆಕ್ಕಿಸುವುದಿಲ್ಲ ; ಯಾರು ಬೇಕಾದರೂ ಹೆಣ್ಣು ಕೊಡುತ್ತಾರೆ. ಆದರೆ ತಾನು ಹೆಣ್ಣು ; ತನ್ನನ್ನು ಮುಕುಂದಯ್ಯ ಕೈ ಬಿಡುವ ಪಕ್ಷದಲ್ಲಿ ಲೋಕವೆ ಕೈಬಿಟ್ಟಂತೆ ; ತನ್ನಗಿನ್ನು ಬಾಳ್ವೆ ಎಂಬುದಿಲ್ಲ"[೨೫] ಎಂಬ ಚಿಂತೆಗೆ ಒಳಗಾಗುತ್ತಾಳೆ.

ಮುಕುಂದಯ್ಯನ ಜೊತೆ ಓಡಿಹೋಗಿ ಹಿಂತಿರುಗಿದ ಚಿನ್ನಮ್ಮನಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳಾಗಿದ್ದವು. ಚಿಂತೆ ಮತ್ತು ಗಾಂಭೀರ್ಯ ಮನೆಮಾಡಿತ್ತು. ತನ್ನಿಂದಾಗಿ ತಮ್ಮ ಮನೆಗೆ ಒದಗಿದ ಆರ್ಥಿಕ, ಸಾಮಾಜಿಕ, ಲೌಕಿಕ ಪರಿಸ್ಥಿತಿ ಅರ್ಥವಾಗಿತ್ತು. ಮುಂದಿನ ಹೆಜ್ಜೆಯನ್ನು ಎಚ್ಚರಿಕೆಯಿಂದಲೇ ಇಡುತ್ತಾಳೆ. ಪಾದ್ರಿಯ ಉಪದೇಶಕ್ಕೆ ಆಧುನಿಕತೆಗೆ ತೆರೆದುಕೊಂಡ ದೇವಯ್ಯನ ಭಾವಮೈದುನನಾದ ಮುಕುಂದಯ್ಯ ಅವನನ್ನು ಅನುಸರಿಸಲಿಲ್ಲ ನಿಜ ; ಹಾಗೆ ವಿರೋಧಿಸಲೂ ಇಲ್ಲ. ಆದ್ದರಿಂದ ಪರೋಕ್ಷವಾಗಿ ಆಧುನಿಕತೆಯ ಪ್ರಭಾವ ಅವನಲ್ಲಿ ಬೀರಿದೆ. ಮತಾಂತರವನ್ನು ವಿರೋಧಿಸಿದರೂ, ಮಿಶನ್ ಶಾಲೆಗೆ ಮಕ್ಕಳನ್ನು ಸೇರಿಸುವಲ್ಲಿ ಆಸಕ್ತಿ ತಾಳುತ್ತಾನೆ ಎಂಬುದೇ ಇದಕ್ಕೆ ಸಾಕ್ಷಿ. ಇಂತ ಮುಕುಂದಯ್ಯನ ಪ್ರಭಾವ ಚಿನ್ನಮ್ಮನ ಮೇಲೆ ಪರೋಕ್ಷವಾಗಿ ಬೀರಿದೆ. ಅಣ್ಣನ ತಿರಸ್ಕಾರಕ್ಕೆ ಒಳಗಾದ ಮುಕುಂದಯ್ಯ ಯಾರನ್ನು ಲೆಕ್ಕಿಸದೆ ಹೂವಳ್ಳಿಯಲ್ಲಿಯೇ ಇರುತ್ತಾನೆ. ಚಿನ್ನಮ್ಮ ಗೃಹಿಣಿಯ ಗಾಂಭೀರ್ಯದಲ್ಲಿಯೇ ಮುಕುಂದಯ್ಯನ ಜೊತೆ ನಡೆದುಕೊಳ್ಳುತ್ತಾಳೆ. ಚಿನ್ನಮ್ಮನ ಕ್ರಾಂತಿಕಾರಕ ನಿಲುವಿಗೆ ಮುಕುಂದಯ್ಯನ ಪ್ರಭಾವ ಮಾತ್ರವಲ್ಲ ಮಂಜಮ್ಮ-ಲಕ್ಕಮ್ಮರಿಗೆ ಇಲ್ಲದ ವಾತಾವರಣವೂ ಇತ್ತು ಎಂಬುದನ್ನು ಗಮನಿಸಬೇಕು. ತಂದೆ ತೀರಿಕೊಂಡಿದ್ದಾನೆ, ಅಜ್ಜಿ ಪ್ರೋತ್ಸಾಹವಿದೆ, ನಾಗಕ್ಕನ ಸಹಕಾರವಿದೆ, ಇವೆಲ್ಲ ಅವಳ ಯಶಸ್ಸಿಗೆ ಪೂರಕ ಸಂಗತಿಗಳಾಗಿ ಬರುತ್ತವೆ.

ಮೇಗರವಳ್ಳಿಯ ಅಂತಕ್ಕಶೆಟ್ಟಿ ಮನೆ ಊಳಿಗಮಾನ್ಯ ಶಕ್ತಿಗಳ ಮೋಜಿನತಾಣ. ಲೈಂಗಿಕ ಶೋಷಣೆಗೆ ಒಳಗಾದ ಅಂತಕ್ಕಶೆಟ್ಟಿ ತನ್ನ ಮಗಳು ಕಾವೇರಿಯನ್ನು ಅದೇ ಮಾರ್ಗಕ್ಕೆ ತರುವ ಇಚ್ಛೆ ಹೊಂದಿದವಳು. ದೇವಯ್ಯನಂತಹ ವಿವಾಹಿತನನ್ನು ತನ್ನ ಮಗಳು ಬಯಸುವುದು ಆಕೆಗೆ ಇಷ್ಟವಾದ ಸಂಗತಿ. ಅದಕ್ಕಾಗಿಯೇ ಪ್ರೋತ್ಸಾಹ ನೀಡುವಂತಾಗುತ್ತದೆ. ತಾಯಿಯ ಆರ್ಥಿಕ ಸ್ವಾವಲಂಬನೆಯ ಬದುಕಿನ ಸ್ಥಿತಿಯಿಂದಾಗಿ ಕಾವೇರಿಗೆ ತನ್ನದೇ ಅಭಿಪ್ರಾಯವನ್ನು ಹೊಂದುವ ಸ್ವಾತಂತ್ರ್ಯವಿದೆ. ಆದಕಾರಣ ಸ್ವಜಾತಿಯ ಕೂರಿಪಿಯಾದ ಕಿಟ್ಟಯ್ಯನನ್ನು ಮದುವೆಯಾಗುವುದಕ್ಕಿಂತ ತನಗಿಂತ ಜಾತಿ ಶ್ರೇಣಿಯಲ್ಲಿ, ಆರ್ಥಿಕ ಸ್ಥಿತಿಯಲ್ಲಿ ಮೇಲಿನವನಾದ ದೇವಯ್ಯನಲ್ಲಿ ಇಟ್ಟುಕೊಂಡವಳಾಗಿರುವುದರಲ್ಲಿ ಆಕೆಗೆ ಯಾವ ಅವಮಾನವೂ ಕಾಣುವುದಿಲ್ಲ. ಆದ್ದರಿಂದ ಅಂತಕ್ಕಶೆಟ್ಟಿ ಮತ್ತು ಕಾವೇರಿ ಏಕಕಾಲದಲ್ಲಿ ಲೈಂಗಿಕ ಶೋಷಣೆಗೆ ಒಳಗಾದವರೂ ಹೌದು ; ಅದರ ವಾಹಕರೂ ಹೌದು. ಅವರಿಗೆ ತಮ್ಮ ಹಿತದಲ್ಲಿ ದೇವಮ್ಮನಿಗೆ ದ್ರೋಹವನ್ನುಂಟು ಮಾಡುತ್ತಿದ್ದೇವೆಂಬ ಪರಿವೆಯೇ ಇಲ್ಲದವರು. ಅದೇ, ಜಾತಿಯಲ್ಲಿ ಕೀಳಾದ ಯುವಕನಾದ, ಅವಿವಾಹಿತನಾದ ನಾಯಿಗುತ್ತಿಯನ್ನು ಕಾವೇರಿ ನೋಡುವ ದೃಷ್ಟಿಕೋನವೇ ಬೇರೆ.

"ತನ್ನ ವರ್ಗಕ್ಕೆ ಸೇರದಿರುವ ಸ್ಫುರದ್ರೂಪಿ ಗಂಡು ಪ್ರಾಣಿಯನ್ನೋ, ಒಂದು ಮನೋಹರವಾದ ಪಕ್ಷಿಯನ್ನೋ, ಒಂದು ಸುಲಕ್ಷಣವಾದ ಕೋಳಿ ಹುಂಜವನ್ನೊ, ಒಂದು ಸುಪುಷ್ಪವಾದ ಸುಂದರ ಗೂಳಿಯನ್ನೊ ನೋಡುವುದರಲ್ಲಿ ತಪ್ಪೇನು? ಅಸ್ಪೃಶ್ಯನಾದ ಹೊಲೆಯ ಮನುಷ್ಯ ಜಾತಿಯವನಾಗಿದ್ದರೂ ತನ್ನ ಜಾತಿಯೂ ಅಲ್ಲದೆ, ತನಗೆ ಸರಿಸಮಾನ ಜಾತಿಯೂ ಅಲ್ಲದೆ, ಅತ್ಯಂತ ಕೊನೆಯ ಕೀಳು ಜಾತಿಯವನಾದುದರಿಂದ ಕೊಂಬಿನ ಚೆಲುವಿನ ಹೋರಿಮಿಗವನ್ನು ಮೆಚ್ಚಿ ನೋಡುವಂತೆ ನೋಡಿದಳು".[೨೬]

ಮನುಷ್ಯ ಸಹಜವಾದ ಹೆಣ್ಣು–ಗಂಡಿನ ಆಕರ್ಷಣೆಯ ಹಿನ್ನೆಲೆಯಲ್ಲಿ ನೋಡುವುದಿಲ್ಲ. ಇಲ್ಲಿಯ ನೋಟದಲ್ಲಿ ಜಾತಿಭಾವನೆ, ಮೇಲರಿಮೆ ಕೆಲಸ ಮಾಡುತ್ತದೆ. ಪ್ರಾಣಿಯನ್ನೊ, ಪಕ್ಷಿಯನ್ನೊ ವೀಕ್ಷಿಸುವ ಆಕೆಯಲ್ಲಿ ಹೆಣ್ಣಿಗೆ ಸಹಜವಾದ ನಾಚಿಕೆ, ಮುಜಗರಗಳು ಮೂಡುವುದಿಲ್ಲ. ಈ ಪರಸ್ಪರ ನೋಟ ಅಂತಕ್ಕಶೆಟ್ಟಿಗೆ ಸರಿಕಾಣುವುದಿಲ್ಲ. ಆಕೆಗೆ ಜಾತಿಯಲ್ಲಿ ಮೇಲಾದ ದೇವಯ್ಯನಲ್ಲಿ ಮಗಳು ಇಟ್ಟುಕೊಂಡವಳಾಗಿರುವುದು ಯಾವ ಅವಮಾನವೂ, ಅನೀತಿಯೂ ಆಗಿ ತೋರುವುದಿಲ್ಲ. ಆದರೆ ಜಾತಿಯಲ್ಲಿ ಕೀಳಾದವನಾದ ಕಾರಣ ಆತ ಯುವಕನಾಗಿದ್ದರೂ ಆತನ ಜೊತೆ ಮುಖಕ್ಕೆ ಮುಖಕೊಟ್ಟ ಮಾತನಾಡುವುದು ಅನೀತಿಯಾಗಿ, ಅಪಮಾನವಾಗಿ ತೋರುತ್ತದೆ.

ತಮ್ಮ ಗಂಡಸರು ಹೀಗೆ ಪರಸ್ತ್ರೀಯರ ಜೊತೆ ಸಂಬಂಧ ಇಟ್ಟುಕೊಂಡಿರುವ ಬಗ್ಗೆ ಗಟ್ಟಿಯಾದ ವಿರೋಧವೇ ಇಲ್ಲಿಯ ಸ್ತ್ರೀಯರಲ್ಲಿ ವ್ಯಕ್ತವಾಗುವುದಿಲ್ಲ. ಸ್ತ್ರೀ ಮತ್ತು ಪುರುಷರಿಬ್ಬರಿಗೂ ಅದರಲ್ಲಿಯ ಅಸಹನೀಯತೆಯೂ ಕಾಣುವುದಿಲ್ಲ. ದೇವಮ್ಮನಿಗೆ ತನ್ನ ಗಂಡ ಕಾವೇರಿ ಜೊತೆಗೆ ಮತ್ತು ಪಾದ್ರಿ ಮಗಳ ಜೊತೆಗೆ ಸಂಬಂಧ ಹೊಂದಿರುವುದು ತಿಳಿದಿದೆ. ಆದರೆ 'ಗಂಡಸರ ಸ್ವಭಾವವೇ ಹಾಗೆ' ಎಂದು ಪ್ರತಿಕ್ರಿಯಿಸುವುದನ್ನು, ಸಹಿಸುವುದನ್ನು, ಕ್ಷಮಿಸುವುದನ್ನು ಕಾಣುತ್ತೇವೆ. ಇದು ಅವಿಭಕ್ತ ಕುಟುಂಬದೊಳಗಿನ ಸ್ತ್ರೀಯರ ಅನಿವಾರ್ಯವಾದ ಸ್ಥಿತಿ. ಕುಟುಂಬದ ಚೌಕಟ್ಟನ್ನು ಮೀರಿ ಸ್ವತಂತ್ರವಾದ ವ್ಯಕ್ತಿತ್ವದಿಂದ, ಸ್ವಾಭಿಮಾನದಿಂದ, ತಮ್ಮ ಕಾಲ ಮೇಲೆ ತಾವು ನಿಂತು ಬದುಕನ್ನು ಎದುರಿಸುವ ಶಕ್ತಿಯಾಗಲಿ, ಮಾನಸಿಕ ಸ್ಥೈರ್ಯವಾಗಲಿ ಅವಕಾಶವಾಗಲಿ ಸಾಧ್ಯವಿಲ್ಲದ ಕಾರಣ ಈ ಅಸಹಾಯಕತೆಯೇ ಪುರುಷನ ಶೋಷಣೆಗೆ ಕಾರಣವಾಗಿರುವುದು. ಇವರಿಗೆ ಹೋಲಿಸಿದಾಗ ಚಿನ್ನಮ್ಮನ ಕುಟುಂಬದಲ್ಲಿ ತಂದೆಯೊಬ್ಬನೇ ಅಡ್ಡಿ. ಅವನ ಸಾವಿನ ನಂತರ ಜಮೀನು, ಮನೆ ತಾನೇ ನಡೆಸಬೇಕಾದ ಅಗತ್ಯತೆಯ ಕಾರಣದಿಂದ ಆರ್ಥಿಕವಾಗಿ ಆಧಾರ ಅವಳಲ್ಲಿ ಸ್ವಂತಿಕೆಯನ್ನು, ಛಲವನ್ನು ಮೂಡಿಸಿತ್ತು.

"ಓಹೊ ಈ ಬಾವಿಕೊಪ್ಪದ ಸೀರುಡಿಕೆಯ ಜೋಡಿಯೊ? ನಾಗತ್ತೆ ! ನಾಗಕ್ಕ !"[೨೭] ಎಂದು ನಾಯಿಗುತ್ತಿಯ ಅಪಹಾಸ್ಯದಲ್ಲಿ ಬಾವಿಕೊಪ್ಪದ ನಾಗತ್ತೆ–ನಾಗಕ್ಕರು ಎಲ್ಲರ ತಾತ್ಸಾರಕ್ಕೆ, ಅಪಹಾಸ್ಯಕ್ಕೆ ಒಳಗಾಗಿರುವುದನ್ನು ಸೂಚಿಸುತ್ತದೆ. ವಿಧವೆ ನಾಗತ್ತೆ ಆಸ್ತಿವಂತನನ್ನೇ ಸೀರುಡಿಕೆ ಮಾಡಿಕೊಂಡಿದ್ದಳು. ಭರಮೈ ಹೆಗಡೆ ಸಾಲ ತೀರಿಸಲಾರದೆ ಜಮೀನು ಕಳೆದುಕೊಂಡು ಅವರ ಮನೆಯ ಆಳುಗಳಾಗಿದ್ದರು. ಆರ್ಥಿಕವಾಗಿ ಅಭದ್ರತೆಯ ಹಿನ್ನಲೆಯಲ್ಲಿ ಯಾರಾದರೂ ಆಸ್ತಿವಂತನನ್ನು ಸೊಸೆ ನಾಗಕ್ಕನಿಗೆ ಸೀರುಡಿಕೆ ಮಾಡಲು ಅಲೆಯುತ್ತಾಳೆ. ನಾಗಕ್ಕ ಯಾವ ಪತಿವ್ರತೆಗೂ ಕಡಿಮೆಯಿಲ್ಲದಂತೆ ರೋಗಿಷ್ಠ ಗಂಡನನ್ನು

ಸೇವೆ ಮಾಡಿದ್ದಳು, ಅಲ್ಪಕಾಲದಲ್ಲೇ ವಿಧವೆಯಾದಳು. ದೈಹಿಕವಾದ ಕಾಮನೆಗಳನ್ನು ಕಳೆದುಕೊಂಡಿದ್ದ ನಾಗಕ್ಕನ ಸೌಂದರ್ಯವನ್ನು ಮುಂದೆ ಮಾಡಿಕೊಂಡು ಭದ್ರನೆಲೆಗಾಗಿ ಊರೂರು ಅಲೆಯುತ್ತಿದ್ದಳು ನಾಗತ್ತೆ. ಈ ಕಾರಣಕ್ಕೆ ಲೋಕದ ಅಪಹಾಸ್ಯಕ್ಕೆ ಒಳಗಾಗಿದ್ದಳು. ಸ್ವತಂತ್ರವಾಗಿ ಬದುಕಬೇಕೆಂಬ ಹಂಬಲವುಳ್ಳ ನಾಗಕ್ಕ ಅತ್ತೆಯ ಕುಟಿಲೋಪಾಯಗಳಿಗೆ ಬಲಿಯಾಗುತ್ತಾಳೆ. ಚಿನ್ನಮ್ಮನಿಗೆ ಎಲ್ಲ ಕಷ್ಟಗಳನ್ನು ಸಹಿಸಿಕೊಂಡು, ಆಕೆಯ ಕಷ್ಟಕಾಲದಲ್ಲಿ ನೆರವಾಗುವ, ಮಾನವಪ್ರೀತಿಯ ಸಾತ್ವಿಕ ಪಾತ್ರ ನಾಗಕ್ಕ.

ಮಲೆನಾಡ ಒಕ್ಕಲಿಗ ಸಮುದಾಯದಲ್ಲಿ ಬಹಳ ಹಿಂದಿನಕಾಲದಲ್ಲಿ ಬಾಲ್ಯವಿವಾಹ ಪದ್ಧತಿ ಇತ್ತು ಎನ್ನುತ್ತಾರೆ. ಹುಡುಗಿ ಋತುಮತಿಯಾಗುವುದಕ್ಕಿಂತ ಮೊದಲೇ ಮದುವೆ ಮಾಡಿ ಬಿಡಬೇಕು, ಹಾಗೆ ಮಾಡುವುದರಿಂದ ತಂದೆ-ತಾಯಿಗಳಿಗೆ ಶ್ರೇಯಸ್ಸು ಎಂಬ ನಂಬಿಕೆಯಿತ್ತು. ಸಾಮಾನ್ಯವಾಗಿ ಗಂಡು ಸಂತಾನವಿಲ್ಲದ ಮನೆಗಳಲ್ಲಿ ಈ ಪದ್ಧತಿ ಹೆಚ್ಚು ಪ್ರಚಲಿತದಲ್ಲಿದ್ದು, ಇದನ್ನು 'ಕನ್ಯಧಾರೆ'[೨೮] ಎಂದು ಕರೆಯುವ ವಾಡಿಕೆಯಿತ್ತು. ಹಿಂದೆ ಇದ್ದಿರಬಹುದಾದ ಈ ಸಮುದಾಯದಲ್ಲಿ ಬಾಲ್ಯವಿವಾಹ ಪದ್ಧತಿ ೨೦ನೇ ಶತಮಾನದ ಆರಂಭ ಕಾಲಘಟ್ಟಕ್ಕಾಗಲೆ ಪ್ರಚಲಿತದಲ್ಲಿದ್ದುದು ಕಂಡುಬರುವುದಿಲ್ಲ. 'ಕೂಡಿಕೆ ಅಥವಾ ಸೀರುಡಿಕೆ' ಪದ್ಧತಿ ಈ ಸಮುದಾಯದಲ್ಲಿ ರೂಢಿಯಲ್ಲಿತ್ತು. ವಿಧುರ-ವಿಧವೆಯರ ನಡುವೆ ನಡೆಯುವ ವೈವಾಹಿಕ ಸಂಬಂಧವಿದು. ಆರ್ಥಿಕವಾಗಿ ದುರ್ಬಲವಾಗಿದ್ದ ಕುಟುಂಬಗಳಲ್ಲಿ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇತ್ತು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ನಾಗಣ್ಣನ ಅಪ್ಪ ಮೂರು ಹೆಂಡಂದಿರನ್ನು ಕಳೆದುಕೊಂಡು ತೆರ ಕೊಟ್ಟು ಕೊಟ್ಟು ಮತ್ತೆ ಮದುವೆಯಾಗಲು ಹಣವಿಲ್ಲದೆ ವಿಧವೆಯಾದ ನಾಗತ್ತೆಯನ್ನು 'ಸೀರುಡಿಕೆ' ಮಾಡಿಕೊಂಡಿದ್ದರ ಬಗ್ಗೆ ಪ್ರಸ್ತಾಪವಿದೆ. ಹಾಗೆಯೇ ಸಾಲಗಾರನಾಗಿದ್ದ ವೆಂಕಟಪ್ಪನಾಯಕ ನಾಗಕ್ಕನನ್ನು ಸೀರುಡಿಕೆ ಮಾಡಿಕೊಳ್ಳಲು ಸಿದ್ಧತೆ ಮಾಡಿಕೊಂಡಿದ್ದರ ಪ್ರಸ್ತಾಪವಿದೆ. ಹೆಂಡತಿಯನ್ನು ಕಳೆದುಕೊಂಡ ವಿಧುರರು ಮಾತ್ರವಲ್ಲದೆ ಆರ್ಥಿಕ ಬಲವಿದ್ದು, ಹೆಂಡತಿಯನ್ನುಳ್ಳ ಬಲಿಷ್ಠರೂ ಕೂಡಿಕೆಯನ್ನು ಮಾಡಿಕೊಳ್ಳುತ್ತಿದ್ದರು. ಆದರೆ ಆ ವಿಧವೆ ತನ್ನ ಮೊದಲ ಗಂಡನಿಂದ ಜನಿಸಿದ ಮಕ್ಕಳನ್ನು ಬಿಟ್ಟು ಬರಬೇಕಾಗಿತ್ತು. ಕಾರಣ ಆ ಮಕ್ಕಳಿಗೂ ಎಲ್ಲಿ ಆಸ್ತಿ ನೀಡಬೇಕಾಗುವುದೋ ಎಂದು. ಹಾಗೆಂದು ಎಲ್ಲ ವಿಧವೆಯರು ಕೂಡಿಕೆಯನ್ನು ಮಾಡಿಕೊಳ್ಳುತ್ತಿರಲಿಲ್ಲ. ಸಾಮಾನ್ಯವಾಗಿ ಮಕ್ಕಳಿಲ್ಲದ, ಚಿಕ್ಕವಯೋಮಾನದ ವಿಧವೆಯರು ಈ ರೀತಿ ಮದುವೆಯಾಗುತ್ತಿದ್ದರು. ವಿಧವೆಯನ್ನು ಕೂಡಿಕೆ ಮಾಡುವ ಸಂದರ್ಭದಲ್ಲಿ ಹಿಂಬಾಗಲಿನಿಂದ ಕರೆತಂದು ಮದುವೆ ಮಾಡಲಾಗುತ್ತಿತ್ತು. ಆಕೆ ಮುಂದೆ ತನ್ನ ಹೆಣ್ಣು ಮಕ್ಕಳನ್ನು ಧಾರೆಯೆರೆದು ಕೊಡುವಂತಿರಲಿಲ್ಲ. ಅದು ಅಮಂಗಳ ಎಂಬ ಭಾವನೆ ಮನೆ ಮಾಡಿತ್ತು. ಅಂದರೆ ವಿಧವೆ ಪುನರ್ ವಿವಾಹವಾದರೂ ಅಮಂಗಳದ ನಂಬಿಕೆಯಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ.

ಈ ಕೂಡಿಕೆ ಪದ್ಧತಿಯನ್ನು ಗಮನಿಸಿದಾಗ ವಿಧವಾ ವಿವಾಹದ ಬಗ್ಗೆ ೨೦ನೇ ಶತಮಾನದ ಆರಂಭ ಘಟ್ಟದಲ್ಲಿ ಏನು ರಾಷ್ಟ್ರೀಯ ಚಳುವಳಿಯ ಒಂದು ಭಾಗವಾಗಿ ಬಂದಿರುವ ಸುಧಾರಣಾ ಚಳುವಳಿ ನಡೆಯುತ್ತಿತ್ತು. ಅದು ವಾಸ್ತವವಾಗಿ ಮೇಲುವರ್ಗದ ಅದರಲ್ಲೂ ಬ್ರಾಹ್ಮಣ ಸಮುದಾಯದ ಸಮಸ್ಯೆ, ಕೆಳಸಮುದಾಯದ ಬಹುಸಂಖ್ಯಾತ ಸ್ತ್ರೀಯರಿಗೆ ವೈಧವ್ಯವು ಸಮಸ್ಯೆಯೇ ಆಗಿರಲಿಲ್ಲವೆಂದು 'ಡಿ.ಡಿ.ಕೋಸಂಬಿ'ಯಂಥ ಚಿಂತಕರು ಪ್ರತಿಪಾದಿಸಿದ್ದಾರೆ. ಮಲೆನಾಡಿನ ಪ್ರಾಂತ್ಯದಲ್ಲಿ ಶೂದ್ರ ಸಮುದಾಯದಲ್ಲಿ

ವಿಧವಾ ವಿವಾಹ ಅಂತಹ ಸಮಸ್ಯೆಯೇನೂ ಆಗಿರಲಿಲ್ಲ. ಅದು ಅವರಿಚ್ಛೆಯನ್ನು ಅವಲಂಬಿಸಿತ್ತು ಎನ್ನಬಹುದು. ಈ ಕೂಡಿಕೆ ಪದ್ಧತಿ ವಿಧವೆಗೆ ಈ ಸಮಾಜ ನೀಡಿರುವ ಸವಲತ್ತೆ ಎಂದು ಯೋಚಿಸಿದರೆ ಇಲ್ಲಿಯೂ ಪುರುಷನ ಹಿತಾಸಕ್ತಿಯೇ ಅಡಗಿದೆ. ಆ ಕಾಲದಲ್ಲಿ ಒಬ್ಬ ಪುರುಷ ಅನೇಕ ಬಾರಿ ಮದುವೆಯಾಗುವ ಸಂದರ್ಭಗಳೇ ಹೆಚ್ಚಾಗಿತ್ತು. ಆಸ್ಪತ್ರೆ ಸೌಲಭ್ಯವಾಗಲಿ, ಸಂಚಾರ ಸೌಲಭ್ಯಗಳಾಗಲಿ ಇಲ್ಲದ, ಮೂಢಾಚರಣೆಗಳಿಂದ ತುಂಬಿರುವ ಮಲೆನಾಡ ಪ್ರಾಂತ್ಯದಲ್ಲಿ ಸುಮಾರಾಗಿ ಹೆರಿಗೆಯ ಸಂದರ್ಭದಲ್ಲಿ ಸ್ತ್ರೀ ಸಾವನ್ನಪ್ಪುತ್ತಿದ್ದಳು. ಪುರುಷನಿಗೆ ಹೋಲಿಸಿದಾಗ ಮಹಿಳೆಯ ಸಾವಿನ ಸಂಖ್ಯೆ ಹೆಚ್ಚಿತ್ತು. ಸಂಸಾರ ಸಾಗಬೇಕಾದ್ದರಿಂದ ಮತ್ತೆ ಮತ್ತೆ ಮದುವೆಯಾಗುತ್ತಿದ್ದರು. ಹಾಗೆ ಹೆಣ್ಣಿನ ಸಂಖ್ಯೆ ಕಡಿಮೆಯಿದ್ದರಿಂದ ತೆರಕೊಡಬೇಕಾಗಿತ್ತು. ಆದರೆ ಕೂಡಿಕೆಯಿಂದ ತೆರವನ್ನೊ ಅಥವಾ ಹೆಚ್ಚಿನ ತೆರವನ್ನೊ ನೀಡಬೇಕಾಗಿರಲಿಲ್ಲ. ಆದ್ದರಿಂದ ಕುವೆಂಪು ಕಾದಂಬರಿಯಲ್ಲಿ ಚಿತ್ರಿತವಾಗಿರುವ ನಾಗತ್ತೆ–ನಾಗಕ್ಕ ಪಾತ್ರಗಳಲ್ಲಿ ಕೂಡಿಕೆ ಸಂಪ್ರದಾಯವೆಂಬುದು ಮಹಿಳೆಗೆ ದೊರಕಿರುವ ಸವಲತ್ತು ಎಂಬುದಕ್ಕಿಂದ ಪುರುಷ ಹಿತಾಸಕ್ತಿಗೆ ಹೊಂದಿಕೊಂಡಂತಿರುವ ಮಸಲತ್ತಾಗಿ ತೋರುತ್ತದೆ. "ಕುವೆಂಪು ಕೂಡಿಕೆ ಪದ್ಧತಿಯು ಸ್ತ್ರೀಪರವಾಗಿರುವ ಒಂದು ಪರಿಹಾರಮಾರ್ಗ ಎಂದು ಹೆಮ್ಮೆಯಿಂದ ಎತ್ತಿಹಿಡಿಯುವುದಿಲ್ಲ"[೨೯] ಎಂಬ ಮಾತನ್ನು ಭಾಗಶಃ ಒಪ್ಪುವಂತಹದಾಗಿವೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಊಳಿಗಮಾನ್ಯ ಪದ್ಧತಿಯ ವ್ಯವಸ್ಥೆಯಲ್ಲಿ ಅನೇಕ ಸ್ತ್ರೀಯರು ಸಾತ್ವಿಕ ಸ್ವಭಾವದ ಪ್ರತಿನಿಧಿಗಳಾಗಿ ಬರುತ್ತಾರೆ. ಚಿನ್ನಮ್ಮನ ಅಜ್ಜಿ, ಕೋಣೂರಿನ ದಾನಮ್ಮ ಹೆಗ್ಗಡತಿ, ಬೆಟ್ಟಳ್ಳಿ ದೊಡ್ಡಮ್ಮ ಹೆಗ್ಗಡತಿ ಮುಂತಾದವರನ್ನು ಗಮನಿಸಬಹುದು. ತಬ್ಬಲಿ ಚಿನ್ನಮ್ಮನನ್ನು ಸಾಕಿದ ಆಕೆಯ ಅಜ್ಜಿ, ಮದುವೆ ದಿನ ಚಿನ್ನಮ್ಮ ಓಡಿ ಹೋದಾಗ ಆಕೆ ಅನುಭವಿಸಿದ ನೋವು ಮೊಮ್ಮಗಳು ಎಲ್ಲಿಗೆ ಹೋದಳೋ ಎಂಬ ಆತಂಕದಿಂದಲೇ ಹೊರತು ಬರಬಹುದಾದ ಅಪವಾದ, ನಿಂದೆ, ಸಾಮಾಜಿಕ ಪೀಡನೆ ಯಾವುದೂ ಅಲ್ಲ, ಅದನ್ನೆಲ್ಲ ಮೀರಿದ ನೆಲೆಯಲ್ಲಿ ಕಾಣುವುದರಿಂದಲೇ ಮಗಳು ಹಿಂತಿರುಗಿ ಬಂದ ಮೇಲೆ ಆ ಬಗ್ಗೆ ಯಾವ ಪ್ರಶ್ನೆಯನ್ನು ಮಾಡುವುದಿಲ್ಲ. ಒಳ್ಳೆಯ ಅತ್ತೆ, ತಾಯಿ, ಸತಿಯಾದ ಬೆಟ್ಟಳ್ಳಿ ದೊಡ್ಡಮ್ಮ ಹೆಗ್ಗಡತಿಯ ಸಾತ್ವಿಕ ಶಕ್ತಿಯ ಮುಂದೆ ಕಲ್ಲಿನಂತ ಕಲ್ಲೇಗೌಡರೂ ಹೆದರುತ್ತಿದ್ದರು. "ಪ್ರಾಜ್ಞೆಯಾದ ಆಕೆ ಗಂಡನ ಕ್ರೌರ್ಯದ ಪ್ರಯೋಗದಿಂದ ಪರಾಙ್ಮುಖಿಯನ್ನಾಗಿ ಮಾಡಲು ಸತತವೂ ಪ್ರಯತ್ನಿಸುತ್ತಿದ್ದಳು".[೩೦] ಜನಪದ ಪ್ರತಿರೋಧದ ಶಕ್ತಿಯಾದ ಉಪವಾಸದ ಮೂಲಕವಾದರೂ ಗಂಡನ ಮನಸ್ಸನ್ನು ಬದಲಾಯಿಸುತ್ತಿದ್ದಳು. ಹೊನ್ನಳಿ ಹೊಡೆತವನ್ನು ತಪ್ಪಿಸಲು ಮಗನನ್ನು ಕಳುಹಿಸುವ ಸಂದರ್ಭದಲ್ಲಿ ಆಕೆಯಲ್ಲಿರುವ ಮಾನವೀಯತೆಯನ್ನು ಗುರುತಿಸಬಹುದು.

ಕಾನೂರು ಹೆಗ್ಗಡತಿಯಲ್ಲಿ ಬರುವ ಹೂವಯ್ಯನ ತಾಯಿ ನಾಗಮ್ಮ, ಮುತ್ತಳ್ಳಿ ಗೌರಮ್ಮ ಇವರೆಲ್ಲ ಸಾತ್ವಿಕರಾದ ಸ್ತ್ರೀಯರು. ಆದರ್ಶ ತಾಯಿಯಾದ ನಾಗಮ್ಮ ಹೂವಯ್ಯನನ್ನು ಹೇಗೋ ಹಾಗೆ ಮೈದುನ ಚಂದ್ರೇಗೌಡನ ಮಕ್ಕಳಾದ ಪುಟ್ಟಮ್ಮ, ವಾಸುವನ್ನು ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಚಂದ್ರೇಗೌಡನ ದಬ್ಬಾಳಿಕೆಯಲ್ಲಿ ನರಳುತ್ತಿದ್ದ ನಾಗಮ್ಮ, ಮನೆ ಪಾಲಾಗಿ ಕೆಳಕಾನೂರಿನಲ್ಲಿ ನೆಲೆಸಿದಾಗ ಸ್ವಾತಂತ್ರ್ಯವನ್ನು ಪಡೆದ ಆನಂದದಲ್ಲಿ ಮಗನಿಗೆ ಆಸರೆಯಾಗಿ, ಆಳುಕಾಳುಗಳ ಜೊತೆ ಬೆರತು ಕೆಲಸ ಮಾಡುವಲ್ಲಿ

ಆದರ್ಶವಾಗಿ ಬದುಕಿದರು. ಅಷ್ಟೇ ಅಲ್ಲ ಸಂಪ್ರದಾಯ ಬದ್ಧ ಸ್ವಾಭಿಮಾನಿ ಕೂಡ. ಪುಟ್ಟಮ್ಮನ ಮದುವೆ ಕರೆಯಲು ಯಾರೂ ಖುದ್ದಾಗಿ ಬಾರದ್ದಕ್ಕೆ ಬೇಸರ ಮತ್ತು ದುಃಖವಾಗಿತ್ತು.

"ಬಿಳೀ ಕಾಗದದ ಮೇಲೆ ಕರೀಗೀಟು ಗೀಚಿ, ಗೀಚಿ ಕೊಟ್ಟು ಬಿಟ್ಟರೆ ಕರೆ ಬಂದಾಗ ಹಾಗಾಯ್ತೇನು? ನಿನ್ನಂಥಾ ಬರಾವು ಬಂದವಗೆ ಅದೇ ಸಾಕಾಗಬೈದು ನನ್ನಂಥಾ ಬರಾವು ಸರಾವು ಇಲ್ದವಳಿಗೆ?"[೨೦] ಎಂಬಲ್ಲಿ ನಾಗಮ್ಮನ ಮನದಾಳದ ನೋವು ಮತ್ತು ಸ್ವಾಭಿಮಾನ ವ್ಯಕ್ತವಾಗುತ್ತದೆ. ಆಧುನಿಕತೆಯ ಸಂಕೇತವಾಗಿ ಲಗ್ನಪತ್ರಿಕೆ ಬಂದಿತ್ತು. ಆದರೆ ಹಿರಿಯರಿಗೆ ಅದು ಆತ್ಮೀಯ ಆಹ್ವಾನದ ಮಾಧ್ಯಮವಾಗಿರಲಿಲ್ಲ. ಇಂದೂ ಕೂಡ ಹತ್ತಿರದ ಸಂಬಂಧಿಗಳಿಗೆ ಪತ್ರಿಕೆಯೊಂದಿಗೆ ಖುದ್ದಾಗಿ ಕರೆಯಬೇಕೆಂಬ ರಿವಾಜು ಇದೆ.

ನಾಗಮ್ಮನವರಂತೆ ಸಂಪ್ರದಾಯಸ್ಥರಾದ ಗೌರಮ್ಮ ಆದರ್ಶ ಪತ್ನಿ, ಆದರ್ಶ ತಾಯಿ. ಮಗಳ ಮನಸ್ಸನ್ನು ಅರ್ಥಮಾಡಿಕೊಳ್ಳಬಲ್ಲಳು, ಗಂಡನ ಎದುರಿನಲ್ಲಿ ಆಡಿಯೂ ತೋರಿಸಿದ್ದಾಳೆ. ಆದರೆ ಪುರುಷಪ್ರಧಾನ ಯಜಮಾನಿಕೆಯ ನಡುವೆ ಅವಳು ಮಾತು ಅರಣ್ಯರೋಧನವಾಯಿತು.

"ಕಾನೂರು ಹೆಗ್ಗಡತಿ ಹಾಗೂ ಮಲೆಗಳಲ್ಲಿ ಮದುಮಗಳು ಎಂಬ ಎರಡೂ ಹೆಸರುಗಳು ಸ್ತ್ರೀ ಸಂಬಂಧಿತ ನೆಲೆಗಳನ್ನು ಸೂಚಿಸುವಂತಿವೆ. 'ಮದುಮಗಳು' ಎನ್ನುವುದು ಪರಂಪರಾಗತ ಕೌಟುಂಬಿಕ ನೆಲೆಯನ್ನು ಸೂಚಿಸಿದರೆ 'ಹೆಗ್ಗಡತಿ' ಎನ್ನುವುದು ಈ ರೂಢಿಗತ ಅಧೀನ ನೆಲೆಯನ್ನು ಉಲ್ಲಂಘಿಸಿದ, ಅಧಿಕಾರಕ್ಕೇರಿದ ಹೆಣ್ಣಿನ ನೆಲೆಯೂ ಸೂಚಿತವಾಗಿದೆ. ಅಧೀನತೆಯಿಂದ ಸರಿದು ಅಧಿಕಾರದ ನೆಲೆಯತ್ತ ಸಾಗುವ ಸಾಂಸ್ಕೃತಿಕ ಪ್ರಕ್ರಿಯೆಯನ್ನು ಕುವೆಂಪು ಅವರ ಎರಡು ಕಾದಂಬರಿಗಳಲ್ಲೂ ಗುರುತಿಸಲು ಸಾಧ್ಯವಿದೆ"[೨೧]

ಈ ಮಾತನ್ನು ಸ್ವಲ್ಪ ವಿಸ್ತರಿಸಬಹುದು. ಕುವೆಂಪು ಅವರ ಎರಡು ಕೃತಿಗಳೂ ಸ್ತ್ರೀ ಸಂಬಂಧಿತ ಶೀರ್ಷಿಕೆಯನ್ನೇ ಹೊತ್ತಿವೆ. 'ಮಲೆಗಳಲ್ಲಿ ಮದುಮಗಳು' ಎಂಬ ಕೃತಿಯ ಪ್ರಧಾನ ಸ್ತ್ರೀ ಪಾತ್ರಗಳಾದ ಚಿನ್ನಮ್ಮ ಮತ್ತು ತಿಮ್ಮಿ ಈ ಇಬ್ಬರಿಗೂ ಕುಟುಂಬದವರೆಲ್ಲಾ ಸೇರಿ ಬೇರೆಯವರಿಗೆ (ತಮಗಿಷ್ಟವಿಲ್ಲದವರಿಗೆ) ಮದುವೆ ಮಾಡಲು ಸಿದ್ಧತೆ ನಡೆದಿರುವಾಗಲೇ ಈ ಮದುವಣಗಿತ್ತಿಯರು ತಾವು ನೆಚ್ಚಿದ ಪ್ರಿಯತಮರೊಡನೆ ಮನೆಯನೆತ್ತಿಗೆ ಓಡಿ ಹೋಗಿ ಯಶಸ್ವಿಯಾದವರು. ಚಿನ್ನಮ್ಮನಾಗಲಿ, ತಿಮ್ಮಿಯಾಗಲಿ ಅಧೀನ ನೆಲೆಯಿಂದ ಸರಿಯುವ ಪ್ರಕ್ರಿಯೆ ಕಾಣಬಹುದು. "ಶತಸಂಪ್ರದಾಯ ಬದ್ಧವಾದ ಈ ಕುಲೀನ ಸಮಾಜದಲ್ಲಿ ನಾಗರಿಕ ವಿದ್ಯೆಯು ಗಂಧವೂ ಇಲ್ಲದ ಲಜ್ಜಾಶೀಲವತಿಯಾದ ಹುಡುಗಿಯೊಬ್ಬಳು......... ತಾನೊಲಿದವನಿಗಾಗಿ ಸಾಹಸ ಮಾಡಿದ್ದು, ಸಾಮಾನ್ಯ ಸಂಗತಿಯಲ್ಲ. ಮಲೆಯ ನೆತ್ತಿಯಿಂದ ಹಿಂದುರುಗಿದ್ದ ಚಿನ್ನಮ್ಮನಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿದ್ದವು".[೨೨] ಸುತ್ತಮುತ್ತಲ ಜನರ, ಬಂಧು-ಬಾಂಧವರ ಮಾತುಗಳ ಕುಹಕ ನಿಂದೆಗಳನ್ನು ತಣ್ಣನೆ ರೀತಿಯಲ್ಲಿ ಎದುರಿಸಿ ನಿಂತು ಆ ಹೂವಳ್ಳಿ ಮನೆಗೆ ಒಂದು ರೂಪವನ್ನು ಕೊಡುತ್ತಾ ಬರುತ್ತಾಳೆ. ಮುಕುಂದಯ್ಯನ ಸಾಮೀಪ್ಯ ಮತ್ತು ನಂಬಿಕೆ ಇದೆಲ್ಲವನ್ನು ಎದುರಿಸಲು ಆಕೆಗೆ ಸಾಧ್ಯವಾಯಿತು.

ಸುಸಂಸ್ಕೃತ ಮುಕುಂದಯ್ಯನ ಸಾಮೀಪ್ಯದ ಚಿನ್ನಮ್ಮನನ್ನು ಸಂಸ್ಕೃತಳಾಗುವಂತೆ ಕ್ರಾಂತಿಕಾರಕ

ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತೆ ಹೇಗೆ ಮಾಡಿತೋ ಹಾಗೆ 'ಕಾನೂರು ಹೆಗ್ಗಡತಿಯ ಆಧುನಿಕ ಶಿಕ್ಷಣ ಪಡೆದ, ಸುಸಂಸ್ಕೃತನಾದ ಹೂವಯ್ಯನ ಸಾಮೀಪ್ಯದ ಪ್ರಭಾವವು ಸೀತೆಯ ಮೇಲೆ ಬಾಲ್ಯದಿಂದಲೂ ಬೀರಿತ್ತು. ಆದಕಾರಣ ಹೂವಯ್ಯ ಬಾವವನ್ನೇ ಮದುವೆಯಾಗುತ್ತೇನೆ' ಎಂದು ಗೋಡೆಯ ಮೇಲೆ ಬರೆಯುವಷ್ಟು ಧೈರ್ಯ ಮಾಡಿತ್ತು. ಇಡೀ ಕಾದಂಬರಿಯಲ್ಲಿ ಅಕ್ಷರ ಜ್ಞಾನ ಬಲ್ಲ ಹೆಣ್ಣು ಎಂದರೆ 'ಸೀತೆ' ಮಾತ್ರ. ಈ ಹಿನ್ನಲೆಯಲ್ಲಿ ಹಲವು ಕನ್ನಡದ ಕಾದಂಬರಿಗಳನ್ನು ಓದಿದ್ದಳು. ಮುಗ್ಧೆಯಾದರೂ ಹೂವಯ್ಯನಂಥ ಭಾವುಕನ ಮಟ್ಟಕ್ಕೆ ಏರಲು ಪ್ರಯತ್ನಿಸುತ್ತಾಳೆ. ಹೂವಯ್ಯನ ಪ್ರಭಾವ, ಅಕ್ಷರಜ್ಞಾನ, ಕಾದಂಬರಿಗಳ ಓದು ಅವಳಲ್ಲಿ ಉತ್ತಮ ಸಂಸ್ಕಾರಗಳನ್ನು ಹುಟ್ಟುಹಾಕುತ್ತಿದ್ದವು. ತಾನು ಹಳ್ಳಿಯವಳು ತಾನು ತಿದ್ದಿಕೊಂಡು ನಾಗರಿಕಳಾಗಬೇಕೆಂಬ ತುಡಿತವಿರುವುದನ್ನು ಕಾಣುತ್ತೇವೆ. ಹೂವಯ್ಯನ ಜೊತೆ ಮಾತನಾಡುವಾಗ ಭಾಷಿಕ ನೆಲೆಯಲ್ಲೇ ಅದನ್ನು ಗುರುತಿಸಬಹುದು. ಮಲೆನಾಡ ಸೊಗಡಿನಲ್ಲಿ ಸಹಜವಾಗಿ ಮಾತನಾಡುವಾಗ ಭಾಷೆಯ ಬಗ್ಗೆ ಎಚ್ಚರವಹಿಸುವುದನ್ನು ಕಾಣಬಹುದು. ಹೂವಯ್ಯನ ಜೊತೆ ಮಾತನಾಡುವಾಗ ಒಂದು ಹಂತದಲ್ಲಿ 'ಕಂಡೀನಿ' ಎಂದು ಸಹಜವಾಗಿ ಉತ್ತರಿಸಿದ ಆಕೆ, ತಕ್ಷಣ ನಾಚಿಕೊಂಡು 'ಕಂಡಿದ್ದೀನಿ' ಎಂದು ಸರಿಮಾಡಿಕೊಂಡಳು. ಯಾವುದೇ ಒಂದು ನೆಲದ ಭಾಷೆಗೆ ರೂಢಿಗತವಾದ ಲಯ, ಕಾಕು, ಬನಿ ಇರುತ್ತದೆ. ಆಧುನಿಕತೆಯ ಪ್ರಭಾವ ಅದನ್ನೆಲ್ಲಾ ಕೀಳೆಂದೂ, ಅನಾಗರಿಕವೆಂದು ಭಾವಿಸುತ್ತದೆ ಮತ್ತು ನಾಗರಿಕನ ಭಾಷೆ ಹೀಗಿರಬೇಕೆಂದು ಕೃತಕ ಸ್ವರೂಪವನ್ನು ಕೊಡಮಾಡುತ್ತದೆ ಎಂಬುದಕ್ಕೆ ಸೀತೆಯ ಈ ನಡವಳಿಕೆಯೇ ಸಾಕ್ಷಿ. ಇದು ವಸಾಹತುಶಾಹಿಯ ಪ್ರಜ್ಞೆಯು ಆವರಿಸುತ್ತಿರುವುದಕ್ಕೆ ರೂಪಕದಂತೆ ಬಂದಿದೆ. ಸೀತೆಯಲ್ಲಿ ಅರಳುವ ಸ್ವತಂತ್ರ ವ್ಯಕ್ತಿತ್ವವು ಶಾಮಯ್ಯಗೌಡರಂಥ ದಂಪತಿಗಳ ಮಧ್ಯೆ ಹಾಗೂ ಆ ನಾಡಿನ ಸಾಮಾಜಿಕ ಕಟ್ಟುಪಾಡುಗಳ ನಡುವೆ ಸಿಲುಕಿ ತಲೆಯೆತ್ತಲಾರದೆ ಹೋಯಿತು. ಹೂವಯ್ಯನ ಮೇಲಿನ ಅನುರಾಗವನ್ನು ಹೇಳಿಕೊಳ್ಳಲು ಧೈರ್ಯ ಸಾಲದೆ, ಕೃಷ್ಣಪ್ಪನ ಜೊತೆಗಿನ ಮದುವೆ ನಿಶ್ಚಯ ಆಕೆಗೆ ಮನೋರೋಗವನ್ನುಂಟು ಮಾಡಿತು. ಮುಂದೆ ರಾಮಯ್ಯನನ್ನು ಮದುವೆಯಾಗುವ ಅನಿವಾರ್ಯ ಸಂದರ್ಭ ಬಂದಾಗ ಅದುವರೆಗೂ ಆ ಪರಿಸರದಲ್ಲಿ ಕೇಳರಿಯದ, ಕಂಡರಿಯದ 'ಪ್ರೇಮಪತ್ರ' ಬರೆಯುತ್ತಾಳೆ. ಪರಿಸ್ಥಿತಿಯ ಒತ್ತಡದಿಂದ ರಾಮಯ್ಯನ ಜೊತೆ ಮದುವೆಯಾದರೂ ಆತನ ಅಧೀನಕ್ಕೆ ಒಳಪಡಲಿಲ್ಲ. ಆತನ ಸಾವಿನ ನಂತರ ಹೂವಯ್ಯನ ಜೊತೆ ವಿರಾಗಿಣಿಯಾಗಿ ನಿಲ್ಲುತ್ತಾಳೆ. ಆಧುನಿಕತೆ ಸ್ವತಂತ್ರ ವ್ಯಕ್ತಿತ್ವವ ರೂಪಿಸುತ್ತಿದ್ದ ಸಂಧಿಕಾಲ ಎಂಬುದನ್ನು ಗಮನಿಸಬೇಕು.

ಸೀತೆಗೆ ಹೂವಯ್ಯ, ಮೈಸೂರು ಆಧುನಿಕವೆನಿಸಿದರೆ, ನೆಲ್ಲುಹಳ್ಳಿಯಂತ ಕುಗ್ರಾಮದಲ್ಲಿ ಜನಿಸಿದ ಬಡರೈತನ ಮಗಳಾದ ಸುಬ್ಬಮ್ಮನಿಗೆ ಕಾನೂರೇ ಆಧುನಿಕವೆನಿಸುತ್ತದೆ. ಚಂದ್ರೇಗೌಡರು ತಮ್ಮ ಮನೆಗೆ ಹೆಣ್ಣು ಕೇಳಲು ಬಂದಾಗ ಚಲುವೆಯಾದ ಸುಬ್ಬಮ್ಮ ತನ್ನನ್ನು ಹೂವಯ್ಯನಿಗೆ ಕೇಳಲು ಬಂದಿದ್ದಾಳೆ ಎಂದು ಭಾವಿಸಿದ್ದಳು. ಹಿಂದೆ ಯಾವುದೋ ಮದುವೆ ಮನೆಯಲ್ಲಿ ಹೂವಯ್ಯನನ್ನು ನೋಡಿದ್ದಳು ; ಆಕರ್ಷಿತಳಾಗಿದ್ದಳು. ಹೂವಯ್ಯನಂಥ ಶಿಕ್ಷಣ ಪಡೆದ ಸುಶಿಕ್ಷಿತರನ್ನು ಮಲೆನಾಡ ಪರಿಸರದ ಹೆಣ್ಣುಮಕ್ಕಳು ಬಯಸುತ್ತಿದ್ದರು ಎಂಬುದರ ದ್ಯೋತಕ. ಅಷ್ಟರಮಟ್ಟಿಗೆ ಮಲೆನಾಡ ಪರಿಸರದ ಸ್ತ್ರೀ ಸಮುದಾಯದಲ್ಲಿ ಅಂತರಾಳದ ನೆಲೆಯಲ್ಲಿ ಸ್ಥಿತ್ಯಂತರವಾಗುತ್ತಿತ್ತು ಎಂಬುದರ ಕುರುಹು. ಆದರೆ ತೀರ್ಮಾನ ಹಿರಿಯರದು.

ಹಿರಿಯರು ಬಯಸುತ್ತಿದ್ದುದು, ಆಸ್ತಿವಂತರನ್ನ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮೇಲೆ ಬರಬೇಕೆಂಬ ಹಂಬಲವುಳ್ಳವರು, ಬಡತನವನ್ನೇ ಹಾಸಿ ಹೊದ್ದ ಜನಸಮುದಾಯ ತಮ್ಮ ಮಗಳು ಸುಖವಾಗಿರಲಿ ಎಂಬ ಆಸೆಯೊಂದಿಗೆ, ಆ ಸುಖ ಆಸ್ತಿವಂತನಲ್ಲಿ ಮಾತ್ರ ಸಿಗುತ್ತದೆ ಎಂಬ ಭ್ರಮೆಯಿಂದ ಮದುವೆ ನಿರ್ಧಾರವನ್ನು ತೀರ್ಮಾನಿಸುತ್ತಿದ್ದರು. ಹೆಣ್ಣು ಕೇಳುವವನು ಯಾರು ಎಂಬುದಕ್ಕಿಂತ ಅವನಲ್ಲಿರುವ ಆಸ್ತಿ, ಸಂಪತ್ತು ಏನು ಎಂಬುದೇ ಮುಖ್ಯವಾಗಿತ್ತು. (ಇದು ಇಂದಿಗೂ ಈ ಪರಿಸರದಲ್ಲಿ ಅನೇಕ ವಿಚಾರಗಳೊಂದಿಗೆ ರೂಢಿಯಲ್ಲಿದೆ) ನಿಜ ಸಂಗತಿ ತಿಳಿದಾಗ ಸುಬ್ಬಮ್ಮ ಒಬ್ಬಳು ಹೆಣ್ಣಾಗಿ ಸಹಜವಾಗಿ ಹತಾಶಳಾಗುತ್ತಾಳೆ. ಆದರೆ ಸೀತೆಯಂತಾಗುವುದಿಲ್ಲ. ಆ ಪರಿಸರದಿಂದ ರೂಢಿಸಿಕೊಂಡ ಅಥವಾ ಹೇರಲ್ಪಟ್ಟ ಮನೋಭಾವನೆಯಂತೆ ಯಾರೊ ಬಡರೈತನ ಜೊತೆ ಜೀವನ ಪರ್ಯಂತ ಏಗುವುದಕ್ಕಿಂತ, ಕಾನೂರಿನ ಚಂದ್ರೇಗೌಡನಂತಹ ಶ್ರೀಮಂತನ ಕೈಹಿಡಿದು ಹೆಗ್ಗಡತಿಯಾಗುವುದು ಸುಕೃತವೆಂದು ಭಾವಿಸುತ್ತಾಳೆ. ಇಂತವರಿಗೆ ಐತ–ಪೀಂಚಲುವಿನಂತ ದಂಪತಿಗಳು ಆದರ್ಶವಾಗುವುದಿಲ್ಲ. ಅವಳ ಶರೀರದ ಸೌಂದರ್ಯ, ದುಡಿವ ಸಾಮರ್ಥ್ಯ, ಅದರಿಂದ ದೊರೆತ ದೇಹಬಲ, ಕ್ರಿಯಾಶೀಲತೆ ಎಲ್ಲವೂ ಬಾಹ್ಯವಾದ ಇತ್ಯಾತ್ಮಕ ಗುಣಗಳೇ. ಆದರೆ ಅವಳು ಹುಟ್ಟಿದ ದಾರಿದ್ರದ ಪರಿಸರ, ಒರಟುತನದ ಸಂಸ್ಕಾರಗಳು ಅವಳಲ್ಲಿ ಅಸಂಸ್ಕೃತಿ ಆಂತರಂಗಿಕವಾಗಿ ಬೆಳೆದಿರುತ್ತದೆ. ಸುಬ್ಬಮ್ಮನ ಅಹಂಕಾರ, ಅಜ್ಞಾನಗಳು ಹಿರಿಯರಾದ ನಾಗಮ್ಮನವರ ಜೊತೆಯಾಗಲಿ, ಸವತಿ ಮಕ್ಕಳ ಜೊತೆಯಾಗಲಿ ಗೌರವದಿಂದಾಲಿ, ಆತ್ಮೀಯತೆಯಿಂದಾಗಲಿ, ಮಾನವೀಯತೆಯಿಂದಾಗಲಿ, ಅಕ್ಕರೆಯಿಂದಾಗಲಿ ಬಾಳಲು ಬಿಡುವುದಿಲ್ಲ. ಆದಕಾರಣ ಕಾನೂರು ಹೆಗ್ಗಡತಿಯಾದ ಈಕೆ ಕೋಣೂರಿನ ಹೆಗ್ಗಡತಿಯಂತೆ, ಬೆಟ್ಟಳ್ಳಿ ದೊಡ್ಡಮ್ಮ ಹೆಗ್ಗಡತಿಯಂತೆಯೇ ಬಾಳಲು ಸಾಧ್ಯವಾಗುವುದಿಲ್ಲ. ಇದಕ್ಕೆ ಸುಬ್ಬಮ್ಮ ಮಾತ್ರ ಕಾರಣವಾಗುವುದಿಲ್ಲ. ಚಂದ್ರೇಗೌಡರ ಆಯ್ಕೆಯ ಬಗ್ಗೆ ಅವರ ಬಂಧುಬಾಂಧವರ ವಿರೋಧವೂ ಪರೋಕ್ಷವಾಗಿ ಕಾರಣವಾಗಿದೆ. ಚಂದ್ರೇಗೌಡ ಆಕೆಯನ್ನು ದೇಹದ ದಾಹಕ್ಕೆ ಮದುವೆಯಾಗಿದ್ದನೇ ಹೊರತು ಪ್ರೀತಿಯಿಂದಲ್ಲ. ತನ್ನ ದೈಹಿಕ ದೌರ್ಬಲ್ಯಗಳನ್ನು ಮುಚ್ಚಲು ಆಕೆಗೆ ಒಡವೆ ವಸ್ತುಗಳನ್ನು ಹೆಚ್ಚೆಚ್ಚು ತಂದುಕೊಡುತ್ತಿದ್ದ. ತನ್ನ ದೈಹಿಕ ದೌರ್ಬಲ್ಯ ಹೆಚ್ಚಾದಂತೆ ಆತನಲ್ಲಿ ಅನುಮಾನದ ಪಿಶಾಚಿ ಹೊಕ್ಕು ಆಕೆಯನ್ನು ಪಶುವಿನಂತೆ ನಡೆಸಿಕೊಂಡ. ಆದ್ದರಿಂದ ಆಕೆಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಉತ್ತಮ ಪರಿಸರ ದೊರೆಯಲಿಲ್ಲ. ಆದ್ದರಿಂದ ಆಕೆ ದಮನಕ್ಕೆ ಒಳಗಾದ ಪಾತ್ರ, ಹಾಗೆ ಆಕೆಯ ಅಸಂಸ್ಕೃತಿಯ ವ್ಯಕ್ತಿತ್ವಕ್ಕೆ ಗಂಗೆಯ ಸ್ನೇಹದ ಕುಸಂಸ್ಕೃತಿಯೂ ಸೇರಿತು. ಅನುಭವಿಸುವ ನವ ಶ್ರೀಮಂತಿಕೆಯೂ ಅವಳ ಮುಂದಿನ ನಡೆಗೆ ಕಾರಣವಾಗುತ್ತದೆ.

ಹಾಗೆಂದು ಸುಬ್ಬಮ್ಮ ಬದಲಾವಣೆಗೆ ಸಾಧ್ಯವೇ ಇಲ್ಲದ ವ್ಯಕ್ತಿತ್ವವೇನೂ ಅಲ್ಲ. ಹೂವಯ್ಯ ರಾಮಯ್ಯರ ಪ್ರಭಾವದಿಂದ ಮೊದಲಿನ ತನ್ನ ಒರಟು ನಡವಳಿಕೆಯನ್ನು ಕಡಿಮೆ ಮಾಡಿಕೊಳ್ಳುತ್ತಾ ಬಂದಿದ್ದಳು. ಆ ಪರಿಸರ ಮುಂದುವರೆಯಲು ಸಾಧ್ಯವಾಗದೆ ಮನೆ ಪಾಲಾಯಿತು. ಗಂಡನ ದೌರ್ಜನ್ಯ ತಾಳಲಾರದೆ ತೌರಿಗೆ ಓಡಿ ಹೋದಳು. ಬರಿಗೈಲಿ ಬಂದ ಆಕೆ ತವರಿನ ಅನಾದರಕ್ಕೆ ತುತ್ತಾಗುತ್ತಾಳೆ. ಕಷ್ಟವಾದರೂ ಗಂಡನ ಮನೆಯೇ ಲೇಸೆಂದು ಅನಿಸಿದ ಕಾರಣ, ಚಂದ್ರೇಗೌಡನ ಪ್ರತಾಪ ಕುಗ್ಗಿದ ಮೇಲೆ ಕಾನೂರು ಸೇರಿದಳು. ಪತಿಯ ನಿಜಪ್ರೀತಿ ದೊರೆತು ಎಲ್ಲವು ಸರಿಹೋಯಿತೆನ್ನುವಷ್ಟರಲ್ಲಿ ವಿಧವೆಯಾದಳು. ಕಾನೂರು

ಮನೆಯ ಯಜಮಾನಿಯಾದ ಆಕೆ ಹೆಣ್ಣಿಗೆ ಅಧಿಕಾರ ಸಿಕ್ಕರೆ ದಕ್ಷತೆಯಿಂದ ನಡೆಸಬಲ್ಲಳು ಎಂಬುದಕ್ಕೆ ಸಾಕ್ಷಿಯಾದಳು. ಹೇಳುವವರು ಕೇಳುವವರವರಿಲ್ಲದ ಅಧಿಕಾರ, ಹಿಂದೆ ಅನುಭವಿಸಿದ ದೌರ್ಜನ್ಯ, ತೌರಿನ ಅನಾದಾರ, ನವಶ್ರೀಮಂತಿಕೆ ಮೊದಲಾದ ಕಾರಣಗಳಿಂದ ಪರಂಪರಾಗತವಾಗಿ ಬಂದ ಊಳಿಗಮಾನ್ಯ ಪದ್ಧತಿಯ ಯಜಮಾನಿಕೆಯ ದರ್ಪ ಅವಳಲ್ಲೂ ಮನೆ ಮಾಡಿತು. ಪರಿಣಾಮ ಚಂದ್ರೇಗೌಡನ ಪ್ರತಿರೂಪವೇ ಆದಳು. ಆದರೆ ಈ ಅಧಿಕಾರ, ದರ್ಪ ಹೊರಮೈ ಪಡೆದಿತ್ತಷ್ಟೆ ಒಳಗೆ ನಿಯಂತ್ರಿಸುವವನು ಸ್ವಾರ್ಥಿಯೂ, ವಿಷಯಲಂಪಟನೂ ಆದ ಪುರುಷರೂಪಿ ಸೇರೇಗಾರನಾಗಿದ್ದ. ಆತನ ಕುತಂತ್ರದ ಬಲೆಯಿಂದ ಬಿಡಿಸಿಕೊಂಡು ಬರಲಾಗದೆ ಅಸಹಾಯಕತೆಯಿಂದ ಸಾವನ್ನೇ ತಂದುಕೊಂಡಳು. ಸೇರೆಗಾರನ ಪ್ರೇಯಸಿ ಗಂಗೆಯ ಕುತಂತ್ರ ಸಂಪತ್ತನ್ನು, ಪ್ರಾಣವನ್ನು ದೋಚುವಂತೆ ಮಾಡಿತು.

ಸುಬ್ಬಮ್ಮನಲ್ಲಿ ದಕ್ಷತೆಯಿದ್ದರೂ ದೈಹಿಕ ವಾಂಛಲ್ಯ ಮೀರಲಾರದೆ ದುರಂತಕ್ಕೆ ಒಳಗಾಗಬೇಕಾಯಿತು. 'ಸೀತೆ' ಅದನ್ನೆಲ್ಲಾ ಮೀರಿದ ಬದುಕನ್ನು ಕಂಡುಕೊಂಡಳು. ರಾಮಯ್ಯನ ತಂಗಿ ಪುಟ್ಟಮ್ಮ, ಸೀತೆಯ ತಂಗಿ ಲಕ್ಷ್ಮೀ ಇವರಿಗೆಲ್ಲ ತಮ್ಮ ಆಯ್ಕೆಗೆ ಅವಕಾಶವಿರಲಿಲ್ಲ. ಹಾಗೆ ಹಂಬಲಿಸಿದವರಲ್ಲ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಮಂಜಮ್ಮ, ಲಕ್ಕಮ್ಮರ ಹಾಗೆ ಹಿರಿಯರು ಹೇಳಿದ ಗಂಡುಗಳಿಗೆ ಕೊರಳೊಡ್ಡಿ, ಅಲ್ಲಿಯೇ ನೆಮ್ಮದಿಯನ್ನು ಅರಸಿದರು. ಆದಕಾರಣ ಪಾಲಿಗೆ ಬಂದದ್ದನ್ನು ಪಡೆಯುವುದರ ಮೂಲಕ ಬದುಕಿನಲ್ಲಿ ಸಂಘರ್ಷಕ್ಕೆ ಒಳಗಾಗಲಿಲ್ಲ.

ಮಲೆನಾಡ ಪರಿಸರದಲ್ಲಿ ಅಧಿಕಾರ ಪಡೆದ ಹೆಣ್ಣೊಬ್ಬಳು ಯಶಸ್ವಿಯಾಗಿ ಹೆಗ್ಗಡತಿತನವನ್ನು ನಡೆಸಿದ ಬಗ್ಗೆ ಬೇಕಾದಷ್ಟು ಉದಾಹರಣೆಗಳಿವೆ. ಮಲೆನಾಡ ಪರಿಸರದಿಂದ ಬಿಳುಮನೆ ರಾಮದಾಸ್ ಅವರ ಕೃತಿಗಳನ್ನು ಈ ಬಗ್ಗೆ ಗಮನಿಸಬಹುದು. ಇವರ 'ವ್ಯಾಮೋಹ' ಕೃತಿಯಲ್ಲಿ ಬರುವ 'ನೇರಲಮನೆ' ಕಾಡಮ್ಮ ಹೆಗ್ಗಡತಿ ಚಿಕ್ಕ ಪ್ರಾಯದಲ್ಲೇ ವಯಸ್ಸಾದ ವ್ಯಕ್ತಿಯನ್ನು ಮದುವೆಯಾಗಿ, ಅಲ್ಪ ಕಾಲದಲ್ಲಿಯೇ ವಿಧವೆಯಾಗಿ ಪುಟ್ಟಮಕ್ಕಳನ್ನು ಬೆಳೆಸುವ ಮತ್ತು ಆಪ್ತವಾಗಿ ಹಠದಿಂದ ಎಲ್ಲ ಜವಾಬ್ದಾರಿಗಳನ್ನು ಹೊತ್ತು, ಗದ್ದೆ-ತೋಟಗಳನ್ನು ಅಭಿವೃದ್ಧಿ ಪಡಿಸಿ, ತನ್ನ ಶೀಲವನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಕೊನೆತನಕ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿರುವ ಬಗೆಯನ್ನು ಕಾಣುತ್ತೇವೆ. ಇದೇ ಲೇಖಕರ ತಲೆಮಾರು ಕಾದಂಬರಿಯಲ್ಲಿ ಬರುವ ಕಾಡಮ್ಮ ಹೆಗ್ಗಡತಿಯ ಬದುಕು ಕೂಡ ಅದೇ ಬಗೆಯದು. ತಾನು ಪ್ರೀತಿಸಿದ, ಕೂಡಿದ ಪಕ್ಕದ ಊರಿನ ಸಿಂಗಪ್ಪನನ್ನು ಮದುವೆಯಾಗ ಬಯಸಿದರೂ, ಅವರು ಬಡವರೂ ಎಂಬ ಕಾರಣಕ್ಕೆ ಹೆಣ್ಣು ಕೊಡದೆ ಅವಳಾಸೆಗೆ ಹಿರಿಯರು ತಣ್ಣೀರೆರಚಿದರು. ಶ್ರೀಮಂತಿಕೆಯ ಆಸೆಯಿಂದ, ಪ್ರತಿಷ್ಠೆಯ ಪ್ರಶ್ನೆಯಾಗಿ ವಯಸ್ಸಾದ ಪಟೇಲ್ ದೇವಪ್ಪಗೌಡನಿಗೆ ಮದುವೆ ಮಾಡಿಕೊಡುತ್ತಾರೆ. ಕುವೆಂಪು ಕಾದಂಬರಿಗಳಿಂದ ಹಿಡಿದು ಬಿಳುಮನೆ ರಾಮದಾಸ್ ಅವರ ಕಾದಂಬರಿಗಳವರೆಗೆ ಬಂದರೂ ಈ ಮಲೆನಾಡ ಪರಿಸರದಲ್ಲಿ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡುವಾಗ ಆಸ್ತಿಯನ್ನೇ ಮುಖ್ಯವಾಗಿ ಹೇಗೆ ಗಮನಿಸುತ್ತಿದ್ದರೂ, ಅದರಿಂದ ಎಷ್ಟೊ ಹೆಣ್ಣು ಮಕ್ಕಳ ಬಾಳುವೆ ಹಾಳಾಗಿದೆ ಎಂಬುದು ತಿಳಿಯುತ್ತದೆ. (ಇಂದು ಆಸ್ತಿ, ಬಂಗಾರ ಜೊತೆಗೆ ಬಂಗ್ಲೆ, ಐಷಾರಾಮಿ ಆಧುನಿಕ ವಿಕಾರಗಳು ಸೇರಿಕೊಂಡಿವೆ.) ಇಳಿ

ವಯಸ್ಸಿನ ದೇವಪ್ಪಗೌಡನ ಪ್ರೀತಿ ವಿಶ್ವಾಸದಿಂದ ಸಿಂಗಪ್ಪನನ್ನು ಮರೆತಳು. ಮದುವೆಯಾದ ಐದಾರು ವರ್ಷಕ್ಕೆ ಕುಡಿತ, ಹಾದರಕ್ಕೆ ಒಳಗಾದ ದೇವಪ್ಪಗೌಡ ಇಹಲೋಕ ತ್ಯಜಿಸಿದ. ಚಿಕ್ಕಮಕ್ಕಳ ತಾಯಿಯಾದ ಕಾಡಮ್ಮ ಯಜಮಾನಿಕೆ ಕೈಗೆತ್ತಿಕೊಂಡು ಗಂಡಸು ನಾಚುವಂತೆ ವ್ಯವಹಾರ, ಅಭಿವೃದ್ಧಿ ಮಾಡುವುದರ ಮೂಲಕ 'ಕಾಡಮ್ಮ ಹೆಗ್ಗಡತಿ' ಎನಿಸಿಕೊಂಡಳು. ಹಾಗಿದ್ದೂ ತನ್ನ ರೀತಿಯ ಪ್ರೇಮ ಸಂದರ್ಭವು ತನ್ನ ಮೊಮ್ಮಗಳಿಗೆ ಎದುರಾದಾಗ ತನಗಾದ ಅನ್ಯಾಯವನ್ನು ಮೊಮ್ಮಗಳಿಗೆ ನ್ಯಾಯ ದೊರಕಿಸಿಕೊಡುವುದರ ಮೂಲಕ ನ್ಯಾಯ ಪಡೆದುಕೊಂಡಳು. ಆಸ್ತಿ, ಅಂತಸ್ತಿಗಿಂತ ಒಲಿದವನನ್ನು ಮದುವೆಯಾಗುವಂತೆ ಬೆಂಬಲ, ಪ್ರೋತ್ಸಾಹ ನೀಡಿ, ಎಲ್ಲ ಸಂಕೋಲೆಗಳನ್ನು ಮೀರುವಂತೆ ಮಾಡುವುದು ಸಾಮಾನ್ಯ ಸಂಗತಿಯಾಗುವುದಿಲ್ಲ. ಇದು ಈ ಪರಿಸರದಲ್ಲಾಗುತ್ತಿದ್ದ ಸ್ಥಿತ್ಯಂತರಕ್ಕೆ ಸಾಕ್ಷಿ.

ಈ ಮೇಲಿನ ಕಾಡಮ್ಮ ಹೆಗ್ಗಡತಿಯಂತಹ ಹೆಣ್ಣು ಅಧೀನತೆಯಿಂದ ಸರಿದು ಅಧಿಕಾರದತ್ತ ಸಾಗಿದ ಪ್ರಕ್ರಿಯೆಯನ್ನು ಹೇಳುತ್ತಿದ್ದರೂ ಈ ಅಧಿಕಾರವನ್ನು ಅವರಿಗೆ ಯಾರೂ ಕೊಟ್ಟಿದ್ದಲ್ಲ. ಅವರು ಬದುಕಿನ ಅನಿವಾರ್ಯತೆಯಲ್ಲಿ ಎದುರಿಸಬೇಕಾದ ಸಂದರ್ಭವಿದು. ಈ ರೀತಿ ಸ್ವಾಭಿಮಾನದಿಂದ ತಲೆಯೆತ್ತಿ ಅಧಿಕಾರ ಹಿಡಿದು ಕುಟುಂಬವನ್ನು ಮುನ್ನೆಡೆಸುವ ಹೆಣ್ಣು ಅತ್ತೆಯಾದಾಗ ನಿಜವಾದ ಊಳಿಗಮಾನ್ಯ ಪದ್ಧತಿಯ ಯಜಮಾನಿಕೆ ಆವರಿಸಿಕೊಂಡು ಬಿಡುತ್ತದೆ. ಸೊಸೆಯಂದಿರು ಅತ್ತೆ ಹೇಳಿದಂತೆ ಕೇಳಿಕೊಂಡಿರಬೇಕೆಂಬ ಸಾಂಪ್ರದಾಯಿಕ ವಾತಾವರಣದಲ್ಲಿ, ಗಂಡಸು (ಮಗ) ಹೆಂಡತಿಯ ಪರವಾಗಿ ವಕಾಲತ್ತು ವಹಿಸಿ ಮಾತನಾಡುವಂತಿರಲಿಲ್ಲ. ಹೊಸದಾಗಿ ಮದುವೆಯಾಗಿ ಹೋದ ಹೆಣ್ಣು ಮಕ್ಕಳು ಬಂದದ್ದನ್ನು ಎದುರಿಸಬೇಕು. ಇಲ್ಲವೆ ಸಾವಿಗೆ ಶರಣಾಗಬೇಕು. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬಂತೆ ತವರಿನವರು ಆಸರೆಯಾಗಿ ನಿಲ್ಲುವುದು ವಿರಳ. ಹಾಗೆ ಸಾವಿಗೆ ಶರಣಾದ ಹೆಣ್ಣುಮಕ್ಕಳ ಬಗ್ಗೆ ತವರಿನವರೂ ಗೌಣವಾಗಿ ತೆಗೆದುಕೊಳ್ಳುತ್ತಿದ್ದರು ಎಂದರೆ ಹೆಣ್ಣಿಗೆ ಕೊಡುತ್ತಿದ್ದ ಬೆಲೆ ಯಾವ ರೀತಿಯದಾಗಿತ್ತು ಎಂಬುದನ್ನು ಸೂಚಿಸುತ್ತದೆ. 'ವ್ಯಾಮೋಹ' ಕಾದಂಬರಿಯ ಯಜಮಾನ ಪುಟ್ಟೇಗೌಡ ಆಸ್ತಿಯ ಆಸೆಯಿಂದ ಜ್ವರಗಡ್ಡೆಯಿಂದ ನರಳುವ ಗಂಡಿಗೆ ತನ್ನ ಮಗಳನ್ನು ಬೈದು ಬಡಿದು ಒಪ್ಪಿಸಿ ಮದುವೆ ಮಾಡಿದ್ದ. ಒಲ್ಲದ ಆತನೊಡನೆ ಬಾಳಲು ಸಾಧ್ಯವಾಗದೆ ಆತ್ಮಹತ್ಯೆಗೆ ಶರಣಾದಳು. ಈ ಸಾವು ತವರಿಗೆ ಬಹಳ ಕಾಲ ತಿಳಿದೇ ಇಲ್ಲ ; ತಿಳಿದ ಮೇಲೂ ಹೆತ್ತ ತಂದೆಯ ಪ್ರತಿಕ್ರಿಯೆ 'ಅವಳಿಗೆ ಆಯಸ್ಸು ತೀರಿತು, ಹೋದಳು' ಎಂಬ ನಿರ್ಲಿಪ್ತವಾದ ಪ್ರತಿಕ್ರಿಯೆಯಲ್ಲಿ ಹೆಣ್ಣಿನ ಬಗ್ಗೆ ಇದ್ದ ಅಮಾನವೀಯತೆ ಅಭಿವ್ಯಕ್ತವಾಗುತ್ತದೆ. ಈತನ ಹೆಂಡತಿ ಪುಟ್ಟಮ್ಮ ಮದುವೆಯ ಮೊದಲು ಚಿನ್ನಯ್ಯ ಎನ್ನುವವನನ್ನು ಪ್ರೀತಿಸಿ, ಸಂಬಂಧಿಕರ ಎದುರಿನಲ್ಲಿ ಹಾರವನ್ನು ಕೂಡ ಬದಲಾಯಿಸಿಕೊಳ್ಳಲಾಗಿತ್ತು. ಆದರೆ 'ಬಳಿ' ಹೊಂದುವುದಿಲ್ಲವೆಂದು ಮದುವೆ ಮುರಿದು ಬಿದ್ದು ಆಕೆಗೆ ಇಷ್ಟವಿಲ್ಲದ ಪುಟ್ಟೇಗೌಡನಿಗೆ ಮದುವೆ ಮಾಡಿದ್ದರು. ಗಂಡನ ಮನೆಯ ಆಸ್ತಿ, ಆಳು ಕಾಳು ನೋಡಿ ಕ್ರಮೇಣ ಪ್ರೀತಿಸತೊಡಗಿದಳು. ಕಾನೂರು ಸುಬ್ಬಮ್ಮನ ಹಾಗೆ ಆಸ್ತಿ ಇಲ್ಲಿಯೂ ಮುಖ್ಯವಾಗುತ್ತದೆ. ಆದರೆ ಈಕೆಯ ಮಗಳು ಆತ್ಮಹತ್ಯೆಗೆ ಶರಣಾಗುವುದರ ಮೂಲಕ ಈ ವ್ಯವಸ್ಥೆಯ ಅಮಾನುಷತೆಯ ಕಡೆ ಬೆಳಕನ್ನು ಚೆಲ್ಲುತ್ತಾಳೆ.

"ಅಂದಿನ ಕಾಲದಲ್ಲಿ ಪದ್ಧತಿಯಂತೆ ಸ್ಫುರದ್ರೂಪಿ ಅಕ್ಕನನ್ನೊ ತಂಗಿಯನ್ನೊ ತೋರಿಸಿ ಮದುವೆ

ಮಾಡುತ್ತಿದ್ದರು".[೩೪] ಅಂದರೆ ಈ ಪರಿಸರದಲ್ಲಿ ಹಿರಿಯರು ತಮ್ಮ ಮಗಳನ್ನು ಹೇಗಾದರೂ ಮಾಡಿ ಮದುವೆ ಮಾಡಿ ಕೈತೊಳೆದುಕೊಳ್ಳಬೇಕೆಂಬ ನಿಲುವಿನವರೇ ಹೊರತು ಮಕ್ಕಳ ಮುಂದಿನ ಸಾಂಸಾರಿಕ ಬಾಳುವೆಯ ಬಗ್ಗೆ ಯೋಚಿಸಿದವರಲ್ಲ. ಆಸ್ತಿಯೊಂದಿದ್ದರೆ ಹೇಗೋ ಬದುಕುತ್ತಾರೆ ಎಂಬ ನಿಲವು. ಸಾವು ಆಗಿನ ರೋಗರುಜಿನಗಳ ಹಿನ್ನೆಲೆಯಲ್ಲಿ, ದುಶ್ಚಟಗಳ ಹಿನ್ನಲೆಯಲ್ಲಿ ಸಾಮಾನ್ಯ ಸಂಗತಿಯಾಗಿದ್ದರಿಂದ ಗಂಡ ಸತ್ತರೂ ಆಸ್ತಿಯಾದರೂ ರಕ್ಷಿಸುತ್ತದೆ ಎಂಬ ದೂರದೃಷ್ಟಿಕೋನವನ್ನು ನಾವು ಗಮನದಲ್ಲಿಟ್ಟುಕೊಂಡೇ ಹಿರಿಯರ ನಿಲುವನ್ನು ನೋಡಬೇಕಾಗುತ್ತದೆ. ಒಂದು ಹೆಣ್ಣನ್ನು ತೋರಿಸಿ ಮತ್ತೊಂದು ಹೆಣ್ಣು ತೋರಿಸುವ ತಂತ್ರಕ್ಕೆ ವ್ಯಾಮೋಹ ಕಾದಂಬರಿಯ ನಾಯಕ ಶ್ರೀನಿವಾಸನ ತಾಯಿ ಮೆಳ್ಳೆಗಣ್ಣಿನ ಚಿನ್ನಮ್ಮನೂ ಬಲಿಯಾಗಿದ್ದಳು. ಮದುವೆಯಾದ ಅಪ್ಪಯ್ಯಗೌಡ ಜುಗುಪ್ಸೆಗೊಂಡು ನಾಲ್ಕು ವರ್ಷ ಹೆಂಡತಿಯ ಮುಖವನ್ನೇ ನೋಡಿರಲಿಲ್ಲ. ಮಗ ಹುಟ್ಟಿದ ಕೆಲವೇ ದಿನಗಳಲ್ಲಿ ವಿಧವೆಯಾದಳು. ಚಿಕ್ಕವಯಸ್ಸಿನಲ್ಲಿ ವಿಧವೆಯಾಗಿ, ತವರುಮನೆಯಿಂದ ದೂರವಾಗಿ, ಓರಗಿತ್ತಿಯರ ನಡುವೆ ಮನೆಗೆಲಸದವಳಂತೆ ಬದುಕಿದಳು. ಮಗನಿಗಾಗಿ ಸರ್ವಕಷ್ಟಗಳನ್ನೂ ಸಹಿಸಿದ ಆಕೆ ದೊಡ್ಡವನಾದ ಮಗನ ಜೊತೆ ಪಾಲು ತೆಗೆದುಕೊಂಡು ಸ್ವತಂತ್ರವಾಗಿ ಬದುಕೋಣವೆಂದು ಕನಸುಕಾಣುತ್ತಾಳೆ. ಇಂತಹ ಕನಸುಗಳ ಗುರಿಯಲ್ಲಿಯೇ ಮಲೆನಾಡ ಪರಿಸರದ ಹೆಣ್ಣುಮಕ್ಕಳು ಜೀವನಯಾಪನೆ ಮಾಡಿದ್ದಾರೆ, ಬದುಕನ್ನು ಎದುರಿಸಿಕೊಂಡು ಬಂದಿದ್ದಾರೆ ಎನ್ನಬಹುದು.

ಬಿಳುಮನೆ ರಾಮದಾಸ್ ಅವರ 'ನಂಬಿಕೆಟ್ಟವರಿಲ್ಲವೊ' ಕಾದಂಬರಿ ೬೦ರ ದಶಕದ ಕಾಲಘಟ್ಟದ ಕತೆಯನ್ನು ಒಳಗೊಂಡಿದೆ. ಆ ಕಾಲಕ್ಕಾಗಲೆ ಹೆಣ್ಣುಮಕ್ಕಳು ಓದಬೇಕೆಂಬ ಹಂಬಲ ಮೂಡುತ್ತಿದ್ದಂತಹ ಕಾಲ. ತಮ್ಮಯ್ಯನ ಮಗಳನ್ನು ಶಾಲೆಗೆ ಕಳುಹಿಸುವ ಬಗ್ಗೆ ಸೋದರಮಾವ ಸಿಂಗಪ್ಪಗೌಡನ ಮಾತನ್ನು ಗಮನಿಸಬಹುದು.

"ಹೆಣ್ಣುಮಕ್ಕಳು ಓದಬೇಕು, ನಾಕು ಅಕ್ಷರ ಕಲೀಲಿ ಅವಳು ಅವಳಿಷ್ಟಕ್ಕೆ ನಾವು ಯಾಕೆ ಅಡ್ಡಿಮಾಡಬೇಕು? ಹೆಣ್ಮಕ್ಕಳನ್ನು ಅವರು ಕಳಿಸಲಿಲ್ಲ......... ಇವರು ಕಳುಹಿಸಲಿಲ್ಲಾಂತ ಇನ್ನೊಬ್ಬರನ್ನು ನಾವು ಯಾಕೆ ಅನುಕರಣ ಮಾಡಬೇಕು?

ಪ್ರೈಮರಿ ಇಸ್ಕೂಲೆ ಅವಳು ಓದಿ ನಾಕು ಅಕ್ಷರ ಕಲೀಲಿ ಅಂತಷ್ಟೆ. ನಾಳೆ ಬೊಮ್ಮಯ್ಯ ಸರ್ಕಾರಿ ಕೆಲಸ ಹಿಡಿದರೆ ಅವನ ಕಾಗದ ಓದಿ ಹೇಳುವವರು ಬೇಕಿಲ್ಲ"[೩೫]

'ಮಲೆಗಳಲ್ಲಿ ಮದುಮಗಳು' ಕಾಲಘಟ್ಟದಲ್ಲಿ ಹೆಣ್ಣು ಮಕ್ಕಳು ಓದುವುದು ಗಂಡಸರು ಸೀರೆ ಉಟ್ಟಷ್ಟೇ ಹಾಸ್ಯಾಸ್ಪದವಾದ ಸಂಗತಿಯಾಗಿತ್ತು. ವಿದ್ಯೆ ಕಲಿತು ಯಾವ ಮಣಿಗಾರಿಕೆ ಮಾಡಬೇಕೆಂಬ ತಿರಸ್ಕಾರವಿತ್ತು. ಈ ಪರಿಸರದಲ್ಲಿ ಆಧುನಿಕತೆಯ ಭಾಗವಾಗಿ ಅಂಚೆಯ ವ್ಯವಸ್ಥೆ ಬಳಕೆಗೆ ಬರುತ್ತಿದ್ದಂತೆ ಅದರ ಉಪಯೋಗ ಪಡೆವ ಹಂಬಲದಲ್ಲಿ ಹೆಣ್ಣುಮಕ್ಕಳಿಗೂ ಓದು ಅನಿವಾರ್ಯ ಎಂಬುದು ಜನಮನದಲ್ಲಿ ಮೂಡುತ್ತಿದ್ದುದು ಕುತೂಹಲದ ಸಂಗತಿ. ಹೆಣ್ಣು ಓದಲಿ ಎಂಬ ಪುರುಷನ ಕಾಳಜಿಯ ಹಿಂದೆ ಆಕೆ ಜ್ಞಾನ ಸಂಪಾದನೆ ತನ್ನಂತೆ ಮಾಡಲಿ ಎಂಬ ಉದ್ದೇಶದಿಂದಲ್ಲ ; ತನಗೆ ಸಹಾಯಕವಾಗುವ ಲೌಕಿಕ ವ್ಯವಹಾರಕ್ಕೆ ಎಂಬ ನಿಲುವೇ ಪ್ರಧಾನವಾಗಿ ಕಂಡುಬರುವುದನ್ನು ಗಮನಿಸಬಹುದು.

ಒಕ್ಕಲಿಗ ಸಮುದಾಯದಲ್ಲಿ 'ಕೂಡಿಕೆ' ಪದ್ಧತಿಯ ಬಗ್ಗೆ 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಪ್ರಸ್ತಾಪವಾಗಿರುವುದನ್ನು ಈಗಾಗಲೇ ಗಮನಿಸಲಾಗಿದೆ. 'ಕುವೆಂಪು ಕೂಡಿಕೆಯ ಪದ್ಧತಿಯು ಸ್ತ್ರೀಪರವಾಗಿರುವ ಒಂದು ಪರಿಹಾರ ಮಾರ್ಗವೆಂದು ಅದನ್ನು ತಮ್ಮ ಕೃತಿಯಲ್ಲಿ ಎತ್ತಿ ಹಿಡಿಯಬೇಕೆಂಬ ಕಾಳಜಿಯಿಂದೇನೂ ತಂದಿಲ್ಲ. ಅಲ್ಲಿ ಪುರುಷ ಹಿತಾಸಕ್ತಿಯೇ ಅಡಗಿರುವುದು ಕಾಣುತ್ತದೆ. ಆದರೆ ಬಿಳುಮನೆ ರಾಮದಾಸ್ ಅವರ 'ನಂಬಿಕೆಟ್ಟವರಿಲ್ಲವೊ' ಕಾದಂಬರಿ ಈ ಪದ್ಧತಿಯ ಎತ್ತಿ ಹಿಡಿಯುವ ದನಿಯಲ್ಲಿ ಮಾತನಾಡುತ್ತದೆ. ಈ ಕಾದಂಬರಿಯಲ್ಲಿ ಬರುವ ನಾಗಪ್ಪಗೌಡ ಬಾಲವಿಧವೆ ವೆಂಕಮ್ಮನನ್ನು ಮದುವೆಯಾಗಲು ಬಯಸಿದ್ದ. ಹದಿಮೂರು ವರ್ಷದ ತರುಣಿ ಜೀವನ ಹಾಳಾಗಕೂಡದೆಂದು ಆಕೆಯ ತಂದೆ-ತಾಯಿಗಳು ಸೇರಿದಂತೆ ಪ್ರಗತಿಪರ ಚಿಂತನೆಯ ಒಕ್ಕಲಿಗ ಮುಂದಾಳುಗಳು ಮದುವೆ ಮಾಡಲು ನಿಶ್ಚಯಿಸಿದ್ದರು. ವಿಧವೆಯನ್ನು ವಿಧುರನಾದವನು ಮದುವೆಯಾಗುತ್ತಿದ್ದ ಕಾಲ ಸಂದರ್ಭದಲ್ಲಿ ಅವಿವಾಹಿತ ಹುಡುಗ ಮದುವೆಯಾಗುವುದು ಸರಿಯಲ್ಲವೆಂದು ಕೆಲವು ಅವಿವೇಕಿಗಳು ಆಗಗೊಡಲಿಲ್ಲ. ಕೊಪ್ಪ ತಾಲ್ಲೂಕಿನ ಒಕ್ಕಲಿಗರ ಗುರುಮಠಕ್ಕೆ ದೂರು ನೀಡಿ ಜಾತಿಯಿಂದ ಹೊರಹಾಕಲು ಸಾಧ್ಯವಾಗಲಿಲ್ಲ. ಆದರೆ ಕೊಳಿಗೆ ಗಣಪಯ್ಯ ಎಂಬುವವರು ಬಲವಾದ ಸರ್ಪಗಾವಲಿನಲ್ಲಿ ಅವರನ್ನೆಲ್ಲಾ ವಿರೋಧಿಸಿ ಉಡ್ಕಿ ಮದುವೆ ಮಾಡಿಕೊಂಡರು. ರಾತ್ರಿ ಹೊತ್ತಿನಲ್ಲಿ ತುಳಸಿಕಟ್ಟೆಯ ಮುಂದೆ ಗಂಡು ಹೆಣ್ಣನ್ನು ನಿಲ್ಲಿಸಿ ಜೋಯಿಸರಿಂದ ಮಂತ್ರ ಹೇಳಿಸಿ ತಾಳಿಕಟ್ಟಿಸಲಾಗಿತ್ತು. ಆದಕಾರಣ ಈ ಕುಟುಂಬವನ್ನು ಮೂಡುಮನೆಯವರು (ವಿಧವೆ ಮಕ್ಕಳ ಸಂತತಿ) ಎಂದು ಕೀಳಾಗಿ ಕಾಣಲಾಗುತ್ತಿತ್ತು. ಕಾಲ ಸರಿದಂತೆ ಆರ್ಥಿಕ ಪ್ರಗತಿಯಾದಂತೆ ಈ ಮಡಿ, ಕೀಳು ಭಾವನೆಯೆಲ್ಲ ನಶಿಸಿಹೋದವು.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಹಳೇಪೈಕದ ಕಾಡಿ, ಹೂವಿ ಇವರೆಲ್ಲಾ ಪುರುಷರ ಲೈಂಗಿಕ ದೌರ್ಜನ್ಯವನ್ನು ಮೂಕ ಪಶುವಿನಂತೆ ಸಹಿಸಿಕೊಂಡು ಬದುಕುತ್ತಿರುವವರು. ಅಲ್ಲಿ ಬರುವ ಹಳೆಪೈಕದ ಯೆಂಕಿ ವಿಶಿಷ್ಟವಾದ ಪಾತ್ರ, ಕಾಡಿನ ಸೆರಗಿನಲ್ಲಿ ಒಂಟಿಯಾಗಿ ವಾಸಮಾಡುತ್ತ ಸುತ್ತಮುತ್ತಲ ಜನರಿಗೆ ಜಾತಿ ತಾರತಮ್ಯವಿಲ್ಲದೆ ಹೆರಿಗೆ ಮಾಡಿಸುವುದು ; ಮದ್ದುಕೊಡುವುದು, ಕಳ್ಳ ಬಸಿರು ತೆಗೆಯುವುದು ಮುಂತಾಗಿ ತನಗೆ ತಿಳಿದ ಲೋಕದ ಸೇವೆ ಮಾಡುತ್ತಾ ಅದರಲ್ಲಿಯೇ ಜೀವನಯಾಪನೆ ಮಾಡುವಂತವಳು. ಆಕೆ ಯಾರ ಅಡಿಯಾಳಲ್ಲ ಹಾಗೆ ಯಾರಿಗೂ ಹೊರೆಯಾಗಿಲ್ಲ. ಹುಲಿಕಲ್ಲು ನೆತ್ತಿಗೆ ಮುಕುಂದಯ್ಯನ ಜೊತೆ ಹೋಗುವ ಚಿನ್ನಮ್ಮನಿಗೆ ತನ್ನ ಮನೆಯಲ್ಲಿ ಸುಧಾರಿಸಿಕೊಳ್ಳಲು ಆಶ್ರಯಕೊಟ್ಟು ದಣಿವಾರುವಂತೆ ಉಪಚರಿಸುತ್ತಾಳೆ. ಆ ಪರಿಸರದಲ್ಲಿ ತಿರಸ್ಕಾರಕ್ಕೆ ಒಳಗಾಗಿದ್ದ ನಾಗತ್ತೆಗೆ ಆಶ್ರಯ ನೀಡುತ್ತಾಳೆ. ಈ ಮೂಲಕ ದೊಡ್ಡ ವ್ಯಕ್ತಿತ್ವವುಳ್ಳ, ಮಾತೃತನವುಳ್ಳ ಜೀವಿಯಾಗಿ ಕಂಡುಬರುತ್ತಾಳೆ.

ಸ್ತ್ರೀ : ತಳಸಮುದಾಯ

ಮಲೆನಾಡ ಪರಿಸರದಲ್ಲಿ ತಳಸಮುದಾಯದ ಬದುಕನ್ನು ಕುರಿತ ಅದೇ ಸಮುದಾಯದಿಂದ ಬಂದ ಲೇಖಕರು ಇಲ್ಲವೆನ್ನುವಷ್ಟು ವಿರಳ. ಇವರ ಬದುಕು ಕಲಾತ್ಮಕವಾದ ರೂಪವನ್ನು ಮೇಲುವರ್ಗದ ಸಮುದಾಯದಿಂದ ಬಂದ ಲೇಖಕರ ಕೃತಿಗಳಲ್ಲಿ ಕಾಣಬಹುದಾಗಿದೆ. ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡತಿಯ ಕಾದಂಬರಿಗಳು ಜಮೀನ್ದಾರಿ ವರ್ಗದ ಬದುಕನ್ನು ಚಿತ್ರಿಸುತ್ತಲೇ

ಅವರನ್ನು ಅವಲಂಬಿಸಿದ ತಳಸಮುದಾಯದ ಬದುಕನ್ನು ಚಿತ್ರಿಸುತ್ತವೆ. ಉಳಿದೆಲ್ಲ ಸಮುದಾಯಗಳಲ್ಲಿ ಸ್ತ್ರೀ ಹೇಗೆ ಪುರುಷನ ಅಧೀನವೋ ಹಾಗೆ ತಳಸಮುದಾಯದ ಸ್ತ್ರೀ ಕೂಡ ಪುರುಷನ ಅಧೀನದಲ್ಲಿಯೇ ಬರುವಂತವಳು. ಆದಾಗ್ಯೂ ಪುರುಷನ ಅಧೀನತೆಯ ಸಡಿಲತೆಯನ್ನು ಕೆಳಸ್ತರದ ಸಮಾಜದ ಸಂಬಂಧಗಳಲ್ಲಿ ನಾವು ಕಾಣಬಹುದು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ನಾಯಿಗುತ್ತಿ ಮತ್ತು ತಿಮ್ಮಯರ ಸಂಬಂಧವನ್ನು ಗಮನಿಸಿದಾಗ, ಇಬ್ಬರೂ ಪ್ರೌಢಾವಸ್ಥೆಯಲ್ಲಿರುವವರು, ಆರ್ಥಿಕ ಸ್ಥಿತಿಯಲ್ಲಿ ಸಮಾನರು, ಒಡೆಯರ ಮನೆಯಲ್ಲಿ ಇಬ್ಬರೂ ದುಡಿದೇ ತಿನ್ನಬೇಕಾದ ಹಿನ್ನೆಲೆಯುಳ್ಳವರು. ಆಳು ಮಕ್ಕಳ ಪ್ರೀತಿಪ್ರೇಮಗಳು, ವಿವಾಹಗಳು ಒಡೆಯರ ಅಧೀನಕ್ಕೆ ಒಳಪಟ್ಟಿದೆ. ಇದನ್ನು ಇಬ್ಬರೂ ಮೀರಲೆತ್ನಿಸುವುದೇ ಮುಖ್ಯವಾದ ಸಂಗತಿ. ಗುತ್ತಿಗೆ ಬೇರೆ ಹೆಣ್ಣಿನ ಜೊತೆಯಲ್ಲಿನ ಲೈಂಗಿಕ ಅನುಭವವಿದೆ. ಹಾಗೆ ತಿಮ್ಮಿಗೂ ಕೂಡ ಬೇರೆ ಗಂಡಸಿನ ಜೊತೆಯಲ್ಲಿನ ಲೈಂಗಿಕ ಅನುಭವವಿದೆ. ಆದರೆ ಗುತ್ತಿ–ತಿಮ್ಮಿಯರ ಪ್ರೇಮ ಈ ಲೈಂಗಿಕ ಅಥವಾ ಶೀಲದ ಮಡಿವಂತಿಕೆಯನ್ನು ಮೀರಿದ್ದು, ಗುತ್ತಿ ಜೊತೆಯಲ್ಲಿ ಓಡಿ ಬರುವ ತಿಮ್ಮಿ ಆತನ ಅಧೀನಳೇನೂ ಅಲ್ಲ. ತಾಯತ ಕಟ್ಟಿಕೊಂಡು ತಿಮ್ಮಿಯನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡು ಬರುತ್ತಿರುವೆನೆಂಬ ಭ್ರಾಂತಿಯು ಗುತ್ತಿಗೆ. ಅದೇ ರೀತಿ ತಾಯತ ಬಚ್ಚನು ಕಟ್ಟಿಕೊಂಡಿದ್ದ ಎಂದು ಗುತ್ತಿ ಪೆಚ್ಚಾಗುವಂತೆ ಮಾಡಿದ್ದನ್ನು ಗಮನಿಸಬಹುದು. ಹಾಗೆಯೇ ಯಾವುದೋ ಆವೇಶದಲ್ಲಿ 'ಸನಿಮುಂಡೆ' ನಿನ್ನ ದೆಸಿಂದ ನನ್ನ ನಾಯಿನೂ ಹೋಯ್ತಲ್ಲೇ! ಎಂದು ಸಿಡಿಕಿದಾಗ, ತಿಮ್ಮಿ ಯಾವ ತಪ್ಪೂ ಮಾಡದ ತನಗೆ ಬಾವ ಹೀಗೇಕೆ ಬಯ್ಯುತ್ತಾನೆಂದು ಮೊದಲು ಕಂಗಾಲಾದಳು. ಸುಧಾರಿಸಿಕೊಂಡು ಅಷ್ಟೇ ಜೋರಾಗಿ ಪ್ರತಿಭಟಿಸುತ್ತಾಳೆ. 'ನಾನ್ಯಾಕೆ ಆದೇನು ಸನಿಮುಂಡೆ? ಬೇಕಾದರೆ ನೀನೆ ಆಗು ಸನಿಮುಂಡೆಗಂಡ'[೩೬] ಎಂದು ಮುಂದೆ ಕ್ಷಮೆಯಾಚಿಸುವರೆಗೂ ಈ ಸಂದರ್ಭ ಮುಂದುವರೆದು ತಿಮ್ಮಿ ತನ್ನ ಸ್ವಾಭಿಮಾನವನ್ನು ಮೆರೆಯುತ್ತಾಳೆ. ಇದನ್ನು ಮೇಲುವರ್ಗದ ಸ್ತ್ರೀ ಸಮುದಾಯದಲ್ಲಿ ಸಾಮಾನ್ಯವಾಗಿ ಕಾಣಲು ಸಾಧ್ಯವಿಲ್ಲ.

ತನ್ನ ಗಂಡನಿಗೆ ಹೊನ್ನಳ್ಳಿ ಹೊಡೆತ ಥಳಿಸಿದರು ಎಂಬ ಸುದ್ದಿ ಕೇಳಿದ ಸಣ್ಣಬೀರನ ಹೆಂಡತಿ ಲಕ್ಕಿ ಗೋಳೋಎಂದು ಅಳಲಿಲ್ಲ, ಬದಲಿಗೆ ತನ್ನ ಗಂಡ ತನ್ನ ಮೇಲೆ ಆಗಾಗ ನಡೆಸುತ್ತಿದ್ದ ಹಲ್ಲೆಯ ಹಿನ್ನೆಲೆಯಲ್ಲಿ ತನ್ನೊಳಗೆ ಇರುವ ನೋವು, ಅಸಮಧಾನ ಹೀಗೆ ಸ್ಫೋಟಗೊಳ್ಳುತ್ತದೆ. "ಹಂಗಾಗಬೇಕು ಅವರಿಗೆ ! ಬೀಳಲಿ ಇನ್ನು ಎಲ್ಡುಕನಾತಿ! ನಂಗೆ ಮಾತ್ರ ಬೆನ್ನ ಮ್ಯಾಲೆ ಇಕ್ಕಡಸ್ತಿರಲ್ಲಾ! ನಂಗೆ ಹೆಂಗೆ ನೋವಾಗ್ತದೆ ಅನ್ನಾದು, ಈಗ್ಲದ್ರೂ ಗೊತ್ತಾಗ್ಲಿ"[೩೭] ಎಂದು ಸಮಾಧಾನದ ಪ್ರತಿಕ್ರಿಯೆ ನೀಡುತ್ತಾಳೆ. ಹಾಗೆಂದು ಗಂಡನ ಮೇಲೆ ಅವ್ಯಾಜ ಪ್ರೇಮವನ್ನು ಕಳಕೊಡವಳೇನಲ್ಲ. ಪ್ರತ್ಯಕ್ಷವಾಗಿ ಗಂಡನ ಸ್ಥಿತಿ ನೋಡಿದಾಗ ಸಹಜವಾಗಿಯೇ ರೋಧಿಸಿ, ಹಿಡಿಶಾಪಹಾಕುವುದರ ಮೂಲಕ ತನ್ನ ಪ್ರತಿಭಟನೆಯನ್ನು ಆ ಸ್ಥಿತಿಗೆ ಕಾರಣರಾದವರ ಮೇಲೆ ವ್ಯಕ್ತಪಡಿಸುತ್ತಾಳೆ.

ತಿಮ್ಮಿ ತಾನೊಲಿದ ನಾಯಿಗುತ್ತಿಯ ಜೊತೆ ಓಡಿ ಬರುವ ಸಾಹಸ ಮಾಡಿದಳು. ಅದಕ್ಕೆ ತಾಯಿ ಸೇಸಿಯ ಪ್ರೋತ್ಸಾಹವು ಇತ್ತು. ತಂದೆ ದೊಡ್ಡಬೀರನಿಗೆ ಮಹಾ ಅಪರಾಧವಾಗಿ ತೋರುತ್ತದೆ. ಈತನ ಒಲವು ನಿಲುವು ಏನಿದ್ದರೂ ಒಡೆಯರ ಇಚ್ಛೆಯನ್ನು ಅವಲಂಬಿಸಿದೆ. ಈ ಊಳಿಗಮಾನ್ಯ ವ್ಯವಸ್ಥೆಯಲ್ಲಿ

ಮೇಲು ವರ್ಗಕ್ಕೆ ಯಾವ ಮದುವೆಯ, ತಾಳಿಯ ಪಾವಿತ್ರ್ಯತೆಯನ್ನು ಬಲವಾಗಿ ಪಾಲಿಸಿಕೊಂಡು ಬರಲಾಗಿದೆಯೊ. ಅದೇ ಕೆಳವರ್ಗದ ಸ್ತ್ರೀಯ ಮದುವೆಯ, ತಾಳಿಯ ಪಾವಿತ್ರ್ಯದ ಬಗ್ಗೆ ನಿಯಮವನ್ನು ಮುರಿಯಲಾಗುತ್ತದೆ. ತಿಮ್ಮಿ–ಗುತ್ತಿ ಮದುವೆಯಾಗಿದ್ದರೂ ಅದಕ್ಕೆ ಪ್ರಾಮುಖ್ಯತೆಯನ್ನು, ಪಾವಿತ್ರ್ಯವನ್ನು ನೀಡದೆ ತಿಮ್ಮಿಯ ತಾಳಿಯ ಕಿತ್ತು ಬಚ್ಚನೊಂದಿಗೆ ಮದುವೆ ಮಾಡುವ ಏರ್ಪಾಟು ನಡೆಯುತ್ತದೆ. ಮುಕುಂದಯ್ಯ, ತಿಮ್ಮಿಗೆ ಬಚ್ಚನನ್ನು ಮದುವೆಯಾಗಲು ಇಷ್ಟವಿಲ್ಲವೆಂದೂ, ಆಕೆ ತನ್ನಿಚ್ಛೆಯಿಂದಲೇ ಗುತ್ತಿಯ ಜೊತೆ ಹೋಗಿದ್ದಳು ಎಂದು ಬಾಹ್ಯದಲ್ಲಿ ಆಧುನಿಕತೆ ತೊಟ್ಟುಕೊಂಡಿದ್ದ ದೇವಯ್ಯನನ್ನು ಪ್ರಶ್ನಿಸುತ್ತಾನೆ. ಅದಕ್ಕೆ ದೇವಯ್ಯನ ಪ್ರತಿಕ್ರಿಯೆಯಲ್ಲಿ ಊಳಿಗಮಾನ್ಯ ಕ್ರೌರ್ಯ ವ್ಯಕ್ತವಾಗುತ್ತದೆ.

"ಹುಡುಗಿ ಇಷ್ಟಾನೊ ಹಿ.......ಹಿ...... ಅಪ್ಪ, ಅಮ್ಮ ಸಾಲಕೊಟ್ಟೋರು, ಉಪ್ಪು ಅನ್ನಹಾಕಿ ಸಾಕ್ದೋರು, ಯಾರ ಇಷ್ಟಾನೂ ಲೆಕ್ಕಕ್ಕಿಲ್ಲ? ಹುಡುಗಿ ಇಷ್ಟ ಮಾತ್ರ ಲೆಕ್ಕಕ್ಕೆ ಬರ್ತದೆ? ಒಳ್ಳೆ ನ್ಯಾಯ ಬಿಡೊ ನಿನ್ದೂ"[೩೮] ಇಂಥಹ ಪರಂಪರಾಗತವಾದ ಊಳಿಗಮಾನ್ಯ ಯಜಮಾನಿಕೆ ನಿಲುವನ್ನು ಒಲಿದ ಜೀವಗಳು ಆ ಪ್ರಾಂತ್ಯವನ್ನೇ ಬಿಟ್ಟು ತಲೆಮರೆಸಿಕೊಂಡು ಓಡಿ ಹೋಗುವುದರ ಮೂಲಕ ವಿರೋಧವನ್ನು ವ್ಯಕ್ತಪಡಿಸಿವೆ. ಇಂತಹ ಸಂದರ್ಭ ಚಿನ್ನಮ್ಮನಿಗೆ ಬಂದಿದ್ದರೆ ಬಹುಶಃ ಈ ರೀತಿ ಮಾಡಲಿಕ್ಕೆ ಸಾಧ್ಯವಿರಲಿಲ್ಲ.

ದೇವಯ್ಯ ಮನೆಯಲ್ಲಿ ದೇವಮ್ಮನಂತ ಹೆಂಡತಿಯಿದ್ದೂ ಪಾದ್ರಿಮಗಳ ಜೊತೆ, ಅಂತಕ್ಕಶೆಟ್ಟಿ ಮಗಳು ಕಾವೇರಿಯ ಜೊತೆ ಸಂಬಂಧ ಹೊಂದಿದ್ದಾನೆ. ಅದು ಆತನಿಗೆ ದೊಡ್ಡಸ್ತಿಕೆಯ, ಪ್ರತಿಷ್ಠೆಯ ಸಂಗತಿಯಾಗಿದೆ. ಆದರೆ ಕಾವೇರಿ ತಾನು ಕೊಟ್ಟ ಉಂಗುರ ತೋರಿಸಲಿಲ್ಲ ಎಂಬ ಕಾರಣಕ್ಕೇ ತಪ್ಪು ಊಹೆ ಮಾಡುತ್ತಾನೆ. ಈ ಸೆಟ್ಟರ ಹುಡುಗಿಯರ ಹಣೇ ಬರಹವೇ ಹೀಗೆ. ಒಬ್ಬನ್ನ ನಂಬಿಕೊಂಡಿರುವ ಜಾತಿಯಲ್ಲವೆಂದು ವಿರೋಧ ವ್ಯಕ್ತಪಡಿಸುವಲ್ಲಿ ಪುರುಷ ಎಷ್ಟು ಸಂಬಂಧವನ್ನು ಹೊಂದಿದ್ದರೂ ಈ ಸಮಾಜದ ಹಾಗೂ ತನ್ನ ದೃಷ್ಟಿಯಲ್ಲಿ ತಪ್ಪಲ್ಲ. ಆದರೆ ಹೆಣ್ಣು ಮಾತ್ರ ತನಗೆ ನಿಷ್ಠಳಾಗಿಯೇ ಇರಬೇಕೆಂದು ದೇವಯ್ಯನಂತವರು ಬಯಸುತ್ತಾರೆ. ಮುಕುಂದಯ್ಯನ ಅಣ್ಣ ರಂಗಪ್ಪಗೌಡ ಮದುವೆಯಾಗುವ ಮುನ್ನ ಮತ್ತೊಬ್ಬ ಗಂಡಸಿನ ಜೊತೆ ಓಡಿ ಹೋಗುವ ಹೆಣ್ಣು ಗರತಿಯಾಗಲು ಯೋಗ್ಯಳಲ್ಲ. ಆಕೆ ವೇಶ್ಯೆಯಿದ್ದ ಹಾಗೆ ಎಂದು ಪ್ರತಿಭಟಿಸಿದವನು ಕೆಳಜಾತಿಗೆ ಸೇರಿದ ವಿಧವೆ ಅಕ್ಕಣಿಯನ್ನು ಯಾವ ಕನಿಕರ, ಕೀಳರಿಮೆಯಿಲ್ಲದ ತನ್ನ ವಶ ಮಾಡಿಕೊಳ್ಳುತ್ತಾನೆ. ಒಡೆಯರಿಗೆ ಒಪ್ಪಿಸಿಕೊಳ್ಳಬೇಕೆಂಬ ನಿಲುವಿನಿಂದಲೊ, ನಿಸ್ಸಹಾಯಕ ಸ್ಥಿತಿಯಿಂದಲೊ, ತನಗೆ ಸರಿಸಮಾನನಾದ ಚೀಂಕ್ರನನ್ನು ವಿರೋಧಿಸಿ ರಂಗಪ್ಪಗೌಡನಿಗೆ ಒಪ್ಪಿಸಿಕೊಂಡಳು.

ಅಕ್ಕಣಿಯ ಗಂಡ ಪಿಜಣ ಅನಾರೋಗ್ಯದಿಂದ ನರಳುತ್ತಿದ್ದು, ತನ್ನ ಹೆಂಡತಿಗೆ ದೇಹಸುಖ ನೀಡಲಾರೆನೆಂಬ ಕೊರಗಿದೆ. ಆಕೆ ಬೇರೆಯವರಿಂದ ಆ ಸುಖ ಪಡೆಯಲಿ ಎಂಬ ಉದಾರ ಭಾವನೆಯಿದೆ. ಆದರೆ ಮರ್ಯಾದೆಗಾಗಿ ಆತಂಕಗೊಳ್ಳುತ್ತಾನೆ. ತಾನು ಸತ್ತಮೇಲಾದರೂ ಆಕೆ ಆ ಸುಖವನ್ನು ಬೇರೆಯವರಿಂದ ಪಡೆಯಲೆಂದು ಆತ್ಮ ಹತ್ಯೆ ಮಡಿಕೊಳ್ಳುವುದರ ಮೂಲಕ ತ್ಯಾಗಿಯಾಗುತ್ತಾನೆ. ಈತನ ಮುಂದೆ ಗುಪ್ತರೋಗದಿಂದ ನರಳುವ ಸಿಂಭಾವಿ ಭರಮ್ಮೆ ಹೆಗಡೆ ತನ್ನ ಹೆಂಡತಿಗೆ ಮಕ್ಕಳಾಗುವುದಿಲ್ಲವೆಂದು ಇನ್ನೊಂದು ಹೆಣ್ಣನ್ನು ಮದುವೆಯಾಗಲು ಹೊರಟಿರುವುದು ವಿಪರ್ಯಾಸವಾಗಿ, ಅಮಾನವೀಯವಾಗಿ

ಕಂಡುಬರುತ್ತದೆ. ಅಂದರೆ ಮೇಲುವರ್ಗದ ಸ್ತ್ರೀ ಗೌರವ, ಪ್ರತಿಷ್ಠೆ, ಮರ್ಯಾದೆ, ಶ್ರೀಮಂತಿಕೆಯ ಚೌಕಟ್ಟಿನಲ್ಲಿ ಕೆಳವರ್ಗದ ಸ್ತ್ರೀಗಿಂತ ಹೆಚ್ಚು ಬಂಧನಕ್ಕೆ ಶೋಷಣೆಗೆ, ಮಾನಸಿಕ ಯಾತನೆಗೆ ಗುರಿಯಾಗಿದ್ದಾಳೆ ಎಂಬುದು ವ್ಯಕ್ತವಾಗುತ್ತದೆ.

ದೊಡ್ಡಬೀರ ಮಾಡಲು ಸಾಧ್ಯವಿಲ್ಲದ ಧೈರ್ಯವನ್ನು, ಕಾರ್ಯವನ್ನು ಅವನ ಹೆಂಡತಿ 'ಸೇಸಿ' ಮಾಡುತ್ತಾಳೆ. ತನ್ನ ಅಣ್ಣನ ಮಗನಾದ ಗುತ್ತಿಗೆ ಮದುವೆ ಮಾಡಬೇಕೆಂಬ ಛಲದಿಂದ ತಿಮ್ಮಿ ಗುತ್ತಿಯ ಜೊತೆ ಓಡಿ ಹೋಗುವಂತೆ ಸಹಕರಿಸುತ್ತಾಳೆ. ಏನೂ ತಿಳಿಯದಂತೆ ನಟಿಸಿ, ಮೈಮೇಲೆ ಗಣಬರಿಸಿಕೊಂಡಂತೆ ಮಾಡಿ ಕೇರಿಯ ಜನ ತಿಮ್ಮಿಯ ಹುಡುಕುವುದರ ಬಗ್ಗೆ ದಿಕ್ಕು ತಪ್ಪಿಸುತ್ತಾಳೆ. ಯಾವಾಗ ಈ ಹಿನ್ನಲೆಯಲ್ಲಿ ಸತ್ಯ ಬಾಯಿಬಿಡಿಸಲು ಗಂಡ ಮಗನಿಗೆ ಹೊನ್ನಳ್ಳಿಯ ಹೊಡೆತ ಬಿದ್ದಾಗ ಮಾತ್ರ ಅಪಾರವಾದ ಧೈರ್ಯ ತಂದುಕೊಂಡು ಭೂಮಾಲಿಕಶಾಹಿಯೇ ಬೆರಗಾಗುವಂತೆ ಆ ಕ್ರೌರ್ಯವನ್ನು ತಡೆದು, ಸತ್ಯವನ್ನು ಹೇಳುವುದನ್ನು ಗಮನಿಸಬಹುದು. ಅಂದರೆ ತನ್ನ ಸಾಮಾನ್ಯ ಸ್ಥಿತಿಯನ್ನು ಮೀರುವ ವಿಶಿಷ್ಟ ವ್ಯಕ್ತಿತ್ವ ಸೇಸಿಯದಾಗಿದೆ. ಆಕೆಗೆ ತನ್ನ ಮಗಳಿಗೆ ಆಗುತ್ತಿರುವ ಅನ್ಯಾಯದ ಅರಿವಿದೆ, ಒಡೆಯನ ಆಜ್ಞೆ ಧಿಕ್ಕರಿಸಿ ಆ ಬಗ್ಗೆ ಪ್ರತಿತಂತ್ರಗಳನ್ನು ಸಂದರ್ಭಾನುಸಾರ ಮಾಡಿ ಗೆಲ್ಲುವ ಹೆಣ್ಣಾಗಿದ್ದಾಳೆ. ಅವಳ ಮುಂದೆ ಅವಳ ಸೊಸೆಯಂದಿರು ಏನೂ ಅಲ್ಲವೆಂಬಂತೆ ಕಂಡುಬರುತ್ತಾರೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ತಿಮ್ಮಿ, ಸೇಸಿಯಂತಹ ತಳಸಮುದಾಯದ ಸ್ತ್ರೀಯರಂತೆಯೇ ಪೀಂಚಲು ಕೂಡ ಬಹಳ ಮುಖ್ಯವಾಗುತ್ತಾಳೆ. ಗಟ್ಟದ ಕೆಳಗಿನಿಂದ ಬಂದ ಐತ-ಪೀಂಚಲು ಅವರದು ಅನುರಾಗದ ಸಂಸಾರ ; ಆದರ್ಶದ ದಾಂಪತ್ಯ. ಐತನಂತಹ ಜಾಣ ಪೆದ್ದನನ್ನು, ಹಿತ್ತಾಳೆ ಕಿವಿಯಂತ ಗಂಡನನ್ನು ತನ್ನ ಪ್ರೀತಿಯ ನಡವಳಿಕೆಯಿಂದಲೇ ತಿದ್ದಬಲ್ಲ ಜಾಣೆಯಾಗಿ ಕಂಡುಬರುತ್ತಾಳೆ. ಮುಕುಂದಯ್ಯನ ಜೊತೆ ಚಿಕ್ಕನಿಂದಲೂ ಓಡಾಡಿ ಬೆಳೆದ ಆಕೆಗೆ ಮದುವೆಯ ನಂತರ ಸಹಜವಾದ ನಾಚಿಕೆ, ಗಾಂಭಿರ್ಯವನ್ನು ಮೂಡಿಸಿಕೊಂಡಿದ್ದಾಳೆ. ಹಾಗಿದ್ದೂ ಮುಕುಂದಯ್ಯ ಬಯಸಿದರೆ ತನ್ನನ್ನು ಒಪ್ಪಿಸಿಕೊಳ್ಳಲು ಆಕೆಯ ಮನ ತರೆದಿದೆ. ಆ ಬಗ್ಗೆ ಆಕೆಗೆ ಯಾವ ಪಾಪ ಪ್ರಜ್ಞೆಯು ಕಾಡುವುದಿಲ್ಲ. ಹಾಗೆಂದು ಐತನ ಮೇಲೆ ಸ್ವಲ್ಪವೂ ಪ್ರೀತಿ ಕಡಿಮೆ ಮಾಡಿಕೊಂಡವಳಲ್ಲ. ಮುಕುಂದಯ್ಯನ ಬಗ್ಗೆ ಮಾತ್ರ ಇಂತಹ ವಿಚಿತ್ರವಾದ ಮನಸ್ಥಿತಿಯನ್ನು ಹೊಂದಿದ್ದಳು. ಸುಸಂಸ್ಕೃತನಾದ ಮುಕುಂದಯ್ಯನಿಂದ ಆ ದುರುಪಯೋಗ ಆಗಲಿಲ್ಲ. ಚಿನ್ನಮ್ಮ ಮತ್ತು ತಿಮ್ಮಿಯರ ಕ್ರಾಂತಿಕಾರಕಾದ ಹೋರಾಟದಲ್ಲಿ ಅವಳ ಪಾಲಿದೆ. ಮೇಲು ಜಾತಿಯ ಚಿನ್ನಮ್ಮನ ಸಾಮಿಪ್ಯವನ್ನು ಆಕೆ ಹೇಗೆ ಹಿತವಾಗಿ ಬಯಸುತ್ತಾಳೊ ಹಾಗೆ ತನಗಿಂತ ಕೆಳಜಾತಿಯ ತಿಮ್ಮಿಯ ಬಗೆಗೂ ಆ ಭಾವನೆಯಿದೆ. ಮಡಿಮೈಲಿಗೆಗಳನ್ನು ಮೀರುವ ಮನಸ್ಥಿತಿ ಆಕೆಯದು. ಐತ ಮತ್ತು ಪೀಂಚಲು ಶಿವ-ಶಿವಾಣಿಯರಂತೆ ಒಂದು ಸಂದರ್ಭದಲ್ಲಿ ಕಂಡು ಬರುವಷ್ಟರಮಟ್ಟಿನ ಆದರ್ಶ ದಂಪತಿಗಳಾಗಿದ್ದಾರೆ. ಅದರಲ್ಲಿ ಆ ದಾಂಪತ್ಯಕ್ಕೆ ಪೀಂಚಲು ನಡವಳಿಕೆಯೇ ಮುಖ್ಯವಾದ ಅಸ್ತಿತ್ವ ಎಂಬುದನ್ನು ಗಮನಿಸಬೇಕು.

'ಕಾನೂರು ಹೆಗ್ಗಡತಿ'ಯಲ್ಲಿ ಚಿತ್ರಿತವಾಗಿರುವ ಕೆಳವರ್ಗಕ್ಕೆ ಸೇರಿದ ಸ್ತ್ರೀಪಾತ್ರಗಳಲ್ಲಿ 'ಗಂಗೆ' ಪ್ರಮುಖಳಾಗುತ್ತಾಳೆ. ಸುಬ್ಬಮ್ಮನ ದುರಂತಕ್ಕೆ ಈಕೆಯೂ ಕಾರಣಳಾದ್ದರಿಂದ ಮಂಥರೆಯಂತೆ ಓದುಗರ

ದೃಷ್ಟಿಯಲ್ಲಿ ಕೀಳಾದ ಪಾತ್ರವಾಗಿ ಕಂಡುಬರುತ್ತಾಳೆ. ಆದರೆ ಪುರುಷ ಪ್ರಧಾನ ಶೋಷಣೆಯಲ್ಲಿ ಆಕೆಯ ಪ್ರತಿಭಟನೆ ಈ ರೂಪದಲ್ಲಿ ವ್ಯಕ್ತವಾಗುತ್ತದೆ ಎಂಬುದನ್ನು ಗಮನಿಸಬೇಕು. ಗಟ್ಟದ ಕೆಳಗಿನಿಂದ ಬಂದ ಈ ಹೆಣ್ಣಾಳು ಮುದುಕನನ್ನು ಕೈಹಿಡಿಯಬೇಕಾದ ಸ್ಥಿತಿ ಬಂದು, ಗಂಡನಿಂದ ಪ್ರಿಯಕರ ಹತನಾದ ಕಾರಣದಿಂದ ರಂಗಪ್ಪಶೆಟ್ಟಿಯೊಡನೆ ಕಾನೂರಿಗೆ ಬಂದವಳು. ರಂಗಪ್ಪಶೆಟ್ಟಿ ಆಕೆಯನ್ನು ಲೈಂಗಿಕವಾಗಿ ಶೋಷಿಸುತ್ತಿದ್ದಾನೆ. ಹಾಗೆ ಆಕೆಯ ಮೂಲಕ ಚಂದ್ರೇಗೌಡರನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ. ತನ್ನ ಬದುಕಿನ ಅಸ್ತಿತ್ವ ಚಂದ್ರೇಗೌಡನ ಆಶ್ರಯದಲ್ಲಿರುವಾಗ ಸುಬ್ಬಮ್ಮನ ಪ್ರವೇಶ ಆಕೆಗೆ ಅಡ್ಡಿಯಂತೆ ತೋರುತ್ತದೆ. ಚಂದ್ರೇಗೌಡನಲ್ಲಿ ಇಟ್ಟುಕೊಂಡಿರುವಳಾಗಿರುವುದು ಆಕೆಗೆ ಹೆಮ್ಮೆಯ ವಿಚಾರವೇ ಹೊರತು ಆಕೆ ಲೈಂಗಿಕ ತೃಪ್ತಿ ಪಡೆಯುವುದು ಓಬಯ್ಯನಂತ ಯುವಕನಿಂದ. ಪುರುಷನ ಶೋಷಣೆಯೇ ಆಕೆಯಲ್ಲಿ ಕುಟಿಲತೆ ಮೂಡಲು ಕಾರಣವಾಗುತ್ತದೆ. ಸೇರೆಗಾರ ಗಂಗೆಯ ಮೂಲಕ ಚಂದ್ರೇಗೌಡನನ್ನು ದೋಚುವ ಹಾಗೆ ಗಂಗೆ ಸೇರೆಗಾರನ ಮೂಲಕ ಸುಬ್ಬಮ್ಮನನ್ನು ದೋಚಿದಳು. ಮುಂದೆ ಇಲ್ಲಿ ಬದುಕಲು ಸಾಧ್ಯವಿಲ್ಲವೆನಿಸಿದಾಗ ಸೇರೆಗಾರನೊಂದಿಗೆ ಕೆಳಗೆ ಹಾರಿದಳು. ಇದು ಒಂದು ಬಗೆಯಲ್ಲಿ ಅವಳಿಗಾದ ಶೋಷಣೆಯ ಪ್ರತಿಭಟನೆ ಇದು ಹೇಳಬಹುದು.

ಕೂಲಿಯಾಳುಗಳೆನಿಸಿಕೊಂಡು ದುಡಿದು ಬದುಕುತ್ತಿದ್ದ ಬೈರನ ಹೆಂಡತಿ ಸೇಸಿ, ನಂಜನ ಹೆಂಡತಿ ಇವರುಗಳು ಬಡತನದಲ್ಲಿಯೇ ಸುಖ ಕಂಡವರು. ಮೇಲುವರ್ಗದ ಯಾವ ಸ್ತ್ರೀಗಿಂತಲೂ ಕಡಿಮೆಯಿಲ್ಲದಂತೆ ಪಾತಿವ್ರತ್ಯದಲ್ಲಿ ಬದುಕಿದವರು. ಕುಡಿದು ಬಂದ ಗಂಡಂದಿರಿಂದ ಏಟು ತಿನ್ನುವವರು ಪ್ರತಿಭಟನೆಯ ದನಿ ಎತ್ತದವರು. ಹಾಗಿದ್ದೂ ತಾವು ಪುರುಷರ ಅಧೀನಲ್ಲಿದ್ದೇವೆ ಎಂಬುದಕ್ಕಿಂತ ತಮ್ಮ ಕೆಲಸವನ್ನು ತಮ್ಮ ಪಾಡಿಗೆ ತಾವು ಮಾಡಿಕೊಂಡು ಹೋಗಬೇಕೆಂಬ ಭಾವನೆಯನ್ನೇ ಹೆಚ್ಚಾಗಿ ಹೊಂದಿರುವಂತವರು. ಇವರೆಲ್ಲಾ ಯಥಾಸ್ಥಿತಿಯನ್ನು ಹಾಗೆ ಮುಂದುವರಿಸುವಂತವರು.

ಕಡಿದಾಳ್ ಮಂಜಪ್ಪ ಅವರ 'ಪಂಜರವಳ್ಳಿ ಪಂಜು' ಕಾದಂಬರಿಯಲ್ಲಿ ಪಂಜರವಳ್ಳಿಯ ಕಾಡಿ ಭರಮಿ ಎಂಬ ಹರಿಜನ ದಂಪತಿಗಳಾದ 'ಹೂವಿ'ಗೆ ಮಣಿಕಟ್ಟಿಸಿ (ಗೊರಬಿ ಬಿಡುವ ಪದ್ಧತಿ) ಜಮೀನ್ದಾರ ಸಣ್ಣೇಗೌಡ ತನ್ನವಳಾಗಿ ಇಟ್ಟುಕೊಳ್ಳಬೇಕೆಂಬ ಆಸೆಯನ್ನು ಹೊಂದಿದ್ದು ; ತನ್ನ ಜೀತದಾಳು 'ಕಾಡಿ'ಯ ಮೇಲೆ ಒತ್ತಡ ತರುತ್ತಾನೆ. ಸಾಮಾನ್ಯವಾಗಿ ಬೇರೆಯ ಹೆಣ್ಣುಗಳು ಒಡೆಯನ ಸ್ವತ್ತಾಗುವುದು ಮೇಲೆಂದೋ ಅಥವಾ ನಿಸ್ಸಹಾಯಕತೆಯಿಂದಲೊ ವಶವಾಗುತ್ತಿದ್ದರು. ಆದರೆ 'ಹೂವಿ' ಮೇಲುಜಾತಿಯ ಮನೆಯ ಹೆಣ್ಣುಮಕ್ಕಳು ಮದುವೆಯಾಗಿ ಗಂಡ, ಮಕ್ಕಳೊಂದಿಗೆ ಸುಖಸಂಸಾರವನ್ನು ಮಾಡುವುದನ್ನು ಕಂಡಿದ್ದಳು. ತಾನು ಹಾಗೆ ಆಗಬೇಕೆಂದು ಬಯಸಿದ್ದಳು. ಆ ಕೇರಿಯಲ್ಲಿಯೇ ಚೆಲುವೆಯಾದ ಆಕೆ ತಮ್ಮ ಕುಲದಲ್ಲಿಯೇ ಅಕ್ಷರ ಕಲಿತ ಕರಿಯನನ್ನು ಮದುವೆಯಾಗಬೇಕೆಂಬ ಕನಸು ಕಂಡದ್ದಳು. ಮಣಿಕಟ್ಟಬೇಕೆಂಬ ಒತ್ತಡ ಬಂದಾಗ ಮಣಿಕಟ್ಟುವ ಪದ್ಧತಿ ಅಳಿಸಿಹೋಗುವ ಕಾಲದಲ್ಲಿ ಮಗಳಿಗೆ ಮಣಿಕಟ್ಟುವುದು ತರವಲ್ಲವೆಂದು ಒಡೆಯನ ಮುಂದೆ ವಾದಿಸುವ ಧೈರ್ಯ ತೋರಿದ್ದಳು ಭರಮಿ. ಬದಲಾದ ಕಾಲದಲ್ಲಿ ಮೂಡಿದ ಎಚ್ಚರವಿದು. ಹಾಗಿದ್ದೂ, ಒಡೆಯನ ಮುಂದೆ ನಿಸ್ಸಹಾಯಕರಾದ ಆ ದಂಪತಿಗಳು ಮಗಳಿಗೆ ಮಣಿಕಟ್ಟಿಸುವ ಸಿದ್ಧತೆ ನಡೆಸಿರುವಾಗ 'ಹೂವಿ' ಇದನ್ನೆಲ್ಲ ಧಿಕ್ಕರಿಸಿ ಸಾವಿಗೆ ಶರಣಾದಳು. ಆ ಮೂಲಕ 'ಹೂವಿ'ಯಂತಹ ಎಷ್ಟೋ ಹೆಣ್ಣುಗಳು ಈ ಮಲೆನಾಡ ಪರಿಸರದಲ್ಲಿ ಇಂತಹ ಕ್ರೂರ ವ್ಯವಸ್ಥೆಯ ಬಗ್ಗೆ ತಮ್ಮ ವಿರೋಧವನ್ನು

ವ್ಯಕ್ತಪಡಿಸಿದ್ದಾರೆ. ಹೂವಿ ಧೈರ್ಯಮಾಡಿದ್ದರೆ ಸಾವಿಗೆ ಶರಣಾಗಬೇಕಿರಲಿಲ್ಲ ; ಕರಿಯನ ಜೊತೆ ಹೋಗಬಹುದಾಗಿತ್ತು. ಸ್ವಾತಂತ್ರ್ಯೋತ್ತರ ಕಾಲವಾದ ಕಾರಣ ಕಾನೂನಿನ ಸಹಾಯ ಅವಳಿಗಿತ್ತು. ಆದರೆ ನಿರೂಪಕನಿಗೆ ಜಮೀನ್ದಾರಿ ಕ್ರೌರ್ಯಕ್ಕೆ ಅಸಹಾಯಕರು ಬಲಿಯಾಗುವ ಅಮಾನುಷತೆಯನ್ನು ಎತ್ತಿ ಹೇಳಬೇಕಾಗಿತ್ತು. ಹಾಗಿದ್ದೂ ತಳಸಮುದಾಯದಲ್ಲಿ ಒಂದು ಎಚ್ಚರ, ಅರಿವು, ವಿರೋಧದ ನೆಲೆಗಳು ಮೂಡುತ್ತಿರುವುದು ಇಲ್ಲಿ ಆಶಾದಾಯಕವಾದ ಸಂಗತಿಯಾಗುತ್ತದೆ.

ಯು.ಆರ್.ಅನಂತಮೂರ್ತಿ ಅವರ ಕಥಾಸಾಹಿತ್ಯದಲ್ಲಿ ತಳ ಸಮುದಾಯಗಳ ಸ್ತ್ರೀ ಪಾತ್ರಗಳು ಬರುವುದು ಬಹಳ ಕಡಿಮೆಯೇ. ಬಂದರೂ ಯಥಾಸ್ಥಿತಿಯಿಂದ ಮೇಲೇರದ, ಯಾವ ಭಾವನೆಗಳ ತಾಕಲಾಟವು ಇಲ್ಲದ, ತಮ್ಮ ನೆಲೆಯನ್ನು ಮೀರಲಾರದ ಪಾತ್ರಗಳೇ ಹೆಚ್ಚಾಗಿ ಬರುತ್ತವೆ. ಸಂಸ್ಕಾರ ಕಾದಂಬರಿಯಲ್ಲಿ ಬರುವ ಹರಿಜನಕೇರಿಯ 'ಬೆಳ್ಳಿ' ಶ್ರೀಪತಿಯಂತ ಮೇಲುವರ್ಗದ ಯುವಕರ ದೇಹದ ಬಯಕೆಯನ್ನು ತೀರಿಸುವ ವಸ್ತು ಮಾತ್ರವಾಗಿದ್ದಾಳೆ ಅಥವಾ ವಸ್ತುವನ್ನಾಗಿ ಮೇಲುವರ್ಗ ಕಾಣುತ್ತಿದೆ. ತಮ್ಮ ಕೇರಿಯ ಸಾವಿನ ಸಂಗತಿಯನ್ನು ಭಾವುಕವಾಗಿ ಆಕೆ ಹೇಳುತ್ತಿದ್ದರೂ ಕೇಳುವ ವ್ಯವದಾನ ಅವನದಲ್ಲ. "ಬೆಳ್ಳಿ ಮಲಗಲಿಕೆ ಸರಿಯೇ ಹೊರ್ತು ಮಾತಾಡಲಿಕ್ಕಲ್ಲ"[೩೯] ಎಂದುಕೊಳ್ಳುವ ಶ್ರೀಪತಿ ಅನಿಸಿಕೆಯಲ್ಲಿ ಶೋಷಣೆಯ ಕ್ರೌರ್ಯವನ್ನು ತಣ್ಣಗೆ ಅಭಿವ್ಯಕ್ತಿಸುತ್ತದೆ ಕಾದಂಬರಿ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಕಾವೇರಿ ದೇವಯ್ಯನನ್ನು ಪ್ರೇಮಿಸುವ ಹಾಗೆ 'ಭಾರತೀಪುರ'ದ ಜಗನ್ನಾಥನನ್ನು ಆತನ ಮನೆಯ ಆಳು ಕಾವೇರಿ ತನ್ನ ಹಾವಭಾವಗಳಿಂದ ಆಕರ್ಷಿಸಲು ಪ್ರಯತ್ನಿಸುತ್ತಾಳೆ. ಜಗನ್ನಾಥ ಬಯಸಿದರೆ ತನ್ನನ್ನು ಅರ್ಪಿಸಿಕೊಳ್ಳಲಿಕೆ ಸಿದ್ಧವಾಗಿದ್ದಳು, ಆದರೆ ಪಿಳ್ಳ ತನ್ನನ್ನು ಕುಡಿದ ಮತ್ತಿನಲ್ಲಿ ದೃಷ್ಟಿಸಿ ನೋಡಿದ ತಪ್ಪಿಗೆ ಲಾಕಪ್ ಶಿಕ್ಷೆಗೆ ಒಳಗಾಗುವಂತೆ ಮಾಡಿದಳು. ಇಲ್ಲೂ ಕೂಡ ಮೇಲು ಜಾತಿಗೆ ತಮ್ಮನ್ನು ಒಪ್ಪಿಸಿಕೊಳ್ಳುವ ನೆಲೆಯಿಂದ ಮತ್ತು ತನಗಿಂತ ಕೆಳಜಾತಿಯ ಪುರುಷನನ್ನು ಜಾತಿ ಶ್ರೇಷ್ಠತೆಯ ಹಿನ್ನಲೆಯಲ್ಲಿ ಪ್ರಾಣಿಯ ಹಾಗೆ ನೋಡುವ ಮನಸ್ಥಿತಿ ಭಿನ್ನವಾಗುವುದಿಲ್ಲ. ಕಾವೇರಿಯ ಹಾಗೆಯೇ 'ಪ್ರಶ್ನೆ' ಕಥೆಯಲ್ಲಿ ಬರುವ ಲಚ್ಚಿ ಕೂಡ. ಮೈಸೂರಿನಿಂದ ಹಳ್ಳಿಯ ಶಾರದೆಯನ್ನು ಮದುವೆಯಾಗಲು ಆಶಿಸಿ ಬಂದವನು ಬಯಸಿದ್ದು ಶಾರದಳನ್ನಾದರೆ ; ದೇಹ ಬಯಸಿದ್ದು ಲಚ್ಚಿಯಂತವಳನ್ನು. ಲಚ್ಚಿಯೇ ರಂಗನನ್ನು ಹಿಂದಿನ ನೆನಪಿನಿಂದ ಮತ್ತೆ ಬರುವಂತೆ ಆಹ್ವಾನಿಸುವಲ್ಲಿ ಯಾವ ಅನೀತಿಯೂ ಈ ವಿವಾಹಿತ ಹೆಣ್ಣಿಗೆ ಕಾಣುವುದಿಲ್ಲ. 'ಲಚ್ಚಿ' ರಂಗನಿಗೆ ದೇವರ ಹೆಣ್ಣಿನಂತೆಯೂ ಊರ್ವಶಿಯಂತೆ ನೀತಿ ಅನೀತಿಗೆ ಅತೀತಳು – ನಿರ್ದೋಷಿಸಿಯೂ ಆಗಿರುವಂತೆ ತೋರುತ್ತದೆ ಇದು ಶೋಷಕನ ಮನಸ್ಥಿತಿ. ಆಧುನಿಕ ವಿದ್ಯಾಭ್ಯಾಸ ಪಡೆದೂ, ಶಾರದಳಂತೆ ಹೆಣ್ಣನ್ನು ಮದುವೆಯಾಗಲು ಬಯಸಿ ಬಂದವನಿಗೆ ಲಚ್ಚಿಯನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾಗುವುದಿಲ್ಲ.

'ಕಾರ್ತಿಕ' ಕಥೆಯಲ್ಲಿ ಬರುವ 'ಅಬ್ಬಕ್ಕ' ಭಿನ್ನ ವ್ಯಕ್ತಿತ್ವ ಹೊಂದಿದವಳು. ಆಕೆಯ ಗಂಡ ತುಕ್ರನಿಗೆ ಹೆಣ್ಣಿನ ಹುಚ್ಚು. ಪೇಟೆಗೆ ಹೋದವನು 'ರಾಮಿ'ಯ ಮನೆಯಲ್ಲಿ ಉಳಿದನೆಂದು ತನ್ನ ತಾಳಿಕಿತ್ತಿಸೆದು ತನ್ನ ವಿರೋಧ ವ್ಯಕ್ತಪಡಿಸುತ್ತಾಳೆ. ತುಕ್ರ ಹೆದರಿ ರಾಮಿಯನ್ನು ಬಿಟ್ಟು ಬಂದ ಮೇಲೆ ಮತ್ತೆ ತಾಳಿಕಟ್ಟಿಕೊಂಡಳು. ಇಂತಹ ಸ್ವಾಭಿಮಾನವನ್ನು ಮೆರೆವ, ತಾಳಿಯ ಪಾವಿತ್ರ್ಯವನ್ನು ಮೀರುವುದು ತಳ

ಸಮುದಾಯದ ಸ್ತ್ರೀಗೆ ಸಾಧ್ಯವಾಗುವ ಹಾಗೆ ಮಧ್ಯಮ - ಮೇಲುವರ್ಗದ ಸ್ತ್ರೀ ಸಮುದಾಯಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಸಾಂಪ್ರಾದಾಯಿಕ ಕಟ್ಟುಪಾಡುಗಳು ಬಿಗಿಯಾಗಿರುತ್ತವೆ. ತುಕ್ರ ಮನೆಬಿಟ್ಟು ಹೋದಾಗ ನಿನ್ನ ಹಂಗಿನಲ್ಲಿ ತಾನಿಲ್ಲವೆಂದು ಸೇರೆಗಾರ ಎಂಕಪ್ಪ ಶೆಟ್ಟಿಯ ಜೊತೆ ಸ್ನೇಹ ಮಾಡಿದಳು. ಗಂಡ ತಿರುಗಿ ಬಂದಾಗ ನಕ್ಕು ಸ್ವೀಕರಿಸಿದ ಹಾಗೆ ಆ ಸೇರೆಗಾರನನ್ನು ನಕ್ಕು ದೂರವಿರಿಸಿದಳು. ಬದುಕನ್ನು ಅದು ಬರುವ ಹಾಗೆ ಸ್ವಾಭಿಮಾನ ಬಿಟ್ಟುಕೊಡದೆ ಸ್ವೀಕರಿಸುವ, ಎದುರಿಸುವ ಅಬ್ಬಕ್ಕನಂತವಳ ವ್ಯಕ್ತಿತ್ವ ವಿಶಿಷ್ಟವಾದುದು. "ಸಂಸ್ಕಾರದ ಬೆಳ್ಳಿ, ಪ್ರಶ್ನೆಯ 'ಲಚ್ಚಿ' ಕಾರ್ತಿಕದ ಅಬ್ಬಕ್ಕ - ಇವರೆಲ್ಲ ಭಿನ್ನ ಭಿನ್ನ ಹೆಸರುಗಳನ್ನು ಪಡೆದು ಬಂದರೂ ಒಟ್ಟಿನಲ್ಲಿ ಹೆಚ್ಚು ಕಡಿಮೆ ಒಂದೇ ಅಚ್ಚಿನಲ್ಲಿ ಹೊಯ್ದ ಪಾತ್ರಗಳಾಗಿ ಬರುತ್ತಾರೆ. ಕಾಮ ಒಂದನ್ನುಳಿದು ಬದುಕಿನ ಇನ್ಯಾವ ಮೈಯಲ್ಲಿಯೂ ಅವರು ಜೀವಂತವಾಗಿ ಬದುಕುವ ಪಾತ್ರಗಳಾಗುವುದಿಲ್ಲ. ಕಾಮ ವ್ಯಾಪಾರವನ್ನು ನೀತಿ, ಅನೀತಿಗಳ ಗೊಂದಲಕ್ಕೊಳಗಾಗದೆ ನಡೆಸುವವರು. ದೈಹಿಕವಾಗಿ ತುಂಬಿಕೊಂಡವರು. ಇವರ ಸಹಜ ಕಾಮ ವ್ಯಾಪಾರವನ್ನು ಸಂಪ್ರದಾಯ ಜಡರ ಬದುಕಿನ ಬರುಡತನ, ಅಸಹಜತೆಯನ್ನು ತೀವ್ರಗೊಳಿಸಲೆಂದು ಒಂದು ರೀತಿಯ ಪ್ರಶಂಸಾಭಾವದಿಂದೆಂಬಂತೆ ಅನಂತಮೂರ್ತಿಯವರು ಚಿತ್ರಿಸುತ್ತಾರೆ"[೨೦] ಎಂಬ ವಿಮರ್ಶಕರ ಮಾತನ್ನು ಅನಂತಮೂರ್ತಿಯವರ ಒಟ್ಟು ಕಥಾಸಾಹಿತ್ಯದ ಹಿನ್ನಲೆಯಲ್ಲಿ ಗಮನಿಸಿದಾಗ ನಿಜವೆನಿಸುತ್ತದೆ.

ದಿವ್ಯ ಕಾದಂಬರಿಯಲ್ಲಿ ಬರುವ ಶೆಟ್ಟರ ಹುಡುಗಿ 'ಜಲಜ' ತನ್ನ ಗಂಡನಿಂದ ಲೈಂಗಿಕ ಸುಖ ಪಡೆಯದೆ ಆತನಿಂದ ದೂರವಾಗದೆ ಆತನಲ್ಲಿ ಪುರುಷತ್ವ ತುಂಬುವ ಎಲ್ಲ ಆರೈಕೆ ಮಾಡಿಯೂ ವಿಫಲಳಾಗಿ ತನಗಿಂತ ಕೆಳಜಾತಿ ಹರಿಜನ ಕರಿಯನ ಜೊತೆ ಗುಪ್ತ ಸಂಬಂಧ ಹೊಂದುವ ಒಳದಾರಿಕಂಡುಕೊಳ್ಳುತ್ತಾಳೆ. ಗಂಡನಿಗೆ ಈ ಸಂಗತಿ ತಿಳಿದಾಗ ಪ್ರಿಯತಮನನ್ನು ಕೊಲ್ಲುತ್ತಾನೆ. ಜಲಜ ತಪ್ಪಿಸಿಕೊಂಡು, ಊರಿನವರಿಗೂ ಮುಖ ತೋರಿಸದೆ ತಾಯಿ ಜೊತೆ ಗಟ್ಟದ ಕೆಳಗೆ ಹೋಗುತ್ತಾಳೆ. ಮಲೆನಾಡ ಪರಿಸರದ ತಳ ಸಮುದಾಯದ ಸ್ತ್ರೀಯರು ಮೇಲುಜಾತಿ ಪುರುಷರ ಜೊತೆ ಮರ್ಜಿಯಿಂದ ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ. ಇದಕ್ಕೆ ಮನೆಯವರ ಪ್ರೋತ್ಸಾಹ ಇರುತ್ತದೆ ಅಥವಾ ಬಹಿರಂಗ ವಿರೋಧ ವ್ಯಕ್ತಪಡಿಸಲು ಅಶಕ್ತರಾಗಿರುತ್ತಾರೆ. ಹಾಗೆ ಅಬ್ಬಕ್ಕನ ಹಾಗೆ ಗಂಡನಿಗೆ ಸವಾಲ್ ಎಸೆದು ಸ್ವಾಭಿಮಾನದಿಂದ ತಮ್ಮ ದಾರಿಯನ್ನು ಕಂಡುಕೊಳ್ಳುತ್ತಾರೆ. ಇವೆರೆಡೂ ಸಾಧ್ಯವಾಗದಿದ್ದಾಗ ಆ ಊರನ್ನೇ ಬಿಟ್ಟು ಓಡಿ ಹೋಗುವುದರ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾರೆ. ಈ ಯಾವ ಸ್ವಾತಂತ್ರ್ಯವೂ ಸುಲಭವಾಗಿ ಸಾಧ್ಯವಾಗದೆ ಮೇಲುವರ್ಗದ ಮಧ್ಯಮ ವರ್ಗ ಸ್ತ್ರೀ ಅನಿವಾರ್ಯವಾಗಿ ಪುರುಷನ ಯಜಮಾನಿಕೆಯನ್ನು, ದೌರ್ಜನ್ಯವನ್ನು ಸಹಿಸಿಕೊಳ್ಳಬೇಕು, ಸಾಮಾಜಿಕ ಕಟ್ಟುಪಾಡುಗಳಿಗೆ ಶರಣಾಗಿ ಮೌನವಾಗಿ ಅನುಭವಿಸಬೇಕು.

ಮಲೆನಾಡ ಪರಿಸರದಲ್ಲಿ ಶ್ರೀಮಂತ ಜಮೀನ್ದಾರರಿಗೆಲ್ಲ ಒಂದು ಖಯಾಲಿ ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿ ಇತ್ತು. ತಾವು ಸಾಮಾಜಿಕ ಪ್ರತಿಷ್ಠೆಯ ಹಿನ್ನಲೆಯಲ್ಲಿ ಆ ಪರಿಸರದ ಜಾತಿಯ ಹೆಣ್ಣುಗಳನ್ನು ಮದುವೆ ಮಾಡಿಕೊಳ್ಳುತ್ತಿದ್ದರು, ಕೂಡಿಕೆ ಮಾಡಿಕೊಳ್ಳುತ್ತಿದ್ದರು. ಜೊತೆಗೆ ದಕ್ಷಿಣ ಕನ್ನಡದಿಂದ ತಮಗಿಂತ ಕೆಳಜಾತಿ ಹೆಣ್ಣೊಬ್ಬಳ ಜೊತೆ ಗಾಢವಾದ ಸಂಬಂಧವನ್ನು ಬಹಿರಂಗವಾಗಿಯೇ ಹೊಂದಿರುತ್ತಿದ್ದರು.

ಆ ರೀತಿ ಹೊಂದಿರುವುದು ಅವರ ಸಾಮಾಜಿಕವಾದ, ಪ್ರತಿಷ್ಠೆಯು, ಶ್ರೀಮಂತಿಕೆಯ ಕುರುಹು ಆಗಿತ್ತು. ಅಲ್ಲದೆ ಆಕೆ ಕೂಡ ಆ ಒಬ್ಬರಿಗೆ ನಿಷ್ಠಳಾಗಿ ಯಾವ ಕೈಹಿಡಿದ ಧರ್ಮಪತ್ನಿಗೂ ಕಡಿಮೆಯಿಲ್ಲದಂತೆ ನಡೆದುಕೊಳ್ಳುತ್ತಿದ್ದಳು ಅಥವಾ ನಡೆದುಕೊಳ್ಳಬೇಕಾಗಿತ್ತು. ದೇವಯ್ಯ ಕಾವೇರಿ ಜೊತೆ ಹೊಂದಿರುವ ಸಂಬಂಧವಾಗಲಿ, ಚಂದ್ರೇಗೌಡ ಗಂಗೆಯ ಜೊತೆ ಹೊಂದಿರುವ ಸಂಬಂಧವಾಗಲಿ ಆ ರೀತಿಯದು. ಹಾಗೆ ದಿವ್ಯ ಕಾದಂಬರಿಯಲ್ಲಿ ಬರುವ ಸಾಹುಕಾರ ಮಂಜಯ್ಯ ಕೂಡ ಮಂಗಳೂರಿನ ಮೀನಾಕ್ಷಿ ಜೊತೆ ಸಂಬಂಧ ಹೊಂದಿದ್ದರು. ಆಕೆಯನ್ನು ತಮ್ಮ ಒಡೆತನದ ಹಂಚಿನ ಕಾರ್ಖಾನೆಗೆ ಮುಖ್ಯಸ್ಥಳನ್ನಾಗಿ ಮಾಡಿದ್ದರು. ಆಕೆ ಇವರಿಂದ ಪಡೆದ ಮಗಳೇ 'ವಿನೋದಿನಿ' ಮಂಜಯ್ಯ ಕಾಯಿಲೆಯಿಂದ ಹಾಸಿಗೆ ಹಿಡಿದ ಸಂದರ್ಭದಲ್ಲಿ ತಾಯಿ-ಮಗಳು ದೇವನಹಳ್ಳಿಗೆ ಬರುತ್ತಾರೆ. ಮೀನಾಕ್ಷಿ ಅಲಂಕಾರ ಸಹಿತವಾಗಿಯೇ ಮಂಜಯ್ಯನನ್ನು ನೋಡಲು ಬಂದಾಗ ತನಗೆ ಒಲಿದಾತನ ಪಾಡು ನೋಡಿ ಅವಳಿಗೆ ದುಃಖವಾಗುತ್ತದೆ. ಕಾಯಿಲೆಯಿಂದ ಮಲಗಿದ ವ್ಯಕ್ತಿಯನ್ನು ಮುಟ್ಟಬಹುದೊ ಮುಟ್ಟಬಾರದೊ ಗೊಂದಲಕ್ಕೆ ಒಳಗಾಗುತ್ತಾಳೆ. ಕಾರಣ ಸ್ಪಷ್ಟವಿದೆ ಹೆಂಡತಿ ಅಲ್ಲ ಮತ್ತು ಹೌದು. ಸಾಂಪ್ರದಾಯಕ್ಕೆ ನಿಷ್ಠಳಾದ ಮೀನಾಕ್ಷಿಯ ನಡವಳಿಕೆ ಈ ರೀತಿಯದಾದರೆ ಆಕೆ ಮಗಳ ವಿನೋದಿನಿ ತಾಯಿಯ ಹಾಗಲ್ಲ. ಆಕೆಯ ಸರಳ ಉಡುಪು, ತೊಡಪುಗಳೇ ತಾನು ಸ್ವತಂತ್ರಳು ಎಂಬುದನ್ನು ಹೇಳುತ್ತವೆ. ತಾಯಿಯ ಹಾದಿಯನ್ನು ತುಳಿಯದೆ ಬಿ.ಎ. ಪದವಿ ಪಡೆದು ಶಿಕ್ಷಕಿಯಾಗಬೇಕೆಂದು ತರಬೇತಿ ಪಡೆದಿದ್ದಳು. ತನಗೆ ಮದುವೆ ಬೇಕಿಲ್ಲವೆಂದೂ ರಾಮಕೃಷ್ಣಮಠದ ಸನ್ಯಾಸಿಯಾಗುವ ಇಚ್ಛೆಯನ್ನು ತಾಯಿಯಲ್ಲಿ ವ್ಯಕ್ತಪಡಿಸಿ ಗಾಬರಿಪಡಿಸಿದ್ದಳು. ವಿನೋದಿನಿಗೆ ತನ್ನ ಹೆಸರು ಹೇಳಿಕೊಳ್ಳುವುದು ಮುಜುಗರ ಸಂಗತಿಯಾಗಿತ್ತು. ಕುಲ ಜಾತಿಗಳಿಗೆ ಹೊರತಾದ, ತಾಯಿಕೊಟ್ಟ ಹೊಸ ಕಾಲದ ಹೆಸರು ಅದು. ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ವಿನೋದಿನಿಯಂತವರಿಗೆ ಪಲ್ಲಟಗೊಳ್ಳುವ ಸಂದರ್ಭದಲ್ಲಿ ಆಗುವಂತಹ ಸಹಜವಾದ ಮುಜುಗರಗಳು ಕಾಡುತ್ತವೆ. ಆದರೂ ಮೀರಬೇಕೆಂಬ ತುಡಿತ ಇಲ್ಲಿ ಮುಖ್ಯವಾಗುತ್ತದೆ. ಮಂಜಯ್ಯನ ಮಕ್ಕಳಾದ ಘನಶ್ಯಾಮ ಮತ್ತು ವಿಮಲೆ ಇಬ್ಬರೂ ಮುಕ್ತವಾಗಿ ವಿನೋದಿನಿಯನ್ನು ತಂಗಿಯಾಗಿ ಸ್ವೀಕರಿಸುವುದು ಇಲ್ಲಿ ಮುಖ್ಯವಾದ ಸಂಗತಿಯಾಗುತ್ತದೆ. ವಿನೋದಿನಿಗೆ ಮುಜುಗರವಾದ ವಿಷಯವಾದರೂ ಬಹಳ ಬೇಗ ಆ ವಾತಾವರಣಕ್ಕೆ ಹೊಂದಿಕೊಂಡು ಬಿಡುತ್ತಾಳೆ. ಆ ಮನೆಯ ಪುರೋಹಿತನಾದ ಕೇಶವನ ಜೊತೆ ವಿನೋದಿನಿಯ ಮದುವೆ ಕೂಡ ನಿರ್ಧಾರವಾಗುವುದು ಇವೆಲ್ಲಾ ಹೊಸ ಆಶಯವಾಗಿ ಈ ಕಾದಂಬರಿಯಲ್ಲಿ ಕಂಡುಬಂದಿದೆ.

ಬಿಳುಮನೆ ರಾಮದಾಸ್ ಅವರ 'ಕುಂಜ' ಕಾದಂಬರಿ ದಲಿತನೋರ್ವ ಅನಾಥ ಸ್ಥಿತಿಯಲ್ಲಿ ಹಲವರಿಂದ ಶೋಷಣೆಗೆ ಒಳಗಾದರೂ ಅದನ್ನೆಲ್ಲಾ ಅರಗಿಸಿಕೊಂಡು ಜೀವನೋತ್ಸಾಹವನ್ನು ಮೆರೆವ ಕಥೆಯನ್ನೊಳಗೊಂಡಿದೆ. ಒಕ್ಕಲಿಗ ಒಡೆಯರ ಮನೆಗಳಲ್ಲಿ ಆಳಾಗಿ ದುಡಿವ ಕೊರಗನ್ನು ಕುಂಜನಾಗಿ ಬದುಕುವ ಹೋರಾಟದ ಆವರಣವೇ ಪ್ರಧಾನಧಾರೆಯಾಗಿದೆ. ಸಾಲ ತೀರಿಸಲಾಗದೆ, ವಸೂಲಿಸಾಬರ ಹೊಡೆತ ಎದುರಿಸಲಾರದೆ ತಲೆತಪ್ಪಿಸಿಕೊಂಡು 'ಸಸಿಗೊಳ್ಳಿ' ಗೌಡರ ಮನೆಗೆ ಬಂದು ಸೇರುತ್ತಾನೆ. ಆತನ ಕುರೂಪಿಯಾದರೂ ತನ್ನ ವೇಣುಗಾನದಿಂದ ಹಲವರ ಮನಗೆದ್ದಿದ್ದ. ಅಂತವರಲ್ಲಿ ಪಿಣಿಯ ಸೇರೆಗಾರನ ಮಗಳು ಕಾವೇರಿ ಕೂಡ ಒಬ್ಬಳು. ಅವಳ ಮಹದಾಸೆ ಅವಿವಾಹಿತ ತರುಣನನ್ನು

ಮದುವೆಯಾಗಬೇಕೆಂಬುದು. ಆದರೆ ಆಕೆಯ ಪರಿಸರದಲ್ಲಿ ವಿವಾಹಿತ ವ್ಯಕ್ತಿಗಳೇ ಇವಳ ಸೌಂದರ್ಯಕ್ಕೆ ಮಾರು ಹೋಗಿ ತಮ್ಮ ತಮ್ಮ ವಶಮಾಡಿಕೊಳ್ಳಬೇಕೆಂಬ ಹಪಾಹಪಿಯಲ್ಲಿದ್ದರು. ಒಡೆಯರಿಗೆ ಒಂದು ಕೂಲಿ ಆಳು ನಷ್ಟವಾಗುವುದರಿಂದ ಪರ ಊರಿಗೆ ಮದುವೆ ಮಾಡಿ ಕೊಡಲು ಒಪ್ಪಲಾರರು. ಪಿಣಿಯ ಒಡೆಯರ ಇಚ್ಛೆಯನ್ನು ದೊಡ್ಡ ಬೀರನ ಹಾಗೆ ಮೀರಲಾರ. ಇಂತಹ ಸಂದರ್ಭದಲ್ಲಿ ಪಿಣಿಯ, ಸೇಸಿ, ಕಾವೇರಿ ಮೂರು ಜನ ಇಷ್ಟಪಡುವ ಗಂಡು ಕುಂಜವಾಗುತ್ತಾನೆ. ಅದೆ ಕುಂಜನ ಅಪಹರಣವಾದಾಗ, ಆತ ಬಹಳ ಕಾಲ ಬಾರದಿರುವಾಗ ಈ ಕುಟುಂಬ ದುಃಖಕ್ಕೆ ಒಳಗಾಗುತ್ತದೆ. ಈ ಸಂದರ್ಭದಲ್ಲಿ ಮುದ್ದ, ರಾಮ, ರವಿಯಂತವರು ವಿವಾಹಿತರು ಕಾವೇರಿಯನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಕುಂಜ ಹಿಂತಿರುಗಿ ಬಂದಾಗ ಮೊದಲಿನ ಸಂತೋಷ ಅರಳಿ ಕಾವೇರಿ – ಕುಂಜನರ ಮದುವೆಯಾಗುತ್ತದೆ. ಕಾವೇರಿಯ ಕಥೆ ಗೊತ್ತಿದ್ದೆ ಕುಂಜ ಆಕೆಯನ್ನು ಮದುವೆಯಾಗಿದ್ದ. ಆಕೆಯ ಹಿಂದಿನ ಸಂಬಂಧಗಳ ಬಗ್ಗೆ ಸುಮ್ಮನೆ ಪ್ರಶ್ನೆ ಮಾಡಿದಾಗ ಕಾವೇರಿ ಕಂಗಾಲಾಗುತ್ತಾಳೆ. ತಾನು ಮದುವೆಯಾಗದೆ ಇರುವ ತರುಣನೊಬ್ಬನನ್ನು ಮದುವೆಯಾಗಬೇಕೆಂದು ಬಯಸಿದ್ದುದರಲ್ಲೂ ಸುಖವಿಲ್ಲದೆ ಹೋಯಿತಲ್ಲ ಎಂದು ಮರುಗಿದಳು. ಇಷ್ಟೆಲ್ಲಾ ತಿಳಿದಿದ್ದರೂ ತನ್ನನ್ನು ಯಾಕೆ ಮದುವೆಯಾದಿರೆಂದು ಪ್ರಶ್ನೆ ಮಾಡುತ್ತಾಳೆ. ಕುಂಜ ಹಳೆಯದನ್ನೆಲ್ಲಾ ಮರೆತು ಹೊಸ ಬದುಕು ಶುರುಮಾಡೋಣವೆಂದು ಉದಾರತೆ ಪ್ರದರ್ಶಿಸುತ್ತಾನೆ. ಬದುಕಿನ ಎಲ್ಲ ಕಹಿಯನ್ನು ಮರೆತು ಹೊಸಬದುಕಿಗಾಗಿ ಹಾತೊರೆವ ಕುಂಜನ ಹಾಗೆ ಎಲ್ಲ ಶೋಷಣೆಗಳನ್ನು ಮೀರಿನಿಂತು ಕಾವೇರಿ ಹೊಸ ಬದುಕನ್ನು ಆದರ್ಶದಾಂಪತ್ಯವನ್ನು ಕಂಡುಕೊಳ್ಳುವುದು ಈ ಕಾದಂಬರಿಯ ವಿಶೇಷವಾದ ಅಂಶ.

ಬಿಳುಮನೆ ರಾಮದಾಸ್ ಅವರ ಕಾದಂಬರಿ 'ಕರಾವಳಿಯ ಹುಡುಗಿ' ಶೀರ್ಷಿಕೆಯೇ ಸ್ತ್ರೀ ಪ್ರಧಾನವಾಗಿರುವುದನ್ನು ಸೂಚಿಸುತ್ತದೆ. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಮಲೆನಾಡ ಬದುಕಿನಲ್ಲಿ ಸಾಂಸ್ಕೃತಿಕ ಬದುಕಿನ ಸ್ಥಿತ್ಯಂತರವನ್ನು ಸೂಚಿಸುತ್ತದೆ. ಅದರಲ್ಲೂ ಸ್ತ್ರೀಯ ಬದುಕು ಸ್ವಾವಲಂಬನೆಯತ್ತ ಸಾಗಬೇಕಾದ ಆಶಯವನ್ನು ಹೊಂದಿದೆ. ಕೃಷಿ ಪ್ರಧಾನವಾದ ಗ್ರಾಮೀಣ ಭಾರತದಲ್ಲಿ ಮಹಿಳೆ ಕುಟುಂಬದ ನಿರ್ವಹಣೆ ಮತ್ತು ಪುರುಷನಿಗೆ ಸಹಾಯಕವಾಗಿ ಗದ್ದೆ–ತೋಟಗಳಲ್ಲಿ ತೊಡಗಿಸಿಕೊಳ್ಳಬೇಕು ; ತೊಡಗಿಸಿಕೊಂಡಿದ್ದಾಳೆ. ಮಲೆನಾಡ ಪರಿಸರದಲ್ಲಿ ಕೆಲವು ಶ್ರೀಮಂತ ಮನೆಗಳಲ್ಲಿ ಮಾತ್ರ ಸ್ತ್ರೀ ಹೊರಗಿನ ಜವಾಬ್ದಾರಿ ಹೊರುವುದು ಕಡಿಮೆಯೇ. ಆದರೆ ಮಧ್ಯಮ ಮತ್ತು ಕೆಳವರ್ಗದ ಕೃಷಿ ಕುಟುಂಬಗಳಲ್ಲಿ ಹೆಣ್ಣು ಮನೆಯ ಒಳಗೆ ಮತ್ತು ಹೊರಗೆ ತನ್ನನ್ನು ತೊಡಗಿಸಿಕೊಳ್ಳುವುದು ಅನಿವಾರ್ಯ. ಅವಳು ಶ್ರಮ ಮೌಲ್ಯ ಪಡೆಯುತ್ತಾಳೆ ನಿಜ. ಆದರೆ ಅದು ಪುರುಷನ ಶ್ರಮಕ್ಕೆ ನೀಡುವಷ್ಟು ಮೌಲ್ಯ ಸ್ತ್ರೀಗೆ ಪರಿಗಣಿತವಾಗುವುದಿಲ್ಲ. ಆಕೆ ಮನೆಯ ಒಳಗೆ ಮತ್ತು ಹೊರಗೆ ತನ್ನನ್ನು ತೊಡಗಿಸಿಕೊಳ್ಳುವುದರ ಶ್ರಮ ಪುರುಷನ ಶ್ರಮಕ್ಕಿಂತ ಹೆಚ್ಚೇ ಎಂದರೆ ತಪ್ಪಾಗಲಾರದು. ತನ್ನ ಮನೆ, ಒಡೆಯರ ಮನೆ ಮತ್ತು ಅವರ ಜಮೀನು ಈ ಮೂರು ಕಡೆ ಆಕೆಯ ಶ್ರಮ ಹರಿದು ಹಂಚಿ ಹೋಗುವುದರಿಂದ ಅವಳ ಶ್ರಮಕ್ಕೆ ಮೌಲ್ಯವನ್ನು ಗೌಣವಾಗಿ ಪರಿಗಣಿಸಲಾಗುತ್ತದೆ. ಗ್ರಾಮೀಣ ಪ್ರದೇಶದ ಸಾಹುಕಾರರ, ಪಟ್ಟಭದ್ರ ಹಿತಾಸಕ್ತಿಗಳ ಶೋಷಣೆ ಲೋಕಕ್ಕೆ ತಿಳಿಯದ ರೀತಿಯಲ್ಲಿ ನಿರಾಂತಕವಾಗಿ ನಡೆದುಕೊಂಡು ಬರುತ್ತಿದೆ. ಕಾರಣ ಗ್ರಾಮೀಣ ಪ್ರದೇಶದಲ್ಲಿ ಕೂಲಿಕಾರ್ಮಿಕರಲ್ಲಿ ಅಸಂಘಟಿತ ವಾತಾವರಣವಿರುವುದರಿಂದ ಊಳಿಗಮಾನ್ಯ

ವ್ಯವಸ್ಥೆಯ ಶೋಷಣೆಯು ನಿರಾಂತಕವಾಗಿದೆ.

ಇಂತಹ ಸಂದರ್ಭದಲ್ಲಿ ಪರಂಪರಾಗತವಾದ ಉದ್ಯೋಗವನ್ನು, ಲೈಂಗಿಕ ಶೋಷಣೆಯನ್ನು ಎದುರಿಸಿ ನಿಂತವಳು ಕರಾವಳಿಯಿಂದ ಬಂದ ಹುಡುಗಿ ಅಕ್ಕು. ಗಟ್ಟದ ಮೇಲೆ ಬಂದು ಏನಾದರೂ ಉದ್ಯೋಗ ಮಾಡಲು ಬಯಸಿದ ಅಕ್ಕುವಿನ ಸೌಂದರ್ಯವನ್ನು ಕಂಡು ಎಂದಿನಂತೆ ತಮ್ಮ ವಶಮಾಡಿಕೊಳ್ಳಬೇಕೆಂಬ ಜಮೀನ್ದಾರ ಶಿವಪ್ಪಗೌಡ ಮತ್ತು ಅಣ್ಣಪ್ಪ ಹೆಗ್ಗಡೆಯ ಪ್ರಯತ್ನ ವಿಫಲವಾಗುತ್ತದೆ. ಕೆಳ ಕೋಮಿನಿಂದ ಬಂದ ಅಕ್ಕು ಜಾತಿ ಕಸುಬವನ್ನು ಬಿಟ್ಟು, ಅಂದರೆ ತಮ್ಮ ಸಮುದಾಯದವರೆಲ್ಲಾ ಮಲೆನಾಡಿನ ಸಾಹುಕಾರರ ಮನೆಯ ತೋಟ-ಗದ್ದೆಯಲ್ಲಿ ದುಡಿಯುವ ಆಳಾಗಿ, ಆ ಸಾಹುಕಾರರ ಲೈಂಗಿಕ ತೃಪ್ತಿಯನ್ನು ನೀಡುವ ವಸ್ತುವಾಗಿ ಅನಿವಾರ್ಯವಾಗಿ ಬಾಳಬೇಕಾದ ಸ್ಥಿತಿಯನ್ನು ಹಿಂದೆ ನೋಡಿದ್ದೇವೆ. ಅಂತಕ್ಕಶೆಟ್ತಿ, ಕಾವೇರಿ, ಗಂಗೆ ಮುಂತಾದವರೆಲ್ಲ ಒಡೆಯರ ಲೈಂಗಿಕ ತೃಪ್ತಿಯ ನೀಡುವ ವಸ್ತುವಾಗಿರುವುದನ್ನು ಕುವೆಂಪು ಕಾದಂಬರಿಗಳಲ್ಲಿ ಚಿತ್ರಿತವಾಗಿರುವುದನ್ನು ಗಮನಿಸಿದ್ದೇವೆ. ಈ ಪರಂಪರೆಯನ್ನು ಮೀರುವ ಪ್ರಯತ್ನ ಅಕ್ಕುವಿನದು. ಇವಳ ಬೆಂಬಲಕ್ಕೆ ಮಲೆನಾಡಿನ ಚಿಂತನಾಶೀಲರ ಪ್ರಭಾವಕ್ಕೆ ಒಳಗಾದ ಚಿನ್ನಯ್ಯಗೌಡ ಮತ್ತು ಪಟೇಲ್‌ರಂಗಪ್ಪಗೌಡ (ಕಡಿದಾಳ್ ಮಂಜಪ್ಪ, ಶಾಂತವೇರಿ ಗೋಪಾಲಗೌಡ, ಕುವೆಂಪು ಅವರ ಚಿಂತನೆಗಳ ಮಲೆನಾಡಿನಲ್ಲಿ ಹರಡುತ್ತಿದ್ದ ಕಾಲಘಟ್ಟ) ಬೆಂಬಲಕ್ಕೆ ನಿಲ್ಲುವುದು ವಿಶೇಷ. ಅದಕ್ಕೆ ಕಾರಣವೂ ಇದೆ ಪರಂಪರಾಗತವಾದ ಕಸುಬಿನ ಜೊತೆ ಚಿನ್ನಯ್ಯಗೌಡ ಅಂಗಡಿ ಇಟ್ಟರೆ, ರಂಗಪ್ಪಗೌಡ ರೈಸ್‌ಮಿಲ್ ಇಟ್ಟಿದ್ದರು. ಇದೂ ಕೂಡ ಅವರ ಔದಾರ್ಯಕ್ಕೆ ಕಾರಣವಾಗುತ್ತದೆ ಎಂದರೆ ತಪ್ಪಿಲ್ಲ. ಇಂತವರ ಬೆಂಬಲದಿಂದ ಪರಂಪರಾಗತವಾದ ಶೋಷಿತ ಕಸುಬನ್ನು ಧಿಕ್ಕರಿಸಿ ಎಲ್ಲರೂ ಹುಬ್ಬೇರಿಸುವಂತೆ ಹೋಟೆಲ್ ಇಡುತ್ತಾಳೆ. ಈ ಬಗ್ಗೆ ಪಂಚಾಯಿತಿ ನಡೆದು ಅಲ್ಲಿ ರಂಗಪ್ಪಗೌಡ, ಚಿನ್ನಯ್ಯಗೌಡರ ಪರಂಪರಾನುಗತವಾಗಿದ್ದ ಬಂದಿದ್ದ ಕೃಷಿಯನ್ನು ಕೈಬಿಟ್ಟು ರೈಸ್‌ಮಿಲ್-ಅಂಗಡಿ ವ್ಯವಹಾರವನ್ನು ಪ್ರಸ್ತಾಪಿಸಿ ತಾನು ಹೋಟೆಲ್ ಉದ್ಯೋಗ ಮಾಡುವುದರಲ್ಲಿ ತಪ್ಪೇನಿದೆ ಎಂದು ಕೇಳುವುದರ ಮೂಲಕ ತನ್ನ ಹಕ್ಕನ್ನು ಚಲಾಯಿಸಲು ಪ್ರಯತ್ನಿಸುವುದು ಈ ನೆಲದಲ್ಲಿಯೇ ಉಂಟಾದ ವೈಚಾರಿಕ ಪ್ರಭಾವ ಎನ್ನಬಹುದು. ಇದು ಆಯಾ ಜಾತಿಗಳವರು ತಮ್ಮ ಕುಲಕಸುಬುಗಳನ್ನು ಮಾಡಬೇಕೆಂಬುದಕ್ಕೆ ಒಡ್ಡಿದ ಪ್ರತಿರೋಧವಾಗಿದೆ. ಶಿವಪ್ಪಗೌಡನ ರಾಯಭಾರಿಯಾಗಿ ಬಂದು ಸೀತು ಅಂಗಡಿ-ಹೋಟ್ಲು ಇಟ್ಟು ಕೈಯಲ್ಲಿರುವ ಹಣ ಖರ್ಚು ಮಾಡಿಕೊಳ್ಳುವುದಕ್ಕಿಂತ ಯಾರಾದರೂ ಮನೆಯ ಕೆಲಸ್ಕೆ ಸೇರಿಕೊಂಡು ಸುಖವಾಗಿರಬಹುದು ಎಂಬ ಯಥಾಸ್ಥಿತಿಯ ವಾದದ ಮಾತಿಗೆ ಅಕ್ಕು ಕೊಡುವ ಉತ್ತರ ಸ್ತ್ರೀಯ ಸ್ವಾಭಿಮಾನ ಮತ್ತು ಛಲವನ್ನು ಅಭಿವ್ಯಕ್ತಿಸುತ್ತದೆ.

"ಹೋದರೆ ಹ್ವಾಯಿಲಿ, ದುಡ್ಡು ಹಾಳತ್ತು ಅಂತ ಏನಾದರು ಉದ್ಯೋಗ ಮಾಡದೆ ಸುಮ್ಮನೆ ಕೂತಿರೊಕೆ ಆತಿಲ್ಲೆ. ಜೀವನದಲ್ಲಿ ಏನಾದರೂ ಸಾಧನೆ ಮಾಡಕೆ"[೪೧]

ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕೆಂಬ ಅಕ್ಕುವಿನ ಚಲ ಸ್ಥಿತ್ಯಂತರಕ್ಕೆ ಸಾಕ್ಷಿ. ಹಣ ಕಳೆದುಕೊಳ್ಳುವೆನೆಂಬ ಭಯ ಏನೂ ಸಾಧನೆ ಮಾಡಲು ಸಾಧ್ಯವಿಲ್ಲವೆಂಬುದು ಆಧುನಿಕತೆ ತಂದತಹ ಅರಿವು. ಆಕೆ ವ್ಯವಹಾರದಲ್ಲಿ ಏಳು ಬೀಳುಗಳನ್ನು ಕಾಣುತ್ತಾಳೆ. ಸುಧಾರಿಸುವ ಯೋಜನೆಗಳನ್ನು,

ತಂತ್ರಗಳನ್ನು ರೂಪಿಸಿಕೊಳ್ಳುತ್ತಾಳೆ. ಕಸುಬಿನ ವಿಚಾರದಲ್ಲಿ ಹೇಗೋ ಹಾಗೆ ತನ್ನ ಸಾಂಸರಿಕ ಜೀವನದಲ್ಲಿಯೂ ಕ್ರಾಂತಿಕಾರಕ ಹೆಜ್ಜೆಯನ್ನೇ ಇಡುತ್ತಾಳೆ. ತನ್ನನ್ನು ವೇಶ್ಯೆಯ ರೀತಿಯಲ್ಲಿ ಹೊಂದಿರಬೇಕೆಂದು ಬಯಸಿದ ಶಿವಪ್ಪಗೌಡನಿಗೆ ಅವನ ದೃಷ್ಟಿಕೋನವೇ ಬದಲಾವಣೆಯಾಗಬೇಕಾದ ರೀತಿಯಲ್ಲಿ ಉತ್ತರ ನೀಡುತ್ತಾಳೆ ; ಸವಾಲ್ ಹಾಕುತ್ತಾಳೆ.

"ಖಾಯಂ ಆಗಿ ಇಟಗಣುದಾದರೆ, ಕದ್ದುಮುಚ್ಚಿ ಬಂದು ಹೋಗಕೂಡದು, ಧೈರ್ಯವಾಗಿ ಹಗಲು ಹೊತ್ತಿನಲ್ಲಿ ಬಂದು ಹ್ವಾಯಕು. ಯಾರಾದರೂ ಕೇಳಿದರೆ ಅವಳು ನನ್ನ ಎರಡನೆ ಹೆಂಡತಿ ಅನಕು. ನಾನೂ ಹಾಂಗೆ ಹೇಳತೆ. ನನಗೆ ನೀವು ಏನಾದರೂ ಆಸ್ತಿ ನನ್ನ ಹೆಸರಿಗೆ ಮೊದಲೆ ಬರೆದುಕೊಡಕು."[೨೨] ಮಲೆಗಳಲ್ಲಿ ಮದುಮಗಳು ಕಾದಂಬರಿ ಅಂತಕ್ಕಶೆಟ್ಟಿಯ ಬದುಕಲು ಅನಿವಾರ್ಯವಾಗಿ ಒಪ್ಪಿಕೊಂಡು ಒಡೆಯರಿಗೆ ಭಯ ಭಕ್ತಿಯಿಂದ ನಡೆದುಕೊಳ್ಳುವುದಕ್ಕೂ ಕರಾವಳಿಯ ಹುಡುಗಿ 'ಅಕ್ಕು' ಜಮೀನ್ದಾರಿ ಕುಳಗಳ ಮೇಲೆ ಹೇರುವ ನಿರ್ಧಾರ ನಡವಳಿಕೆಗಳನ್ನು ಗಮನಿಸಿದಾಗ ಅರವತ್ತು–ಎಪ್ಪತ್ತು ವರ್ಷಗಳ ಅವಧಿಯಲ್ಲಿ ಸಾಕಷ್ಟು ಬದಲಾವಣೆ, ಪಲ್ಲಟಗಳು ಆಗಿರುವುದಕ್ಕೆ, ಆಗುತ್ತಿರುವುದಕ್ಕೆ ದ್ಯೋತಕವಾಗಿದೆ. ಇವಳನ್ನು ಬಯಸಿದ ನಾರಾಯಣರಾಯರಿಗೂ ತಣ್ಣಗೆ ಅದೇ ಉತ್ತರ ನೀಡುತ್ತಾಳೆ.

"ನನಗೂ ಮದುವೆ ಹಬ್ಬ ಆಗಿ ಇಂಥವನೆ ನನಗಂಡ ಅಂತ ಕೈ ತೋರಿಸಿಕೊಂಡು ಜನಗಳೆದುರು ತಿರುಗುಕು. ಜನಗಳ ಬಾಯಲ್ಲಿ ಊರ ಸೂಳೆ ಅನ್ನಿಸಗಂಬುದು ಇಷ್ಟವಿಲ್ಲೆ".[೪೩]

ಮಲೆನಾಡ ಪರಿಸರದಲ್ಲಿ ಒಡೆಯರ ಶೋಷಣೆಗೆ ಒಳಗಾದ ಹೆಣ್ಣಿನ ಆಸೆ ಮತ್ತು ನೋವಿನ ದನಿಯಾಗಿ ಈ ಮಾತುಗಳಲ್ಲಿ ಪ್ರತಿರೋಧ ವ್ಯಕ್ತವಾಗಿದೆ. ತಳ ಸಮುದಾಯದ ಹೆಣ್ಣುಗಳಿಗೆ ಸುಖಸಂಸಾರದ ಕನಸು ಕನಸಾಗಿಯೇ ಇಂಗಿ ಹೋಗುತ್ತಿತ್ತು. ಅದನ್ನು ವಿರೋಧಿಸಿ ಅಕ್ಕುವಿನಂತ ಹೆಣ್ಣು ತಾನು 'ಗರತಿ' ಎನಿಸಿಕೊಳ್ಳಬೇಕೆಂಬ ಹಠ ಸಾಧಿಸಿದ್ದರಿಂದ ಜಮೀನ್ದಾರನಿಗೆ ಇಟ್ಟುಕೊಳ್ಳುವವಳಾಗದೆ ಜಮೀನ್ದಾರಿ ವರ್ಗದ ಜಾತಿಯಲ್ಲಿ ಮೇಲಾದ ಕಿಟ್ಟಪ್ಪಗೌಡನನ್ನು ಮದುವೆಯಾಗುತ್ತಾಳೆ. ಅಷ್ಟೇ ಅಲ್ಲ ತನ್ನ ಅಕ್ಕನ ಮಗ ಕುಬೇರ ತನಗಿಂತ ಮೇಲು ಜಾತಿ ಶೆಟ್ಟಿಯ ಮಗಳು ಸರಸ್ವತಿ ಪ್ರೀತಿಸಿದ್ದರಿಂದ ಈ ಪ್ರತಿಲೋಮ ವಿವಾಹಕ್ಕೆ ಬಹಳ ವಿರೋಧವಿದ್ದರೂ ಅಕ್ಕುವಿನ ನ್ಯಾಯಯುತ ಹೋರಾಟದ ಮೂಲಕ ಮದುವೆ ಮಾಡಿಸುತ್ತಾಳೆ.

ಅಕ್ಕುವಿನಂತಹ ಹೆಣ್ಣಿನ ಅರಿವಿಗೆ, ವಿರೋಧಕ್ಕೆ, ಜಯಕ್ಕೆ ಬದಲಾದ ಕಾಲಗತಿಯೂ ಕಾರಣ. ಸ್ವಾತಂತ್ರ್ಯ, ಹೊಸ ಕಾನೂನುಗಳು, ಚಿಂತನಾಶೀಲರ ಪ್ರಭಾವಗಳು ಈ ನೆಲದ ಪರಿಸರದಲ್ಲಿ ಶೋಷಣೆಯ ಬಿಗಿ ಸಡಿಲಗೊಳ್ಳುತ್ತಿತ್ತು. ಹೊಸ ಅರಿವು, ಸ್ವಾಭಿಮಾನ, ತಮ್ಮ ಕಾಲಮೇಲೆ ತಾವು ನಿಲ್ಲಬೇಕೆಂಬ ಛಲಗಳು ಮೂಡುತ್ತಿತ್ತು. ಮಲೆನಾಡ ಪರಿಸರದ ಆಗುತ್ತಿರುವ ಸಾಂಸ್ಕೃತಿಕ ಪಲ್ಲಟಗಳು ಪೂರಕವಾಗುತ್ತದೆ. ಅಕ್ಕುವಿನಂತ ಹೆಣ್ಣಿನ ಪ್ರವೇಶ, ಹೋರಾಟಗಳು ಪರಂಪರಾಗತವಾಗಿ ಬಂದ ಧೋರಣೆಗಳು ಹೆಣ್ಣಿನ ಶೋಷಣೆಗಳು ದೂರವಾಗುತ್ತಾ ಬದಲಾದ ನಾಗರಿಕ ಸಮಾಜದಲ್ಲಿ ಅದು ಪ್ರತಿಷ್ಠೆಯ ಸಂಗತಿಯಾಗಿಲ್ಲ ; ಅವಮಾನದ ಸಂಗತಿಯಾಗಿದೆ.

ಇದುವರೆಗೆ ಚರ್ಚಿಸಿದಂತೆ ಒಟ್ಟು ಭಾರತೀಯ ಸಂದರ್ಭದಲ್ಲಿ ಸ್ತ್ರೀಯರ ಸ್ಥಾನಮಾನ ಎಂತೊ

ಅಂತೆಯೆ ಮಲೆನಾಡ ಪರಿಸರದಲ್ಲೂ ತೀರ ಭಿನ್ನವಾದ ಸ್ವರೂಪವನ್ನೇನೂ ಕಾಣುವುದಿಲ್ಲ. ಮಲೆನಾಡ ಪರಿಸರದಲ್ಲಿ ನಾನಾ ಜಾತಿ ಸಮುದಾಯಗಳು ನೆಲೆಸಿವೆ. ಎಲ್ಲಾ ಸಮುದಾಯದ ಸ್ತ್ರೀಯರೂ ಪುರುಷ ಪ್ರಧಾನತೆಯ ಅಡಿಯಲ್ಲೇ ಬರುವಂತವರು. ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ಮಹಿಳೆಯರ ಬಗೆಗೆ ಇರುವ ವಿಧಿ ನಿಷೇಧಗಳು ಸಾಮಾಜಿಕವಾಗಿ ಮೇಲುಸ್ತರದ ಸಮುದಾಯದಲ್ಲಿ ತೀವ್ರತರವಾಗಿದ್ದು ಕೆಳಕೆಳ ಹಂತಕ್ಕೆ ಬಂದಂತೆಲ್ಲಾ ಸಡಿಲಗೊಳ್ಳುತ್ತಾ ಬಂದಿರುವುದನ್ನು ಕಾಣಬಹುದು. ಆದಾಗ್ಯೂ ಈ ಬಿಗಿತನ ಮತ್ತು ಸಡಿಲತೆಗಳ ಹಿಂದೆ ಪುರುಷ ಪ್ರಧಾನ ಅಧಿಕಾರಶಾಹಿ ಧೋರಣೆಯೇ ಮುಖ್ಯವಾಗಿದೆ.

'ವಿಧವೆ'ಯ ಸಮಸ್ಯೆ ಎಲ್ಲ ಸಮುದಾಯದ ಸಮಸ್ಯೆಯೇನಲ್ಲ. ಎಂ.ಕೆ.ಇಂದಿರಾ ಅವರ ಫಣಿಯಮ್ಮ ೧೯ನೇ ಶತಮಾನದ ಕೊನೆ ಮತ್ತು ೨೦ನೇ ಸತಮಾನದ ಆರಂಭಘಟ್ಟದ ಕಾಲವನ್ನು ಒಳಗೊಂಡಿದೆ. ನಿರೂಪಕಿಯ ಅಜ್ಜನ ತಂಗಿಯ ಬದುಕನ್ನು ಆಧರಿಸಿ ಈ ಕಾದಂಬರಿಯನ್ನು ರಚಿಸಲಾಗಿದೆ ಎಂದು ಹೇಳಿಕೊಂಡಿರುವುದರಿಂದ ಮಲೆನಾಡ ಪರಿಸರದ ವಿಧವೆಯರ ಬಾಳಿನ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತದೆ. ಫಣಿಯಮ್ಮ ಅಂಚೆಮನೆಯಲ್ಲಿ ಹುಟ್ಟಿದ್ದರಿಂದ ಆಧುನಿಕತೆಯ ಸ್ಪರ್ಶವಿದೆ. ಆದ್ದರಿಂದ ಫಣಿಯಮ್ಮ ಆಚಾರದಲ್ಲಿ ಸಂಪ್ರದಾಯ ನಿಷ್ಠಳಾದರೂ, ವಿಚಾರದಲ್ಲಿ ವೈಚಾರಿಕತೆಯನ್ನು ಹೊಂದಿದ್ದಾಳೆ. ಗಂಡನ ಕಳೆದುಕೊಂಡ ಹೆಣ್ಣು ಬಾಳಿನುದ್ದಕ್ಕೂ ಮಡಿಯಾಗಿರಬೇಕೆಂಬುದನ್ನು ತಣ್ಣನೆಯ ರೀತಿಯಲ್ಲಿ ವಿರೋಧಿಸುತ್ತಾಳೆ. ಆದ್ದರಿಂದ ಮುಂದೆ ದಾಕ್ಷಾಯಿಣಿಯಂತವರು ಕ್ರಾಂತಿಕಾರಕವಾಗಿ ನಡೆದುಕೊಳ್ಳಲು ಸಾಧ್ಯವಾಗುವುದು. ಮಲೆನಾಡ ಪರಿಸರಕ್ಕೆ ಸಂಬಂಧಿಸಿದಂತೆ ಫಣಿಯಮ್ಮನ ಚಿತ್ರಣ ಸಹಜವಾಗಿದೆ. ಈ ಸಹಜತೆಯನ್ನು, ವೈಚಾರಿಕತೆಯನ್ನು ಹೊಂದಿರುವ ವಿಧವೆಯರು ಅನಂತಮೂರ್ತಿ ಕಥೆಗಳಲ್ಲಿ ಅಷ್ಟು ಸಹಜವಾಗಿ ಚಿತ್ರಿತವಾಗುವುದಿಲ್ಲ. ಎಂ.ಕೆ.ಇಂದಿರಾ ಅವರ ನಂತರ ಬಂದ ವಸುಮತಿ ಉಡುಪ ಅವರ ಕಥೆಗಳಲ್ಲೂ ಫಣಿಯಮ್ಮನಂತಹ ವೈಚಾರಿಕವಾಗಿ ಚಿಂತಿಸುವ ವಿಧವಾ ಪಾತ್ರಗಳು ಬರುವುದಿಲ್ಲ. ಮಲೆನಾಡ ಪರಿಸರದಲ್ಲಿ ಕಟ್ಟುನಿಟ್ಟಾಗಿಯೇ ಬ್ರಾಹ್ಮಣ ಸಮುದಾಯದಲ್ಲಿ ಪಾಲನೆಯಾಗುತ್ತಿದ್ದ ಮಡಿ ಆಚರಣೆ ಫಣಿಯ್ಮನಂತವರ ವಿಚಾರಧಾರೆಗಳಿಂದ ಸಡಿಲವಾಗುತ್ತಾ ಬಂದಿದೆ.

ವಿಧವೆ ಪುನರ್‌ವಿವಾಹವಾಗುವ ಅವಕಾಶವನ್ನು ಶೂದ್ರ ಸಮುದಾಯದಲ್ಲಿ ಕಾಣಬಹುದು. ಕೂಡಿಕೆ ಅಥವಾ ಸೀರುಡಿಕೆ ಪದ್ಧತಿ ಒಕ್ಕಲಿಗರ ಸಮುದಾಯದಲ್ಲಿ ಇತ್ತು. ಇಲ್ಲಿಯ ಪುರುಷ ಮತ್ತೆ ಮತ್ತೆ ಮದುವೆಯಾಗಬೇಕಾದ ಸಂದರ್ಭ ಬಂದದ್ದರಿಂದ, ಮತ್ತೆ ಮತ್ತೆ ತೆರ ಕೊಡಬೇಕಾದುದರಿಂದ ವಿಧವೆಯನ್ನು ಕೂಡಿಕೆ ಮಾಡಿಕೊಳ್ಳುವ ಸಂಪ್ರದಾಯವನ್ನು ಪುರುಷಹಿತಾಸಕ್ತಿಯ ಹಿನ್ನೆಲೆಯಲ್ಲಿ ರೂಪಿಸಿಕೊಳ್ಳಲಾಗಿತ್ತು. ಪುನರ್ ವಿವಾಹವಾದರೂ ಅಮಂಗಳ ಭಾವನೆಯಿಂದ ನೋಡುವ ದೃಷ್ಟಿ ಬದಲಾಗುವುದಿಲ್ಲ. ಈಗ ಇಂತಹ ಸೀರುಡಿಕೆಯ ಪದ್ಧತಿ ಇಲ್ಲವಾಗಿದೆ. ಪುನರ್ ವಿವಾಹದ ಅವಕಾಶ ಬಂದಾಗ ವಿರೋಧಿಸುವ ವಾತಾವರಣವಿಲ್ಲ. ಅನಿವಾರ್ಯ ಸ್ಥಿತಿಯಲ್ಲಿ ಕುಟುಂಬದ ಯಜಮಾನಿಕೆಯನ್ನು ವಹಿಸಿಕೊಂಡು ಪುರುಷನಿಗೆ ಸರಿಸಮವಾಗಿ ವ್ಯವಹಾರ ನಡೆಸಿಕೊಂಡು ಬಂದ ಹೆಗ್ಗಡತಿಯರು ಹಲವರಿದ್ದಾರೆ. ಆರ್ಥಿಕವಾಗಿ ಅಂತಹ ಅನುಕೂಲಸ್ಥರಲ್ಲದ ಕುಟುಂಬದ ಹೆಣ್ಣುಮಕ್ಕಳು ಮನೆಯೊಳಗೆ ಹೇಗೊ ಹಾಗೆ ಮನೆಯ ಹೊರಗಿನ ತೋಟ-ಗದ್ದೆಗಳಲ್ಲೂ ಕೆಲಸ ಮಾಡುತ್ತಿದ್ದರು. ಹಾಗಿದ್ದೂ ಅವರು

ಪರಾವಲಂಬಿಗಳು, ತಮ್ಮ ಗಂಡಂದಿರು ಇನ್ನೊಂದು ಹೆಣ್ಣಿನ ಜೊತೆ ಬಹಿರಂಗವಾಗಿಯೇ ಸಂಬಂಧವನ್ನು ಹೊಂದಿದ್ದರೂ ಅದನ್ನು ವಿರೋಧಿಸಲಾರದ ಅಸಹಾಯಕತೆ ಇದೆ. 'ಈ ಗಂಡಸರೇ ಹೀಗೆ' ಎಂದು ಸಹಿಸುವಲ್ಲಿ, ಮೌನದಲ್ಲಿ ಸಮ್ಮತಿಯಿದೆ ಎಂದರ್ಥವಲ್ಲ. ಕಾಲಬದಲಾದಂತೆ ಆಧುನಿಕತೆ, ಶಿಕ್ಷಣ ಮುಂದುವರಿದಂತೆ ಈ ಪರಿಸರದಲ್ಲಿ ಅಂತಹ ಸಂಬಂಧ ಹೊಂದುವುದು ಪ್ರತಿಷ್ಠೆಯ ಸಂಗತಿಯಾಗಿ ಉಳಿದಿಲ್ಲ ; ಅವಮಾನದ ಸಂಗತಿಯಾಗಿದೆ. ಜೊತೆಗೆ ಇದನ್ನೆಲ್ಲಾ ವಿರೋಧಿಸುವ ಗಟ್ಟಿತನವನ್ನು ಈ ಪರಿಸರದ ಹೆಣ್ಣುಮಕ್ಕಳು ಪಡೆದುಕೊಂಡಿದ್ದಾರೆ. ಅಧೀನತೆಯಿಂದ ಅಧಿಕಾರದತ್ತ ಸಾಗಿದ್ದಾರೆ.

ಈ ಶತಮಾನದ ಆರಂಭಕಾಲದ ಘಟ್ಟದಲ್ಲಿ ನಿಂತು ನೋಡಿದಾಗ ಹೆಣ್ಣಿಗೆ ಓದನ್ನು ನಿರಾಕರಿಸಲಾಗಿತ್ತು. ಸ್ವಾತಂತ್ರ್ಯೋತ್ತರ ಕಾಲಕ್ಕೆ ಬಂದಾಗ ಹೆಣ್ಣು ಕೂಡ ಓದಬೇಕು ಎಂಬ ಭಾವನೆ ಈ ಪರಿಸರದಲ್ಲಿ ಮೂಡುತ್ತದೆ.

ಆಧುನಿಕ ಶಿಕ್ಷಣ, ಉದ್ಯೋಗವಕಾಶಗಳು ಹೆಚ್ಚಿದಂತೆ ಗ್ರಾಮೀಣ ಪ್ರದೇಶದಿಂದ ಪುರುಷರ ನಿರ್ಗಮನ ಹೆಚ್ಚಾಯಿತು. ಇಂತಹ ಉದ್ಯೋಗದಲ್ಲಿರುವ ವರನನ್ನು ಪಡೆಯಬೇಕೆಂಬ ಆಕಾಂಕ್ಷೆಯೇ ತಮ್ಮ ಹೆಣ್ಣುಮಕ್ಕಳನ್ನು ಓದಿಸಬೇಕೆಂಬ ಮನೋಭಾವದ ಹಿನ್ನೆಲೆಯ ಹಲವು ಕಾರಣಗಳಲ್ಲಿ ಒಂದು. ಈ ಮೂಲಕ ಹೆಣ್ಣು ಕೂಡ ಉದ್ಯೋಗಾವಕಾಶಗಳನ್ನು ಪಡೆಯುತ್ತಾ, ಪುರುಷನಿಗೆ ಸರಿಸಮನಾಗಿ ಬೆಳೆಯುತ್ತಾ ಬಂದಂತೆ ಹೆಣ್ಣು-ಗಂಡು ಭೇದವಿಲ್ಲದೆ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕಾಳಜಿ ಬೆಳೆದಿದೆ.

ತಳ ಸಮುದಾಯದ ಹೆಣ್ಣು ಎರಡು ರೀತಿ ಶೋಷಣೆಯ ಪಾಶಕ್ಕೆ ಸಿಲುಕಿದ್ದಾಳೆ. ಒಂದು ತನ್ನ ಕುಟುಂಬದ ಪುರುಷರ ಅಧಿಕಾರ ಧೋರಣೆ, ಇನ್ನೊಂದು ತನ್ನ ಕುಟುಂಬದ ಪುರುಷರೂ ಸೇರಿದಂತೆ ಒಡೆಯನ ಅಧೀನಕ್ಕೆ ಒಳಗಾಗಿರುವುದು. ಆದ್ದರಿಂದ ಈ ಸಮುದಾಯದ ಹೆಣ್ಣುಗಳ ಒಲವು, ಪ್ರೀತಿ-ಪ್ರೇಮವು ಒಡೆಯರನ್ನು ಅಲವಂಬಿಸಿವೆ. ಏಕಕಾಲದಲ್ಲಿ ಈ ಎರಡು ಬಂಧನಗಳನ್ನು ಮೀರಬೇಕು. ತಿಮ್ಮಿಯಂತವಳು ಆ ಸಾಹಸವನ್ನು ಮಾಡುತ್ತಾಳೆ. 'ಹೂವಿ'ಯಂತವಳು ಮೀರಲೆತ್ನಿಸುವ ಹಿನ್ನೆಲೆಯಲ್ಲಿ ಸಾವಿಗೆ ಶರಣಾಗುತ್ತಾಳೆ. ಪರಂಪರಾಗತವಾದ ಉದ್ಯೋಗವನ್ನು, ಲೈಂಗಿಕ ಶೋಷಣೆಯನ್ನು ಎದುರಿಸಿ ನಿಂತವಳು ಕರಾವಳಿಯ ಹುಡುಗಿ ಅಕ್ಕು. ಅವಳ ಜಯಕ್ಕೆ ಕಾಲಗತಿ, ಹೊಸಕಾನೂನುಗಳು, ಚಿಂತನಾಶೀಲರ ಪ್ರಭಾವಗಳು ಕಾರಣವಾಗುತ್ತವೆ. ಇಂದು ಮಲೆನಾಡ ಪರಿಸರದ ಹೆಣ್ಣು ಅಕ್ಷರಸ್ಥಳಾಗುತ್ತಿದ್ದಾಳೆ, ಪರಾವಲಂಬಿ ಸ್ಥಿತಿಯಿಂದ ಸ್ವಾವಲಂಬಿಸ್ಥಿತಿಗೆ ಸಾಗುತ್ತಿದ್ದಾಳೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಪುರುಷನ ಸಮಾನಕ್ಕೆ ಬೆಳೆಯುವ ಆಶಾಭಾವನೆ ಮೂಡಿಸಿದ್ದಾಳೆ.

ಅಡಿ ಟಿಪ್ಪಣಿ

೧. ಪ್ರಹ್ಲಾದ ಅಗಸನಕಟ್ಟೆ, ದಲಿತ-ಬಂಡಾಯ ಕಾವ್ಯ ಮತ್ತು ವಿಚಾರಗಳು, ಹರ್ಷ ಪ್ರಕಾಶನ, ಹುಬ್ಬಳ್ಳಿ, ೨೦೦೪, ಪುಟ:೩೮೩

೨. ಇಂದಿರಾ.ಎಂ.ಕೆ. ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೧೭

೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೪೧
೪. ಇಂದಿರಾ.ಎಂ.ಕೆ. ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೪೩
೫. ಇಂದಿರಾ.ಎಂ.ಕೆ. ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೪೫
೬. ಇಂದಿರಾ.ಎಂ.ಕೆ. ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೮೦
೭. ಇಂದಿರಾ.ಎಂ.ಕೆ. ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬, ಪುಟ:೮೯
೮. ಲಲಿತಾನಾಯಕ್.ಬಿ.ಟಿ., ಫಣಿಯಮ್ಮದಲ್ಲೊಂದು ಬಂಡಾಯದ ಮಿಂಚು, ಸುರಗಿ (ಸಂ) ಎಚ್.ಎಸ್.ಪಾರ್ವತಿ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೧೯೯೧, ಪುಟ:೧೬೫
೯. ಲಲಿತಾನಾಯಕ್.ಬಿ.ಟಿ., ಫಣಿಯಮ್ಮದಲ್ಲೊಂದು ಬಂಡಾಯದ ಮಿಂಚು, ಸುರಗಿ (ಸಂ) ಎಚ್.ಎಸ್.ಪಾರ್ವತಿ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೧೯೯೧, ಪುಟ:೧೬೮
೧೦. ಪ್ರಹ್ಲಾದ ಅಗಸನಕಟ್ಟೆ, ದಲಿತ–ಬಂಡಾಯ ಕಾವ್ಯ ಮತ್ತು ವಿಚಾರಗಳು, ಹರ್ಷ ಪ್ರಕಾಶನ, ಹುಬ್ಬಳ್ಳಿ, ೨೦೦೪, ಪುಟ:೪೦೫
೧೧. ಅನಂತಮೂರ್ತಿ.ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೫೧
೧೨. ಅನಂತಮೂರ್ತಿ.ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೧೦೫
೧೩. ಇಂದಿರಾ.ಎಂ.ಕೆ. ತಗ್ಗಿನಮನೆ ಸೀತೆ, ಪ್ರಕಾಶನ ಸಾಹಿತ್ಯ, ಬೆಂಗಳೂರು, ೨೦೦೪, ಪುಟ:೮೯
೧೪. ಸುಮಿತ್ರಾಬಾಯಿ.ಬಿ.ಎನ್., ಇಂದಿರಾ ಕಾದಂಬರಿಗಳಲ್ಲಿ ಸ್ತ್ರೀ ಪರದೃಷ್ಟಿ, ಸುರಗಿ (ಸಂ) ಎಚ್.ಎಸ್.ಪಾರ್ವತಿ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೧೯೯೧, ಪುಟ:೨೩೫
೧೫. ಸುಮಿತ್ರಾಬಾಯಿ ಬಿ.ಎನ್., ಇಂದಿರಾ ಕಾದಂಬರಿಗಳಲ್ಲಿ ಸ್ತ್ರೀ ಪರದೃಷ್ಟಿ, ಸುರಗಿ (ಸಂ) ಎಚ್.ಎಸ್.ಪಾರ್ವತಿ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೧೯೯೧, ಪುಟ:೨೪೦
೧೬. ಮಂಗಳಾ ಪ್ರಿಯದರ್ಶಿನಿ, ಭಾಗ ಐದು, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ (ಸಂ), ಡಾ.ಎಚ್.ಎಸ್. ಶ್ರೀಮತಿ ಪ್ರಸಾರಾಂಗ ಕನ್ನಡ, ವಿ.ವಿ.ಹಂಪಿ, ೨೦೦೬, ಪುಟ:೩೦೩
೧೭. ಅನಂತಮೂರ್ತಿ.ಯು.ಆರ್., ಸಂಸ್ಕಾರ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೫, ಪುಟ:೩೨
೧೮. ಅನಂತಮೂರ್ತಿ.ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೧೦೫
೧೯. ಅನಂತಮೂರ್ತಿ.ಯು.ಆರ್., ಪ್ರಸ್ತ, ಐದು ದಶಕದ ಕಥೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೧೬೮
೨೦. ರಾಮಚಂದ್ರದೇವ, ಸೂರ್ಯನಕುದುರೆ, ಯು.ಆರ್.ಅನಂತಮೂರ್ತಿ ವ್ಯಕ್ತಿ–ಕೃತಿ (ಸಂ) ಮುರುಳೀಧರ ಉಪಾಧ್ಯ ಹಿರಿಯಡಕ, ಕರ್ನಾಟಕ ಸಂಘ ಪುತ್ತೂರು, ೨೦೦೦, ಪುಟ:೨೫೭

೨೧. ಅನಂತಮೂರ್ತಿ.ಯು.ಆರ್., ಸಂಸ್ಕಾರ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೫, ಪುಟ:೨೫

೨೨. ಅನಂತಮೂರ್ತಿ.ಯು.ಆರ್., ಸಂಸ್ಕಾರ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೫, ಪುಟ:೯೯

೨೩. ಅಶೋಕ ಟಿ.ಪಿ., ಮುನ್ನುಡಿ, ಬಂದನಾಹುಲಿರಾಯನು ಮತ್ತು ಇತರ ಕಥೆಗಳು, ವಸುಮತಿ ಉಡುಪ, ಕರ್ನಾಟಕ ಸಂಘ, ಶಿವಮೊಗ್ಗ, ೧೯೯೬.

೨೪. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೬೨೫

೨೫. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೬೨೭

೨೬. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೫೩

೨೭. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೬೦

೨೮. ಅಂಬಳಿಕೆ ಹಿರಿಯಣ್ಣ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕನ್ನೆ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯, ಪುಟ: ೨೬೬

೨೯. ಸುಮಿತ್ರಾಬಾಯಿ.ಬಿ.ಎನ್., ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯, ಪುಟ:೧೧೩

೩೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೩೩೭

೩೧. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೪೮೨

೩೨. ಸುಮಿತ್ರಾಬಾಯಿ.ಬಿ.ಎನ್., ಸ್ತ್ರೀವಾದ, ಕರ್ನಾಟಕ ಅಕಾಡೆಮಿ, ಬೆಂಗಳೂರು, ೧೯೯೯, ಪುಟ:೧೧೩

೩೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೫೬೨

೩೪. ಬಿಳುಮನೆ ರಾಮದಾಸ್, ವ್ಯಾಮೋಹ, ಮಲೆನಾಡು ಪ್ರಕಾಶನ, ಬೆಂಗಳೂರು, ೧೯೯೦, ಪುಟ:೨೫

೩೫. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಹೆಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೩೦೨

೩೬. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೩೨೧

೩೭. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೩೪೨

೩೮. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೪೪೮

೩೯. ಅನಂತಮೂರ್ತಿ ಯು.ಆರ್., ಸಂಸ್ಕಾರ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೫, ಪುಟ:೯೯

೪೦. ಜಿ.ಎಚ್.ನಾಯಕ, ಅನಂತಮೂರ್ತಿ ಅವರ ಕಥಾಸಾಹಿತ್ಯ, ಯು.ಆರ್.ಅನಂತಮೂರ್ತಿ ವ್ಯಕ್ತಿ-ಕೃತಿ, (ಸಂ) ಮುರುಳೀಧರ ಉಪಾಧ್ಯ ಹಿರಿಯಡಕ, ಕರ್ನಾಟಕ ಸಂಘ, ಪುತ್ತೂರು, ೨೦೦೦,

ಪುಟ:೨೧೬

೪೧. ಬಿಳುಮನೆ ರಾಮದಾಸ್, ಕರಾವಳಿಯ ಹುಡುಗಿ, ಸಿಜಿವಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪, ಪುಟ:೮೭

೪೨. ಬಿಳುಮನೆ ರಾಮದಾಸ್, ಕರಾವಳಿಯ ಹುಡುಗಿ, ಸಿಜಿವಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪, ಪುಟ:೧೨೧

೪೩. ಬಿಳುಮನೆ ರಾಮದಾಸ್, ಕರಾವಳಿಯ ಹುಡುಗಿ, ಸಿಜಿವಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪, ಪುಟ:೧೫೬

ಅಧ್ಯಾಯ ೬
ಅಸ್ಪೃಶ್ಯತೆ, ಜಾತಿ, ವರ್ಗಸಂಘರ್ಷ : ಕಥಾಸಾಹಿತ್ಯ

ಅಧ್ಯಾಯ ೬. ಅಸ್ಪೃಶ್ಯತೆ, ಜಾತಿ, ವರ್ಗಸಂಘರ್ಷ : ಕಥಾಸಾಹಿತ್ಯ

ಭಾರತೀಯ ಸಾಮಾಜಿಕ ಬದುಕು ಸಮೃದ್ಧವಾದುದು, ವೈವಿಧ್ಯಮಯವಾದುದು. ಈ ವಿಶಾಲವಾದ ದೇಶದಲ್ಲಿ ಭಿನ್ನಭಿನ್ನವಾದ ಪ್ರಾಕೃತಿಕ ಸ್ವರೂಪವಿದೆ. ನಾನಾ ಭಾಷೆಗಳಿಂದ ನಾನಾ ಧರ್ಮಗಳಿಂದ, ನಾನಾ ಜಾತಿ ಸಮುದಾಯಗಳಿಂದ, ನಾನಾ ಆಚರಣೆ-ನಂಬಿಕೆಗಳಿಂದ ಕೂಡಿ ಬಹುಮುಖಿ ಸಂಸ್ಕೃತಿಯಾದ ಭಾರತೀಯ ಸಮಾಜಜೀವನದ ಸಂರಚನೆಗಳು ಅತ್ಯಂತ ಸಂಕೀರ್ಣ ಸ್ವರೂಪದಲ್ಲಿವೆ. ಇದಕ್ಕೆ ಮುಖ್ಯ ಕಾರಣ ಈ ಸಮಾಜವು ಆಚರಿಸಿಕೊಂಡು, ಪಾಲಿಸಿಕೊಂಡು ಬರುತ್ತಿರುವ ಚಾತುರ್ವರ್ಣ ಪದ್ಧತಿ. ಪಿರಾಮಿಡ್ ಆಕೃತಿಯ ಈ ಶ್ರೇಣಿಕೃತ ಸಮಾಜದ ಮೇಲ್ತುತುದಿಯಲ್ಲಿ ಬ್ರಾಹ್ಮಣ ನಂತರ ಕ್ಷತ್ರಿಯ, ತದನಂತರ ವೈಶ್ಯ ಕೆಳಹಂತದಲ್ಲಿ ಶೂದ್ರ ಸಮುದಾಯಗಳಿವೆ. ದಲಿತ ಸಮುದಾಯವನ್ನು ಈ ಶ್ರೇಣಿಕೃತ ವ್ಯವಸ್ಥೆಯ ಒಳಗೆ ತರಲೇ ಇಲ್ಲ. ಶತಶತಮಾನಗಳಿಂದ ಅವರನ್ನು ಪ್ರಾಣಿಗಳನ್ನು ನೋಡುವಂತೆಯೇ ನಡೆಸಿಕೊಂಡು ಇತ್ತೀಚಿನವರೆಗೂ ಬರಲಾಗಿತ್ತು. ಈ ವರ್ಣಾಶ್ರಮ ಪದ್ಧತಿಯು ಭಾರತೀಯ ಸಮಾಜದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿತು. ಕಸುಬಿನ ಹಿನ್ನಲೆಯಲ್ಲಿ ರೂಪಗೊಂಡ ಈ ವ್ಯವಸ್ಥೆ ಕಾಲಾನಂತರದಲ್ಲಿ ಜಾತಿ ಪದ್ಧತಿಯ ಸೃಷ್ಟಿಗೆ ಮೂಲವೆನಸಿತು.

ಯಾವುದೇ ಮನುಷ್ಯ ಸಮಾಜದ ಬದುಕಿನ ವೈವಿಧ್ಯತೆಗೆ ಪ್ರಮುಖವಾಗಿ ಎರಡು ಕಾರಣಗಳನ್ನು ಗುರುತಿಸಿಕೊಳ್ಳಬಹುದು. ಒಂದು ಜನಾಂಗಿಕ ಮತ್ತೊಂದು ನೈಸರ್ಗಿಕ. ಜೀವ ಜಗತ್ತಿನ ಸೃಷ್ಟಿಯಲ್ಲಿ ಮನುಷ್ಯ ಕೂಡ ಒಂದು ಪ್ರಾಣಿ. ಈ ಹಿನ್ನೆಲೆಯಲ್ಲಿ ಜಗತ್ತಿನ ಯಾವ ಭಾಗದ ಜನರೇ ಆಗಲಿ ಎಲ್ಲರು ಸಮಾನರು, ಆದರೆ ನೈಸರ್ಗಿಕ ಪರಿಸರ, ಅನುವಂಶೀಯ ಗುಣಲಕ್ಷಣಗಳಿಂದ ರೂಪ, ಆಕಾರ, ಆಳ್ತನ, ಕೂದಲು ಬಣ್ಣ ಇತ್ಯಾದಿ ಕಾರಣಗಳಿಂದ ಇತರರಿಗಿಂತ ಭಿನ್ನವಾಗಿರುತ್ತಾನೆ. ಜೊತೆಗೆ ನೆಲ, ನೀರು, ಆಹಾರ, ಕಸುಬು ವಿದ್ಯೆ ಎಲ್ಲವು ಅವನನ್ನು ಪ್ರಭಾವಿಸಿರುತ್ತದೆ ; ಅವನಲ್ಲಿ ವಿಶಿಷ್ಟ ಮನೋಧರ್ಮಗಳನ್ನು ರೂಪಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಸಮಾಜವನ್ನು ಪರಿಶೀಲಿಸ ಹೊರಟಾಗ ನೂರಾರು ಬುಡಕಟ್ಟುಗಳು ಅಲೆಮಾರಿಗಳಾಗಿ ಬಹುಕಾಲ ನಿಸರ್ಗ ಸಹಜ ಬದುಕನ್ನು ನಡೆಸುತ್ತಾ ಬಂದವರು. ಯಾವಾಗ ವ್ಯವಸಾಯ ಕಂಡುಕೊಂಡರೊ ಆಗ ಸಂಸಾರ, ಕುಟುಂಬ, ಸಮಾಜವನ್ನು ಕಟ್ಟಿಕೊಳ್ಳುತ್ತಾ ಬಂದರು. ಈ ಬುಡಕಟ್ಟು ಸಮುದಾಯಗಳ ನಡುವೆ ವರ್ಣ-ವರ್ಗ-ಜಾತಿ ಅಸಮಾನತೆಗಳಿಲ್ಲದ ಬದುಕಿನ ಅವಸ್ಥೆಯನ್ನು ಊಹಿಸಿಕೊಳ್ಳಲು ಸಾಧ್ಯವಿದೆ. ಮಾತೃ ಪ್ರಧಾನವಾದ ಕೌಟುಂಬಿಕ ವ್ಯವಸ್ಥೆಯನ್ನು ಮೊದಲಿಗೆ ಹೊಂದಿದ್ದಿರಬಹುದಾಗಿದ್ದ ಈ ಎಲ್ಲ ಸಮುದಾಯಗಳು ಸಾವಿರಾರು ವರ್ಷಗಳಿಂದಲೂ ನಿರಕ್ಷರಿಗಳಾಗಿದ್ದು, ಮೌಖಿಕ ಪರಂಪರೆಯಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡು ಸಂಪ್ರದಾಯಗಳನ್ನು ರೂಢಿಸಿಕೊಂಡು, ಪಾಲಿಸಿಕೊಂಡು ಬರುತ್ತಿದ್ದರು. ಇಂತಹ ಸಮಾಜದ ಸಮುದಾಯಗಳೊಡನೆ ಮಾರಣಾಂತಿಕವಾದ ಜಗಳ, ಹೊಡೆದಾಟಗಳು, ಅಸಹನೆ-ಅಸಮಧಾನಗಳು ಅನೇಕ ಕಾರಣಗಳಿಗೆ ಇರುತ್ತಿದ್ದವೇ ಹೊರತು ಅಸಮಾನತೆಯಾಗಲಿ, ಮೇಲು-ಕೀಳೆಂಬ ಭಾವವಾಗಲಿ ಇರಲಿಲ್ಲವೆನ್ನಬಹುದು.

ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಮುಂದುವರಿಯುತ್ತಿದ್ದ ಈ ಸ್ಥಳೀಯ

ಸಮುದಾಯಗಳೇ ಸಾಮಾನ್ಯವಾಗಿ ದ್ರಾವಿಡರೆಂದು ಈ ದೇಶದ ಮೂಲ ನಿವಾಸಿಗಳೆಂದು ಗುರುತಿಸುವ ಪ್ರಯತ್ನ ನಡೆಯುತ್ತಿದೆ. ಹರಪ್ಪ-ಮೆಹೆಂಜೋದಾರ ಸಂಸ್ಕೃತಿಗಳೇ ಈ ದ್ರಾವಿಡ ಸಂಸ್ಕೃತಿ ಎಂಬುದಾಗಿ ಇತಿಹಾಸಕಾರರು ಸಮರ್ಥಿಸುತ್ತಿದ್ದಾರೆ. ಒಟ್ಟಿನಲ್ಲಿ ಭಾರತದ ಮೂಲನಿವಾಸಿಗಳು ಸಮೃದ್ಧವಾದ ಜೀವನ ನಡೆಸುತ್ತಿದ್ದ ಕಾಲಕ್ಕೆ ವಾಯುವ್ಯ ಭಾಗದ ಕಡೆಯಿಂದ ಆರ್ಯರ ಆಗಮನವಾಯಿತು. ಸ್ವಭಾವತಃ ಆಕ್ರಮಣಕಾರಿಗಳೂ, ಸಾಹಸಿಗಳೂ ಆಗಿದ್ದು, ಅದಕ್ಕೆ ತಕ್ಕನಾದ ಆಯುಧಗಳನ್ನು ಹೊಂದಿದವರಾಗಿದ್ದರು. ಇವರನ್ನು ಕೇವಲ ಜೀವನೋಪಾಯಕ್ಕೆ ಅಗತ್ಯವಿರುವ ಆಯುಧಗಳನ್ನು ಹೊಂದಿರುವ ದ್ರಾವಿಡರು ಎದುರಿಸಲು ಸಮರ್ಥವಾಗಲಿಲ್ಲ.

ಆರ್ಯರ ಮತ್ತು ದ್ರಾವಿಡರ ಸಂಘರ್ಷದ ಘಟನೆಗಳೇ ನಮ್ಮ ಪುರಾಣಗಳ ವಸ್ತು ಎಂದು ಹೇಳಲಾಗುತ್ತಿದೆ. ಬಿಳಿ ಬಣ್ಣದ ಆರ್ಯರು ದಸ್ಯುಗಳನ್ನು ದಾಸ್ಯದಲ್ಲಿಟ್ಟುಕೊಳ್ಳುವ ಎಲ್ಲಾ ಬಗೆಯ ಶಕ್ತಿಯನ್ನು ಧಾರೆ ಎರೆದರೆನ್ನಬೇಕು. ಧಾರ್ಮಿಕ, ಸಾಮಾಜಿಕ ವ್ಯವಸ್ಥೆಯನ್ನು ತಮಗೆ ಅನುಕೂಲಕರವಾದ ರೀತಿಯಲ್ಲಿ ರೂಪಿಸಿದರು. ದೇವರು-ನಂಬಿಕೆ-ಆರಾಧನೆ-ಆಚರಣೆ, ಸಂಪ್ರದಾಯಗಳ ಒಳಗೇ ಶೋಷಣೆಯ ಅಂಶಗಳನ್ನು ಅಳವಡಿಸಿ ಸ್ಥಾಯಿಗೊಳಿಸಿದರು. ಶ್ರಮವಿಲ್ಲದೆ ಫಲವನ್ನು ಅನಾಯಾಸವಾಗಿ ಪಡೆದುಣ್ಣುವ ತಂತ್ರಗಳನ್ನು ಹೆಣೆದರು. ಬಹುಶಃ ಮೇಲು-ಕೀಳು, ಶ್ರೇಷ್ಠ-ಕನಿಷ್ಠಗಳೆಂಬ ತಾರತಮ್ಯ ಭಾವನೆಗಳು ಈ ಹಂತದಲ್ಲಿಯೇ ಗರಿಗಟ್ಟಿಕೊಂಡಿರಬೇಕು. ಸೃಷ್ಟಿಕರ್ತನಾದ ಬ್ರಹ್ಮನ ತಲೆಯಿಂದ ಬ್ರಾಹ್ಮಣ, ತೋಳಿನಿಂದ ಕ್ಷತ್ರಿಯ, ತೊಡೆಯಿಂದ ವೈಶ್ಯ, ಪಾದದಿಂದ ಶೂದ್ರರು ಜನಿಸಿದರು ಎಂದು ಸೃಷ್ಟಿಯ ವಿಸ್ಮಯವೆನಿಸಿದ ಹುಟ್ಟನ್ನು ನಾಲ್ಕು ಬಗೆಯ ವರ್ಣವ್ಯವಸ್ಥೆಯಲ್ಲಿ ತಂದರು. ಆರ್ಯರ ಪಾಲಿಗೆ ದಸ್ಯುಗಳೆನಿಸಿದ ದ್ರಾವಿಡರು ಅಥವಾ ಮೂಲನಿವಾಸಿಗಳನ್ನು ನಿಯಂತ್ರಣದಲ್ಲಿಡಲು ಪ್ರಭುತ್ವವನ್ನು ಹುಟ್ಟು ಹಾಕಿದರು. ಪ್ರಭುತ್ವವನ್ನು ನಿಯಂತ್ರಿಸಲು ರಾಜ ಗುರುವಿನ ಸ್ಥಾನದಲ್ಲಿ ಬ್ರಾಹ್ಮಣ್ಯವೇ ನಿಂತಿತು.

ವರ್ಣಾಶ್ರಮ ಪದ್ಧತಿಯ ಸಾಮಾಜಿಕ ರಚನೆಯಲ್ಲಿ ವೇದಶಾಸ್ತ್ರಗಳ ಪಠನ, ಅಧ್ಯಯನ, ಧಾರ್ಮಿಕ ವಿಧಿ ವಿಧಾನಗಳ ನಿರ್ದೇಶನ ಎಲ್ಲ ನಡೆಸುವವರು ಬ್ರಾಹ್ಮಣರು, ದೇಶದ ರಕ್ಷಣೆ ಹೊತ್ತವರು ಕ್ಷತ್ರಿಯರು, ವ್ಯಾಪಾರ ನಡೆಸುವವರು ವೈಶ್ಯರು ಆದರೆ ಉಳಿದ ವ್ಯವಸಾಯ, ಪಶುಪಾಲನೆ, ಕಮ್ಮಾರಿಕೆ, ಕುಂಬಾರಿಕೆ, ಚರ್ಮಗಾರಿಕೆ, ನೇಯ್ಗೆಗಾರಿಕೆ ಮುಂತಾದ ನೂರ್ರೆಂಟು ಕಸುಬುಗಳನ್ನು ಮಾಡುವವರು ಶೂದ್ರರು. ಈ ಕಸುಬುಗಳೇ ಮುಂದೆ ಜಾತಿಗಳಾಗಿ ರೂಪಗೊಳ್ಳಲು ಭಾರತದಲ್ಲಿ ಸಾಧ್ಯವಾಯಿತು. ಹೀಗೆ ವರ್ಣವ್ಯವಸ್ಥೆಯ ಪಾತಳಿಯ ಮೇಲೆ ನಿರ್ಮಾಣಗೊಂಡ ಸಾಮಾಜಿಕ ಬದುಕಿನಲ್ಲಿ ಹುಟ್ಟು ಜಾತಿಯನ್ನು ನಿರ್ಧರಿಸಲು ಪ್ರಮಾಣವಾಯಿತು.

ಆಧುನಿಕ ಭಾರತದ ಚರಿತ್ರೆಯಲ್ಲಿ ಭಾರತದ ವರ್ಣ, ಜಾತಿ, ಸಮಾಜಗಳನ್ನು ಕುರಿತು ಅತ್ಯಂತ ವೈಜ್ಞಾನಿಕವಾದ ರೀತಿಯಲ್ಲಿ ಅಧ್ಯಯನ ಮಾಡಿದವರೆಂದರೆ ಡಾ. ಬಿ.ಆರ್.ಅಂಬೇಡ್ಕರ್. ಜಾತಿ ಒಂದು ಮನೋಭಾವ, ಈ ಮನೋಭಾವದ ಮೂಲ ವರ್ಣ, ಜಾತಿ ಪರಿಪಾಲನೆ ಜನರ ತಪ್ಪಲ್ಲ ; ನಿಜವಾಗಿ ತಪ್ಪಿರುವುದು ಜಾತಿಯ ಬಗೆಗೆ ಧರ್ಮವುಂಟು ಮಾಡಿದ ಕಲ್ಪನೆ ಎಂಬುದು ಅಂಬೇಡ್ಕರ್ ವಾದ. ವಿಜಾತಿಗಳ ನಡುವೆ ಸಹಭೋಜನವಾಗಲಿ, ವಿವಾಹವಾಗಲಿ ಕೂಡದು ಎಂಬ ನಿಷೇಧವೇ ಜಾತಿಯ

ಹುಟ್ಟಿಗೆ ಕಾರಣವಾದರೆ, ಕೆಲವು ಜನ ವರ್ಗಗಳನ್ನು ಮುಟ್ಟಬಾರದೆಂಬ ನಿಷೇಧವೇ ಅಸ್ಪೃಶ್ಯತೆಯ ಹುಟ್ಟಿಗೆ ಕಾರಣ ಎಂಬುದು ಅಂಬೇಡ್ಕರ್ ವಾದ. "ಹಿಂದುಗಳು ಅಸ್ಪೃಶ್ಯತೆಯನ್ನು ಆಚರಿಸುತ್ತಾರೆಂದರೆ ಅದಕ್ಕೆ ಕಾರಣ ಧರ್ಮ ಅವರನ್ನು ಬೆಂಬಲಿಸುತ್ತದೆ......... ಧರ್ಮ ಅವರಿಗೆ ಈ ಸ್ಥಾಪಿತ ವ್ಯವಸ್ಥೆ ದೈವ ನಿರ್ಮಿತವೆಂದು, ಪವಿತ್ರವೆಂದು ಹೇಳುತ್ತದೆ".[೧] ಹಿಂದೂ ಧರ್ಮದ ಅಸ್ತಿತ್ವ ನಿಂತಿರುವುದೇ ವರ್ಣಾಶ್ರಮ ಧರ್ಮದ ಮೇಲೆ, ವರ್ಣಾಶ್ರಮ ಧರ್ಮ ನಿಂತಿರುವುದೇ ಜಾತಿಗಳ ಮೇಲೆ, ಜಾತಿಗಳು ನಿಂತಿರುವುದೇ ಅಸ್ಪೃಶ್ಯತೆಯ ಮೇಲೆ, ಅಸ್ಪೃಶ್ಯತೆ ಇಲ್ಲದೆ ಜಾತಿಗಳಿಲ್ಲ, ಜಾತಿಗಳಿಲ್ಲದೆ ವರ್ಣಾಶ್ರಮ ಧರ್ಮವಿಲ್ಲ, ವರ್ಣಾಶ್ರಮ ಧರ್ಮವಿಲ್ಲದೆ ಹಿಂದೂ ಧರ್ಮವೂ ಇಲ್ಲ ಎಂಬುದನ್ನು ಮನಗಾಣಬೇಕು.

ಕ್ರಿಪೂ. ಕಾಲದಿಂದಲೂ ಚಾರ್ವಾಕ, ಬೌದ್ಧ, ಜೈನ, ವೀರಶೈವ ಮುಂತಾದ ಧಾರ್ಮಿಕ ಚಳುವಳಿಗಳು ಅಮಾನವೀಯವಾದ, ಅವೈಜ್ಞಾನಿಕವಾದ ಚಾತುರ್ವರ್ಣ ಪದ್ಧತಿಯನ್ನು, ಜಾತಿಯ ಅಸಮಾನತೆಯನ್ನು ಪ್ರಶ್ನಿಸಿವೆ ; ವಾದ ಹೂಡಿವೆ. ವೈಚಾರಿಕ ನೆಲೆಗಟ್ಟಿನಿಂದ ತಾರ್ಕಿಕವಾಗಿ ಆಲೋಚಿಸಿವೆ. ಆದರೆ ಯಾವ ಶಕ್ತಿಗೂ ಜನತೆಯ ಬದುಕಿನಲ್ಲಿ ಆಳವಾಗಿ ಬೇರೂರಿರುವ ಅದನ್ನು ಕಿತ್ತೆಸೆಯಲು ಸಾಧ್ಯವಾಗಿಲ್ಲ. ಆದರೆ ಅಲುಗಾಡಿಸಲು ಸಾಧ್ಯವಾಗಿದೆ. ಇದು ಇನ್ನಷ್ಟು ಸಡಿಲಗೊಳ್ಳುತ್ತಾ ಹೋಗಿದ್ದು ಪರಕೀಯರ ಪ್ರವೇಶದಿಂದ, ಇಸ್ಲಾಂ ಧರ್ಮ, ನಂತರ ಕ್ರೈಸ್ತ ಧರ್ಮದ ಪ್ರವೇಶ, ಪಾಶ್ಚಾತ್ಯ ಮಾದರಿಯ ಶಿಕ್ಷಣ, ಸಮಾಜ ಸುಧಾರಕರ ಚಳುವಳಿ, ಪರಮಹಂಸ ವಿವೇಕಾನಂದರ ವಿಚಾರಧಾರೆಗಳು, ಸ್ವಾತಂತ್ರ್ಯ ಹೋರಾಟ, ಪ್ರಜಾಪ್ರಭುತ್ವದ ವ್ಯವಸ್ಥೆ, ವಿಜ್ಞಾನ–ಆಧುನಿಕತೆಗಳ ಪ್ರವೇಶ ಇತ್ಯಾದಿಗಳಿಂದ ಒಟ್ಟು ಭಾರತೀಯ ಸಾಮಾಜಿಕ ಜೀವನದಲ್ಲಿ ಪಲ್ಲಟಗಳಾಗತೊಡಗಿತು. ಒಟ್ಟು ಭಾರತೀಯ ಸಮಾಜದ ಬದುಕು ಹೇಗೋ ಹಾಗೆ ಕರ್ನಾಟಕ, ಮಲೆನಾಡ ಬದುಕಿನ ಪರಿಸರದಲ್ಲೂ ಪಲ್ಲಟಗಳಾಗತೊಡಗಿದ್ದವು.

ಮಲೆನಾಡ ಪರಿಸರ ಮತ್ತು ಸಮಾಜ

ಪಶ್ಚಿಮ ಘಟ್ಟಗಳ ತಪ್ಪಲಲ್ಲಿ ರೂಪಿತವಾಗಿರುವ ಮಲೆನಾಡಿನ ತೀರ್ಥಹಳ್ಳಿ ಪ್ರಾಂತ್ಯದ ಸಮಾಜವು ಒಟ್ಟು ಭಾರತದ ಸಮಾಜದಲ್ಲಿ ಕಂಡುಬರುವ ಶ್ರೇಣೀಕೃತ ಸಮಾಜ ವ್ಯವಸ್ಥೆಗಿಂತ ಭಿನ್ನವಾದುದಲ್ಲ. ಇಲ್ಲಿನ ಜನಸಮುದಾಯದಲ್ಲಿ ಮಿತ ಸಂಖ್ಯೆಯಲ್ಲಿರುವ ಬ್ರಾಹ್ಮಣರು, ಬೆರಳೆಣಿಕೆಯ ಲಿಂಗಾಯಿತರು, ಬಹುಸಂಖ್ಯಾತರಾದ ಒಕ್ಕಲಿಗರು, ಹಳೆ ಪೈಕದವರು, ಅಗಸರು, ಬೋವಿಯರು, ಹಂಬಳಿಗರು, ಹಸಲರು, ಬೇಲರು, ಹರಿಜನರು, ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಶೆಟ್ಟರು, ವ್ಯಾಪಾರಕ್ಕೆ ಬಂದ ಕೊಂಕಣಿಗರು, ಮುಸಲ್ಮಾನರು, ಉದ್ಯೋಗ ನಿಮಿತ್ತ ಬಂದ ಕ್ರೈಸ್ತರು ಇತ್ಯಾದಿ ಜನ ಸಮುದಾಯವನ್ನು ಕಾಣಬಹುದು.

ಒಂದು ಶತಮಾನದ ಹಿಂದಿನಿಂದ ಗಮನಿಸಿಕೊಂಡು ಬಂದರೆ ಬ್ರಾಹ್ಮಣರ ಸಂಖ್ಯೆ ಕಡಿಮೆ ಇದ್ದರೂ ತಮ್ಮ ಪೌರೋಹಿತ್ಯ ಕಾರ್ಯದಿಂದ ಬಹುಸಮುದಾಯಗಳನ್ನೆಲ್ಲಾ ನಿಯಂತ್ರಿಸಬಲ್ಲವರಾಗಿದ್ದರು. ಇವರಲ್ಲಿ ಪೂಜೆಗೆಂದು ದಕ್ಷಿಣ ಕನ್ನಡದಿಂದ ಬಂದವರೇ ಹೆಚ್ಚು. "ದಕ್ಷಿಣ ಕನ್ನಡದ ಕೋಟೇಶ್ವರದಿಂದ ಗುರುವಿನ ಅವಕೃಪೆಗೆ ಪಾತ್ರರಾಗಿ ಬಹಿಷ್ಕೃತರಾಗಿ ಘಟ್ಟದ ಮೇಲೆ ಬಂದ ಬ್ರಾಹ್ಮಣ ಸಮುದಾಯನ್ನು ಪಂಚಮಗ್ರಾಮದವರು"[೨] ಎನ್ನುತ್ತಾರೆ. ಬೆಟ್ಟ–ಗುಡ್ಡಗಳಲ್ಲಿ ಜಮೀನು ಮಾಡಿಕೊಂಡಿರುವ ಕಷ್ಟ ಜೀವಿಗಳು. ಇವರಿಗೆ ಹಿಂದೆ ಸ್ಥಳೀಯ ಬ್ರಾಹ್ಮಣರ ಮನೆಯಲ್ಲಿ ಪಂಕ್ತಿ ಊಟದಲ್ಲಿ ಸೇರಿಸುತ್ತಿರಲಿಲ್ಲ. ಇತ್ತೀಚಿಗೆ

ಭೇದ-ಭಾವ ಅಳಿದು ಸಂಬಂಧಗಳು ನಡೆಯುತ್ತವೆ. ಹಾಗೆ "ಮಾಲೇರು ಎಂದು ಒಂದು ಗುಂಪಿದೆ ಇವರು ವಿಧವೆಯಿಂದಲೊ ಅಥವಾ ಮದುವೆಯಾಗದ ಹೆಣ್ಣಿನಿಂದಲೊ ಜನಿಸಿದವರಾಗಿದ್ದರು, ಜಾತಿಯಿಂದ ಹೊರ ಹಾಕಲ್ಪಟ್ಟ ವಂಶದವರು. ಇವರು ಬ್ರಾಹ್ಮಣರ ಅಡಿಗೆ ಮನೆಬಿಟ್ಟು ಉಳಿದೆಲ್ಲಾ ಕಡೆ ಓಡಾಡಬಹುದಾಗಿತ್ತು".[೩]

ಈ ಪ್ರಾಂತ್ಯದ ಬಹುಸಂಖ್ಯಾತರಾದ ಒಕ್ಕಲಿಗರು ಒಂದೊಮ್ಮೆ ಜೈನರಾಗಿದ್ದು, ನಂತರ ವೈಷ್ಣವ ಧರ್ಮ ಸ್ವೀಕರಿಸಿದ ನಾಮಧಾರಿ ಒಕ್ಕಲಿಗರು. ಇವರಲ್ಲಿ ಕೆಲವರು ಜಮೀನ್ದಾರರಾಗಿದ್ದರೆ ಬಹುಸಂಖ್ಯಾತರು ಗೇಣಿದಾರರಾಗಿದ್ದರು. ಇವರಲ್ಲಿಯೂ ಜಾತಿಯಿಂದ ಹೊರಗಿಟ್ಟ 'ಮೂಡಮನೆ'ಯವರು ಎಂದು ಕರೆಯಲ್ಪಡುವ (ವಿಧವೆಯಿಂದ ಜನಿಸಿದ ವಂಶದವರು) ಇದ್ದರು. ಇವರಿಗೂ ಇತರ ಒಕ್ಕಲಿಗರ ಮನೆಯ ಅಡಿಗೆ ಮನೆ ಪ್ರವೇಶವಿರಲಿಲ್ಲ. ಮದುವೆ ಸಂಬಂಧಗಳು ಅವರೊಡನೆ ನಡೆಯುತ್ತಿರಲಿಲ್ಲ. ಪ್ರತಿ ಊರಲ್ಲೂ ಊರಿನ ಮುಖಂಡ ಆರ್ಥಿಕವಾಗಿ ಪ್ರಬಲನಾದವನು ಆಗಿರುತ್ತಿದ್ದ. ಈ ಗೌಡಿಕೆ, ಪಟೇಲಿಕೆ ವಂಶಪಾರಂಪರ್ಯವೂ ಆಗಿತ್ತು.

ಹಳೇ ಪೈಕದವರು ಈ ಪ್ರಾಂತ್ಯಕ್ಕೆ ಪೂರ್ವಿಕರಿರಬಹುದು. ಇವರೂ ಕೂಡ ಒಕ್ಕಲಿಗರಂತೆ ವಿಷ್ಣುಭಕ್ತರು. ಬಗನಿ ಮರದಿಂದ ಕಳ್ಳು ಇಳಿಸಿ ಮಾಡುವುದು ಮುಖ್ಯ ಕಾಯಕ. ಸ್ವಂತ ಜಮೀನು ಹೊಂದಲು ಒಕ್ಕಲಿಗ ಸಮಾಜದಿಂದ ನಿರಾಕರಣೆಗೆ ಒಳಗಾಗಿದ್ದರು. ಅಗಸರು ಹಬ್ಬ ಹರಿದಿನಗಳಲ್ಲಿ, ಸೂತಕದ ಸಂದರ್ಭಗಳಲ್ಲಿ ಊರವರ ಬಟ್ಟೆ ಶುಚಿಗೊಳಿಸಿ ಆಯಾ ಪಡೆಯುವವರಾಗಿದ್ದರು. ದೇವರ ಉತ್ಸವ, ಮದುವೆ ಸಂದರ್ಭದಲ್ಲಿ ಪಲ್ಲಕ್ಕಿ ಹೊರುವವರು, ದೋಣಿ ನಡೆಸುವವರು ಬೋವಿಗಳಾಗಿದ್ದರು. ಹರಿಜನರು ಊರ ಅಂಚಿನ ತಮ್ಮದೇ ಕೇರಿಯಲ್ಲಿ ವಾಸಿಸುತ್ತಾ ಒಡೆಯರ ಮನೆಗಳಲ್ಲಿ ಜೀತದಾಳುಗಳಾಗಿ ಬದುಕುತ್ತಿದ್ದರು. ಕೃಷಿಗೆ ಮತ್ತು ದೈನಂದಿನ ಬದುಕಿಗೆ ಪೂರಕವಾದ ಉಪಕಸುಬುಗಳನ್ನು ಮಾಡುವ ಕುಂಬಾರರು, ಕಮ್ಮಾರರು, ಹಂಬಳಿಗರು, ಹಸಲರು ಮುಂತಾದ ಜಾತಿ ಸಮುದಾಯಗಳಿದ್ದವು. ಹಾಗೆ ಕೊಂಕಣಸ್ಥರು ಅಲ್ಲಲ್ಲಿನ ಕಿರುಪೇಟೆಗಳಲ್ಲಿ ಸ್ಥಿರ ವ್ಯಾಪಾರಿಗಳಾದರೆ, ಮುಸಲ್ಮಾನರು ಹೇರುಕತ್ತೆ-ಕುದುರೆಗಳ ಮೂಲಕ ಸಂಚಾರಿ ವ್ಯಾಪಾರಸ್ಥರಾಗಿದ್ದರು. ಇಂತಹ ಮಲೆನಾಡ ಪರಿಸರದಲ್ಲಿ ಈ ಎಲ್ಲಾ ಜಾತಿ ಸಮುದಾಯಗಳು ತಮ್ಮದೇ ಆದ ನಂಬಿಕೆ, ಆಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುವವರಾಗಿದ್ದರು. ಇದು ಒಂದು ಶತಮಾನದ ಹಿಂದಿನ ಮಲೆನಾಡ ಸಮಾಜದ ಒಂದು ಸ್ಥೂಲ ಸ್ವರೂಪ ಎನ್ನಬಹುದು.

ಹೀಗೆ ಶ್ರೇಣಿಕೃತ ಸಮಾಜದ, ಜಾತಿ ವ್ಯವಸ್ಥೆಯ ಚೌಕಟ್ಟಿನಲ್ಲಿ ರೂಢಿಗತವಾಗಿ ಪಾಲಿಸಿಕೊಂಡು, ಬೆಳಸಿಕೊಂಡು ಬರುತ್ತಿರುವ ಜಾತಿನಿಷ್ಠ, ಸಂಪ್ರದಾಯನಿಷ್ಠ ಜನ ಜಾತಿ ಸಮುದಾಯಗಳು ಪರಸ್ಪರ ಪೂರಕವಾಗಿ ಬದುಕುತ್ತಿದ್ದರು. ಒಟ್ಟು ಮೇಲುನೋಟಕ್ಕೆ ಮಲೆನಾಡು ಸೌಮ್ಯವಾದ ಬಹುಮುಖಿ ಸಮಾಜವಾಗಿ ತೋರುತ್ತದೆ. ಆದರೆ ಒಳಗೆ ಹಾಗಿಲ್ಲ. ಪುರೋಹಿತಶಾಹಿ, ಜಮೀನ್ದಾರಶಾಹಿ, ಜಾತಿ ತಾರತಮ್ಯಗಳು, ದಲಿತರನ್ನು, ದೀನರನ್ನು, ದುರ್ಬಲರನ್ನು ತಳಸಮುದಾಯವನ್ನು, ದರ್ಪ-ದೌರ್ಜನ್ಯ, ಅಮಾನವಿಯತೆಯಿಂದ ನಡೆಸಿಕೊಂಡಿವೆ. ಇಂತಹ ಶೋಷಿತ ಸಮುದಾಯಗಳು ಸಮೂಹ ಮಟ್ಟದಲ್ಲೋ,

ಸಂಘಟನೆಯ ಮಟ್ಟದಲ್ಲೂ ವಿರೋಧ ವ್ಯಕ್ತಪಡಿಸದಿದ್ದರೂ ವೈಯಕ್ತಿಕ ಮಟ್ಟದಲ್ಲಿ, ತಮ್ಮದೇ ಆದ ರೀತಿಯಲ್ಲಿ ವಿರೋಧವನ್ನು ವ್ಯಕ್ತಪಡಿಸುತ್ತಲೇ ಬಂದಿವೆ. ಈ ವಿರೋಧದ ನೆಲೆಗಳು ಆಧುನಿಕತೆಯ ಪ್ರವೇಶದಿಂದ ಆಗಿರಬಹುದು ಅಥವಾ ಅನಿವಾರ್ಯ ಸಂದರ್ಭದಲ್ಲಿ ತನ್ನೊಳಗೇ ಹುಟ್ಟಿಕೊಂಡಿದ್ದಿರಬಹುದು.

ಮಲೆನಾಡ ಪರಿಸರದಲ್ಲಿ ನಡೆಯುತ್ತಿದ್ದ ಜಾತೀಯತೆ, ಅಸ್ಪೃಶ್ಯತೆಯ ಆಚರಣೆಗಳು ಮತ್ತು ವರ್ಗ ಸಂಘರ್ಷಗಳನ್ನು ಈ ನೆಲದ ಪರಿಸರದಲ್ಲಿ ಹುಟ್ಟಿ ಬಂದ ಲೇಖಕರು ತಮ್ಮ ಕೃತಿಗಳಲ್ಲಿ ವಿಶ್ಲೇಷಿಸಿದ್ದಾರೆ. ಪ್ರತಿಕ್ರಿಯಿಸಿದ್ದಾರೆ ಮತ್ತು ದಾಖಲಿಸಿದ್ದಾರೆ. ಕುವೆಂಪು, ಬಿಳುಮನೆ ದಾಮದಾಸ್, ಅನಂತಮೂರ್ತಿ, ಕಡಿದಾಳು ಮಂಜಪ್ಪ ಮತ್ತು ಇತರ ಕೆಲವು ಲೇಖಕರ ಕಥಾ ಸಾಹಿತ್ಯವನ್ನು ಆಧರಿಸಿ ವಿಶ್ಲೇಷಣೆ ಮಾಡಲಾಗಿದೆ.

ಅಸ್ಪೃಶ್ಯತೆ, ಜಾತಿ, ವರ್ಗಸಂಘರ್ಷ : ಕುವೆಂಪು ಕಥನ

ಕುವೆಂಪು ಕಥನ ಪುರೋಹಿತಶಾಹಿಯ ನಯ ವಂಚನೆಯನ್ನು, ಜಮೀನ್ದಾರಿಶಾಹಿಯ ಕ್ರೌರ್ಯವನ್ನು ಮನವರಿಕೆಯ ಹಿನ್ನೆಲೆಯಲ್ಲಿ ಸಮಚಿತ್ತವಾಗಿ ಟೀಕಿಸುತ್ತಲೇ ಬಂದಿದ್ದಾರೆ. ಮಾನವನ ಬದುಕು ಹಸನಾಗಬೇಕೆಂಬ ಆಶಯದೊಂದಿಗೆ ಬರೆಯುವ, ಇಡಿಯಾಗಿ ಬದುಕನ್ನು ಗ್ರಹಿಸುವ ಮಹಾಲೇಖಕ ಸಾಮಾಜಿಕ ಅಸಮಾನತೆಯ ನೆಲೆಗಳನ್ನು, ಸೂಕ್ಷ್ಮ ಸಂಬಂಧಗಳನ್ನು ತನ್ನ ಕೃತಿಗಳ ಮೂಲಕ ಶೋಧಿಸುತ್ತಿರುತ್ತಾನೆ. ಈ ಹಿನ್ನೆಲೆಯಲ್ಲಿ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡತಿ' ಮಲೆನಾಡ ಜೀವನದ ಮಹಾಕೋಶದಂತಿವೆ.

ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಜಾತಿಯೂ ತನಗಿಂತ ಮೇಲು ಜಾತಿಯ ಸಾಂಸ್ಕೃತಿಕ ಜಗತ್ತು ಶ್ರೇಷ್ಠವೆಂದೂ ತನ್ನ ಮತ್ತು ತನಗಿಂತ ಕೆಳಜಾತಿಯ ಸಾಂಸ್ಕೃತಿಯ ಜಗತ್ತು ಕೀಳೆಂದು ಭಾವಿಸುತ್ತದೆ. ಹಾಗೆಯೇ ಆ ಮೇಲಿನದೆಂದು ಶ್ರೇಷ್ಠವೆಂದು ಭಾವಿಸಿದ್ದನ್ನು ಅನುಕರಿಸುತ್ತದೆ. "ಇದು ಮೇಲ್ಮುಖ ಚಲನೆ, ಸಂಸ್ಕೃತೀಕರಣ, ಶ್ರೇಣೀಕರಣಗೊಂಡ ಸಮಾಜದಲ್ಲಿ ಕೆಳಗಿನ ಮೆಟ್ಟಿನಲ್ಲಿರುವವರು ಮೇಲಿನ ಮೆಟ್ಟಿಲನ್ನೇರುವುದಕ್ಕೆ ನಡೆಸುವ ಪ್ರಯತ್ನಗಳೇ ಸಂಸ್ಕೃತೀಕರಣ"[೪] ಎನ್ನಲಾಗಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಶಂಕರಪ್ಪ ಹೆಗಡೆ ಕಲ್ಲೂರು ಬ್ರಾಹ್ಮಣರ ನಡವಳಿಕೆಯನ್ನು ಅನುಸರಿಸುತ್ತಾನೆ. ತನ್ನ ಈ ನಾಗರೀಕ ನಡವಳಿಕೆ ನೋಡಿ ತನ್ನ ದಾಯಾದಿಗಳಿಗೆ ಅಸೂಯೆ ಎಂದು ಆತ ಭಾವಿಸುವಲ್ಲಿ ಆತನಿಗೆ ಮೇಲರಿಮೆ ಅಂಟಿಕೊಂಡು ಬಿಟ್ಟಿದೆ. ಕಲ್ಲೂರು ದೇವಸ್ಥಾನಕ್ಕೆ ಹೊರಟ ಬೆಟ್ಟಳ್ಳಿ ಮನೆಯವರು ಜಾತಿಕೆಟ್ಟವರಾಗಿ, ಮಡಿಮೈಲಿಗೆ ಕಳೆದುಕೊಂಡವರಾಗಿ ಶಂಕರಪ್ಪ ಹೆಗಡೆಗೆ ಕಾಣಿಸುತ್ತಾರೆ. ಪಾದ್ರಿಯ ಮೂಲಕ ನವನಾಗರಿಕತೆಯ ವಸ್ತುಗಳು ಬೆಟ್ಟಳ್ಳಿ ಮನೆಗೆ ಬಂದುದರಿಂದ, ಬಚ್ಚನಂತ ಅಸ್ಪೃಶ್ಯ ಗಾಡಿ ನಡೆಸುತ್ತಿರುವುದರಿಂದ ಜಾತಿಕೆಟ್ಟವರಾಗಿ, ಮಡಿಮೈಲಿಗೆ ಎಲ್ಲ ಬಿಟ್ಟವರಾಗಿ ಕಂಡುಬಂದ ಶಂಕರಪ್ಪ ಹೆಗಡೆಗೆ ಆ ಗಾಡಿಯನ್ನು ತಾನಾಗಲಿ, ತನ್ನ ಹೆಂಡತಿ-ಮಗನನ್ನಾಗಲಿ ಏರಲು ಅವಕಾಶ ಕೊಡದೆ ಹಾರಿಕೆಯ ಉತ್ತರ ನೀಡಿ ತಪ್ಪಿಸಿಕೊಳ್ಳುವಲ್ಲಿ ಅಂಟಿಸಿಕೊಂಡ ಬ್ರಾಹ್ಮಣ್ಯದ ಮಡಿಭಾವ ಕೆಲಸ ಮಾಡಿರುತ್ತದೆ. ಈ ಬಗೆಯ ಶಂಕರಪ್ಪ ಹೆಗಡೆಯ ಭಾವನೆಗಳು ಅವನೊಳಗಿನ ಕೀಳರಿಮೆಯಿಂದಲೇ ತನಗಿಂತ

ಮೇಲುಜಾತಿಯ ಅನುಕರಣೆಗೆ ಮುಂದಾಗುತ್ತಾನೆ.

ಪೊಲೀಸರಿಂದ ತಪ್ಪಿಸಿಕೊಂಡು ಬರುವ ನಾಯಿಗುತ್ತಿ ತಾನು ಹೀನ ಜಾತಿಯಲ್ಲಿ ಹುಟ್ಟಿದ್ದಕ್ಕೆ ಶಪಿಸಿಕೊಳ್ಳುತ್ತಾನೆ. ಮೇಲುಜಾತಿಯಲ್ಲಿ ಹುಟ್ಟಿದ್ದರೆ ಹೀಗಾಗುತ್ತಿತ್ತೆ? ಎಂದು ಗೌಡರ ಜಾತಿಗೆ, ಸೆಟ್ಟರ ಜಾತಿಗೆ, ಬಿರಾಂಬರ ಜಾತಿಗೆ? – ಪ್ರಶ್ನಿಸಿಕೊಳ್ಳುವಾಗ ಆತನ ಮನಸ್ಸು ಈ ಜಾತಿಗಳಲ್ಲಿ ಜನಿಸಿದ್ದರೆ ಈ ಹೀನಸ್ಥಿತಿ ಬರುತ್ತಿರಲಿಲ್ಲವೆಂದೂ ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ ಎಂದು ಚಿಂತಿಸುವಲ್ಲಿ ಸಂಸ್ಕೃತೀಕರಣದ ಭಾವ ಕೆಲಸ ಮಾಡುತ್ತದೆ. ಆದರೆ ಅದೇ ಸಂದರ್ಭದಲ್ಲಿ ಸಾಬರ ಜಾತಿಯಲ್ಲಿ ಕಿಲಸ್ತರ ಜಾತಿಯಲ್ಲಿ ಹುಟ್ಟಿದ್ದರೆ ಎಂಬ ಭಾವ ಮೂಡಿದಾಗ ಹೀಗಳೆದು ನಿರಾಕರಿಸುತ್ತಾನೆ. ನಾಯಿಗುತ್ತಿಯ ಮನಸ್ಸಿನ ಈ ಆಲೋಚನೆಗಳು ಸಾಮಾಜಿಕ ಸ್ಥಾನಮಾನಗಳಿಂದ ದೂರ ಉಳಿದು ಪಡಬಾರದ ಕಷ್ಟಕಾರ್ಪಣ್ಯಗಳನ್ನು ಅನುಭವಿಸುವ ಕಾಲಕ್ಕೆ ಅವನಲ್ಲಿ ಹುಟ್ಟಿಕೊಂಡ ಈ ಬಗೆಯ ಅನಿಸಿಕೆಗಳಿಗೆ ಅಸಹಾಯಕತೆ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವುದೇ ಕಾರಣವೆನಿಸುತ್ತದೆ ಮಾತ್ರವಲ್ಲ ಇಸ್ಲಾಂ ಮತ್ತು ಕ್ರಿಶ್ಚಿಯನ್‌ರ ಬಗೆಗೆ ದಲಿತರಿಗೆ ಕೀಳೆಂಬ ಪ್ರಜ್ಞೆ ಮೂಡಿದುದು ಮೇಲು ಜಾತಿಯವರಿಂದ ಬಂದ ಭಾವನೆಯೇ ಆಗಿದೆ.

ಗಂಡು ಹೆಣ್ಣಿನ ನಡುವೆ ಜಾತಿಯೆಂಬುದು ಸಹಜವಾಗಿ ಮೀರಿರುವಂತದು. ಆದರೆ ಸಾಮಾಜಿಕ ಸಂದರ್ಭದಲ್ಲಿ ಮಾತ್ರ ಜಾತಿ ಮೂಲದ ಸಂವೇದನೆಗಳು ನಿಯಂತ್ರಿಸುತ್ತವೆ. ಇದಕ್ಕೆ ನಾಯಿಗುತ್ತಿ ಕಾವೇರಿಯ ಭೇಟಿಯ ಸಂದರ್ಭದಲ್ಲಿ ಗಮನಿಸಬಹುದು. ತನ್ನ ಮನೆಯ ಹಿಂಭಾಗದಲ್ಲಿ ಕುಳಿತಿರುವ ನಾಯಿಗುತ್ತಿಯನ್ನು "ಯಾವುದೋ ಸ್ಫುರದ್ರೂಪಿಯಾದ ಗಂಡು ಪ್ರಾಣಿಯನ್ನೊ, ಒಂದು ಮನೋಹರವಾದ ಪಕ್ಷಿಯನ್ನೊ ನೋಡುವಂತೆ ನೋಡುತ್ತಾಳೆ. ಅಸ್ಪೃಶ್ಯನಾದ ಹೊಲೆಯ ಮನುಷ್ಯ ಜಾತಿಯವನಾಗಿದ್ದರೂ ತನ್ನ ಜಾತಿಯೂ ಅಲ್ಲದೆ, ತನಗೆ ಸರಿಸಮನಾದ ಜಾತಿಯೂ ಅಲ್ಲದೆ ಅತ್ಯಂತ ಕೊನೆಯ ಕೀಳುಜಾತಿಯವನಾದ್ದರಿಂದ ಹರೆಹರೆಯ ಕೊಂಬಿನ ಚೆಲುವಿನ ಹೋರಿಮಿಗವನ್ನು ಮೆಚ್ಚಿ ನೋಡುವಂತೆ ನೋಡಿದಳು........"[೨] ಎಂಬ ವಿವರಣೆಯಲ್ಲಿ ನಾಯಿಗುತ್ತಿ ಯುವಕನಾದರೂ, ಅವಿವಾಹಿತನಾದರೂ, ಸುಂದರನಾದರೂ ಜಾತಿಯಲ್ಲಿ ಕೀಳಾದ್ದರಿಂದ ಕಾವೇರಿಯಂತ ಹುಡುಗಿಯ ಕಣ್ಣಿಗೆ ಸುಂದರ 'ಪ್ರಾಣಿ'ಯಾಗಿ ಕಾಣುತ್ತಾನೆ. ಅದೇ ವಿವಾಹಿತನಾದ ದೇವಯ್ಯನಲ್ಲಿ ತಾನು 'ಇಟ್ಟುಕೊಂಡ'ವಳಾಗುವುದರಲ್ಲಿ ಹೆಮ್ಮೆ ಇದೆ. ಜಾತಿ ಸಂವೇದನೆ ಕನಿಷ್ಠ ಮತ್ತು ಶ್ರೇಷ್ಠತೆಯ ಭಾವವನ್ನು ತಂದಿದೆ. ಅದೇ ನಾಯಿಗುತ್ತಿ ಅದೇ ಕೆಚ್ಚಿನಿಂದ ಸೆಟ್ಟರ ಹುಡುಗಿಯ ಚೆಲುವನ್ನು ನೋಡುತ್ತಾ ಪ್ರಸನ್ನ ಮುಖಿಯಾಗುವುದರ ಹಿಂದೆ ಕೂಡ ಆಕೆಯ ಚೆಲುವು ಮತ್ತು ಜಾತಿ ಶ್ರೇಷ್ಠತೆಯ ಮನೋಭಾವ ಕೆಲಸ ಮಾಡುತ್ತದೆ.

ಕನ್ನಡ ಜಿಲ್ಲೆಯಿಂದ ಬರಿಗೈಯಲ್ಲಿ ಬಂದ ಕಲ್ಲೂರು ದೇವಸ್ಥಾನದ ಪೂಜಾರಿ ಮಂಜಭಟ್ಟರು ಜನರ ಮೌಢ್ಯ, ದಾರಿದ್ರ್ಯಗಳನ್ನು ಬಂಡವಾಳ ಮಾಡಿಕೊಂಡು ದೊಡ್ಡ ಜಮೀನ್ದಾರರಾದವರು. ತಮ್ಮ ವ್ಯವಹಾರದ ಚಾಣಕ್ಷತನದಿಂದ ಹಲವು ಸಾಲಿಗರನ್ನು ತಮ್ಮ ಬಲೆಯಲ್ಲಿ ಸಿಲುಕಿಸಿಕೊಂಡವರು. ಸಾಲದ ಬಡ್ಡಿ ವಸೂಲಿಗೆ ಉಂಡಾಡಿ ಸಾಬರನ್ನು ನೇಮಿಸಿಕೊಂಡವರು. ಹೀಗೆ ಮಂಜಭಟ್ಟರಂತವರು ಮಲೆನಾಡ ಪರಿಸರದಲ್ಲಿ ಪುರೋಹಿತಶಾಹಿ, ಜಮೀನ್ದಾರಶಾಹಿ ಮತ್ತು ಗೂಂಡಾಶಾಹಿಯಂತಹ ಬಹುಶೋಷಿತ

ವ್ಯಕ್ತಿತ್ವ ಪಡೆದಿದ್ದರು. ಹಳೇಮನೆ ಶಂಕರಪ್ಪ ಹೆಗಡೆಯಂತವರು ಮೌಢ್ಯದಿಂದ ತನ್ನ ಹೆಂಡತಿ ಮಕ್ಕಳು ಕಾಯಿಲೆಗೆ ಮಂಜಭಟ್ಟರಂತಹ ಜೋಯಿಸರನ್ನು ಅವಲಂಬಿಸಿದ್ದರು. ಕ್ರೈಸ್ತ ಧರ್ಮಕ್ಕೆ ಪ್ರಭಾವಿತನಾದ ದೇವಯ್ಯನಂತವರು ಶಂಕರಪ್ಪ ಹೆಗಡೆಯವರಂತವರನ್ನು ಗಮನದಲ್ಲಿಟ್ಟುಕೊಂಡು ಹಿಂದೂ ಧರ್ಮದ ಕಂದಾಚಾರ, ಮೌಢ್ಯಗಳನ್ನು ಉಗ್ರವಾಗಿಯೇ ಟೀಕಿಸುತ್ತಿದ್ದ. ಇಂತಹ ದೇವಯ್ಯನ ಬಗ್ಗೆ ಮಂಜಭಟ್ಟರಿಗೆ ಒಳಗೊಳಗೆ ಅಸಹನೆಯಿತ್ತು. ಆತ ಕೂಡ ಜಮೀನ್ದಾರನಾದ್ದರಿಂದ ಅದು ನೇರವಾಗಿ ವ್ಯಕ್ತವಾಗುತ್ತಿರಲಿಲ್ಲ. ಇಲ್ಲಿಯ ಸಂಘರ್ಷದ ಪರಿ ಬೇರೆ.

ಆ ಅಸಹನೆ ಮತ್ತು ಜಾತೀಯತೆಯ ಮೇಲು ಕೀಳುಗಳು ಸಂಭಾಷಣೆಯ ಸಂದರ್ಭದಲ್ಲೂ ಹೇಗೆ ವ್ಯಕ್ತವಾಗುತ್ತಿತ್ತು ಎಂಬುದನ್ನು ಕಲ್ಲೂರು ದೇವಸ್ಥಾನದ ಸಂದರ್ಭ ಗಮನಿಸಬಹುದು. ಮಂಜಭಟ್ಟರು ದೇವಸ್ಥಾನ ಪ್ರವೇಶಿಸಿದಾಗ ಸುಸಂಸ್ಕೃತನಾದ ಮುಕುಂದಯ್ಯ ಹಿರಿಯರಿಗೆ ಗೌರವ ಸಲ್ಲಿಸುವ ವಾಡಿಕೆಯಂತೆ ಎದ್ದು ನಿಂತು ಕೈಮುಗಿದ. ಸ್ವಲ್ಪ ಉದ್ಧಟನಾದ ದೇವಯ್ಯ ಕುಳಿತಲ್ಲೇ ನಮನ ಹೇಳಿದ. ಪುರೋಹಿತರು ಒಳಗೆ ದೇವಯ್ಯನ ಮೇಲಿದ ಅಸಹನೆಯನ್ನು ಹೊರಗೆಡಹದೆ ನಯವಾದ ಮಾತಲಿ ಮೂದಲಿಸಿದ್ದರು.

"ಏನು ದ್ಯಾವಣ್ಣನ ಸವಾರಿ ದೇವಸ್ಥಾನದವರೆಗೂ ಚಿತ್ತೈಸಿದೆಯಲ್ಲಾ..... ಕಲ್ಲಯ್ಯ ಬಂದಿಲ್ಲೇನೊ ಹುಷಾರಾಗಿದ್ದಾನಪ್ಪೆ?"[೬] ಎಂದರು.

ಈ ಮಾತು ಬೇರೆಯಾರಾದರೂ ಶೂದ್ರ ಸಮುದಾಯದವನು ರೂಢಿಗತವಾಗಿದ್ದಂತೆ ಸಹಜವಾಗಿಯೇ ಸ್ವೀಕರಿಸುತ್ತಿದ್ದ. ಆದರೆ ಆಧುನಿಕವಾದ ವಸ್ತು, ವೇಷದ ಮೂಲಕ ದೇವಯ್ಯನಲ್ಲಿ ಘನತೆ, ಪ್ರತಿಷ್ಠೆ ಮೂಡಿದ್ದವು. 'ದೇವಯ್ಯ' ಎಂಬ ತನ್ನ ಹೆಸರನ್ನು 'ದ್ಯಾವಣ್ಣ' ಎಂದು ಕರೆದದ್ದು, ಅವರ ಹಾಗೆಯೇ ಜಮೀನ್ದಾರನಾದ ತನ್ನ ತಂದೆಯನ್ನು ಕಲ್ಲೇಗೌಡರೆನ್ನದೆ 'ಕಲ್ಲಯ್ಯ' ಎಂದದ್ದು ದೇವಯ್ಯನಿಗೆ ಅಸಮಧಾನ ತಂದಿತು. ಈ ಹಿಂದೆ ಮಂಜಯ್ಯ ಹಾಗೆ ಕರೆದಿಲ್ಲವೆ ಎಂದರೆ ಮಲೆನಾಡ ಪರಿಸರದಲ್ಲಿ ಮೇಲು ವರ್ಗದವರು ಕೆಳವರ್ಗದವರನ್ನು ವಯಸ್ಸಿನಲ್ಲಿ ಎಷ್ಟೇ ಹಿರಿಯರಾದರೂ ಆಬಾಲವೃದ್ಧರಾಗಿ ಎಲ್ಲರೂ ಏಕವಚನ ಸಂಭೋದನೆಯೆ ರೂಢಿಗತವಾಗಿತ್ತು. ಆದರೆ ದೇವಯ್ಯ ಬದಲಾಗಿದ್ದ ತಾನು ಆಧುನಿಕನಾದವನು ಎಂದು ಭಾವಿಸಿಕೊಂಡಿರುವ ಆತ ಸಮಾಜದಿಂದ ಅಂತಹ ಗೌರವವನ್ನು ನಿರೀಕ್ಷೆ ಮಾಡುತ್ತಾನೆ. ಆದ್ದರಿಂದ ದೇವಯ್ಯನಲ್ಲಿ ಬೇರೆ ರೀತಿಯಲ್ಲಿ ಅಸಮಧಾನ ಸ್ಫೋಟಗೊಳ್ಳುತ್ತದೆ.

"ಯಾರು? ಹಳೇ ಪೈಕದ ಕಲ್ಲನಾ? ಅಂವ ಬಗನಿಕಳ್ಳು ಇಳಿಸಾಕೆ ಕಾಡಿಗೆ ಹೋಗಿರಬೇಕು"[೭]ಎಂದು ಆತ್ಮಗೌರವದ ಹಿನ್ನಲೆಯಲ್ಲಿ ವ್ಯಂಗ್ಯವಾದ ಮಾತಿನ ಮೂಲಕ ವಿರೋಧ ವ್ಯಕ್ತಪಡಿಸುತ್ತಾನೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಮಂಜಭಟ್ಟರು ಯಾವ ರೀತಿ ತಾರತಮ್ಯದಿಂದ ದೇವಯ್ಯನನ್ನು (ದ್ಯಾವಣ್ಣ), ಕಲ್ಲೇಗೌಡರನ್ನು (ಕಲ್ಲಯ್ಯ) ಸಂಬೋಧಿಸಿದರೂ ಆ ಬಗ್ಗೆ ದೇವಯ್ಯ ಯಾವ ಆತ್ಮ ಗೌರವದಿಂದ ವಿರೋಧಿಸಿದನೊ ಅದೇ ಹೊತ್ತಿಗೆ ಆ ವಿರೋಧದ ಮಾತಿನಲ್ಲಿ ತನಗಿಂತ ಕೆಳಜಾತಿಯ ಕಲ್ಲನಾಯ್ಕರನ್ನು 'ಕಲ್ಲಯ್ಯ' ಎಂಬ ಸಂಬೋಧನೆಯಲ್ಲಿ ಅದೇ ರೀತಿ ತಾನೂ ಮಾಡುತ್ತಿದ್ದೇನೆ ಎಂಬ ಸೂಕ್ಷ್ಮ ವಿವೇಚನೆ ದೇವಯ್ಯನಿಗೆ ಇರದಿರುವುದೇ ವಿಪರ್ಯಾಸ. ಬಾಹ್ಯದಲ್ಲಿ ಕ್ರೈಸ್ತ ಪಾದ್ರಿಯ

ಉಪದೇಶದಿಂದ ಸಾಮಾಜಿಕ ಪ್ರತಿಷ್ಠೆ ಬೆಳಸಿಕೊಂಡಿದ್ದ ದೇವಯ್ಯ ತನಗಿಂತ ಮೇಲ್ಜಾತಿಯ ಶೋಷಣೆಯನ್ನು ವಿರೋಧಿಸುತ್ತಾನೆ. ಆದರೆ ತನಗಿಂತ ಕೆಳಜಾತಿಯ ಜನ ಸಮುದಾಯದ ಬಗ್ಗೆ ಇದ್ದ ಧೋರಣೆಯಲ್ಲಿ ಬದಲಾಗದ ದ್ವಂದ್ವ ವ್ಯಕ್ತಿತ್ವವನ್ನು ಕಾಣಬಹುದು. ದೇವಯ್ಯನ ಅನಿರೀಕ್ಷಿತ ಪ್ರತಿಕ್ರಿಯೆಗೆ ಮಂಜಭಟ್ಟರು ಬೆಚ್ಚಿಬಿದ್ದರು. ಆ ಕಾರಣ ಅವರು ಕ್ಷಮೆಯಾಚಿಸುವುದು ಸ್ಥಿತ್ಯಂತರದ ಕುರುಹು.

ಶ್ರೇಣಿಕೃತ ಭಾರತೀಯ ಜಾತಿ ಪದ್ಧತಿಯ ಸೂಕ್ಷ್ಮಗಳನ್ನು ಈ ಘಟನೆ ಅರ್ಥಪೂರ್ಣವಾಗಿ ನಿವೇದಿಸುತ್ತದೆ. ಬಹಿರ್ ಘಟನೆಯಲ್ಲಿ ಇಂತಹ ಸಂಘರ್ಷಗಳು ಢಾಳಾಗಿ ಕಾಣಸದಿದ್ದರೂ ಕುವೆಂಪು ಕೃತಿಯಲ್ಲಿ ಮಾನಸಿಕ ಸಂಘರ್ಷವಾಗಿ ಒಳತೋಟಿಯಲ್ಲಿ ವ್ಯಕ್ತಿಗತವಾದ ಆಲೋಚನೆಗಳು ಸಾಕಷ್ಟು ದೊರೆಯುತ್ತವೆ. ಏಕವಚನ, ಬಹುವಚನದ ಸಂಬೋಧನೆಯ ವ್ಯಾಕರಣದ ನಿಯಮಗಳು ಸಾಮಾಜಿಕ ಮನೋಧರ್ಮದ ಹಿನ್ನಲೆಯಲ್ಲಿ ಪಲ್ಲಟಗೊಳ್ಳುತ್ತವೆ. ಈ ದ್ವಂದ್ವ ವ್ಯಕ್ತಿತ್ವವು ದೇವಯ್ಯನಲ್ಲಿ ಮಾತ್ರವಲ್ಲ. ಅದು ಮುಕುಂದಯ್ಯನಲ್ಲೂ ಇದೆ ಹೂವಯ್ಯನಲ್ಲೂ ಇದೆ. ಒಟ್ಟು ಮಲೆನಾಡ ಪರಿಸರದಲ್ಲಿ ಇಂದಿಗೂ ಏಕವಚನ, ಬಹುವಚನದ ಸಂಬೋಧನೆಗಳು "ಧಾರ್ಮಿಕ ಸ್ಥಾನಮಾನ, ಆಸ್ತಿ ಅಧಿಕಾರ, ಸಭ್ಯತೆ ಹಾಗೂ ವಯಸ್ಸುಗಳ ಆಧಾರದಿಂದ ವ್ಯಕ್ತಿಗೆ ಗೌರವ ಕೊಡುವ ಸಾಮಾಜಿಕ ಆಲೋಚನ ವಿಧಾನವು"[೨೮] ಸಹಜವಾಗಿಯೇ ಬಳಕೆಯಲ್ಲಿದೆ. ಆದ್ದರಿಂದ ಮಂಜಯ್ಯನಾಗಲಿ, ಗೌಡ-ಹೆಗ್ಗಡೆಗಳಾಗಲಿ ಬಹುವಚನ ಸಂಬೋಧನೆಗೆ ಒಳಗಾಗುವುದು ಅವರ ಧಾರ್ಮಿಕ ಆರ್ಥಿಕ ಅಂತಸ್ತುಗಳನ್ನು ಒಳಗೊಂಡಿದೆ. ಸಭ್ಯನಡವಳಿಕೆಯ ಕರ್ಮಿನ್‌ಸಾಬರು, ಕಣ್ಣಾಪಂಡಿತರು ಗೌರವ ಸಂಬೋಧನೆಗೆ ಪಾತ್ರರಾಗುತ್ತಾರೆ. ಆದರೆ ದೊಡ್ಡ ಬೀರನಂಥವನಿಗಾಗಲಿ, ಕುಳವಾಡಿಸಣ್ಣನಂತವರಿಗಾಗಿಲಿ ಸಾಮಾಜಿಕ ಸ್ಥಾನಮಾನವಾಗಲಿ, ಆರ್ಥಿಕ ಅಂತಸ್ತುಗಳಾಗಲಿ ಇಲ್ಲದ ಕಾರಣ ಅವರಿಗಿಂತ ಮೇಲುಜಾತಿಯ ಆಬಾಲವೃದ್ಧರಾಗಿ ಎಲ್ಲರೂ ಏಕವಚನದಲ್ಲಿ ಸಂಬೋಧಿಸಲ್ಪಡುತ್ತಾರೆ. ಇದು ಸಹಜವಾಗಿ ಒಪ್ಪಿತನೆಲೆಯಲ್ಲಿಯೇ ನಡೆಯುತ್ತದೆ.

ಹೀಗೆ ಜಾತಿ ನಿಷ್ಠ ಸಮಾಜದೊಳಗೆ ವ್ಯಕ್ತಿಯ ಘನತೆ, ಗೌರವ, ಪ್ರತಿಷ್ಠೆ ಸ್ಥಾನಮಾನಗಳು ನಿರ್ಧಾರವಾಗುವುದು. ಜಾತಿ ಕಾರಣದ ಜೊತೆ ಇದರ ಹಿಂದೆ ಆರ್ಥಿಕ ಸ್ಥಿತಿಯೂ ಕೂಡ ನಿರ್ಧರಿಸುವ ಸಂಗತಿಯೆಂಬುದನ್ನು ಹೂವಳ್ಳಿ ವೆಂಕಟಪ್ಪನಾಯಕನ ಹಿನ್ನೆಲೆಯಲ್ಲಿ ಗಮನಿಸಬಹುದು. ಸ್ವಂತ ಜಮೀನುದಾರನಾಗಿದ್ದ ಹೂವಳ್ಳಿ ವೆಂಕಟಪ್ಪನಾಯಕ ಮಂಜಯ್ಯನಲ್ಲಿ ಸಾಲ ಮಾಡಿ ಅವರ ಒಕ್ಕಲು ಸ್ಥಾನಕ್ಕೆ ಇಳಿದಿದ್ದ. ದಂಡನಾಯಕ ವಂಶದ ಈತನ ಆರ್ಥಿಕ ಸ್ಥಿತಿ ಹಂತ ಹಂತವಾಗಿ ಕುಸಿಯುತ್ತಿರುವಂತೆ ಮಂಜಭಟ್ಟರ ಸಂಬೋಧನೆಯಲ್ಲೂ ಆ ಕುಸಿತ ಕಂಡುಬರುತ್ತದೆ. ವೆಂಕಟಪ್ಪನಾಯಕ ಎಂಬುದು ವೆಂಕಟಪ್ಪ ಆಗಿ, 'ಎಂಕ್ಟ' ಎಂಬ ಹಂತ ತಲುಪಿತ್ತು. ಏಕವಚನದ ಸಂಬೋಧನೆ ಜಾತಿಕಾರಣವಷ್ಟೇ ಅಲ್ಲ ಆರ್ಥಿಕ ಸ್ಥಿತಿಯೂ ಕಾರಣವಾಗಿತ್ತು. ಸಾಲ ಪಡೆಯುವುದು ಮುಖ್ಯವಾದ ವೆಂಕಟಪ್ಪನಾಯಕನಿಗೆ ಯಾವ ಆತ್ಮ ಗೌರವವು ಮುಖ್ಯವಾಗಿರಲಿಲ್ಲ. ಆದರೆ ಇಂತಹವರ ಪ್ರತಿಭಟನೆ ಬೇರೆ ರೀತಿಯದಾಗಿರುತ್ತದೆ. ಆತನು ತನ್ನ ಜಮೀನನ್ನು ಒತ್ತೆ ಇಟ್ಟು ಸಾಲ ತೆಗೆದದ್ದು ಕೇವಲ ಮಂಜಭಟ್ಟರಿಂದ ಮಾತ್ರವಲ್ಲ, ಹಳೆಮನೆ ಸುಬ್ಬಣ್ಣ ಹೆಗಡೆ, ಕೋಣೂರು ರಂಗಪ್ಪಗೌಡರಲ್ಲೂ ಪಡೆದಿದ್ದ. ಇಲ್ಲಿಯ ಯಾವೊಬ್ಬ ಸಾಹುಕಾರರೂ ಕೂಡ ವೆಂಕಟಪ್ಪನ ಜಮೀನನ್ನು ಸುಲಭವಾಗಿ ತನ್ನದಾಗಿಸಿ ಮಾಡಿಕೊಳುವ ಹಾಗಿರಲಿಲ್ಲ. ಹಾಗಾಗಿ

ಜಾತಿ ಸಂಘರ್ಷದ ಜೊತೆ ಜೊತೆಗೆ ವರ್ಗ ಸಂಘರ್ಷವೂ ಮಿಳಿತವಾಗಿರುವುದು ಗಮನಾರ್ಹ ಸಂಗತಿ.

ವೇದವನ್ನು ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆ ಸ್ವಂತ ಜಮೀನು ಹೊಂದಿರುವುದು ಹಳೇಪೈಕದವರಿಗೆ ನಿಷಿದ್ಧವೆಂದು ಮಲೆನಾಡ ಒಕ್ಕಲಿಗರು ತೀರ್ಮಾನಿಸಿದ್ದರು ಎಂಬ ಮಾತು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ದಾಖಲಾಗಿದೆ. ಅದರಂತೆ ಸೇಸಾನಾಯ್ಕ ತಮ್ಮಂತೆ ಸ್ವಂತ ಜಮೀನು ಹೊಂದಿರುವುದು ಅಸಮಧಾನಕ್ಕೆ ಕಾರಣವಾಗಿತ್ತು. ಅಲ್ಲದೆ ಮದುವೆ ದಿಬ್ಬಣಗಳಲ್ಲಿ ತಮ್ಮಂತೆ ಕುದುರೆ ಸವಾರಿ, ದಂಡಿಗೆಯನ್ನು ಹತ್ತಬಾರದು ಎಂಬ ಒಕ್ಕಲಿಗರ ನಿಷೇಧವನ್ನು ವಿರೋಧಿಸಿ, ತಮ್ಮ ಮಗನ ಮದುವೆ ಹಾಗೇ ಮಾಡುವೆನೆಂದು ಸವಾಲ್ ಹಾಕಿದ್ದ. ಈ ಹಿನ್ನೆಲೆಯಲ್ಲಿ ತನ್ನ ಜಾತಿಯವರನ್ನು ಸಂಘಟಿಸುವ ಪ್ರಯತ್ನ ಮಾಡುತ್ತಿದ್ದ. ಗಮನಿಸಬೇಕಾದ ಸಂಗತಿ ಎಂದರೆ "ಕೆಳವರ್ಗದವರಲ್ಲಿ ತಮಗಿಂತ ಮೇಲಿನ ವರ್ಗದವರಂತಾಗಬೇಕೆಂಬ ಸಂಸ್ಕೃತಿಕರಣದ ಹಂಬಲವು ಒಂದು ಹಕ್ಕು ಪ್ರಜ್ಞೆಯ ರೂಪದಲ್ಲಿ ಒಡ ಮೂಡುತ್ತಿರುವುದು. ಮೇಲೆ ಏರುವೆನೆಂಬ ಕೆಚ್ಚು, ಏರಬೇಡ ಎಂದು ತಡೆಯವೆ ಹಠ, ಎರಡೂ ಸೇರಿ ನಮ್ಮ ಸಾಮಾಜಿಕ ಚರಿತ್ರೆಯಲ್ಲಿ ಸೃಷ್ಟಿಸಿರುವ ಸಂಘರ್ಷಗಳು ತುಂಬಾ ಕುತೂಹಲಕಾರಿಯಾಗಿವೆ". ಇಂತಹ ಸಂಘರ್ಷದ ಸಂದರ್ಭಗಳೆಲ್ಲೆಲ್ಲಾ ಪ್ರಭುತ್ವ ನ್ಯಾಯಪಕ್ಷಪಾತಕ್ಕಿಂತ ಬಲಪಕ್ಷಪಾತವಾಗಿರುವುದೇ ಹೆಚ್ಚು. ಈ ವಿಚಾರ ಸರ್ಕಾರದವರೆಗೂ ಹೋಗಿ ಒಕ್ಕಲಿಗರ ಪರವಾಗಿ ತೀರ್ಪು ನೀಡುತ್ತದೆ ಎಂಬುದನ್ನು ಕಾದಂಬರಿ ಹೇಳುತ್ತದೆ.

ಇದನ್ನು ಗಮನಿಸಿದಾಗ ವರ್ಗ ಸಂಘರ್ಷ ಎಂಬುದು ಕೇವಲ ಬ್ರಾಹ್ಮಣ–ಶೂದ್ರರ ಸಂಘರ್ಷ ಮಾತ್ರವಲ್ಲ. ಜಾತಿ ಸಂಘರ್ಷಗಳನ್ನು 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡತಿ' ಕೃತಿಗಳ ಸೂಕ್ಷ್ಮ ವಿವರಗಳಲ್ಲಿ ತೆರದಿಟ್ಟಿವೆ. ಹಳೇ ಪೈಕದವರು ಒಕ್ಕಲಿಗರನ್ನು ಧಿಕ್ಕರಿಸಿ ಕುದುರೆ ಮೇಲೆ ತಮ್ಮ ಮದುವಣಿಗನ ಮೆರವಣಿಗೆಯನ್ನು ಮಾಡಬೇಕೆಂದು ಹವಣಿಸುತ್ತಾರೆ. ಹಾಗೆಯೇ ತಾವು ವಾಸಿಸುವ ಗುಡಿಸಲುಗಳನ್ನು ಒಕ್ಕಲಿಗರಂತೆ 'ಮನೆ'ಯೆಂದು ಕರೆದುಕೊಳ್ಳಲು ಪ್ರಾರಂಭಿಸಿ, ಇತರರು ಹಾಗೆ ಕರೆಯಬೇಕೆಂದು ಆಗ್ರಹಿಸುತ್ತಾರೆ. ಈ ಹಿನ್ನೆಲೆಯಲ್ಲಿ ಎದುರಾಗುವ ಸಂಘರ್ಷವನ್ನು ಎದುರಿಸಲು ಸನ್ನದ್ಧರಾಗುವ ಸಂಕಲ್ಪಗಳು ನಡೆಯುತ್ತವೆ. ಕಾನೂರು ಹೆಗ್ಗಡತಿಯಲ್ಲಿ ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದ ಬೈರ ಕದ್ದು ಹೆಂಡ ಇಳಿಸುವುದನ್ನು ಪ್ರಾರಂಭಿಸಿ ತನ್ನ ಕುಲಕಸುಬನ್ನು ಮೀರಲು ಹವಣಿಸುತ್ತಾನೆ. ಹಾಗೆ ತನಗಿಂತ ಮೇಲು ಜಾತಿಯವರ ಕಸುಬನ್ನು ಕಲಿಯುವುದರ ಮೂಲಕ ಸಾಮಾಜಿಕ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು, ತಮ್ಮ ಕೀಳರಿಮೆಯನ್ನು ಮೀರಲು ಪ್ರಯತ್ನಿಸುವುದನ್ನು ಕಾಣಬಹುದು.

ಅಂದರೆ ಜಾತಿ, ಮತ, ಧರ್ಮಗಳ ಆಚರಣೆ ಭಾರತದಲ್ಲಿ ಮುಚ್ಚುಮರೆಯಿಂದೇನೂ ನಡೆಯುವುದಿಲ್ಲ. ಅವು ಎಲ್ಲ ಜಾತಿ, ಧರ್ಮ, ಮತಗಳವರಿಗೂ ತಮ್ಮ ಸ್ಥಾನಮಾನಗಳು ತಿಳಿದಿವೆ. ಇದು ವೈಯಕ್ತಿಕ ನೆಲೆಯಲ್ಲಿ ಹೇಗೋ ಹಾಗೆ ಸಾಮೂಹಿಕ ನೆಲೆಯಲ್ಲೂ ಆಚರಣೆಗೊಳ್ಳುವುದು ಸಾಮಾನ್ಯ ಸಂಗತಿಯೇ ಆಗಿದೆ. ಆದರೆ ಈ ಬಗೆಯ ಅಸಮಾನತೆಗಳನ್ನು ಒಪ್ಪಿಯೂ ಒಳಗೊಳಗೆ ಈ ತಾರತಮ್ಯ ನೀತಿಯ ಬಗೆಗೆ ಅಸಮಧಾನವನ್ನು, ಪ್ರತಿಭಟನೆಯನ್ನು ಕಾಣುತ್ತೇವೆ. ಅಮಾನವೀಯ ಕ್ರೌರ್ಯದ ಮುಖವನ್ನು ಕಾದಂಬರಿ ಅನಾವರಣಗೊಳಿಸುತ್ತದೆ.

ಪಾದ್ರಿ ಜೀವರತ್ನಯ್ಯ ಬೆಟ್ಟಳ್ಳಿ ಮನೆಯಲ್ಲಿ ಊಟೋಪಾಚಾರದ ಸಂದರ್ಭದಲ್ಲಿ ಪಂಕ್ತಿ ತಾರತಮ್ಯಕ್ಕೆ ಒಳಗಾಗುತ್ತಾನೆ. ಅಂತಹ ಸಂದರ್ಭವನ್ನು ಎದುರುಗೊಳ್ಳುವುದು ಅವನಿಗೆ ಸಹಜವಾಗಿತ್ತು ಮತ್ತು ತನ್ನ ಕಾರ್ಯೋದ್ದೇಶ ಮುಖ್ಯವಾಗಿತ್ತು. ಆದರೆ ಸಾಮೂಹಿಕ ಭೋಜನ ಮನೆಯಾದ ಅಂತಕ್ಕಶೆಟ್ಟಿ ಹೋಟೆಲ್ಲು ಮನೆಯಲ್ಲೂ ಸುಬ್ಬಣ್ಣ ಹೆಗಡೆ ಬಂದ ಸಂದರ್ಭದಲ್ಲಿ ಆ ತಾರತಮ್ಯ ನಡೆದದ್ದು ಪಾದ್ರಿಗೆ ಅಸಮಧಾನವನ್ನುಂಟು ಮಾಡಿತ್ತು. ಅಂದರೆ ಸಾರ್ವಜನಿಕ ಸ್ಥಳಗಳಲ್ಲಿ ತಾರತಮ್ಯ ವಿರೋಧಿಸುವ ಸಮಾನತೆಯನ್ನು ಹಕ್ಕಾಗಿ ಬಯಸುವ ಮನಸ್ಥಿತಿ ಮೂಡುತ್ತಿರುವುದು ಆಧುನಿಕತೆಯ ಪ್ರಭಾವವೆನ್ನಬಹುದು.

ಮಲೆನಾಡ ಪರಿಸರದ ಮಕ್ಕಳ ಮನಸ್ಸನ್ನೂ ಜಾತಿ ತಾರತಮ್ಯ ಶ್ರೇಷ್ಠ-ಕನಿಷ್ಠ ಮನೋಭಾವನೆಗಳು ಹೇಗೆ ನೆಲೆಸಿತ್ತು ಎಂಬುದಕ್ಕೆ ಹೂವಳ್ಳಿ ಚಿನ್ನಮ್ಮನ ಮದುವೆ ನಡೆಯಬೇಕಾದ ದಿನದ ಸಂದರ್ಭ ಗಮನಿಸಬಹುದು. 'ವಾಲಗ' ದನಿಗೆ ಮನಸೋತು ಹತ್ತಿರದಿಂದ ಆಲಿಸಲು ಗೆಳೆಯರೊಡನೆ ಬಂದ ತಿಮ್ಮನಿಗೆ ವಾಲಗ ಊದುವವನು ತಮ್ಮ ಕೇರಿಯ ಬೈರ ಎಂದು ತಿಳಿದಾಗ ಮುಖ ತಿರುಚಿಕೊಂಡ. 'ತನ್ನ ಜೀತದಾಳೊಬ್ಬ ಊದುವ ವಾಲಗವನ್ನು ಮೆಚ್ಚಿ ಕೇಳಿದ್ದು ತನ್ನ ಗೌಡಿಕೆಯ ಗೌರವಕ್ಕೆ ಮಸಿಬಳಿದುಕೊಂಡಂತಾಯ್ತಲ್ಲ ಎಂದು......... "ಥೂ ಬನ್ರೋ ಈ ಬಡು ತಿನ್ನೋರ ವಾಲಗ ಏನು ಕೇಳಾದು"[೧೦] ಎಂಬಲ್ಲಿ ಜಾತಿ ಹಿನ್ನೆಲೆಯಲ್ಲಿ ದೃಷ್ಟಿಕೋನ ಸಂಗೀತದ ಸವಿಯನ್ನು ಮೀರಿ ನಿಲ್ಲುತ್ತದೆ.

ಕಾನೂರು ಹೆಗ್ಗಡತಿಯಲ್ಲಿ 'ವಾಸು' ಬೈರನ ಮಗ ಗಂಗನಿಗೆ ಸೆಬೆಯಲ್ಲಿ ಒಡ್ಡಿದ ಹಕ್ಕಿಯನ್ನು ಮೋಸ ಮಾಡಿ ತಂದದ್ದಕ್ಕೆ ಕೋಪದಿಂದ ಗುದ್ದುತ್ತಾನೆ. ಮನೆಗೆ ಬರುವಾಗ ಗಂಗನನ್ನು ಮುಟ್ಟಿದ್ದರಿಂದ ಮೈಲಿಗೆಯಾಯಿತೆಂದು ಕೊಟ್ಟಿಗೆಗೆ ಬಂದು ಸಗಣಿ ಮೆಟ್ಟಿ ಹಿಂಭಾಗದಿಂದ ಮನೆ ಪ್ರವೇಶ ಮಾಡುತ್ತಾನೆ.

ಜಾತಿ ವ್ಯವಸ್ಥೆಯು ಗಟ್ಟಿಯಾಗಿ ನೆಲೆಸಿರುವ ನಮ್ಮಂತಹ ಭಾರತೀಯ ಸಮಾಜದಲ್ಲಿ ಹಿರಿಯರ ಜಾತಿ ತಾರತಮ್ಯಗಳ ನಡವಳಿಕೆಗಳನ್ನು ಏನೂ ಅರಿಯದ ಮುಗ್ಧ ಮಕ್ಕಳೂ ಸಹ ಅನುಕರಿಸುತ್ತಾ ಬೆಳೆಯುತ್ತಾರೆ. ಅಂತೆಯೇ ಬದುಕಿನುದ್ದಕ್ಕೂ ಪರಂಪರೆಯಿಂದ ಬಂದ ಜಾತಿ, ವರ್ಣ, ವರ್ಗಗಳ ಕ್ರಮದಲ್ಲಿಯೇ ಬೆಳೆಯುವ ಯೋಚಿಸುವ ನಿಲುವುಗಳು ರಕ್ತಗತದಂತೆ ಅಂಟಿಕೊಂಡು ಬರುತ್ತವೆ. ಆದ ಕಾರಣವೇ ಇಂದಿಗೂ ಆಧುನಿಕತೆ ಕಾರಣವಾಗಿ ಪರಿಸರದಲ್ಲಿ ಬದಲಾವಣೆಗಳಾಗುತ್ತಿದ್ದರೂ ಇಂತಹ ನಡವಳಿಕೆಗಳೂ ಪೂರ್ಣವಾಗಿ ನಾಶವಾಗಿಲ್ಲ.

ಜಾತೀಯತೆಯ ತಾರತಮ್ಯ ಊಟೋಪಚಾರ, ಸಂಭಾಷಣೆ, ಪ್ರವೇಶ ಮುಂತಾದವುಗಳಲ್ಲಿ ಹೇಗೆ ಪಾಲನೆಯಾಗುತ್ತದೋ ಹಾಗೆ ಉಡುಗೆ ತೊಡುಗೆಯಲ್ಲೂ ಕಾಣಿಸಿಕೊಳ್ಳುತ್ತದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆರಂಭದಲ್ಲೇ ಪ್ರಯಾಣ ಹೊರಟು ಗುತ್ತಿಯ ಉಡುಪಿನಲ್ಲಿ ವಿಶೇಷ ಎದ್ದು ಕಾಣುತ್ತಿತ್ತು. ತಲೆಗೆ ಸುತ್ತಿದ ಕೆಂಪು ವಸ್ತ್ರ, ಮೊಳಕಾಲುದಾಟಿದ ಪಂಚೆ, ಮೈಗೆ ಕಸೆ ಅಂಗಿ ಹಾಕಿ ಶೋಕಿಯಾಗಿ ತೋರುತ್ತಿದ್ದ. ಅಂತೆಯೇ ವೃತ್ತಿಯಲ್ಲಿ ಗುತ್ತಿಯ ಸಮಾನನಾದರೂ ಜಾತಿಯಲ್ಲಿ ಗುತ್ತಿಗಿಂತ ಮೇಲಾದ ಮರಾಠಿ ಮಂಜನಿಗೆ ಗುತ್ತಿಯ ವೇಷ ಕಂಡು ಹುಬ್ಬೇರಿಸುವಂತೆ ಮಾಡುತ್ತದೆ. 'ಒಳ್ಳೇ ದರೋಬಸ್ತಾಗಿದ್ದೀಯಲ್ಲಾ'[೧೧] ಎಂಬ ಉದ್ಗಾರದಲ್ಲಿ ಜಾತಿಯಲ್ಲಿ ಕೀಳಾದವನ ಉಡುಗೆ ತೊಡುಗೆಯ ಬಗ್ಗೆ ಮೆಚ್ಚುಗೆಯಿಲ್ಲ ; ವ್ಯಂಗ್ಯೋಕ್ತಿ ಇದೆ. ಇದು ಅಸಹನೆಯ ಕುಚೋದ್ಯದ ಮಾತು. ಒಂದೊಂದು

ಜಾತಿಗೂ ಉಡುಗೆ ತೊಡುಗೆಗಳ ಕಲ್ಪನೆ ಪರಂಪರಾಗತವಾಗಿ ನಿರ್ದಿಷ್ಟ ಪಡಿಸಿದ ರೀತಿಯಲ್ಲಿ ನೆಲೆನಿಂತಿದೆ. ಆದ್ದರಿಂದ ಕೆಳಜಾತಿಯವರು ಉಡುಗೆ ತೊಡುಗೆಗಳಲ್ಲೂ ಸ್ವಲ್ಪವೇ ಬದಲಾದರೂ ಮೇಲ್ಜಾತಿಗಳಲ್ಲಿ ತಳಮಳವನ್ನುಂಟು ಮಾಡುವ ಸಂಗತಿಯಾಗುತ್ತದೆ.

ಪ್ರತಿಯೊಂದು ಜಾತಿಯೂ ಜಾತಿಯ ಕಟ್ಟುಪಾಡುಗಳನ್ನು ಮಡಿಮೈಲಿಗೆಯನ್ನು ಹೇಗೆ ಈ ಮಲೆನಾಡ ಪರಿಸರದಲ್ಲಿ ಕಾಪಾಡಿಕೊಂಡು ಬರುತ್ತಿದ್ದವು ಎಂಬುದನ್ನು ಕೆಲವು ಸಂಗತಿಗಳಲ್ಲಿ ಕಾಣಬಹುದಾಗಿದೆ. ಬೆಟ್ಟಳ್ಳಿ ಮನೆಯವರೆಲ್ಲಾ (ಮಲೆಗಳಲ್ಲಿ ಮದುಮಗಳು) ಕಲ್ಲೂರು ದೇವಸ್ಥಾನಕ್ಕೆ ಬರುತ್ತಿರುವಾಗ ಬೆಟ್ಟಳ್ಳಿ 'ಕಾಡು' ಹುಡುಗನಿಗೆ ಈ ಹಿಂದೆ ತನ್ನ ತಂದೆ ಜೊತೆ ಕಲ್ಲೂರಿಗೆ ಬಂದಾಗ ಬ್ರಾಹ್ಮಣರ ಮನೆಯ ಹೊರ ಅಂಗಳದ ತಣಿಯ ಮೇಲೆ ಕುಳಿತು ಊಟ ಮಾಡಿದ್ದು, ತಂದೆ ಎಂಜಲೆಲೆ ತೆಗೆದು ಗೋಮಯ ಹಾಕಿ ಬಳಿದದ್ದು ಇಸ್ಸಿ ಎನಿಸಿ ಅಪಮಾನವಾಗಿದ್ದನ್ನು ಹೇಳಿಕೊಳ್ಳುವಾಗ ತಾವೂ ಹರಿಜನರನ್ನು ಹಾಗೆ ನಡೆಸಿಕೊಳ್ಳುತ್ತಿದ್ದೇವೆ ಎಂಬ ವಿವೇಕವಾಗಲಿ, ಅಸಹ್ಯವಾಗಲಿ ಮೂಡುವುದಿಲ್ಲ. ಚಿಕ್ಕಂದಿನಿಂದಲೇ ಈ ವಿರೋಧಾಭಾಸಗಳ ಹಿನ್ನೆಲೆಯಲ್ಲಿ ಜಾತಿ ತಾರತಮ್ಯಗಳು, ಸಂಘರ್ಷಗಳು ನಡವಳಿಕೆಗಳು ಬೆಳೆದು ಬಂದಿರುತ್ತದೆ. ಹಿರಿಯನಾದ ಕಲ್ಲೇಗೌಡನಿಗೆ ತಾವು ಊಟಕ್ಕೆ ಕುಳಿತ ಜಾಗಕ್ಕೆ ಗೋಮಯ ಹಾಕುವುದು ಸಹಜವಾಗಿ ಕಂಡರೆ ಮಗ ಕಾಡುವಿಗೆ ಅದು ಒಪ್ಪಿಗೆಯಾಗುವುದಿಲ್ಲ. ಎರಡು ತಲೆಮಾರುಗಳ ನಡುವೆ ಜಾತಿ ವ್ಯವಸ್ಥೆಯ ನಡವಳಿಕೆಗಳು ಹೇಗೆ ಭಿನ್ನ ಭಿನ್ನವಾದ ಪ್ರತಿಕ್ರಿಯೆಗಳಿಗೆ ಒಳಗಾಗುತ್ತವೆ ಎಂಬುದನ್ನು ಗಮನಿಸಬೇಕು. ಕಾಡುವಿನ ತಾಯಿ ದೊಡ್ಡಮ್ಮ ಹೆಗ್ಗಡತಿಯಂತವರು ಬ್ರಾಹ್ಮಣರು ತಮ್ಮನ್ನು ಹಾಗೆ ನಡೆಸಿಕೊಳ್ಳುವುದು. ಅದೇ ರೀತಿ ತಾವೂ ಕೆಳಜಾತಿ ಜನಾಂಗವನ್ನು ಹಾಗೆ ನಡೆಸಿಕೊಳ್ಳುವುದು ಸಹಜವಾದ ಒಪ್ಪಿತನೆಲೆಯಲ್ಲಿ ಪ್ರತಿಕ್ರಿಯಿಸುತ್ತಾಳೆ. "ಸಾಕು ಬಿಡೋ ಮತ್ತೇನು ಬಿರಾಂಬ್ರ ಮನೇಲಿ ಗೌಡರ್ನ ಒಳಗೆ ಕೂರ್ಸಿ ಇಕ್ತಾರೆ ಅಂತಾ ಮಾಡಿಯೇನು? ನಮ್ಮನೇಲಿ ಆ ಕಿಲಸ್ತರ ಉಪದೇಶಿ ಬರ್ತಾನಲ್ಲಾ ಅವನ್ನ ಒಳಗೆ ಕೂರ್ಸಿ ಊಟ ಹಾಕ್ತಿಂವೇನು? ಹಂಗೇನೆ ಬಿರಾಂಬರ ಮನೇಲಿ ನಮ್ಮನ್ನೆಲ್ಲ ಹೊರಗೇ ಕೂರಿಸಿ ಇಕ್ತಾರೆ"[೨] ಎಂದು ಮೇಲುವರ್ಗದವರ ಪದ್ಧತಿಯನ್ನು ಸಮರ್ಥಿಸುವಲ್ಲಿ ಪಾಲಿಸುವ ರೂಢಿಗತವಾಗಿ ಬಂದ ತಾರತಮ್ಯವನ್ನು ಮುಂದುವರಿಸಿಕೊಂಡು ಹೋಗುವ ಮನಃಸ್ಥಿತಿಯಿದು. ಏಕೆಂದರೆ ಮೇಲುಜಾತಿಯವರಿಂದ ತಮಗಾದ ಅನುಭವವನ್ನು ಅಸಹ್ಯವೆಂದಾಗಲಿ, ಅಪಮಾನವೆಂದಾಗಲಿ ದೊಡ್ಡಮ್ಮ ಹೆಗ್ಗಡತಿ ಭಾವಿಸುವುದಿಲ್ಲ. ಕಾರಣ ತಮಗಿಂತ ಕೀಳು ಜಾತಿಯವರಿಗೆ ತಮ್ಮ ಮನೆಗಳಲ್ಲಿ ಕೀಳಾಗಿಯೇ ನಡೆಸಿಕೊಳ್ಳುವ ಪ್ರಜ್ಞೆ ಅವಳಿಗಿದೆ. ಇಷ್ಟಾಗಿಯೂ ಬೆಟ್ಟಳ್ಳಿ ಮನೆಯಲ್ಲೇ ಮಡಿಮೈಲಿಗೆ ಶಿಥಿಲಗೊಳ್ಳುತ್ತಿರುವ ಅರಿವೂ ಆಕೆಗೆ ಇದೆ. ಅದಕ್ಕೆ ಉಗ್ರಪ್ರತಿಭಟನೆಯಿಲ್ಲ. ತನ್ನ ದೊಡ್ಡ ಮಗ ದೇವಯ್ಯ ಜಾತಿಗೀತಿ ಬಿಟ್ಟಿದ್ದಾನೆಂದೂ, ಯಾವ ಕೀಳುವರ್ಗದವರ ಜೊತೆಯಲ್ಲೂ ಊಟ ಮಾಡುತ್ತಾನೆಂದು ಸಿಡುಕಿ ಸುಮ್ಮನಾಗುವುದು ಸ್ಥಿತ್ಯಂತರವನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಕಾಲಮಾನದ ಪರಿಸ್ಥಿತಿಯ ಅಸಹಾಯಕತೆ ವ್ಯಕ್ತವಾಗುತ್ತದೆ.

ಪಾದ್ರಿ ಜೀವರತ್ನಯ್ಯನ ಆಕರ್ಷಣೆಗೆ ಒಳಗಾಗುವ ಮೊದಲು ದೇವಯ್ಯ ಕ್ರೈಸ್ತಧರ್ಮೀಯನಾದ ಆತನನ್ನು ಹೊಲೆಯರಿಗಿಂತಲೂ ಕೀಳಾದವನೆಂದೂ, ಮನೆಯೊಳಗೆ ಹೇಗೆ ಊಟ ಹಾಕುವುದೆಂಬ ವಿಚಾರದಲ್ಲಿ ಬೆಟ್ಟಳ್ಳಿ ಮನೆಯ ಅಡಿಗೆಯ ಮನೆಯಲ್ಲಿ ಒಂದು ಸಂಘರ್ಷವೇ ನಡೆದು ಕೊನೆಗೆ

ತೀರ್ಮಾನವಾಗಿ (ಪಾದ್ರಿ ಬಿಳಿಬಟ್ಟೆ ಹಾಕಿಕೊಂಡು ಬಂದದ್ದಕ್ಕೆ) ಮನೆಯ ಕೆಳ ಜಗುಲಿಯಲ್ಲಿ ಕೆಳ ಕೋಮಿನ ಆಳುಗಳಿಗೆ ಹಾಕುವಂತೆ 'ಕೀತು' (ಕೀಳು ಎಂದು ಭಾವಿಸಿದ್ದ ಜನಕ್ಕೆ ನೀಡುವ ಬಾಳೆಲೆಯ ಸ್ವರೂಪ) ಬಾಳೆಲೆಯಲ್ಲಿ ಎಲ್ಲವನ್ನು ಬಡಿಸಿ ನೀಡಿದ್ದರು. ಮನೆಯೊಡತಿಯರಿರಲಿ, ಮನೆಯೊಳಗಿನ ಆಳುಗಳೂ ಕೈಯಾರೆ ಬಡಿಸಲು ಜಾತಿ ಕೆಡುವುದೆಂದು ಭಾವಿಸಿ ಮುಂದೆ ಬರಲಿಲ್ಲ. ಇಂತಹ ಮನೆಗೆ ಪಾದ್ರಿ ಮೂಲಕ ಬರುವ ಯಾಂತ್ರಿಕ ವಸ್ತುಗಳು ಬರುತ್ತಿದ್ದಂತೆ ಅನ್ಯಧರ್ಮಿಯ ಎಂಬ ಕಾರಣಕ್ಕೊ, ಇಂಗ್ಲೀಷ್ ಕಲಿತ ಪಾದ್ರಿಯಿಂದ ತಮ್ಮ ವ್ಯವಹಾರಕ್ಕೆ, ಸರ್ಕಾರಿ ಕೆಲಸಕ್ಕೆ ಅನುಕೂಲವಾಗುತ್ತಿದೆ ಎಂದೊ ಬೆಟ್ಟಳ್ಳಿ ಮನೆಯ ಕಟ್ಟುಪಾಡುಗಳೆಲ್ಲ ಸಡಿಲವಾಗತೊಡಗಿತ್ತು. ಇಂದಿಗೂ ಮಲೆನಾಡು ಪರಿಸರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹರಿಜನರು ಮನೆಯೊಳಗೆ ಬರುವುದಿಲ್ಲ. ಆದರೆ ಶಿಕ್ಷಣ ಪಡೆದು ನೌಕರಿ ಸೇರಿದ ಹರಿಜನರು (ವಿಶೇಷವಾಗಿ ಹೊರ ಪ್ರಾಂತ್ಯದವರು) ಸುಲಭವಾಗಿ ವಿರೋಧವಿಲ್ಲದೆ ಮಧ್ಯಮ ಕೆಳಕೋಮಿನ ಮನೆಯೊಳಗೆ ಪ್ರವೇಶ ಪಡೆಯುತ್ತಾರೆ. ಈ ರೀತಿಯ ನಡವಳಿಕೆಗಳು ಕೃತಕವೆಂಬ ಅರಿವಿದ್ದರೂ ಸಂಪ್ರದಾಯ ನೆಲೆಯಲ್ಲಿ ಕಡ್ಡಾಯವಾಗಿ ಪಾಲಿಸಲಾಗುತ್ತದೆ. ಆದರೆ ಸರ್ಕಾರಿ ನೌಕರ ಅಥವಾ ಅಧಿಕಾರ ಸ್ಥಾನದಲ್ಲಿದ್ದವರ ಬಗ್ಗೆ ಜಾತಿ, ಮೈಲಿಗೆಗಳು ಮಹತ್ವಪಡೆಯದೆ, ಹಿಂದೆ ತಳ್ಳಲ್ಪಟ್ಟು ಮೇಲ್ಜಾತಿಯ ಸಮುದಾಯಗಳು ಒಳಗೊಳ್ಳುವ ಸಂದರ್ಭಗಳೇನಿದೆ ಅದು ತಮ್ಮ ತಾರತಮ್ಯ ನೀತಿಗಳು ಕೃತಕವಾದವು ಎಂಬ ಅರಿವು ಇರುವುದನ್ನು ಸೂಚಿಸುತ್ತದೆ. ಆದ ಕಾರಣ ಸಾಂಪ್ರಾದಾಯಿಕ ಕಟ್ಟುಪಾಡುಗಳನ್ನು ಪಾಲಿಸುತ್ತಲೇ ಮೀರುವ ಪ್ರಕ್ರಿಯೆಯು ಮಲೆನಾಡಿನ ಪ್ರಾಂತ್ಯವು ಬದಲಾವಣೆಗೆ ತೆರೆದುಕೊಂಡಂತೆ ಕಾಣಿಸುತ್ತದೆ.

ಜಾತಿ, ಅಸ್ಪೃಶ್ಯತೆಯ ಕಟ್ಟುಪಾಡುಗಳು ಕೇವಲ ಮೇಲುಜಾತಿ ಸಮುದಾಯದಲ್ಲಿ ಮಾತ್ರವಲ್ಲ ದಲಿತ ಸಮುದಾಯದಲ್ಲಿ ಕೂಡ ಮಲೆನಾಡ ಪರಿಸರದಲ್ಲಿ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು ಎಂಬುದಕ್ಕೆ ಕೆಲವು ಸಂದರ್ಭಗಳನ್ನು ಗಮನಿಸಬಹುದು. ಹಳೆಮನೆ ಸುಬ್ಬಣ್ಣ ಹೆಗಡೆ ಮಗ ತಿಮ್ಮಪ್ಪ ಹೆಗಡೆ ಹೊಲೆಯರ ಕೇರಿಗೆ ಕೆಲಸದಾಳುಗಳನ್ನು ಕರೆಯಲು ಬರುತ್ತಾನೆ. ಆ ಕೇರಿಯ ಮೊದಲಲ್ಲಿ ಒಂದು ದಿಣ್ಣೆ ಅದನ್ನು 'ಒಡೆಯರದಿಬ್ಬ' ಎಂದೇ ಕರೆಯುತ್ತಿದ್ದರು. ಅದರ ಮೇಲೆ ನಿಂತು ಕರೆಯಬೇಕಿತ್ತು. ಅದರಿಂದ ಮುಂದಕ್ಕೆ ದಾಟುವ ಹಾಗಿರಲಿಲ್ಲ. ಹೆಗಡೆಯ ಕೂಗಿಗೆ ಯಾರೂ ಓಗೊಡದಿದ್ದಾಗ ಮುಖಂಡ ಕುಳವಾಡಿ ಸಣ್ಣ ಗಾಬರಿಯಾಗುತ್ತಾನೆ. ಏಕೆಂದರೆ ತಿಮ್ಮಪ್ಪ ಹೆಗಡೆ ಕೋಪಬಂದರೆ ಕೇರಿಯ ಮನೆಗಳಿಗೂ ನುಗ್ಗುವ ಮನುಷ್ಯ. ಹಾಗೇನಾದರೂ ಆದರೆ ತಮ್ಮ ಕೇರಿಗೇ ಅಪಶಕುನ ಎಂದೇ ಆ ಸಮುದಾಯ ನಂಬಿ ಪಾಲಿಸುತ್ತದೆ. ಇದರಿಂದ ತಮ್ಮ ದೈಯ್ಯಾದ್ಯಾವರಿಗೆ ಮೈಲಿಗೆಯಾಗಿ ಕೇರಿಯನ್ನೇ ನಾಶ ಮಾಡಿಬಿಡುತ್ತದೆ ಎಂಬ ಭಯ ಕಾಡುತ್ತದೆ. ಆ ಕಾರಣದಿಂದ ತಮ್ಮ ಮಗಳ ಮೂಲಕ ಯಾರಾದರೂ ಗುಡಿಯಿಂದ ಹೊರಬಂದು ಓ ಗೊಡುವಂತೆ ಕೇಳಿಕೊಳ್ಳುತ್ತಾನೆ. ವಿಚಿತ್ರವೆಂದರೆ ಗುಡಿಯೊಳಗೆ ಬಂದರೆ ಅಪಶಕುನ, ಆದರೆ ಅಲ್ಲಿಯ ಹೆಣ್ಣುಮಕ್ಕಳೊಂದಿಗೆ ಕಾಮುಕನಾಗಿ ವರ್ತಿಸುವ ತಿಮ್ಮಪ್ಪ ಹೆಗಡೆ ಮೈಲಿಗೆಯನ್ನು ಮೀರಿದ್ದ. ತಿಮ್ಮಪ್ಪ ಹೆಗಡೆ ಒಡೆಯರದಿಬ್ಬ ದಾಟಿ ಅಸ್ಪೃಶ್ಯರ ನಿಷೇಧವನ್ನು ಮೀರುವುದು ಸಂಪ್ರದಾಯವನ್ನು ಮುರಿಯಬೇಕು, ಸಮಾನತೆ ಸಾಧಿಸಬೇಕೆಂಬ ಅರ್ಥದಲ್ಲಿಯಲ್ಲ. ಆತನಿಗೆ ಮನೆಯ ಕೆಲಸಕ್ಕೆ ಆಳು ಬರಬೇಕೆಂಬ ಹಠದ ಮತ್ತು ಸಮಯದೊರಕಿದಾಗ ಕಾಮುಕನಾಗಿ ಅಲ್ಲಿಯ ಹೆಣ್ಣುಗಳನ್ನು ಬಳಸುವ

ಆಗಾಗ ಸ್ಫೋಟಗೊಳ್ಳುತ್ತಿರುತ್ತದೆ. ಚೀಂಕ್ರ (ಮ.ಮ.) ಹೊಟ್ಟೆ ತುಂಬಾ ಐತನಿಗೆ ಕುಡಿಸಿ ಮುಕುಂದಯ್ಯ ಸಂಬಂಧವನ್ನು ಬಣ್ಣ ಕಟ್ಟಿ ಹೇಳುತ್ತಾನೆ.

"ನಿನ್ನ ಕೂಳು ಹೊತ್ತಿ ಹೋಯ್ತು ! ಗೌಡರ ಮಕ್ಕಳ ನಂಬಿ, ನಿನ್ನ ಬಾಯಿಗೆ ಮಣ್ಣು ! ಏಳೇಳ್! ಎಲ್ರಿಗೂ ಬುದ್ದಿ ಹೇಳೋರು ಆ ಮುಕುಂದಯ್ಯನವರ ಗುಟ್ಟು.........[೧೩] ವಾಸ್ತವವಾಗಿ ಪೀಂಚಲು-ಮುಕುಂದಯ್ಯರ ನಡುವೆ ಯಾವುದೇ ಸಂಬಂಧವಿಲ್ಲದಿದ್ದರೂ ಮೇಲು ಜಾತಿ ಗೌಡ ಸಮುದಾಯಕ್ಕೆ ಸೇರಿದ ಮುಕುಂದಯ್ಯನ ಹಿನ್ನೆಲೆಯಲ್ಲಿ ಮೇಲುಜಾತಿಗಳ ಮೇಲಿನ ಧೋರಣೆ ಇಲ್ಲಿ ಸ್ಪಷ್ಟವಾಗುತ್ತದೆ. ಮುಕುಂದಯ್ಯನ ಅಣ್ಣ ರಂಗಪ್ಪಗೌಡ ಅಕ್ಕಣಿಯನ್ನು ತನ್ನವಳಾಗಿ ಮಾಡಿಕೊಳ್ಳುವುದರಲ್ಲಿ ಅದನ್ನು ಕಾಣಬಹುದು. "ಜೀತ ಊಳಿಗಮಾನ್ಯ ಪದ್ಧತಿಯ ಒಂದು ಮುಖವಾದರೆ, ಲೈಂಗಿಕ ಶೋಷಣೆ ಅದರ ಇನ್ನೊಂದು ಮುಖ. ಹಣವಂತರು, ಭೂಮಾಲಿಕರು, ಕೇವಲ ಹೊಟ್ಟೆಪಾಡಿಗಾಗಿ, ಹೊಲಗದ್ದೆಗಳಲ್ಲಿ ದುಡಿಯುವ ದಲಿತ ಹೆಣ್ಣು ಮಕ್ಕಳನ್ನು..... ಪತ್ರಾವಳಿಯಂತೆ ಬಳಸಿಕೊಳ್ಳುತ್ತಾರೆ. ಬೇರೆ ಸಂದರ್ಭಗಳಲ್ಲಿ ಕಾಡುವಂತೆ ಮಡಿ, ಮೈಲಿಗೆ, ಅಸ್ಪೃಶ್ಯತೆಗಳು ಆಗ ಅವರನ್ನು ಕಾಡುವುದಿಲ್ಲ"[೧೪] ಎಂಬ ಮಾತು ಸತ್ಯಕ್ಕೆ ಹತ್ತಿರವಾದುದು. ತಿಮ್ಮಪ್ಪ ಹೆಗಡೆ ಹೊಲೆಯರ ಪುಟ್ಟಿಯ ಜೊತೆಗಿನ ಸಂಬಂಧ, ರಂಗಪ್ಪಗೌಡ ಅಕ್ಕಣಿಯ ಜೊತೆಗಿನ ಸಂಬಂಧ, ಕಾನೂರು ಹೆಗ್ಗಡತಿಯಲ್ಲಿ ಚಂದ್ರೇಗೌಡ ಗಂಗೆಯ ಜೊತೆ ಇಟ್ಟುಕೊಳ್ಳುವ ಸಂಬಂಧ ಈ ರೀತಿಯ ಲೈಂಗಿಕ ಶೋಷಣೆಗೆ ಉದಾಹರಣೆಗಳು. ಇಂತಹ ಸಂದರ್ಭಗಳಲ್ಲಿ ಇವರೆಲ್ಲ ಅಂಟಿಸಿಕೊಂಡ ಮಡಿಮೈಲಿಗೆ ಭಾವವನ್ನು ಮೀರಬಲ್ಲರು.

ಹಾಗೆಯೇ ನಾಯಿಗುತ್ತಿ ತಾನು ಹೋಗುವ ಸೀತೂರು ಗದ್ದೆ ದಾರಿಯಲ್ಲಿ 'ಹತ್ತುಮೀನು' ಕಡಿಯುತ್ತಿರುವ ದೀವರನ್ನು ನೋಡಿ ಯಾವ ಅಸೂಯೆಯೂ ಇಲ್ಲದೆ ಸಹಜವಾಗಿ ಸ್ವಗತದಲ್ಲಿ "ಈ ಮಳೇಲಿ ಮೀನು ಕಡಿಯಾಕೆ ಹೊರಟಾರಲ್ಲಪ್ಪಾ? ಈ ದೀವರು ಮಕ್ಕಳಿಗೆ ಕಳ್ಳು ಹೆಚ್ಚಾಗಿದ್ದೇ!"[೧೫] ಎಂದು ವಿನೋದವಾಗಿ ಅಂದುಕೊಂಡ ಮಾತಾದರೂ ಕೆಳಜಾತಿಗಳು ಮೇಲು ಜಾತಿಗಳ ಬಗ್ಗೆ ಹೊಂದಿರುವ ಅಭಿಪ್ರಾಯವನ್ನು ಸಶಕ್ತವಾಗಿ ವ್ಯಕ್ತ ಮಾಡುತ್ತದೆ. ಅಂದರೆ ಕೆಳ ಸಮುದಾಯಗಳು ಒಡೆಯರ, ಮೇಲುಜಾತಿಗಳ ಬಗ್ಗೆ ಭಯ-ಭಕ್ತಿಯಿಂದ ಸದಾ ನಡೆದುಕೊಳ್ಳುತ್ತಿದ್ದರು ಎನ್ನುವಂತಿಲ್ಲ. ನೇರವಾಗಿ ಎದುರಿಸುವಲ್ಲಿ ಅಸಹಾಯಕತೆ, ಒಡೆಯರ ಕ್ರೌರ್ಯ ಇದ್ದದ್ದರಿಂದ ಪರೋಕ್ಷವಾಗಿ ತಮ್ಮ ಮಾತು ವರ್ತನೆಯಲ್ಲಿ ಪ್ರತಿಭಟನೆ ವ್ಯಕ್ತವಾಗುವುದನ್ನು ಕಾಣಬಹುದು. ಪೋಲಿಸರ ಕೈಯಲ್ಲಿ ಸಿಕ್ಕ ನಾಯಿಗುತ್ತಿ ಕಾಡುದಾರಿಯಲ್ಲಿ ಬರುವಾಗ ತನ್ನ ಚಾಣಾಕ್ಷತನದಿಂದ ಪಾರಾದದ್ದಲ್ಲದೆ ಪೋಲಿಸಿನವನೊಬ್ಬನನ್ನು ಕೆಸರಿನ ಮಡುನಲ್ಲಿ ಬೀಳುವ ಹಾಗೆ ಮಾಡುತ್ತಾನೆ. ಹಾಗೆ ತಾನು ಮದುವೆಯಾದ ತಿಮ್ಮಿಯ ತಾಳಿಕಿತ್ತು ಬಚ್ಚನಿಗೆ ಒಡೆಯರು ಮದುವೆ ಮಾಡುತ್ತಾರೆ ಎಂದು ತಿಳಿದಾಗ ತಿಮ್ಮಿಯ ಜೊತೆಯಲ್ಲಿ ಮತ್ತೊಮ್ಮೆ ಓಡಿ ಹೋಗಿ ಆ ಸೀಮೆಯನ್ನೇ ಬಿಡುತ್ತಾನೆ. ಆ ಮಟ್ಟದಲ್ಲಾದರೂ ತಮ್ಮ ಶೋಷಣೆ, ಕ್ರೌರ್ಯ ವಿರುದ್ಧ ವಿರೋಧ ವ್ಯಕ್ತಪಡಿಸುತ್ತಿದ್ದರು. ಅಸಹಾಯಕತೆಯಲ್ಲೂ ಉಪಾಯವನ್ನು ಕಂಡುಕೊಳ್ಳುತ್ತಿದ್ದರು ಎಂಬುದನ್ನು ಕಾಣಬಹುದಾಗಿದೆ.

ಜಾತಿಯಿಂದ ಕೆಳಸ್ತರದವನೂ, ಆರ್ಥಿಕವಾಗಿ ದುರ್ಬಲನೂ ಆದ ಗುತ್ತಿ ಚಾಣಾಕ್ಷ ಮತ್ತು

ವೈಯಕ್ತಿಕ ನೆಲೆಯಲ್ಲಿ ತಿಮ್ಮಿಯ ಬಗೆಗೆ ಅಪಾರವಾದ ಪ್ರೀತಿಯನ್ನು ಹೊಂದಿದವನು. ಈ ದೃಷ್ಟಿಯಿಂದ ಗುತ್ತಿ ಯಾರನ್ನೂ ಲೆಕ್ಕಿಸದೆ ತಿಮ್ಮಿಯನ್ನು ಹಾರಿಸಿಕೊಂಡು ಬರುವುದರ ಮೂಲಕ ಬೆಟ್ಟಳ್ಳಿ ಕಲ್ಲೇಗೌಡರ ಹಿತಾಸಕ್ತಿಗೆ ಭಂಗ ತರುತ್ತಾನೆ. ಜಾತಿಹೀನರು, ದುರ್ಬಲರು ಮೇಲುಜಾತಿ ಒಡೆಯರ ವಿರುದ್ಧ ಇಷ್ಟರ ಮಟ್ಟಿಗೆ ಮಾತ್ರ ಪ್ರತಿಭಟನೆಮಾಡಬಲ್ಲರು. ಈ ಪರಿಸರದಲ್ಲಿ ಇದಕ್ಕಿಂತ ಹೆಚ್ಚನ್ನು ನಿರೀಕ್ಷಿಸುವಂತಿಲ್ಲ. ಹಾಗಿದ್ದೂ ಅಸ್ಪೃಶ್ಯ ಗುತ್ತಿ ಮತ್ತು ಅವನ ಬಂಧುಗಳು ಹಾಗೂ ವಸೂಲಿಸಾಬರ ನಡುವೆ ನಡೆಯುವ ಹೊಡೆದಾಟ ಸಾಮಾನ್ಯ ಸಂಗತಿಯಲ್ಲ. ಮೇಲ್ನೋಟಕೆ ಸಾಬರು ಗುತ್ತಿಯ ಗಬ್ಬದ ಕುರಿ ಕದ್ದು ತಿಂದಿದ್ದಕ್ಕಾಗಿ ನಡೆದ ಹೊಡೆದಾಟ. ಅದು ಕಳ್ಳರು ಮತ್ತು ಸಜ್ಜನರ ನಡುವೆ ನಡೆವ ಸಂಘರ್ಷದ ಹಾಗೆ ತೋರುತ್ತದೆ. ಆದರೆ ವಾಸ್ತವವಾಗಿ ಜಮೀನ್ದಾರರ ಗುಂಡಾಪಡೆಯು ನಡೆಸುವ ದೌರ್ಜನ್ಯದ ವಿರುದ್ಧ ನಡೆದ ಸಂಘರ್ಷವದು. ಅವರ ಪುಂಡಾಟಗಳನ್ನು ಸಹಿಸುತ್ತಾ ಬಂದವರಲ್ಲಿ ಅಸಹನೆ ಸ್ಫೋಟಗೊಂಡಿದೆ. ಆದ್ದರಿಂದ ಇದು ಶೋಷಕ-ಶೋಷಿತರ ನಡುವೆ ನಡೆವ ಸಂಘರ್ಷ. ಮೂಕ ಜನರಲ್ಲಿ ಅಂತರ್ಗತವಾಗಿದ್ದ ಬಂಡಾಯದ ಸಂಕೇತಗಳಾಗಿವೆ ಎಂದರೆ ತಪ್ಪಲ್ಲ.

ಕೆಳಜಾತಿಯ ಒಳಗೂ ಮೇಲು ಕೀಳುಗಳ ಭಾವ, ಸಂಘರ್ಷವನ್ನು ಕಾಣಬಹುದು. ಹೂವಳ್ಳಿ ಚಿನ್ನಮ್ಮನ ಮದುವೆ ದಿನ ಚೀಂಕ್ರ ಬಾಗಿ, ಅಕ್ಕಣಿ ಗಟ್ಟದಗ್ಗಿನ ಹೆಣ್ಣಾಳುಗಳನ್ನು ಕರೆದುಕೊಂಡು ಹೋಗಿ ಕೆಳಜಾತಿಯ ಜನರು ಕುಳಿತಿದ್ದ ಪಂಕ್ತಿಯಲ್ಲಿ ಹೆಂಗಸರ ಮಧ್ಯೆ ಕುಳ್ಳಿರಿಸಿದ. ಅಷ್ಟರಲ್ಲಿ ಯಾರೋ ಕೂಗಿದರು –

"ಹಸಲೋರು ಅಲ್ಲಿ ಕೂರಬೇಕು? ಇಲ್ಲಲ್ಲಾ! ಏಳಿ ಹೆಂಗಸ್ರೆಲ್ಲಾ ಎಂದಾಗ ಚೀಂಕ್ರ ಪ್ರತಿಭಟಿಸುತ್ತಾನೆ. 'ಹಸಲೋರೇನು ಬಿಲ್ಲೋರಿಗಿಂತ ಕೀಳಲ್ಲ ಜಾತೀಲಿ......... ನೀನೇ ಬೇಕಾದರೆ ಎದ್ದು ಹೋಗು".[೧೬]

ಜಾತಿ ವ್ಯವಸ್ಥೆಯ ನಮ್ಮ ಸಾಮಾಜಿಕ ಜೀವನದಲ್ಲಿ ಪ್ರತಿಯೊಂದು ಜಾತಿಯೂ ಶ್ರೇಷ್ಠತೆಯ ವ್ಯಸನಕ್ಕೆ ಬಿದ್ದಿರುವುದು ಸಾಮಾನ್ಯ ಸಂಗತಿ. ಮಲೆನಾಡ ಪರಿಸರದಲ್ಲಿ ಹಸಲರು ಮತ್ತು ಬಿಲ್ಲವರು ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಸಮಾನ ಸ್ಥಾನಮಾನ ಪರಿಸ್ಥಿತಿಯಲ್ಲಿರುವವರು. ಹಾಗಿದ್ದೂ ಮೇಲಾಟಕ್ಕಾಗಿ, ಸ್ವಾಭಿಮಾನಕ್ಕಾಗಿ ಸಂಘರ್ಷ ನಡೆಯುವುದನ್ನು 'ಮಲೆಗಳಲ್ಲಿ ಮದುಮಗಳು' ಕೃತಿ ಸೂಕ್ಷ್ಮವಾಗಿ ಅಲ್ಲಲ್ಲಿ ತೆರದಿಡುತ್ತದೆ. ಬಿಲ್ಲವರು ಹಸಲರಿಗಿಂತ ಮೇಲೆಂದು ಭಾವಿಸಿಕೊಂಡರೆ, ಹಸಲರು ಬಿಲ್ಲವರು ನಮಗಿಂತ ಮೇಲಲ್ಲ ಎಂದು ಭಾವಿಸಿದ್ದಾರೆ. ಇಲ್ಲಿ ಜಾತಿ ಮಾತ್ರವಲ್ಲ, ಆರ್ಥಿಕ ಸ್ಥಿತಿಯ ವರ್ಗ ಸಂಘರ್ಷವೂ ಕಾರಣವಾಗಿದೆ ಎಂಬುದು ಗಮನಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಂದರ್ಭವನ್ನು ನೋಡಬಹುದು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ದೋಣಿದಾಟುವ ಸಂದರ್ಭ ಅಸ್ಪೃಶ್ಯತೆಯ ಆಚರಣೆಯ ಅಮಾನವೀಯತೆಯನ್ನು ಮತ್ತು ಅಸ್ಪೃಶ್ಯತೆಯನ್ನು ಮೇಲು-ಕೀಳನ್ನು ಬೇರೆ ಬೇರೆ ಜಾತಿ ಸಮುದಾಯವರು ಹೇಗೆ ಪಾಲನೆ ಮಾಡುತ್ತಿದ್ದರು ಎಂಬುದರ ಧ್ವನಿ ಪೂರ್ಣಚಿತ್ರಣವಾಗಿದೆ. ತುಂಗಾನದಿ ದಾಟಿಸುವ ತಮ್ಮಯ್ಯಣ್ಣನ ಕಸುಬು ಹೊಟ್ಟೆಪಾಡಿನದೇ. ಆದರೆ ತನಗಿಂತ ಕೆಳಜಾತಿಗೆ ಸೇರಿದ ಗಟ್ಟದ ಕೆಳಗಿನ ಜನರನ್ನು ಕುರಿತು ದೋಣಿ ಏರುವ ಮೊದಲು ಗುಟುರು ಹಾಕುತ್ತಾನೆ" ಏಯ್, ಹಸಲೋರವನೆ

ಯಾರದ್ದೋ ಇದು, ಈ ಕೋಳಿಬುಟ್ಟಿ? ನಿನ್ನ ಕೋಳಿ, ಕುನ್ನಿನೆಲ್ಲ ಸಾಗಿಸಕ್ಕೆ ಜಾಗ ಎಲ್ಲಿದ್ಯೋ ದೋಣೀಲಿ? ತೆಗಿತಿಯೋ ಇಲ್ಲೋ, ಲೌಡೀಮಗನೆ".[೧೭]

ಕೆಳಜಾತಿಯವನೊಬ್ಬನ ಆಸ್ತಿಯ ಭಾಗವಾದ ಕೋಳಿಬುಟ್ಟಿ ಇಟ್ಟಿದ್ದೇ ಮಹಾಅಪರಾಧವಾಗಿ ತೋರುತ್ತದೆ. ಅದಕ್ಕೆ ದೋಣಿಯಲ್ಲಿ ಜಾಗವಿಲ್ಲವೆಂಬ ಕಾರಣಕ್ಕೆ ಅಷ್ಟು ಹೀನಾಯವಾಗಿ ಎಚ್ಚರಿಸಬೇಕಾಗಿರಲಿಲ್ಲ. ಆದರೆ ಜಾತಿ ತಾರತಮ್ಯದ ಹಿನ್ನೆಲೆಯಲ್ಲಿ ಆ ಮಾತು ಸಹಜವಾಗಿ ಅಂತವರಿಂದ ಉಕ್ತವಾಗುತ್ತದೆ. ಇಂತಹ ಬೈಗುಳದ ಮಾತನ್ನು ಆ ಕೋಳಿಬುಟ್ಟಿಯ ಒಡೆಯ ಸಹಜವಾಗಿ ಸ್ವೀಕರಿಸುತ್ತಾನೆ. ಕೋಳಿಬುಟ್ಟಿ ಎಸೆದದ್ದಕ್ಕೆ ಬೇಸರವಾಗುವುದಿಲ್ಲ. ಬದಲಾಗಿ ಬಿಲ್ಲವನಾದ ತನ್ನನ್ನು ಹಸಲರವ ಎಂದು ಸಂಬೋಧಿಸಿದ್ದು ಹೀನವಾಗಿ ತೋರುತ್ತದೆ. ಅದನ್ನು ತಿದ್ದಲು ಸಮಾಧಾನದಿಂದ ತಾನು ಹಸಲೋರವನಲ್ಲ ; ಬಿಲ್ಲರವನು ಎಂದು ಹೇಳುವಲ್ಲಿ ಜಾತಿ ಶ್ರೇಷ್ಠತೆಯೇ ಮುಖ್ಯವಾಗುವುದನ್ನು, ಅದನ್ನು ನಿಷ್ಠೆಯಿಂದ ಪಾಲಿಸುವುದನ್ನು ಕಾಣಬಹುದು. ಬಹಳ ಹೊತ್ತಿನಿಂದ ದೋಣಿ ಕಾಯುತ್ತಿದ್ದ ಗಟ್ಟದ ಆಳುಗಳನ್ನು ಆಗ ತಾನೆ ಬಂದ ನಾಲ್ಕು ಜನರ ಬ್ರಾಹ್ಮಣರಿಗಾಗಿ ಜನಿವಾರದವರು ಹತ್ತುತ್ತಾರೆ ಎಲ್ಲ ಇಳಿಯಲೆಂದು ಇಳಿಸುವಲ್ಲಿ ಜಾತಿ ಶ್ರೇಷ್ಠತೆ ಕೆಲಸ ಮಾಡುತ್ತದೆ. ಆ ಹಿನ್ನಲೆಯಲ್ಲಿ ಅವರೆಲ್ಲಾ ಏನೋ ಅಪರಾಧ ಮಾಡಿದವರಂತೆ ದೋಣಿಯಿಂದ ಕೆಳಗಿಳಿಯುತ್ತಾರೆ. ಇಪ್ಪತ್ತು ಜನ ಸಾಗಿಸಬಹುದಾದ ದೋಣಿಯಲ್ಲಿ ನಾಲ್ಕು ಜನ ಬ್ರಾಹ್ಮಣರು ಮಾತ್ರವೇ ಇದ್ದಾರೆ. ಅಸ್ಪೃಶ್ಯತೆಯ ಹಿನ್ನೆಲೆಯಲ್ಲಿ ಹತ್ತಿರದಲ್ಲಿರುವ ಕೆಲಸದಾಳುಗಳನ್ನು ಬಿಟ್ಟು ದೂರದಲ್ಲಿ ಕುಳಿತಿರುವ ಒಕ್ಕಲಿಗ ಜಮೀನ್ದಾರರಿಗೆ ಆ ಬ್ರಾಹ್ಮಣರು ಆಹ್ವಾನ ನೀಡುವಂತೆ ದೋಣಿಗನಿಗೆ ಹೇಳುವುದಾಗಲಿ ಮತ್ತು ಅವರ ಬಗ್ಗೆ ಅಭಿಮಾನದಿಂದ, ತನ್ನ ಜೀವನ ಅವರ ಕೃಪೆಯಿಂದಲೇ ಎಂದು ತಮ್ಮಯ್ಯಣ್ಣ ಹೇಳಿಕೊಳ್ಳುವುದಾಗಲಿ ಜಾತಿಗಿಂತ ಆದಾಯ ಮೂಲವೇ ತಾರತಮ್ಯ ನೀತಿಗೆ ಪ್ರಧಾನವಾಗಿರುವುದನ್ನು ಕಾಣಬಹುದು. ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಜಾತಿ ಸಂಘರ್ಷಕ್ಕಿಂತ ಆರ್ಥಿಕ ಅಸಮಾನತೆಯ ಸಂಘರ್ಷವೇ ಕಾದಂಬರಿಯ ಸ್ಥಾಯಿ ಗುಣದಂತೆ ಕಂಡುಬರುತ್ತದೆ.

'ಕಾನೂರು ಹೆಗ್ಗಡತಿ'ಯಲ್ಲಿ ಬರುವ ವೆಂಕಪ್ಪಯ್ಯ ಪರೋಹಿತಶಾಹಿಯ ಪ್ರಾತಿನಿಧಿಕ ರೂಪದಂತೆ ಕಂಡುಬರುತ್ತಾನೆ. ಆದರೆ ಕಲ್ಲೂರು ಮಂಜಯ್ಯನ (ಮ.ಮ.) ಹಾಗೆ ಜಮೀನ್ದಾರನಲ್ಲ. ಸ್ವಂತ ಸಂಪತ್ತನ್ನು ಉತ್ಪಾದಿಸುವ ಯಾವ ಕ್ಷೇತ್ರವನ್ನು ಹೊಂದಿರದ ಈತ ಬ್ರಾಹ್ಮಣೇತರ ಜಾತಿಗಳ ಮೇಲೆ ಮೌಢ್ಯವ ಹೇರಿ, ಆ ಮೌಢ್ಯವೇ ಇವರ ಅದಾಯ ತರುವ ಕ್ಷೇತ್ರ. ಶೂದ್ರರು ವೇದ ಉಪನಿಷತ್‌ಗಳನ್ನು ಓದುವುದಿರಲಿ, ಆಧುನಿಕ ವಿದ್ಯಾಭ್ಯಾಸವನ್ನು ಪಡೆಯುವುದೂ ಕೂಡ ಅಪಥ್ಯವಾದ ಸಂಗತಿ. ವೆಂಕಪ್ಪಯ್ಯ ಚಂದ್ರೇಗೌಡನಿಗೆ ನೀಡುವ ಸಲಹೆ ಗಮನಿಸಬಹುದು.

"ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳು ಮಾಡಿ ಬಿಡುತ್ತದೆ........ ನೂರಾರು ಹವ್ಯಾಸಗಳನ್ನು ಬೇರೆ ಕಲಿತು ಬಿಡುತ್ತಾರೆ....... ನಿಮ್ಮ ಮನೆ ಜಮೀನು ಉಳಿಯಬೇಕಾದರೆ ಅವರ ಓದು ನಿಲ್ಲಿಸಿ, ಮದುವೆ ಮಾಡಿ ಕೆಲಸಕ್ಕೆ ಹಚ್ಚು......"[೧೮]

ವೆಂಕಪ್ಪಯ್ಯ ಹೇಳುವ ಈಗಿನ ವಿದ್ಯಾಭ್ಯಾಸ ಹಾಳು ಮಾಡುತ್ತದೆ ಎನ್ನುವುದಾದರೆ ಹಿಂದಿನ ವಿದ್ಯಾಭ್ಯಾಸ ಈ ಸಮುದಾಯಗಳಿಗೆ ನೀಡಲಾಗಿತ್ತೆ? ಇಲ್ಲ. ನಗರಗಳಲ್ಲಿ ಓದಬೇಕಾದ್ದರಿಂದ ಬೇರೆ

ಬೇರೆ ಹವ್ಯಾಸಕ್ಕೆ ಬಿದ್ದು ಬಿಡುತ್ತಾರೆಂಬ ಭಯದ ಸೃಷ್ಟಿ. ಈ ರೀತಿ ಹವ್ಯಾಸಕ್ಕೆ ಒಳಗಾಗುತ್ತಿರುವುದು ಇತ್ತು, ಇದೆ. ಕಾರಂತರ ಮರಳಿ ಮಣ್ಣಿಗೆ ಲಕ್ಷ್ಮೀನಾರಾಯಣ (ಲಚ್ಚ) ಆಧುನಿಕ ವಿದ್ಯಾಭ್ಯಾಸ ಪಡೆಯಲು ಹೋಗಿ ಹವ್ಯಾಸಕ್ಕೆ ಬಿದ್ದ ಮಾದರಿಗಳಿವೆ. ಹಾಗೆ ಆಧುನಿಕ ವಿದ್ಯಾಭ್ಯಾಸದಿಂದ ಬದುಕನ್ನು ರೂಪಿಸಿಕೊಂಡ ಆತನ ಮಗ ರಾಮನ ಮಾದರಿಯೂ ಇದೆ. ಆದರೆ ಇಂತಹ ಅಪರೂಪದ ಮಾದರಿಗಳನ್ನೇ ವ್ಯಾಪಕವಾಗಿ ಬಿಂಬಿಸುವುದು ಪಟ್ಟಭದ್ರ ಹಿತಾಸಕ್ತಿಗಳ ತಂತ್ರ. ಹಾಗೆ ಪರಂಪರಾಗತವಾಗಿ ಬಂದ ಕಸುಬು ಹಾಳಾಗುತ್ತದೆ ಎಂಬುದೂ ಗಮನಿಸಬೇಕಾದ ವಿಚಾರವಾಗಿದ್ದರೂ ವೆಂಕಪ್ಪಯ್ಯನ ಆತಂಕ ಇಂದಿನ ಹುಡುಗರು ಆಧುನಿಕ ಶಿಕ್ಷಣ ಪಡೆಯುವುದರ ಮೂಲಕ ಹಾಳಾಗಿಬಿಡುತ್ತಾರೆಂಬ ಕಾಳಜಿಗಿಂತ, ಈ ಆಧುನಿಕ ವಿದ್ಯೆ ತಂದುಕೊಡಬಹುದಾದ ತಿಳುವಳಿಕೆ ಜಾಗೃತ ಪ್ರಜ್ಞೆಗಳು ಪಟ್ಟಭದ್ರಹಿತಾಸಕ್ತಿಗಳನ್ನು ಪ್ರಶ್ನಿಸುತ್ತವೆ, ಆ ಮೂಲಕ ತಮ್ಮ ಪುರೋಹಿತ ವೃತ್ತಿಗೆ ಅಡ್ಡಿಯಾಗುತ್ತದೆ ಎಂಬ ಆತಂಕದಿಂದಲೇ ಅವರುಗಳ ಪ್ರತಿಕ್ರಿಯೆ ಹೊರಬರುತ್ತದೆ. ಆದಕಾರಣ ಅವರು ಯಥಾಸ್ಥಿತಿಯ ವಾದಕರು. ಆದರೆ ಆಧುನಿಕತೆಯ ಪ್ರಭಾವದಲ್ಲಿ ಅದನ್ನು ತಡೆಯಲು ಸಾಧ್ಯವಾಗಿಲ್ಲ ಎಂಬುದನ್ನು ಗಮನಿಸಬೇಕು.

ಹೀಗೆ ಒಕ್ಕಲಿಗ ಸಮುದಾಯಕ್ಕೆ ಜಾತಿ ಕಸುಬಾದ ಕೃಷಿ ಕಸುಬು ಮುಖ್ಯವಾದ ಹಾಗೆ ಹಳೇ ಪೈಕದ ತಿಮ್ಮನಿಗೆ ಬಗನಿಕಟ್ಟಿ ಕಳ್ಳು ಇಳಿಸುವುದು ಜಾತಿ ಗುಟ್ಟು ಮತ್ತು ಹಕ್ಕು. ಸೀತೂರು ಸೇಸಾನಾಯ್ಕ (ಮ.ಮ.) ಸ್ವಂತ ಜಮೀನು ಹೊಂದಿದ್ದು ಮೇಲು ಜಾತಿ ಒಕ್ಕಲಿಗರಿಗೆ ಕಣ್ಣುಕೆಂಪಾಗಿತ್ತು ಸೇಸಾನಾಯ್ಕ ಮಗನ ಮದುವೆಯಲ್ಲಿ ದಂಡಿಗೆ, ಕುದುರೆ ಬಳಸುವುದಾಗಿ ಬಗ್ಗೆ ಸವಾಲ್ ಹಾಕಿದ್ದ. ಇಲ್ಲಿ ಕಳ್ಳು ಇಳಿಸುವ ಕೆಲಸಕ್ಕೆ ಬೇರೆ ಜಾತಿಯವನು ಕೈಹಾಕಿದರೆ ಜಾತಿಯಿಂದ ಹೊರಹಾಕಲ್ಪಡುತ್ತಿದ್ದ. ಆದರೆ ಬೇಲರ ಬೈರ ವೈಯಕ್ತಿಕ ಮಟ್ಟದಲ್ಲಿ ಗುಟ್ಟಾಗಿ ಮೀರುವ ಪ್ರಯತ್ನ ಮಾಡುತ್ತಾನೆ. ಮಾರ್ಕನ ಕೈಯಲ್ಲಿ ಸಿಲುಕಿಕೊಂಡಾಗ ಅವನಿಂದ ತಪ್ಪಿಸಿಕೊಂಡು, ಗುರುತು ಪತ್ತೆ ಹಚ್ಚಿದಂತೆ ತಲೆ ಬೋಳಿಸಿಕೊಂಡಿದ್ದ. ಈ ರೀತಿ ಮಲೆನಾಡ ಪರಿಸರದಲ್ಲಿ ಜಾತಿಯ ಕಟ್ಟುಪಾಡುಗಳನ್ನು ಸಾಮೂಹಿಕವಾದ ರೀತಿಯಲ್ಲಿ ಮೀರಲು, ವಿರೋಧಿಸಲು ಸಾಧ್ಯವಾಗದಿದ್ದರೂ ವೈಯಕ್ತಿಕ ಮಟ್ಟದಲ್ಲಿ ಬೇರೆ ಬೇರೆ ಹಿನ್ನೆಲೆಯಲ್ಲಿ, ಬೇರೆ ಬೇರೆ ರೂಪದಲ್ಲಿ ಮೀರುವ ಪ್ರಕ್ರಿಯೆ ಮತ್ತು ಅದಕ್ಕಾಗಿ ಸಂಘರ್ಷ ನಡೆಯುವುದನ್ನು ಕುವೆಂಪು ಅವರ ಕೃತಿಗಳಲ್ಲಿ ಕಾಣುತ್ತೇವೆ.

ಹಳೇ ಪೈಕದವರು ಸ್ವಂತ ಜಮೀನು ಹೊಂದಬಾರದು ಎಂಬ ಒಕ್ಕಲಿಗರ ನಿಲುವನ್ನು ಸೇಸಾನಾಯ್ಕ ಪ್ರಜ್ಞಾಪೂರ್ವಕವಾಗಿ ಮೀರುವಂತಹದಾಗಲಿ, ಕಳ್ಳು ಇಳಿಸುವುದು ಹಳೇ ಪೈಕದವರ ಹಕ್ಕು ಅದನ್ನು ಬೇರೆಯವರು ಮಾಡಬಾರದೆಂಬ ನಿಷೇಧವನ್ನು ಅಪ್ರಜ್ಞಾಪೂರ್ವಕವಾಗಿ ಬೈರ ಮೀರುವುದಾಗಲಿ ಬಂಡಾಯದ ಸೂಚನೆಯೇ. ಆದರೆ ಮಲೆನಾಡ ಪರಿಸರದಂತಹ ಸಮಾಜಗಳಲ್ಲಿ ಸ್ಪಷ್ಟ ಸಂಘಟಿತ ಬಂಡಾಯದ ಸೂಚನೆ ಏಕಿಲ್ಲ ಎಂಬುದರ ಬಗ್ಗೆ ವಿಮರ್ಶಕರಾದ ಡಿ.ಆರ್.ನಾಗರಾಜ್ ಬ್ರಿಟೀಷ್ ಚರಿತ್ರೆಕಾರ 'ಹಾಟ್‌ಸ್ಲಾಮ್'ನ ಮಾತನ್ನು ಇಟ್ಟುಕೊಂಡು –

"ಬಂಡವಾಳಶಾಹಿಯಲ್ಲದ ಹಿಂದುಳಿದ ಸಮಾಜಗಳಲ್ಲಿ ವರ್ಗ ಪ್ರಜ್ಞೆ ಪೂರ್ಣವಾಗಿ ಹರಳುಗಟ್ಟಲು ಸಾಧ್ಯವಿಲ್ಲ. ಆದ್ದರಿಂದ ಇಲ್ಲೆಲ್ಲಾ ವರ್ಗ ಸಂಘರ್ಷ ಅಸಂಘಟಿತವಾದ ಪ್ರಿಮಿಟಿವ್ ಎನ್ನಬಹುದಾದ

ಕ್ರಿಯೆಗಳ ಮೂಲಕ ವ್ಯಕ್ತವಾಗುತ್ತದೆ ; ವ್ಯವಸ್ಥೆಯ ಕಟ್ಟುಪಾಡುಗಳ ಹಿಂಸಾತ್ಮಕ ಉಲ್ಲಂಘನೆಯಾಗಿ ವ್ಯಕ್ತವಾಗುತ್ತದೆ. ಈ ಸ್ವರೂಪದ ವರ್ಗ ಸಂಘರ್ಷದ ಅಥೆಂಟಿಕ್ ಚಿತ್ರಣವನ್ನು ನಾವು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ನೋಡಬಹುದು"[೧೯]

ಎಂದು ವಿವರಿಸಿರುವುದನ್ನು ಕಾಣಬಹುದು. ಅಂದರೆ ಸೇಸಾನಾಯ್ಕನ ವಿರೋಧ, ಗುತ್ತಿಯ ಬಂಡಾಯ, ಸಣ್ಣಬೀರನ ಸೇಡು, ಮುಕುಂದಯ್ಯನ ಕ್ರೈಸ್ತಧರ್ಮದ ವಿರುದ್ಧ ಪ್ರತಿಭಟನೆ, ಕಾನೂರು ಹೆಗ್ಗಡತಿಯಲ್ಲಿ ಬರುವ ಅಣ್ಣಯ್ಯಗೌಡ – ಓಬಯ್ಯನ ಪ್ರತಿಭಟನೆಯೆಲ್ಲ ಅಸಂಘಟಿತ ವಲಯದಲ್ಲಿ ನಡೆಯುವಂತಹವು, ವೈಯಕ್ತಿಕ ಮಟ್ಟದಲ್ಲಿ ಅಭಿವ್ಯಕ್ತವಾಗುವಂತಹವು. ಕಾರಣ ಸಂಘಟಿತ ಸ್ವರೂಪಕ್ಕೆ ಈ ಪರಿಸರ ಇನ್ನೂ ಪಕ್ವವಾಗಿರಲಿಲ್ಲ ಎನ್ನಬಹುದು.

ವೆಂಕಪ್ಪ ಜೋಯಿಸ ಪುರೋಹಿತ ; ಜಮೀನ್ದಾರನಲ್ಲ. ಆದ ಕಾರಣ ಚಂದ್ರೇಗೌಡನಲ್ಲಿ ಸಾಲಗಾರ. ಆದರೆ ಈ ಸಾಲ ಜಾತಿ ಶ್ರೇಣಿಯಲ್ಲಿ ಮೇಲುಸ್ತರದ ವೆಂಕಪ್ಪಯ್ಯನಿಗೆ ಶೂಲವಾಗಿಯೇನೂ ಇರಲಿಲ್ಲ. ಮತ್ತು ಚಂದ್ರೇಗೌಡನಿಂದ ಬಹಳ ಉದಾರತೆಯಿಂದಲೂ, ಗೌರವದಿಂದಲೂ ಉಡುಗೊರೆ ಪಡೆಯುವಂತೆ ಸಾಲ ಪಡೆಯುತ್ತಿದ್ದ. ಇತರ ಸಾಲಗಾರರಿಗೆ ಚಂದ್ರೇಗೌಡನ ಪರ ವಕಾಲತ್ತು ವಹಿಸಿ ಉಪದೇಶದ ಮಾತನ್ನಾಡುವುದು ಅತ್ಯಂತ ವ್ಯಂಗ್ಯವಾಗಿ ಚಿತ್ರತವಾಗಿದೆ. ಕೆಳ ಕಾನೂರು ಅಣ್ಣಯ್ಯಗೌಡನಿಗೆ.

"ಅಣ್ಣಯ್ಯ, ನಿನಗೆಷ್ಟು ವಯಸ್ಸಾಗಿದೆ. ಇನ್ನೂ ಗೊತ್ತಾಗುವುದಲ್ಲವೇನೊ? ಸಾಲ ಮಾಡುತ್ತಲೇ ಇದ್ದು ಬಿಟ್ಟರೆ ಬೆಳೆಯುತ್ತಲೇ ಹೋಗುತ್ತದೆ......... ಋಣ ಎಂಬುದು ಕುತ್ತಿಗೆಗೆ ಕಲ್ಲುಗುಂಡು ಕಟ್ಟಿಕೊಂಡ ಹಾಗೆ........."[೨೦] ಎಂದು ಸಾಲದ ಮಹಿಮೆಯ ಬಗ್ಗೆ ಉಪದೇಶ ನೀಡುತ್ತಲೇ ಚಂದ್ರೇಗೌಡನಿಂದ ಇನ್ನಷ್ಟು ಹಣವನ್ನು ತನ್ನ ಲೆಕ್ಕ ಬೇರೆ, ದೇವರ ಲೆಕ್ಕ ಬೇರೆ ಎಂದು ಪಡೆಯುವ ಚಾಣಕ್ಷತನವನ್ನು ಗಮನಿಸಬಹುದು. ಅದೇ ಕೆಳಕಾನೂರು ಅಣ್ಣಯ್ಯಗೌಡ ಚಂದ್ರೇಗೌಡನ ಜಾತಿಯವನೇ ಆದರೂ, ತನ್ನ ಒಕ್ಕಲಾದ, ಸಾಲಿಗನಾದ ಆತನನ್ನು ನಡೆಸಿಕೊಳ್ಳುವ ರೀತಿಯೇ ಬೇರೆ. ಕಣ್ಣೀರು ಹಾಕುತ್ತಾ ಬರಿಗೈಯಲ್ಲಿ ಮನೆಗೆ ಹಿಂತಿರುಗುತ್ತಾನೆ. ಇಲ್ಲಿ ಒಂದು ಜಾತಿ ತಾರತಮ್ಯ ಇನ್ನೊಂದು ವರ್ಗತಾರತಮ್ಯ ಕಾಣಬಹುದು. ಹರಿದ ನೋಟಿನ ಮತ್ತು ಸಾಲದ ಹಿನ್ನೆಲೆಯಲ್ಲಿ ಅಣ್ಣಯ್ಯಗೌಡನ ಮಗ ಓಬಯ್ಯನ ಮೇಲೆ ಕ್ರೂರವಾದ ಹಲ್ಲೆ ನಡೆಯುತ್ತದೆ. ಇದಕ್ಕೆ ಪ್ರತಿಭಟನೆ ಯಾವ ರೀತಿಯದೆಂದರೆ ಈ ಸಾಹುಕಾರನಿಗೆ ಹೇಳದೆ ಕೇಳದೆ ಇನ್ನೊಬ್ಬ ಸಾಹುಕಾರನಲ್ಲಿ ಓಡಿ ಹೋಗಿ ಸೇರುವಷ್ಟರಲ್ಲಿ ಸಮಾಪ್ತಿಯಾಗುತ್ತದೆ.

ಮೈಸೂರಿನಿಂದ ಬೇಸಿಗೆ ರಜಾಕ್ಕೆ ಹಿಂತಿರುಗಿದ ಹೂವಯ್ಯನ ಬಗ್ಗೆ ವೆಂಕಪ್ಪ ಜೋಯಿಸರಿಗೆ ಅಳುಕು ಮತ್ತು ಅಸೂಯೆ. ಶೂದ್ರನಾದ ಈತನಿಗೆ ವೇದ ಉಪನಿಷತ್‌ಗಳ ಪರಿಚಯವಿದೆ. ಹಳ್ಳಿಗರ ಮೌಢ್ಯವನ್ನು ನಿವಾರಿಸಲು ಮಾಡುತ್ತಿದ್ದ ಪ್ರಯತ್ನವು ತಮ್ಮ ಆದಾಯಕ್ಕೆ ಹೊಡೆತವೆಂದು ಸಹಜವಾಗಿಯೇ ಭಾವಿಸಿದ್ದರು. ಇಂತವರನ್ನು ಹೂವಯ್ಯ ತರಾಟೆಗೆ ತೆಗೆದುಕೊಳ್ಳುವುದನ್ನು ಗಮನಿಸಬಹುದು. "ನೀವು ತಿಳಿದವರೆಂದುಕೊಂಡು, ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶಮಾಡಿ ನಿಮಿತ್ತ ಹೇಳುವುದು......... ಸತ್ಯನಾರಾಯಣ ವ್ರತ ಮಾಡಿಸುವುದು......... ಬಲಿಕೊಡಿಸುವುದು, ಇದರಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದೀರಿ. ಟ್ರಂಕು ತಗಲಿ ಬೆನ್ನು ನೋವಾಗಿದ್ದರೆ ಔಷಧಿ ಮಾಡಿ ಎಂದು ಹೇಳುವ

ಬದಲು ಬೂದಿ ಕುಂಕುಮ ಹಚ್ಚಿ ಮಂತ್ರ ಹಾಕಿಸಿ ಎಂದು ಹೇಳುತ್ತಿದ್ದೀರಲ್ಲಾ! ಇದು ಯಾವ ಶಾಸ್ತ್ರದಲ್ಲಿ ಹೇಳಿದೆ....."[೨೧] ಎಂದು ಮುಂತಾಗಿ ಹೇಳುವ ಮಾತಲ್ಲಿ ವೆಂಕಪ್ಪಯ್ಯನವರ ಮೇಲೆ ವೈಯಕ್ತಿಕ ದ್ವೇಷವಿಲ್ಲ. ಒಟ್ಟು ಪುರೋಹಿತಶಾಹಿಯ ಶೋಷಣಾಭರಿತ ಬುದ್ಧಿಯನ್ನು ಖಂಡಿಸುತ್ತಾನಷ್ಟೆ. ಇದು ಜಾತಿಯ ಘರ್ಷಣೆಯಲ್ಲ ; ಅವಿಚಾರಕ್ಕೂ ಸುವಿಚಾರಕ್ಕೂ ನಡೆವ ವೈಚಾರಿಕ ಘರ್ಷಣೆ.

ಮಗುವಿನ ಹೆಸರಿಡುವ ವಿಚಾರದಲ್ಲಿ ಪುರೋಹಿತಶಾಹಿ ನಡೆದುಕೊಳ್ಳುತ್ತಿರುವ ವರ್ತನೆಯನ್ನು ಚಿನ್ನಯ್ಯ ಖಂಡಿಸುತ್ತಾನೆ. ಈ ಬ್ರಾಹ್ಮಣರು ನಮಗೆ ಒಳ್ಳೆ ವಿದ್ಯೆ, ಬುದ್ಧಿ ನೀಡದಿರುವುದಿರಲಿ ಒಳ್ಳೆಯ ಹೆಸರನ್ನಾದರೂ ನೀಡಬಾರದೆ ಎಂದು ತನ್ನ ಮಗನಿಗೆ ಸೀತೆ ಓದಿದ ಕಾದಂಬರಿಯೊಂದರಲ್ಲಿ ಬರುವ 'ರಮೇಶ' ಎಂಬ ಹೆಸರನ್ನಿಡುತ್ತಾನೆ. ಯಾರು ಯಾರು ತಮ್ಮ ಮಕ್ಕಳಿಗೆ ಯಾವ ಹೆಸರನ್ನಿಡಬೇಕೆಂದು ವಿಷ್ಣುಸ್ಮೃತಿ ನಿಗದಿಪಡಿಸುತ್ತದೆ.

"ಬ್ರಾಹ್ಮಣನ ಹೆಸರು ಶುಭವನ್ನು ಸೂಚಿಸಬೇಕು, ಕ್ಷತ್ರಿಯನ ಹೆಸರು ಶೌರ್ಯವನ್ನು, ವೈಶ್ಯನ ಹೆಸರು ಶ್ರೀಮಂತಿಕೆಯನ್ನು, ಶೂದ್ರನ ಹೆಸರು ತಿರಸ್ಕಾರವನ್ನೂ ಸೂಚಿಸಬೇಕು".[೨೨]

ಈ ಹಿನ್ನೆಲೆಯಲ್ಲಿ ಕರಿಯ, ಕೆಂಚ, ತಿಮ್ಮ, ಕಾಳ ಮೊದಲಾದ ಹೆಸರುಗಳನ್ನು ಪುರೋಹಿತರು ಶೂದ್ರರಿಗೆ ಇಟ್ಟುಕೊಡುತ್ತಿದ್ದರು. ಇದನ್ನು ಚಿನ್ನಯ್ಯನಂತ ಹೊಸ ತಲೆಮಾರು ವಿರೋಧಿಸುವ, ಮೀರುವ ಪ್ರಯತ್ನ ಕಾಣಬಹುದು. ಇದು ಕೂಡ ಸಂಸ್ಕೃತಿಕರಣವನ್ನೇ ಸೂಚಿಸುತ್ತದೆ.

ಜಮೀನ್ದಾರಿಯ ಕ್ರೌರ್ಯ ಶ್ರಮಿಕವರ್ಗವನ್ನು ಹೇಗೆ ಶೋಷಿಸುತ್ತಿದ್ದವು ಎಂಬುದು ಕುವೆಂಪು ಎರಡು ಕೃತಿಗಳಲ್ಲಿ ವ್ಯಾಪಕವಾಗಿಯೇ ಬಂದಿದೆ. ಜಮೀನ್ದಾರಿ ಪದ್ಧತಿಯಲ್ಲಿ ಒಡೆಯರ ಆಳುಗಳ ಹೆಣ್ಣು-ಗಂಡಿನ ಒಲವು, ಅಕ್ಕರೆ, ಪ್ರೀತಿ, ಪ್ರೇಮ, ಮದುವೆ ಎಲ್ಲ ಒಡೆಯರ ಇಚ್ಛೆಯನ್ನವಲಂಬಿಸಿತ್ತು. ಬೆಟ್ಟಳ್ಳಿ ದೊಡ್ಡ ಬೀರನ ಮಗಳು (ಮ.ಮ.) ತಿಮ್ಮಿ ಸೋದರ ಮಾವ ಸಿಂಭಾವಿ ನಾಯಿಗುತ್ತಿಯನ್ನು ಒಲಿದದ್ದು, ಸೇಸಿ ಸಹಕರಿಸಿದ್ದು ದೊಡ್ಡ ಪ್ರಮಾದವಾಗಿ ಹೋಗುತ್ತದೆ. ಯಾರೋ ಮಾಡಿದ ತಪ್ಪಿಗೆ (ಒಡೆಯರ ದೃಷ್ಟಿಯಲ್ಲಿ) ಇನ್ಯಾರೋ ಕ್ರೂರ ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಗುತ್ತಿ ತಿಮ್ಮಿ ಓಡಿ ಹೋದದ್ದಕ್ಕೆ ದೊಡ್ಡ ಬೀರ, ಸಣ್ಣ ಬೀರ ಹೊನ್ನಳ್ಳಿ ಹೊಡೆತ ಸಾಬರಿಂದ ತಿನ್ನಬೇಕಾಗುತ್ತದೆ. ಇದನ್ನು ತಡೆಯುವವಳು ಸೇಸಿ. ಮಗನ ಜೀವ ಕಾಪಾಡಲು ಅದುವರೆಗಿನ ತನ್ನೆಲ್ಲ ಸಮಾಜಿಕ ದಿಗ್ಬಂಧನಗಳನ್ನು, ಭಯವನ್ನು ಮೀರಿ ನಿಲ್ಲುತ್ತಾಳೆ ; ಮಾತೃತ್ವ ಶಕ್ತಿಯ ಪತ್ರೀಕವಾಗಿ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಾಳೆ. ಮಲೆನಾಡ ಪರಿಸರದಲ್ಲಿ ಮೇಲ್ಜಾತಿ ಅದರಲ್ಲೂ ಒಡೆಯರನ್ನು ಕಂಡರೆ ಗಿಡ ಮರೆಯಾಗುವುದು ಅಥವಾ ದೂರಿಂದಲೇ ಸೊಂಟ ಬಗ್ಗಿಸಿ ನಮಿಸಿ ಭಯದಿಂದ ನಿಲ್ಲುವುದು ದಲಿತ ಸ್ತ್ರೀಯರಿಗೆ ಪರಂಪರಗತವಾಗಿ ಬಂದ ಸಹಜವಾದ ನಡವಳಿಕೆಯಾಗಿರುವಾಗ ಸೇಸಿಯಂತವಳು ಗೌಡನ ಎದುರಿಗೆ ಗಂಡ-ಮಗನ ಬಿಡುಗಡೆಯನ್ನು ಬೇಡುವಷ್ಟು ದಿಟ್ಟತನ ಮೆರೆದದ್ದು ಸಾಮಾನ್ಯ ಸಂಗತಿಯಲ್ಲ.

"ಭೂಮಾಲಿಕರ ಮತ್ತು ಕೆಳವರ್ಗದವರ ನಡುವಿನ ಘರ್ಷಣೆ ಇಡೀ ಕಾದಂಬರಿಯುದ್ದಕ್ಕೂ ಒಳವಿದ್ಯುತ್ತಿನಂತೆ ಹರಿದಿದೆ.... ಜಮೀನ್ದಾರ ವರ್ಗದ ವಿವಿಧ ರೀತಿಯ ಹಿಂಸೆಗಳೇ ಇಲ್ಲಿಯ ಮುಖ್ಯ ಘಟನೆಗಳಿಗೆ ಕಾರಣ. ಲುಂಗಿಸಾಬಿ, ಇಜಾರದಸಾಬಿ, ಅಜ್ಜಿಸಾಬಿ ಮುಂತಾದವರು ಭೂಮಾಲಿಕ ವರ್ಗದ

ಗುಂಡಾ ಪಡೆಯು ಇದೆ. ಇವರ ವಿರುದ್ಧ ಜೀತದವರು, ಒಕ್ಕಲುಗಳ, ಕೆಳಜಾತಿಯರ ಉಗ್ರಪ್ರತಿಭಟನೆಯೂ ಇದೆ"[೨೩]

ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಕಲ್ಲೇಗೌಡರು ವಸೂಲಿಸಾಬರಿಂದ ದೊಡ್ಡಬೀರ, ಸಣ್ಣಬೀರನಿಗೆ ಹೊಡೆಸುವಾಗ ಕೆಳವರ್ಗದಿಂದ ಬಂದ ದಲಿತ ಹೆಣ್ಣು ಅದನ್ನು ತಡೆದು ನಿಲ್ಲಿಸುತ್ತಾಳೆ. ಹೊಡೆತ ತಿಂದ ಸಣ್ಣಬೀರ ತನಗೆ ಹೊಡೆದ ಇಜಾರದ ಸಾಬಿಯ ಮೇಲೆ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಾನೆ. ಕರಿಮೀನು ಸಾಬರ ಕುದುರೆ ಗಂಟಿನಲ್ಲಿದ್ದ ಉಪ್ಪು ಮೀನು ಕದಿಯುತ್ತಾನೆ, ಕಟ್ಟಿದ ಕುದುರೆ ಬಿಚ್ಚಿ ಓಡಿಸುತ್ತಾನೆ. ಗುತ್ತಿಯ ಆಡನ್ನು ಸಾಬರು ಕದ್ದುಕೊಯ್ದಿದಾರೆ ಎಂದಾಗ ಪ್ರತಿಕಾರಕ್ಕೆ ಸುಸಮಯವೆಂದು ಭಾವಿಸುತ್ತಾನೆ. ಹೊಲೆಯರಿಗೂ ಸಾಬರಿಗೂ ಆಡಿನ ವಿಚಾರದ ಹೊಡೆದಾಟದಲ್ಲಿ ಇಜಾರದ ಸಾಬಿನ ಬೆರಳು ಕತ್ತರಿಸಿ ಬಲವಾದ ಏಟು ಹೊಡೆದು ಗುಂಪಿನ ನಡುವೆ ತಪ್ಪಿಸಿಕೊಂಡು ಹೋಗುವುದರ ಮೂಲಕ ತನ್ನ ಪ್ರತೀಕಾರ ತೀರಿಸಿಕೊಳ್ಳುತ್ತಾನೆ. ಸಾಹುಕಾರ ಮಂಜಯ್ಯನ ಪರವಾಗಿ ವಸೂಲಿಗೆ ಬಂದ ಲುಂಗಿಸಾಬು ವೆಂಕಟಪ್ಪನಾಯಕನಿಂದ ಹಿಗ್ಗಾಮುಗ್ಗ ಹೊಡೆತ ತಿನ್ನಬೇಕಾಗುತ್ತದೆ. ಆಗುಂಬೆ ಹಾದಿಯಲ್ಲಿ ನಡೆಯುವ ಕೊಲೆ ಸುಲಿಗೆಗಳು ಇವರಿಂದಲೇ ಎಂದು ಈ ಗುಂಡಾ ಪಡೆಗಳಿಗೆ ಆರೋಪ ಮಾಡಿ ಮಾತನಾಡಿಕೊಳ್ಳುವುದರಲ್ಲಿಯೂ, ವ್ಯಂಗ್ಯ, ಭಯ, ತಿರಸ್ಕಾರದಿಂದ ನೋಡುವಲ್ಲಿಯೂ ಕೆಳಸ್ತರದವರ ಪ್ರತಿಭಟನೆಯು ವ್ಯಕ್ತವಾಗುವುದನ್ನು ಕಾಣಬಹುದು.

"ಜಾತಿಯ ಪಿರಾಮಿಡ್ ರಚನೆಯಲ್ಲಿ ಬ್ರಾಹ್ಮಣನ ಪಾದ ಶೂದ್ರನ ತಲೆಯ ಮೇಲಿದ್ದರೆ ಶೂದ್ರನ ಪಾದಗಳು ದಲಿತನ ತಲೆಯ ಮೇಲಿವೆ. ಹೀಗಾಗಿ ದಲಿತರ ಮೇಲಿನ ತುಳಿತವು ಬ್ರಾಹ್ಮಣನಿಗಿಂತ ಶೂದ್ರನಿಂದ ನೇರವೂ ತೀವ್ರವೂ ಆಗಿ ಪರಿಣಮಿಸಿ ಅಮಾನುಷವಾಗುತ್ತದೆ. ಕುವೆಂಪು ತಮ್ಮ ಕಾದಂಬರಿಯಲ್ಲಿ ದಲಿತರ ಇಂತ ಪರಿಸ್ಥಿತಿಯನ್ನು ವರ್ಣಿಸುತ್ತಾರಾದರೂ ಅವರ ಅಂತಃಕರಣವೆಲ್ಲ ಊಳಿಗಮಾನ್ಯ ಜಮೀನುದಾರರ, ಗೌಡರ ಪರವಾಗಿದ್ದು, ಬ್ರಾಹ್ಮಣ ವಿರೋಧಿಯಾಗಿದೆಯೇ ಹೊರತು ದಲಿತರ ಪರವಾಗಿಲ್ಲ".[೨೪]

ಕೃಷ್ಣಪ್ಪನವರ ಈ ಅಭಿಪ್ರಾಯವನ್ನು ಒಪ್ಪುವುದು ಕಷ್ಟ. ಏಕೆಂದರೆ ಕುವೆಂಪು ಮಲೆನಾಡಿನ ಶೂದ್ರರ ಬಗೆಗೆ ಮಾತ್ರವೇ ಕುರಿತು ಕೃತಿ ರಚನೆ ಮಾಡಿಲ್ಲ. ಸಮಗ್ರವಾಗಿ ಮಲೆನಾಡಿನ ಬದುಕೇ ಕಲಾತ್ಮಕ ರೂಪದಲ್ಲಿ ದಾಖಲೆಗೊಂಡಿದೆ. ಯಾವುದೋ ಸಾಕ್ಷ್ಯಚಿತ್ರದಂತೆ ಒಂದು ಸಮುದಾಯದ ಪರವಾದ ಧೋರಣೆ ಇಲ್ಲಿ ಕಂಡುಬರುವುದಿಲ್ಲ ಕುವೆಂಪು ಪುರೋಹಿತಶಾಹಿ ಕ್ರೌರ್ಯವನ್ನು ಹೇಗೆ ಚಿತ್ರಸಬಲ್ಲರೋ ಅದಕ್ಕಿಂತ ಭೀಕರವಾಗಿಯೇ ಜಮೀನ್ದಾರಿ ಕ್ರೌರ್ಯವನ್ನು ಚಿತ್ರಿಸಿದ್ದಾರೆ. 'ಕಾನೂರು ಹೆಗ್ಗಡತಿ'ಯ ಚಂದ್ರೇಗೌಡನಿಂದ ಚರ್ಮಸುಲಿಯುವಂತೆ ಪೆಟ್ಟು ತಿನ್ನುವ ಓಬಯ್ಯನನ್ನು ಚಿತ್ರಿಸುವಂತೆ ಕಲ್ಲೇಗೌಡನಿಂದ ದಂಡಿತನಾಗುವ ದೊಡ್ಡಬೀರ, ಸಣ್ಣಬೀರನ ಯಾತನೆಯನ್ನು ಚಿತ್ರಿಸಿದ್ದಾರೆ. ಈ ಸಂದರ್ಭದಲ್ಲಿ ಓಬಯ್ಯನಾಗಲಿ, ಸಣ್ಣಬೀರನಾಗಲಿ ಒಡೆಯರ ವಿರುದ್ಧ ಒಂದು ಮಾತನ್ನು ಆಡುವುದಿಲ್ಲ ನಿಜ. ಹಾಗೆಂದು ಮಾತ್ರಕ್ಕೆ ಲೇಖಕರು ಜಮೀನ್ದಾರರ ಪರವಾಗಿದ್ದಾರೆ ಎಂದರ್ಥವಲ್ಲ. ಕುವೆಂಪು ಯಾವಾಗಲೂ ಶೋಷಿತರ ಪರವಾಗಿಯೇ ತಮ್ಮ ಸಾಹಿತ್ಯದುದ್ದಕ್ಕೂ ದನಿ ಎತ್ತುತ್ತಾ ಬಂದವರು.

ಸಣ್ಣಬೀರ ಗುತ್ತಿಯಂತೆ ಜಾಣನಲ್ಲ ; ಕಿಲಾಡಿಯಲ್ಲ. ಒಡೆಯರ ಮೇಲೆ ನಿಷ್ಠೆಯುಳ್ಳ ಸಣ್ಣಬೀರ, ದೊಡ್ಡಬೀರರಂತವರಲ್ಲಿ ವ್ಯವಸ್ಥೆಯ ವಿರುದ್ಧ ಬಂಡಾಯವೇಳುವಂತೆ, ಪ್ರತಿಭಟಿಸುವಂತೆ ಅಪೇಕ್ಷಿಸುವುದು ಸರಿಯಲ್ಲ. ಕಲ್ಲೇಗೌಡರ ಕ್ರೌರ್ಯವನ್ನು ಸ್ವತಃ ಅವರ ಹೆಂಡತಿ ದೊಡ್ಡಮ್ಮ ಹೆಗ್ಗಡತಿಯೇ ಬೆಂಬಲಿಸುತ್ತಿರಲಿಲ್ಲ. ನಾನಾ ವಿಧದಲ್ಲಿ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಳು. ಸಣ್ಣಬೀರನ ಮೇಲೆ ನಡೆದ ಹಲ್ಲೆಯನ್ನು ತಡೆಯಲು ಮಗನಲ್ಲಿ ಮೊರೆಯಿಡುತ್ತಾಳೆ. ದೇವಯ್ಯ ಮೊದಲು ಉದಾಸೀನ ಮಾಡಿದರೂ ತನ್ನ ತಂದೆ ಕಾರ್ಯಕ್ಕೆ ತಾನೆ ಅಸಹ್ಯಪಟ್ಟು ಸಣ್ಣಬೀರನಿಗೆ ಔಷಧೋಪಚಾರಕ್ಕೆ ಮುಂದಾಗುತ್ತಾನೆ. 'ಕಾನೂರು ಹೆಗ್ಗಡತಿ'ಯ ಚಂದ್ರೇಗೌಡನಿಂದ ಪಡಿ ನಿರಾಕರಣೆಗೆ ಒಳಗಾದ ಬೈರನ ಮನೆಗೆ ಹೂವಯ್ಯನೇ ಹೋಗಿ ಪಡಿ ತಲುಪಿಸುತ್ತಾನೆ. ಸೋಮನಂತ ಜಾಣಪೆದ್ದನನ್ನು ಹೂವಯ್ಯ ಮನುಷ್ಯನನ್ನಾಗಿ ರೂಪಿಸುತ್ತಾನೆ. ಸೀತೆ ನಿಂಗನ ಮಗನಿಗೆ ಅಕ್ಷರ ಕಲಿಸುತ್ತಾಳೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಚಿನ್ನಯ್ಯ-ಮುಕುಂದಯ್ಯ ಹೇಗೆ ಪ್ರಾಮುಖ್ಯತೆಯನ್ನು ಪಡೆದ ಪ್ರೇಮದ ಎಳೆಯ ಕಥೆಯೋ ಹಾಗೆ ಗುತ್ತಿ-ತಿಮ್ಮಿಯರ ಪ್ರೇಮದ ಎಳೆ ಇದೆ. ಪೀಂಚಲು-ಐತನ ಸುಂದರ ಸಾಂಸಾರಿಕ ಚಿತ್ರವಿದೆ. ಹೀಗೆ ಬೇಕಾದಷ್ಟು ದಲಿತಪರವಾಗಿರುವ ಅರ್ಥಾತ್ ಶೋಷಿತರ ಪರವಾಗಿರುವ ನಿಲುವನ್ನು ಅನೇಕ ಸಂದರ್ಭಗಳು ಧ್ವನಿಪೂರ್ಣವಾಗಿ ಚಿತ್ರಿತವಾಗಿವೆ. ಹಾಗೆಯೇ ಈ ವಿಮರ್ಶಕರ ಇನ್ನೊಂದು ಆಕ್ಷೇಪಣೆಯನ್ನು ಪರಿಶೀಲಿಸಬಹುದು.

"ಹಳೆಮನೆ ತಿಮ್ಮಪ್ಪ ಹೆಗಡೆಯನ್ನು ಶುಚಿಯಾದ ಚೀನಿ ನಾಯಿಗೂ, ಕುಳವಾಡಿ ಸಣ್ಣನ ಮಗಳು ಪುಟ್ಟಿಯನ್ನು ದದ್ದು ಹಿಡಿದು ವಿಕಾರವಾದ ಬೀದಿನಾಯಿಗೂ ಹೋಲಿಸಿರುವ ಲೇಖಕರ ಹೀನೋಪಮೆ ಖಂಡನೀಯ..... ದಲಿತ ಹೆಣ್ಣು ಮಕ್ಕಳ ಮಾನಭಂಗಕ್ಕಿಂತ ಗೌಡ ಹುಡುಗನ ಪಾವಿತ್ರತೆ ಹಾಳಾಯಿತಲ್ಲಾ"[೨೫] ಎಂಬ ಲೇಖಕರ ಕಳಕಳಿ ಖಂಡನೀಯ ಎನ್ನುತ್ತಾರೆ. ಆದರೆ ಈ ಮಾತನ್ನು ಸಮರ್ಥಿಸುವುದು ಕಷ್ಟ. ಕೃತಿಯ ಆರಂಭದಲ್ಲಿಯೇ ಯಾರೂ ಮುಖ್ಯರಲ್ಲ ; ಯಾರೂ ಅಮುಖ್ಯರಲ್ಲ ಎಂದಿರುವುದನ್ನು ಗಮನಿಸಬೇಕು. ಕಾದಂಬರಿಯೊಳಗೆ ಎಲ್ಲ ವಸ್ತು, ವ್ಯಕ್ತಿ, ಪ್ರಾಣಿಗಳಿಗೂ ಅವಕಾಶ ನೀಡಿದ್ದಾರೆ. ಮನುಷ್ಯ ಜಗತ್ತಿನ ಒಳಸೂಕ್ಷ್ಮಗಳು ಹಾಗೆಯೇ ಸಹಜ ಬದುಕಿನ ಲಹರಿಯಲ್ಲಿ ಪ್ರಾಣಿ, ಪಕ್ಷಿ, ಕಾಡು, ನದಿ, ಬೆಟ್ಟ ಮುಂತಾಗಿ ನೂರಾರು ಸಂಗತಿಗಳ ಜೊತೆಗೆ ಬದುಕು ರೂಪುಗೊಂಡ ಅಖಂಡದೃಷ್ಟಿ ಇಲ್ಲಿ ನಿರೂಪಿತವಾಗಿದೆ. ತಿಮ್ಮಪ್ಪಹೆಗಡೆ ಚೀನಿನಾಯಿ ಎಂಬ ಉಪಮೆ ಶ್ರೇಷ್ಠವೆಂದು ಭಾವಿಸಬೇಕಿಲ್ಲ. ಆರ್ಥಿಕವಾಗಿ ಸ್ಥಿತಿವಂತನೂ, ಸಾಮಾಜಿಕವಾಗಿ ಗೌರವ ಸ್ಥಾನದಲ್ಲಿರುವ ವ್ಯಕ್ತಿಯಾದರೂ ಅವನ ಅನೈತಿಕವಾದ ನಡವಳಿಕೆಯನ್ನು, ಕಾಮುಕತನವನ್ನು ಚೀನಿನಾಯಿ ಎಂಬ ಪದಕ್ಕೆ ಅನ್ವಯಿಸಿದೆ. ಯಾವ ದೇಶದ್ದಾದರೂ ನಾಯಿ, ನಾಯಿಯೇ. ಇದು ಅವನ ಸ್ವಭಾವಕ್ಕೆ ಸಂಕೇತವಾದ ಉಪಮೆ. ಅಂತೆಯೇ ದದ್ದು ಹಿಡಿದ ನಾಯಿ ಎಂದರೆ ಕೀಳೆಂದು ಭಾವಿಸಬೇಕಿಲ್ಲ. ದದ್ದು ಒಂದು ರೋಗ, ದೇಹಕ್ಕೆ ಅಂಟಿಕೊಂಡಿದ್ದು, ಇಲ್ಲಿ ಬಡತನ, ಅನಕ್ಷರತೆ, ಅಜ್ಞಾನ, ಅಸಹಾಯಕತೆ ಮುಂತಾದ ಸ್ಥಿತಿಯಲ್ಲಿ ಬದುಕುತ್ತಿರುವ ರೋಗಕ್ಕೆ ಪುಟ್ಟಿ ಈಡಾದವಳು ಎಂದರ್ಥ. ಇಂತಹ ಸಂದರ್ಭದಲ್ಲಿ ಪುಟ್ಟಿಯ ಸಂಬಂಧವನ್ನು ಏರ್ಪಡಿಸಿಕೊಳ್ಳುವ ತಿಮ್ಮಪ್ಪ ಹೆಗಡೆಯ ನಡವಳಿಕೆ ಬಗ್ಗೆ ಅಸಹ್ಯವಿದೆ ; ತಿರಸ್ಕಾರವಿದೆ. ಹಾಗೆ ಪುಟ್ಟಿಯ ದುರುಪಯೋಗ ಗುತ್ತಿಯಿಂದಲೂ ಆಗಿದೆ. ಈಗ ತಿಮ್ಮಪ್ಪ ಹೆಗಡೆಯಿಂದಲೂ ಆಗುತ್ತಿದೆ ಎಂದು ಆಕೆಯ ಬಗ್ಗೆ ಮರುಕವಿದೆ

ಎಂಬುದನ್ನು ಈ ಉಪಮೆ ಧ್ವನಿಸುತ್ತದೆ. ಆದ್ದರಿಂದ ಅಖಂಡ ದೃಷ್ಟಿಯಿಂದ ನಿರೂಪಿತವಾದ ಕಾದಂಬರಿಯನ್ನು ಪಾರ್ಶ್ವದೃಷ್ಟಿಯಿಂದ ನೋಡುವ ನೋಟ ಸಮಗ್ರವಾಗಿ ಅರ್ಥೈಸಿಕೊಳ್ಳುವಲ್ಲಿ ಸೋಲುತ್ತದೆ ಎನ್ನಬಹುದು.

ಹಾಗೆ 'ಕಾನೂರು ಹೆಗ್ಗಡತಿ'ಯಲ್ಲಿ ನೇಗಿಲು ಮುರಿದದ್ದು ಹೂವಯ್ಯ. ಆದರೆ ಅದಕ್ಕೆ ಜವಾಬ್ದಾರ ಬೈರನಾಗುತ್ತಾನೆ. ಚಂದ್ರೇಗೌಡನಿಂದ ಪಡಿ ಕಳೆದುಕೊಂಡು, ಹೊಡೆತ ತಿಂದು ಮನೆಗೆ ಹೋದ ಬೈರ ತನ್ನ ಹೆಂಡತಿಗೆ ಯಾವುದೋ ನೆಪದಿಂದ ಬಡಿಯುತ್ತಾನೆ. ಹೀಗೆ ಯಾರೊ ಮಾಡಿದ ತಪ್ಪಿಗೆ ಇನ್ಯಾರೋ ಶಿಕ್ಷೆ ಅನುಭವಿಸುವ ದುರಂತವನ್ನು ಕಾಣಬಹುದು. ಆಧುನಿಕತೆಯ ಶಿಕ್ಷಣ ಪಡೆದ ಹೂವಯ್ಯ ಈ ಪರಿಸರದ ಎಲ್ಲ ಜೀವಿಗಳನ್ನು ಸಮಾನವಾದ ಮಾನವೀಯತೆಯ ನೆಲೆಯಲ್ಲಿ ನೋಡಬಲ್ಲವನು. ತನ್ನ ಸಮುದಾಯಕ್ಕೆ ಮುಟ್ಟಬಾರದವನು ಬಿಟ್ಟು ಹೋಗಿದ್ದ ಕಂಬಳಿಯ ಗಂಟನ್ನು ಹೊತ್ತು ನಡೆದು ಬೈರನ ಬಿಡಾರಕ್ಕೆ ಕೊಟ್ಟು ಸಮಾಧಾನಪಡಿಸಿ, ಹೆಂಡತಿಗೆ ಹೊಡೆಯುವುದನ್ನು ಖಂಡಿಸಿ ಮಾನವೀಯತೆಯನ್ನು ಮೆರೆಯುತ್ತಾನೆ.

ಕುವೆಂಪು ಅವರ 'ಸಾಲದ ಮಗು' ಎಂಬ ಸಣ್ಣಕಥೆ ಮಲೆನಾಡ ಪರಿಸರದ ದಣಿಯೊಬ್ಬನ ನಿಷ್ಕರುಣೆಯ, ಹೃದಯಹೀನ, ಶೋಷಕ ಪ್ರವೃತ್ತಿಯ ಕ್ರೌರ್ಯವನ್ನು ಹೃದಯಂಗಮವಾಗಿ ಸಹಜವಾಗಿ ಚಿತ್ರಿಸುತ್ತದೆ. ಅಪ್ಪ ಮಾಡಿದ ಸಾಲವನ್ನು ಮಕ್ಕಳು ತೀರಿಸಬೇಕೆಂಬ ನೀತಿಯಲ್ಲಿ ಸುಬ್ಬನೆಂಬ ಬಾಲಕ ರಂಗಪ್ಪಗೌಡನ ಮನೆಯಲ್ಲಿ ಜೀತದಾಳಾಗಿ ದುಡಿಯುತ್ತಿದ್ದವನು, ಅಮವಾಸ್ಯೆಯ ರಾತ್ರಿಯಲ್ಲಿ ಗೌಡನ ಆದೇಶದಂತೆ ಮೀನುಕೂಣಿಯನ್ನು ನೋಡಲು ಬಂದವನು ಹಾವು ಕಚ್ಚಿ ಸಾಯುತ್ತಾನೆ. ಆಗ ಗೌಡನ ಚಿಂತೆ ಮುನ್ನೂರು ರೂಪಾಯಿ ಸಾಲ ವ್ಯರ್ಥವಾಯಿತೆಂದು. ಹಾಗೆ ಮೀನು ಸಿಗಲಿಲ್ಲವೆಂಬ ವಿಷಾದವಿದೆಯೇ ಹೊರತು ಒಂದು ಜೀವದ ನಾಶಕ್ಕೆ ಕಾರಣನಾದೆ ಎಂಬ ಯಾವುದೇ ವಿಷಾದವೂ ಇಲ್ಲ. ಈ ರೀತಿ ಒಡೆಯ ಆಳುವಿನ ಸಂಬಂಧವನ್ನು ಕ್ರೌರ್ಯ, ಶೋಷಣೆಯ ಹಿನ್ನೆಲೆಯಲ್ಲಿ ಶೋಧಿಸಿದರೆ, ಇದಕ್ಕೆ ವಿರುದ್ಧವಾಗಿ ಯಾರೂ ಅರಿಯದ ವೀರ ಕಥೆಯಲ್ಲಿ ಒಡೆಯ–ಆಳುವಿನ ನಡುವಿನ ಮಾನವೀಯ ಸಂಬಂಧವನ್ನು ಶೋಧಿಸಿದ್ದಾರೆ. ಪ್ರವಾಹದಲ್ಲಿ ಜೀವದ ಹಂಗು ತೊರೆದು ಲಿಂಗ ತನ್ನ ಒಡೆಯ ಸುಬ್ಬಣ್ಣಗೌಡರ ಕುಟುಂಬವನ್ನು ದುರಂತದಿಂದ ಪಾರು ಮಾಡುತ್ತಾನೆ. ಲಿಂಗ ನೀರು ಪಾಲಾಗಿದ್ದಾನೆ ಎಂದಾಗ ಒಡೆಯ ತನ್ನ ಮನೆಯ ಬೆಳಕೇ ಆರಿಹೋಯಿತೆಂದು ಪರಿತಪಿಸುವ, ಆತನ ಅನಾಥ ಮಗ 'ನಾಗ'ನ ಬಗ್ಗೆ ಗೌಡನ ಕುಟುಂಬದವರೆಲ್ಲ ಕಣ್ಣೀರಿಡುವ, ಲಿಂಗ ಬದುಕಿದ್ದಾನೆಂದಾಗ ಸಂತೋಷಪಡುವ ಸಂದರ್ಭವು ಆಪ್ತವಾಗಿ, ಮಾನವೀಯತೆಯ ಹಿನ್ನೆಲೆಯಲ್ಲಿ ಸಹಜವಾಗಿ ಮೂಡಿ ಬಂದಿದೆ. ಇದೆಲ್ಲ ಕುವೆಂಪು ಅವರ ಸಮಗ್ರ ದೃಷ್ಟಿಗೆ ಮಾನವ ಪ್ರೀತಿಗೆ ಸಾಕ್ಷಿಯಾಗಿದೆ.

ಕುವೆಂಪು ಅವರ ಜಾತ್ಯತೀತ ಸರ್ವಸಮಾನತೆಯ ಮಾನವ ಪ್ರೀತಿಯ ಸಮಾಜದ ಕನಸು, ಆಶಯವು ಕಾನೂರು ಹೆಗ್ಗಡತಿ ಕಾದಂಬರಿಯ ಕೊನೆಯ 'ಹತ್ತು ವರ್ಷ ವರ್ಷಗಳಾದ ಮೇಲೆ' ಎಂಬ ಭಾಗದಲ್ಲಿ ವ್ಯಕ್ತವಾಗಿರುವುದನ್ನು ಗಮನಿಸಬಹುದು. ಮಲೆನಾಡಿಗೆ ನವ ಜೀವನ ಕಾಲಿಟ್ಟಿತು ಎಂಬ ಮಾತಿನಿಂದಲೇ ಪ್ರಾರಂಭವಾಗುತ್ತದೆ. ಕಳ್ಳಂಗಡಿ ಕುಸಿದು ಬಿದ್ದು ನಾಲ್ಕಾರು ಊರುಗಳಿಗೆ

ಅನುಕೂಲವಾಗುವಂತೆ ಆಸ್ಪತ್ರೆ, ಪೋಸ್ಟಾಫೀಸು, ಅಂಗಡಿಗಳು, ಬೈಸಿಕಲ್, ಮೋಟಾರುಕಾರು, ಬಸ್ಸುಗಳು, ಖಾದಿ ಪ್ರಚಾರ, ಪತ್ರಿಕೆ ಎಲ್ಲವೂ ಬಂದಿದ್ದವು. ಕುವೆಂಪು ಈ ಕಾದಂಬರಿ ಬರೆದದ್ದು ೧೯೩೭ರಲ್ಲಿ ಹತ್ತು ವರ್ಷಗಳೆಂದರೆ ಸ್ವಾತಂತ್ರ್ಯ ಪಡೆದ ಅಥವಾ ನಂತರದ ಕಾಲ. ಕುವೆಂಪು ಬಯಸಿದಂತೆ ಈ ಭೌತಿಕವಾದ ಬದಲಾವಣೆಗಳು ಆ ನಂತರದ ಕಾಲದಲ್ಲಾದರೂ ಆಗಿದೆ. ಆದರೆ ನಂಬಿಕೆ ಆಚರಣೆಗಳಲ್ಲಿ ಅವರ ಆಶಯದಂತೆ ಪೂರ್ಣ ಬದಲಾಗಿಲ್ಲ ; ಇಂದಿಗೂ ಅದು ಸಾಧ್ಯವಾಗಿಲ್ಲ. ಮಾರಿಯ ಹರಕೆ, ದೆವ್ವದ ಪೂಜೆ ಮೂಢಾಚಾರಗಳಿಗೆ ಬದಲಾಗಿ ಉತ್ಕೃಷ್ಟವಾದ ಮತವಿಧಾನಗಳು ಆಚರಣೆಗೆ ಬರುತ್ತಿದ್ದವು ಎಂದು ಆಶಿಸುತ್ತಾರೆ. ಆದರೆ ಬದಲಾಗಿಲ್ಲ, ಅನಕ್ಷರಸ್ಥ ಮೂಢಾಚಾರಿ, ಅಕ್ಷರಸ್ಥ ಮೂಢಾಚಾರಿಯಾಗಿದ್ದಾನೆ ಅಷ್ಟೆ. ಕಾಯಿಲೆ ಬಂದರೆ ಜೋಯಿಸರಲ್ಲಿಗೆ ಹೋಗುವುದಕ್ಕೆ ಬದಲಾಗಿ ಆಸ್ಪತ್ರೆಗೆ ಹೋಗುವುದನ್ನು ಕಲಿತಿದ್ದರು ಎನ್ನುತ್ತಾರೆ. ಹೌದು, ಆಸ್ಪತ್ರೆಗೆ ಹೋಗುವ ಬಗ್ಗೆ ಎಚ್ಚರಿಕೆಯುಂಟಾಗಿದೆ. ಆದರೆ ಜೋಯಿಸರ ಹತ್ತಿರ ಹೋಗುವುದು ಕಡಿಮೆಯಾಗಿಲ್ಲ. ನಿಂಗನ ಮಗ ಪುಟ್ಟ ಸೀತೆಯ ಪ್ರಯತ್ನದಿಂದ ಅಕ್ಷರಸ್ಥನಾಗಿದ್ದಾನೆ. ಎಲ್ಲ ಸಮುದಾಯವು ಅಕ್ಷರಸ್ಥರಾಗಬೇಕೆಂಬುದು ಕುವೆಂಪು ಆಶಯ. ಈ ಮಲೆನಾಡ ಪರಿಸರ ಶೈಕ್ಷಣಿಕವಾಗಿ ಇಂದು ಸಾಕಷ್ಟು ಪ್ರಗತಿಯಲ್ಲಿದೆ. ಎಲ್ಲ ಸಮುದಾಯಗಳಲ್ಲೂ ಶೈಕ್ಷಣಿಕ ಜಾಗೃತಿ ಮೂಡಿದೆ. ಆದರೆ ಹರಿಜನ ಸಮುದಾಯಲ್ಲಿ ಅಷ್ಟಾಗಿ ಪ್ರಗತಿ ಕಾಣುವುದಿಲ್ಲ. ಮಲೆನಾಡ ಪರಿಸರದ ದೊಡ್ಡ ಊರುಗಳಲ್ಲಿ ಹರಿಜನ ಕೇರಿ ತೀರ ಬದಲಾಗಿಲ್ಲ. ಹಿಂದೆ ಹುಲ್ಲು, ಸೋಗೆ ಮಾಡಿನ ಗುಡಿಸಲುಗಳು ಇದ್ದವು. ಈಗ ಸರ್ಕಾರದ ಹಂಚಿನ ಮನೆಯ ಕೇರಿಗಳಾಗಿವೇಯೇ ಹೊರತು ಇತರ ಜನಸಮುದಾಯಗಳ ಮಧ್ಯೆ ವಾಸಿಸಲು ಇನ್ನೂ ಸಾಧ್ಯವಾಗಿಲ್ಲ. ದರಖಾಸ್ತು ಭೂಮಿಯ ಸೌಲಭ್ಯ ಪಡೆದವರು ತೀರ ಕಡಿಮೆ. ಆದ್ದರಿಂದ ಜೀತಮುಕ್ತರಾಗಿದ್ದರೂ ಒಡೆಯರ ಮನೆ ಕೂಲಿ ಆಳುಗಳಾಗಿರುವುದು ಬದಲಾಗಿಲ್ಲ.

ಅಗ್ರಹಾರದ ವೆಂಕಪ್ಪಯ್ಯನವರ ಇಬ್ಬರ ಮಕ್ಕಳು, ವಾಸುವಿನ ಇತರ ಸಹಪಾಠಿ ಗೆಳೆಯರು ಬುದ್ಧ ಜಯಂತಿ ಉತ್ಸವದಲ್ಲಿ ಮೈಲಿಗೆಯನ್ನು ಕಳೆದುಕೊಂಡು ಎಲ್ಲರ ಜೊತೆ ಬೆರೆತಿದ್ದಾರೆ. ಇಂತಹ ಆಶಯದಂತೆ ಇಂದು ಮಲೆನಾಡ ಪರಿಸರದಲ್ಲಿ ಶೈಕ್ಷಣಿಕವಾದ, ಹೊಸ ಹೊಸ ಉದ್ಯೋಗಗಳ, ಆರ್ಥಿಕವಾದ ಸುಧಾರಣೆಯ ಕಾರಣಗಳಿಂದ ಹೊಸತಲೆಮಾರುಗಳಲ್ಲಿ ಜಾತಿ ತಾರತಮ್ಯಗಳು ಸಾಕಷ್ಟು ಕಡಿಮೆಯಾಗಿದೆ. ಗಟ್ಟದವರೂ ಕುರಿಮಂದೆಯಂತೆ ಬಿಡಾರಗಳಲ್ಲಿ ಕಟ್ಟಿಕೊಂಡು ವಾಸ ಮಾಡುವುದಕ್ಕೆ ಬದಲಾಗಿ ಸುವ್ಯವಸ್ಥಿತವಾದ ಸಣ್ಣ ಸಣ್ಣ ಆದಷ್ಟು ಚೊಕ್ಕಟವಾಗಿ ಬದುಕುತ್ತಿದ್ದರು. ಈಗ ಈ ಪರಿಸರದಲ್ಲಿ ವ್ಯವಹಾರ ನಡೆಸುವಂತವರು, ಜಮೀನು ಪಡೆದು ನೆಲೆಯೂರಿದವರು ಬಿಟ್ಟು, ಉಳಿದ ಬಹುಸಂಖ್ಯಾತ ದಕ್ಷಿಣ ಕನ್ನಡದ ಜನರು ತಮ್ಮ ಮೂಲ ಊರುಗಳಾದ ಮಂಗಳೂರು, ಉಡುಪಿ ಮುಂತಾದ ಗಟ್ಟದ ಕೆಳಗಿನ ಊರುಗಳಲ್ಲಿ ಆಧುನಿಕವಾಗಿ ಮುಂದುವರಿದಂತೆ, ಶಿಕ್ಷಣ-ಉದ್ಯೋಗವಕಾಶಗಳು ಹೆಚ್ಚಿದಂತೆ ಈ ಪರಿಸರದಿಂದ ಹಿಂತಿರುಗಿ ಅಲ್ಲಿಗೆ ಹೋಗಿ ನೆಲೆಸಿದರು.

ಅಸ್ಪೃಶ್ಯತೆ, ಜಾತಿ, ವರ್ಗಸಂಘರ್ಷ : ಅನಂತಮೂರ್ತಿ ಕಥನ

ಭಾರತದ ಜಾತಿ ವ್ಯವಸ್ಥೆ ಅತ್ಯಂತ ಸಂಕೀರ್ಣವಾದ ಸ್ವರೂಪವನ್ನು ಹೊಂದಿರುವಂತಹದು. ಇಲ್ಲಿಯ ಶ್ರೇಣಿಕೃತ ಸಮಾಜದಲ್ಲಿ ಬ್ರಾಹ್ಮಣ ಸಮುದಾಯ ಮೇಲುಸ್ತರದ ಅಥವಾ ಉನ್ನತ ಜಾತಿಯೆಂಬ

ಸ್ಥಾನ ಪಡೆದಿದ್ದರೂ ಅದರೊಳಗೇ ಅಸಮಾನತೆಯ ನೆಲೆಗಳನ್ನು ಗುರುತಿಸುವುದು ಸಾಧ್ಯ. ನಾನುಕಂಡ ಮಲೆನಾಡು ಕೃತಿಯಲ್ಲಿ ಹೀಗೆ ದಾಖಲಿಸಲಾಗಿದೆ–

"ಮಲೆನಾಡ ಪರಿಸರದಲ್ಲೂ ಬಹಳ ಹಿಂದಿನ ಕಾಲದಿಂದಲೂ ನೆಲೆಸಿರುವ ಬ್ರಾಹ್ಮಣ ಸಮುದಾಯದ ಮುಖ್ಯವೃತ್ತಿ 'ದೇವರ ಪೂಜೆ, ಅಡಿಕೆ ತೋಟದ ಕೃಷಿ, ಕೆಲವರು ದೊಡ್ಡ ಜಮೀನ್ದಾರರೂ' ಆಗಿದ್ದರು......... ಗಂಡಸರ ಸಂಖ್ಯೆ ಕಡಿಮೆಯಾಗಿದೆಯೋ, ಸೋಮಾರಿತನದಿಂದಲೊ ತಮ್ಮ ಮನೆಯ ದೇವರ ಪೂಜೆಯನ್ನು ಮಾಡಲು ದಕ್ಷಿಣ ಕನ್ನಡ ಜಿಲ್ಲೆಯ ಬೇರೊಬ್ಬ ಭಟ್ಟರನ್ನು ಕೆಲವರು ಇಟ್ಟುಕೊಳ್ಳುತ್ತಿದ್ದರು........."

"ಆ ಬುದ್ಧಿವಂತ ಭಟ್ಟರು ಕ್ರಮೇಣ ನಾನಾ ರೀತಿಯಲ್ಲಿ ಬೆಳೆದು ಇಲ್ಲಿ ಸಾಹುಕಾರರಾದದ್ದೂ, ಇದೆ.......... ದೇವರಪೂಜೆ, ಹಬ್ಬ, ವ್ರತಗಳು, ಮಡಿಮೈಲಿಗೆ ಆಚರಿಸಿಕೊಂಡು ಬರುವ ಇವರು ಕ್ರಮೇಣ ಊರಿನ ದೇವಸ್ಥಾನದ ಪೂಜೆಯಲ್ಲದೆ ಶೂದ್ರರ ಮನೆಯಲ್ಲೂ, ಶಾಂತಿ, ಸತ್ಯನಾರಾಯಣವ್ರತ, ವಿಶೇಷ ಪೂಜೆಗಳನ್ನು ಮಾಡತೊಡಗಿದರು. ಅದು ಅವರ ಸಂಪಾದನೆಯ ಭಾಗವಾಗಿತ್ತು. ಈ ಬ್ರಾಹ್ಮಣರು ನೇಗಿಲ ಮೇಳಿ ಹಿಡಿಯಬಾರದೆಂದು ಶಾಸ್ತ್ರವೂ ಇತ್ತಂತೆ, ಇತ್ತಿತ್ತಲಾಗಿ ಅನೇಕರು ಭೂಮಿಯನ್ನು ಉಳುತ್ತಾರೆ......... ಭೂ ಸುಧಾರಣೆ ಜಾರಿಗೆ ಬಂದ ಉಳುವವನೇ ನೆಲದೊಡೆಯನಾದಾಗ..... ಅನೇಕ ಬ್ರಾಹ್ಮಣರು ತಮ್ಮ ಆಸ್ತಿಯನ್ನು ಕಳೆದುಕೊಂಡರು. ಸರ್ಕಾರಿ ನೌಕರಿ ಮುಂತಾದ ಇತರ ಕೆಲಸಗಳಿಗೆ ಶರಣು ಹೋಗಿರುತ್ತಾರೆ........."

"ಈ ಬ್ರಾಹ್ಮಣರಲ್ಲಿ ಇನ್ನೊಂದು ಪಂಗಡ ಇದೆ. ಪಂಚ ಗ್ರಾಮದವರು ಎಂದು. ಇವರು ದಕ್ಷಿಣ ಕನ್ನಡ ಜಿಲ್ಲೆಯ ಕೋಟೇಶ್ವರದ ಕಡೆಯವರಂತೆ......... ಗುರುಗಳ ಅವಕೃಪೆಗೆ ಪಾತ್ರರಾಗಿ ಬಹಿಷ್ಕೃತರಾಗಿ ಈ ಊರಿನಿಂದ ಐದು ಗ್ರಾಮದವರು ಸಂಪೂರ್ಣ ಘಟ್ಟ ಹತ್ತಿರ ಬಂದರು ಎಂದು ಪ್ರತೀತ......... ಇತರ ಬ್ರಾಹ್ಮಣರ ಮನೆಯಲ್ಲಿ ಊಟಕ್ಕೆ ಹೋದರೆ ಪಂಕ್ತಿಯಲ್ಲಿ ಕೂಡಿಸುತ್ತಿರಲಿಲ್ಲವಂತೆ.........."

"ಈ ಬ್ರಾಹ್ಮಣರಿಂದ ಬೇರೆಯಾದ ಮಾಲೇರು ಎಂಬ ಒಂದು ಗುಂಪು ಇದೆ. ವಿಧವೆ ಗರ್ಭಿಣಿಯಾಗಿ ಹೆತ್ತರೆ ಅಥವಾ ಮದುವೆಯಾಗದ ತರುಣಿ ಹೆತ್ತರೆ ಅಂತರವನ್ನು ಜಾತಿಯಿಂದ ಹೊರಗಿಡುತ್ತಿದ್ದರು ಈ ಜನರೇ ಮಾಲೇರು ಎಂದು ಹೇಳುತ್ತಾರೆ. ಇವರು ಬ್ರಾಹ್ಮಣರ ಮನೆಯಲ್ಲಿ ಅಡಿಗೆಯ ಮನೆಯೊಂದಕ್ಕೆ ಹೋಗದೆ ಮತ್ತೆಲ್ಲಾ ವ್ಯವಹಾರ ಮಾಡಬಹುದಾಗಿತ್ತು".[೨೬]

ಇದು ಸಾಮಾನ್ಯವಾಗಿ ಮಲೆನಾಡ ಪರಿಸರದಲ್ಲಿ ಎಲ್ಲರು ತಿಳಿದಿರಬಹುದಾದ ಬ್ರಾಹ್ಮಣ ಸಮುದಾಯದ ಬಗೆಗಿನ ಪರಿಚಯಾತ್ಮಕವಾದ ಒಂದು ಮಾಹಿತಿಯಾಗಿದೆ. ಈ ಮಾಹಿತಿಯಲ್ಲೇ ಅನೇಕ ಸೂಚನೆಗಳಿವೆ. ಬ್ರಾಹ್ಮಣ ಸಮುದಾಯ ಈ ಮಲೆನಾಡ ಪರಿಸರಕ್ಕೆ ಬಂದದ್ದೇ ಪೂಜಾ ಕೈಂಕರ್ಯಕ್ಕೆ, ಪೌರೋಹಿತ್ಯಕ್ಕೆ. ಆದ ಕಾರಣ ಮೇಳಿ ಹಿಡಿಯಬಾರದೆಂಬ ಶಾಸ್ತ್ರ ನಿರ್ಮಿಸಿಕೊಂಡು ಭೂಮಿಯಲ್ಲಿ ಉಳುಮೆ ಮಾಡದಿದ್ದರೂ ಕೆಲವರು ಭೂಮಾಲಿಕರಾಗಿದ್ದರು. ಉಳುಮೆ ಮಾಡದಿದ್ದರೂ ಬಹುಸಂಖ್ಯಾತರು ತೋಟದ ಕೃಷಿಯಲ್ಲಿ ನಿಸ್ಸೀಮರಾಗಿದ್ದರು. ಪಂಚ ಗ್ರಾಮದವರು ಜಾತಿ ಕೆಟ್ಟವರಾಗಿದ್ದರಿಂದ ಪೌರೋಹಿತ್ಯಕ್ಕೆ ದೂರವಾಗಿ ತೋಟದ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರಾಗಿದ್ದರು. ಗೇಣಿದಾರರನ್ನು ಅವಲಂಬಿಸಿಕೊಂಡಿದ್ದ. ಜಮೀನ್ದಾರರು ಭೂ ಭೂಸುಧಾರಣೆ ಕಾನೂನಿನ ಅಡಿಯಲ್ಲಿ ಒಮ್ಮೆಲೆ ಎಲ್ಲ

ಕಳೆದುಕೊಂಡು, ವಿದ್ಯಾ ಬುದ್ಧಿ, ಬಲದಿಂದ ನಗರ ವಾಸಿಗಳಾದರು. ಇಂತಹ ಒಂದು ಪರಿಸರದ ಹಿನ್ನೆಲೆಯಿಂದ ಬಂದ ದೊಡ್ಡ ಲೇಖಕರಾದ ಅನಂತಮೂರ್ತಿ ಅವರ ಈ ಪರಿಸರದ ಆವರಣವುಳ್ಳ ಕಥೆ, ಕಾದಂಬರಿಗಳಲ್ಲಿ ಜಾತೀಯತೆ, ಅಸ್ಪೃಶ್ಯತೆ, ವರ್ಗಸಂಘರ್ಷದ ಸ್ವರೂಪಗಳನ್ನು ಗಮನಿಸಬಹುದಾಗಿದೆ.

'ಸಂಸ್ಕಾರ' ಕಾದಂಬರಿಯಲ್ಲಿ "ದುರ್ವಾಸಪುರದವರು ಕಟ್ಟಾ ಸಂಪ್ರದಾಯವಾದಿಗಳು, ಆದರೆ ಪಾರಿಜಾತಪುರದವರು ನೇಮನಿಷ್ಠೆಯನ್ನು ಅಷ್ಟಾಗಿ ಪಾಲಿಸದವರು. ಅವರನ್ನು ಅಡ್ಡ ಪಂಕ್ತಿ ಬ್ರಾಹ್ಮಣರ ಸ್ಥಾನದಲ್ಲಿ ಇಡಲಾಗಿತ್ತು. ಕಾರಣ ಒಬ್ಬ ವಿಧವೆ ಬಸುರಾದದ್ದನ್ನು ಮುಚ್ಚಿಟ್ಟುಕೊಂಡರೆಂದೂ ಶೃಂಗೇರಿಯ ಗುರುಗಳಿಗೆ ಈ ಸುದ್ದಿ ತಲುಪಿ ಇಡೀ ಅಗ್ರಹಾರಕ್ಕೆ ಬಹಿಷ್ಕಾರ ಹಾಕಿದರೆಂದೂ ಪ್ರತೀತಿ".[೨೭] ಆದ ಕಾರಣ ಪಾರಿಜಾತಪುರದಲ್ಲಿ ಹುಟ್ಟಿದ ಬ್ರಾಹ್ಮಣರೆಲ್ಲಾ ಅಡ್ಡ ಪಂಕ್ತಿ ಬ್ರಾಹ್ಮಣರ ಹಣೆಪಟ್ಟಿಯಲ್ಲಿಯೇ ಬರುವಂತವರು. ಈಗಾಗಲೇ ಚರ್ಚಿಸಿರುವಂತೆ ಹುಟ್ಟು ಈ ನೆಲದ ಮನುಷ್ಯನನ್ನು ಒಂದು ಜಾತಿಗೆ, ಧರ್ಮಕ್ಕೆ ಸೇರಿಸುತ್ತಾ ನಡೆದುಬರುತ್ತಿದೆ. ಇಂತಹ ಹುಟ್ಟಿದ ಕಾರಣಕ್ಕಾಗಿಯೇ ಪಾರಿಜಾತಪುರದವರು ಕನಿಷ್ಠರೆಂದೂ, ದುರ್ವಾಸಪುರದ ಬ್ರಾಹ್ಮಣರು ಶ್ರೇಷ್ಠರೆಂದು ಭಾವನೆ ನೆಲಸಿದೆ. ಆದರೆ ಕಟ್ಟು ಪಾಡುಗಳಿಗೆ ಸಿಲುಕಿ ಬೇಸತ್ತವರ ದೃಷ್ಟಿಯಲ್ಲಿ ಪಾರಿಜಾತಪುರದವರು ನಿಯಮ ನಿಷ್ಠೆ ಪಾಲಿಸಬೇಕಿಲ್ಲದ ಸುಖಿಗಳೆಂದೂ, ತೋಟ ತುಡಿಕೆ ಮಾಡಿಕೊಂಡ ಶ್ರೀಮಂತರಾಗಿದ್ದಾರೆಂದೂ ಕಾಣುತ್ತದೆ. ಆದರೆ ಪಾರಿಜಾತಪುರದ ಬ್ರಾಹ್ಮಣರೊಳಗೆ ತಾವು ಅಡ್ಡ ಪಂಕ್ತಿಯವರೆಂಬ 'ಕೀಳರಿಮೆ' ಕಾಡುತ್ತದೆ. ಇಂತಹ ಸಂದರ್ಭದಲ್ಲಿ ದುರ್ವಾಸಪುರದ ನಾರಾಣಪ್ಪನ ಶವಸಂಸ್ಕಾರದ ಘಟನೆ ಈ ಬಗೆಗೆ ಬಹುಮುಖ್ಯವಾದ ಜಾತಿ ಸೂಕ್ಷ್ಮಗಳನ್ನು ತಾರತಮ್ಯಗಳನ್ನು ತೆರೆದಿಡುತ್ತದೆ. ಪಾರಿಜಾತಪುರದ ಬ್ರಾಹ್ಮಣರು ಕನಿಷ್ಠರೆಂಬ ಭಾವನೆಯನ್ನು ಅಳಿಸಿಕೊಂಡು ಎಲ್ಲಾ ಬ್ರಾಹ್ಮಣರಂತೆ ತಾವೂ ಸಹ ಶ್ರೇಷ್ಠರು ಎಂದು ಶ್ರೇಷ್ಠತೆಯ ವ್ಯಸನಕ್ಕೆ ಬಿದ್ದವರು. ಆದ್ದರಿಂದ ದುರ್ವಾಸಪುರದ ಬ್ರಾಹ್ಮಣನೊಬ್ಬನ ಶವಸಂಸ್ಕಾರ ನಮಗೆ ಮೇಲರಿಮೆ ತೋರಲು ಉತ್ತಮವಾದ ಅವಕಾಶವೆಂದೇ ಮೊದಲಿಗೆ ಭಾವಿಸುತ್ತಾರೆ. ಆದರೆ ದುರ್ವಾಸಪುರದ ಸ್ಮಾರ್ತನಾದ ದುರ್ಗಾಭಟ್ಟನಿಗೆ ತನ್ನ ಕುಲದವರೂ, ಅಡ್ಡ ಪಂಕ್ತಿ ಬ್ರಾಹ್ಮಣರೂ ಆದ ಪಾರಿಜಾತಪುರದವರ ನಿರ್ಧಾರ ಆತಂಕವನ್ನು ತರುತ್ತದೆ. ಆದ್ದರಿಂದ ನಾರಾಣಪ್ಪ ಉತ್ತಮ ಬ್ರಾಹ್ಮಣನೇ ಎಂಬ ಪ್ರಶ್ನೆಯನ್ನು ಮುಂದಿಡುತ್ತಾನೆ. ಬ್ರಾಹ್ಮಣ್ಯಕ್ಕೆ ಎಳ್ಳುನೀರು ಬಿಟ್ಟು, ಮಾಂಸ-ಮದ್ಯ ಸೇವನೆ, ಶೂದ್ರರ ಸಹವಾಸದಿಂದ ಕುಲಗೆಟ್ಟವನು. ಅಂತವನ ಶವಸಂಸ್ಕಾರ ಪಾರಿಜಾತಪುರದವರು ಮಾಡಿದರೆ, ಈಗಾಗಲೇ ಕನಿಷ್ಠರು ಎನಿಸಿಕೊಂಡವರು ಇನ್ನಷ್ಟು ಅಪಖ್ಯಾತಿಗೆ ಒಳಗಾಗುತ್ತೇವೆ ಎಂಬ ಭೀತಿಯಿಂದ ಶವಸಂಸ್ಕಾರಕ್ಕೆ ಒಪ್ಪದೆ ಹಿಂದೆ ಸರಿಯುತ್ತಾರೆ. ಇದು ಬ್ರಾಹ್ಮಣ ಸಮುದಾಯದೊಳಗಿನ ತಾರತಮ್ಯಗಳನ್ನು ತುಂಬಾ ಅರ್ಥವತ್ತಾಗಿ ಧ್ವನಿಸುತ್ತದೆ. ಮಾತ್ರವಲ್ಲದೆ ಭಾರತದಂತಹ ಜಾತಿ ವ್ಯವಸ್ಥೆಯ ಒಳಗಿನ ಮನಸ್ಸುಗಳ ಈ ಬಗೆಯ ಶ್ರೇಷ್ಠ-ಕನಿಷ್ಠವೆಂಬ ಅವೈಜ್ಞಾನಿ, ಅತಾರ್ಕಿಕ ಸಂಗತಿಯೊಂದು ಈ ಕಾದಂಬರಿಯ ಮುಖ್ಯ ಚರ್ಚೆಯ ಸಂಗತಿಯಾಗಿದೆ. ಹೀಗಿರುವಾಗ ಮಲೆನಾಡಿನ ಪರಿಸರದಲ್ಲಿ ಇತರ ಜಾತಿ ಸಮಾಜಗಳ ಬಗೆಗಿನ ಸಮಾನತೆಯ ಕಲ್ಪನೆ ದೂರವೇ ಆಗಿರುವುದು ಇಲ್ಲಿನ ವಾಸ್ತವ.

ಇಂತಹ ಸಂದರ್ಭದಲ್ಲಿ ಆಧುನಿಕತೆಯ ಪ್ರವೇಶ ಅರ್ಥವಿಲ್ಲದ ನಂಬಿಕೆ, ಸಂಪ್ರದಾಯಗಳನ್ನು

ಹೇಗೆ ಮುರಿದು ಹಾಕುತ್ತದೆ, ಅಲ್ಲದೆ ಇಂತಹ ಅನೇಕ ಕಟ್ಟುನಿಟ್ಟಿನ ಸಾಮಾಜಿಕ ರಚನೆ ಹೇಗೆ ಶಿಥಿಲಗೊಳ್ಳುತ್ತದೆ ಎಂಬ ಧೋರಣೆಯನ್ನು ಕಾದಂಬರಿ ಹೊಂದಿದಂತೆ ತೋರುತ್ತದೆ. ಆದರೆ ನಾರಾಣಪ್ಪನ ಪಾತ್ರದ ಮೂಲಕ ಕಟ್ಟಾ ಸಂಪ್ರದಾಯದ ಸಮಾಜದಲ್ಲಾಗುತ್ತಿದ್ದ ಸ್ಥಿತ್ಯಂತರಗಳ ಪ್ರತೀಕವೆಂದು ಭಾವಿಸುವುದು ಕಷ್ಟ. ಬ್ರಾಹ್ಮಣ್ಯವನ್ನು ನಾಶಪಡಿಸಬೇಕೆಂದು ಪ್ರಜ್ಞಾಪೂರ್ವಕವಾಗಿ ಹೊರಟ ನಾರಾಣಪ್ಪ ಮೀನು, ಮಾಂಸ ತಿನ್ನುವುದು, ಮದ್ಯ ಕುಡಿಯುವುದು, ಶೂದ್ರಳಾದ ಚಂದ್ರಿಯ ಜೊತೆ ಸಂಬಂಧ ಹೊಂದುವುದು ಮುಂತಾದ ಚಟುವಟಿಕೆಗಳು ಅವನ ವಿಲಾಸ ಜೀವನಕ್ಕೆ ಕಂಡುಕೊಂಡ ಮಾರ್ಗಗಳೇ ಹೊರತು ಬ್ರಾಹ್ಮಣ್ಯವನ್ನು ನಾಶಪಡಿಸುವ ಸಂಗತಿಗಳಲ್ಲ. ಇವುಗಳಿಗೆ ಯಾವ ಸೈದ್ಧಾಂತಿಕ ಹಿನ್ನಲೆಯೂ ಇಲ್ಲ. ನಾರಾಣಪ್ಪನ ವಿರೋಧ ಹೊರ ವಿರೋಧವೇ ಹೊರತು ಸೃಜನಾತ್ಮಕ ವಿರೋಧವಲ್ಲ. ಇವನ ಅನುಯಾಯಿಗಳಾದ ಶ್ರೀಪತಿ ಮೊದಲಾದವರಿಗೆ ನಾರಾಣಪ್ಪನ ಪ್ರಜ್ಞಾಪೂರ್ವಕವಾದ ಯಾವ ಹಠವೂ ಇಲ್ಲ. ತಮ್ಮ ವಿಲಾಸಕ್ಕೆ, ಭೋಗಕ್ಕೆ ಕಳ್ಳದಾರಿಗಳನ್ನು ಕಂಡುಕೊಂಡು ಬದುಕುವಂತವರು. ಆದ್ದರಿಂದ ಮೇಲುನೋಟಕ್ಕೆ ನಾರಾಣಪ್ಪ ಮತ್ತು ಆತನ ಗೆಳೆಯರ ನಡವಳಿಕೆಗಳು ದುರ್ವಾಸಪುರದ ಪುರಾತನತೆಯನ್ನು ನಾಶ ಮಾಡುತ್ತಿದೆ ಅನಿಸುತ್ತದೆ. ಆದರೆ "ಪುರಾತನ ಸಂಸ್ಕೃತಿಯೊಂದು ಒಳಗಿನಿಂದಲೇ ಕೊಳೆಯುವ ಚಿತ್ರಣಗಳನ್ನು ಘಟಶ್ರಾದ್ಧದಲ್ಲಿಯೇ ಗಮನಿಸಿದ್ದೇವಷ್ಟೆ ಅವು ಸಂಸ್ಕಾರದಲ್ಲಿಯೂ ಮುಂದುವರಿಯುತ್ತದೆ. 'ನನ್ನ ದುಃಖವೆಂದರೆ ನಾಶ ಮಾಡೋಕೆ ಈ ಅಗ್ರಹಾರದಲ್ಲಿ ಬ್ರಾಹ್ಮಣ್ಯನೇ ಉಳಿದಿಲ್ಲಾಂತ' ಎಂಬ ನಾರಾಣಪ್ಪನ ಮರ್ಮಭೇದಕ ಮಾತು ಒಂದು ಸಾಂಸ್ಕೃತಿಕ ಸ್ಥಿತಿಗೆ, ಹಿಡಿದ ಕನ್ನಡಿಯಾಗಿದೆ".[೨೮] ಹಾಗಾಗಿ ಒಳಗಿನಿಂದಲೇ ಗರುಡಾಚಾರ್ಯ, ದುರ್ಗಾಭಟ್ಟ, ಲಕ್ಷ್ಮಣಾಚಾರ್ಯರ ಮೊದಲಾದವರ ಸ್ವಾರ್ಥ, ನೈತಿಕ ಅಧಃಪತನದಿಂದ ಅಗ್ರಹಾರ ಒಳಗಿನಿಂದಲೇ ಶಿಥಿಲವಾಗುತ್ತಿತ್ತು. ನಾರಾಣಪ್ಪನಂತವನಿಗೆ ಬಹಿಷ್ಕಾರ ಹಾಕುವಂತಹ ಸಾಮರ್ಥ್ಯವನ್ನೇ ಕಳೆದುಕೊಂಡಿತ್ತು. ಏಕೆಂದರೆ ಮಲೆನಾಡಿಗೆ ಆಧುನಿಕತೆ ಕಾಲಿಟ್ಟಿದೆ ಅದರ ಪ್ರಭಾವ ಅಗ್ರಹಾರದ ಮೇಲಿದೆ. ಬ್ರಿಟೀಷರ ಆಳ್ವಿಕೆಯಿದೆ, ಸ್ವಾತಂತ್ರ್ಯದ ಹೋರಾಟದ ಕಾಲ, ನಾರಾಣಪ್ಪ ಪ್ರಾಣೇಶಾಚಾರ್ಯರಿಗೆ ಹೇಳುವ ಮಾತು.

"ಮುಂದೆ ಬರೋದು ಕಾಂಗ್ರೇಸ್ಸು, ಪಂಚಮರನ್ನು ದೇವಸ್ಥಾನದೊಳಗೆ ಬಿಡಬೇಕು......... ನಿಮ್ಮ ಶಾಸ್ತ್ರ ನಡೆಯೋದಿಲ್ಲ"[೨೯]ವೆಂದು ಸಾರುತ್ತಾನೆ. ಆ ಮೂಲಕ ಸಾಮಾಜಿಕ ಜೀವನದಲ್ಲಾಗುವ ಪಲ್ಲಟಗಳನ್ನು, ಸಂಪ್ರದಾಯದ ಸೋಲನ್ನು ಸೂಚಿಸುತ್ತಾನೆ. ಆದರೆ ಪಲ್ಲಟಗಳ ಪರವಾಗಿ ನಾರಾಣಪ್ಪನ ಸೈದ್ಧಾಂತಿಕವಾದ ಹೋರಾಟ ಕಂಡುಬರುವುದಿಲ್ಲ. "ದೂರ್ವಾಸಪುರದ ಪ್ರಾಣೇಶಾಚಾರ್ಯರ ಚಕ್ರಾಧಿಪತ್ಯದ ಅಗ್ರಹಾರದ ಹೊರಗೆ ಇಂಗ್ಲೀಷರ ಕಾನೂನಿನ ನಾಗರಿಕತೆಯ ಇನ್ನೊಂದು ವಲಯ ರೂಪಿತವಾಗುತ್ತಿರುತ್ತದೆ. ಅಗ್ರಹಾರದ ಮೌಲ್ಯಗಳಿಗೂ, ಅಂತರವಿದೆ–ವಿರೋಧವಿದೆ. ಇಂಗ್ಲಿಷರಿಗೆ ಅಧಿಕಾರ ಇರುವುದರಿಂದ ಅದನ್ನು ತಡೆಯುವ ಧೈರ್ಯ ಅಗ್ರಹಾರಕ್ಕಿಲ್ಲ. ಇದಿದ್ದರೆ ನಾರಾಣಪ್ಪನಿಗೆ ಬಹಿಷ್ಕಾರ ಹಾಕುತ್ತಿದ್ದರು".[೩೦] ಆದಕಾರಣ ಪ್ರಾಣೇಶಾಚಾರ್ಯರು ನಾರಾಣಪ್ಪನನ್ನು ತಿದ್ದಲು ಪ್ರಯತ್ನಿಸಿ ಸೋಲುತ್ತಾರೆ.

ನಾರಾಣಪ್ಪನ ಜಾತಿ ಬಾಹಿರ ನಡವಳಿಕೆಗಳನ್ನು ವಿರೋಧಿಸುತ್ತಿದ್ದ ಪ್ರಾಣೇಶಾಚಾರ್ಯರು ನಾರಾಯಣಪ್ಪನ ಸಾವಿನ ನಂತರ ಆತನ ಹಾದಿಯನ್ನೇ ತುಳಿಯುವುದು ವಿಪರ್ಯಾಸ. ಬ್ರಾಹ್ಮಣ

ಸಂಪ್ರದಾಯದ ನಿಷ್ಠಾವಂತ ಶಿರೋಮಣಿಯಾದ ಪ್ರಾಣೇಶಾಚಾರ್ಯರು ನಾರಾಣಪ್ಪನ ಶವಸಂಸ್ಕಾರಕ್ಕೆ ಧರ್ಮಶಾಸ್ತ್ರಗಳನ್ನೆಲ್ಲಾ ಜಾಲಾಡಿ, ಕೊನೆಗೆ ಮಾರುತಿಯಲ್ಲಿ ಉತ್ತರ ಪಡೆಯಲು ಹೊರಟವರು ಶೂದ್ರಳಾದ ಚಂದ್ರಿಯನ್ನು ಕೂಡುತ್ತಾರೆ. ಮೇಳಿಗೆ ಜಾತ್ರೆಯ ಹೋಟೆಲೆನಲ್ಲಿ ಕಾಫಿ ಕುಡಿಯುತ್ತಾರೆ. ಕೋಳಿ ಅಂಕ ನೋಡುತ್ತಾರೆ, ಸೂತಕದಲ್ಲಿ ದೇವಾಲಯದಲ್ಲಿ ಬ್ರಾಹ್ಮಣರ ಜೊತೆ ಊಟ ಮಾಡುತ್ತಾರೆ. ಪದ್ಮಾವತಿಯೆಂಬ ವೇಶ್ಯೆಯಿಂದ ಆಕರ್ಷಿತರಾಗುತ್ತಾರೆ. ಕೊನೆಗೆ ಚಂದ್ರಿಯ ಜೊತೆ ಹೋಗಿ ನೆಲಸಲೇ ಎನಿಸುತ್ತದೆ – ಈ ಮೊದಲಾದ ಸಂಗತಿಗಳು ಮನುಷ್ಯ ಸಹಜ ಭಾವನೆಗಳೇ ಹೊರತು, ಬ್ರಾಹ್ಮಣ್ಯಕ್ಕೆ ತಿಲಾಂಜಲಿ ಇಡುವ ಪ್ರಜ್ಞಾಪೂರ್ವಕವಾದ, ಉದ್ದೇಶ ಪೂರ್ವಕವಾಗಿ ಮೀರುವ ಪ್ರಕ್ರಿಯೆಗಳಲ್ಲ. ಇಂದ್ರಿಯ ಸಹಜ ನೈಸರ್ಗಿಕ ಈ ಬಗೆಯ ಬೇಕು ಬೇಡಗಳು ಕಾಲ, ದೇಶ ಪರಿಸ್ಥಿತಿಗಳನ್ನು ಅವಲಂಬಿಸಿ ಹುಟ್ಟುವ ಕ್ರಿಯೆ–ಪ್ರಕ್ರಿಯೆಗಳು ಮಾತ್ರವೇ ಆಗಿವೆ. ಈ ಬಗ್ಗೆಯ ಮನುಷ್ಯ ಸಹಜ ಬಯಕೆಗಳು ಯಾವುದೇ ಜಾತಿ, ಧರ್ಮ ವರ್ಗಗಳಿಗೆ ನಿರ್ದೇಶಿತವಾದವುಗಳಲ್ಲ ಎಂಬುದನ್ನು ಗಮನಿಸಬೇಕು. ಪ್ರಾಣೇಶಾಚಾರ್ಯರಿಗೆ ತಾನು ಇಪ್ಪತ್ತೈದು ವರ್ಷದ ಸಂಸ್ಕಾರವನ್ನು ಬಿಟ್ಟು ಈ ಲೋಕದವನಾಗಿ ಬಿಡುವ ನಿರ್ಧಾರ ಮಾಡಬೇಕು ಎನಿಸುತ್ತದೆ. ಆದರೆ ಅದು ಅವರಿಗೆ ಸಾಧ್ಯವಾಗುವುದಿಲ್ಲ. ತಮ್ಮ ಮತ್ತು ಚಂದ್ರಿಯ ಕಾಮ ಸಂಬಂಧವನ್ನು ಅಗ್ರಹಾರದ ಬ್ರಾಹ್ಮಣರಿಗೆ ಹೇಳಿಬಿಡಬೇಕೆಂದು ಮನಸ್ಸು ಮಾಡಿದ್ದರೂ ತಿಳಿಸಲಾರದೆ ಹೋದರು, ಅವರ ಗೊಂದಲ, ಹೊಯ್ದಾಟಗಳು "ಇವೆಲ್ಲವೂ ಪ್ರಾಣೇಶಾಚಾರ್ಯರ ಪ್ರಾಮಾಣಿಕಥೆಯನ್ನು, ಅರಿವಿನ ಬೆಳವಣಿಗೆಯನ್ನು ಸೂಚಿಸುತ್ತವೆಯೇ ಹೊರತು ಜೀವನದ ಒಂದು ಉತ್ಕಟ ಕ್ಷಣದಲ್ಲಿ ಪೂರ್ವ ಬಂಧನಗಳೆಲ್ಲ ಕಳಚಿ ಬಿದ್ದು ಒಂದು ಹೊಸ ಅರಿವಿನಲ್ಲಿ ಪುನರ್ಜನ್ಮದಲ್ಲಿ ಪಡೆಯುವುದನ್ನು ಸೂಚಿಸುವುದಿಲ್ಲ".[೩೧] ಕಾರಣವೇನೆಂದರೆ ಪ್ರಾಣೇಶಾಚಾರ್ಯರಿಗೆ ತಮ್ಮ ಅನುಭವಗಳಿಗೆ ತಕ್ಕನಾದ ಬದುಕನ್ನು ರೂಪಿಸಿಕೊಳ್ಳುವ ಸಾಮಾರ್ಥ್ಯ ಇಲ್ಲದಿರುವುದನ್ನು ಗಮನಿಸಬೇಕು.

ಅನಂತಮೂರ್ತಿ ಅವರ ಭಾರತೀಪುರ ಸ್ವಾತಂತ್ರ್ಯನಂತರದ ಸುಮಾರು ೬೦ರ ದಶಕದ ಕಾಲಘಟ್ಟವನ್ನು ಒಳಗೊಂಡಿದೆ. ಭಾರತೀಪುರ ಎಂಬ ಹೆಸರೇ ಅನ್ವರ್ಥಕವಾದುದು, ಪುರದ ಅಳತೆಗೆ ಭಟ್ಟಿ ಇಳಿಸಿದ ಭಾರತವೇ ಎನ್ನಬಹುದು. ಭಾರತದ ಯಾವುದೇ ಒಂದು ಹಳ್ಳಿಯನ್ನು ಸಂಕೇತಿಸಬಹುದಾದ ಇದು ಮಲೆನಾಡ ಪರಿಸರದ ಒಂದು ಹಳ್ಳಿ. ಅಲ್ಲಿ ಅಡಿಕೆ ತೋಟಗಳಿವೆ, ಪುರೋಹಿತರಿದ್ದಾರೆ, ಜಮೀನ್ದಾರರಿದ್ದಾರೆ, ವ್ಯಾಪಾರಿಗಳಿದ್ದಾರೆ, ಗೇಣಿದಾರರಿದ್ದಾರೆ, ತಲೆಯ ಮೇಲೆ ಮಲ ಹೊರುವ ಹೊಲೆಯರಿದ್ದಾರೆ, ಕಟ್ಟುನಿಟ್ಟಾದ ಜಾತಿ ಪದ್ಧತಿಯೂ ಇದೆ. ಈ ರೀತಿ ಹಲವಾರು ಅಂಶಗಳನ್ನೊಳಗೊಂಡ ಒಟ್ಟು ಈ ಪರಿಸರದ ಸಾಮಾಜಿಕ ಜೀವನಕ್ರಮಕ್ಕೆ ಮಂಜುನಾಥ ಸ್ವಾಮಿ ಕೇಂದ್ರ ಬಿಂದುವಾಗಿದ್ದಾನೆ. ಮಂಜುನಾಥನ ಮಹಿಮೆ, ಭೂತರಾಯನ ಭಯ ಸಮುದಾಯವನ್ನು ಆವರಿಸಿಕೊಂಡಿದೆ. ಹೀಗೆ ಕಾದಂಬರಿ ಮಲೆನಾಡಿನ ಸಮಾಜದ ಸ್ವರೂಪವನ್ನು ಹೇಳುವಾಗ ಮಲೆನಾಡ ಪರಿಸರದಲ್ಲಿ ಹೊಲೆಯರಿದ್ದಾರೆ ; ಹೀನಾಯವಾಗಿಯೇ ಬದುಕುತ್ತಿದ್ದಾರೆ, ನಿಜ. ಆದರೆ ಮಲ ಹೊರುವ ಪದ್ಧತಿ ಮಲೆನಾಡಿನಲ್ಲಿ ಇರಲಿಲ್ಲ. ಇಲ್ಲಿಯ ನಿಸರ್ಗ ರಚನೆ ಈ ಶೋಷಣೆಯನ್ನು ತಪ್ಪಿಸಿದೆ ಎನ್ನಬಹುದು. ಮಲೆನಾಡ ಪರಿಸರದ ಜನ ಸಮುದಾಯವನ್ನು ಪುರೋಹಿತರು, ಜಮೀನ್ದಾರರು ಮತ್ತು ಇವರ ನಿಯಂತ್ರಣದಲ್ಲಿರುವ ಮಂಜುನಾಥ ಸ್ವಾಮಿಯ ಮಹಿಮೆಯ ನಂಬಿಕೆ ಆಳುತ್ತಿದೆ. ಹೀಗೆ ಕಾದಂಬರಿ ವಿವರಿಸುವಾಗ ಒಂದನ್ನು

ಸ್ಪಷ್ಟಮಾಡಿಕೊಳ್ಳಬೇಕಾಗುತ್ತದೆ. ಮಲೆನಾಡ ಪರಿಸರದ ಬ್ರಾಹ್ಮಣ ಸಮುದಾಯ ಕೆಲವು ಮಠಗಳ ಅನುಯಾಯಿಗಳಾಗಿದ್ದಾರೆ. ಶೃಂಗೇರಿಮಠ, ರಾಮಚಂದ್ರಪುರಮಠ, ಭೀಮನಕಟ್ಟೆಮಠ, ಪುತ್ತಿಗೆಮಠ ಇತ್ಯಾದಿ ಮಠಗಳನ್ನು ಗಮನಿಸಬಹುದು. ಆದರೆ ಉಳಿದ ಜಾತಿ ಸಮುದಾಯಗಳು ಈ ಮಠಗಳ ಅನುಯಾಯಿಗಳಲ್ಲ. ಇಲ್ಲಿ ಮಂಜುನಾಥ ಸ್ವಾಮಿ (ಭಾರತೀಪುರ) ಎಂದರೆ ಧರ್ಮಸ್ಥಳದ ಮಂಜುನಾಥ ಸ್ವಾಮಿ ಎಂಬುದು ಸ್ಪಷ್ಟವಿದೆ. ಹೆಚ್ಚಾಗಿ ಎಲ್ಲ ಸಮುದಾಯಗಳು ಭಯ, ಭಕ್ತಿಯಿಂದ ನಡೆದುಕೊಳ್ಳುತ್ತಿವೆ. ಇದಕ್ಕೆ ದಕ್ಷಿಣ ಕನ್ನಡದಿಂದ ಇಲ್ಲಿಗೆ ಬಂದ ಜನರ ಪ್ರಭಾವವೇ ಕಾರಣ. ಅದನ್ನು ಕಾದಂಬರಿ ಧ್ವನಿ ಪೂರ್ಣವಾಗಿ ತಂದಿದೆ.

ಕಾದಂಬರಿಯಲ್ಲಿ ಬರುವ ಮಂಜುನಾಥ ಸ್ವಾಮಿಯ ವಹಿವಾಟುದಾರರು ಹಾಗೂ ಜಮೀನ್ದಾರರು ಆದಂತವರ ಕುಟುಂಬದಲ್ಲಿ ಹುಟ್ಟಿ ಬಂದವನು ಜಗನ್ನಾಥ. ಈತ ವಿದೇಶದಲ್ಲಿ ವ್ಯಾಸಂಗವನ್ನು ಪೂರೈಸಿ ಬಂದ ವೇಳೆ ತನ್ನ ಪರಿಸರದ ಜಡ್ಡುಗಟ್ಟಿದ ಜೀವನಕ್ರಮದಲ್ಲಿ ಹೊಸ ಸಂಚಲವನ್ನುಂಟು ಮಾಡುವ ಉದ್ದೇಶವನ್ನು ಹೊಂದಿದ್ದಾನೆ. ಜಗನ್ನಾಥನಿಗೆ ಪ್ರತಿಭಟನೆ ಒಂದು ವೈಯಕ್ತಿಕ ಅವಶ್ಯಕತೆಯಲ್ಲ. ಯಾಕೆಂದರೆ ಅವನು ಅವಮಾನ ಮತ್ತು ಅವಕಾಶವಿಹೀನತೆಯ ಸಮಾಜ ರಚನೆಯ ನೇರ ಬಲಿಪಶು ಅಲ್ಲ. ಅಂತಹ ಅಮಾನವೀಯ ಸಮಾಜ ರಚನೆಯ ವಿರುದ್ಧ ಅವನು ಹೋರಾಡುವವನು. "ಜಗತ್ತಿನ ಜತೆಗೆ ಹೆಚ್ಚು ಅರ್ಥಪೂರ್ಣ ಮತ್ತು ಮಾನವೀಯ ಸಂಬಂಧ ಸ್ಥಾಪಿಸಿಕೊಳ್ಳುವ ಆಳವಾದ ಕಾಳಜಿ ಅವನ ಪ್ರತಿಭಟನಾ ಚಟುವಟಿಕೆಗಳ ಪ್ರೇರಕ ಶಕ್ತಿ"[೩೨] ಈ ಹಿನ್ನೆಲೆಯಲ್ಲಿ ಆತ ಇಡುವ ಮೊದಲ ಹೆಜ್ಜೆ ಹರಿಜನರನ್ನು ಮಂಜುನಾಥ ಸ್ವಾಮಿ ದೇವಾಲಯವನ್ನು ಪ್ರವೇಶಿಸುವಂತೆ ಮಾಡುವುದು. ಆ ಮೂಲಕ ಎಲ್ಲ ಗೋಡೆಗಳನ್ನು ಒಮ್ಮೆಲೆ ಕೆಡವುವ ಹಂಬಲ. ಏಕೆಂದರೆ ಹರಿಜನ ಸಮುದಾಯವನ್ನು ಬಿಟ್ಟು ಉಳಿದ ಸಮುದಾಯಗಳೆಲ್ಲ ಮಂಜುನಾಥ ಸ್ವಾಮಿ ವ್ಯವಸ್ಥೆಯೊಳಗೆ ಒಂದಲ್ಲ ಒಂದು ರೀತಿ ಲಾಭ ಪಡೆಯುವಂತವರು. ಆದರೆ ಯಾವ ಲಾಭವನ್ನು ಪಡೆಯದವರೆಂದರೆ ಹರಿಜನರು. ಶತಶತಮಾನಗಳಿಂದಲೂ ಅಜ್ಞಾನ, ಅಂಧಕಾರದಲ್ಲಿ ಇಡಲ್ಪಟ್ಟವರು. ಇವರಿಂದಲೇ ಈ ವ್ಯವಸ್ಥೆಯನ್ನು ನಾಶ ಪಡಿಸಲು ಸಾಧ್ಯ ಎಂದು ಮನಗಾಣುತ್ತಾನೆ. ಆದ ಕಾರಣ ಇವರಲ್ಲಿ ವಿಚಾರಶೀಲತೆಯನ್ನು ಬಿತ್ತಲು ಪ್ರಯತ್ನಿಸುತ್ತಾನೆ.

ಹರಿಜನ ಸಮುದಾಯಕ್ಕೆ ವಿಚಾರಶೀಲತೆ ಬೆಳಸಬೇಕಾದರೆ ಮೊದಲು ಅವರು ಅಕ್ಷರ ಲೋಕವನ್ನು ಪ್ರವೇಶಿಸಬೇಕು. ಆದಕಾರಣ ಹರಿಜನ ಸಮುದಾಯದ ಕೆಲವು ಯುವಕರನ್ನು ಬರಮಾಡಿಕೊಂಡು ಅವರಿಗೆ ಸ್ಲೇಟು, ಪುಸ್ತಕ ನೀಡಿ ಅಕ್ಷರ ಕಲಿಸಲು ಮುಂದಾಗುತ್ತಾನೆ. ಆದರೆ ಜಗನ್ನಾಥ ಮತ್ತು ಹರಿಜನರ ನಡುವೆ ದೊಡ್ಡ ಅಂತರವಿದೆ. ಅದಕ್ಕೆ ಶ್ರೀಪತಿರಾಯರು ಜಗನ್ನಾಥನಿಗೆ ಹೇಳುತ್ತಾರೆ.

"ನೀನು ಅವರನ್ನು ಮುಟ್ಟುತ್ತಿಯೋ ಇಲ್ಲವೋ ಅನ್ನೊಂದು ಪ್ರಶ್ನೆಯಲ್ಲ, ಅವರಾಗೇ ನಿನ್ನನ್ನು ಮುಟ್ಟುತ್ತಾರೋ, ಮುಟ್ಟೋ ಆಸೆ ಅವರಿಗೆ ಹುಟ್ಟಿದೆಯೊ ಅನ್ನೋದು ಮುಖ್ಯ".[೩೩]

ಜಗನ್ನಾಥ ಆಧುನಿಕ ಶಿಕ್ಷಣ ಪಡೆದವನು, ಜಾತ್ಯತೀತ ಸಮಾಜದ ಕನಸನ್ನು ಹೊತ್ತವನು. ಆದಕಾರಣ ಪ್ರಜ್ಞಾಪೂರ್ವಕವಾಗಿ ತನ್ನವರನ್ನು ಎದುರು ಹಾಕಿಕೊಳ್ಳುತ್ತಾನೆ. ಅದಕ್ಕೆ ಆತನಿಗೆ ಆರ್ಥಿಕವಾದ ಬಲವೂ ಇದೆ. ಆದ್ದರಿಂದ ಕೆಳಜಾತಿ ಸಮಾಜಗಳನ್ನು ತನ್ನೆತ್ತರಕ್ಕೆ ತರಬೇಕೆಂಬ ಉದ್ದೇಶವಿದೆ. ಈ

ಹಿನ್ನಲೆಯಲ್ಲಿ ಜಗನ್ನಾಥ ಹರಿಜನರನ್ನು ಮುಟ್ಟುವುದು ಮುಖ್ಯವಲ್ಲ ; ದೊಡ್ಡ ವಿಷಯವಲ್ಲ. ಆದರೆ ಶತಶತಮಾನಗಳಿಂದ ಅಸ್ಪೃಶ್ಯರಾಗೇ ಉಳಿದ, ಅಜ್ಞಾನ, ಅನಕ್ಷರತೆ, ದಾರಿದ್ರ್ಯದಿಂದ ಬಳಲುವ ಜನರಲ್ಲಿ ಮೇಲು ವರ್ಗದವರನ್ನು ಮುಟ್ಟಬೇಕು. ಅವರ ಸಮಾನಕ್ಕೆ ನಿಲ್ಲಬೇಕು ಎಂದು ಯೋಚಿಸುವುದಾಗಲಿ ಅಥವಾ ಒಮ್ಮೆಲೆ ಹಾಗೆ ಮಾಡುವುದಾಗಲಿ ಸಾಧ್ಯವಾಗದ ಮಾತು. ಆದ್ದರಿಂದ ಜಗನ್ನಾಥನ ಸಮಾನತೆಯ ಆಶಯಕ್ಕೆ ಅವರ ಪ್ರತಿಕ್ರಿಯೆ ಬಹಳ ಮುಖ್ಯವಾಗುತ್ತದೆ.

ಆದಕಾರಣ ಜಗನ್ನಾಥ ಆತುರದಿಂದ ಚಾವಡಿಯಲ್ಲಿ ಕುರ್ಚಿ ಮೇಲೆ ಕುಳಿತು ಹೊಲೆಯರ ಯುವಕರು ಬಂದು ಮುಟ್ಟುವುದನ್ನು ಕಾದ. ಬಂದವರು ಅಂಗಳದ ಆಚೆ ನಿಂತರು. ಕರೆದಾಗ, ಅಂಜುತ್ತ ಅಂಗಳದ ನಡುವೆ ಬಂದರು. ಇನ್ನೂ ಹತ್ತಿರಕ್ಕೆ ಒತ್ತಾಯಿಸಿದಾಗ ಚಾವಡಿಯ ಹತ್ತಿರಕ್ಕೆ ಬಂದರು ; ಚಾವಡಿಯನ್ನೇರಲಿಲ್ಲ. ಆಮಿಷವೆಂಬಂತೆ ಮೊದಲು ಎಲೆ ಅಡಿಕೆ ನೀಡಿದ. ನಂತರ ಸ್ಲೇಟನ್ನು ನೀಡಿದ, ಬರೆದು ಓದಲು ಸೂಚಿಸಿದ, ಯಾವ ಯಾವುದೋ ಸಂಗತಿಗಳನ್ನು ಹೇಳಿ ನಗಿಸಲು ಪ್ರಯತ್ನಿಸಿದ – ಹೀಗೆ ಒಡೆಯ ಆಳುವಿನ ನಡುವೆ ಇರುವ ಅಂತರವನ್ನು ಹೋಗಲಾಡಿಸಲು ಪ್ರಯತ್ನಿಸುತ್ತಾನೆ. ತಾನು ಸರಳವಾಗಿ ಅವರಿಗೆ ಕಾಣಬೇಕೆಂದು ಬಿಳಿ ಅಂಗಿ ಪಂಚೆ ಧರಿಸಿದ. ಅವರಿಗೂ ತನ್ನಂತೆ ಉಡಲು ಬಿಳಿಬಟ್ಟೆ ತರಿಸಿಕೊಟ್ಟ, ಬಿಳಿಬಟ್ಟೆಯನ್ನು ಧರಿಸಿ ಬಂದ ಅವರು ತಮ್ಮನ್ನು ಯಾರಾದರೂ ನೋಡಿಯಾರು ಎಂಬ ಆತಂಕ, ನಾಚಿಕೆ, ದಿಗಿಲಿನಿಂದ ನಿಂತಿದ್ದರು. "ಅವು ನಿಂತಿರುವ ಜೋಭದ್ರ ಭಂಗಿಕಂಡು ಜಗನ್ನಾಥನಿಗೆ ತಾನೂ ಹೊಲೆಯರು ಒಟ್ಟಾಗಿ ಮೀರಬೇಕಾದ ಕಠೋರ ಸತ್ಯಗಳೆಲ್ಲ ಕಣ್ಣಿಗೆ ಕಟ್ಟಿದಂತಾಯಿತು".[೩೪]

ಇಲ್ಲಿನ ಬಹುಮುಖ್ಯ ಪ್ರಶ್ನೆಯೆಂದರೆ ಮೇಲು ಜಾತಿಯವರು ಕುಳಿತುಕೊಳ್ಳುವ ಜಾಗದಲ್ಲಿ ಕುಳಿತುಕೊಳ್ಳುವುದಾಗಲಿ, ಅವರಂತೆ ಬಟ್ಟೆ ಧರಿಸುವುದಾಗಲಿ, ದೇವಸ್ಥಾನಕ್ಕೆ ಪ್ರವೇಶಿಸುವುದಾಗಲಿ ಇವೆಲ್ಲಾ ಜಾತ್ಯತೀತತೆಯನ್ನು ತರುವುದಿಲ್ಲ. ಜಾತಿಯೆಂಬುದು ಒಂದು ಸಾಮಾಜಿಕ ಸತ್ಯ ಅದು ಭಾವನೆಗೆ ಸಂಬಂಧಿಸಿದುದು. ಜನರ ಭಾವನೆಗಳಲ್ಲಿ ಬದಲಾವಣೆಯ ಗಾಳಿ ಬೀಸಬೇಕು. ಅದು ಬಲವಂತದಿಂದಾಗಲಿ, ಹಠದಿಂದಾಗಲೀ ಬಾಹ್ಯ ಕ್ರಿಯೆಗಳ ಮೂಲಕ ಇದು ಸಾಧ್ಯವಾಗದ ಮಾತು. "ರಾಜಕೀಯವಾದ ಹಾಗೂ ಸಾಮಾಜಿಕವಾದ ಹಲವು ಬದಲಾವಣೆಗಳನ್ನು ಒಪ್ಪಿಕೊಳ್ಳುವ ಭಾರತ ಸಾಂಸ್ಕೃತಿಕ ಪಲ್ಲಟಗಳಿಗೆ ಉಗ್ರವಾಗಿ ಪ್ರತಿಕ್ರಿಯಿಸುತ್ತದೆ".[೩೫] ಅಂದರೆ ಭಾರತೀಪುರದ ಸಮಾಜ ಆಧುನಿಕತೆಯ ಹಲವು ಅಂಶಗಳನ್ನು ಒಳಗೊಂಡಿದೆ. ಅಲ್ಲಿ ಹೋಟೆಲ್ ಬಂದಿದೆ. ವಾಹನಗಳು ಬಂದಿವೆ. ಪುರಾಣಿಕ್ ಅಂತವರು ಐರೋಪ್ಯ ಮಾದರಿಯಲ್ಲಿ ಮನೆ ಆವರಣ ನಿರ್ಮಿಸಿಕೊಂಡಿದ್ದಾರೆ. ಆ ಊರಿಗೆ ಹರಿಜನಸಮುದಾಯಕ್ಕೆ ಸೇರಿದ ಡೆಪ್ಯುಟಿ ಕಮಿಷನರ್ ಸತ್ಯಪ್ರಕಾಶರನ್ನು ಒಂದು ಮಟ್ಟದವರೆಗಾದರೂ ಸ್ವೀಕರಿಸಿದೆ. ಆದರೆ ಪಿಳ್ಳ ಕಾವೇರಿಯನ್ನು ಕೆಣಕಿದರೆ ಕ್ರೂರ ಹಲ್ಲೆಗೆ ಒಳಗಾಗಬೇಕಾಗುತ್ತದೆ. ಆಧುನಿಕ ವ್ಯವಸ್ಥೆಯಾದ ಪೋಲಿಸರ ಸಹಾಯ ಪಡೆದು ಶಿಕ್ಷಿಸುತ್ತದೆ. ಮಂಜುನಾಥ ಸ್ವಾಮಿ ದೇವಾಲಯದ ಪ್ರವೇಶದ ಸಿದ್ಧತೆಗಳು ನಡೆಯುವಾಗ ದಲಿತರ ಮನೆಗಳು ಸುಡುತ್ತವೆ. ನಾವು ಸ್ವಾತಂತ್ರ್ಯ ಪಡೆದು ಇಷ್ಟು ವರ್ಷಗಳಾಯಿತು. ಈ ಪ್ರಜಾಪ್ರಭುತ್ವದಲ್ಲಿ ಎಷ್ಟೆಲ್ಲಾ ಚುನಾವಣೆಗಳು ನಡೆದು ಎಷ್ಟೆಲ್ಲಾ ಸರ್ಕಾರಗಳು ಬಂದುವು. ಎಲ್ಲೆಡೆ ಶಿಕ್ಷಣ ಬೆಳೆಯುತ್ತಿದೆ,

ಮೀಸಲಾತಿ ಇದೆ ಏನೆಲ್ಲ ಆಗುತ್ತಿದ್ದರು ಜಾತಿಭೂತವನ್ನು ಅಳಿಸಲು ಸಾಧ್ಯವಾಗಿಲ್ಲ. ಅದು ಬೇರೆ ಬೇರೆ ರೂಪಗಳಲ್ಲಿ ಇನ್ನಷ್ಟು ಬಲವಾಗುತ್ತಿರುವುದನ್ನು ಕಾಣಬಹುದು.

ಜಗನ್ನಾಥನ ಪ್ರಾಮಾಣಿಕ ಉದ್ದೇಶವನ್ನು ಪ್ರಶ್ನಿಸಬೇಕಿಲ್ಲ. ಆತನ ಆಶಯ ಪ್ರಗತಿಪರವಾದುವೇ ಪರಿಣಾಮದಲ್ಲಿ ಸಾಧ್ಯವಾಗುವುದಿಲ್ಲ. ಕಾದಂಬರಿಯ ರಚನೆ ಮಲೆನಾಡಿನ ಸಹಜ ಬದುಕಿನ ಲಹರಿಯಲ್ಲಿ ಬದಲಾವಣೆಯ ಗಾಳಿ ಬೀಸುತ್ತದೆ ಎನಿಸುವುದಿಲ್ಲ. ಆದರೆ ಲೇಖಕರಿಗೆ ಒಂದು ಆರೋಗ್ಯಕರ ಸಾಮಾಜಿಕ ಪರಿವರ್ತನೆ ನಡೆಯಬೇಕೆಂಬ ಆಶಯವಿದೆ. ಈ ಆಶಯಕ್ಕೆ ಪೂರಕವಾದ ರೀತಿಯಲ್ಲಿ ಕಾದಂಬರಿ ರಚನೆಯಾಗಿದೆ ಎನಿಸುತ್ತದೆ. ಒಂದು ಬಗೆಯ ಕೃತಕತೆ ಎದ್ದು ಕಾಣುತ್ತದೆ. ಆದಕಾರಣ ನಿಜವಾಗಿಯೂ ತುಡಿತವೊಂದು ಇದ್ದಂತೆ ತೋರುತ್ತಿಲ್ಲ. ಆದರೆ ಜಗನ್ನಾಥನ ಪಾತ್ರದ ಮೂಲಕ ನಾವು ನಮ್ಮ ಚೌಕಟ್ಟನ್ನು ಮೀರಬೇಕೆಂಬ ಭಾವನೆಯನ್ನು ತಳೆಯುವುದು ನಿಜವಾಗಿಯೂ ಪಲ್ಲಟವೆನಿಸುತ್ತದೆ. ಸಾಲಿಗ್ರಾಮ ಮುಟ್ಟುವುದಾಗಲಿ, ದೇವಸ್ಥಾನ ಪ್ರವೇಶವಾಗಲಿ ಇಡೀ ಸಮಾಜ ಒಪ್ಪಿ ಸಮಾನತೆಯತ್ತ ನಡೆಯುವ ಪ್ರಕ್ರಿಯೆಗಳಲ್ಲ. ಈ ಸಾಲಿಗ್ರಾಮ ಎಲ್ಲ ಧರ್ಮ–ಜಾತಿಗಳ ನಿಗೂಢ ರಹಸ್ಯಗಳ ಅಭಿನ್ನ ಅಂಗವಾದ ಇದು ಕೇವಲ ಕಲ್ಲು ಎಂಬುದನ್ನು ತಂದು ಮುಂದೊಡ್ಡುತ್ತಾನೆ. ಸುಮ್ಮನೆ ನಿಂತಿದ್ದಾಗ ಮುಟ್ಟುವಂತೆ ಅಬ್ಬರಿಸುತ್ತಾನೆ. ಆಗ ಅವರು ಮುಟ್ಟುವ ಶಾಸ್ತ್ರ ಮಾಡುತ್ತಾರೆ. ಜಗನ್ನಾಥ "ತನ್ನ ಉತ್ಕಟತೆಯನ್ನು, ತನ್ನ ಸಾಧ್ಯತೆಗಳನ್ನು ಅರಿಯದ–ಅರಿಯಲಾರದ ಹೊಲೆಯನಲ್ಲಿ ಕಾಣದೆ ಸಂಕಟಪಡುತ್ತಾನೆ. ಕ್ರಿಯೆಯ ನಿಷ್ಠುರದಲ್ಲೇ ಹೊರತು ಬೇರೆ ಯಾವ ಭಾವದಲ್ಲೂ ಅವನಿಗೆ ಮತ್ತು ಅವರಿಗೆ ಸಂಬಂಧವಿಲ್ಲವಾದ್ದರಿಂದ ಅವನು ಅವರನ್ನು ಕ್ರಿಯೆಯಲ್ಲಿ ತೊಡಗಿಸುವ ಯತ್ನವೆಲ್ಲವು ಆಭಾಸವಾಗಿ ಕಾಣಿಸಲಿಕ್ಕೆ ಶುರುವಾಗುತ್ತದೆ. ಈ ಕಾರಣದಿಂದ ತೊಡಗಿಸುವ ಯತ್ನ ಕ್ರೌರ್ಯ ಆಗುತ್ತದೆ. ಅವರು ಪ್ರಜ್ಞಾಪೂರ್ವಕವಾಗಿ ಎಂದೂ ಬಂಡಾಯ ಮಾಡಲಾರರು. ಕಾರಣ ಅವರು ತಮ್ಮ ಒಳದಾರಿಗಳಲ್ಲೆ ಸುಖಕಂಡುಕೊಂಡವರು"[೩೬] ಎಂಬ ಮಾತು ವಾಸ್ತವ. ಆದಕಾರಣ ಜಗನ್ನಾಥನ ಬದಲಾವಣೆಯ ಕ್ರಿಯೆ ಸೋಲುತ್ತದೆ.

ಈ ಸಾಲಿಗ್ರಾಮ ಮುಟ್ಟುವ ಘಟನೆಯಿಂದ ಇನ್ನೊಂದು ಆಯಾಮವನ್ನು ಗುರುತಿಸಬಹುದು ಯಾವುದೇ ಸಮಾಜದಲ್ಲಿ ಶೋಷಕ–ಶೋಷಿತರ ನಡುವೆ ನಡೆವ ಜಾತಿ ಸಂಘರ್ಷವೊ, ವರ್ಗ ಸಂಘರ್ಷವೊ ನಡೆದು ಸಮಾನತೆ ಸಾಧಿಸಬೇಕಾದರೆ ಶೋಷಿತರಲ್ಲಿ ಎಚ್ಚರಿಕೆ, ಅರಿವು, ಕೆಚ್ಚು ಹೇಗೆ ಮೂಡಬೇಕೊ ಹಾಗೆ ಶೋಷಕನೊಳಗೂ ಕ್ರಾಂತಿ ನಡೆಯಬೇಕು. ತನ್ನ ಶೋಷಕ ಪ್ರವೃತ್ತಿ ಬಗ್ಗೆ ಸಂಕಟ ಪಶ್ಚಾತ್ತಾಪ ಉಂಟಾಗಬೇಕು. "ಜಗನ್ನಾಥ ಆ ರೀತಿ ವರ್ಗ ಮುಕ್ತನಾಗುವ ಸಂಕಟವನ್ನು ಅನುಭವಿಸುತ್ತಾನೆ. ಈ ಸಂಕಟ ತುಂಬಾ ವಾಸ್ತವಿಕವಾದದ್ದು. ಮನುಷ್ಯನನ್ನು ಮೇಲೆತ್ತುವಂಥದ್ದು ; ಇತಿಹಾಸಕ್ಕೆ ತುಂಬಾ ಅಗತ್ಯವಾದದ್ದು. ಒಂದು ಆಳುವ ವರ್ಗ ಅಥವಾ ಜಾತಿಯಲ್ಲಿ ಹುಟ್ಟಿ ಅದರ ಸಂಸ್ಕಾರದಲ್ಲಿ ಪಳಗಿದವನು. ತನ್ನ ತದ್ವಿರುದ್ಧವಾದ ಮೌಲ್ಯಗಳಿಗೆ ಮಾರು ಹೋಗಿ ತನ್ನ ಪ್ರಜ್ಞೆಯಲ್ಲಿಯೇ ಕ್ರಾಂತಿಗೆ ಒಳಗಾದವನು. ತನ್ನ ಒಳಗು ಹೊರಗುಗಳ ನಡುವೆ ಸಾಮರಸ್ಯ ಸಾಧಿಸುವ ತೊಳಲಾಟ ಸಂಕಟ ಇದು. ತನ್ನ ವರ್ಗ ಅಥವಾ ಜಾತಿಯಿಂದ ಅವನು ಮುಕ್ತನಾಗಿ ಬೇರೆ ಜಾತಿ ಅಥವಾ ವರ್ಗದೊಡನೆ ಪೂರ್ತಿಯಾಗಿ ಮಿಳತವಾದರೆ ಮಾತ್ರ ಈ ಸಂಕಟದಿಂದ ಮುಕ್ತನಾಗಲು ಸಾಧ್ಯ"[೩೭] ಈ ರೀತಿ ಜಗನ್ನಾಥ ತನ್ನೊಳಗೆ ಮತ್ತು ತನ್ನ ಪರಿಸರಕ್ಕೆ ಹೊರತಾಗಿ ಸಂಘರ್ಷವನ್ನು ನಡೆಸುವುದು ಈ ಕಾದಂಬರಿಯ ಬಹಳ

ಮುಖ್ಯವಾದ ಸಂಗತಿ. ಅಸ್ಪೃಶ್ಯ ಸಾಲಿಗ್ರಾಮ ಮುಟ್ಟುವುದು, ಹರಿಜನರು ದೇವಾಲಯ ಪ್ರವೇಶ ಮಾಡುವುದರ ಬಗ್ಗೆ ಮಲೆನಾಡಿನ ಪರಿಸರದಲ್ಲಿ ಯಾವ ಸಂಘಟನಾತ್ಮಕ ಚಳುವಳಿಯೂ ನಡೆದಿಲ್ಲ. ಆದ್ದರಿಂದ ಒಟ್ಟು ಭಾರತೀಯ ಸಂದರ್ಭದಲ್ಲಿ ಇಂತಹ ಸಮಸ್ಯೆ ಇಟ್ಟುಕೊಂಡು ಅಸ್ಪೃಶ್ಯರ ಪರವಾಗಿ ಈ ಕಾದಂಬರಿ ದನಿ ಎತ್ತುತ್ತದೆ.

ಇವರೆನ್ನೆಲ್ಲಾ ಸಂಘಟಿಸಿ ತನ್ನ, ಆಸ್ತಿ ಮನೆತನಗಳ ಪ್ರತಿಷ್ಠೆಯನ್ನು ಪಣಕ್ಕೆ ಹಚ್ಚಿ ಊರಿನ ಸಮಸ್ತರನ್ನು ಎದುರು ಹಾಕಿಕೊಂಡು ಉತ್ಸವದ ದಿವಸ ಹರಿಜನರು ದೇವಾಲಯದೊಳಗೆ ಪ್ರವೇಶ ಮಾಡಿದ ಸಂದರ್ಭದಲ್ಲಿ ಗರ್ಭಗುಡಿಯ ಮಂಜುನಾಥನ ಲಿಂಗವೇ ಅದೃಶ್ಯವಾಗಿಬಿಟ್ಟಿತ್ತು. ಉನ್ಮತ್ತನಾದ ಅರ್ಚಕನ ಮಗ ಗಣೇಶ ಕಿತ್ತೊಯ್ದು ಹೊಳೆಯಲ್ಲಿ ಎಸೆದಿದ್ದ. ಇದು ಸಮಾಜದ ಮೇಲ್ಜಾತಿಗಳು ಹೊಂದಿರುವ ಜಾತಿ ಬಗೆಗಿನ ಭಾವನೆಗಳನ್ನು ಇನ್ನೂ ಗಟ್ಟಿಗೊಳಿಸುತ್ತದೆ. ಅಂದರೆ ಹರಿಜನ ಪ್ರವೇಶದಿಂದ ಮೈಲಿಗೆಯಾಗುವುದರಿಂದ ದೇವರು ಅದೃಶ್ಯವಾದ ಎಂಬ ಪವಾಡ ಕತೆ ಹರಡಿದರು. ಕಾರಂತರ ಚೋಮನಿಗೆ (ಚೋಮದುಡಿ) ಭೂಮಿ ಸಿಗಲಿಲ್ಲ. ಅನಂತಮೂರ್ತಿಯವರ ಭಾರತೀಪುರದ ಹರಿಜನರು ದೇವರಿದ್ದ ಗುಡಿಗೆ ಪ್ರವೇಶ ಮಾಡಲಿಲ್ಲ ಎಂಬ ಟೀಕೆಗಳಿದ್ದರೂ ಸಂಘರ್ಷದ ಒಂದು ಹೆಜ್ಜೆಯನ್ನು ಮುಂದಿಟ್ಟಿರುವುದು ಮುಖ್ಯವಾಗುತ್ತದೆ.

ಅನಂತಮೂರ್ತಿ ಅವರ 'ದಿವ್ಯ' ಕಾದಂಬರಿ ಸುಮಾರು ೬೦ರ ದಶಕದ ಕಾಲಮಾನದ ಘಟನೆಯನ್ನೊಳಗೊಂಡಿದೆ. ಅನಂತಮೂರ್ತಿ ಅವರ ಬೇರೆಲ್ಲ ಕಾದಂಬರಿಗಳಿಗಿಂತ ಮಲೆನಾಡ ಪರಿಸರದ ವಾಸ್ತವ ಬದುಕಿಗೆ ಹೆಚ್ಚು ಹತ್ತಿರವಾದ ಕೃತಿಯಾಗಿದೆ. ಈ ಕೃತಿಯು ಕೂಡ ಜಾತ್ಯತೀತ, ಜಮೀನ್ದಾರಿ ಮುಕ್ತ ಸಮಾಜದ ಆಶಯವನ್ನೇ ಹೊಂದಿದೆ. ದೇವನಹಳ್ಳಿ ಮಂಜಯ್ಯ ಶ್ರೀಮಂತರಾದರೂ ಜಮೀನ್ದಾರನಾದರೂ ಉದಾರವಾದಿ ಕಾರಣ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು, ಗಾಂಧೀಜಿ ಪ್ರಭಾವಕ್ಕೆ ಒಳಗಾದವರು ಅಲ್ಲದೆ ದೇಶ ಪ್ರೇಮದಿಂದ ಜೈಲಿಗೂ ಹೋಗಿ ಬಂದವರು. ಆದಕಾರಣ ಮಡಿಗಿಡಿ ಬಿಟ್ಟವರು. ಅಂತೆಯೇ ದೇವನಹಳ್ಳಿಗೆ ಗಾಂಧೀಜಿ ಬಂದಾಗ ಅವರ ಜೊತೆ ಹರಿಜನ ಕೇರಿಗೆ ಹೋಗಿ ಬಂದ ಕೆಲವು ಮಡಿವಂತರು ಪಂಚಗವ್ಯ ಮಾಡಿಸಿಕೊಂಡರು, ಮಂಜಯ್ಯ ಹಾಗೆ ಮಾಡಲಿಲ್ಲ. ಇವೆಲ್ಲ ಮಂಜಯ್ಯನವರ ಗುಣವಿಶೇಷ. ಹಾಗೆಂದು ಮಂಜಯ್ಯನವರು ಸಂಪ್ರದಾಯವನ್ನು ಪೂರ್ತಿ ಬಿಟ್ಟವರಲ್ಲ ; ಜಾತಿ ಮೀರಿದವರಲ್ಲ. ತಮ್ಮ ಮನೆದೇವರಾದ ಭೂವರಹನ ಪೂಜೆಯ ಅನ್ನ ನೈವೇದ್ಯ ಶಾಲಾ ಮಕ್ಕಳಿಗೆ ಊಟವಾಗುತ್ತದೆ. ಸಾರ್ವಜನಿಕ ವ್ಯಕ್ತಿಯಾಗಿ ಕಾಣಲು ಇದನ್ನು ಬಳಸಿಕೊಂಡಂತಿದೆ. ಆಂತರ್ಯದಲ್ಲಿ ಸಂಪ್ರದಾಯನಿಷ್ಠರಾದ ಇವರು ಬಾಹ್ಯಾಚರಣೆಯಲ್ಲಿ ಪ್ರಗತಿಪರನ ಹಾಗೆ ಕಂಡು ಬರುತ್ತಾರೆ. ಇದು ದೇಶದ ಬಹುತೇಕ ಪ್ರಗತಿಪರರಲ್ಲಿ ಕಾಣುವ ದ್ವಂದ್ವ ನೀತಿ.

ಜಮೀನ್ದಾರ, ಲೇವಾದೇವಿ ವ್ಯವಹಾರವುಳ್ಳ ಸಾಹುಕಾರನಾದ ಈತನ ಮೇಲೆ ಗಾಂಧಿ ಪ್ರಭಾವವಿದೆ. ಸಾರ್ವಜನಿಕವಾಗಿ ನಾಯಕನಾಗಿ ಜನರ ಮುಂದೆ ಸದಾ ಕಾಣಿಸಿಕೊಳ್ಳಬೇಕೆಂಬ ಹಂಬಲವುಳ್ಳ ವ್ಯಕ್ತಿಯ ಎಲ್ಲ ದ್ವಂದ್ವವೂ ಮಂಜಯ್ಯನಲ್ಲಿದೆ. ಈ ಮಂಜಯ್ಯ ಆಗಿನ ಕಾಲದ ಮಲೆನಾಡಿನ ಅನೇಕ ಶ್ರೀಮಂತರ ಪ್ರತೀಕವಾಗಿದ್ದಾನೆ. ಮಂಜಯ್ಯ ಬ್ರಾಹ್ಮಣಿಕೆಯನ್ನೇನೂ ಮೀರುವುದಿಲ್ಲ ; ಬದಲಾಗಿ ಆಚರಣೆಯ

ರೂಪಗಳು ಬದಲಾದಂತೆ ಕಾಣುತ್ತದೆ. ಈ ಹಿನ್ನಲೆಯಲ್ಲಿ 'ಕರಿಯ' ಎಂಬ ಬಾಲಕನ ಪ್ರತಿಕ್ರಿಯೆ ಗಮನಿಸಬಹುದು.

ಗೌರಿ ತನ್ನ ಮನೆ ದನ ಕಾಯುವ ಕರಿಯನ ಹತ್ತಿರ 'ನೀವು ಹೊಲೇರಲ್ಲ, ಹರಿಜನರು, ಅಂತ ಗಾಂಧಿ ಹೇಳೋದು ನಿನಗೆ ಗೊತ್ತಾ ಎಂದು ಕೇಳಿದಾಗ ಕರಿಯ ಮೊದಲಿಗೆ ಪ್ರತಿಕ್ರಿಯಿಸುವುದಿಲ್ಲ. ಆಕೆ ಒತ್ತಿ ಕೇಳಿದಾಗ ಗಾಂಧಿ ಅನುಯಾಯಿಗಳ ಮುಖವಾಡ ಅನಾವರಣ ಮಾಡುತ್ತಾನೆ.

"ಸಾಹುಕಾರ್ರು, ನಮ್ಮ ಹಟ್ಟಿಯವರನ್ನೆಲ್ಲ ಅವರ ಅಂಗಳದಲ್ಲಿ ಸೇರಿಸಿ, ಪೇಟಿಂದ ದೊಡ್ಡವರಲ್ಲನ್ನೆಲ್ಲಾ ಕರೆದು ಗಾಂಧಿ ಟೋಪಿ ಹಾಕ್ಕೊಂಡು ಕೈ ಬೀಸ್ತ ಹೇಳಿದ್ದನ್ನೆಲ್ಲ ನಾನೂ ಕೇಳ್ಸಿಕೊಂಡಿದ್ದೀನಿ.......... ಯಾರೋ ಗಾಂಧಿ ಹೇಳಿದ್ರು, ಅಂತ ನಮ್ಮನ್ನ ಅವರು ಮುಟ್ಟಾರ? ನಾವಾರೂ ಮುಟ್ಟಿಸಿಕೊಂಡೇವ? ಅವೆಲ್ಲ ಬಾವುಟ ಹಾರಿಸ್ದಾಗ ನಮ್ಮನ್ನು ಕರೆದು ಅವರು ಅಡೋ ಮಾತು...........

ಅಷ್ಟು ದೂರ ಬೇಡ ಅಮ್ಮೋರೆ, ನಮ್ಮಲ್ಲೇ ತಕಳ್ಳಿ, ಇಲ್ಲಿ ಹಳೆ ಪೈಕದೋರು, ಸೆಟ್ಟರು, ಬೋವೇರು ಯಾರು ಯಾರೋ ಇದಾರಲ್ಲ ಅವ್ರೂ ನಮ್ಮನ್ನ ಮುಟ್ಟಿಸಿಕೊಳ್ಳಲ್ಲ ಅಂತಾರೆ ಅಷ್ಟೆ........"[೩೮]

ಕರಿಯ ನಮ್ಮ ಜಾತಿ ವ್ಯವಸ್ಥೆಯ ದ್ವಂದ್ವಗಳನ್ನು, ನೈಜತೆಯನ್ನು ಇಲ್ಲಿ ತುಂಬಾ ಅರ್ಥವತ್ತಾಗಿ ನುಡಿಯುತ್ತಾನೆ. ಗಾಂಧಿ ಸಾಗಿದ ಹಾದಿಯಲ್ಲಿ ನಮ್ಮ ಅನೇಕ ನಾಯಕರು ಸಾಗಲಿಲ್ಲ. ಗಾಂಧಿ ಹೇಳಿದ್ದನ್ನು ವೇದಿಕೆಯ ಮೇಲೆ ಹೇಳುತ್ತಾ ಗಾಂಧಿವಾದಿಗಳೆನಿಸಿದರು. ಅದು ಬಾಲಕ ಕರಿಯನಂತವನಿಗೂ ತಿಳಿಯುತ್ತದೆ. ಗಾಂಧಿ ಆತ್ಮಕತೆಯನ್ನು ಕೇಶವನ ಹರಿಕಥೆ ಮೂಲಕ ಕೇಳಿದ ಅಕ್ಕುವಿನ ಪ್ರತಿಕ್ರಿಯೆ.

"ದೇವರಂಥ ಗಾಂಧಿಗೆ ಸರಿಯಾದ್ದು ನಮಗೂ ಸರಿಯೇ? ಜಾತಿಗೀತಿ ಎಲ್ಲ ಸುಳ್ಳಂತ ತಿಳಿದು ನಮ್ಮ ಮಕ್ಕಳು ಬೆಳಿಬೇಕ?"[೩೯]

ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ ಗಾಂಧಿಯನ್ನು ಸವರ್ಣೀಯರು ಸ್ವೀಕರಿಸಿದ ಬಗೆ ಇದು. ಗಾಂಧಿಯನ್ನು ದೇವರು ಮಾಡಿ, ಅದು ಗಾಂಧಿಯಂತವರಿಗೆ ಮಾತ್ರ ಸಾಧ್ಯವೆಂದು ಯಥಾಸ್ಥಿತಿಯನ್ನು ಮುಂದುವರಿಸಿದರು. ಸವರ್ಣೀಯರು ಅಸ್ಪೃಶ್ಯರನ್ನು ಮುಟ್ಟಲಾರರು ಹಾಗೆ ಅಸ್ಪೃಶ್ಯರು ಸವರ್ಣೀಯರನ್ನು ಮುಟ್ಟಲಾರರು. ಇಂತಹ ಭಾವನೆಯನ್ನು ನಮ್ಮ ಜಾತಿ ವ್ಯವಸ್ಥೆ ಬಲವಾಗಿ ನಂಬಿದೆ. ಇದು ಸುಲಭ ಸಾಧ್ಯವಲ್ಲವೆಂದು ಕರಿಯನಿಗೂ ಗೊತ್ತು. ಆದರೆ ಈ ಕಟ್ಟುಪಾಡುಗಳು ಬಾಹ್ಯವಾಗಿ ಬಲವಾಗಿ ಪಾಲನೆಯಾಗುತ್ತವೆ ; ರಹಸ್ಯವಾಗಿ ಮೀರುವ ಕ್ರಿಯೆಗಳು ನಡೆಯುತ್ತಿರುತ್ತವೆ. ತನಗಿಂತ ಮೇಲುಜಾತಿಯ ಹೆಣ್ಣುಮಕ್ಕಳು ಕಾಡಿಗೆ ದನಕಾಯಲೋ, ಕಟ್ಟಿಗೆ ಸೊಪ್ಪು ತರಲೋ ಬಂದವರು ಯಾವು ಯಾವುದೋ ನೆಪದಲ್ಲಿ ಕರಿಯನನ್ನು ಮುಟ್ಟುವುದು, ಲೈಂಗಿಕ ಬಯಕೆಯಿಂದ ಕೆಣಕುವುದು ಇತ್ಯಾದಿ ಜಾತಿ ಮೀರಿದ, ಅಸ್ಪೃಶ್ಯತೆ ಮೀರದ ಮನುಷ್ಯ ಸಹಜ ನಡವಳಿಕೆಯನ್ನು ಕರಿಯ ಗೌರಿಯಲ್ಲಿ ಹೇಳುತ್ತಾನೆ. ಗೌರಿ ಕನಸಿನಲ್ಲಿ ನವಿಲುಗರಿ ತಲೆಗೆ ಸಿಲುಕಿಸಿ ತನ್ನೆದುರು ಮುಟ್ಟುವಂತೆ ಕರಿಯ ನಿಂತಿರುವುದನ್ನು ಕಾಣುತ್ತಾಳೆ. ಗೌರಿ ಕರಿಯನಲ್ಲಿ ಕೃಷ್ಣನನ್ನು ಕಾಣುತ್ತಾಳೆ. ಅಂದರೆ ಹೆಣ್ಣು-ಗಂಡಿನ ಸಹಜವಾದ ಬಯಕೆ ಆಕೆಯ ಒಳಮನದಲ್ಲಿ ಇಣುಕುವುದನ್ನು ಕಾಣಬಹುದು. ಅದನ್ನು ಹತ್ತಿಕ್ಕಲು ಆಕೆ ಕೆಲವು ದಿವಸ ಗುಡ್ಡದಲ್ಲಿ

ಕರಿಯನ ಜೊತೆ ಹೋಗಿ ಮಾತನಾಡುವುದನ್ನು ನಿಲ್ಲಿಸಿದಳು.

'ನಾವಾರೂ ಮುಟ್ಟಿಸಿಕೊಂಡೇವಾ' ಎಂದು ಹೇಳುವ ಕರಿಯನಿಗೆ ಮೇಲು ಜಾತಿಯವರನ್ನು ಮುಟ್ಟುವ ಆಸೆ ಇದೆ. ತೀರ್ಥಹಳ್ಳಿಗೆ ನಮ್ಮೋರು ಒಬ್ಬರು ಮೇಷ್ಟ್ರು ಬಂದಿದ್ದಾರೆಂದೂ ಅವರನ್ನು ಎಲ್ಲ ಮುಟ್ಟಿಸಿಕೊಳ್ಳುತ್ತಾರೆಂದೂ, ಅವರು ಮಕ್ಕಳಿಗೆ ಬೆತ್ತದಲ್ಲಿ ಹೊಡೆಯುವುದಿಲ್ಲ ಕೈಯಲ್ಲಿ ಹೊಡೆಯುತ್ತಾರೆಂದು ಮುಟ್ಟುವ ಖುಷಿಯನ್ನು ಗೌರಿ ಹತ್ತಿರ ಹೇಳುವುದನ್ನು ಕಾಣಬಹುದು.

ಆದ್ದರಿಂದ ತನ್ನನ್ನು ಬಯಸಿ ಬಂದ ಸೆಟ್ಟರ ಜಾತಿ ಜಲಜಾಳ ಜೊತೆ ಸಂಬಂಧವಿಟ್ಟುಕೊಳ್ಳುತ್ತಾನೆ. ಈ ಕಾರಣಕ್ಕೆ ಕೊಲೆಯಾಗುತ್ತಾನೆ. ಇದು ಅನೈತಿಕ ಸಂಬಂಧ ಒಂದು ಕಾರಣವಾದರೆ ನಮ್ಮ ಜಾತಿ ವ್ಯವಸ್ಥೆಯ ಕ್ರೌರ್ಯದ ಮುಖವೂ ಹೌದು. ಇದನ್ನು ಈ ಕಾದಂಬರಿಯಲ್ಲಿ ಬರುವ ಬ್ರಾಹ್ಮಣ ವಿಧವೆ ಸರಸ್ವತಿ ಮತ್ತು ಬಯಲುಸೀಮೆಯಿಂದ ಬಂದ ಅಸ್ಪೃಶ್ಯ ದುರ್ಗಪ್ಪ ಮೇಷ್ಟ್ರರ ದುರಂತಕಥೆಯಲ್ಲಿ ಕಾಣಬಹುದು. ದುರ್ಗಪ್ಪನಿಂದ ಗರ್ಭ ಧರಿಸಿದ ಸರಸ್ವತಿ ಮಗು ತೆಗೆಸಲು ಅವಕಾಶ ನೀಡದೆ ತಂದೆಯನ್ನು ವಿರೋಧಿಸುತ್ತಾಳೆ. ಮಗಳ ಬಾಣಂತಿತನ ತಾನೇ ಮಾಡುವುದಾಗಿ ದಿಟ್ಟತನದಿಂದ ಗಂಡನ ಕ್ರೌರ್ಯವನ್ನೂ ಎದುರಿಸಿ ಯಮುನಮ್ಮ ನಿಲ್ಲುತ್ತಾಳೆ. ಇಂತಹ ಪಲ್ಲಟವನ್ನು ಆಶಯವನ್ನು ಕಾದಂಬರಿ ಹೊಂದಿದೆ.

ಮನುಷ್ಯ ಸಹಜ ಬಯಕೆಗಳಾದ ಹಸಿವು, ನಿದ್ರೆ, ಕಾಮ–ಪ್ರೇಮಗಳು ಯಾವ ಹಂಗೂ ಇಲ್ಲದೆ ಪ್ರಕಟವಾಗುತ್ತವೆ. ಅತ್ಯಂತ ನಿಷ್ಠುರವಾದ ಆಚರಣೆ, ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುತ್ತಿರುವ ಬ್ರಾಹ್ಮಣ ಸಮುದಾಯಗಳಲ್ಲೂ ಈ ಮನುಷ್ಯ ಸಹಜ ಹಸಿವುಗಳು ಕಟ್ಟುಪಾಡುಗಳಿಗೆ ಒಳಗಾಗಲಾರವು. ಅದು ವಿಧವೆ ಸರಸ್ವತಿಯಲ್ಲಿ ಹೇಗೋ ಹಾಗೆ ವಿಧವೆಯಾದ ವಿಮಲಳಲ್ಲೂ ಕೂಡ. ಆಧುನಿಕ ಶಿಕ್ಷಣ ಪಡೆದು ಹೆಚ್ಚಿನ ವ್ಯಾಸಂಗ ಮಾಡಿದ ವಿಮಲ. ತನ್ನ ಮನೆಯ ಕಾರ್ ಡ್ರೈವರ್ ಮೀಂಗೇಲ್‌ನ ಜೊತೆ ಜಾತಿ, ಅಂತಸ್ತು ಮೀರಿ ಪ್ರೀತಿ–ಪ್ರೇಮಗಳ ಸಂಬಂಧವನ್ನು ಹೊಂದಿದ್ದಾಳೆ. ಮಡಿಹಿಡಿಸಲು ಒಪ್ಪದ ತಂದೆ ಪುನರ್ ವಿವಾಹಕ್ಕೆ ಒತ್ತಾಯಿಸುವ ಅಣ್ಣನ ಬೆಂಬಲ ಮತ್ತು ವಿಧವೆಯಾದ ನಂತರ ಪಡೆದ ಹೆಚ್ಚಿನ ಶಿಕ್ಷಣ ಆಕೆಯನ್ನು ಕಟ್ಟುಕಟ್ಟಳೆಯನ್ನು ಸಹಜವಾಗಿ ಮೀರುವ ಸಾಮರ್ಥ್ಯವನ್ನು ನೀಡುತ್ತದೆ. ಆದರೆ ಹೇಳುವ ಸಾಮರ್ಥ್ಯ ಅವಳಿಗಿರಲಿಲ್ಲ. ಆದಕಾರಣ ಆ ಮಗುವನ್ನು 'ಅಕ್ಕು'ವಿನ ಮನೆಯಲ್ಲಿ ಬೆಳೆಯುವಂತೆ ಯೋಜಿಸುತ್ತಾಳೆ. 'ಅಕ್ಕು' ಮಡಿಯಾದವಳು, ಬಾಹ್ಯ ಆಚರಣೆಯಲ್ಲಿ ಸಂಪ್ರದಾಯ ನಿಷ್ಠಳಾದರೂ ಆಂತರ್ಯದಲ್ಲಿ ಫಣಿಯಮ್ಮನ ಹಾಗೆ ವೈಚಾರಿಕ ಪ್ರಜ್ಞೆಯುಳ್ಳವಳು. "ನಿತ್ಯದ ತನ್ನ ತೊಡಗುವಿಕೆಯಲ್ಲೇ ಎಲ್ಲವನ್ನು ಬೆಳೆಸಬಲ್ಲ ಅಕ್ಕು ಇದ್ದಲ್ಲೇ ಇದ್ದು ಮಾಗಬಲ್ಲಳು, ಬದಲಾಗಬಲ್ಲಳು, ಮಾನವೀಯತೆಯ ಸಕಲ ನೆಲೆಗಳನ್ನು ಬೆಳಗಬಲ್ಲಳು".[೪೦]

ಈ ಹಿನ್ನೆಲೆಯಲ್ಲಿ ಅನಾಥ ಮಗುವಿನ ಬಗ್ಗೆ ಆಕೆ ತಳೆದ ನಿಲವು ಕೇಶವನಲ್ಲಿ ಬೆರಗು ಹುಟ್ಟಿಸುತ್ತದೆ. 'ಅದು ದೇವರ ಕೂಸು ; ಅದರ ಜಾತಿ, ಕುಲ, ಗೋತ್ರ ಕೇಳಬಾರದು' ಎಂದು ನಿರ್ಭಾವದಲ್ಲಿ ಅದೊಂದು ಕೇಳುವ ಪ್ರಶ್ನೆಯಲ್ಲ ಗೊತ್ತಿರಬೇಕಾದ ಸಂಗತಿಯೆಂಬಂತೆ ಹೇಳಿಬಿಟ್ಟಿದ್ದಳು. ಕಾದಂಬರಿ ಬ್ರಾಹ್ಮಣ ಸಮಾಜದ ಮಡಿ ಮೈಲಿಗೆಗಳನ್ನು ಚಿತ್ರಿಸುತ್ತಲೇ ಆ ಸಮಾಜದ ಆಂತರ್ಯದಲ್ಲಿ ಅಡಗಿರುವ ಇಂತಹ ಮಾನವೀಯ ಸೆಲೆಗಳನ್ನೂ ಶೋಧಿಸುತ್ತದೆ. ಹೀಗೆ ಅಕ್ಕು, ಗೌರಿ, ವಿಮಲೆ, ಸರಸ್ವತಿ, ಕೇಶವ,

ಜಗನ್ನಾಥ ಮೊದಲಾದ ಪಾತ್ರಗಳ ಮೂಲಕ ಮತ ಮೌಢ್ಯ, ಜಾತಿ ತಾರತಮ್ಯಗಳ ಆಚೆ ಮನುಷ್ಯ ಸಹಜ ಪ್ರೀತಿ, ವಿಶ್ವಾಸ, ಪ್ರೇಮ ಸಂಬಂಧದ ವ್ಯವಹಾರಗಳ ನೈಜತೆಯನ್ನು ಕಾದಂಬರಿ ಚಿತ್ರಿಸುತ್ತದೆ.

ದಿವ್ಯ ಕಾದಂಬರಿ ಜಾತಿ, ಮತ, ಮೌಢ್ಯಗಳ ಮೀರುವ ಆಶಯ ಹೊಂದಿದ್ದರೂ ಇಲ್ಲಿ ಬರುವ ಜನರು, ಘಟನೆಗಳು, ಸಂದರ್ಭಗಳು ತುಂಬಾ ಕುತೂಹಲಕಾರಿಯಾಗಿವೆ. ಮಂಜಯ್ಯನಂತವನು ಒಮ್ಮೆ ಕಾಂಗ್ರೇಸ್ಸಿನ ಉದಾರವಾದಿ ಮುಂದಾಳಾಗಿಯೂ, ಅದೇ ಕಾಲಕ್ಕೆ ಬ್ರಾಹ್ಮಣ ಮಹಾಸಭಾದ ಜಾತಿ ಸಂಘಟನೆಯ ಅಧ್ಯಕ್ಷನೂ ಆಗಬಲ ; ಹಾಗೆ ಗೊಡ್ಡು ಸಂಪ್ರದಾಯದ ಬ್ರಾಹ್ಮಣ್ಯವನ್ನೂ ವಿರೋಧಿಸಬಲ್ಲ. ಈ ಬಗೆಯ ಸಂಕೀರ್ಣ ವ್ಯಕ್ತಿತ್ವವು ಬದಲಾಗುತ್ತಿರುವ ಕಾಲ ಘಟ್ಟಕ್ಕೆ ಯಾವುದನ್ನೂ ಪೂರ್ಣವಾಗಿ ತಿರಸ್ಕರಿಸದ ಹಾಗೆಯೆ ಸ್ವೀಕರಿಸದ ಒಂದು ದ್ವಂದ್ವದ ಸ್ಥಿತಿಯನ್ನು ಸೂಚಿಸುತ್ತದೆ. ಇಂತಹ ದ್ವಂದ್ವ ನಿಲುವನ್ನು ಮಗ ಘನಶ್ಯಾಮ ವಿರೋಧಿಸುವುದನ್ನು ಒಳಗೊಳಗೇ ಹೆಮ್ಮೆ ಪಡುತ್ತಾನೆ. ಇದರ ಹಿಂದೆ ರಾಜಕೀಯ ಲಾಭದ ದೂರದೃಷ್ಟಿಯು ಇದೆ. ಇಂತಹ ಘಟನಾವಳಿಗಳು ಸಾಮಾಜಿಕ ಬದುಕಿನ ಸಂಕ್ರಮಣ ಸ್ಥಿತಿಯನ್ನು ತುಂಬಾ ಅರ್ಥಪೂರ್ಣವಾಗಿ ಧ್ವನಿಸುತ್ತದೆ.

ಮಂಜಯ್ಯನ ತಲೆಮಾರು ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷಕ್ಕೆ ತುತ್ತಾಗಿ ಅವರ ವ್ಯಕ್ತಿತ್ವಗಳು ಒಂದು ನಿಲುವಿಗೆ ಬದ್ಧತೆ ತೋರುವುದಿಲ್ಲ. ಆದರೆ ಸಮಾಜ ನಿತ್ಯಪರಿವರ್ತನಾಶೀಲ. ಹಾಗಾಗಿ ತನ್ನ ನಿರಂತರ ಬದಲಾವಣೆಯ ಗತಿಯಲ್ಲಿ ಅಧುನಿಕ ಶಿಕ್ಷಣ ಪಡೆದ ಘನಶ್ಯಾಮ ತನ್ನ ತಂದೆಗಿಂತ ಭಿನ್ನವಾಗಿ ತೋರುತ್ತಾನೆ. ಮನೆಯಲ್ಲಿ ನಡೆಯುತ್ತಿದ್ದ ಭೂವರಹ ಪೂಜೆಯನ್ನು ಪೂರ್ಣವಾಗಿ ನಿಲ್ಲಿಸುವುದನ್ನು, ತಂದೆಯ ಶವದ ಅಗ್ನಿ ಸಂಸ್ಕಾರ ಮಾಡಿದರೂ ಅಪರಕ್ರಿಯೆಗಳು ನಡೆಸದಿರುವುದು ಇತ್ಯಾದಿಯಾಗಿ ಪ್ರಜ್ಞಾಪೂರ್ವಕವಾಗಿ ವಿಧಿ ನಿಷೇಧಗಳನ್ನು ಮೀರುತ್ತಾನೆ. ಸಹಪಂಕ್ತಿ ಭೋಜನ ಏರ್ಪಡಿಸಿ ಜಾತ್ಯತೀತ ಮನೋಭಾವನೆಯಿಂದ ಎಲ್ಲರೂ ಒಂದಾಗಿ ಸೇರುವ ಕಲ್ಪನೆಯಲ್ಲಿ ಆ ವಿಧಿಕ್ರಿಯೆಗೆ ಸಾಂಸ್ಕೃತಿಕ ಸ್ವರೂಪವನ್ನು ನೀಡುತ್ತಾನೆ. ಇದು ಕೃತಿಯ ಮುಖ್ಯ ಆಶಯ ನಿಜ. ಆದರೆ ಮಲೆನಾಡ ಪರಿಸರವೂ ಸೇರಿದಂತೆ ಒಟ್ಟು ಭಾರತೀಯ ಸಮಾಜದಲ್ಲಿ ಜಾತಿ ನಿಷ್ಠ ವ್ಯವಸ್ಥೆಯಲ್ಲಿ ಈ ಬಗೆಯ ಆಲೋಚನೆ, ಕ್ರಿಯೆಗಳಿಗೆ ಸಕಾರಾತ್ಮಕವಾದ ಪ್ರತಿಕ್ರಿಯೆಗಿಂತ 'ನ' ಕಾರಾತ್ಮಕವಾದ ಪ್ರತಿಕ್ರಿಯೆಯೇ ಹೆಚ್ಚು. ಹಾಗಾಗಿ ಸಹಪಂಕ್ತಿ ಭೋಜನದಲ್ಲಿ ಸಂಪ್ರದಾಯನಿಷ್ಠ ಬ್ರಾಹ್ಮಣರು ಪಾಲ್ಗೊಳ್ಳುವುದಿಲ್ಲ. ಹಾಗೆ ಪಾಲ್ಗೊಂಡ ಇತರ ಜಾತಿ ಸಮಾಜಗಳು ಕೂಡ ಅಂಗಳದಲ್ಲಿ ಊಟ ಹಾಕಿದ ಎಲೆಯ ಮುಂದೆ ತಮ್ಮ ತಮ್ಮ ಸ್ಥಾನಮಾನ, ಜಾತಿ ಹಿನ್ನೆಲೆಯಲ್ಲೇ ಗುಂಪು ಗುಂಪಾಗಿ ಪ್ರತ್ಯೇಕ, ಪ್ರತ್ಯೇಕವಾಗಿಕೊಳ್ಳುವ ಸಂದರ್ಭ ವ್ಯಂಗ್ಯವಾಗಿ ಆಶಯದ ವಿಫಲತೆಯನ್ನು ತೋರಿಸುತ್ತದೆ. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಮಡಿಮೈಲಿಗಳ, ತಾರತಮ್ಯಗಳ ನಿಲುವಿನಲ್ಲಿ ಮಾನಸಿಕವಾಗಿ ಈ ಪರಿಸರದ ಜನ ದೂರವಾಗಿಲ್ಲ ಎಂಬುದನ್ನು ಸೂಚಿಸುತ್ತದೆ. ಆದರೆ ಆಧುನಿಕ ಶಿಕ್ಷಣ ಪಡೆದ 'ಘನಶ್ಯಾಮ'ನಂತಹ ಬ್ರಾಹ್ಮಣ ಯುವ ಬದಲಾಗುವುದು ಮುಖ್ಯ ಸಂಗತಿಯಾಗುತ್ತದೆ. ಚಿಕ್ಕ ಚಿಕ್ಕ ಘಟಕಗಳಿಂದಲೇ ಕಟ್ಟಲ್ಪಟ್ಟಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಿತ್ಯಂತರದ ಪ್ರಕ್ರಿಯೆಯೆಂಬುದು ನಿಧಾನಗತಿಯೇ ಆಗಿರುತ್ತದೆ.

ಪರಿವರ್ತನಾಶೀಲ ಸಮಾಜದ ಬದುಕಿನಲ್ಲಿ ಯಾವುದೂ ಎಂದಿಗೂ ಸ್ಥಿರವಾಗಿ ನಿಲ್ಲುವಂತಹದಲ್ಲಿ

ಅಂತೆಯೇ ಬ್ರಾಹ್ಮಣ್ಯವೂ ಕೂಡ. ಬ್ರಾಹ್ಮಣ ಎಂದರೆ ಬೇಡುವವನೆಂದೇ ಅರ್ಥ. ಈ ಹಿನ್ನಲೆಯಲ್ಲಿ ಕೃಷ್ಣಾಶಾಸ್ತ್ರಿಗಳ ಬಹಳ ಮುಖ್ಯವೆನಿಸುತ್ತದೆ.

"ಕಾಯಕ ಜೀವಿಗಳಾದ ಶೂದ್ರರು ದುಡಿದೇ ತಿನ್ನಬೇಕೆಂದು ನಿಯಮದವರು......... ಬ್ರಾಹ್ಮಣ ಮಾತ್ರ ಭಿಕ್ಷಾನ್ನಕ್ಕೆ ಅರ್ಹರು......... ಬ್ರಾಹ್ಮಣರು ಇಡೀ ಲೋಕಕ್ಕೆ ಉಪಯುಕ್ತವೆನಿಸಿದ ವೇದಾಧ್ಯಯನದಲ್ಲಿ ಅಹರ್ನಿಶಿ ನಿರತರಾಗಿದ್ದವರು......... ಪರಕೀಯ ಆಕ್ರಮಣ ಕಾಲದಲ್ಲೂ ಬಾಯಲ್ಲಿ ಕಲಿತು ನೆನೆಪಿನಲ್ಲಿ ಉಳಿಸಿಕೊಂಡು ಬಂದವರು. ಇದು ಉಪಯುಕ್ತ ಕೆಲಸ ಎಂದು ಸಮಸ್ತರೂ ತಿಳಿದಿದ್ದರಿಂದ, ಬ್ರಾಹ್ಮಣನಿಗೆ ಭಿಕ್ಷೆ ಸ್ವೀಕರಿಸುವ ಅಧಿಕಾರ ಪ್ರಾಪ್ತವಾದದ್ದು, ಈಗ ಕಾಲ ಬದಲಾಗಿದೆ".[೮೦]

ಕೃಷ್ಣಶಾಸ್ತ್ರಿಗಳು ಸಂಭಾವನೆಯ ಕಾಯಕದವರೇ ಆದರೂ ಕಾಲಗತಿಯಲ್ಲಿ ಆತ್ಮ ಶೋಧನೆಯಿದೆ. ವೇದಗಳ ಪಠನೆಯಿಂದ ಕಾಲಕಳೆಯುತ್ತಾ ಕೃಷಿಕನಿಂದ ಸಂಭಾವನೆ ಪಡೆದು ಬದುಕು ಸಾಗಿಸುವುದು ದುಸ್ತರವೆನಿಸಿದೆ. ಏಕೆಂದರೆ ಮೌಖಿಕವಾಗಿದ್ದ ವೇದೋಪನಿಷತ್‌ಗಳು ಬದಲಾದ ಕಾಲಕ್ಕೆ ಮುದ್ರಿತರೂಪದಲ್ಲಿ ದೊರೆಯುತ್ತವೆ. ಆದ್ದರಿಂದ ಸಂಭಾವನೆ ಕಾಯಕ ಅರ್ಥ ಮತ್ತು ಬೆಲೆಯನ್ನು ಎರಡನ್ನು ಕಳೆದುಕೊಂಡಿದೆ. ಇಂತಹ ಸಂದರ್ಭದಲ್ಲಿ ಬ್ರಾಹ್ಮಣ್ಯದ ಹೆಸರು ಹೇಳಿಕೊಂಡು ಸಂಭಾವನೆ ಮೂಲಕ ಜೀವಿಸುವುದು ನಗೆಪಾಟಲಿನ ಸಂಗತಿಯಾಗಿದೆ. ಆದ್ದರಿಂದ ಮನುಕುಲದಲ್ಲಿ ಶ್ರೇಷ್ಠ-ಕನಿಷ್ಠ ಎಂಬ ತಾರತಮ್ಯಗಳು ಈಗ ನಡೆಯುವುದಿಲ್ಲ. ಅವು ಪ್ರಶ್ನಾರ್ಹವೂ ಹೌದು. ಈ ಹಿನ್ನಲೆಯಲ್ಲಿ ಕಾದಂಬರಿಯ ಘಟನೆ ತುಂಬಾ ಅರ್ಥವಂತಿಕೆಯನ್ನು ಪಡೆದುಕೊಳ್ಳುತ್ತದೆ.

ಅಸ್ಪೃಶ್ಯತೆ, ಜಾತಿ, ವರ್ಗಸಂಘರ್ಷ : ಬಿಳುಮನೆ ರಾಮದಾಸ್ ಕಥನ

ಭಾರತದ ಸಾಂಪ್ರದಾಯಿಕ ಜೀವನ ವಿಧಾನದಲ್ಲಿ ಜಾತಿ ವ್ಯವಸ್ಥೆಯ ಬೇರುಗಳು ಬಲವಾಗಿಯೇ ಉಳಿದಿದೆ. ಆದರೆ ಆಧುನಿಕ ಶಿಕ್ಷಣದ ಕಾಲಕ್ಕೆ ಇಲ್ಲಿಯ ಸಾಮಾಜಿಕ ರಚನೆಯನ್ನು ಬೇರೆ ಬೇರೆ ದೃಷ್ಟಿ ಧೋರಣೆಗಳಿಂದ ವಿಶ್ಲೇಷಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಬಿಳುಮನೆ ರಾಮದಾಸ್ ಅವರು ತಮ್ಮ ಚೊಚ್ಚಲ ಕಾದಂಬರಿ 'ವ್ಯಾಮೋಹ'ದಲ್ಲಿ ಪ್ರಜ್ಞಾಪೂರ್ವಕವಾಗಿಯೇ ಜಾತಿ, ವರ್ಣ, ಸಂಘರ್ಷವನ್ನು ಮುಖಾಮುಖಿಯಾಗಿಸುತ್ತಾರೆ. ಈ ಕಾದಂಬರಿಯ ಕಥಾನಾಯಕ ಶ್ರೀನಿವಾಸ ಕಾನೂನು ಪದವಿ ಮುಗಿಸಿ ಹಳ್ಳಿಗೆ ಹಿಂದುರಿಗಿದವನು. ತನ್ನ ಪರಿಸರವನ್ನು ಅಪಾರವಾಗಿ ಪ್ರೀತಿಸುವ ಈತ ಆಧುನಿಕವೂ, ಮಾನವೀಯವೂ ಆದ ಬದುಕಿಗೆ ಹಾತೊರೆಯುವವನು. ಭಾರತೀಪುರದ ಜಗನ್ನಾಥನ ಹಾಗೆ ದೇವಾಲಯದೊಳಗೆ ಹರಿಜನ ಪ್ರವೇಶ ಆಗಬೇಕು ಅಂತ ಬಯಸುತ್ತಾನೆ. ಮೇಗರವಳ್ಳಿ ಈಶ್ವರ ದೇವಸ್ಥಾನಕ್ಕೆ ಪೂಜೆ ನಡೆದ ಸಂದರ್ಭದಲ್ಲಿ ಒಳಗೆ ಬರುವಂತೆ ಸೂಚಿಸಿದ್ದರಿಂದ ಹರಿಜನ ಚೌಡ ಕಂಬಳಿಕೊಪ್ಪೆ ಹಾಕಿಕೊಂಡು ದೇವಸ್ಥಾನದೊಳಗೆ ನುಗ್ಗಿದ್ದ. ದೇವರಮೂರ್ತಿಯನ್ನು ವಿಸ್ಮಯದಿಂದ ನೋಡುತ್ತಿದ್ದ ಚೌಡನನ್ನು ಭಟ್ಟರು ನೋಡಿ ಹೌಹಾರಿದರು.

"ನೋಡಿ ಹೊಲೆಯನ್ನೊಬ್ಬ ದೇವಸ್ಥಾನದೊಳಗೆ ಬಂದಿದ್ದಾನೆ. ಅವನು ಸ್ವಂತ ಬುದ್ಧಿಯಿಂದ ಬಂದಿರಲಿಕ್ಕಿಲ್ಲ......... ನಾಳೆ ದಿನಗಳಲ್ಲಿ ನಾಗ ಕಾಣಿಸಿಕೊಂಡರೆ ನಾನು ಜವಾಬ್ದಾರನಲ್ಲ........."[೮೨] ಎಂದು ಶೂದ್ರ ಸಮುದಾಯಕ್ಕೆ ಕೂಗಿ ಹೇಳಿದ. ಸಮಾನತೆಯನ್ನು ಹಠದಿಂದಲೇ ಪಡೆಯಬೇಕೆಂಬ

ನಿಲುವಿನಿಂದ ಬ್ರಾಹ್ಮಣರು ಕುಳಿತುಕೊಳ್ಳುವ ಜಾಗದಲ್ಲಿ ಶ್ರೀನಿವಾಸ ಕುಳಿತುಕೊಂಡಿದ್ದ. ವಿದ್ಯಾವಂತನಾದ ಶ್ರೀನಿವಾಸನನ್ನು ಮಡಿವಂತರು ವಿರೋಧಿಸಲು ಶಕ್ತರಾಗಲಿಲ್ಲ ; ಕಾಲಬದಲಾಗುತ್ತಿತ್ತು. ಆದರೆ ಚೌಡನ ಪ್ರವೇಶವನ್ನು ವಿರೋಧಿಸುತ್ತಾರೆ ಮತ್ತು ಶೂದ್ರ ಸಮುದಾಯವನ್ನು ಬಳಸಿಕೊಳ್ಳುವ ತಂತ್ರವನ್ನು ಗಮನಿಸಬಹುದು. ಅವನು ಸ್ವಂತ ಬುದ್ಧಿಯಿಂದ ಬಂದಿಲ್ಲ ಎಂದು ಶ್ರೀನಿವಾಸನನ್ನು ಗಮನದಲ್ಲಿಟ್ಟುಕೊಂಡೇ ಹೇಳಿದ ಮಾತು. ಹಾಗೆ ದೇವಸ್ಥಾನದೊಳಗೆ ಅಸ್ಪೃಶ್ಯ ಬಂದದ್ದರಿಂದ ಶೂದ್ರರ ಮನೆಯಲ್ಲಿ ಮಾತ್ರ ನಾಗ ಏಕೆ ಕಾಣಿಸಬೇಕು? ಅಂದರೆ ಶೂದ್ರ ಶ್ರೀನಿವಾಸನ ಚಿತಾವಣೆಯಿಂದ ಚೌಡ ಬಂದದ್ದರಿಂದ ಶೂದ್ರ ಜಾತಿ ಮನೆಗಳಲ್ಲಿ ನಾಗ ಕಾಣಿಸಿಕೊಳ್ಳುತ್ತದೆ ಎಂಬ ಭಯವನ್ನು ಹೇರುವ ತಂತ್ರ. ಈ ರೀತಿ ಪುರೋಹಿತಶಾಹಿ ಶೂದ್ರ ಸಮುದಾಯವನ್ನು ಬಳಸಿಕೊಂಡು ತಳಸಮುದಾಯವನ್ನು ನಿರಾಕರಿಸುವುದು, ಜಾತೀಯತೆಯನ್ನು ಪ್ರತಿಯೊಂದು ಸಮುದಾಯವೂ ಪಾಲಿಸಿಕೊಂಡು ಬರುವಂತೆ ವ್ಯವಸ್ಥೆಗೊಳಿಸುವುದು ಲಾಗಾಯ್ತಿನಿಂದಲೂ ಬಂದದ್ದು. ಶ್ರೀನಿವಾಸನಂತವರು ಇದನ್ನೇ ವಿಷ ಬೀಜ ಬಿತ್ತಾ ಇದ್ದೀರಿ ಎಂದು ಪ್ರತಿಭಟಿಸುತ್ತಾನೆ. ಕೆಲವರು ಯುವಕರು ಪುರೋಹಿತರ ನಡವಳಿಕೆ ಬಗ್ಗೆ ಅಸಹ್ಯಪಡುತ್ತಾರೆ. ಆದರೆ ಹಲವರು ಪುರೋಹಿತರಿಗಾದ ಅವಮಾನ ದೇವರಿಗೆ ಆದ ಅವಮಾನವೆಂದು ಭಾವಿಸಿ ಹಲ್ಲೆ ಮಾಡಲು ಮುಂದಾದರು.

"ಕನ್ನಡದಲ್ಲಿ ಹೆಚ್ಚಿನ ಕೃತಿಗಳೆಲ್ಲ ಮಂದಿರ ಪ್ರವೇಶಕ್ಕೆ ಸಂಬಂಧಿಸಿದ ಕೃತಿಗಳೆ ಆಗಿವೆ. ಅದರಲ್ಲಿ ಹೆಚ್ಚಿನ ಕೃತಿಗಳಲ್ಲೆಲ್ಲ ಬ್ರಾಹ್ಮಣ ಲೇಖಕರ ಕೃತಿಗಳೇ ಆಗಿದ್ದು, ಯಾವ ಕೃತಿಯಲ್ಲಿಯೂ ಮಂದಿರದ ಪ್ರವೇಶ ಯಶಸ್ವಿಯಾಗುವುದಿಲ್ಲ ಎನ್ನುವುದು ವಿಶೇಷ. ಪ್ರವೇಶವಾದರೂ ಅನಾಹುತಕಾರಿ ನೆಲೆಯಲ್ಲಿ ಮುಕ್ತಾಯಗೊಳ್ಳುತ್ತದೆ"[೪೩]

ಎಂಬ ಮಾತನ್ನು ಗಮನಿಸಬೇಕು. ಮಲೆನಾಡ ಪರಿಸರದಿಂದ ಬಂದ ಯು.ಆರ್.ಅನಂತಮೂರ್ತಿ ಅವರ ಭಾರತೀಪುರ ಕಾದಂಬರಿಯಲ್ಲಿ ಜಗನ್ನಾಥನ ಮಾರ್ಗದರ್ಶನದಲ್ಲಿ ಮಂಜುನಾಥಸ್ವಾಮಿ ದೇವಾಲಯವನ್ನು ಹರಿಜನರು ಪ್ರವೇಶ ಮಾಡಿದಾಗ ಅಲ್ಲಿ ಸಂಘರ್ಷ ನಡೆಯುವುದಿಲ್ಲ. ಏಕೆಂದರೆ ದೇವಾಲಯ ವೈವಾಟುದಾರ ಜಗನ್ನಾಥನೇ ಆದ್ದರಿಂದ ಗಣೇಶನ ನಡವಳಿಕೆಯಿಂದ ಅಲ್ಲಿ ದೇವರ ಮೂರ್ತಿಯೇ ಇರುವುದಿಲ್ಲ. ಹಾಗೆ ಬಿಳುಮನೆ ರಾಮದಾಸ್ ಅವರ ವ್ಯಾಮೋಹ ಕಾದಂಬರಿಯಲ್ಲಿ ನಾಯಕ ಶ್ರೀನಿವಾಸನ ನಿರ್ದೇಶನದಂತೆ ಮೇಗರವಳ್ಳಿ ಈಶ್ವರ ದೇವಸ್ಥಾನಕ್ಕೆ ಚೌಡನ ಪ್ರವೇಶದಿಂದ ಪುರೋಹಿತರ ವಿರೋಧ, ಮೂಢಶೂದ್ರ ಭಕ್ತರ ಹಲ್ಲೆಯಾಗುತ್ತದೆ. ಈ ಎರಡೂ ಕೃತಿಗಳಲ್ಲೂ ಹರಿಜನ ತಾವಾಗಿ ಪ್ರವೇಶಮಾಡಬೇಕೆಂಬ ಕುತೂಹಲ, ಹಕ್ಕಿನಿಂದ ಪ್ರವೇಶ ಮಾಡಿದ್ದಲ್ಲ ಮೇಲುವರ್ಗದ ನಾಯಕರೇ ಅವರಿಗೆ ಪ್ರೋತ್ಸಾಹ ನೀಡಿ ದೇವಾಲಯ ಪ್ರವೇಶ ಮಾಡಿಸಿದ್ದರೂ ಅದು ವಿಫಲಗೊಳ್ಳುವ ರೀತಿಯಲ್ಲಿ ಚಿತ್ರಿತವಾಗಿರುವ ಬಗ್ಗೆ ವಿರೋಧ ವ್ಯಕ್ತವಾಗಿರುವುದನ್ನು ಕಾಣಬಹುದು.

ಒಟ್ಟಾರೆ ಜಾತಿ ಕಟ್ಟಳೆ ಮತ್ತು ಹೇರಲ್ಪಟ್ಟ ಮೌಢ್ಯಗಳಿಂದ ಮಲೆನಾಡ ಪರಿಸರದಲ್ಲಿ ಜಾತೀಯತೆ ಮತ್ತು ಅಸ್ಪೃಶ್ಯತೆಯನ್ನು ನೀಗಿಸುವುದು ಸುಲಭ ಸಾಧ್ಯವಾಗಿಲ್ಲವೆಂಬುದನ್ನು ಕಾದಂಬರಿ ಮನಗಾಣಿಸುತ್ತದೆ.

ಹಾಗೆ ಇದರ ವಿರುದ್ಧ ಸಂಘರ್ಷಗಳು ಮಲೆನಾಡಿನಾದ್ಯಂತ ನಡೆದದ್ದು ಎಲ್ಲಿಯೂ ಕಂಡುಬರುವುದಿಲ್ಲ. ಇಂದು ಮುಜಾರಾಯಿ ಇಲಾಖೆಗೆ ಸೇರಿದ ದೊಡ್ಡ ದೇವಸ್ಥಾನಗಳಲ್ಲಿ ಹರಿಜನರಿಗೆ ಪ್ರವೇಶವಿದೆ. ಒಂದೊಂದು ಊರಿನಲ್ಲಿರುವ, ಈ ಊರಿನವರಿಗೆ ಸೀಮಿತವಾದ ದೇವಾಲಯಗಳಲ್ಲಿ ಇಂದಿಗೂ ಹರಿಜನರಿಗೆ ಒಳ ಪ್ರವೇಶವಿಲ್ಲ. ಇಲ್ಲಿ ಪುರೋಹಿತರಿಗಿಂತ ವೇದವಾಕ್ಯ ಪಾಲಕರಾದ ಪ್ರಬಲ ಕೋಮಿನ ಶೂದ್ರ ಸಮುದಾಯದವರ ವಿರೋಧ ಇದೆ ಎಂಬುದನ್ನು ಮನಗಾಣಬಹುದು.

ಆಧುನಿಕ ಶಿಕ್ಷಣ ಪಡೆದ ಶ್ರೀನಿವಾಸ ತನ್ನ ಪರಿಸರದಲ್ಲಿ ಬದಲಾವಣೆಯನ್ನು ಹೊಸತನ್ನು ತರ ಬಯಸಿ ಸುಡುವಾಸ್ತವಗಳ ಜೊತೆ ಸೆಣಸುತ್ತಾ, ಸೋಲು, ಅಪಮಾನಗಳನ್ನು ಎದುರಿಸುತ್ತಾ ಗಟ್ಟಿಯಾಗಿ ಹೆಜ್ಜೆಗಳನ್ನು ಇಡುವಂತವನು. ಮೇಲುಜಾತಿಗಳ ಹನಸದ ಭಟ್ಟರ ಮಗನನ್ನು ಮತ್ತು ಸೊಸೆ ಲಕ್ಷ್ಮೀಯನ್ನು ಪ್ರಜ್ಞಾಪೂರ್ವಕವಾಗಿ ಏಕವಚನದಲ್ಲಿ ಸಂಬೋಧಿಸುವುದರ ಮೂಲಕ ಈ ಮಲೆನಾಡ ಪರಿಸರದಲ್ಲಿ ಮೇಲು ಜಾತಿಯವರು ವಯಸ್ಸಿನಲ್ಲಿ ಎಷ್ಟೇ ಕಿರಿಯರಾದರೂ, ಶೂದ್ರ ಸಮುದಾಯ ಎಷ್ಟೇ ಹಿರಿಯರಾಗಿದ್ದರೂ ಬಹುವಚನದಲ್ಲಿ ಸಂಬೋಧಿಸಬೇಕೆಂಬ ಪದ್ಧತಿಯನ್ನು ವಿರೋಧಿಸುತ್ತಾನೆ. ವಿಧವೆ ಲಕ್ಷ್ಮೀಯ ಬಗ್ಗೆ ಆರಂಭದಲ್ಲಿ ಮುಗ್ಧವಾಗಿ ಗಮನ ಹರಿಸುವ ಶ್ರೀನಿವಾಸ ಕ್ರಮೇಣ ಅವಳಲ್ಲಿ ಅನುರಕ್ತನಾದ. ಆಕೆಯನ್ನು ಕೇವಲ ಲೈಂಗಿಕ ಬಯಕೆಯ ಹಿನ್ನೆಲೆಯಲ್ಲಿ ಪ್ರೀತಿಸಿದವನಲ್ಲ ; ಜಾತಿಯ ವ್ಯವಸ್ಥೆಯನ್ನು ಮುರಿಯುವ ಪ್ರೀತಿ–ಪ್ರೇಮಕ್ಕೆ ಜಾತಿ ಅಡ್ಡಬರಬಾರದೆಂಬ ಆದರ್ಶದ ಕನಸುಕಂಡು ಲಕ್ಷ್ಮೀಯನ್ನು ಮದುವೆಗೆ ಒತ್ತಾಯಿಸಿದವನು. ಆದರೆ ಆಂತರ್ಯದಲ್ಲಿ ಶ್ರೀನಿವಾಸನ ಬಗೆಗೆ ಜಾತಿಯನ್ನು ಮೀರಿದ ಪ್ರೇಮವನ್ನು ಹೊಂದಿದ್ದರೂ, ಸಾಮಾಜಿಕವಾಗಿ ಮದುವೆಗೆ ಒಪ್ಪಲಾರಳು. ಕಾರಣ ಬ್ರಾಹ್ಮಣ ಹುಡುಗಿಯೊಬ್ಬಳು ಶೂದ್ರ ಹುಡುಗನನ್ನು ಅದರಲ್ಲೂ ವಿಧವೆಯೊಬ್ಬಳು ಹಾಗೆ ಮಾಡುವುದು ಕನಸಿನ ಮಾತು. ಜಾತಿಯಿಂದ ಬಹಿಷ್ಕೃತಗೊಳ್ಳುವ ಭಯ, ಮಾಂಸ ತಿನ್ನುವ ಮನೆಯ ವಾಸದ ಅಸಹ್ಯತೆ, ತನ್ನ ಜಾತಿಯವರಲ್ಲಿ ವಿಧವೆ ಮದುವೆಯಾಗುವುದನ್ನು ಆಕೆ ಕಂಡೇ ಇಲ್ಲದ್ದು ಹಾಗಿರುವಾಗ ಶೂದ್ರನನ್ನು ಕಟ್ಟಿಕೊಂಡು ಸಮಾಜವನ್ನು ಎದುರಿಸುವ ಸಾಮರ್ಥ್ಯ ಅವಳಲ್ಲಿ ಇಲ್ಲವಾದ್ದರಿಂದ ಶ್ರೀನಿವಾಸನ ಜೊತೆ ದೈಹಿಕ ಸಂಬಂಧವನ್ನಷ್ಟೇ ಹೊಂದುವ ಒಳದಾರಿಯನ್ನು ಬಯಸಿದ್ದಳು. ಆದರೆ ಆದರ್ಶದ ದೃಢಹೆಜ್ಜೆಯ ಶ್ರೀನಿವಾಸನ ನಿರ್ಧಾರವನ್ನು ಸ್ವೀಕರಿಸಲಾರದೆ, ಪ್ರೀತಿಯನ್ನೂ ಬಿಡಲಾಗದೆ ಸಾವಿಗೆ ಶರಣಾದಳು.

ಈ ಪರಿಸರದ ಬ್ರಾಹ್ಮಣ ಸಮುದಾಯದಲ್ಲಿ ವಿಧವೆಯಲ್ಲಿ ಜನಿಸಿದವರು ಆ ಸಮಾಜದಿಂದ ಬಹಿಷ್ಕೃತರಾಗಿ ಅವರು 'ಮಾಲೇರು' ಎಂದು ಕರೆಯಿಸಿಕೊಳ್ಳುತ್ತಿದ್ದಾರೆ. ಅವರಿಗೆ ಇತರ ಬ್ರಾಹ್ಮಣರ ಜೊತೆ ಸಹಪಂಕ್ತಿ ಭೋಜನವಿಲ್ಲ. ಹಾಗೆ ಬ್ರಾಹ್ಮಣರ ಮನೆಯ ಅಡುಗೆ ಮನೆಗೂ ಪ್ರವೇಶವಿಲ್ಲ. (ಅನಂತಮೂರ್ತಿ ಅವರ ಸಂಸ್ಕಾರ ಕಾದಂಬರಿಯಲ್ಲಿ ಬರುವ 'ಮಾಲೇರುಪುಟ್ಟ' ನನ್ನು ಗಮನಿಸಬಹುದು). ಹಾಗೆ ಒಕ್ಕಲಿಗ ಸಮುದಾಯದಲ್ಲೂ ಗಂಡನ ಕಳೆದುಕೊಂಡವಳು ಬೇರೊಬ್ಬನ ಜೊತೆ 'ಸೀರುಡಿಕೆ' ಮಾಡಿಕೊಂಡನಂತರ ಜನಿಸಿದವರನ್ನು 'ಮೂಡಲಮನೆ'ಯವರು ಎಂದು ಕರೆಯುತ್ತಿದ್ದರು. 'ವ್ಯಾಮೋಹ' ಕಾದಂಬರಿಯಲ್ಲಿ ಬರುವ ರಾಮಯ್ಯನ ಮನೆಯಲ್ಲಿರುವ ಮಂಜಪ್ಪ ಮೂಡಲಮನೆಯವನು. ಯಾವುದೋ ತಲೆಮಾರಿನಲ್ಲಿ ನಡೆದದ್ದು ಎರಡು–ಮೂರು ತಲೆಮಾರು ಕಳೆದರೂ 'ಕಳಂಕ' ಕಳಚಿಕೊಳ್ಳುತ್ತಿರಲಿಲ್ಲ.

ಮಂಜಪ್ಪ ಒಕ್ಕಲಿಗರ ಮನೆಯ ಅಡಿಗೆ ಮನೆಗೆ ಹೋಗುವಂತಿರಲಿಲ್ಲ. ಆತನಿಗೆ ಒಕ್ಕಲಿಗ ಜಾತಿಯಲ್ಲಿ ಯಾರೂ ಹೆಣ್ಣು ಕೊಡದೆ ಕನ್ನಡ ಜಿಲ್ಲೆಯಿಂದ ಶೆಟ್ಟರ ಹುಡುಗಿಯನ್ನು ತಂದು ಮದುವೆ ಮಾಡಲಾಗಿತ್ತು. ಹೀಗೆ ಪ್ರತಿಯೊಂದು ಜಾತಿಯ ಒಳಗಿನ ತಾರತಮ್ಯಗಳನ್ನು ಹೇಗೆ ಪಾಲಿಸಿಕೊಂಡು ಬರುತ್ತಿದೆ ಎಂಬುದನ್ನು ಗಮನಿಸಬಹುದು. ಹಾಗೆ ಒಂದು ಕಾಲದಲ್ಲಿದ್ದ ಒಕ್ಕಲಿಗರ ಸಮುದಾಯದ ಈ ಕೀಳುನೋಟ ಆರ್ಥಿಕ ಸ್ಥಿತಿ ಸುಧಾರಿಸುತ್ತಿದ್ದಂತೆ ನಿಧಾನವಾಗಿ ಅವೆಲ್ಲ ಜನರ ಮನದಿಂದ ಮಾಯವಾಗಿದೆ.

ಬಿಳುಮನೆ ರಾಮದಾಸ್ ಅವರ 'ಕುಂಜ' ಕಾದಂಬರಿ ಮಲೆನಾಡಿನ ಜೀವನಾನುಭವದ ಮೂಸೆಯಿಂದ ಬರುವ ಮತ್ತೊಂದು ಕೃತಿ. ಜಮೀನ್ದಾರಿ ಕ್ರೌರ್ಯಕ್ಕೆ, ಜಾತಿಯತೆಯ ಶೋಷಣೆಗೆ ಸಿಲುಕಿದ್ದರೂ ಬದುಕಲು ಹೋರಾಡುವ ಅದಮ್ಯ ಚೇತನ್ಯವನ್ನು ಕುಂಜನಲ್ಲಿ ಕಾಣಬಹುದು. ತಂದೆಯಾರೆಂದು ತಿಳಿಯದ, ಅಸ್ಪೃಶ್ಯ ಹೆಣ್ಣೊಂದರಲ್ಲಿ ಹುಟ್ಟಿ ಬಾಲ್ಯದಲ್ಲೇ ತಾಯಿ ಕಳೆದುಕೊಂಡು ತಬ್ಬಲಿಯಾದವನು. ಯಾರೊ ಮನೆಯ ಅಂಗಳದಲ್ಲಿ ಬೆಳೆದು, ಬದುಕಿಗಾಗಿ ಅನೇಕ ಸಾಹುಕಾರರ ಮನೆಯಲ್ಲಿ ಆಳಾಗಿ, ಅವರ ಕ್ರೌರ್ಯ ಸಹಿಸಲಸಾಧ್ಯವಾಗಿ, 'ಸಸಿಗೊಳ್ಳಿ' ಊರಿಗೆ ಬಂದು ಸೇರಿದ್ದಾನೆ. ಇಲ್ಲಿಯ ಶಂಕರಪ್ಪ ಗೌಡನ ಆಳು ಮಂಜ, ತಾನೇ ಶೋಷಣೆಯ ಅಡಿಯಲ್ಲಿದ್ದಾನೆ. ಆದರೂ ಈತ ತನಗಿಂತ ಕೆಳಜಾತಿ 'ಕುಂಜ'ನನ್ನು ಶೋಷಿಸುತ್ತಾನೆ. 'ಕುಂಜ' ಹೊಸ ಕಾಲದ ವೇಣುಗೋಪಾಲ, ಸಾಂಪ್ರದಾಯಿಕ ದೃಷ್ಟಿಯ ವೇಣುಗಾನ ಇಲ್ಲಿ ಅಪವರ್ಗೀಕರಣಗೊಂಡಿದೆ. ತುಂಬ ಸುಂದರವಾಗಿ ಸಿನಿಮಾ ಹಾಡುಗಳನ್ನು ಕೇಳುಗರು ತಲೆತೂಗುವಂತೆ ನುಡಿಸುತ್ತಾನೆ. ಇಂತಹ ಕಲೆ ಹೊಂದಿರುವುದರಿಂದಲೇ ಮಂಜನಂತವರ ಅಸೂಯೆಗೆ ಒಳಗಾಗುತ್ತಾನೆ. ಪರಿಣಾಮವಾಗಿ ಎಲ್ಲರೂ ಏರುವಂತಹ ಗಾಡಿಯಿಂದ ಜಾತಿಯ ಹಿನ್ನಲೆಯಲ್ಲಿ ಕುಂಜನನ್ನು ಹೀಗಳೆದು ಇಳಿಸಿದ್ದ. ಅಷ್ಟೇ ಅಲ್ಲ 'ಸೆಟ್ಟರೆ' ಎಂಬ ಸಂಬೋಧನೆಯನ್ನು ಮಂಜ ಸಹಿಸಲಾರ. ದುಡಿಮೆಯಲ್ಲಿ, ಒಡೆಯನಮನೆಯ ಸ್ಥಾನಮಾನದಲ್ಲಿ ಕುಂಜ-ಮಂಜರ ನಡುವೆ ವ್ಯತ್ಯಾಸವಿಲ್ಲ, ಇಬ್ಬರೂ ಜೀತದಾಳುಗಳೇ. ಆದರೆ ಉಪ್ಪಾರ ಜಾತಿಗೆ ಸೆಟ್ಟರ ಜಾತಿ ಮೇಲೆಂಬ ಮೇಲರಿಮೆ ಬೆಳಸಿಕೊಂಡಿದ್ದಾನೆ.

"ಸೆಟ್ಟರೆ ಅಂತ ನನ್ನ ಕರೀ ಬ್ಯಾಡ ಕಣೋ, ನಾನು ಮೇಲು ಜಾತಿಯವನಲ್ಲವೆನೋ ಕನ್ನಡ ಜಿಲ್ಲೆಯ ಸೆಟ್ಟರು ಗೌಡರು ಒಂದೇ ಜಾತಿ. ಗೌಡರನ್ನೆಲ್ಲ ಗೌಡರೆ ಅಂತ ಕರೀತಿಯಾ? ಬಾಂಬ್ರರನ್ನೆಲ್ಲ ಬ್ರಾಹ್ಮಣರೆ ಅಂತ ಕರೀತಿಯಾ? ಏನೊ? ಸ್ವಾಮಿ ಅಂತಕರಿ".[೪೪]

ಇಲ್ಲಿ ಆರ್ಥಿಕ ಸ್ಥಿತಿ, ಕೆಲಸದ ಸ್ವರೂಪದ ಒಂದೇ ಆಗಿದ್ದರೂ ಜಾತಿಯಲ್ಲಿ ತಾನು ಮೇಲು, ಅಷ್ಟೇಕೆ ಒಕ್ಕಲಿಗರಿಗೆ ತಾವು ಸರಿಸಮಾನರು ಎಂದು ಶ್ರೇಷ್ಠತೆಯನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುವ ಮನವನ್ನು ಕಾಣಬಹುದು. ಅಷ್ಟೇ ಅಲ್ಲ ಬ್ರಾಹ್ಮಣರು, ಒಕ್ಕಲಿಗರನ್ನು ಕೆಳ ಜಾತಿಯವನು ಹೇಗೆ ಸಂಬೋಧಿಸುತ್ತಾನೊ ಆ ಸಂಭೋದನೆ ತನಗೂ ಸಲ್ಲಿಸಬೇಕೆಂದು ಆಗ್ರಹಿಸುವಲ್ಲಿ ಶ್ರೇಷ್ಠತೆಯ ವ್ಯಸನವನ್ನು, ಸಂಸ್ಕೃತೀಕರಣದ ಅಭಿಲಾಷೆಯನ್ನು ಕಾಣಬಹುದು.

ಕುಂಜ ಎಲ್ಲ ವರ್ಗದವರಲ್ಲೂ ಮಾನವೀಯತೆಯನ್ನು, ವಿಶಾಲ ಮನೋಭಾವನೆಯನ್ನು ಬಯಸುತ್ತಾನೆ. ತನ್ನನ್ನು ಹಿಡಿಸಿಕೊಟ್ಟ ಮಂಜಶೆಟ್ಟಿಯ ಮೇಲೆ ಕೋಪಗೊಳ್ಳುವುದಿಲ್ಲ. ಗೌಡನ ಏಟಿನ

ಗಾಯದಿಂದ ನರಳುವ ವಸೂಲಿ ಸಾಬನಿಗೆ ಎಣ್ಣೆಯನ್ನು ಹಚ್ಚಿ ಉಪಚರಿಸುವುದರ ಮೂಲಕ ಮಾನವೀಯತೆ ಮೆರೆದ. ಮಾನವೀಯತೆಯಿಂದ, ಶತ್ರುವನ್ನು ಪ್ರೀತಿಯ ಭಾವದಿಂದಲೇ ಕಾಣುವ ಕುಂಜ ವಸೂಲಿ ಸಾಬನಂತಹ ಕಟುಕನ ಮನಸ್ಸನ್ನೂ ಪ್ರೀತಿಯಿಂದಲೇ, ಮಾನವೀಯತೆಯಿಂದಲೇ ಗೆಲ್ಲುತ್ತಾನೆ. ತಾನು ಪ್ರೀತಿಸಿದ ಕಾವೇರಿ ಇನ್ನೊಬ್ಬನ ಜೊತೆ ಸಂಬಂಧ ಹೊಂದಿದ್ದ ವಿಷಯ ತಿಳಿದರೂ ಪ್ರೀತಿ, ಮಾನವೀಯತೆ ಮತ್ತು ಉದಾರತೆಯಿಂದಲೇ ಮುಂದಿನ ಜೀವನ ಹಾಗಾಗಬಾರದೆಂಬ ಸೂಚನೆ ನೀಡಿ ಸ್ವೀಕರಿಸುವ ಪರಿ ಎಂತಹ ಉದಾತ್ತವಾದ ಭಾವನೆಯನ್ನು ಜೀವನೋತ್ಸಹವನ್ನು, ಎದುರಾದ ಎಡರು ತೊಡರುಗಳನ್ನು ಸೌಮ್ಯವಾಗಿಯೇ ಎದುರಿಸುವ ಬಗೆಯನ್ನು ಕುಂಜನ ಪಾತ್ರದ ಮೂಲಕ ಕಾಣಬಹುದು.

ಬಿಳುಮನೆ ದಾಮದಾಸ ಅವರ ೨೦೦೪ರಲ್ಲಿ ಬಂದ 'ಕರಾವಳಿ ಹುಡುಗಿ' ಕಾದಂಬರಿಯಲ್ಲಿ ಸಾಂಪ್ರದಾಯಿಕ ಸಮಾಜ ಆಧುನಿಕವಾಗಿ ರೂಪಾಂತರಗೊಳ್ಳುತ್ತಿರುವ ಪ್ರಕ್ರಿಯೆಯನ್ನು ವಿಶ್ಲೇಷಿಸುತ್ತದೆ. ಸುಮಾರು ೬೦, ೭೦ರ ದಶಕದ ಕಾಲಮಾನದ ಒಳಗೊಂಡ ಇದು ಮಲೆನಾಡಿನ ಅವರ ಎಲ್ಲ ಕಾದಂಬರಿಗಳಲ್ಲಿ ಬರುವ 'ಮೇಗರವಳ್ಳಿ' ಪರಿಸರವೇ ಇಲ್ಲಿಯೂ ಕೇಂದ್ರವಾಗಿದೆ. ಆಧುನಿಕತೆಯ ಪ್ರಭಾವದಿಂದ ಹಿಂದುಳಿದ ಜಾತಿ-ವರ್ಗಗಳಲ್ಲಿ ಜಾಗೃತಿಯುಂಟಾಗಿ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಹಲವಾರು ಬದಲಾವಣೆಗಳಾಗಿವೆ. ಅಕ್ಷರ ಜ್ಞಾನ ಪ್ರಸಾರ, ಸಾಂಪ್ರದಾಯಿಕ ಅಧಿಕಾರದ ಅವನತಿ, ವ್ಯಕ್ತಿಗತವಾದ ಸಾಮರ್ಥ್ಯ, ಉದ್ಯಮ ಸಾಹಸ, ಪರಂಪರಗತವಾದ ವೃತ್ತಿಗೆ ವಿದಾಯ, ಆರ್ಥಿಕ ಮತ್ತು ರಾಜಕೀಯ ಪರಿವರ್ತನೆ ಇತ್ಯಾದಿಯನ್ನು ಆಧುನೀಕರಣವು ತಂದಿದೆ. ಇಂತಹ ಸ್ಥಿತ್ಯಂತರದ ಸಂದರ್ಭದಲ್ಲಿ ಜಾತಿ, ಮತ, ಪಂಗಡಗಳ ಭೇದವಿಲ್ಲದೆ ಸ್ತ್ರೀ ಪುರುಷರೆಲ್ಲರಿಗೂ ಸಮಾನವಾದ ಹಕ್ಕು ಮತ್ತು ಅವಕಾಶಗಳು ದೊರೆಯಬೇಕೆಂಬ ಆಶಯಗಳನ್ನಿಟ್ಟುಕೊಂಡು ಸಾಂಪ್ರದಾಯಿಕ, ಪಟ್ಟಭದ್ರಹಿತಾಸಕ್ತಿಗಳ ಹಿಡಿತದಲ್ಲಿ ರೂಢಿಗತ ಜಾಡಿನಲ್ಲಿ ಸಾಗುತ್ತಿರುವ ಸಮಾಜವು ಪಲ್ಲಟಗೊಳ್ಳುವ ಪರಿಯನ್ನು ಈ ಕಾದಂರಿ ವಿಶ್ಲೇಷಿಸುತ್ತದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾಧಂಬರಿಯಲ್ಲಿ ದಕ್ಷಿಣ ಕನ್ನಡದಿಂದ ಬಂದ ಅಂತಕ್ಕಶೆಟ್ತಿ ಗಂಡನನ್ನು ಕಳೆದುಕೊಂಡು ಜೀವನೋಪಾಯದ ಮಾರ್ಗವಾಗಿ, ಸಾರ್ವಜನಿಕ ಸೇವೆಯ ಹಿನ್ನಲೆಯಲ್ಲಿ 'ಅರವಟ್ಟಿಗೆ'ಯನ್ನು ಸ್ಥಾಪಿಸಿಕೊಂಡಿದ್ದು, ಕಾಲಕ್ರಮೇಣ ಹೋಟೆಲ್ ಆಗಿ ಪರಿವರ್ತನೆಯಾಗುತ್ತದೆ ಎಂಬುದನ್ನು ಗಮನಿಸಿದ್ದೇವೆ. ಇದು ಜೀವನೋಪಾಯದ ಒಂದು ಕಸುಬಾಗಿತ್ತೇ ಹೊರತು ಆರ್ಥಿಕವಾಗಿ ಹೆಚ್ಚು ಸಂಪಾದನೆ ಮಾಡಬೇಕೆಂದು ಪರಂಪರಾ ವೃತ್ತಿಯನ್ನು ಬಿಟ್ಟು ಈ ವೃತ್ತಿ ಪ್ರಾರಂಭಿಸಿದ್ದಲ್ಲ. ಆದರೆ ಐವತ್ತು-ಅರವತ್ತು ವರ್ಷಗಳ ಅಂತರದಲ್ಲಿ ಹೋಟೆಲ್ ಎಂಬುದು ಹಣ ಸಂಪಾದನೆಯ ಒಂದು ಉದ್ಯಮವಾಗಿ ರೂಪ ಪಡೆದಿದೆ. ಅನ್ನವಿಕ್ರಯ ಸರಿಯಲ್ಲ ಎಂದವರೇ ಈ ಉದ್ಯಮವನ್ನು ಮೊದಲಿಗೆ ಎಲ್ಲೆಡೆ ಸ್ಥಾಪಿಸುತ್ತ ಬಂದಿರುವುದನ್ನು ಕಾಣಬಹುದು. ಹಾಗೆ ಮಲೆನಾಡ ಪರಿಸರದಲ್ಲಿ ಬ್ರಾಹ್ಮಣರು, ಕೊಂಕಣಸ್ಥರು, ಶೆಟ್ಟರು ಹೋಟೆಲ್‌ಗಳನ್ನು ಸ್ಥಾಪಿಸಿಕೊಂಡು ಬರುತ್ತಿದ್ದಾರೆ. ಹಾಗೆ 'ಕರಾವಳಿ ಹುಡುಗಿ' ಕಾದಂಬರಿಯ ಮೇಗರವಳ್ಳಿಯಲ್ಲಿಯೂ ಕೊಂಕಣಿಗರ, ಬ್ರಾಹ್ಮಣರ, ಒಕ್ಕಲಿಗರ ಹೋಟೆಲ್‌ಗಳಿವೆ. ಇಂತಹ ಊರಿಗೆ ಕರಾವಳಿಯಿಂದ (ಕನ್ನಡ ಜಿಲ್ಲೆಯಿಂದ) ಬಂದ ಹುಡುಗಿ 'ಅಕ್ಕು'

ಇಲ್ಲಿ ಹೋಟೆಲ್ ಇಟ್ಟು ಸಂಪಾದನೆ ಮಾಡಬೇಕೆಂಬ ಛಲದಿಂದಲೇ ಬಂದವಳು. ಕರಾವಳಿ ಕಡೆಯಿಂದ ಬಂದ ಕೆಳಕೋಮಿನ ಜನಸಮುದಾಯವೆಲ್ಲ ಸಾಮಾನ್ಯವಾಗಿ ಮಲೆನಾಡ ಜಮೀನ್ದಾರ ಮನೆಯಲ್ಲಿ ಜೀತದಾಳಾಗಿ ಇರಲು ಬರುವಂತವರು. ಸ್ತ್ರೀಯರು ಮನೆಯಾಳಾಗಿರುವುದಲ್ಲದೆ ಕೆಲವರು ಒಡೆಯರ ಲೈಂಗಿನ ಶೋಷಣೆಗೂ ಒಳಗಾದವರು ; ಅದನ್ನು ಪ್ರತಿಭಟಿಸದೆ ಅಥವಾ ಪ್ರತಿಭಟನೆಗೆ ಶಕ್ತರಲ್ಲದೆ ಒಪ್ಪಿಕೊಂಡು ಹೋಗುವಂತವರು. ಇದು ಲಾಗಾಯ್ತಿನಿಂದಲೂ ಈ ಪರಿಸರದಲ್ಲಿ ಮೇಲ್ಜಾತಿಗಳು, ಭೂಮಾಲಿಕವರ್ಗ ರೂಢಿಸಿಕೊಂಡು ಬಂದ ಪದ್ಧತಿ. ಇಂತಹ ಸಮಾಜಕ್ಕೆ 'ಅಕ್ಕು'ವಿನಂತಹ ಹೆಣ್ಣಿನ ರೂಢಿಗತವಾದ ವೃತ್ತಿಯನ್ನು ತಿರಸ್ಕರಿಸಿ, ಭೂಮಾಲಿಕರ ಹಿತಾಸಕ್ತಿಗಳನ್ನು ಕಡೆಗಣಿಸಿ ಸ್ವತಂತ್ರವಾದ ವೃತ್ತಿಯನ್ನು ಕೈಗೊಂಡಾಗ, ಪ್ರತಿಲೋಮ ವಿವಾಹಕ್ಕೆ ಮುಂದಾದಾಗ ಈ ಪರಿಸರದಲ್ಲಿ ತೀವ್ರತರವಾದ ತಳಮಳ ಸಂಚಲನವುಂಟಾಗುತ್ತದೆ.

"ಪುರುಷ ಪ್ರಪಂಚದ ದಬ್ಬಾಳಿಕೆಯಿಂದ ಹೊರಬರಲು ಮಹಿಳೆಯರಿಗೆ ಇರುವ ದಾರಿ ಎರಡೇ. ಒಂದು, ಶಿಕ್ಷಣದಿಂದ ಅರಿವು ; ಎರಡು ಉದ್ಯೋಗದಿಂದ ದೊರೆಯುವ ಆರ್ಥಿಕ ಸ್ವಾವಲಂಬನೆ. ಈ ಕಾದಂಬರಿಯ ಮಹಿಳೆ ಶಿಕ್ಷಣ ಪಡೆದವಳಲ್ಲ. ಮೇಲುವರ್ಗಕ್ಕೆ ಸೇರಿದವಳೂ ಅಲ್ಲ. ಕೆಳವರ್ಗದವಳು. ಮಹಿಳೆಯೂ ಆಗಿ ಕೆಳವರ್ಗಕ್ಕೆ ಸೇರಿದ ಹೆಣ್ಣು ಸ್ವಾವಲಂಬನೆಯ ಕನಸು ಕಂಡು ಯಶಸ್ವಿಯಾಗುವುದು ತುಂಬಾ ಅಪರೂಪ".[೪೩]

ಈ ಮೇಲಿನ ಮಾತಿನಂತೆ ಕೆಳವರ್ಗದಿಂದ ಬಂದ ಅಕ್ಕು ಎರಡನೇ ಮಾರ್ಗವನ್ನು ಹಿಡಿದು ಉದ್ಯೋಗದಲ್ಲಿರುವ ತನ್ನ ಹಕ್ಕನ್ನು ಸ್ಥಾಪಿಸುವುದು ಇಲ್ಲಿ ವಿಶೇಷವಾಗಿದೆ. ಅಕ್ಕು ಯಾವುದೊ ರೂಪದಲ್ಲಿ ಇಲ್ಲಿಗೆ ಬರುವ ಮುನ್ನ ಸ್ವಲ್ಪ ಹಣವನ್ನು ಸಂಪಾದಿಸಿಕೊಂಡು ಬಂದಿದ್ದಾಳೆ. ಆ ಹಣ ಹೊಸ ವೃತ್ತಿಗೆ, ಸ್ವತಂತ್ರ ಬದುಕಿಗೆ ಸಾಮರ್ಥ್ಯವನ್ನು ನೀಡಿದೆ. ಹಾಗೆ ಶೋಷಕರನ್ನು ಮೀರಿನಿಲ್ಲುವ ಧೈರ್ಯವನ್ನು ಕೊಟ್ಟಿದೆ. ಕೆಳಕೋಮಿನ ಜಾತಿಗೆ ಸೇರಿದ ಹೆಣ್ಣು ಹೋಟೆಲ್ ಇಡುವುದು ಎಲ್ಲರನ್ನು ಹುಬ್ಬೇರಿಸುವಂತೆ ಮಾಡಿದೆ. ಕೊಂಕಣ ಜಾತಿಯ ಹೋಟೆಲ್ ಮಾಲೀಕನ ತೀವ್ರ ವಿರೋಧವಿದೆ. ಆಕೆ ತನಗೆ ಪ್ರತಿಸ್ಪರ್ಧಿಯೆಂದು. ಈತನ ಮುಖ್ಯ ಗ್ರಾಹಕರೇ ಕೆಳಕೋಮಿನ ಕೂಲಿ ಕಾರ್ಮಿಕರು. ಅವರು ಅಲ್ಲಿಗೆ ಹೋದರೆ? ಹಾಗೆ ಮಧ್ಯ ಜಾತಿ ವರ್ಗದವರು ಎಲ್ಲಿ ಆಕೆಯ ಬಿಳಿಬಣ್ಣಕ್ಕೆ ಮೋಹಿತರಾಗಿ ಬಿಡುವರೊ – ಈ ಆತಂಕದಿಂದ ಆಕೆ ಕೆಳಜಾತಿಗೆ ಸೇರಿದವಳು ಎಂಬ ಕಾರಣವನ್ನು ಮುಂದಿಟ್ಟುಕೊಂಡು ಕೆಲವರು ಸ್ವಾರ್ಥ ಜಮೀನ್ದಾರರ ಮೊರೆ ಹೋಗುತ್ತಾನೆ. ಶಿವಪ್ಪಗೌಡ ಮತ್ತು ಅಣ್ಣಪ್ಪ ಹೆಗಡೆಯಂತಹ ಜಮೀನ್ದಾರಿ ಕುಳಗಳು ಲಾಗಾಯ್ತಿನಿಂದಲೂ ಬಡವರ, ನಿರುದ್ಯೋಗಿಗಳ ನಿಸ್ಸಾಹಾಯಕತೆಯನ್ನು ತಮ್ಮ ಲೈಂಗಿಕ ಸ್ವಾರ್ಥಕ್ಕೆ ಬಳಸಿಕೊಳ್ಳುವಂತವರು. ಈ ಒಳ ಆಸೆಯಿಂದ ಜಾತಿ ಕಾರಣವನ್ನು ಮುಂದಿಟ್ಟು 'ಅಕ್ಕು' ಹೋಟೆಲ್ ಇಡದ ಹಾಗೆ ಪ್ರಯತ್ನ ನಡೆಸುತ್ತಾರೆ. ಅದು ಪಂಚಾಯಿತಿ ಕಟ್ಟೆ ಏರುತ್ತದೆ. ಪಂಚಾಯಿತಿದಾರರಲ್ಲಿ ರೈಸ್‌ಮಿಲ್ ಪಟೇಲ್ ರಂಗಪ್ಪಗೌಡರು, ಅಂಗಡಿ ಚಿನ್ನಯ್ಯಗೌಡರು ಪರಂಪರಾನುಗತವಾಗಿ ಬಂದಿದ್ದ ಕೃಷಿಯನ್ನು ಬಿಟ್ಟು ರೈಸ್‌ಮಿಲ್, ಅಂಗಡಿ ಇಟ್ಟಿರುವುದನ್ನು ಪ್ರಸ್ತಾಪಿಸಿ ತಾನು ಹೋಟೆಲ್ ಇಡುವುದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸುತ್ತಾಳೆ.

ಪಟೇಲರು ಅಕ್ಕುವನ್ನು ಕೇಳುತ್ತಾರೆ. "ನೀನು ಹೋಟೆಲ್ ಇಟ್ಟು ಕೈಯಲ್ಲಿರೊ ನಾಕು ಕಾಸು ಯಾಕೆ ಕಳಕೊಳತಿಯ ಸ್ವಲ್ಪ ಯೋಚನೆ ಮಾಡು. ನಿನ್ನ ಓಟ್ಲಿಗೆ ಹೊಲೇರು ಉಪ್ಪಾರರನ್ನು ಬಿಟ್ಟರೆ ಇನ್ನು ಯಾರು ಗಿರಾಕಿಗಳು ಬರತಾರೆ? ಗೌಡರು ಬ್ರಾಂಬರು ಬರೋಲ್ಲ..... ಹೊಲೇರು ಉಪ್ಪಾರರನ್ನು ನಂಬಿಕೊಂಡು ನೀನು ಓಟ್ಲು ಇಟ್ಟರೆ ಏನು ಯಾಪಾರ ಆಗತದೆ?.........."

ಪಟೇಲರು ನಿಷ್ಪಕ್ಷಪಾತವಾಗಿಯೇ ವಾಸ್ತವ ಸಂಗತಿಯನ್ನು ತಿಳಿಸಿದ್ದರು. ಕೆಳಕೋಮಿನ ಜನರನ್ನೇ ಅವಲಂಭಿಸಿದರೆ ಕಷ್ಟ. ದೈನಂದಿನ ಊಟಕ್ಕೇ ಪರದಾಡುವ ಜನ ಎಷ್ಟು ವ್ಯಾಪಾರ ಮಾಡಲು ಸಾಧ್ಯ? ಸಾಲ ನೀಡಿ ಹೋಟೆಲ್ ನಡೆಸಲು ಸಾಧ್ಯವೆ ಎಂದು ಸಹಜ ಕಾಳಜಿಯಿಂದಲೆ ಹೇಳುವ ಮಾತಾಗಿದೆ. 'ಅಕ್ಕು' ಹೋಟೆಲ್ ಇಡುವ ಮೊದಲು ವ್ಯಾಪಾರದ ಹಿನ್ನಲೆಯಲ್ಲಿ ಕೆಳಕೋಮಿನ ಜಾತಿಲೆಕ್ಕಚಾರವನ್ನು ಹಾಕಿರುತ್ತಾಳೆ. ಆದರೂ ಎದುರಾಗುವ ಸಮಸ್ಯೆಯನ್ನು ಎದುರಿಸಲು ಸಿದ್ಧವಾಗಿದ್ದಾಳೆ.

"ಅದು ನನ್ನ ಹಣೆ ಬರ ಸ್ವಾಮಿ. ನಾನು ಅವರಿವರ ಮನೇಲಿ ಕೆಲಸ ಮಾಡಿ ಜೀವನ ಮಾಡಕು ಅಂತ ತಾವು ಯಾರು ನಿರೀಕ್ಷೆ ಮಾಡುಕಾಗದೆ. ತಾವು ಪಂಚಾಯಿದಾರರು ಕುಲಕಸಬು ಬಿಟ್ಟು ಅಂಗಡಿ ರೈಸ್‌ಮಿಲ್ ಇಟ್ಟದ್ದು ಯಾಕೆ? ಬೇರೆ ಏನಾದರೂ ಮಾಡಕು ಅಂತ ಅಲ್ಲವಾ? ಹಾಗೆ ನಾನು ಏನಾದರೂ ಮಾಡಕು ಅಂತಿದ್ದೆ".[೪೬]

ಇದು ಆಯಾ ಜಾತಿಗಳವರು ತಮ್ಮ ಕುಲ ಕಸುಬುಗಳನ್ನೇ ಮಾಡಬೇಕು ಎಂಬುದಕ್ಕೆ ಒಡ್ಡಿದ ಪ್ರತಿರೋಧವಾಗಿದೆ. ಒಬ್ಬಳು ಹೆಣ್ಣುಮಗಳು ಹೋಟ್ಲು ಇಡುತ್ತಾಳೆ ಅಂದರೆ ಸಂತೋಷಪಡಬೇಕು ಎಂದು ಅಂಗಡಿ ಚಿನ್ನಯ್ಯಗೌಡರು, ರೈಸ್‌ಮಿಲ್ ರಂಗಪ್ಪಗೌಡರು ಆಕೆಯ ನಿರ್ಧಾರಕ್ಕೆ ಬೆಂಬಲವಾಗಿ ನಿಲ್ಲುವರು. ಇವರ ಭಾವನೆಗೆ ಚಿನ್ನಯ್ಯಗೌಡ ರಂಗಪ್ಪಗೌಡ ಕೃಷಿ ಬದುಕನ್ನು ನಡೆಸುತ್ತಲೇ ಮತ್ತೊಂದು ಉದ್ಯೋಗಕ್ಕೆ ತೊಡಗಿಸಿಕೊಂಡಿರುವುದು ಕೂಡ ಕಾರಣವಾಗುತ್ತದೆ.

ಸ್ವಾಭಿಮಾನಿಯಾದ ಅಕ್ಕು ಶಿವಪ್ಪಗೌಡನಿಗೆ ಹೆಂಡತಿಯಾಗಿ ಇರಲು ಇಷ್ಟಪಡುತ್ತಾಳೆಯೇ ಹೊರತು, ಅವನಲ್ಲಿ ಇಟ್ಟುಕೊಂಡವಳಾಗಿರಲು ಇಷ್ಟಪಡುವುದಿಲ್ಲ. ಆದ್ದರಿಂದ ತನ್ನನ್ನು ಮದುವೆಯಾಗಲು ಬಯಸಿದ ತನಗಿಂತ ಮೇಲು ಜಾತಿ ಕಿಟ್ಟಪ್ಪನಿಗೆ ಒಪ್ಪಿಗೆ ಸೂಚಿಸುತ್ತಾಳೆ. ಅಕ್ಕು ಮತ್ತು ಕಿಟ್ಟಪ್ಪರದು ಅನುಲೋಮ ಸಂಬಂಧಗಳಾದರೆ, ಕುಬೇರ ಮತ್ತು ವಾಸಂತಿಯರದು ಪ್ರತಿಲೋಮ ಸಂಬಂಧ, ಭಾರತೀಯ ಜಾತಿ ಪದ್ಧತಿಯಲ್ಲಿ ಅನುಲೋಮ ವಿವಾಹಕ್ಕೆ ಸ್ವಲ್ಪ ಮಟ್ಟಿನ ಸಡಿಲತೆಯಿದೆ. ಆದರೆ ಪ್ರತಿಲೋಮ ವಿವಾಹಕ್ಕೆ ಪ್ರತಿರೋಧವಿದೆ. ಆದರೆ ಇಲ್ಲಿ ಈ ವಿವಾಹಗಳಿಗೆ ಪಂಚಾಯಿತಿಯಿಂದಲೂ ಒಪ್ಪಿಗೆ ದೊರೆಯುತ್ತದೆ. ಊರಿನ ಆ ಮುಂದಾಳುಗಳ ಉದಾರತೆಯ ಭಾವದ ಹಿಂದೆ ಈ ಮಲೆನಾಡ ಪರಿಸರದಲ್ಲಿ ಕುವೆಂಪು ಅಂತವರ ವಿಚಾರಧಾರೆ. ಕಡಿದಾಳದ ಮಂಜಪ್ಪ ಮತ್ತು ಶಾಂತವೇರಿ ಗೋಪಾಲಗೌಡನಂತ ನಾಯಕರ ಪ್ರಭಾವಗಳು ಸಮಾನತೆಯ ಮನಸ್ಸುಗಳನ್ನು ರೂಪಿಸಿದೆ ಎಂಬುದನ್ನು ಕಾದಂಬರಿ ಹೇಳುತ್ತದೆ. ಅಕ್ಕು ಮತ್ತು ಕಿಟ್ಟಪ್ಪಗೌಡರ ವಿವಾಹವನ್ನು ಜಾತಿ, ಮತ್ತು ಸ್ವಾರ್ಥದ ಹಿನ್ನಲೆಯಲ್ಲಿ ಒಂದು ಗುಂಪು ವಿರೋಧಿಸಿದಾಗ ಚಿನ್ನಪ್ಪಗೌಡ ಹೇಳುವ ಮಾತನ್ನು ಗಮನಿಸಬಹುದು.

"ಅವರು ಪರಸ್ಪರ ಒಪ್ಪಿಕೊಂಡಿದ್ದಾರೆ, ಲಗ್ನ ಆಗಲಿ ಬಿಡಿ, ನೆಹರು ಮಗಳು ಇಂದಿರಾಗಾಂಧಿ

ಪಿರೋಜ್ ಗಾಂಧಿನ ಲಗ್ನ ಆಗಿಲ್ಲವಾ? ಬ್ರಾಂಬರ ಹುಡುಗಿ ಸವಿತಾ ಹರಿಜನ ಕೋಮಿನ ಅಂಬೇಡ್ಕರ ಅವರನ್ನ ಲಗ್ನ ಆಗಿಲ್ಲವಾ? ಇದಕ್ಕೆ ಯಾಕೆ ಅಡ್ಡಿಪಡಿಸೋದು".[೪೭]

ಅಂತರ್ಜಾತಿಯ ವಿವಾಹ ಆಗುವವರಿಗೆ ಇಂದಿರಾಗಾಂಧಿ–ಫಿರೋಜ್‌ಗಾಂಧಿ, ಸವಿತಾ–ಅಂಬೇಡ್ಕರ್ ಒಂದು ಮಾದರಿ ವಿಷಯವಾಗಿದ್ದರು. ಪತ್ರಿಕೆ ಓದುವ ಚಿನ್ನಯ್ಯಗೌಡರಂತವರಿಂದ ಆ ಪರಿಸರದಲ್ಲಿ ಇಂತಹ ಲೋಕ ಸಂಗತಿಗಳು ಪ್ರಸಾರವಾಗುತ್ತಿದ್ದವು. ಒಂದು ಸಮುದಾಯದ ಜಾತಿ ಕಟ್ಟುಕಟ್ಟಳೆಗಳು ಸಡಿಲಗೊಳ್ಳಲು ಇಂತಹ ಮಾದರಿ ಸಂಗತಿಗಳು ಕೂಡ ಕಾರಣವಾಗಿದ್ದವು ಎಂಬುದನ್ನು ಗಮನಿಸಬಹುದು. ಉಪ್ಪಾರರ ಜಾತಿಯ ಕುಬೇರ ತನಗಿಂತ ಮೇಲ್ಜಾತಿಯ ಶೆಟ್ಟರ ಹುಡುಗಿಯನ್ನು ಪ್ರೀತಿಸಿದಾಗ ಈ ಪ್ರತಿಲೋಮ ವಿವಾಹಕ್ಕೆ ವಿರೋಧವುಂಟಾಯಿತು. ಇದನ್ನು ಶೆಟ್ಟರ ಸಮುದಾಯ ವಿರೋಧಿಸುವುದಕ್ಕಿಂತ ಒಕ್ಕಲಿಗರ ಸಮುದಾಯದ ವಿರೋಧವೇ ಹೆಚ್ಚಾಗಿತ್ತು. ಇದಕ್ಕೆ ಶಿವಪ್ಪಗೌಡ ಮತ್ತು ಅಣ್ಣಪ್ಪ ಹೆಗಡೆಯಂತವರಿಗೆ 'ಅಕ್ಕು' ಮೇಲಿನ ದ್ವೇಷವು ಕಾರಣವಾಗಿತ್ತು. ಆದರೆ ಪಂಚಾಯ್ತಿದಾರರ ತೀರ್ಮಾನ, ಪೋಲಿಸಿನವರ ಭಯದಿಂದ ಪ್ರತಿಲೋಮ ವಿವಾಹ ನಡೆಯಿತು. ಅದೇ ಮೇಲ್ಜಾತಿ ಒಕ್ಕಲಿಗ ಕಿಟ್ಟಪ್ಪ ಕೆಳಕೋಮಿನ ಉಪ್ಪಾರ ಜಾತಿಯ 'ಅಕ್ಕು'ವನ್ನು ಮದುವೆಯಾಗಲು ಹೊರಟದ್ದು, ಈ ಪರಿಸರದಲ್ಲಿ ಬಹುಸಂಖ್ಯಾತ ಒಕ್ಕಲಿಗ ಸಮುದಾಯದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಯಿತು. ಆ ಸಂದರ್ಭದಲ್ಲಿ ಅದೇ ಜಾತಿ ಸಮುದಾಯಕ್ಕೆ ಸೇರಿದ ಪಂಚಾಯಿತಿ ಮುಖಂಡರಿಗೆ ತೀರ್ಮಾನವನ್ನು ಕುಬೇರ–ವಾಸಂತಿ ಸಂದರ್ಭದಲ್ಲಿ ನೀಡಿದ ಹಾಗೆ ಸುಲಭವಾಗಿ ನೀಡಲು ಸಾಧ್ಯವಾಗದ ಸಂಗತಿಯಾಗಿತ್ತು. ಮೇಲುಕೋಮಿನ ಹುಡುಗನಿಗೆ ಕೆಳಕೋಮಿನ ಹುಡುಗಿಯನ್ನು ಮದುವೆ ಮಾಡಿಸಿದ್ದೀರಿ, ಈಗ ಕೆಳಕೋಮಿನ ಹುಡುಗಿಯನ್ನು ಮೇಲುಕೋಮಿನ ಹುಡುಗನಿಗೆ ಮದುವೆ ಮಾಡಿಸಲು ಮುಂದಾಗಿದ್ದೀರಿ ಎಂದು ತರಾಟೆಗೆ ತೆಗೆದುಕೊಳ್ಳುವುದನ್ನು ನಿಭಾಯಿಸುವ ಬಗೆ ಹೇಗೆ ಎಂದು ಪಟೇಲರು ಮತ್ತು ಚಿನ್ನಪ್ಪಗೌಡರು ತಲೆಕೆಡಿಸಿಕೊಂಡರು. ಸಾಮಾನ್ಯವಾಗಿ ಒಂದು ಪರಿಸರದಲ್ಲಿ ಮೇಲ್ಜಾತಿ ಬಹುಸಂಖ್ಯಾತರು ವಾಸವಾಗಿದ್ದು ಮತ್ತು ಸ್ಥಳೀಯ ಆಡಳಿತ ಅವರ ಕೈಯಲ್ಲಿದ್ದಾಗ ಕೆಳಕೋಮಿನ ಅಲ್ಪ ಸಂಖ್ಯಾತ ಸಮುದಾಯಗಳಲ್ಲಿ ಅಂತರ್ಜಾತಿ ವಿವಾಹ ಸಮಸ್ಯೆಯನ್ನು ಉಪದೇಶದಿಂದ, ಒತ್ತಡದಿಂದ ಪರಿಹರಿಸಲು ಸಾಧ್ಯವಾಗುತ್ತದೆ. ಆದರೆ ಅದೇ ಬಹುಸಂಖ್ಯಾತರಲ್ಲಿ ಈ ಸಮಸ್ಯೆ ತಲೆದೋರಿದಾಗ ಮುಖಂಡರ ನಿಷ್ಪಕ್ಷಪಾತ ತೀರ್ಮಾನಗಳು ಕಷ್ಟವಾಗುತ್ತದೆ. ಜಾತಿ ವಿರೋಧ ಕಟ್ಟಿಕೊಳ್ಳುವ, ಅಧಿಕಾರ ಕಳೆದುಕೊಳ್ಳುವ ಭಯವೂ ಇರುತ್ತದೆ. ಆದ ಕಾರಣ ಚಿನ್ನಯ್ಯಗೌಡರು ಕಿಟ್ಟಪ್ಪಗೌಡನಿಗೆ ಈ ವಿವಾಹದ ತೀರ್ಮಾನದ ಹಿನ್ನಲೆಯಲ್ಲಿ ವ್ಯಕ್ತಿಗತವಾದ ಪ್ರತಿರೋಧ ಒಡ್ಡುವಂತೆ ಬಂಡೇಳುವಂತೆ ಪ್ರೇರಿಪಿಸುತ್ತಾರೆ. ಜಾತಿಯಿಂದ, ಬಹಿಷ್ಕಾರ ಹಾಕಬಹುದು. ತಂದೆ ಆಸ್ತಿ ಕೊಡುವುದಕ್ಕೆ ವಿರೋಧಿಸಬಹುದು ಇದಕ್ಕೆಲ್ಲಾ ಸಿದ್ಧವಾಗಿ ಕಿಟ್ಟಪ್ಪಗೌಡ 'ಅಕ್ಕು' ಹೋಟೆಲ್ ಸೇರಿ ಗಲ್ಲಾ ಪಟ್ಟಿಗೆಯಲ್ಲಿ ಕುಳಿತು ಜನರನ್ನು ಹುಬ್ಬೇರಿಸುವಂತೆ ಮಾಡಿದ. ಕೇಳಿದವರಿಗೆ ಧರ್ಮಸ್ಥಳಕ್ಕೆ ಹೋಗಿ ಮದುವೆ ಮಾಡಿಕೊಂಡು ಬಂದಿದ್ದೇವೆಂದು ಸುದ್ದಿ ಹರಡಿದ. ಇದು ಜಾತಿ ನಿಷ್ಠರಿಗೆ, ಅಕ್ಕು ವೈರಿಗಳಿಗೆ ಸಹಿಸಲಸಾಧ್ಯ ಸಂಗತಿಯಾಗಿ ಪಂಚಾಯಿತಿ ಸೇರಿಸಿದರು. ಕೆಳಜಾತಿ ಹೆಣ್ಣನ್ನು ಇರಿಸಿಕೊಳ್ಳಬಹುದು ಆದರೆ ಮದುವೆಯಾಗಬಾರದು ಈ ಕ್ರೌರ್ಯವನ್ನು, ಶೋಷಣೆಯನ್ನು ವಿರೋಧಿಸಿ ತಾನು ಅಕ್ಕುವನ್ನು ಮದುವೆ ಆಗಿಯೇ ತಿರುತ್ತೇನೆಂದು, ಅದನ್ನು ಎದುರಿಸುವುದಾಗಿಯೂ ಸವಾಲ್

ಹಾಕಿದಾಗ, ಜಾತಿಯುವರನ್ನು ಎದುರು ಹಾಕಿಕೊಂಡು ಮದುವೆಯಾಗುವುದನ್ನು ತಾನು ಸಹಿಸುವುದಿಲ್ಲವೆಂದೂ ಶಿವಪ್ಪಗೌಡನಂತವರೂ, ತನ್ನ ಪಾಲಿಗೆ ಮಗ ಸತ್ತನೆಂದು ಕಿಟ್ಟಪ್ಪನ ತಂದೆ ಲಿಂಗಪ್ಪ ವಿರೋಧಿಸಿದಾಗ 'ಅಕ್ಕು' ದಿಟ್ಟತನದಿಂದ ಎದುರಿಸಿ, ಪರಂಪರಾಗತವಾಗಿ ಬಂದ ಜಾತಿಯತೆಯ ಶಕ್ತಿಯನ್ನು ಭಗ್ನಗೊಳಿಸುವುದು ವಿಸ್ಮಯ ಹುಟ್ಟಿಸುತ್ತದೆ. ತಮ್ಮ ಮದುವೆಗೆ ಇವರೆಲ್ಲ ಅಡ್ಡಿಪಡಿಸಿದರೆ ಪೊಲೀಸ್ ಕಂಪ್ಲೇಂಟ್ ಕೊಟ್ಟು ನೇಣು ಹಾಕಿಕೊಂಡು ನಿಮ್ಮನ್ನಲ್ಲ ಕಂಬಿ ಎಣಿಸುವ ಹಾಗೆ ಮಾಡುವೆನೆಂದು, ಪಂಚಾಯಿತಿ ತೀರ್ಮಾನಕ್ಕೆ ಕಾಯದೆ ಕಿಟ್ಟಪ್ಪನನ್ನು ಕರೆದುಕೊಂಡು ಹೋಗುವುದು ಪಂಚಾಯಿತಿ ಸದಸ್ಯರೂ ಸೇರಿಕೊಂಡಂತೆ ಎಲ್ಲರೂ ಸ್ತಂಭಿಭೂತರಾದರು. ಆಗಲೆ ಆಧುನಿಕತೆ, ಆ ಮೂಲಕ ಬಂದ ಕಾನೂನು ವ್ಯವಸ್ಥೆ ಗ್ರಾಮೀಣ ವ್ಯವಸ್ಥೆಯನ್ನು ದುರ್ಬಲಗೊಳಿಸಿತ್ತು. ಕಿಟ್ಟಪ್ಪನಿಗೆ ಬಹಿಷ್ಕಾರ ಹಾಕಿ, ಅಕ್ಕು ಗುಡಿಸಲು ಸುಡಬೇಕೆಂದು ದುಷ್ಟಶಕ್ತಿಗಳ ತೀರ್ಮಾನ ಪೋಲಿಸರ ಹೆಸರೆತ್ತುತ್ತಿದ್ದಂತೆ ನಶಿಸಿ ಹೋಯಿತು. ಕಿಟ್ಟಪ್ಪನಿಗೆ ಜಾತಿಯಿಂದ ಬಹಿಷ್ಕಾರ ಹಾಕಿದರು. ಅದರಿಂದ ಕಿಟ್ಟಪ್ಪನಿಗೆ ಯಾವ ತೊಂದರೆಯೂ ಆಗಲಿಲ್ಲ. ಹೊಸ ಪೀಳಿಗೆ ಬಂದಂತೆ ಅದೆಲ್ಲ ತನಗೆ ತಾನೆ ಇಲ್ಲವಾಯಿತು.

ಅಸ್ಪೃಶ್ಯತೆ ಜಾತಿ, ವರ್ಗಸಂಘರ್ಷ : ಕಡಿದಾಳ್ ಮಂಜಪ್ಪ ಕಥನ

ಕಡಿದಾಳ್ ಮಂಜಪ್ಪನವರ 'ಪಂಜರವಳ್ಳಿ ಪಂಜು' ಪ್ರಧಾನವಾಗಿ ರಾಜಕೀಯ ಹಿನ್ನೆಲೆಯುಳ್ಳ ಕಾದಂಬರಿ. ಒಂದು ರೀತಿಯಲ್ಲಿ ವಾಸ್ತವವಾದಿ ಕಾದಂಬರಿಯಾದ ಇದು ಆರಂಭದಲ್ಲಿಯೇ ಮಲೆನಾಡ ಪರಿಸರದ ಒಂದುನೂರು ವರ್ಷಗಳ ಹಿಂದಿನ ಜೀವನವನ್ನು ಪರಿಚಯಿಸುತ್ತದೆ. ಬಾಲ್ಯದಲ್ಲಿ ಲೇಖಕರು, ಕಂಡು-ಕೇಳಿದ ಅನುಭವಿಸಿದ ಬದುಕಿನ ಸಂಗತಿಗಳನ್ನು ಆತ್ಮಕಥೆಯಂತೆ ಕೃತಿಯ ಆರಂಭದಲ್ಲಿ ದಾಖಲುಗೊಂಡಿದೆ ಎನ್ನಬಹುದು. ಆ ವಿವರಗಳು ಕಲಾತ್ಮಕವಾದ ರೂಪ ಪಡೆಯುವುದಕ್ಕಿಂತ ಯಥಾವತ್ತಾದ ನಿರೂಪಣೆಯಂತಿವೆ. ಕೃತಿಯ ಪ್ರಸ್ತಾವನೆಯಲ್ಲಿ "ಸಾಹಿತಿ ಆಗಬೇಕೆಂಬ ಆಕಾಂಕ್ಷೆಯಿಂದ ಈ ಕಾರ್ಯಕ್ಕೆ ಕೈ ಹಾಕಲಿಲ್ಲ ; ನಾನಾ ಕಾರಣಗಳ ದೆಶೆಯಿಂದ ಬರೆಯಬೇಕೆಂಬ ಒತ್ತಡ ಮನಸ್ಸಿನಲ್ಲಿ ಹೆಚ್ಚಾದ್ದರಿಂದ ಬರೆದಿದ್ದೇನೆ" ಎಂದಿದ್ದಾರೆ. ಆದ್ದರಿಂದ ಮುನ್ನುಡಿಯಲ್ಲಿ ಬೇಂದ್ರೆಯವರು 'ಇದು ನಿಜವಾಗಿರಬಹುದಾದ ಕಾಲ್ಪನಿಕ ಕತೆ-ಕಾದಂಬರಿ' ಎಂದಿದ್ದಾರೆ.

ಅಂದಿನ ಕಾಲದಲ್ಲಿ ನಡೆಯುತ್ತಿದ್ದ ಭೂಮಾಲಿಕ ವರ್ಗದ ಕ್ರೌರ್ಯ, ಗೇಣಿದಾರರ ಬವಣೆ ಆಳುಮಕ್ಕಳ ನೋವು, ಅಸಹಾಯಕತೆ, ಅಸ್ಪೃಶ್ಯರ ಹೀನಸ್ಥಿತಿಯನ್ನು ಸಶಕ್ತವಾಗಿ ನೇರವಾಗಿ ಚಿತ್ರಿಸಲ್ಪಟ್ಟಿದೆ. ಇಲ್ಲಿ ಜಾತಿ ಸಂಘರ್ಷಕ್ಕಿಂತ ವರ್ಗ ಸಂಘರ್ಷವೇ ಪ್ರಾಮುಖ್ಯತೆಯನ್ನು ಪಡೆದಿದೆ. ಪವಿತ್ರಪುರ ತಾಲ್ಲೂಕಿನ ಪಂಜರವಳ್ಳಿ ಗ್ರಾಮದ ಹದಿನೈದಿಪ್ಪತ್ತು ಮನೆಗಳಲ್ಲಿ ಮೂರುಮನೆಗಳು ಮಾತ್ರ ಜಮೀನ್ದಾರಿ ವರ್ಗದವು. ಉಳಿದ ಮನೆಗಳೆಲ್ಲ ಗೇಣಿದಾರರದ್ದು. ಇಡೀ ಊರನ್ನು ಮೂರು ಮಂದಿ ಜಮೀನ್ದಾರಿಗಳು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡಿದ್ದಾರೆ. ತಂದೆ ಮಾಡಿಟ್ಟ ಆಸ್ತಿ, ಸಂಪತ್ತಿಗೆ ಒಡೆಯನಾದ ತಿರುಮಲಭಟ್ಟನಿಗೆ ವಯಸ್ಸು ಮಾಗಿದಂತೆ ಸ್ವಲ್ಪ ಉದಾರತೆಯನ್ನು ತೋರಬಲ್ಲ. ಆದರೆ ಈ ಮೇಲುವರ್ಗದ ಭೂಮಾಲಿಕನ ಹಾಗೆ ತಾವೂ ಆಗಬೇಕೆಂದು ಪ್ರಯತ್ನಿಸುವ ಕಾಳೇಗೌಡ ಮತ್ತು ಬೆಳ್ಳೇಗೌಡ ಹೆಚ್ಚು ಧೂರ್ತರಾಗಿದ್ದರು. ಹಿಂದೆ ಮಲೆನಾಡಿನ ಅವಿಭಕ್ತಕುಟುಂಬಗಳಲ್ಲಿ ಯಜಮಾನ ಆಗುವಂತವನು ಓದು-ಬರಹ ಬರುವ

ಸ್ವಲ್ಪ ವ್ಯವಹಾರದಲ್ಲಿ ಕುಶಲನಾದವನು ಆಗಿರುತ್ತಿದ್ದ. ಅಲ್ಲಿ ಹಿರಿತನಕ್ಕೆ ಮಹತ್ವವಿರಲಿಲ್ಲ. (ಕುವೆಂಪು ಅವರ ತಂದೆಗಿಂತ ಅವರ ಚಿಕ್ಕಪ್ಪ ರಾಮಯ್ಯಗೌಡರು ಮನೆಯ ಯಜಮಾನರಾಗಿರುವುದನ್ನು ಗಮನಿಸಬಹುದು.) ಈ ಯಜಮಾನ ತನ್ನ ಸಹೋದರರನ್ನು ಸಾಮಾನ್ಯವಾಗಿ ಆಳುಮಕ್ಕಳ ಹಾಗೆಯೇ ಕಾಣುತ್ತಿದ್ದ. ಪಟೇಲ್ ಕಾಳೇಗೌಡ ತನ್ನ ಅಣ್ಣ ಗಿರಿಯಪ್ಪಗೌಡನನ್ನು ಜೀತದಾಳಿನಂತೆ ನಡೆಸಿಕೊಳ್ಳುತ್ತಿದ್ದ. ಅಣ್ಣ ಎನ್ನುವ ಯಾವ ಆದರ ಗೌರವೂ ಇಲ್ಲದ ತಮ್ಮನ ಯಜಮಾನಿಕೆಯನ್ನು ವಿರೋಧಿಸಿ ಹೆಂಡತಿಯೊಂದಿಗೆ ಮನೆಬಿಟ್ಟು ಬಂದು ಸ್ವತಂತ್ರವಾಗಿ ನೆಲೆಯೂರಲು ಪ್ರಯತ್ನಿಸುವುದು. ಗಿರಿಯಪ್ಪಗೌಡನೊಳಗಿನ ಬಂಡಾಯ ಮೊಳಕೆಯೊಡೆದದ್ದನ್ನು ಸೂಚಿಸುತ್ತದೆ. ಅಂದರೆ ವರ್ಗತಾರತಮ್ಯ, ಜಮೀನ್ದಾರಿ ಕ್ರೌರ್ಯವೆಂಬುದು ಸಹೋದರ ಬಾಂಧವ್ಯವನ್ನು ಲೆಕ್ಕಿಸುವುದಿಲ್ಲ.

"ಮಲೆನಾಡಿನ ಪ್ರದೇಶಗಳಲ್ಲಿ ವ್ಯಕ್ತಿ ಸ್ವಾರ್ಥ ಎನ್ನುವುದು ಸೋದರ ಸಂಬಂಧಿಗಳಿಗಿಂತ ಮುಖ್ಯವಾಗತೊಡಗಿರುವುದು, ಸಾತ್ವಿಕ ಸ್ವಾಭಾವದ ವ್ಯಕ್ತಿಗಳ ಮೇಲೆ ಕುಯಕ್ತಿ ವ್ಯಕ್ತಿಗಳು ನಡೆಸುವ ಮೋಸ. ಆ ಮೋಸದ ವಿರುದ್ಧ ನ್ಯಾಯ ಕೊಡಿಸಲು, ಇತರೆ ಬಲಿಷ್ಠರು ಮುಂದಾಗದೆ ಒಂದು ಬಗೆಯಲ್ಲಿ ಅಕ್ರಮ ವಿಧಾನ ಹಾಗೂ ಸ್ವಭಾವಗಳ ನಡುವೆ ಏರ್ಪಡುವ ಅನೈತಿಕ ಒಪ್ಪಂದಗಳು, ನೊಂದವರನ್ನು ನಾಶ ಮಾಡುವ ಪ್ರಕ್ರಿಯೆಗಳ ಆರಂಭವನ್ನು ಸೂಚಿಸಲು ಈ ಕುಟುಂಬದ ಕತೆಯನ್ನು ಕಾದಂಬರಿಕಾರರು ಬಳಸಿಕೊಂಡಿದ್ದಾರೆ".[೪೮]

ಈ ಮೇಲಿನ ಮಾತಿನಂತೆ ಸ್ವತಂತ್ರವಾಗಿ ನೆಲೆಯೂರಲು ಪ್ರಯತ್ನಿಸಿದ ಗಿರಿಯಪ್ಪಗೌಡ ಇನ್ನೊಬ್ಬ ಜಮೀನ್ದಾರಿ ತಿರುಮಲಭಟ್ಟರ ಪಾಳು ಭೂಮಿಗೆ ಗೇಣಿದಾರನಾಗುತ್ತಾನೆ. ಆ ಪಾಳು ಭೂಮಿಯನ್ನು ಅಭಿವೃದ್ಧಿಪಡಿಸಿ ಉತ್ತಮ ಭೂಮಿಯನ್ನಾಗಿ ಮಾಡಿಕೊಂಡಿರುವ ಬಗ್ಗೆ ಜಮೀನ್ದಾರನಿಗೆ ಸಂತೋಷ ಕೊಡುವ ಬದಲು ಅಸೂಯೆ ಉಂಟುಮಾಡುತ್ತದೆ ; ಹೆಚ್ಚಿನ ಗೇಣಿ ಕೇಳುವಂತೆ ಪ್ರೇರೇಪಿಸುತ್ತದೆ. ಒಡೆಯ ಕೇಳಿದ ಗೇಣಿಕೊಡಬೇಕು ಇಲ್ಲವೆ ಭೂಮಿ ಬಿಡಬೇಕು. ಇಂತಹ ಭೂಮಿಯ ಮೇಲೆ ಕಣ್ಣಿಟ್ಟಿರುವ ದಾಯಾದಿ ಕಾಳೇಗೌಡನ ಸ್ಪರ್ಧೆಯಿಂದ, ಸಿದ್ಧಣ್ಣ ಹೆಚ್ಚಿನ ಗೇಣಿಯನ್ನು ನೀಡಿ ಛಲದಿಂದ ಭೂಮಿ ಉಳಿಸಿಕೊಳ್ಳುತ್ತಾನೆ. ಅವರು ದುಡಿದ ಸಂಪತ್ತಲ್ಲಿ ಹೆಚ್ಚಿನ ಭಾಗ ಗೇಣಿಗೆ ನೀಡಿ ಅರೆಭಾಗವನ್ನು ಅರ್ಧವಾರ್ಷಿಕದರೆಗೆ ಉಣ್ಣಬೇಕಾಗಿತ್ತು. ಆದ್ದರಿಂದ ಜಮೀನ್ದಾರರ ಇಂತಹ ಶೋಷಣೆಯಿಂದಲೇ ಜೀವನದಲ್ಲಿ ಗೇಣಿದಾರರ ಬದುಕಿಗೂ ಜೀತದಾಳುಗಳ ಬದುಕಿಗೂ ವ್ಯತ್ಯಾಸವಿರಲಿಲ್ಲ. ಇಂತಹ ಶೋಷಣೆಯ ಸ್ಥಿತಿಯಲ್ಲೂ ಗಿರಿಯಪ್ಪಗೌಡ ಛಲದಿಂದ ಬದುಕುತ್ತಿದ್ದ.

ಸಾಹುಕಾರ ಬೆಳ್ಳೇಗೌಡ ಅಡಿಕೆಗೆ 'ಸೀಮೆಧಾರಣೆ'ಗೆ (ಮಾರುಕಟ್ಟೆಯ ಅರ್ಧದಷ್ಟು ಮೌಲ್ಯ) ಬೆಲೆ ನೀಡಿ ಶೋಷಿಸುವುದನ್ನು ವಿರೋಧಿಸಿ ಮಾರುಕಟ್ಟೆ ಬೆಲೆ ನೀಡುವ ಅಲ್ಲಾವುದ್ದೀನ್ ಸಾಹೇಬರಿಗೆ ಮಾರುವುದರ ಮೂಲಕ ತನ್ನ ಸ್ವಾಭಿಮಾನ ಮೆರೆಯುತ್ತಾನೆ. ಆದರೆ ಮಕ್ಕಳ ಕಾಯಿಲೆ ಕಾರಣ ಸಿದ್ಧಣ್ಣನ ತಾಯಿ ಈರಮ್ಮ ಬೆಳ್ಳೇಗೌಡನಲ್ಲಿ ಸಾಲ ತರುತ್ತಾಳೆ. ನೂರು ರೂಪಾಯಿ ಸಾಲಕ್ಕೆ ನಾಲ್ಕು ನೂರು ರೂಪಾಯಿ ಗೆಜ್ಜಡಿಕೆ (ಬಂಗಾರದ ಒಡವೆ) ಸರ ಒತ್ತಿಯಿಟ್ಟುಕೊಂಡು, ಅದನ್ನು ಬೆಳ್ಳೇಗೌಡ ಶಾಶ್ವತವಾಗಿ ತನ್ನದಾಗಿ ಮಾಡಿಕೊಳ್ಳಬೇಕೆಂಬ ಸಂಚು ಹೂಡುತ್ತಾನೆ. ಅಂದಿನ ಕಾಲದ ಜಮೀನ್ದಾರರು ಶ್ರೀಮಂತರಾದದ್ದು

ಜನರ ಅಜ್ಞಾನ, ಮೌಢ್ಯ ಮತ್ತು ಮಿಗಿಲಾಗಿ ಅಸಹಾಯಕತೆಯನ್ನು ಬಳಸಿಕೊಂಡು. ಜನಸಾಮಾನ್ಯರ ರಕ್ಷಣೆಗಾಗಿ ಬಂದ ಪ್ರಾಮಸರಿ, ಕೋರ್ಟು ಡಿಕ್ರಿ ಮೊದಲಾದ ಕಾನೂನುಗಳನ್ನು ತಿರುಚಿಕೊಂಡು, ಬಳಸಿಕೊಂಡು ಇನ್ನಷ್ಟು ಶೋಷಣೆಯನ್ನು ಹೆಚ್ಚು ಮಾಡುವಂತಾಯಿತು. ಒತ್ತೆಯನ್ನು ಹಿಂದೆ ಪಡೆವ ಅವಧಿಯನ್ನು ಮೀರುವಂತೆ, ಕೋರ್ಟಿನ ಸಮನ್ಸ್ ಸಾಲಗಾರನಿಗೆ ತಲುಪದಂತೆ ಮಾಡಿ ಬೆಲೆಬಾಳುವ ಒಡವೆಗಳನ್ನು ತಮ್ಮದಾಗಿಸಿಕೊಂಡ. ಕೇಳಲು ಹೋದ ಸಿದ್ದಣ್ಣ ವಸೂಲಿಗುಂಡಾನಿಂದ ನೂಕಿಸಿಕೊಂಡು ಬರುವಂತಾಯಿತು. ಈ ಸಂದರ್ಭದಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಬೆಳ್ಳೀಗೌಡನ ಹೆಂಡತಿ ನಾಗಮ್ಮನೂ ಜಮೀನ್ದಾರಿ ಕ್ರೌರ್ಯದ ಪ್ರತಿರೂಪವೇ ಆಗಿದ್ದು. ಆದ್ದರಿಂದ ಸಿದ್ದಣ್ಣನ ಮುಂದೆ ಬೆಳ್ಳೀಗೌಡ ತೋರಿಸುವ ದರ್ಪ, ದೌಲತ್ತನ್ನು ಮೊದಲೇ ತೋರಿಸುತ್ತಾಳೆ. ಸಿದ್ದಣ್ಣ ಇದನ್ನು ಲೆಕ್ಕಿಸದೆ ಮುಂದುವರೆದರೂ ಬೆಳ್ಳೀಗೌಡನ ದೌರ್ಜನ್ಯಕ್ಕೆ ನಿಸ್ಸಹಾಯಕನಾಗಿ ಹಿಂತಿರುಗುತ್ತಾನೆ. ಆದರೆ ಅವನೊಳಗೆ ಈ ವ್ಯವಸ್ಥೆಯ ವಿರುದ್ಧ ಸಂಘಟನಾತ್ಮಕ ಹೋರಾಟ ಮಾಡಬೇಕೆಂದು ಎಚ್ಚರವುಂಟಾಗುತ್ತದೆ. ಆದಕಾರಣ ಗೇಣಿದಾರರಲ್ಲಿಯೇ ಎರಡಕ್ಷರ ಕಲಿತ ಇವನನ್ನು ಉಳಿದ ಸುತ್ತಮುತ್ತಲಿನ ಗೇಣೀದಾರರು ಗೌರವದಿಂದ ಕಾಣುತ್ತಿದ್ದರು. ಅವರನ್ನೆಲ್ಲಾ ತಣ್ಣಗೆ ಸಂಘಟಿಸುವ ಪ್ರಯತ್ನ ಮಾಡುತ್ತಿದ್ದ. ಈ ಹಿನ್ನಲೆಯಲ್ಲಿ ಗೇಣಿದಾರರ ಹುಟ್ಟು–ಸಾವು–ಮದುವೆ ಕಾರ್ಯಗಳಲ್ಲಿ ಮುಂದಾಗಿ ನಿಂತು ಮಾಡುವುದರ ಮೂಲಕ ಜನನಾಯಕನಾಗಿದ್ದ. ಹಾಗೇ ತನ್ನ ಮಗ ಗಿಡ್ಡ (ಮೋಹನ) ವಿದ್ಯಾವಂತನಾಗಬೇಕು, ವಕೀಲನಾಗಬೇಕು ಇಲ್ಲವೇ ಅಧಿಕಾರಿಯಾಗಬೇಕು ಎಂದು ಪ್ರಬಲವಾದ ಇಚ್ಛೆಯನ್ನು ಹೊಂದಿದ್ದ. ಮಗ ವಕೀಲನಾದರೆ ತಾನು ಕಳೆದುಕೊಂಡಿರುವ ನ್ಯಾಯಯುತ ಕುಟುಂಬದ ಪಾಲು ಪಡೆಯಬೇಕೆಂದೂ, ಅಧಿಕಾರಿಯಾಗಿ ಈ ತಾಲ್ಲೂಕಿಗೆ ಬಂದರೆ ಕೊಬ್ಬಿ ಮೆರೆವ ಬೆಳ್ಳೀಗೌಡನ ಮಗ ಸಣ್ಣೀಗೌಡನಿಗೆ, ಕಾಳೇಗೌಡನ ಮಗ ನೀಲೆಗೌಡನಿಗೆ, ತಿರುಮಲಭಟ್ಟರ ಮಗ ನಾಗೇಂದ್ರರಿಗೆ ಬುದ್ಧಿಕಲಿಸಬೇಕೆಂದುಕೊಳ್ಳುವುದು ಅವನೊಳಗೆ ಹುಟ್ಟಿಕೊಂಡ ಪ್ರತಿರೋಧವನ್ನು ಅಭಿವ್ಯಕ್ತಿಸುತ್ತದೆ.

ವಂಶಪಾರಂಪರ್ಯವಾಗಿ ಒಡೆಯರ ಗುಲಾಮರಾಗಿ ಒಡೆಯರ ಮನೆಯಲ್ಲಿ ಜೀತದ ಆಳುಗಳಾಗಿ ದುಡಿಯುತ್ತಾ ಬಂದಿರುವ ಹರಿಜನರ ಬದುಕು ಗೇಣೀದಾರರಿಗಿಂತ ಹೀನಾಯವಾದ ಬದುಕಾಗಿತ್ತು. ಹುಲ್ಲಿನ/ಸೋಗೆಯ ಗುಡಿಸಲುಗಳೇ ಮಣ್ಣಿನ ಮಡಕೆಗಳೇ ಅವರ ಸರ್ವಸ್ವ ಆಸ್ತಿ. ಇವರಿಗೆ ಯಾವ ಬಗೆಯ ಆಸ್ತಿಯೂ ಇಲ್ಲದಿದ್ದರೂ ಇವರೇ ಒಡೆಯರ ಆಸ್ತಿಯಾಗಿದ್ದರು. ಜೀತದ ಆಳುಗಳಿಗೆ ಕೆಲಸ ಮಾಡಿದ ದಿನಕ್ಕೆ ಒಂದು ಕೊಳಗ ಭತ್ತ ನೀಡುತ್ತಿದ್ದರು, ಇದು 'ಕೂಲಿಕೊಳಗ'. ಅಂದರೆ ಕೂಲಿ ಕೊಡುವುದಕ್ಕಾಗಿ ಒಂದು ಅಳತೆಯ ಪ್ರಮಾಣ. ಗೇಣಿದಾರರಿಂದ ಗೇಣಿಭತ್ತ ಪಡೆಯುವ ಗಡಿಕೊಳಗದ ಅರ್ಧದಷ್ಟು ಮಾತ್ರ ಇರುವ ಅಳತೆಯ ಪ್ರಮಾಣ ಕೂಲಿ ಕೊಳಗ. ಈ ರೀತಿ ಆರ್ಥಿಕ ಶೋಷಣೆ ಸರ್ವೇ ಸಾಮಾನ್ಯವಾದ ಸಂಗತಿಯಾಗಿತ್ತು. ಪಂಜರವಳ್ಳಿಯ ಮೋಹನನ ಜೊತೆ, ಹರಿಜನಕೇರಿಯ ಕರಿಯಣ್ಣ ಶಾಲೆಗೆ ಹೋದದ್ದು ಒಡೆಯನಿಗೆ ಕೋಪಬರಿಸುವ ಸಂಗತಿಯಾಗಿತ್ತು. ಆತ ಹೈಸ್ಕೂಲುವರೆಗಿನ ಓದು ಮುಗಿಸಿ ಹಿಂತಿರುಗಿ ಬಂದಾಗ ಆಳಿನ ಮಗ ತನ್ನ ಮನೆಯಲ್ಲೇ ಕೆಲಸ ಮಾಡಬೇಕೆಂದು ಆರ್ಭಟ ಮಾಡಿದ ಬೆಳ್ಳೀಗೌಡನನ್ನು ವಿರೋಧಿಸಿ ರಾಜಕೀಯ ಚಟುವಟಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡದ್ದು ವಿಶೇಷವಾದ ಸಂಗತಿ. ಇಲ್ಲಿ ಹರಿಜನ ಸ್ವಾಭಿಮಾನಿಗಳಾಗಿ ತಲೆ ಎತ್ತುತ್ತಿರುವ

ಸೂಚನೆಯನ್ನು ಗಮನಿಸಬಹುದು. ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡ ಕರಿಯಣ್ಣ ಮನಸ್ಸು ಮಾಡಿದ್ದರೆ ಒಳ್ಳೆಯ ಕೆಲಸ ಪಡೆಯಬಹುದಾಗಿತ್ತು. ಆತನಿಗೆ ಮೋಹನ ಆದರ್ಶನಾಗುತ್ತಾನೆ. ಆದರೆ ಸ್ವಾತಂತ್ರ್ಯನಂತರದ ದೇಶೀ ಆಡಳಿತ ವ್ಯವಸ್ಥೆಯಲ್ಲಿ ಹರಿಜನ ಸಮುದಾಯದವನೊಬ್ಬ ದರಾಖಸ್ತು ಜಮೀನು ಪಡೆಯಲು ಅಸಾಧ್ಯವಾದದು ವ್ಯಂಗ್ಯವಾದ ಸಂಗತಿಯಾಗಿದೆ. ಅಂದರೆ ಅಷ್ಟರಮಟ್ಟಿಗೆ ಪಟ್ಟಭದ್ರಹಿತಾಸಕ್ತಿಗಳು, ಜಮೀನ್ದಾರಿ ದರ್ಪಗಳು ಇನ್ನೊಬ್ಬ ದಲಿತನ ಮೂಲಕ ತನ್ನದಾಗಿ ಮಾಡಿಕೊಳ್ಳುವ ಕುತಂತ್ರ ಚಿತ್ರಿತವಾಗಿದೆ. ಸ್ವತಂತ್ರ ಭಾರತದ ಆಡಳಿತ ವ್ಯವಸ್ಥೆಯಲ್ಲಿ ನೌಕರಿ ಪಡೆದಿರುವ ಶಾನುಭೋಗನ ನಡವಳಿಕೆಯನ್ನು ಪ್ರಶ್ನೆ ಮಾಡುವ, ಅವನ ಅಂಧ ತಿಳುವಳಿಕೆಯನ್ನು ಮನವರಿಕೆ ಮಾಡಿಕೊಡುವುದರ ಮೂಲಕ ಕರಿಯಪ್ಪ ಬಹುದೊಡ್ಡವನಾಗಿ ಕಾಣಿಸುತ್ತಾನೆ. ಕೆಳವರ್ಗದ ಸಮುದಾಯ ಸ್ವಲ್ಪವೇ ಆಸ್ತಿ ಪಡೆಯುವುದಾಗಲಿ, ಅಧಿಕಾರ ಪಡೆಯುವುದಾಗಲಿ ಮೇಲುವರ್ಗದ ಸಮುದಾಯಕ್ಕೆ ಎಂತಹ ತಳಮಳವನ್ನು ಉಂಟು ಮಾಡುತ್ತದೆ ಎಂಬುದನ್ನು ಕಾದಂಬರಿ ಕರಿಯಪ್ಪ ಶಾನುಭೋಗನ ಸಂಭಾಷಣೆಯ ಸಂದರ್ಭದಲ್ಲಿ ಅಭಿವ್ಯಕ್ತಿಸುತ್ತದೆ.

"ಕರಿಯಪ್ಪನವರೇ, ಸ್ವರಾಜ್ಯ ಬಂದ ನಂತರ ದೇವರು ನಮ್ಮಂತಹ ಅಲ್ಪಸಂಖ್ಯಾತರನ್ನು ಕೈಬಿಟ್ಟಿದ್ದಾನೆ. ಹರಿಜನರ ಕೈಹಿಡಿದಿದ್ದಾನೆ. ಬಹುಸಂಖ್ಯಾತ ಜಾತಿಯವರ ಮಧ್ಯ ನಾವು ಉಳಿಯುವುದೇ ಕಷ್ಟ. ಒಂದು ದೃಷ್ಟಿಯಿಂದ ನೋಡಿದರೆ, ಯೋಚಿಸಿದರೆ ಸ್ವರಾಜ್ಯ ಬಂದ ನಂತರ ಜಾತೀಯತೆ ಹೆಚ್ಚಾಗಿದೆ ಎನ್ನಬೇಕು".[೪೯]

ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಆಸ್ತಿ, ಅಧಿಕಾರ, ವಿದ್ಯೆಯನ್ನು ಪಡೆದ ಜನಸಮುದಾಯ ಸಾವಿರಾರು ವರ್ಷಗಳಿಂದ ಬಹುಸಂಖ್ಯಾತ ಜನಸಮುದಾಯವನ್ನು ಅಜ್ಞಾನ, ಅಂಧಕಾರ, ಮೌಢ್ಯ, ಆಸ್ತಿ, ಅಧಿಕಾರದ ನಿರಾಕರಣೆಯಲ್ಲಿಟ್ಟು ಬಂದ ಹಿನ್ನಲೆಯಲ್ಲಿ ಶೋಷಿತ ಸಮುದಾಯ ಸ್ವಲ್ಪವೇ ಅದನ್ನು ಪಡೆಯುವ, ಸಮಾನತೆಗಾಗಿ ಹೋರಾಟ ನಡೆಸುವುದು ತಳಮಳದ ಸಂಗತಿಯಾಗುತ್ತದೆ ಎಂಬುದನ್ನು ಕಾದಂಬರಿ ಸೂಚ್ಯವಾಗಿ ಹೇಳಬಯಸುತ್ತದೆ.

"ಜೀತದ ಆಳುಗಳಿಗೆ ಒಡೆಯರ ಮನೆ ಒಳಗೆ ಪ್ರವೇಶವಿರಲಿಲ್ಲ ; ಒಡೆಯರನ್ನು ಮುಟ್ಟುವಂತೆಯೂ ಇರಲಿಲ್ಲ. ಆದರೆ ಜೀತದ ಹೆಣ್ಣು ಸುಂದರಿಯಾಗಿದ್ದರೆ ಒಮ್ಮೊಮ್ಮೆ ಒಡೆಯರೇ ಆಳನ್ನು ಮುಟ್ಟುತ್ತಿದ್ದರು".[೫೦]

ಎಂದು ಮಾರ್ಮಿಕವಾಗಿ ಕಾದಂಬರಿ ಅಂದಿನ ಜಾತಿ ಶೋಷಣೆ ಮತ್ತು ಲೈಂಗಿಕ ಶೋಷಣೆಯನ್ನು ದಾಖಲಿಸುತ್ತದೆ. ದಲಿತರಲ್ಲಿ ಸುಂದರಿಯಾದ ಹೆಣ್ಣು ಹುಟ್ಟಿದರೆ ಅವಳಿಗೆ ಮಣಿಕಟ್ಟಿಸಿ 'ಗೊರಬಿ' ಬಿಡುವ ಪದ್ಧತಿಯಿತ್ತು. ಬಯಲುಸೀಮೆ ಪ್ರದೇಶಗಳಲ್ಲಿ ದಲಿತ ಹೆಣ್ಣುಗಳನ್ನು ಬಸವಿ (ದೇವದಾಸಿ) ಬಿಡುವ ಪದ್ಧತಿ ಇತ್ತು. ಈಗಲೂ ಕಾನೂನು ಕಣ್ಣು ತಪ್ಪಿಸಿ ಈ ಪದ್ಧತಿ ರೂಢಿಯಲ್ಲಿರುವುದನ್ನು ಗಮನಿಸಬಹುದು. ಜಮೀನ್ದಾರರು ತಮ್ಮ ಲೈಂಗಿಕ ಆಸಕ್ತಿಗೆ ಅಸ್ಪೃಶ್ಯರ ಹೆಣ್ಣನ್ನು ಮಣಿಕಟ್ಟಿಸುವುದರ ಮೂಲಕ ಆಕೆಗೆ ಶ್ರೇಷ್ಠತೆಯನ್ನು ಆರೋಪಿಸಿಕೊಂಡು ಸ್ಪರ್ಶ ಮಾಡುವ ಲೈಂಗಿಕ ದೌರ್ಜನ್ಯವಿದು. ಮಲೆನಾಡ ಪ್ರಾಂತ್ಯದಲ್ಲಿ 'ಗೊರಬಿ' ಬಿಡುವ ಪದ್ಧತಿ ಇದ್ದ ಬಗ್ಗೆ ಕಾದಂಬರಿ ದಾಖಲಿಸುತ್ತದೆ. ಆದರೆ ಮಲೆನಾಡ ಪರಿಸರದ ಇತರರ ಲೇಖಕರಲ್ಲಿ ಈ ಬಗ್ಗೆ ಎಲ್ಲಿಯೂ ಪ್ರಸ್ತಾಪ ಕಂಡುಬರುವುದಿಲ್ಲ ಬಹುಶಃ ಬಹಳ ಹಿಂದೆ ಈ ಪದ್ಧತಿ ಇದ್ದಿರಬಹುದು. ಈಗ ಮಲೆನಾಡ ಪರಿಸರದಲ್ಲಿ ಎಲ್ಲಿಯೂ ಈ

ಪದ್ಧತಿ ಕಂಡುಬರುವುದಿಲ್ಲ.

ಇಂತಹ ಪದ್ಧತಿಯನ್ನು ದಲಿತ ಹೆಣ್ಣು ವಿರೋಧಿಸಿರುವ ಘಟನೆಯೊಂದು ಚಿತ್ರಿತವಾಗಿದೆ. ಪಂಜರವಳ್ಳಿಯ ಮಾದಾರ 'ಕರಡಿ' ಎಂಬ ಹರಿಜನ ಮುಖಂಡನ ಮಗಳು 'ಹೂವಿ' ಚೆಲುವೆಯಾದ ಈಕೆಯನ್ನು ಅನುರೂಪನಾದ ವರನಿಗೆ ಕೊಟ್ಟು ಮದುವೆ ಮಾಡಬೇಕೆಂಬ ಆಸಕ್ತಿಯನ್ನು ತಂದೆ-ತಾಯಿ ತಳೆದಿದ್ದರು.

ಆದರೆ ಜಮೀನ್ದಾರ ಸಣ್ಣೇಗೌಡ ಮತ್ತು ನಾಗೇಂದ್ರ (ಜಾತಿಯಲ್ಲಿ ಬ್ರಾಹ್ಮಣ) ಆಕೆಯ ಮೇಲೆ ಕಣ್ಣಿಟ್ಟು ಮಣಿಕಟ್ಟಿಸಲು ಒತ್ತಾಯಿಸುತ್ತಾರೆ. "ಸೋತ್ಕಾಲ್ದಾಗೆ ಹೂವಿ ನಿನ್ ಜೋತೀಗೆ ಗುಡೀಲೇ ಇದ್ರೆ ನಿಂಗೂ ಎಷ್ಟೋ ಆಸ್ಗಾರ ಮಣಿಕಟ್ಟಿ ಗುಡೀಲಿ ಇಟ್ಗುಳೂದು ಬಿಟ್ಟು ಮದ್ವೇ ಮಾಡ್ತಾನಂತೆ ಮದ್ವೆ ಮದ್ವೇ ಮಾಡದ್ರೆ ನಿಂಗೆ ಬರೂ ಭಾಗ್ಯ ಏನು"[೫೧] ಎಂದು ಹಿತವಚನದ ಆಗ್ರಹದಲ್ಲಿ ಜಮೀನ್ದಾರನ ಸ್ವಾರ್ಥದ ಕ್ರೌರ್ಯ ಧ್ವನಿಸುತ್ತದೆ.

ಕರಡಿಗೆ ಇಷ್ಟವಿಲ್ಲದಿದ್ದರೂ ಒಡೆಯನ ಮಾತನ್ನು ಮೀರುವವನಲ್ಲ. ಹೆಂಡತಿ 'ಭರಮಿ' ಹತ್ತಿರ ಪ್ರಸ್ತಾಪ ಮಾಡಿದಾಗ ಆಕೆಯ ವಿರೋಧದಲ್ಲಿ ಕಾಲ ಬದಲಾಗುತ್ತಿರುವುದನ್ನು ಆಕೆ ಮನಗಂಡದ್ದನ್ನು ಸೂಚಿಸುತ್ತದೆ. ಮಣಿಕಟ್ಟುವ ಪದ್ಧತಿ ಅಳಿಸಿಹೋಗುವ ಕಾಲದಲ್ಲಿ ಮಗಳಿಗೆ ಮಣಿಕಟ್ಟುವುದು ತರವಲ್ಲ ಎಂದು ವಾದಿಸುತ್ತಾಳೆ. ಅಷ್ಟೆ ಅಲ್ಲದೆ ಒಡೆಯನ ಮುಂದೆ ಅದನ್ನು ಹೇಳುವ ಧೈರ್ಯವನ್ನು ತಾಳುವುದು ಗಮನಿಸಬೇಕಾದ ಸಂಗತಿ. ಹೂವಿಯನ್ನು ಕರಿಯಪ್ಪ ಮದುವೆಯಾಗುತ್ತಾನೆ ಎಂಬುದು ಸಣ್ಣೇಗೌಡನಿಗೆ ಸಹಿಸಲು ಅಸಾಧ್ಯವಾದ ಸಂಗತಿ. ಜೀತದಾಳುಗಳು ತಮ್ಮ ಆಸ್ತಿ ಎಂದು ಭಾವಿಸಿರುವ ಸಣ್ಣೇಗೌಡ ನಮ್ಮ ಆಳು ಮಗಳನ್ನು ಹಾರಿಸಿಕೊಂಡು ಹೋದರೆ ಕಾಲು ಮುರಿಯುವ ಬೆದರಿಕೆ ಹಾಕುತ್ತಾನೆ. ಆದರೆ ಆರ್ಥಿಕವಾಗಿ ಬಡವನಾದರೂ ಆತ್ಮಗೌರವುಳ್ಳ ಕರಿಯಪ್ಪ ಗೌಡನ ಮಾತನ್ನು ವಿರೋಧಿಸುತ್ತಾನೆ.

"ಗೌಡ್ರೇ, ಕೈಕಾಲು ಮುರ್ಸುವ ಕಾಲ ಮುಗಿದುಹೋಗಿದೆ. ದುಡ್ಡಿದ್ರೆ ನಿಮ್ಮನೇಲಿ ಇರ್ತದೆ. ನಿಮ್ ದುಡ್ಡಿನ ದಿಮಾಕು ನನ್ನತ್ರ ತೋರಿಸಬೇಡಿ ಹಾರಿಸಿಕೊಂಡು ಹೋಗುವ ಕೆಲಸ ಮಾಡೋರು ನೀವು, ನಾನಲ್ಲ. ನಾ ಬೇಕಾದ್ರೆ ರಾಜಾರೋಷ ಮದಿವಾತಿನಿ"[೫೨] ಎನ್ನುತ್ತಾನೆ. ಹೀಗೆ ಗೌಡರ ಧೀಮಾಕಿಗೆ, ಅವರ ಸಂಪತ್ತಿಗೆ ಸವಾಲ್ ಹಾಕಿ, ಅವರ ನಡವಳಿಕೆಯನ್ನು ಹೀಗೆಳೆದು ತನ್ನ ಸ್ವಾಭಿಮಾನದ ಮಾತನಾಡುವುದು ಸಾಮಾನ್ಯ ಸಂಗತಿಯಲ್ಲ. ತುಳಿತಕ್ಕೆ ಒಳಗಾದ ಜನರಲ್ಲಿ ಅರಿವು, ಎಚ್ಚರಿಕೆ, ಸ್ವಾಭಿಮಾನಗಳು ಮಲೆನಾಡ ಪರಿಸರದಲ್ಲಿ ಮೂಡುತ್ತಿದ್ದವು ಎಂಬುದರ ದ್ಯೋತಕವಾಗಿದೆ.

ಹಾಗೆ, ಅಜ್ಞಾನ ಬಡತನದಿಂದ ಒಡೆಯರ ಲೈಂಗಿಕ ಶೋಷಣೆಗೆ ಸಹಜವಾಗಿ ಒಳಗಾಗುತ್ತಿದ್ದ ಸಂದರ್ಭದಲ್ಲಿ ಹೂವಿಯಂತವಳ ಪ್ರತಿಭಟನೆ ಕೂಡ ಸ್ಥಿತ್ಯಂತರದ ಕುರುಹೇ ಆಗಿದೆ. ತಮ್ಮ ಸುತ್ತಮುತ್ತಲಿದ್ದ ಮೇಲು ಜಾತಿ ಹೆಣ್ಣುಮಕ್ಕಳು ಮದುವೆಯಗಿ ಗರತಿಯಾರಾಗಿ ಬಾಳುತ್ತಿರುವಂತೆ ತಾನು ಆಗಬೇಕೆಂದು ಬಯಸಿದ್ದಳು. ಒಡೆಯನ ಮನೆಗೆ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸುವುದರ ಮೂಲಕ ತನ್ನ ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ. ಅಷ್ಟೇ ಅಲ್ಲ ತನ್ನ ಗುಡಿಯ ಹತ್ತಿರ ಬಂದ ತನ್ನನ್ನು ಕರೆದ ಒಡೆಯನಿಗೆ ತಾತ್ಸಾರವಾಗಿಯೇ ಉತ್ತರ ನೀಡುವುದರ ಮೂಲಕ ಅವನ ಅಹಂಕಾರಕ್ಕೆ ಉತ್ತರ ನೀಡಿದ್ದಳು. ಅಪಮಾನಿತ ಗೌಡ

ಮಣಿಕಟ್ಟುವ ಕಾರ್ಯವನ್ನು ಮಾಡಲೇಬೇಕೆಂದು ಕರೆದು ಆಜ್ಞೆ ಮಾಡಿದ್ದ. ನಿಸ್ಸಹಾಯಕದಿಂದ ಆ ದಂಪತಿಗಳು ಆ ಸಿದ್ಧತೆ ನಡೆಸಿರುವಾಗ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವುದರ ಮೂಲಕ ಆ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ. ಈ ರೀತಿಯ ಅಂತ್ಯ ಅವಶ್ಯಕತೆಯಿರಲಿಲ್ಲವೆನಿಸುತ್ತದೆ. ಹೂವಿ–ಕರಿಯಪ್ಪರ ಮದುವೆ ಮೂಲಕ ಪ್ರತಿಭಟನೆಯನ್ನು ಸೂಚಿಸಬಹುದಾಗಿತ್ತು. ಕಾರಣ ಕಾಲ ಹಿಂದಿಗಿಂತ ಸುಧಾರಿಸಿತ್ತು. ಆದರೆ ಇವರ ಪ್ರತಿಭಟನೆ, ಆತ್ಮಗೌರವದ ಚಿತ್ರಕ್ಕಿಂತ ಜಮೀನ್ದಾರಿ ಪದ್ಧತಿಯ ಕ್ರೌರ್ಯವನ್ನು ಬಿಂಬಿಸಬೇಕಾದ್ದರಿಂದ ಇಂತಹ ಅಂತ್ಯವನ್ನು ತಂದಿದ್ದಾರೆನಿಸುತ್ತದೆ.

ಅಸ್ಪೃಶ್ಯತೆ, ಜಾತಿ ವರ್ಗಸಂಘರ್ಷ : ಎಂ.ಕೆ.ಇಂದಿರಾ ಮತ್ತು ವಸುಮತಿ ಉಡುಪ ಅವರ ಕಥನ

ಇವರ ಕಥೆ–ಕಾದಂಬರಿಯಲ್ಲಿ ಜಾತಿ, ಅಸ್ಪೃಶ್ಯತೆ ಮತ್ತು ವರ್ಗ ಸಂಘರ್ಷದ ಚಿತ್ರಣಗಳು ಎಲ್ಲಿಯೂ ಪ್ರಮುಖವಾಗಿ ಬರುವುದಿಲ್ಲ. ಕಥೆಯ ಹಂದರದಲ್ಲಿ ಅಪರೂಪವಾಗಿ ಪ್ರಾಸಂಗಿಕವಾಗಿ ಚಿತ್ರಿತವಾಗಿದೆ. ಇಂದಿರಾ ಅವರ 'ಫಣಿಯಮ್ಮ' ಕಾದಂಬರಿಯಲ್ಲಿ ಹಸಲರ ಬೈರನ ಮಗಳು ಸಂಕಿಗೆ ಮಡಿಯಾಗಿರುವ ಫಣಿಯಮ್ಮ ಹೆರಿಗೆ ಮಾಡಿಸಲು ಹೋಗುವ ಸಂದರ್ಭ ಇಲ್ಲಿ ಮುಖ್ಯವಾಗುತ್ತದೆ. ಕಾಶೀಯಾತ್ರೆ, ಋಷಿ ಪಂಚಮಿ ಮಾಡಿರುವ ಫಣಿಯಮ್ಮ ಅಸ್ಪೃಶ್ಯರ ಮನೆಗೆ ಹೋಗುವುದು ಬಂಧುಗಳಿಗೆ ಸರಿಕಾಣದೆ ವಿರೋಧಿಸುತ್ತಾರೆ. ಜಾತಿ–ಮಡಿಭಾವಗಿಂತ ಮಾನವೀಯತೆಯನ್ನು ಮುಖ್ಯವಾಗಿ ಪರಿಗಣಿಸದ ಫಣಿಯಮ್ಮ ಆ ವಿರೋಧವನ್ನು ಲೆಕ್ಕಿಸದೆ ಹೋಗುವುದನ್ನು ಗಮನಿಸಬಹುದು.

"ತನ್ನ ಇಡೀ ಬದುಕನ್ನು ಯಾವ ಮುಲಾಜು ಇಲ್ಲದೆ ಹೊಸಕಿ ಹಾಕಿದ ಕ್ರೂರ ಸಂಪ್ರದಾಯದ ಬಗ್ಗೆ ಫಣಿಯಮ್ಮನಿಗೆ ಮಿತಿಮೀರಿದ ತಿರಸ್ಕಾರವಿದೆ. ಆದ್ದರಿಂದ ಅವಳು ಹೊಲೆಗೇರಿಗೆ ಹೋಗುವುದರ ಮೂಲಕ, 'ಸಿಂಕಿ'ಯ ಹೆರಿಗೆ ಮಾಡಿಸುವುದರ ಮೂಲಕ ಸಂಪ್ರದಾಯವನ್ನು ಮುರಿದು ಮಾನವತೆಯಲ್ಲಿ ನೆಮ್ಮದಿ ಕಾಣಲು ಪ್ರಯತ್ನಿಸುತ್ತಾಳೆ".[೫೩]

ಈ ಮಾತು ನಿಜ. ಆದರೆ, ಫಣಿಯಮ್ಮನ ಇಂತಹ ಬಂಡಾಯ ಅಂತರಂಗದಲ್ಲಿನ, ಆಲೋಚನೆಯಲ್ಲಿಯೇ ಹೊರತು ಬಹಿರಂಗದಲ್ಲಿಯಲ್ಲ. ಮೈಲಿಗೆಯ ಭಾವ ಕಳೆದುಕೊಳ್ಳಲಾರದೆ ಆ ರಾತ್ರಿ ಹೊಳೆಯಲ್ಲಿ ತಣ್ಣೀರು ಸ್ನಾನ ಮಾಡುತ್ತಾಳೆ. ಅಲ್ಲದೆ ಅಸ್ಪೃಶ್ಯರ ಮನೆಯೊಳಗೆ ಹೋದ ವಿಚಾರವನ್ನಾಗಲಿ, ಹೆರಿಗೆ ಮಾಡಿಸಿರುವುದನ್ನಾಗಲಿ ಮರೆಮಾಚಿ ಹೇಳುತ್ತಾಳೆ. ಇದು ಸಹಜವಾದುದು. ಮೊದಲಿನಿಂದಲೂ ಫಣಿಯಮ್ಮ ಆಚಾರದಲ್ಲಿ ಸಂಪ್ರದಾಯಸ್ಥಳಾದರೂ ವಿಚಾರದಲ್ಲಿ ವೈಚಾರಿಕ ಮನೋಭಾವ ಹೊಂದಿದವಳು. ಮೊದಲಿನಿಂದ ಮಡಿಯಲ್ಲೇ ಬಂದ ಫಣಿಯಮ್ಮ ಸಂಪ್ರದಾಯದಸ್ಥ ಸಂಸಾರದಲ್ಲಿ ಆಶ್ರಯ ಪಡೆದಿರುವುರಿಂದ ಬಹಿರಂಗವಾದ ವಿರೋಧದ ಬದುಕು ಕಷ್ಟವಾಗುತ್ತದೆ. ಆ ಬಗ್ಗೆ ಬದುಕಿಗೆ ಆಕೆ ನಿಸ್ಸಾಹಾಯಕಳು.

ಹದಿನಾರರ ಹರೆಯದ ದಾಕ್ಷಾಯಿಣಿ ವಿಧವೆಯಾದಾಗ ಎಲ್ಲರು ಮಡಿಹಿಡಿಸಬೇಕು. ಗಂಡನ ಮನೆಗೆ ಕಳುಹಿಸಬೇಕೆಂದಾಗ ಫಣಿಯಮ್ಮ ವಿರೋಧಿಸುತ್ತಾಳೆ. ದಾಕ್ಷಾಯಿಣಿ ಬಂಡಾಯವೇಳುತ್ತಾಳೆ. ಆದರೂ ಮಡಿವಂತರು ತಲೆಬೋಳಿಸಿ ಅತ್ತೆ ಮನೆಗೆ ಕಳುಹಿಸಿದರೆ ಮೈದುನನಿಂದ ಮಗು ಪಡೆಯುತ್ತಾಳೆ. ಸಂಪ್ರದಾಯನಿಷ್ಠರ ಬಹಿಷ್ಕಾರದ ಬೆದರಿಕೆಗೆ ಅಂಜುವುದಿಲ್ಲ ಪ್ರತಿಯಾಗಿ ಎಲ್ಲರನ್ನು ಈ ಮನೆಯಿಂದ ಸಂಪ್ರದಾಯನಿಷ್ಠರ ಬಹಿಷ್ಕಾರದ ಬೆದರಿಕೆಗೆ

ಓಡಿಸಿ ಹೊಲೆಯೆರನ್ನೆಲ್ಲ ಮನೆಯೊಳಗೆ ಕರೆದುಕೊಂಡು ಬರುತ್ತೇನೆಂಬ ವಿರೋಧದ ಮೂಲಕ ಅಸ್ಪೃಶ್ಯರನ್ನು ಗುರಾಣಿ ಮಾಡಿಕೊಂಡು ಸಂಪ್ರದಾಯವನ್ನು ಹೆದರಿಸಿದ್ದು ಮುಖ್ಯವಾಗುತ್ತದೆ. ಸಂಸ್ಕಾರದ ನಾರಾಣಪ್ಪ ತುರುಕರನ್ನು ಮನೆಯೊಳಗೆ ಸೇರಿಸುತ್ತೇನೆಂದು ದುರ್ವಾಸಪುರದವರನ್ನು ಹೆದರಿಸಿದ ಹಾಗೆ. ಅವನಿಗೆ ಹೇಗೆ ಬಹಿಷ್ಕಾರ ಹಾಕಲು ಸಾಧ್ಯವಾಗಲಿಲ್ಲವೊ ಹಾಗೆ ಈಕೆ ಮೇಲೆ ಕೂಡ ಅದು ಸಾಧ್ಯವಾಗಲಿಲ್ಲ ಎಂಬುದನ್ನು ವಿಚಾರಮಾಡಬೇಕಾದ ಸಂಗತಿ.

ವಸುಮತಿ ಉಡುಪ ಅವರ 'ಸಮುದ್ಧರಣ ಮತ್ತು ಕಾಲ' ಕಥೆಗಳಲ್ಲಿ ಜಾತಿ, ಅಸ್ಪೃಶ್ಯತೆ ಮತ್ತು ಸಂಘರ್ಷವು ಪ್ರಮುಖವಾಗಿದೆ. ಸಮುದ್ಧರಣ ಕಥೆಯಲ್ಲಿ ಬರುವ ಪುಟ್ಟ-ಗುಲಾಬಿ ಭಟ್ಟರ ಮನೆಯ ಕೆಲಸದಾಳುಗಳು. ನಿಷ್ಠೆಯಿಂದ ದುಡಿದ ಅವರಿಗೆ ತಮ್ಮ ಮಗ ಈ ಕೆಲಸಕ್ಕೆ ಬಾರದೆ ಓದಿ ಬೇರೊಂದು ಉದ್ಯೋಗ ಮಾಡಬೇಕು ಎಂದು ಬಯಸಿದವರು. ಪರಂಪರಾಗತ ಜೀತದಾಳಿನ ಉದ್ಯೋಗ ಬಿಟ್ಟು ಬೇರೊಂದು ಉದ್ಯೋಗ ಪಡೆಯುವಂತಾಗಲು ಆತನ ಶಿಕ್ಷಣಕ್ಕಾಗಿ ಹಣವನ್ನು ಒಡೆಯರಲ್ಲಿ ಕೂಡಿಟ್ಟಿದ್ದರು. ಆಕಸ್ಮಿತವಾಗಿ ಪುಟ್ಟ ಮರಣವನ್ನಪ್ಪಿದಾಗ ಮಗನಿಗಾಗಿ ಕೂಡಿಟ್ಟ ಹಣವನ್ನು ಕೊಡದೆ ಗುಲಾಬಿಗೆ ಒಡೆಯ ವಂಚಿಸುತ್ತಾನೆ. ಊಳಿಗಮಾನ್ಯ ಮನಸ್ಸಿನ ಕ್ರೌರ್ಯ ಪುಟ್ಟನ ಮಗನ ಓದನ್ನು ಹಣವನ್ನು ಕೊಡುವುದರಲ್ಲಿ ವಂಚಿಸುವುದರ ಮೂಲಕ ನಿರಾಕರಿಸುವುದನ್ನು ಕಾಣಬಹುದು. ಆಕೆ ಆ ಒಡೆಯನ ಮನೆಯ ಆಳಾಗಿ ದುಡಿಯುವುನದನ್ನು ನಿರಾಕರಿಸಿ ತನ್ನ ತೌರಿಗೆ ಹೋಗುವುದರ ಮೂಲಕ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳೆ. ಅದೇ ರೀತಿಯಲ್ಲಿ 'ಕಾಲ' ಕಥೆಯಲ್ಲಿ ಬರುವ ಚೀಂಕ್ರ-ಚೆಲುವಿಯರು ರಾಯರ ಮನೆಯ ಆಳುಗಳು. ತಮ್ಮ ಮಗನಿಗೆ 'ಕೃಷ್ಣಮೂರ್ತಿ' ಎಂದು ರಾಯರ ಹಿರಿಯ ಮಗನ ಹೆಸರನ್ನು ಇಡುವುದರ ಮೂಲಕ ತಮ್ಮ ಮಗನೂ ಒಡೆಯರ ಮಗನಂತೆ ಓದಿ ವಿದ್ಯಾವಂತನಾಗಬೇಕೆಂದು ಬಯಸುತ್ತಾರೆ. ಈ ಹೆಸರೇ ಒಡೆಯನಿಗೆ ಸಹಿಸಲಸಾಧ್ಯವಾಗುತ್ತದೆ. ನಿನ್ನ ಜಾತೀಲಿ ನಿನಗೆ ಬೇರೆ ಹೆಸರು ಸಿಗಲಿಲ್ಲವೆ, ಬ್ರಾಹ್ಮಣರ ಹೆಸರನ್ನು ಇಟ್ಟು ಬಿಟ್ಟರೆ ಹಾಗೆ ಆಗಲಿಕ್ಕೆ ಸಾಧ್ಯವೆ ಎಂಬ ಕುಹಕದ, ವ್ಯಂಗ್ಯದ, ಅಸೂಯೆಯ ಮಾತಲ್ಲಿ ಕೆಳವರ್ಗದವರು ಉತ್ತಮ ಹೆಸರನ್ನು ಇಟ್ಟುಕೊಳ್ಳುವುದಕ್ಕೂ ಮೇಲುಜಾತಿಯ ವಿರೋಧವಿದೆ ಎಂಬುದನ್ನು ಗಮನಿಸಬೇಕು. ಆ ಹುಡುಗನನ್ನು ತಮ್ಮ ಮನೆಯಲ್ಲಿ ಕೆಲಸ ಮಾಡಿಕೊಂಡಿರುವಂತೆ ಮಾಡಬೇಕೆಂದುಕೊಂಡ ರಾಯರಿಗೆ ಯಾರೊ ಕೆಳವರ್ಗದ ಮೇಷ್ಟ್ರೊಬ್ಬರಿಂದ ಆತ ಶಾಲೆ ಸೇರಿ ಓದು ಮುಂದುವರಿಸಿದುದು ಅಪಥ್ಯವಾಗಿತ್ತು. ವರ್ಗಾವಣೆಗೊಂಡು ಬಂದ ಹೊಸ ಮೇಷ್ಟ್ರನ್ನು ತಮ್ಮ ಮನೆಗೆ ಮಧ್ಯಾಹ್ನದ ಊಟ ಹಾಕುವ ನೆಪದಲ್ಲಿ ಆ ಹುಡುಗ ನಪಾಸಾಗುವಂತೆ ಮಾಡಿದ್ದರು. ಆದರೆ ರಾಯರಿಗೆ ಕಾಲ ಬದಲಾಗಿದ್ದು ತಿಳಿದಿರಲಿಲ್ಲ. ಚೀಂಕ್ರ-ಚಲುವಿಯರು ಮಗನನ್ನು ಸೋದರಮಾನದ ಜೊತೆ ಓದಲು ದಕ್ಷಿಣ ಕನ್ನಡಕ್ಕೆ ಕಳುಹಿಸುವುದರ ಮೂಲಕ ರಾಯರ ಆಸೆಗೆ ತಣ್ಣೀರೆರಚಿದರು. ಇದು ಪರಂಪರಾ ಅವಸ್ಥೆಯ ವಿರುದ್ಧ ನಡೆದ ಪ್ರತಿಭಟನೆಯಾಗಿದೆ.

ಇದುವರೆಗೆ ಚರ್ಚಿಸಿದಂತೆ ಪಶ್ಚಿಮಘಟ್ಟದ ತಪ್ಪಲಲ್ಲಿರುವ ತೀರ್ಥಹಳ್ಳಿ ಪರಿಸರದ ಸಮಾಜವು ಒಟ್ಟು ಭಾರತದ ಸಮಾಜದಲ್ಲಿ ಕಂಡುಬರುವ ಶ್ರೇಣೀಕೃತ ಸಮಾಜ ವ್ಯವಸ್ಥೆಗಿಂತ ಭಿನ್ನವಾದುದೇನಲ್ಲ. ಒಕ್ಕಲಿಗರೇ ಬಹುಸಂಖ್ಯಾತರಾಗಿರುವ ಈ ಪರಿಸರದಲ್ಲಿ ಬೇರೆ ಬೇರೆ ಜಾತಿ ಸಮುದಾಯಗಳು ನೆಲೆಸಿವೆ.

ಮೇಲುನೋಟಕ್ಕೆ ಮಲೆನಾಡು ಸೌಮ್ಯವಾದ ಬಹುಮುಖಿ ಸಮಾಜವಾಗಿ ತೋರುತ್ತದೆ. ಆದರೆ ಒಳಗೆ ಹಾಗಿಲ್ಲ. ಇಲ್ಲಿಯೂ ಪುರೋಹಿತಶಾಹಿ, ಜಮೀನ್ದಾರಶಾಹಿ ದಲಿತರನ್ನು, ದುರ್ಬಲರನ್ನು ಶೋಷಿಸಿವೆ, ಹೀನಾಯವಾಗಿ ನಡೆಸಿಕೊಂಡಿವೆ. ಈ ಪರಿಸರದ ಪ್ರತಿಯೊಂದು ಜಾತಿಯು ಅಸ್ಪೃಶ್ಯತೆ, ಜಾತಿ ತಾರತಮ್ಯವನ್ನು ಪ್ರಜ್ಞಾಪೂರ್ವಕವಾಗಿ ಪಾಲಿಸುತ್ತಿವೆ. ಹಾಗೆ ಪಾಲಿಸುತ್ತಲೇ ಸಂಸ್ಕೃತೀಕರಣಕ್ಕೆ ತುಡಿಯುತ್ತವೆ. ಯಾವಾಗಲೂ ತನಗಿಂತ ಮೇಲು ಜಾತಿಯ ಸಾಂಸ್ಕೃತಿಕ ಲೋಕ ಮೇಲೆಂದು, ತನಗಿಂತ ಕೆಳಜಾತಿಯ ಸಾಂಸ್ಕೃತಿಕ ಲೋಕ ಕೀಳೆಂದು ಭಾವಿಸುತ್ತವೆ. ಶಂಕರಪ್ಪ ಹೆಗಡೆಯ ನಡವಳಿಕೆಯಲ್ಲಿ ಇದನ್ನು ಕಾಣಬಹುದು. ಕಷ್ಟಕ್ಕೆ ಸಿಲುಕಿದ ಗುತ್ತಿಯಲ್ಲೂ ಈ ಭಾವನೆ ಮೂಡುತ್ತದೆ. ತಳಸಮುದಾಯ ಕ್ರೈಸ್ತ ಧರ್ಮವನ್ನು ಒಂದು ಜಾತಿಯೆಂದೂ ಅದು ತನಗಿಂತ ಕೀಳೆಂದು ಭಾವಿಸುತ್ತದೆ. ಗುತ್ತಿ ತಾನು ಕ್ರಿಶ್ಚಿಯನ್ ಆಗಿ ಅಥವಾ ಮುಸ್ಲಿಂ ಆಗಿ ಹುಟ್ಟುವ ಭಾವವನ್ನು ಕಡೆಗಣಿಸುತ್ತಾನೆ. ಇಂತಹ ತಿರಸ್ಕಾರ ಗುತ್ತಿಯಂತವರಲ್ಲಿ ಮೂಡುವುದು ಮೇಲುವರ್ಗದವರ ಧೋರಣೆಯ ಪ್ರಭಾವವೇ ಹೊರತು ಅವನಲ್ಲಿ ಸಹಜವಾಗಿ ಮೂಡಿದ್ದಲ್ಲ.

ಜಾತಿ ತಾರತಮ್ಯಗಳು ಸಂಬೋಧನೆಯ ಸಂದರ್ಭದಲ್ಲೂ ವ್ಯಕ್ತವಾಗುತ್ತದೆ. ಜಾತಿನಿಷ್ಠ, ವರ್ಗನಿಷ್ಠ ಸಮಾಜದಲ್ಲಿ ಭಾಷೆಯ ವ್ಯಾಕರಣ ನಿಯಮ ಪಾಲನೆಯಾಗುವುದಿಲ್ಲ. ಮಧ್ಯಮವರ್ಗ ತನಗಿಂತ ಮೇಲುಜಾತಿ ತನ್ನನ್ನು ಕೀಳಾಗಿ ನಡೆಸಿಕೊಳ್ಳುವ ಬಗ್ಗೆ ಅಸಹನೆ ಇದೆ. ಅದೇ ತನಗಿಂತ ಕೆಳಜಾತಿಯನ್ನು ಹಾಗೆ ನಡೆಸಿಕೊಳ್ಳುತ್ತಿದ್ದೇನೆಂಬ ವಿವೇಕ ಮೂಡುವುದಿಲ್ಲ. ಮೇಲುವರ್ಗದ ಆಬಾಲವೃದ್ಧರಾಗಿ ಎಲ್ಲರು ಶೂದ್ರಾದಿ ಸಮುದಾಯದವನು ವಯಸ್ಸಿನಲ್ಲಿ ಎಷ್ಟೇ ಹಿರಿಯರಾದರೂ ಅವರಿಗೆ ಏಕವಚನ ಸಂಬೋಧನೆ ಇರುತ್ತದೆ. ಹಾಗೆ ಶೂದ್ರ ಮತ್ತು ತಳಸಮುದಾಯದವರು ಮೇಲುವರ್ಗದ ಎಂತಹ ಕಿರಿಯನನ್ನು ಬಹುವಚನದಿಂದಲೇ ಸಂಬೋಧಿಸಬೇಕು. ಶೂದ್ರ ಸಮುದಾಯ ತಳಸಮುದಾಯವನ್ನು ಹಾಗೆ ಕಾಣುತ್ತಿದೆ. ಈ ದ್ವಂದ್ವವು ದ್ವಂದ್ವ ಅನ್ನದ ರೀತಿಯಲ್ಲಿ ಈ ಪರಿಸರದಲ್ಲಿ ಸಹಜವಾಗಿ ಇಂದಿಗೂ ಪಾಲನೆಯಾಗುತ್ತಿದೆ. ಜಾತಿ, ಅಸ್ಪೃಶ್ಯತೆ, ವರ್ಗಸಂಘರ್ಷಗಳು ಒಂದಕ್ಕೊಂದು ತಳಕು ಹಾಕಿಕೊಂಡಿವೆ. ಸ್ವಂತ ಜಮೀನುಳ್ಳ ಸೇಸಾನಾಯ್ಕ ಒಕ್ಕಲಿಗರ ನಿಲುವನ್ನು ವಿರೋಧಿಸುತ್ತಾನೆ. ಇಲ್ಲಿ ನಡೆಯುವುದು ವರ್ಗ ಸಂಘರ್ಷ ಮತ್ತು ಜಾತಿ ಸಂಘರ್ಷ.

ಪ್ರತಿಯೊಂದು ಜಾತಿಯು ಜಾತಿ, ಅಸ್ಪೃಶ್ಯತೆಯ ಕಟ್ಟುಕಟ್ಟಳೆಗಳನ್ನು ಪಾಲಿಸುತ್ತವೆ. ಹಳೆಮನೆ ತಿಮ್ಮಪ್ಪ ಹೆಗಡೆ ತಮ್ಮ ಕೇರಿಯ ಒಳಗೆ ಬರುವುದನ್ನು ಅಲ್ಲಿಯ ಹರಿಜನ ಸಹಿಸಲಾರರು. ಹೂವಳ್ಳಿ ಊಟದ ಪಂಕ್ತಿಯನ್ನು ಹಸಲೋರು ಬಿಲ್ಲೋರಿಗಿಂತ ಕೀಳಲ್ಲ ಎಂದು ವಾದಿಸಬಲ್ಲರು. ಇಂತಹ ಅನೇಕ ಸಂದರ್ಭಗಳು ಅದನ್ನು ದೃಢಪಡಿಸುತ್ತವೆ. ಒಡೆಯರ ಮನೆಯಲ್ಲಿ ಒಕ್ಕಲಿಗ, ಹಳೆಪೈಕದವ, ಹಸಲರವ, ಬಿಲ್ಲರವ ಎಲ್ಲರೂ ದುಡಿಮೆಯ ಸ್ಥಿತಿಯಲ್ಲಿ ಸಮಾನರು, ಆರ್ಥಿಕ ಸ್ಥಿತಿಯಲ್ಲಿ ಸಮಾನರು. ಆದರೆ ಜಾತಿಯ ಭಾವನೆಯಲ್ಲಿ ತಾರತಮ್ಯ ಭಾವಗಳು ಕೆಲಸ ಮಾಡುತ್ತವೆ. ಹೀಗೆ ಪ್ರತಿಯೊಂದು ಜಾತಿಯು ಜಾತಿ, ಅಸ್ಪೃಶ್ಯತೆಯ ತಾರತಮ್ಯಗಳನ್ನು ಪಾಲಿಸುತ್ತಲೇ, ಕಾಮದ ನೆಲೆಯಲ್ಲಿ ಮೀರಬಲ್ಲರು. ಹಳೆಮನೆ ತಿಮ್ಮಪ್ಪ ಹೆಗಡೆ ಹರಿಜನ ಪುಟ್ಟಿಯ ಜೊತೆ, ದುರ್ವಾಸಪುರದ ಶ್ರೀಪತಿ ಬೆಳ್ಳೆಯ ಜೊತೆ,

ಕೋಣೂರು ರಂಗಪ್ಪಗೌಡ ಅಕ್ಕಣಿಯ ಜೊತೆ ಸಂಬಂಧ ಹೊಂದ ಬಲ್ಲರು. ಅಂದರೆ ಜಾತಿ, ಅಸ್ಪೃಶ್ಯತೆ ಪಾಲನೆ ಮತ್ತು ನಿರಾಕರಣೆಯ ಹಿಂದೆ ಮನುಷ್ಯನ ಸ್ವಾರ್ಥ ಮಾತ್ರ ಅಡಗಿದೆ ಎಂಬುದನ್ನು ಕಾಣಬಹುದು.

ಒಡೆಯನಿಗೆ ಶ್ರಮಿಕವರ್ಗ ತೋರುವ ಭಯ, ಭಕ್ತಿ, ಗೌರವಗಳು ಎಷ್ಟೋ ಬಾರಿ ಮೇಲು ಮೇಲಿನದಷ್ಟೆ. ಪ್ರಬಲ ಜಾತಿ ಜನಾಂಗಗಳ ಬಗ್ಗೆ ಸಾಂದರ್ಭಿಕವಾಗಿ ಪ್ರತಿರೋಧವನ್ನು ತಮ್ಮ ಮಿತಿಯಲ್ಲಿ ಒಡ್ಡುವುದನ್ನು ಕಾಣಬಹುದು. ಆದ್ದರಿಂದ ಸಾಮಾಜಿಕ ಸಂಬಂಧಗಳು ಏಕಮುಖವಾಗಿರುವುದಿಲ್ಲ. ಪ್ರತಿಯೊಂದು ಜಾತಿಯು ತಮ್ಮ ಕಸುಬನ್ನು ಹಕ್ಕಾಗಿ ಸ್ಥಾಪಿಸುವುದನ್ನು ಕಾಣಬಹುದು. ಹಳೆಪೈಕ ತಿಮ್ಮನ ಕಳ್ಳು ಇಳಿಸುವ ಕಾಯಕವನ್ನು ಬೇರೆಯವರು ಮಾಡುವುದು ಅಪರಾಧವಾಗಿ ತೋರುತ್ತದೆ. ಬೈರನಂತವನು ಆ ನಿಯಮವನ್ನು ಮುರಿಯಲು ಪ್ರಯತ್ನಿಸುತ್ತಾನೆ. ಒಕ್ಕಲಿಗರು ಮಾತ್ರ ಸ್ವಂತ ಜಮೀನು ಹೊಂದಬೇಕು, ಪಲ್ಲಕ್ಕಿಯನ್ನು ಮದುವೆಯಲ್ಲಿ ಏರಬೇಕೆಂಬ ನಿಲುವನ್ನು ಹಳೆಪೈಕದ ಸೇಸಾನಾಯ್ಕ ಮೀರಲು ಪ್ರಯತ್ನಿಸುವುದನ್ನು ಕಾಣಬಹುದು. ಇಂತಹ ಸಂಘರ್ಷಗಳು ಈ ಪರಿಸರದಲ್ಲಿ ವೈಯಕ್ತಿಕ ಮಟ್ಟದಲ್ಲಿ ನಡೆಯುತ್ತಿತ್ತು ಎಂಬುದಕ್ಕೆ ದ್ಯೋತಕ.

ಆಧುನಿಕ ಶಿಕ್ಷಣ ಪಡೆದು ಬಂದ ಹೂವಯ್ಯನಂತವರು ಈ ಪರಿಸರದಲ್ಲಿ ಜಾತಿ ತಾರತಮ್ಯವನ್ನು ಮೀರುವಂತಹ ಸುಧಾರಣೆಯ ನೆಲೆಯಲ್ಲಿ ಪ್ರಯತ್ನಿಸುತ್ತಾರೆ. ಅಸ್ಪೃಶ್ಯ ಬೈರನ ಮನೆಗೆ ಒಡೆಯನ ಮಗ ಕೂಲಿಗಂಟು ಹೊತ್ತು ಒಪ್ಪಿಸಬಲ್ಲ. ಸೋಮನಂತ ದಡ್ಡನನ್ನು, ಶೋಷಿತನನ್ನು ಸುಧಾರಿಸಬಲ್ಲ. ಉನ್ನತ ವ್ಯಾಸಂಗ ಪಡೆದು ಪರಿಸರಕ್ಕೆ ಹಿಂತಿರುಗಿ ಬಂದ ಜಗನ್ನಾಥ, ಘನಶ್ಯಾಮನಂತವರು ಪ್ರಜ್ಞಾಪೂರ್ವಕವಾಗಿ ವರ್ಗ ಪ್ರಜ್ಞೆಯನ್ನು ಕಳೆದುಕೊಳ್ಳುವ, ಜಾತಿ ತಾರತಮ್ಯವನ್ನು ಮೀರುವ, ಹರಿಜನರನ್ನು ಮುಟ್ಟುವ ಅವರು, ಇವರನ್ನು ಮುಟ್ಟುವ ಆಸೆ ಹುಟ್ಟಿಸುವ ಪ್ರಯತ್ನ ಮಾಡುವುದನ್ನು ಕಾಣಬಹುದು. ಆದರೆ ಕಾಲಪಕ್ವವಾಗದ ಕಾರಣ ಜಗನ್ನಾಥನ ಸಮಾನತೆಯ ಆಶಯವನ್ನು ಹರಿಜನ ಸಮುದಾಯ ಸ್ಪರ್ಶಿಸಲಾರದು. ಆದರೂ ಬಿಳಿಯ ಬಟ್ಟೆ ಪಿಳ್ಳನಂತವನಲ್ಲಿ ಸ್ವಾಭಿಮಾನ ಮೂಡಿಸಬಲ್ಲದು. ತನ್ನ ಮಗನ ಮೂಲಕವಾದರೂ ಈ ಶೋಷಣೆಯನ್ನು ತಡೆಯಬೇಕೆಂದು ಮಗನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂಬ ಛಲಕ್ಕೆ ಒಳಗಾಗುತ್ತಾನೆ. ಮೋಹನನ ಜೊತೆ ಪ್ರೌಢಶಾಲೆ ಕಲಿತ 'ಕರಿಯ' ಒಡೆಯನ ಜೀತಗಾರನಾಗುವುದಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಾನೆ. ಒಡೆಯನ ಶೋಷಣೆಯನ್ನು ಅಹಿಂಸಾತ್ಮಕ ರೀತಿಯಲ್ಲಿ ಧಿಕ್ಕರಿಸುತ್ತಾನೆ. ಕರಾವಳಿಯ ಹುಡುಗಿ ಅಕ್ಕು ಬದಲಾದ ರಾಜಕೀಯ ಸಾಂಸ್ಕೃತಿಕ ವಿದ್ಯಮಾನಗಳು ಕಲಿಸಿದ ವೈಚಾರಿಕತೆಯಿಂದ ಪರಂಪರಾಗತವಾದ ಉದ್ಯೋಗವನ್ನು ನಿರಾಕರಿಸಿ ಹೊಸ ಉದ್ಯೋಗವನ್ನು ಕೈಗೊಳ್ಳುವ, ಉದ್ಯೋಗವಲಯದಲ್ಲಿ ತನಗಿರುವ ಹಕ್ಕನ್ನು ಸ್ಥಾಪಿಸುವುದನ್ನು ಕಾಣಬಹುದು. ಅವಳಂತವರನ್ನು ಬೆಂಬಲಿಸುವ ಪ್ರಜ್ಞಾವಂತರು ಈ ಪರಿಸರದಲ್ಲಿ ಮೂಡುತ್ತಿರುವುದು ಕೂಡ ಆಶಾದಾಯಕ ಸಂಗತಿ.

ಹೀಗೆ ಒಂದು ಶತಮಾನದ ಹಿಂದಿನಿಂದ ಗಮನಿಸಿದಾಗ ಈ ಮಲೆನಾಡ ಪರಿಸರದಲ್ಲಿ ಅಸ್ಪೃಶ್ಯತೆಯ ಆಚರಣೆ, ಜಾತಿ ತಾರತಮ್ಯಗಳು ಮತ್ತು ವರ್ಗ ಸಂಘರ್ಷಗಳು ಕಾಲ ಬದಲಾದಂತೆ, ರಾಜಕೀಯ ಸಾಂಸ್ಕೃತಿಕ ವಿದ್ಯಮಾನಗಳು ಪಲ್ಲಟವಾಗುತ್ತಿದ್ದಂತೆ ಅವುಗಳ ಮೂಲಕ ಈ ಪರಿಸರದಲ್ಲಿ ವೈಚಾರಿಕತೆ ಮೂಡುತ್ತಿದ್ದಂತೆ ನಿಧಾನವಾಗಿ ಸಡಿಲಗೊಳ್ಳುತ್ತಿರುವುದು ಆಶಾದಾಯಕ ಸಂಗತಿಯಾಗಿದೆ. ಬಯಲುಸೀಮೆಗಳ

ಸಮಾಜಕ್ಕೆ ಹೋಲಿಸಿಕೊಂಡಾಗ ಈ ಪರಿಸರದಲ್ಲಿ ಆ ಎಲ್ಲ ಕಟ್ಟುಪಾಡುಗಳಲ್ಲಿ ಸಡಿಲತೆಯುಂಟಾಗಿರುವುದನ್ನು ಗಮನಿಸಬಹುದು.

ಅಡಿ ಟಿಪ್ಪಣಿ

೧. ಪ್ರಹ್ಲಾದ ಅಗಸನಕಟ್ಟೆ, ದಲಿತ–ಬಂಡಾಯ ಕಾವ್ಯ ಮತ್ತು ವಿಚಾರ ವಾದಗಳು, ಹರ್ಷ ಪ್ರಕಾಶನ, ಹುಬ್ಬಳ್ಳಿ, ೨೦೦೪, ಪುಟ:೮೮

೨. ತ್ಯಾನಂದೂರು ಪುಟ್ಟಣ್ಣ, ನಾನುಕಂಡ ಮಲೆನಾಡು, ಮಲೆನಾಡು ವೀರಶೈವ, ಅಧ್ಯಯನ ಸಂಸ್ಥೆ, ಶಿವಮೊಗ್ಗ, ೧೯೯೭, ಪುಟ:೬೦

೩. ತ್ಯಾನಂದೂರು ಪುಟ್ಟಣ್ಣ, ನಾನುಕಂಡ ಮಲೆನಾಡು, ಮಲೆನಾಡು ವೀರಶೈವ, ಅಧ್ಯಯನ ಸಂಸ್ಥೆ, ಶಿವಮೊಗ್ಗ, ೧೯೯೭, ಪುಟ:೭೧

೪. ರಹಮತ್ ತರೀಕೆರೆ, ಮರದೊಳಗಣಕಿಚ್ಚು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಮೈಸೂರು, ೨೦೦೨, ಪುಟ:೯೬

೫. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೪೩೨

೬. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೪೩೨

೭. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೪೩೨

೮. ರಹಮತ್ ತರೀಕೆರೆ, ಮರದೊಳಗಣಕಿಚ್ಚು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಮೈಸೂರು, ೨೦೦೨, ಪುಟ:೯೨

೯. ರಹಮತ್ ತರೀಕೆರೆ, ಮರದೊಳಗಣಕಿಚ್ಚು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಮೈಸೂರು, ೨೦೦೨, ಪುಟ:೧೦೧

೧೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೫೩೬

೧೧. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೦೨

೧೨. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೪೨೪

೧೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೭೨

೧೪. ಕೃಷ್ಣಪ್ಪ.ಬಿ, ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನಚಿತ್ರ, ಕುವೆಂಪು ಕಾದಂಬರಿಗಳು, ಗುರುಪಾದ ಮರಿಗುದ್ದಿ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪, ಪುಟ:೧೨೩

೧೫. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೦೪

೧೬. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೫೮೦

೧೭. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೫೯

೧೮. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೭೮

೧೯. ನಾಗರಾಜ್ ಡಿ.ಆರ್., ಕುವೆಂಪು ಕಾದಂಬರಿಗಳಲ್ಲಿ ವರ್ಣ, ವರ್ಗ ಸಂಘರ್ಷ, ಕುವೆಂಪು, ಕಾದಂಬರಿಗಳು, ಗುರುಪಾದ ಮರಿಗುದ್ದಿ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪, ಪುಟ:೧೩೧

೨೦. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೭೫

೨೧. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ:೧೧೯

೨೨. ಪ್ರಹ್ಲಾದ ಅಗಸನಕಟ್ಟೆ, ದಲಿತ-ಬಂಡಾಯ ಕಾವ್ಯಗಳ ಮೇಲೆ ವಿಚಾರ ವಾದಗಳ ಪ್ರಭಾವ, ಹರ್ಷ ಪ್ರಕಾಶನ, ಹುಬ್ಬಳ್ಳಿ, ೨೦೦೪, ಪುಟ:೯೨

೨೩. ನಾಗರಾಜ್ ಡಿ.ಆರ್., ಕುವೆಂಪು ಕಾದಂಬರಿಗಳಲ್ಲಿ ವರ್ಣ, ವರ್ಗ ಸಂಘರ್ಷ, ಕುವೆಂಪು ಕಾದಂಬರಿಗಳು, ಗುರುಪಾದ ಮರಿಗುದ್ದಿ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪, ಪುಟ:೧೨೯

೨೪. ಕೃಷ್ಣಪ್ಪ.ಬಿ, ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನಚಿತ್ರ, ಕುವೆಂಪು ಕಾದಂಬರಿಗಳು, ಗುರುಪಾದ ಮರಿಗುದ್ದಿ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪, ಪುಟ:೧೧೮

೨೫. ಕೃಷ್ಣಪ್ಪ.ಬಿ, ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನಚಿತ್ರ, ಕುವೆಂಪು ಕಾದಂಬರಿಗಳು, ಗುರುಪಾದ ಮರಿಗುದ್ದಿ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪, ಪುಟ:೧೨೩

೨೬. ತ್ಯಾನಂದೂರು ಪುಟ್ಟಣ್ಣ, ನಾನುಕಂಡ ಮಲೆನಾಡು, ಮಲೆನಾಡು ವೀರಶೈವ, ಅಧ್ಯಯನ ಸಂಸ್ಥೆ, ಶಿವಮೊಗ್ಗ, ೧೯೯೬, ಪುಟ:೫೮, ೬೧

೨೭. ಅನಂತಮೂರ್ತಿ ಯು.ಆರ್., ಸಂಸ್ಕಾರ, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೫, ಪುಟ:೧೫

೨೮. ಅಶೋಕ.ಟಿ.ಪಿ., ಅನಂತಮೂರ್ತಿ.ಯು.ಆರ್. ಒಂದು ಅಧ್ಯಯನ, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೧, ಪುಟ:೫೦

೨೯. ಅನಂತಮೂರ್ತಿ ಯು.ಆರ್., ಸಂಸ್ಕಾರ, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೫, ಪುಟ:೨೧

೩೦. ರಾಘವೇಂದ್ರರಾವ್ ಹೆಚ್.ಎಸ್., ಸಂಸ್ಕಾರ-ಕೆಲವು ವಿಷಯಗಳು, ಯು.ಆರ್.ಅನಂತಮೂರ್ತಿ ವ್ಯಕ್ತಿ-ಕೃತಿ, ಮುರಳೀಧರ ಉಪಾಧ್ಯ ಹಿರಿಯಡಕ (ಸಂ), ಕರ್ನಾಟಕ ಸಂಘ ಪುತ್ತೂರು, ೨೦೦೦, ಪುಟ:೨೬೩

೩೧. ಕೃಷ್ಣಮೂರ್ತಿ.ಎಂ.ಜಿ., ಸಂಸ್ಕಾರ, ಅನಂತಮೂರ್ತಿ.ಯು.ಆರ್. ವ್ಯಕ್ತಿ-ಕೃತಿ, ಮುರಳೀಧರ ಉಪಾಧ್ಯ ಹಿರಿಯಡಕ (ಸಂ), ಕರ್ನಾಟಕ ಸಂಘ ಪುತ್ತೂರು, ೨೦೦೦, ಪುಟ:೨೫೦

೩೨. ನಾಗರಾಜ ಡಿ.ಆರ್. ಭಾರತೀಪುರ ಒಂದು ಮುನ್ನುಡಿ, ಅನಂತಮೂರ್ತಿ.ಯು.ಆರ್. ವ್ಯಕ್ತಿ–ಕೃತಿ, ಮುರಳೀಧರ ಉಪಾಧ್ಯ ಹಿರಿಯಡಕ (ಸಂ), ಕರ್ನಾಟಕ ಸಂಘ ಪುತ್ತೂರು, ೨೦೦೦, ಪುಟ:೩೧೧

೩೩. ಅನಂತಮೂರ್ತಿ.ಯು.ಆರ್., ಭಾರತೀಪುರ, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೮, ಪುಟ:೮೩

೩೪. ಅನಂತಮೂರ್ತಿ.ಯು.ಆರ್., ಭಾರತೀಪುರ, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೮, ಪುಟ:೧೩೩

೩೫. ನಟರಾಜ್ ಹುಳಿಯೂರು, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪುಟ:೧೪೮

೩೬. ಕೋ.ಮ.ಕಾರಂತ, ಭಾರತೀಪುರ ಕುರಿತು, ಅನಂತಮೂರ್ತಿ.ಯು.ಆರ್., ವ್ಯಕ್ತಿ–ಕೃತಿ, ಮುರಳೀಧರ ಉಪಾಧ್ಯ ಹಿರಿಯಡಕ (ಸಂ), ಕರ್ನಾಟಕ ಸಂಘ, ಪುತ್ತೂರು, ೨೦೦೦, ಪುಟ:೨೯೪

೩೭. ವೆಂಕಟರಾಮ್.ಎಸ್ ಭಾರತೀಪುರ ಒಂದು ಸಮೀಕ್ಷೆ, ಅನಂತಮೂರ್ತಿ.ಯು.ಆರ್., ವ್ಯಕ್ತಿ–ಕೃತಿ, ಮುರಳೀಧರ ಉಪಾಧ್ಯ ಹಿರಿಯಡಕ (ಸಂ), ಕರ್ನಾಟಕ ಸಂಘ, ಪುತ್ತೂರು, ೨೦೦೦, ಪುಟ:೩೦೩

೩೮. ಅನಂತಮೂರ್ತಿ.ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೫೯

೩೯. ಅನಂತಮೂರ್ತಿ.ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೩೬

೪೦. ವಿಜಯಶಂಕರ.ಎಸ್.ಆರ್. ದಿವ್ಯ ಧ್ಯಾನಸ್ಥ ಲೇಖಕನ ಸೃಜನಶೀಲ ಪ್ರತಿಕ್ರಿಯೆ, ಸಾಹಿತ್ಯ ವಿಮರ್ಶೆ, ಬಿ.ಜನಾರ್ಧನಭಟ್ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೦, ಪುಟ:೧೭೫

೪೧. ಅನಂತಮೂರ್ತಿ.ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೧೫೮

೪೨. ಬಿಳುಮನೆ ರಾಮದಾಸ್, ವ್ಯಾಮೋಹ, ಮಲೆನಾಡು ಪ್ರಕಾಶನ, ಬೆಂಗಳೂರು ೧೯೯೦, ಪುಟ:೮೭

೪೩. ಅರವಿಂದ ಮಾಲಗತ್ತಿ, ಅಂಬೇಡ್ಕರ್ ವಿಚಾರಧಾರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೧, ಪುಟ:೨೩೮

೪೪. ಬಿಳುಮನೆ ರಾಮದಾಸ್, ಕುಂಜ, ಮಲೆನಾಡು ಪ್ರಕಾಶನ, ಬೆಂಗಳೂರು, ೧೯೯೩, ಪುಟ:೯೩

೪೫. ಶಿವರುದ್ರಪ್ಪ.ಜಿ.ಎಸ್., ಕರಾವಳಿ ಹುಡುಗಿ : ಬಿಳುಮನೆ ರಾಮದಾಸ್, ಮಳೆಕೋಗಿಲೆ, ಎಂ.ಬೈರೇಗೌಡ (ಸಂ), ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೯, ಪುಟ:೮೮

೪೬. ಬಿಳುಮನೆ ರಾಮದಾಸ್, ಕರಾವಳಿ ಹುಡುಗಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪, ಪುಟ:೯೭

೪೭. ಬಿಳುಮನೆ ರಾಮದಾಸ್, ಕರಾವಳಿ ಹುಡುಗಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪, ಪುಟ:೨೩೦

೪೮. ಜಯಪ್ರಕಾಶ್ ಬಂಜಗೆರೆ, ಸ್ವಾತಂತ್ರ್ಯೋತ್ತರ ಸಮಾಜದ ಮೌಲ್ಯಪತನ ಹಾಗೂ ಭ್ರಮ ನಿರಸನಗಳು ಕಥನ, ಕಡಿದಾಳ್ ಮಂಜಪ್ಪ ಜನ್ಮ ಶತಮಾನೋತ್ಸವ ಸಂಸ್ಮರಣೆ ಕಡಿದಾಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೮, ಪುಟ:೨೬೦

೪೯. ಕಡಿದಾಳ್ ಮಂಜಪ್ಪ, ಪಂಜರವಳ್ಳಿ ಪಂಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೮, ಪುಟ:೧೨೧

೫೦. ಕಡಿದಾಳ್ ಮಂಜಪ್ಪ, ಪಂಜರವಳ್ಳಿ ಪಂಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೮, ಪುಟ:೦೭

೫೧. ಕಡಿದಾಳ್ ಮಂಜಪ್ಪ, ಪಂಜರವಳ್ಳಿ ಪಂಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೮, ಪುಟ:೯೯

೫೨. ಕಡಿದಾಳ್ ಮಂಜಪ್ಪ, ಪಂಜರವಳ್ಳಿ ಪಂಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೮, ಪುಟ:೧೦೧

೫೩. ಲಲಿತಾನಾಯಕ ಬಿ.ಟಿ. ಫಣಿಯಮ್ಮದಲ್ಲೊಂದು ಬಂಡಾಯದ ಮಿಂಚು, ಸುರಗಿ (ಸಂ) ಪಾರ್ವತಿ.ಎಚ್.ಎಸ್, ಇಳಾ ಪ್ರಕಾಶನ, ಬೆಂಗಳೂರು, ೧೯೯೧, ಪುಟ:೧೬೬

ಅಧ್ಯಾಯ ೭

ಭೂ ಮಾಲಿಕತ್ವ ಹಾಗೂ ಭೂ ಸುಧಾರಣೆಯ ಕಾನೂನು : ಕಥಾಸಾಹಿತ್ಯ

ಅಧ್ಯಾಯ ೭. ಭೂ ಮಾಲಿಕತ್ವ ಹಾಗೂ ಭೂ ಸುಧಾರಣೆಯ ಕಾನೂನು : ಕಥಾಸಾಹಿತ್ಯ

ಸಕಲ ಜೀವೋತ್ಪತ್ತಿಯ ವಿಕಾಸಕ್ಕೆ ಈ ಭೂಮಿಯೇ ಆಧಾರ. ಅಂತೆಯೇ ಮಾನವ ಜೀವಿಯ ಅಸ್ತಿತ್ವ ಕೂಡ ಭೂಮಿಯೇ. ಯಾವುದೇ ವಿಕಾಸಗೊಂಡ ನಾಗರಿಕ ಸಮಾಜದಲ್ಲಿ ದುಡಿಮೆಗೆ, ಶ್ರಮಕ್ಕೆ ಅಗ್ರಮಾನ್ಯತೆ. ಶ್ರಮವೇ ಜೀವನದ ಮೂಲ ಅಂಶವಾಗಿದೆ. ಒಂದು ವಸ್ತುವಿನ ಉತ್ಪಾದನೆಯಲ್ಲಿ ಭೂಮಿ, ಬಂಡವಾಳ, ಶ್ರಮ ಇವು ಬಹಳ ಮುಖ್ಯ ಅಂಶಗಳು. ಆರ್ಥಿಕ ವಿಕಾಸದ ವ್ಯವಸ್ಥೆಯಲ್ಲಿ ಭೂಮಿ ಪ್ರಮುಖ ಪಾತ್ರ ವಹಿಸುತ್ತದೆ. ಭೂಮಿಯ ಉಪಯೋಗವು ಜನಸಾಮಾನ್ಯರ ಒಳಿತಿಗಾಗಿರಬೇಕು. ಆ ಕಾರಣ ಭೂಮಿಯನ್ನು ಉತ್ತಿ-ಬಿತ್ತಿ ಬೆಳೆಯುವುದು ಜನ ಸಮುದಾಯದ ಕರ್ತವ್ಯ. ಮಣ್ಣಿನ ಮಕ್ಕಳಾದ ರೈತರು ದೇಶಕ್ಕೆ ಅನ್ನ ನೀಡುವ ಅನ್ನದಾತರು, ದೇಶದ ಬೆನ್ನೆಲುಬು ಎಂದೆಲ್ಲ ವಿಚಾರ ಬೆಳೆದಂತೆ, ಭೂಮಿಯಿರುವುದು ಜನರ ಉಪಯೋಗಕ್ಕೆ ಎಂಬ ನಿಲುವು ಸಹಜವಾಗಿಯೇ ಸ್ಥಾಪಿತವಾಯಿತು. ಈ ಹಿನ್ನೆಲೆಯಲ್ಲಿ ಭೂಮಿಯೆಂಬುದು ಉತ್ತಿ-ಬಿತ್ತಿ ಬೆಳೆವ ಶ್ರಮ ಜೀವಿಗಳಿಗೆ ಕೆಲಸ ನೀಡುವ ಸಾಧನವೂ, ಬದುಕಿಗೆ ಆಶ್ರಯವೂ ಆಯಿತು.

ಕೃಷಿಯ ಉತ್ಪಾದನೆಯು ಸಾಮಾನ್ಯವಾಗಿ ಎರಡು ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಒಂದು, ಸಾಂಸ್ಥಿಕ ಸ್ವರೂಪದ್ದಾಗಿದ್ದರೆ ಮತ್ತೊಂದು ತಾಂತ್ರಿಕ ಸ್ವರೂಪದ್ದಾಗಿರುತ್ತದೆ. ತಾಂತ್ರಿಕ ಸ್ವರೂಪದಲ್ಲಿ ಕೃಷಿಗಾಗಿ ಯಂತ್ರೋಪಕರಣಗಳು, ಸುಧಾರಿತ ಬೀಜಗಳು, ಕೀಟನಾಶಕಗಳು, ರಾಸಾಯನಿಕ ಗೊಬ್ಬರ ಇತ್ಯಾದಿ ಬಳಕೆ. ಈ ಮೂಲಕ ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ ತಂದು ಕೈಗಾರೀಕರಣ, ವಾಣಿಜ್ಯೀಕರಣದ ಬೆಳವಣಿಗೆಗೆ ಪೂರಕಗೊಳಿಸಿ ರೈತ ಸಮುದಾಯವನ್ನು ಆರ್ಥಿಕವಾಗಿ ಪ್ರಬಲಗೊಳಿಸಬೇಕು. ರೈತರ ಹಿತರಕ್ಷಣೆ ಮಾಡಬೇಕೆಂಬುದೇ ಇದರ ಮುಖ್ಯವಾದ ವಿಚಾರವಾಗಿದೆ. ಸಾಂಸ್ಥಿಕ ಸ್ವರೂಪದಲ್ಲಿ ಕೃಷಿಯ ಮೇಲೆ ಅವಲಂಬಿತವಾಗಿರುವ ರೈತರ ಕೌಟುಂಬಿಕ ವ್ಯವಸ್ಥೆ, ಸಾಮಾಜಿಕ ಸ್ಥಾನಮಾನ ಮತ್ತು ಅವರು ಹೊಂದಿರುವ ಕೃಷಿ ಭೂಮಿಯ ಒಡೆತನದ ಸ್ವರೂಪವನ್ನು ಒಳಗೊಂಡಿರುತ್ತದೆ.

ಭಾರತ ಹಳ್ಳಿಗಳ ದೇಶ ; ಕೃಷಿ ಪ್ರಧಾನವಾದ ದೇಶ. ಆದಕಾರಣ ಮೇಲಿನ ಎರಡೂ ಅಂಶಗಳು ಹೆಚ್ಚು ಪ್ರಸ್ತುತವೂ, ಮುಖ್ಯವೂ ಎನಿಸುತ್ತದೆ. ಗಾಂಧಿ ಸದಾ ಹೇಳುವ ಮಾತು 'ಭಾರತ ಹಳ್ಳಿಗಳ ದೇಶ, ಇದರ ಆತ್ಮ ಇರುವುದು ಹಳ್ಳಿಗಳಲ್ಲಿ, ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ' ಎಂದು. ಗ್ರಾಮೀಣ ಪ್ರದೇಶ ಪ್ರಧಾನವಾಗಿ ಕೃಷಿಯನ್ನು, ಕೃಷಿ ಅವಲಂಬಿತ ಪಶುಸಂಗೋಪನೆ ಮುಂತಾಗಿ ಉಪಕಸುಬುಗಳನ್ನು ಹೊಂದಿರುತ್ತದೆ. ಆದ್ದರಿಂದ ಗ್ರಾಮೀಣ ಸಮುದಾಯಕ್ಕೂ, ಭೂಮಿಗೂ ಅವಿನಾಭಾವ ಸಂಬಂಧವಿದೆ. ಭಾರತ ಕೃಷಿ ಪ್ರಧಾನ ರಾಷ್ಟ್ರವಾದರೂ ತನ್ನ ಜನಸಂಖ್ಯೆಯ ಅವಶ್ಯಕತೆಯನ್ನು ಪೂರೈಸುವಷ್ಟು ಆಹಾರವನ್ನು ಉತ್ಪಾದಿಸಲಾಗುತ್ತಿರಲಿಲ್ಲ. ಇದಕ್ಕೆ ಕೃಷಿ ಸಂಬಂಧಿತ ಸಾಂಸ್ಥಿಕ ರಚನೆಯು ಪ್ರಧಾನವಾಗಿ ಕಾರಣವಾಗಿದ್ದು, ವಾಸ್ತವವಾಗಿ ಭೂಮಿಯನ್ನು ಉಳುಮೆ ಮಾಡುವವನಿಗೆ ಆ ಭೂಮಿಯ ಮೇಲೆ ಯಾವುದೇ ಒಡೆತನ ಇರದಿರುವುದು ಉತ್ಪಾದನೆಯ ಪ್ರಮಾಣದ ಕುಸಿತದ ಕಾರಣಗಳಲ್ಲಿ ಮುಖ್ಯವಾದುದಾಗಿದೆ. ಈ ಹಿನ್ನಲೆಯಲ್ಲಿ ಸ್ವತಂತ್ರ್ಯ ಭಾರತ ಕೃಷಿ ಕ್ಷೇತ್ರಕ್ಕೆ ಆದ್ಯತೆಯನ್ನು ನೀಡಿ ತಾಂತ್ರಿಕ ಹಾಗೂ ಸಾಂಸ್ಥಿಕ ಅಭಿವೃದ್ಧಿಗಾಗಿ

ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುತ್ತಲೇ ಬರುತ್ತಿದೆ. ಆದರೆ ಭೂಮಿಯ ಹಂಚಿಕೆಯಾಗಲಿ, ಮಾಲಿಕತ್ವದ ಪ್ರಶ್ನೆಯಾಗಲಿ ಸಮರ್ಪಕವಾದ ರೀತಿಯಲ್ಲಿ ಪರಿಹಾರ ಕಾಣಲು ಸಾಧ್ಯವಾಗಿಲ್ಲವೆಂಬುದೇ ವಿಪರ್ಯಾಸ.

ಭೂಮಿ ಮತ್ತು ಒಡೆತನ

ಭೂಮಿಯ ಒಡೆತನದ ಇತಿಹಾಸಕ್ಕೆ ಹಲವು ಮಜಲುಗಳಿವೆ. ಒಂದೊಂದು ದೇಶದ ಕಥೆಗಳೂ ಒಂದೊಂದು ತೆರನಾಗಿವೆ. ನಮ್ಮ ದೇಶದ ಶೋಷಿತ ಸಮುದಾಯದಲ್ಲಿ ರೈತಾಪಿವರ್ಗವೂ ಸೇರುತ್ತದೆ. ಭೂವ್ಯವಸ್ಥೆಯಲ್ಲಿ ಹಿಂದಿನಿಂದ ರಾಜರುಗಳು ಬ್ರಹ್ಮಾದಾಯ, ದೇವಾದಾಯ, ಅಗ್ರಹಾರ, ದಾನ, ದತ್ತಿ, ಉಂಬಳಿ ಮುಂತಾಗಿ ಉಡುಗೊರೆಗಳನ್ನು, ಕಾಣಿಕೆಯನ್ನು ನೀಡುತ್ತಾ ಬರುವುದರ ಮೂಲಕ ಮಧ್ಯವರ್ತಿಗಳನ್ನು ಸೃಷ್ಟಿಸಿದರು. ಮುಂದೆ ಬಂದ ಸಾಮ್ರಾಜ್ಯಶಾಹಿ ಸರಕಾರವು 'ಎಸ್ಟೇಟ್' ಕಾಯಿದೆಯ ಅಡಿಯಲ್ಲಿ ಜಮೀನ್ದಾರರರನ್ನು, ಜಾಗೀರುದಾರರನ್ನು ಸೃಷ್ಟಿಸಿತು. ಸರಕಾರ ಮತ್ತು ಭೂಮಿಯನ್ನು ಉಳುವವನ ನಡುವೆ ಈ ಮಧ್ಯವರ್ತಿಗಳ ಸೃಷ್ಟಿ ರೈತ ಸಮುದಾಯದ ಶೋಷಣೆಗೆ ಕಾರಣವಾಯಿತು. ವ್ಯವಸಾಯ ಮಾಡುವವ ಯಾರೋ ಮಾಲಿಕ ಇನ್ಯಾರೋ ಆಯಿತು. 'ಭೂಮಿ' ಎಂಬುದು ಗೇಣಿಯನ್ನು ದೊರಕಿಸಿಕೊಡುವ ಆಸ್ತಿ ಎಂಬ ಮನೋಭಾವ ಬೆಳೆದು, ದುಡಿಮೆಯಿಲ್ಲದೆ, ಶ್ರಮವಹಿಸದೆ ಫಲಪಡೆಯುವುದು ಉತ್ಪಾದನೆಯ ಮೂಲ ಎಂಬುದು ಸ್ಥಾಪಿತವಾಯಿತು. ಈ ಕಾರಣದಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಬಲರಾದವರು. ಭೂಮಿಯ ಮೇಲೆ, ಹಿಡಿತವನ್ನು ಸ್ಥಾಪಿಸಿಕೊಂಡರು. ಈ ಕಾರಣದಿಂದ ಒಡೆಯ–ಒಕ್ಕಲು, ಜಮೀನ್ದಾರ–ಗೇಣಿದಾರ ಎಂಬ ಊಳಿಗಮಾನ್ಯ ಪದ್ಧತಿ ಸಮಾಜದಲ್ಲಿ ಬೆಳೆದು ನಿಂತಿತು.

ಭೂಮಿಯ ಒಡೆತನ ಮತ್ತು ಗೇಣಿಯ ಸಮಸ್ಯೆ ಏಷ್ಯಾದ ರಾಷ್ಟ್ರಗಳಾದ ಜಪಾನ್, ಚೀನಾಗಳಲ್ಲೂ ಇತ್ತು. ಅವೆಲ್ಲಾ ೨೦ನೇ ಶತಮಾನದ ಆರಂಭದಲ್ಲೇ ಪರಿಹಾರ ಕಂಡವು. ಆದರೆ ಭಾರತದಲ್ಲಿ ಮಾತ್ರ ಈ ಸಮಸ್ಯೆ ಸ್ವಾತಂತ್ರ್ಯನಂತರವೂ ಅವ್ಯಾಹತವಾಗಿ ಮುಂದುವರಿಯಿತು. ನಿರಕ್ಷರತೆ, ಅಜ್ಞಾನ ರೂಢಿಸಂಪ್ರದಾಯಗಳೂ, ಬಲಿಷ್ಠರ ಭಯ, ನಮ್ಮ ಪರಂಪರೆಯಿಂದ ಬಂದ ಸ್ವಾಮಿನಿಷ್ಠೆ, ದೈವಭಯ ಹಾಗೂ ಪಟ್ಟಭದ್ರಹಿತಾಸಕ್ತಿಗಳ ರಾಜಕೀಯ ಹಿಡಿತ ಈ ಸಮಸ್ಯೆಯ ಮುಂದುವರಿಕೆಗೆ ಕಾರಣವಾಗಿದೆ ಎಂದರೆ ತಪ್ಪಲ್ಲ. ಹಾಗಿದ್ದೂ ಆಂತರಿಕ ಒತ್ತಡಗಳು, ಬಾಹ್ಯಪ್ರಭಾವಗಳು, ಅಸಂಘಟಿತ ಮಟ್ಟದಲ್ಲಿ ವಿರೋಧಗಳು, ಪ್ರತಿರೋಧಗಳು ಕಾಣಿಸಿಕೊಳ್ಳುತ್ತಾ ಮುಂದೆ ಹೋರಾಟವಾಗಿ, ಸಂಘಟಿತಶಕ್ತಿಯಾಗಿ ಬೆಳೆದು ರಾಜಕೀಯ ಇಚ್ಛಾಶಕ್ತಿ ರೂಪಿತಗೊಂಡು ಬರುವುದರ ಮೂಲಕ ಸಾಮಾಜಿಕ ಸ್ಥಿತ್ಯಂತರಕ್ಕೆ ಕಾರಣವಾಯಿತು.

ಜಮೀನ್ದಾರ ಪದ್ಧತಿ ಮತ್ತು ಮಲೆನಾಡ ಪರಿಸರ

ಮೈಸೂರು ರಾಜ್ಯದ ಮಲೆನಾಡು ಪ್ರಾಂತ್ಯದ ಶೇ. ೯೦%ರಷ್ಟು ವ್ಯವಸಾಯಗಾರರು ಗೇಣಿದಾರರಾಗಿದ್ದರು. ಗೇಣೀದಾರನ ಕುಟುಂಬದಲ್ಲೇ ಹುಟ್ಟಿ ಬಂದ ಮಾಜಿ ಮುಖ್ಯಮಂತ್ರಿಗಳಾಗಿದ್ದ

ಶ್ರೀ ಕಡಿದಾಳ್ ಮಂಜಪ್ಪ ಅವರು ತಮ್ಮ 'ಪಂಜರವಳ್ಳಿ ಪಂಜು' ಕಾದಂಬರಿಯಲ್ಲಿ ಹೀಗೆ ದಾಖಲಿಸುತ್ತಾರೆ.

"ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯೆಲ್ಲವು ಕೆಲವೇ ಜನ ಶ್ರೀಮಂತರ ಮತ್ತು ಮಠಾಧಿಪತಿಗಳ ಕೈಸೇರಿ ಹೋಗಿತ್ತು. ಆಧುನಿಕ ವ್ಯವಹಾರಗಳಾದ ಕ್ರಯಪತ್ರ, ದೀಡುಪತ್ರ, ಪ್ರಾಮಸರಿ ನೋಟು, ದಾವ, ಡಿಕ್ರಿ, ಹರಾಜು ಮುಂತಾದವು ಜನಸಾಮಾನ್ಯರ ಶೋಷಣೆಗೆ ಬಂದಂತಹ ಕಾನೂನುಗಳಾಗಿದ್ದವು. ಬುದ್ಧಿವಂತರಾದವರು ಇವುಗಳನ್ನು ಬಳಸಿ ಅನಕ್ಷರಸ್ಥರ ಆಸ್ತಿಗಳನ್ನು ಅಪಹರಿಸಿದರು".

"ಆಗ ಬಿಟ್ಟಿ ಅಥವಾ ಕಡ್ಡಾಯದ ಕೆಲಸ ಜಾರಿಯಲ್ಲಿತ್ತು. ಕೊತ್ವಾಲ, ಶೇಕದಾರ ಕರೆದಾಗ ಖಾತೆದಾರರಾದವರು ತಪ್ಪದೆ ಕಡ್ಡಾಯದ ಕೆಲಸಕ್ಕೆ ಹೋಗಬೇಕಾಗಿತ್ತು. ಇದು ಖಾತೆದಾರರಾದವರಿಗೆ ಒಂದು ಪಿಡುಗಾಗಿ ಕಾಡುತ್ತಿತ್ತು. ಈ ಅವಕಾಶ ಬಳಸಿಕೊಂಡ ಕೆಲವು ಬುದ್ಧಿವಂತರು ಸಣ್ಣಪುಟ್ಟ ಖಾತೆದಾರರ ಜಮೀನನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡು ಕಡ್ಡಾಯದ ಕೆಲಸದ ಜವಾಬ್ದಾರಿ ತಾವು ಹೊರುವುದಾಗಿ ಹೇಳಿದರು. ಇದರಿಂದ ಮುಗ್ಧರಾದ ರೈತರು ಬುದ್ಧಿವಂತರ ಬಲೆಗೆ ಬಿದ್ದು ಖಾತೆದಾರರಾಗುವ ಬದಲು ಗೇಣಿದಾರರಾದರು".[೧]

ಈ ಮೇಲ್ಕಂಡ ಮಾಹಿತಿ ಮಲೆನಾಡ ಪರಿಸರದಲ್ಲಿ ಸಣ್ಣ ಹಿಡುವಳಿದಾರರಾಗಿದ್ದವರು ಸಾಂಸಾರಿಕವಾದ ಸಮಸ್ಯೆಗಳಿಗೆ ಬುದ್ಧಿವಂತರಲ್ಲಿ, ಶ್ರೀಮಂತರಲ್ಲಿ ಸಾಲ ಪಡೆದು, ಹೊಸ ಕಾನೂನುಗಳ ಅರಿವಿನ ಕೊರತೆಯಿಂದ, ಜನಸಾಮಾನ್ಯರ ಹಿತರಕ್ಷಣೆಗಾಗಿ ಬಂದ ಕಾನೂನುಗಳನ್ನೇ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡ ಶ್ರೀಮಂತರ, ಬುದ್ಧಿವಂತರ ನಯವಂಚನೆಯಿಂದ ಆಸ್ತಿ ಕಳೆದುಕೊಂಡು ಗೇಣಿದಾರರಾದ ಬಗೆಯನ್ನು ಹೇಳುತ್ತದೆ. ಹಾಗೆ ಅಜ್ಞಾನದ ಕಾರಣ ಸರಕಾರದ ಕೆಲವು ಬಿಟ್ಟಿ ಕೆಲಸಗಳಿಗೆ ಹೆದರಿ ಅಥವಾ ಅದೊಂದು ಪಿಡುಗು ಎನಿಸಿದ ಕಾರಣದಿಂದ ಆ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಿ ತಾವು ನೆಮ್ಮದಿಯಾಗಿರಬಹುದೆಂಬ ಕಾರಣಕ್ಕೆ ಜಮೀನ್ದಾರರಾದವರು ಗೇಣಿದಾರರಾದರು. ಆದರೆ ಈ ಗೇಣಿದಾರರೇ ಮುಂದೆ ಅದೇ ಜಮೀನ್ದಾರರ ಮನೆಯಲ್ಲಿ ಬಿಟ್ಟಿ ಕೆಲಸ ಮಾಡಬೇಕಾದ ಸ್ಥಿತಿ ಬಂದಿರುವುದು ವ್ಯಂಗ್ಯವೇ ಸರಿ. ಬಹುಸಂಖ್ಯಾತ ಮಲೆನಾಡ ರೈತರು ಅನೇಕ ತಲೆಮಾರುಗಳಿಂದ ನೀರಿನ ಮೂಲವಿರುವ ಕೃಷಿಯೋಗ್ಯವಾದ ಭೂಮಿಯನ್ನು ಆಯ್ದುಕೊಂಡು ಕಾಡು ಕಡಿದು ವ್ಯವಸಾಯಕ್ಕೆ ಅರ್ಹವಾದ ಭೂಮಿಯನ್ನಾಗಿ ಪರಿವರ್ತಿಸಿಕೊಂಡು ಬಂದವರೇ. ಇಂತಹ ಸ್ವಂತ ಭೂಮಿಯನ್ನು ಮದುವೆ, ಕಾಯಿಲೆ ಮುಂತಾದ ಕಾರಣಗಳಿಂದ ಸಾಲಕ್ಕೆ ಒತ್ತೆಯಿಡುವುದರ ಮೂಲಕವೋ, ಸರ್ಕಾರಕ್ಕೆ ಕಂದಾಯದ ಹಣ ಕಟ್ಟಲು ಸಾಧ್ಯವಾಗದೆಯೋ, ಸಾಹುಕಾರನ ವಂಚನೆ ಅರಿಯಲಾರದೆಯೋ, ಸರ್ಕಾರದ ಬಿಟ್ಟಿ ಸೇವೆಯಿಂದ ಮುಕ್ತರಾಗಲೋ ಕಳೆದುಕೊಂಡು ಅದೇ ಭೂಮಿಗೆ ಗೇಣಿದಾರರಾದವರು ಬಹುಮಂದಿ. ಮಲೆನಾಡ ಪರಿಸರದಲ್ಲಿ ರೀತಿ ಗೇಣಿದಾರರಾದವರು ಶೂದ್ರ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇದಕ್ಕೆ ಈ ಸಮುದಾಯಲ್ಲಿನ ಅಜ್ಞಾನ, ಅನಕ್ಷರತೆ ಮತ್ತು ಜೀವನಕ್ರಮವೇ ಕಾರಣವಾಗಿದೆ. ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಆ ಸಮುದಾಯಕ್ಕಿಂತ ಮುಂದಿದ್ದ ಬ್ರಾಹ್ಮಣ ಸಮುದಾಯದಲ್ಲಿ ಗೇಣಿದಾರರಾಗಿದ್ದವರ ಸಂಖ್ಯೆ ಕಡಿಮೆಯೆಂದೇ ಹೇಳಬಹುದು. 'ಪಂಜರವಳ್ಳಿ ಪಂಜು' ಕಾದಂಬರಿಯಲ್ಲಿ ಬರುವ ಶಾನುಭೋಗ ನಾಗೇಂದ್ರಭಟ್ಟರಾಗಲಿ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕಲ್ಲೂರು ಮಂಜಯ್ಯನಾಗಲಿ,

'ದಿವ್ಯ' ಕಾದಂಬರಿಯಲ್ಲಿ ಬರುವ ದೇವನಹಳ್ಳಿ ಮಂಜಯ್ಯನಾಗಲಿ, 'ನಂಬಿಕೆಟ್ಟವರಿಲ್ಲವೊ' ಕಾದಂಬರಿಯ ಬೇಗದಾಳಿ ನಾಗಪ್ಪಯ್ಯನವರಾಗಲಿ – ದಕ್ಷಿಣ ಕನ್ನಡದಿಂದ ಬರಿಗೈಲಿ ಪೂಜೆಗಾಗಿ ಗಟ್ಟದ ಮೇಲೆ ಬಂದವರು ಆಗರ್ಭ ಶ್ರೀಮಂತರಾದುದು, ದೊಡ್ಡ ಜಮೀನ್ದಾರರಾದುದು ಈ ಹಿನ್ನೆಲೆಯಲ್ಲಿ ಎಂಬುದನ್ನು ಗಮನಿಸಬೇಕು. ಹಾಗೆಯೇ ಜಮೀನ್ದಾರರಾಗಿದ್ದ ಕೆಲವರು ಕುಟುಂಬದ ಕಲಹವೊ, ದಾಯಾದಿ ಮತ್ಸರದ ಕಾರಣದಿಂದಲೊ ಜಮೀನ್ದಾರರಾಗಿರಬೇಕಾದವರು ಬೇರೊಬ್ಬ ಸಾಹುಕಾರನ ಆಸ್ತಿಯಲ್ಲಿ ಗೇಣಿದಾರರಾಗಿ ನೆಲೆನಿಂತವರಾಗಿದ್ದರು. 'ಪಂಜರವಳ್ಳಿ ಪಂಜು' ಕಾದಂಬರಿಯ 'ಗಿರಿಯಪ್ಪಗೌಡ' ಕುಟುಂಬದ ಹಿರಿಯನಾದರೂ ಓದು ಬರಹ ಬಲ್ಲ ತಮ್ಮ ಕಾಳೇಗೌಡ ಮನೆಯ ಯಜಮಾನನಾಗಿದ್ದು ಜಮೀನ್ದಾರಿಕೆಯ ಕ್ರೌರ್ಯಕ್ಕೆ, ತುಳಿತಕ್ಕೆ ಸಹೋದರನನ್ನು ಒಳಗು ಮಾಡುತ್ತಾನೆ. ಜೀತದಾಳಿನಂತೆ ಪರಿಗಣಿಸಲ್ಪಟ್ಟ ಗಿರಿಯಪ್ಪಗೌಡ ಮನೆಯಿಂದ ಹೊರಬಿದ್ದು ತಿರುಮಲಭಟ್ಟರ ಒಕ್ಕಲಾಗುವುದನ್ನು ಕಾಣಬಹುದು. 'ನಂಬಿಕೆಟ್ಟವರಿಲ್ಲವೊ' ಕಾದಂಬರಿಯ ತಮ್ಮಯ್ಯ ಅಣ್ಣನ ಉಪಟಳದಿಂದ ಸೀಗದಾಳು ನಾಗಪ್ಪಯ್ಯನವರ ಕೊಡಿಗೆ ಪಾಳು ಜಮೀನಿನಲ್ಲಿ ಒಕ್ಕಲಾಗುತ್ತಾನೆ. ಮಲೆನಾಡ ಪರಿಸರದಲ್ಲಿ ಜಮೀನ್ದಾರರ ಶೋಷಣೆಯನ್ನು ಸಹಿಸಿಕೊಂಡು ಯಾಕೆ ನಿಷ್ಪರಾಗಿ ಬದುಕುತ್ತಿದ್ದರು ಎಂದರೆ ಗಿರಿಯಪ್ಪನಂತವರು, ತಮ್ಮಯ್ಯನಂತವರು ಕುಟುಂಬದಿಂದಲೇ ಇದಕ್ಕಿಂತ ಭೀಕರ ದೈಹಿಕ, ಮಾನಸಿಕ ಹಿಂಸೆ ಅನುಭವಿಸಿದ್ದರಿಂದ ಆ ಸಂದರ್ಭದಲ್ಲಿ ಅವರ ಪಾಲಿಗೆ ನಿಲ್ಲಲ್ಲು ಆಶ್ರಯ ಕೊಟ್ಟ ಧಣಿ ದೇವರಾಗಿ ಬಿಟ್ಟಿರುತ್ತಾನೆ.

ಜಮೀನ್ದಾರ–ಗೇಣಿದಾರನ ನಡುವಿನ ವ್ಯವಹಾರ ಸಂಬಂಧ

ಮಲೆನಾಡ ಪರಿಸರದ ಲೇವಾದೇವಿದಾರರ ವ್ಯವಹಾರ ನೀ ತಿ ನಿಯಮಗಳೇ ಅವರ ಶೋಷಣೆಯ ಮುಖವನ್ನು ಎತ್ತಿತೋರಿಸುತ್ತವೆ. ಸಾಹುಕಾರ ತಾನು ನೀಡುವ ಹಣಕ್ಕೆ ಶೇ. ೧೮ ರಿಂದ ೨೫ರವರೆಗೆ ಬಡ್ಡಿ ವಿಧಿಸುತ್ತಿದ್ದರು. ಅಶ್ವಯುಜ ಬಹುಳ ಅಮವಾಸ್ಯೆ ಅವರ ವ್ಯಾವಹಾರಿಕ ವರ್ಷದ ಅಂತಿಮ ದಿನವಾಗಿತ್ತು. ಹಣಕಾಸು ವರ್ಷದ ಅಂತಿಮ ಅವಧಿಯಾದ ಇದು ಹೇಗಿದ್ದ ಸಂದರ್ಭವೆಂದರೆ ಭೂಮಿಯಲ್ಲಿ ಭತ್ತ ಹಾಲುಗಟ್ಟಿರುವ (ಹೊಡೆಯಾಗಿರುವ) ತೋಟದಲ್ಲಿ ಕೊನೆ ಎಳಗಾಯಿಯಾಗಿರುವ ಕಾಲ. ಅಂದರೆ ಒಂದೆರಡು ತಿಂಗಳೊಳಗೆ ರೈತ ತಾನು ಬೆಳೆ ಪಡೆಯುತ್ತಾನೆ. ಅಶ್ವಯುಜ ಮಾಸದಲ್ಲಿ ಬೆಳೆಯ ನಿರೀಕ್ಷೆಯಲ್ಲಿರುವ ಹಾಗೂ ಬರಿಗೈಯಲ್ಲಿರುವ ಕಾಲ. ಹಾಗಿರುವಾಗ ಸಾಲ ತೀರಸಲು ಹೇಗೆ ಸಾಧ್ಯ ಮನೆಯಲ್ಲಿ ಭತ್ತ ಖಾಲಿಯಾಗಿದೆ. ಬೆಳೆಯನ್ನು ಅಣಿಗೊಳಿಸಿಕೊಳ್ಳಲು ಹಣಬೇಕು. ಆದಕಾರಣ ಸಾಹುಕಾರನಲ್ಲಿ ಭತ್ತ ; ಹಣವನ್ನು ಅನಿವಾರ್ಯವಾಗಿ ಸಾಲವಾಗಿ ಪಡೆಯಲೇಬೇಕು. ಈ ಅಮಾವಾಸ್ಯೆಯ ಎಂಟು ದಿವಸ ಮೊದಲು ಸಾಲಕೊಟ್ಟರೂ ವಾರ್ಷಿಕ ಬಡ್ಡಿಯನ್ನೆ ತರಬೇಕಾಗಿತ್ತು. ಹಾಗೆ ಬೆಳೆಯ ಕೊಯ್ಲಿನ ಎರಡು–ಮೂರು ತಿಂಗಳಷ್ಟೇ, ಮೊದಲು ಭತ್ತ ತೆಗೆದುಕೊಂಡರೂ ಒಂದಕ್ಕೆ ಎರಡರಷ್ಟು ಸೇರಿಸಿ ಭತ್ತ ನೀಡಬೇಕಾಗಿತ್ತು. ಇದಕ್ಕೆ 'ಹುಲಿಭತ್ತ' ಎಂದು ಕರೆಯುತ್ತಾರೆ. (ಹುಲಿ ಎಂಬ ಶಬ್ದವೇ ಸಾಹುಕಾರನ ಕಬಳಿಕೆಯನ್ನು ಸೂಚಿಸುತ್ತದೆ!). ಸಾಲಗಾರ ನೀಡಿದ ಅಡಿಕೆಗೆ ನೀಡುವ ಧಾರಣೆ ಮಾರುಕಟ್ಟೆ ಧಾರಣೆಯ ಅರ್ಧದಷ್ಟಿರುತ್ತದೆ. ಇದನ್ನು 'ಸೀಮೆಧಾರಣೆ' ಎಂದು ಕರೆಯುತ್ತಾರೆ. ಸಾಹುಕಾರ ಸಾಲಗಾರನಿಂದ ಅಥವಾ ಗೇಣಿದಾರನಿಂದ ಅಳೆದುಕೊಳ್ಳಲು ಬಳಸುವ ಕೊಳಗವನ್ನು 'ಗಡಿಕೊಳಗ'

ಎಂದೂ, ಅದೇ ತಾನು ಸಾಲರೂಪವಾಗಿಯೋ, ಕೂಲಿರೂಪವಾಗಿಯೋ ನೀಡುವಾಗ ಬಳಸುವ ಕೊಳಗವನ್ನು 'ಕೂಲಿಕೊಳಗ' ಎಂದು ಕರೆಯುತ್ತಿದ್ದರು. ಈ ಎರಡೂ ಕೊಳಗಗಳು ಅಳತೆಯಲ್ಲಿ ವ್ಯತ್ಯಾಸವನ್ನು ಹೊಂದಿದ್ದು ; ಶೋಷಕ ಗುರುತುಗಳಾಗಿದ್ದವು. (ಸಾಗರದ ಕಾಗೋಡು ಎಂಬ ಹಳ್ಳಿಯಲ್ಲಿ ೧೯೫೫ರಲ್ಲಿ ನಡೆದ ಕಾಗೋಡು ಸತ್ಯಾಗ್ರಹದ ಕಿಡಿ ಹತ್ತಿಕೊಂಡಿದ್ದೇ ಗೇಣಿಕೊಡುವುದಿಲ್ಲ ಎಂದಲ್ಲ ಈ ಕೊಳಗದ ಅಳತೆಯ ವಿಷಯದಲ್ಲಿ) ಜಮೀನ್ದಾರನಿಗೆ ಗೇಣಿ ಅಳೆದುಕೊಡುವಾಗ ಒಪ್ಪಂದದ ಪ್ರಮಾಣದ ಜೊತೆ ತಳರಾಶಿ, ಮೇಲುಕೊಳಗ, ಲಾಭಸೆರೆ ಮುಂತಾದ ಮರ್ಯಾದೆಯ ರೂಪವು ಇತ್ತು. ಅಷ್ಟೇ ಅಲ್ಲ ಯಾರಾದರೂ ಗೇಣಿದಾರ ಒಳ್ಳೆಯ ಕೃಷಿ ಮಾಡಿ ಉತ್ತಮ ಬೆಳೆ ತೆಗೆದರೆ ಅದರಲ್ಲೂ ಪಾಲು ನೀಡಬೇಕಾಗಿತ್ತು. ಇದನ್ನು 'ಕೋರು' ಪದ್ಧತಿಯೆಂದು ಕರೆಯುತ್ತಾರೆ. ಶ್ರೀ ಕಡಿದಾಳ್ ಮಂಜಪ್ಪನವರ 'ಪಂಜರವಳ್ಳಿ ಪಂಜು' ಕಾದಂಬರಿಯಲ್ಲಿ ಬರುವ 'ಪವಿತ್ರಪುರ' (ತೀರ್ಥಹಳ್ಳಿಗೆ–ತೀರ್ಥರಾಜಪುರ ಎಂಬ ಹೆಸರಿತ್ತು – ಇದನ್ನು ಸಂಕೇತಿಸುವ ಹಾಗಿದೆ) ತಾಲ್ಲೂಕಿಗೆ ಸೇರಿದ ಪಂಜರವಳ್ಳಿ ಗ್ರಾಮದ ಜಮೀನ್ದಾರರ ಮತ್ತು ಗೇಣಿದಾರರ ಚಿತ್ರಣದಲ್ಲಿ ಮಲೆನಾಡ ಪ್ರಾಂತ್ಯದಲ್ಲಿ ಜಮೀನ್ದಾರರು ಹೇಗೆ ಒಕ್ಕಲು ಮಕ್ಕಳನ್ನು, ಆಳು ಮಕ್ಕಳನ್ನು ಶೋಷಿಸುತ್ತಿದ್ದರು ಎಂಬುದನ್ನು ಕಾಣಬಹುದಾಗಿದೆ.

"ಇಲ್ಲಿನ ವ್ಯವಸಾಯದ ಭೂಮಿ ನಾಲ್ಕು ಜನರಿಗೆ ಸೇರಿದ್ದಾಗಿತ್ತು. ಅರೆವಾಸಿ ಭೂಮಿ ಪವಿತ್ರಪುರದ ಮಠಕ್ಕೂ, ಇನ್ನುಳಿದ ಭೂಮಿ ಪಟೇಲ್ ಕಾಳೇಗೌಡರಿಗೂ, ತಿರುಮಲಭಟ್ಟರಿಗೂ, ಸಾಹುಕಾರ ಬೆಳ್ಳೀಗೌಡರಿಗೂ ಸೇರಿದ್ದಾಗಿತ್ತು".

"ತಿರುಮಲಭಟ್ಟರು, ಇವರ ತಂದೆ ಬಿಟ್ಟಿ ಕೆಲಸದಿಂದ ಬಿಡುಗಡೆ ಮಾಡಿಸುವ ನೆಪದಲ್ಲಿ ರೈತರ ಜಮೀನನ್ನೆಲ್ಲಾ ತಮ್ಮ ಹೆಸರಿಗೆ ಮಾಡಿಕೊಂಡಿದ್ದರು."

"ಕಾಳೇಗೌಡನಿಗೆ ಅಣ್ಣ ಗಿರಿಯಪ್ಪಗೌಡ ಇದ್ದರೂ ಓದು ಬರಹ ಬರುತ್ತಿದ್ದರಿಂದ ಊರ ಪಟೇಲಿಕೆ, ಮನೆಯ ಯಜಮಾನಿಕೆ, ಇಡೀ ಹೋಬಳಿಯ ತನ್ನದಾಗಬೇಕೆಂದು ದುರಾಸೆ. ವರ್ಷದಲ್ಲಿ ಒಂದು ತಿಂಗಳು ಇವನ ಮನೆಯಲ್ಲಿ ಒಕ್ಕಲುಗಳು ಬಿಟ್ಟಿ ಕೆಲಸ ಮಾಡಬೇಕಿತ್ತು. ಜನ ಇವನನ್ನು ಕಂಡರೆ ಹೆದರುತ್ತಿದ್ದರು.

ಬೆಳ್ಳೀಗೌಡ ಆ ಪ್ರದೇಶದ ಇತರ ಗೌಡರುಗಳಿಗಿಂತ ಬುದ್ಧಿವಂತ. ತಕ್ಕಷ್ಟು ಓದುಬರಹ ಇತ್ತು. ತಮ್ಮ ಜಮೀನನ್ನೆಲ್ಲಾ ಗೇಣಿಗೆ ಕೊಟ್ಟು, ಲೇವಾದೇವಿ ಮಾಡಿಕೊಂಡು ಇದ್ದ. ಕೋರ್ಟು ವ್ಯವಹಾರದಲ್ಲಿ ಕುಶಲತೆಯುಳ್ಳವನಾದುದರಿಂದ ಬಡಬಗ್ಗರ ಸುಲಿಗೆಯನ್ನು ನಿರಾಂತಕವಾಗಿ ಮಾಡುತ್ತಾ ಆರ್ಥಿಕವಾಗಿ ಸದೃಢನಾಗಿದ್ದ".[೨]

ಈ ಮೇಲ್ಕಂಡ ಕಾದಂಬರಿಯ ಮಾಹಿತಿ ಅಂದಿನ ಕಾಲದ ಮಲೆನಾಡು ಪ್ರಾಂತ್ಯದಲ್ಲಿ ಶೇ. ೯೦ರಷ್ಟು ಜನ ಏಕೆ ಗೇಣಿದಾರರಾಗಿರುವ ಸಂದರ್ಭ ಬಂದೊದಗಿತ್ತು ಎಂಬುದನ್ನು ತಿಳಿಸುತ್ತದೆ. ಮಠದಂತಹ ಧಾರ್ಮಿಕ ಸಂಸ್ಥೆಯೂ ಕೂಡ ಊಳಿಗಮಾನ್ಯ ಪದ್ಧತಿಯ ಪ್ರಬಲವಾದ ಶಕ್ತಿಯ ರೂಪ. ಬಹುಸಂಖ್ಯಾತ ಅನಕ್ಷರಸ್ಥರ ನಡುವೆ ಅಕ್ಷರ ಕಲಿತವರ ದರ್ಪ, ವ್ಯವಹಾರದ ಕುಶಲತೆ, ನಯ ನಾಜೂಕು, ಬಹುಸಂಖ್ಯಾತರನ್ನು ಶೋಷಣೆ ಮಾಡಲಾಗುತ್ತಿತ್ತು. ಇದನ್ನೆಲ್ಲಾ ಕಾನೂನು ಜ್ಞಾನದ ಬಳಕೆಯಿಂದ ಬಹುಸಂಖ್ಯಾತರನ್ನು ಶೋಷಣೆ ಮಾಡಲಾಗುತ್ತಿತ್ತು. ಇದನ್ನೆಲ್ಲಾ

ಪಂಜರವಳ್ಳಿ ಪಂಜು ಕಾದಂಬರಿ ದಾಖಲಿಸುತ್ತದೆ. ಪಂಜರವಳ್ಳಿ ಗಿರಿಯಪ್ಪಗೌಡ ತಮ್ಮನ ದರ್ಪ ಸಹಿಸಲಾರದೆ ತಿರುಮಲಭಟ್ಟರ ಜಮೀನನ್ನು ಗೇಣಿಗೆ ಪಡೆಯುವುದರ ಮೂಲಕ ಜಮೀನ್ದಾರನೊಬ್ಬ ಕೌಟುಂಬಿಕ ಸಮಸ್ಯೆಯಿಂದ ಗೇಣಿದಾರನಾದ ಎನ್ನಬಹುದು. ಪಾಳುಬಿದ್ದ ಜಮೀನನ್ನು, ಗಂಡನನ್ನು ಕಳೆದುಕೊಂಡ ಈರಮ್ಮ, ಮಗ ಸಿದ್ದಣ್ಣನೊಡನೆ ಕಷ್ಟಪಟ್ಟು ಊರ್ಜಿತ ಸ್ಥಿತಿಗೆ ತಂದಾಗ, ಸಾಹುಕಾರನಲ್ಲಿ ಇನ್ನಷ್ಟು ದುರಾಸೆ ಹುಟ್ಟಿ ಒಳ್ಳೆಯ ಭೂಮಿಯನ್ನೇ ತಮಗೆ ಕೊಟ್ಟಿದ್ದರಿಂದ ಹೆಚ್ಚು ಗೇಣಿ ಕೊಡಬೇಕೆಂದೂ, ಇಲ್ಲದಿದ್ದರೆ ಕಾಳೇಗೌಡ ಗೇಣಿಗೆ ಮಾಡಲು ಸಿದ್ಧನಿದ್ದಾನೆಂದು ಹೆಚ್ಚಿಗೆ ಗೇಣಿಗೆ ಆಗ್ರಹಿಸುತ್ತಾನೆ. ಒಂದು ಹಾಳು ಜಮೀನನ್ನು ಒಡೆಯ ತನಗೆ ದೀರ್ಘಕಾಲ ಕೊಡಬಹುದೆಂಬ ದೂರದಾಸೆಯಿಂದ ಊರ್ಜಿತ ಸ್ಥಿತಿಗೆ ತಂದರೆ, ಆ ಜಮೀನಿನ ಮೇಲೆ ಒಡೆಯರಿಗೆ ಕಣ್ಣು ಬಿದ್ದು, ಊರ್ಜಿತ ಸ್ಥಿತಿಗೆ ತಂದ ಅವನನ್ನು ಪ್ರೋತ್ಸಾಹಿಸುವ ಬದಲು ಆತಂಕ ಸೃಷ್ಟಿಮಾಡುತ್ತಿದ್ದರು. ಕಷ್ಟಪಟ್ಟು ಗೇಣಿದಾರ ಬೆಳೆದ ಫಸಲನ್ನು ಗೇಣಿಪಡೆಯಲು ಬಂದ ಸಾಹುಕಾರರ ಕಡೆಯ ಜನರ ವರ್ತನೆ ಕೂಡ ಮೋಸ–ವಂಚನೆಯಿಂದ ಕೂಡಿರುತ್ತಿತ್ತು ಎಂಬುದನ್ನು ಇದನ್ನು ಗಮನಿಸಬಹುದು. "ಅಂದಿನ ರಿವಾಜಿನಂತೆ ಅಕ್ಷಯ ಪಾತ್ರೆಯಂತಿದ್ದ ಕೊಳಗವನ್ನು, ನೀತಿ ನಿಯಮವಿಲ್ಲದ ಗುಂಡನ್ನು, ಏರುಪೇರಿನ ತಕ್ಕಡಿಯನ್ನು ಭಟ್ಟರ ಆಳುಗಳು ತಂದಿದ್ದರು. ಈ ಸಾಧನಗಳ ಸಹಾಯದಿಂದ ನಾಲ್ಕುಮಣ ಅಡಿಕೆಯನ್ನು, ಹತ್ತು ಖಂಡುಗ ಭತ್ತವನ್ನು ತೆಗೆದುಕೊಳ್ಳುವ ನೆಪದಲ್ಲಿ ಆರುಮಣ ಅಡಿಕೆಯನ್ನೂ, ಹದಿನೆಂಟು ಖಂಡುಗ ಭತ್ತವನ್ನು ದೋಚಿಕೊಂಡು ಹೋದರು."[3]

ಜಮೀನ್ದಾರ ಈ ರೀತಿಯ ಮೋಸ ಮನಸೊ ಇಚ್ಛೆ ವರ್ತನೆ ಅಂದಿನ ಮಲೆನಾಡಿನಲ್ಲಿ ಸರ್ವೇಸಾಮಾನ್ಯವಾದ ಸಂಗತಿಯಾಗಿತ್ತು. ಆಗಿನ ಕಾಲದಲ್ಲಿ ಗೇಣಿದಾರರು ಬೆಳೆಯುತ್ತಿದ್ದ ಬಹುಭಾಗದ ಬೆಳೆಯು ಗೇಣಿರೂಪದಲ್ಲಿ ಭೂಮಾಲಿಕರಿಗೆ ಹೋಗುತ್ತಿತ್ತು. ಸಹಜವಾಗಿ ವರ್ಷದಲ್ಲಿ ಅರೆಕಾಲ ಉಳಿದದ್ದನ್ನು ಬಳಸಲು ಸಾಧ್ಯವಾಗಬಹುದಷ್ಟೆ. ಆದಕಾರಣ ಅದೇ ಒಡೆಯರಿಂದ ಹುಲಿಭತ್ತವನ್ನು ತರುತ್ತಿದ್ದರು. ಮುಂದಿನ ಬೆಳೆಯಲ್ಲಿ ಗೇಣಿ ಭತ್ತ ಮತ್ತು ಹುಲಿಭತ್ತ ಎರಡನ್ನು ಸಲ್ಲಿಸುವಾಗ ತಾನು ಬೆಳದದ್ದರಲ್ಲಿ ಮುಕ್ಕಾಲು ಪಾಲು ಕಳೆದುಕೊಂಡಿರುತ್ತಿದ್ದ. ಆತನ ಬಡತನ, ಅನಾರೋಗ್ಯ–ಮದುವೆ–ಮಾರಿಹಬ್ಬಗಳಿಂದ ಮತ್ತೆ ಮತ್ತೆ ಸಾಲಗಾರನಾಗುತ್ತಲೇ ಎಂದೂ ತಲೆಯೆತ್ತದ ಸ್ಥಿತಿ ತಲುಪುತ್ತಾನೆ. ಒಂದು ರೀತಿಯಲ್ಲಿ ಗೇಣಿದಾರನ ಪಾಡು ಕೂಲಿಕಾರ್ಮಿಕರ ಸ್ಥಿತಿಗಿಂತಲೂ ಕ್ರೂರವಾಗಿ, ಹೀನಾಯವಾಗಿರುತ್ತಿತ್ತು. ಆದ್ದರಿಂದ ಸಾಹುಕಾರನಿಗೆ ಗೇಣಿದಾರನಾಗಿಯೂ, ಹೊಟ್ಟೆಪಾಡಿಗಾಗಿ ಕೂಲಿಕಾರ್ಮಿಕನಾಗಿಯೂ ಬದುಕಬೇಕಾದ ಸ್ಥಿತಿ ಬಹುತೇಕ ಗೇಣಿದಾರರದ್ದಾಗಿತ್ತು. ಒಂದು ರೀತಿಯಲ್ಲಿ ಗೇಣಿದಾರರೇ ಸಾಹುಕಾರನ–ನಿಜವಾದ ಆಸ್ತಿಯಾಗಿದ್ದರು ಎನ್ನಬಹುದು. ಜಮೀನಿನಿಂದ ಬರುವ ಗೇಣಿ, ಅದೇ ಗೇಣಿದಾರನಿಗೆ ಸಾಲ ನೀಡಿ ಪಡೆಯುವ ಬಡ್ಡಿ ಆದಾಯ, ಜಮೀನ್ದಾರನ ಮನೆಯ ಬಿಟ್ಟಿ ಕೆಲಸವಲ್ಲದೆ. ಉಪ ಬೆಳೆಯಾದ ಬೆಳೆದ ಬಾಳೆಕೊನೆ, ತರಕಾರಿ, ಬೆಲ್ಲ ಮುಂತಾದವನ್ನು ಗೌರವ ಕಾಣಿಕೆಯಾಗಿ ಸಲ್ಲಿಸಬೇಕಿತ್ತು. ಅಷ್ಟೇ ಅಲ್ಲ ಸಾಲಕ್ಕೆ ಒತ್ತೆಯಾಗಿ ಇಟ್ಟುಕೊಳ್ಳುವ ಒಡವೆ, ಕಂಚು, ತಾಮ್ರ ಮೊದಲಾದ ವಸ್ತುಗಳು ಎಷ್ಟೋ ಬಾರಿ ಅವಧಿಯ ಮುನ್ನ ಸಾಲ ತೀರಿಸಲಾರದೆ ಅವು ಒಡೆಯರ ಪಾಲಾಗುತ್ತಿದ್ದವು. ಆದ ಕಾರಣ ಜಮೀನ್ದಾರ ಮತ್ತು ಗೇಣಿದಾರನ ನಡುವೆ ಕೇವಲ ಗೇಣಿ ವ್ಯವಹಾರವಿರುತ್ತಿರಲಿಲ್ಲ. ಅದಕ್ಕೆ ಪೂರಕವಾದ ಅನೇಕ

ಸಂಗತಿಗಳು ಸೇರಿಕೊಂಡು ಜಮೀನ್ದಾರನಿಂದ ಗೇಣಿದಾರ ನಿರಂತರ ಶೋಷಣೆಗೆ ಒಳಗಾಗಿದ್ದ ಎಂಬುದು ಮುಖ್ಯ ಸಂಗತಿಯಾಗಿದೆ.

ಮಲೆನಾಡ ಪರಿಸರದ ಭೂ ಹಿಡುವಳಿಯನ್ನು ಗಮನಿಸಿದರೆ ಭಾರತದ ಅಥವಾ ಕರ್ನಾಟಕದ ಇತರೆ ಪ್ರದೇಶಗಳಿಗೆ ಹೋಲಿಸಿದಾಗ ಇಲ್ಲಿಯ ಜಮೀನ್ದಾರರು ಬಹಳ ದೊಡ್ಡ ಜಮೀನ್ದಾರರೇನಲ್ಲ. ಅಲ್ಲಿಯ ಜೋಡಿದಾರರು, ಜಹಗೀರುದಾರರು, ದೇಸಾಯಿಗಳು, ಇನಾಂದಾರರು ಮುಂತಾಗಿ ಕರೆಯಿಸಿಕೊಳ್ಳುತ್ತಿದ್ದ ಜಮೀನ್ದಾರರು ಸಾಮಾನ್ಯವಾಗಿ ಸಾವಿರಾರು ಎಕರೆ ಜಮೀನಿನ ಭೂಮಾಲಿಕರಾಗಿದ್ದರು. ಆದರೆ ಬೆಟ್ಟ, ಗುಡ್ಡ, ಕಾಡು, ಕಣಿವೆಯಂತಹ ಮೇಲ್ಮೈ ಲಕ್ಷಣವುಳ್ಳ ಮಲೆನಾಡಿನಲ್ಲಿ ನೂರಾರು ಎಕರೆ ಜಮೀನಿಗೆ ಒಡೆಯರಾಗಿದ್ದವರು ದೊಡ್ಡ ಜಮೀನ್ದಾರ ಎಂದೆನಿಸಿಕೊಂಡಿದ್ದರು.

"ಆ ಕಾಲದ ಮನೋಭಾವವೆಂದರೆ ಶ್ರಮ ಅಥವಾ ಕಸುಬುಗಳಿಗಿಂತ ಆಸ್ತಿ-ಬಂಗಾರವೇ ಪ್ರಧಾನ...... ಜನರು ಸಾರ್ಥಕತೆ ಕಂಡುಕೊಳ್ಳುತ್ತಿದ್ದುದು ಬಂಗಾರ, ಜೀಮೀನು ಸಂಪಾದನೆಯಲ್ಲಿ. ಹೆಚ್ಚು ಜಮೀನು ಖಾತೆದಾರನಾಗಿ ಹೆಚ್ಚು ಗೇಣಿ ಪಡೆದು - ಬಂಗಾರ ಮಾಡಿಸುವುದು".[೪]

ಈ ಮಾತು ವಾಸ್ತವ. ಈ ಆಸ್ತಿ ಮತ್ತು ಬಂಗಾರದ ವ್ಯಾಮೋಹದಿಂದ ಒಬ್ಬ ಜಮೀನುದಾರಿಕೆ ಮತ್ತು ವ್ಯಾವಹಾರಿಕೆ ಎರಡನ್ನು ಹೊಂದಿ ಬಹುಮುಖಿ ಶೋಷಕನಾಗಿದ್ದ. ಆದಕಾರಣ ಗೇಣಿ ವ್ಯವಹಾರಕ್ಕೆ ಮತ್ತು ಹಣದ ವ್ಯವಹಾರಕ್ಕೆ ಸಾಮಾನ್ಯವಾಗಿ ಗೇಣಿದಾರ ಒಬ್ಬನನ್ನೇ ಅವಲಂಬಿಸಬೇಕಾದ ಅನಿವಾರ್ಯತೆಯಿಂದಲೂ ಜಮೀನ್ದಾರನ ಬಹುಮುಖಿ ಶೋಷಣೆಗೆ ಗೇಣಿದಾರ ಒಳಗಾಗಿದ್ದ.

ಭಾರತದಲ್ಲಿ ನಡೆದ ಹೋರಾಟಗಳಲ್ಲಿ ಮಲೆನಾಡು ಪ್ರಾಂತ್ಯದ ಸಾಗರ ತಾಲ್ಲೂಕಿನ ಕಾಗೋಡು ಸತ್ಯಾಗ್ರಹ ಪ್ರಮುಖವಾದುದು. ಈ ಸತ್ಯಾಗ್ರಹ ರೂವರಿಗಳಲ್ಲೊಬ್ಬರಾದ ಹೆಚ್.ಗಣಪತಿಯಪ್ಪ ಅವರು ಗೇಣಿದಾರರ ಬವಣೆಯನ್ನು ಹೀಗೆ ವಿವರಿಸುತ್ತಾರೆ.

"ಬೆಳೆಯುತ್ತಿದ್ದ ಬೆಳೆಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಫಸಲನ್ನು ಭೂಮಿಯ ಮಾಲಿಕರಾದ ಜಮೀನ್ದಾರರಿಗೆ ಕೊಡಬೇಕಾಗುತ್ತಿತ್ತು. ಮಾತ್ರವಲ್ಲದೆ ಸಂಪೂರ್ಣವಾಗಿ ಭೂ ಒಡೆಯರ ಆಜ್ಞಾಧಾರಕರಾಗಿ ಅವರು ಸಂಜ್ಞೆಗಳಿಂದಲೇ ನಡೆಯಲೇಬೇಕಾದ ಅನಿವಾರ್ಯ ವಾತಾವರಣವನ್ನು, ಗೇಣಿಗೆ ಪಡೆದದ್ದಕ್ಕಾಗಲಿ, ಗೇಣಿಧಾನ್ಯಕೊಟ್ಟಿದ್ದಕ್ಕಾಗಲೀ ಯಾವುದೇ ಕರಾರುಪತ್ರ, ರಶೀದಿ ವಗೈರೆ ಕೇಳುವಂತೆಯೇ ಇರಲಿಲ್ಲ. ಒಡೆಯರ ಎದುರು ಸರಿಸಮನಾಗಿ ನಿಲ್ಲುವುದು, ಕೂಡುವುದು, ಮಾತನಾಡುವುದು ಸಹ ಎಂತಹ ಗೇಣಿದಾರನಿಗೂ ಸಾಧ್ಯವಿಲ್ಲದ ಕೆಲಸವಾಗಿತ್ತು".

"ಭೂಮಾಲಿಕರನ್ನು ಬಿಟ್ಟು ನೇರವಾಗಿ ಸರ್ಕಾರದೊಂದಿಗೆ ಸಂಪರ್ಕ ಬೆಳೆಯಿಸುವ ಸ್ವಾತಂತ್ರ್ಯ ಯಾವ ದೀವರ ಜಾತಿಯ ವ್ಯಕ್ತಿಗೂ ಇರಲಿಲ್ಲ. ತಮ್ಮ-ತಮ್ಮೊಳಗಿನ ಜಗಳ-ತಂಟೆ-ತಕರಾರುಗಳನ್ನು ಬಗೆಹರಿಸಿಕೊಳ್ಳಲು ಈ ಒಡೆಯರೇ ಮಧ್ಯಸ್ಥರು, ನ್ಯಾಯಾಧೀಶರೂ ಆಗಿದ್ದರು. ಅವರು ನೀಡುವ ಶಿಕ್ಷೆ ದಂಡಗಳನ್ನು ಪ್ರಶ್ನಿಸುವಂತೆಯೇ ಇರಲಿಲ್ಲ".

"ಭೂಮಾಲಿಕ ಕರೆದಾಗಲೆಲ್ಲಾ ತನ್ನ ಕೆಲಸ ಕಾರ್ಯ ಮರೆತು ಸಂಬಳವಿಲ್ಲದೆ ಬಿಟ್ಟಿ ದುಡಿಮೆಗೆ

ಹೋಗಿ ಅವರು ಹೇಳಿದ ಕೆಲಸವನ್ನೆಲ್ಲಾ ಮಾಡಲೇಬೇಕಾಗಿತ್ತು. ಅಂದರೆ ಈ ದೀವರು ಭೂಮಾಲಿಕರಾಗಿದ್ದ ಮೇಲು ವರ್ಗದ ಜನರು, ತಮ್ಮ ಸೇವೆಗಾಗಿ ಸಾಕಿಗೊಂಡಿದ್ದ ಪಶು ಸಮಾನ ಗುಲಾಮರೇ ಆಗಿದ್ದರೆಂದು ಹೇಳಬಹುದಾಗಿದೆ".[೫]

ಈ ಮೇಲಿನ ಮಾತುಗಳು ಸಾಗರ ಪ್ರಾಂತ್ಯದ ಗೇಣಿದಾರರ ದುಸ್ಥಿತಿ ಮಾತ್ರವಲ್ಲ. ಇದು ಮಲೆನಾಡಿನ ಇತರ ಪ್ರಾಂತ್ಯಗಳಾದ ಹೊಸನಗರ, ತೀರ್ಥಹಳ್ಳಿಯಲ್ಲಿರುವ ಗೇಣಿದಾರರ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಯೇನೂ ಇರಲಿಲ್ಲ. ಇದಕ್ಕೆ ಪೂರಕವಾಗಿ ತೀರ್ಥಹಳ್ಳಿ ಆವರಣ ಹೊಂದಿರುವ 'ಪಂಜರವಳ್ಳಿ ಪಂಜು' ಕಾದಂಬರಿಯಲ್ಲೂ ಈ ಅಂಶಗಳೇ ದಾಖಲಾಗಿವೆ ಎಂಬುದು ಕಾಣಬಹುದು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಗೇಣಿದಾರ ಜಮೀನುದಾರನ ಯಾವ ಯಾವ ಬಲೆಯಲ್ಲಿ ಸಿಲುಕಿದ್ದ ಎಂಬುದು ಕುತೂಹಲದ ಸಂಗತಿ. ಗೇಣಿ, ಸಾಲ ಮಾತ್ರವಲ್ಲ ತಮ್ಮ ತಮ್ಮಲ್ಲಿರುವ ಅಸೂಯೆ, ಕೌಟುಂಬಿಕ ಜಗಳ, ದಾಯಾದಿ ಕಲಹ ಇತ್ಯಾದಿಗಳು ಒಡೆಯರ ಮೂಲಕವೇ ಇತ್ಯರ್ಥವಾಗಬೇಕಿತ್ತು. ಭೂಮಾಲಿಕರ ಹಿಡಿತದಲ್ಲಿಯೇ ಸರ್ಕಾರಿ ಆಡಳಿತ ವ್ಯವಸ್ಥೆ, ಪೋಲಿಸ್ ವ್ಯವಸ್ಥೆ ಇದ್ದದ್ದರಿಂದ ಒಡೆಯನನ್ನು ಬಿಟ್ಟು ಸರ್ಕಾರಿ ವ್ಯವಸ್ಥೆಯ ಮೊರೆಹೋಗುವಂತಹ ತಿಳುವಳಿಕೆಯಾಗಲಿ, ಬಲವಾಗಲಿ, ಅನುಕೂಲವಾಗಲಿ ಇಲ್ಲದ್ದರಿಂದ ನಿಸ್ಸಹಾಯಕತೆಯ ಹಿನ್ನೆಲೆಯಲ್ಲಿ ಭೂಮಾಲಿಕನನ್ನೇ ಅವಲಂಬಿಸಿರಬೇಕಾಗಿತ್ತು. ಆದಕಾರಣ ಜಮೀನ್ದಾರನಲ್ಲಿ ಇಷ್ಟೆಲ್ಲಾ ತನ್ನಿಂದ ಗೇಣದಾರನಿಗೆ ಸಹಕಾರವಿದೆ ಎಂಬ ಅಹಂಭಾವ ನೆಲಸಿದ ಪರಿಣಾಮ ಆತ ಶೋಷಕನಾಗಿದ್ದ. ಹಾಗೆ ಒಡೆಯನಿಲ್ಲದೆ ತನಗೆ ಬದುಕೇ ಇಲ್ಲವೇನೋ ಎಂಬ ಅಜ್ಞಾನದಿಂದ ಗೇಣಿದಾರ ಶೋಷಿತನಾಗಿದ್ದ. ಇದಕ್ಕೆ ಪೂರಕವಾಗಿ ಈ ಹೇಳಿಕೆಯನ್ನು ಗಮನಿಸಬಹುದು.

"ಒಕ್ಕಲುಗಳ ವಿಪರೀತ ವಿಧೇಯದ ವರ್ತನೆಯಾಗಲಿ, ಈ ಬಿಟ್ಟಿ ದುಡಿಮೆ, ಸಲಿಗೆ, ಪೆಚ್ಚು ಭತ್ತ ಸಲ್ಲಿಸುವ ಕ್ರಮಗಳಾಗಲಿ ಯಾವ ಧಣಿಯೂ ತನ್ನ ಒಕ್ಕಲುಗಳ ಮೇಲೆ ತನ್ನಷ್ಟಕ್ಕೆ ತಾನೇ ಅನಾಮತ್ತಾಗಿ ಹೇರಿದ್ದಲ್ಲ ; ಅದು ರೂಢಿಯಿಂದ ಬಂದದ್ದು. ಒಕ್ಕಲುಗಳು ಕೂಡ ಹಾಗೆ ನಡೆದುಕೊಳ್ಳುವುದೇ ನೀತಿ ಸಮ್ಮತವಾದುದೆಂದು ತಿಳಿದಿದ್ದರು. ಧಣಿಗಳಿಗೆ ಕೊಡಬೇಕಾದ ಗೇಣಿ ಕೊಡದಿರುವುದು, ಅವರ ಮನೆಯ ಬಿಟ್ಟಿ ಕೆಲಸ ಮಾಡದೇ ಇರುವುದು, ಅವರನ್ನು ಧಿಕ್ಕರಿಸಿ ನಡೆಯುವುದು ದೇವರು ಮೆಚ್ಚುವ ಕೆಲಸಗಳಲ್ಲ ಎಂದು ನಂಬಿದ್ದರು".[೬] ಆದ್ದರಿಂದ ಈ ಮಲೆನಾಡ ಪರಿಸರದಲ್ಲಿ ವೈಯಕ್ತಿಕ ಮಟ್ಟದಲ್ಲಿ ಅಥವಾ ಸಮೂಹ ಮಟ್ಟದಲ್ಲಿ ಬಹಳಕಾಲ ವಿರೋಧಿ ನೆಲೆಗಳು ಹುಟ್ಟಿಕೊಳ್ಳಲೇ ಇಲ್ಲ.

ಜಮೀನ್ದಾರಿಯ ವ್ಯವಸ್ಥೆ ಮತ್ತು ಪ್ರತಿರೋಧದ ನೆಲೆಗಳು

ಮಲೆನಾಡು ಪ್ರಾಂತ್ಯದಲ್ಲಿ ನಡೆಯುತ್ತಿದ್ದ ಭೂಮಾಲಿಕರ ಶೋಷಣೆ, ಗೇಣಿದಾರರ ಸಂಕಷ್ಟವನ್ನು ಈ ಭಾಗದ ಸೃಜನಶೀಲ ಲೇಖಕರ ಸಾಹಿತ್ಯದಲ್ಲಿ ಪ್ರತಿಫಲಿಸಿವೆ. ಡಾ.ಯು.ಆರ್.ಅನಂತಮೂರ್ತಿ ಅವರ 'ಮೌನಿ' ಎಂಬ ಸಣ್ಣಕಥೆ ಊಳಿಗಮಾನ್ಯ ಕ್ರೌರ್ಯವನ್ನು, ಗೇಣಿದಾರನ ಸಂಕಷ್ಟವನ್ನು ಚಿತ್ರಿಸುತ್ತದೆ. ಭಾವಿಕೆರೆ ಕುಪ್ಪಣ್ಣಭಟ್ಟರು ಶ್ರೀಮಠದ ನರಸಿಂಹದೇವರ ಒಕ್ಕಲು. ಅಡಿಕೆ ತೋಟದಲ್ಲಿ ಕೊಳೆರೋಗ, ಮನೆಯಲ್ಲಿ ರೋಗರುಜಿನಗಳು, ಧಾರಣೆಯ ಇಳಿತ ಇವೆಲ್ಲಾ ಕಾರಣಗಳಿಂದ ಮಠಕ್ಕೆ ಕೊಡಬೇಕಾದ ಗೇಣಿ ಬಾಕಿಯಾಗುತ್ತಾ ಬಂದು ಸಾವಿರಾರು ರೂಪಾಯಿ (ಐದು ಸಾವಿರ ಮಾತ್ರ) ಸಾಲಗಾರ ಆಗಿದ್ದರು.

ಈ ದೀನನ ಬಗ್ಗೆ ಮಠ ಕರುಣೆ ತೋರಲಿಲ್ಲ. ಸಾಲ ತೀರಿಸಿ ಇಲ್ಲವೆ ತೋಟ ಬಿಡಿ ಎಂಬ ಪೀಡನೆಗೆ ಕುಪ್ಪಣ್ಣಭಟ್ಟರು ಒಳಗಾದರು. ಹೆಂಡತಿಯ ಒಡವೆಯನ್ನು ಅಡವಿಟ್ಟು ಬಂದ ಹಣದಲ್ಲಿ ಚಿಕ್ಕಪುಟ್ಟ ಲೇವಾದೇವಿಯಿಂದ ಸಂಗ್ರಹಿಸಿಕೊಂಡಿದ್ದ ಅಡಿಕೆಯನ್ನು ಶಿವಮೊಗ್ಗದ ಅಡಿಕೆ ಮಂಡಿಗೆ ಕಳುಹಿಸಿ ಸಾಲದಿಂದ ಮುಕ್ತನಾಗಬೇಕು ಎಂಬ ಪ್ರಯತ್ನ ವಿಫಲವಾಗುತ್ತದೆ. ಪಕ್ಕದ ಅಪ್ಪಣ್ಣಭಟ್ಟನ ಪಿತೂರಿಯಿಂದ ಮಠದ ಕಡೆಯವರು ಬಂದ ಗೇಣಿ ವಸೂಲಿ ಮಾಡುವ ರೀತಿ ಅತ್ಯಂತ ಕ್ರೂರವಾದುದು, ಅಮಾನವೀಯವಾದುದು.

"ಅಡಿಕೆ ವ್ಯಾಪಾರ ಮಾಡಲಿಕ್ಕೆ ಕೈಯಲ್ಲಿ ದುಡ್ಡಿದೆ, ದೇವರ ಸಾಲ ತೀರಿಸಲಿಕ್ಕೆ ಇಲ್ಲ ಅಲ್ಲವೆ.... ಮಠದ ಅನ್ನವನ್ನು ತಿಂದುಕೊಂಡಿದ್ದು, ದೇವರ ಅನ್ನವನ್ನು ತಿನ್ನುತಿದ್ದೀನಿ, ತೋಟವನ್ನಷ್ಟು ಊರ್ಜಿತವಾಗಿಟ್ಟುಕೊಂಡಿರಬೇಕೆಂಬ ಲೆಕ್ಕವಿಲ್ಲ..... ಇಗೋ ಗುರುಗಳ ಆಜ್ಞೆಯೇ ಆಗಿದೆ ಎಂದು ಏಜೆಂಟರು ಜೇಬಿನಿಂದ ಕಾಗದ ತೆಗೆದುಕೊಂಡು ಓದಿದರು. ಗುರುಗಳು ಅದರಲ್ಲಿ ಕುಪ್ಪಣ್ಣ ಭಟ್ಟರನ್ನು ಎಬ್ಬಿಸಿ ಭಟ್ಟರಿಗೆ ತೋಟ ಗೇಣಿಗೆ ಕೊಡಬೇಕೆಂದು ವಿಧಿಸಿ ಬರೆದಿದ್ದರು".[೭]

ಬಹಳ ಕಾಲದಿಂದ ಗೇಣಿಕೊಟ್ಟುಕೊಂಡು ಬರುತ್ತಿರುವ ಮಠದ ಭಕ್ತ-ಗೇಣಿದಾರನ ನಿಜವಾದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಮಠದ ಪಾರುಪತ್ಯಗಾರನಿಗೆ ವ್ಯವಧಾನವಿಲ್ಲ ; ಮನಸ್ಸಿಲ್ಲ. ಗೇಣಿದಾರ ಮೋಸ ಮಾಡುತ್ತಾನೆ ಎಂಬ ಅನುಮಾನದ ದೃಷ್ಟಿಕೋನ ಮಾತ್ರ ಕೆಲಸ ಮಾಡುತ್ತಿರುತ್ತದೆ. ಈ ಅನುಮಾನವನ್ನು ಪುಷ್ಟಿಗೊಳಿಸುವಂತವರು ಇನ್ನೊಬ್ಬ ಗೇಣಿದಾರ ಎಂಬುದೇ ವ್ಯಂಗ್ಯ. ಯಾಕೆ ಮಲೆನಾಡ ಪರಿಸರದಲ್ಲಿ ಗೇಣಿದಾರರಲ್ಲಿ ಸಂಘಟನೆ ಯಾಕೆ ಆಗಲಿಲ್ಲವೆಂದರೆ ಪ್ರತಿಯೊಬ್ಬ ಗೇಣಿದಾರನು ಮಠಕ್ಕೆ, ಒಡೆಯನಿಗೆ ತಾನು ಅತ್ಯಂತ ನಿಷ್ಠನಾದವನು ಎಂದು ತೋರಿಸಿಕೊಳ್ಳುವ ಮನೋಭಾವ. ಜೊತೆಗೆ ಒಡೆಯನ ಅವಕೃಪೆಗೆ ಪಾತ್ರನಾಗುವ ಗೇಣಿದಾರನ ಗೇಣಿ ಜಮೀನನ್ನು ತಾನು ಪಡೆಯಬಹುದು ಎಂಬ ಸ್ವಾರ್ಥ. ಈ ಕಾರಣದಿಂದಲೇ ಒಡೆಯನಾದವನು ಗೇಣಿಕೊಡುವುದರಲ್ಲಿ ಹೆಚ್ಚು ಕಡಿಮೆಯಾದರೆ ಇನ್ನೊಬ್ಬನಿಗೆ ಭೂಮಿಯನ್ನು ನೀಡುವೆನೆಂಬ ಬೆದರಿಕೆ ಹಾಕಲು ಸಾಧ್ಯವಾಗುವುದು. ಆದಕಾರಣ ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಯಲ್ಲಿ ಅಸೂಯೆ, ಸ್ವಾರ್ಥ ಮನೋಭಾವ ಹೊಂದಿರುವ ಇತರೆ ರೈತರ ಪಾಲು ಕೂಡಿರುತ್ತದೆ ಎಂಬುದನ್ನು ಗಮನಿಸಬೇಕು. ಇಲ್ಲಿ ಸೀಬಿನಕೆರೆ ಅಪ್ಪಣ್ಣಭಟ್ಟ ಆ ರೀತಿಯವನು. ಅಪ್ಪಣ್ಣಭಟ್ಟ-ಕುಪ್ಪಣ್ಣಭಟ್ಟ ಇಬ್ಬರೂ ದಕ್ಷಿಣ ಕನ್ನಡದಿಂದ ಬರಿಗೈಲಿ ಬಂದು, ನರಸಿಂಹ ದೇವರ ಒಕ್ಕಲಾದವರು. ಅಕ್ಕಪಕ್ಕದಲ್ಲಿ ಗೇಣಿ ಜಮೀನು ಮಾಡಿಕೊಂಡಿರುವ ಇವರಲ್ಲಿ ಅನ್ಯೋನ್ಯ ಸಂಬಂಧ ಬೆಳೆಯುವ ಬದಲು ಮತ್ಸರ, ಸ್ಪರ್ಧೆಗಳು ಬೆಳೆದದ್ದು ಇಂತಹ ಶೋಷಣೆಗೆ ಕಾರಣವಾಯಿತು ಎಂಬುದನ್ನು ಗಮನಿಸಬೇಕು.

ಬಡವನಿಗೆ, ವ್ಯವಹಾರದಲ್ಲಿ ಸೋತವನಿಗೆ ತನ್ನ ಭಕ್ತ-ಗೇಣಿದಾರನಿಗೆ ಕರುಣೆ ತೋರಿಸಬೇಕಾದ ಮಠಮಾನ್ಯಗಳು ಯಾವ ಪಾಳೇಗಾರನಿಗೂ ಕಡಿಮೆ ಇಲ್ಲದ ಕ್ರೌರ್ಯವನ್ನು ನೆಡಸಿವೆ. ದೇವರ ಭೀತಿ ಹುಟ್ಟಿಸಿ ಆತನನ್ನು ಇನ್ನಷ್ಟು ಶೋಷಣೆಗೆ ಒಳಪಡಿಸುತ್ತದೆ. ಕುಪ್ಪಣ್ಣಭಟ್ಟರ ಅಡಿಕೆ ಚೀಲಗಳನ್ನು ಗಾಡಿಗೆ ತುಂಬಿಸಿದ್ದಲ್ಲದೆ, ಮನೆಯಲ್ಲಿರುವ ಬೆಲೆ ಬಾಳುವ ವಸ್ತುಗಳನ್ನು ಜೊತೆಗೆ ಒಯ್ಯುತ್ತಾರೆ.

"ನರಸಿಂಹದೇವರ ಆಸ್ತಿಗೆ ಮುಟ್ಟುಗೋಲು ಹಾಕಿ ಊರ್ಜಿತರಾದವರು ಇಲ್ಲ ಭಟ್ಟರೇ..... ಇನ್ನು ಮುಂದೆ ಈ ತೋಟವಾಗಲಿ, ಈ ಮನೆಯಾಗಲಿ ನಿಮ್ಮ ಭೋಗ್ಯದಲ್ಲಿಲ್ಲ. ಇನ್ನು ಮುಂದೆ ಅಪ್ಪಣ್ಣ ಭಟ್ಟರು ದೇವರ ಒಕ್ಕಲು"[18] ಎಂದು ದೈವದ ಭೀತಿ ಹುಟ್ಟಿಸಿ ಕೂಗಿ ಹೇಳುತ್ತಾನೆ ಮಠದ ಏಜೆಂಟ. ಇದರಿಂದ ಗೇಣಿದಾರನ ಬದುಕು, ಅದಕ್ಕೆ ಆಶ್ರಯವಾದ ನೆಲ ಎಷ್ಟು ಅನಿಶ್ಚಿತವಾಗಿತ್ತು ಎಂಬುದು ತಿಳಿಯುತ್ತದೆ. ತಾನು ಸಾಗುವಳಿ ಮಾಡುವ ಭೂಮಿ ತನ್ನ ಸಂಸಾರವನ್ನು ಪೊರೆಯುವಂತಹದು ಎಂಬ ಸಹಜ ಅಭಿಮಾನವಾಗಲಿ, ಇದು ನನ್ನ ಮುಂದಿನ ಪೀಳಿಗೆಗೂ ಸಂಬಂಧಿಸಿದ್ದು ಎಂಬ ಆಶಾಭಾವನೆಯಾಗಲಿ ತಳೆದಿರಲು ಸಾಧ್ಯವಿಲ್ಲ. ಅದು ಯಾವ ಕ್ಷಣದಲ್ಲಾದರೂ ಕೈತಪ್ಪಿ ಇನ್ನೊಬ್ಬರ ಸ್ವತ್ತಾಗಬಹುದೆಂಬ ಅನಿಶ್ಚಿತ ಸ್ಥಿತಿ. ತಾನು ಸಾಗುವಳಿ ಮಾಡುವ ಭೂಮಿ ತನ್ನಲ್ಲಿರುವುದು ಬಿಡುವುದು ಒಡೆಯನ ಇಚ್ಛೆಯನ್ನು ಅವಲಂಬಿಸಿತ್ತು. ಇಂತಹ ಅನಿಶ್ಚಿತವಾದ ವಾತಾವರಣದಲ್ಲಿ ಮಲೆನಾಡ ಗೇಣಿದಾರ ಬದುಕುತ್ತಿದ್ದುದನ್ನು 'ಮೌನಿ' ಕಥೆ ದಾಖಲಿಸುತ್ತದೆ. ತನ್ನ ದುಸ್ಥಿತಿಯ ನೆರವಿಗೆ ಯಾರೂ ಇಲ್ಲದ ಕಾರಣ ಕುಪ್ಪಣ್ಣ ಭಟ್ಟ ಮೌನಕ್ಕೆ ಶರಣಾಗುತ್ತಾನೆ. ಇದು ಬರಿ ಮೌನವಲ್ಲ ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಯ ವಿರುದ್ಧ ಅಪಾರವಾದ ನೋವು ಮತ್ತು ರೋಷ ತುಂಬಿಕೊಂಡಿರುವ ಹಠದ ಮೌನವು ಗೇಣಿದಾರನ ವೈಯಕ್ತಿಕ ನೆಲೆಯಲ್ಲಿ ವ್ಯಕ್ತವಾದ ಪ್ರತಿಭಟನೆಯನ್ನು ಸೂಚಿಸುತ್ತದೆ.

ಅನಂತಮೂರ್ತಿ ಅವರ 'ಭಾರತೀಪುರ' ಕಾದಂಬರಿ ಕೂಡ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ಸಂಘರ್ಷವನ್ನೇ ಮುಖ್ಯ ಸ್ಥಾಯಿಯಾಗಿ ಹೊಂದಿದೆ. ಇಲ್ಲಿಯ ನಾಯಕ ಜಗನ್ನಾಥ ಜಮೀನ್ದಾರಿ ವ್ಯವಸ್ಥೆಯ ಮತ್ತು ಮಂಜುನಾಥ ಸ್ವಾಮಿ ವಹಿವಾಟುಗಾರಿಕೆಯ ವಾರಸುದಾರ. ಇಂಗ್ಲೆಂಡಿನಿಂದ ಉನ್ನತ ವ್ಯಾಸಂಗ ಮುಗಿಸಿ ಭಾರತೀಪುರಕ್ಕೆ ಹಿಂದುರುಗಿ ಬಂದಾಗ ಈ ಎರಡೂ ವ್ಯವಸ್ಥೆಯ ವಿರುದ್ಧ ತಾನೇ ಬಂಡಾಯಗಾರನಾಗುತ್ತಾನೆ. ಸಾಲಗಾರರಿಂದ, ಗೇಣಿದಾರರಿಂದ ತಂದೆ ಹೊಂದಿದ್ದ ಪ್ರಾಮಸರಿ ನೋಟುಗಳನ್ನು ಹರಿದು ಹಾಕುತ್ತಾನೆ. ಆ ಮೂಲಕ ಯಜಮಾನ ಮತ್ತು ಒಕ್ಕಲುಯೆಂಬ ಅಂತರವನ್ನು ಕಡಿದು ಸಮಾನತೆ ಸಾಧಿಸಬೇಕೆಂಬ ಪ್ರಯತ್ನ ಆತನದು. ಮಂಜುನಾಥ ಸ್ವಾಮಿ ದೇವಸ್ಥಾನದ ವಹಿವಾಟು ಜವಾಬ್ದಾರಿಗೆ ರಾಜಿನಾಮೆ ಸಲಿಸಲು ಮುಂದಾಗುವುದು. ಹರಿಜನರನ್ನು ದೇವಾಲಯ ಪ್ರವೇಶ ಮಾಡಿಸಲು ಸಿದ್ಧತೆ ಮಾಡುವ ಕ್ರಿಯೆಗಳೆಲ್ಲ ಜಮೀನ್ದಾರಿ ಪದ್ಧತಿಯ ವಿರುದ್ಧ ನಡೆಯುವ ಸಂಘರ್ಷವೇ ಆಗಿದೆ.

ಮಂಜುನಾಥ ಸ್ವಾಮಿಯ ಅಪ್ಪಣೆ ಆದೇಶಗಳನ್ನು ಭಾರತೀಪುರದ ಎಲ್ಲ ಜನರೂ ಹೊತ್ತು ನಡೆಯುವಂತವರೆ, ಜನ ಮಂಜುನಾಥ ಸ್ವಾಮಿಗೆ ಭಕ್ತಿಯಿಂದ ನಡೆದುಕೊಂಡರೆ, ಇದರ ಅಧೀನದಲ್ಲಿರುವ ಉಗ್ರದೈವ ಅಣ್ಣಪ್ಪನಿಗೆ ಭಯ–ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಈ ಅಣ್ಣಪ್ಪನ ಭಯ ಇರುವುದರಿಂದಲೇ ಗೇಣಿದಾರ ಒಡೆಯ ಹೇಳಿದಂತೆ ನಡೆದುಕೊಳ್ಳುತ್ತಾರೆ. ಎಂತಹ ಸ್ಥಿತಿಯಲ್ಲೂ ಗೇಣಿಯನ್ನು ಸಲ್ಲಿಸುತ್ತಾರೆ. ಜಗನ್ನಾಥನಂತಹ ದೊಡ್ಡ ಜಮೀನ್ದಾರರಿಗಷ್ಟೇ ಅಲ್ಲ, ಸಣ್ಣ ಹಿಡುವಳಿದಾರರೂ ಕೂಡ ಗೇಣಿ ಪಡೆಯುವಲ್ಲಿ ಯಾವ ಆತಂಕವಿಲ್ಲದೆ ಬದುಕುತ್ತಿದ್ದಾರೆ. ಭಾರತೀಪುರದ ಪೇಟೆಯ ಅಂಗಡಿಯಲ್ಲಿ ಆರಾಮವಾಗಿ ಕಾಲ ಕಳೆಯುತ್ತ ಕುಳಿತವರ ಬಗ್ಗೆ ಹೀಗೊಂದು ಅಭಿಪ್ರಾಯವನ್ನು ನೋಡಬಹುದು.

"ಯಾವುದೋ ಹಳ್ಳಿಯಲ್ಲಿ ಇವರ ಗದ್ದೆಯಿದೆ, ಅದರ ಕೆಸರನ್ನು ತುಳಿದು ಯಾವುದೋ ರೈತ

ಉಳುತ್ತಾನೆ. ಭೂತರಾಯನಿಗೆ ಹೆದರಿ ಇವರಿಗೆ ಗೇಣಿಕೊಡುತ್ತಾರೆ. ಕುಂಬಳಕಾಯಿ, ಸೌತೆಕಾಯಿ, ಬಾಳೆಕೊನೆ ಕೊಡುತ್ತಾನೆ. ಹೇಗೋ ಉದರಂಭರಣ ನಡೆಯುತ್ತದೆ."[೯]

ಅಂದರೆ ದೊಡ್ಡ ಜಮೀನ್ದಾರ ತನ್ನ ಸಂಪತ್ತನ್ನು ಹೆಚ್ಚಿಸಿಕೊಳ್ಳಲು, ಗೇಣಿದಾರರನ್ನು ಶೋಷಿಸುತ್ತಿರುತ್ತಾನೆ. ಹಾಗೆ ಸಣ್ಣ ಜಮೀನ್ದಾರರೂ ಇದ್ದಾರೆ. ಇವರಿಗೆ ಅಜ್ಜನ ಕಾಲದಿಂದಲೋ, ಮುತ್ತಜ್ಜನ ಕಾಲದಿಂದಲೋ ಬಂದಿರುವ ಜಮೀನು ದೂರದ ಹಳ್ಳಿಯಲ್ಲಿರುತ್ತದೆ. ಇವರು ಪೌರೋಹಿತ್ಯಕ್ಕೆ ಹಾಗೂ ಇತರ ಕೆಲಸಗಳ ನಿಮಿತ್ತವಾಗಿ ದೇವಸ್ಥಾನಗಳಲ್ಲಿ, ಮಠಗಳಲ್ಲಿ ಬಂದು ಸೇರಿಕೊಂಡಂತವರು. ಆದಕಾರಣ ಆ ಜಮೀನು ತಮಗೆ ಉಳುಮೆ ಮಾಡಲು ಸಾಧ್ಯವಿಲ್ಲದ ಕಾರಣ ಗೇಣಿಗೆ ಕೊಟ್ಟಿದ್ದಾರೆ. ಇವರು ಗೇಣಿದಾರರನ್ನು ಶೋಷಿಸುತ್ತಿದ್ದರು ಎಂದು ಹೇಳಬರುವುದಿಲ್ಲ ; ಆ ಸಾಧ್ಯತೆ ಕಡಿಮೆ ಎನ್ನಬಹುದು. ಆದರೆ ಗೇಣಿದಾರನ ಮೇಲೆ ದೈವದ ಭಯ ಸೃಷ್ಟಿಲಾಗಿತ್ತು ಎಂಬುದು ಗಮನಿಸಬೇಕು. ಗೇಣಿದಾರನಿಂದ ಬರುವ ಗೇಣಿ, ಬಿಟ್ಟಿಯಾಗಿ ಅವನಿಗೆ ಪೂರೈಕೆಯಾಗುವ ತರಕಾರಿ ಬಾಳೆಕೊನೆಗಳಿಂದ ಹೇಗೋ ಜೀವನೋಪಾಯ ಮಾಡುವಂತವರು. ಈ ರೀತಿಯ ಸುಖಿಗಳೇ ಭೂಸುಧಾರಣೆ ಕಾನೂನು ಬಂದಾಗ ನಿರ್ಗತಿಕರಾದವರು.

ಭಾರತೀಪುರ ಕಾದಂಬರಿಯಲ್ಲಿ ಬರುವ ರಾಮಕೃಷ್ಣಯ್ಯ ಬಡವ, ಬಡಕಲು ಮನುಷ್ಯ ಎಂಟು ಮಕ್ಕಳ ತಂದೆ. ದೇವಸ್ಥಾನದವರು ಗೇಣಿಕೊಡಲಿಲ್ಲವೆಂದು ತೋಟಬಿಡಿಸಿದ್ದ. ಮನೆ ಜಪ್ತಿ ಮಾಡಿಸಿದ್ದ ಪ್ರಸ್ತಾಪ ಬರುತ್ತದೆ. ಜಗನ್ನಾಥನಲ್ಲಿ ಗೇಣಿ ಜಮೀನಿಗಾಗಿ ಬೇಡುತ್ತಾನೆ. ದೇವಸ್ಥಾನದ ವಿರುದ್ಧ ಕೋರ್ಟಿಗೆ ಹೋಗುವಂತೆಯೂ, ಅದಕ್ಕೆ ಸಹಾಯ ಮಾಡುವುದಾಗಿಯೂ ಶೋಷಿತನಾದವನಲ್ಲಿ ಒಂದು ರೋಷಹುಟ್ಟಬೇಕೆಂಬ ಹಿನ್ನಲೆಯಲ್ಲಿ ಹೇಳುತ್ತಾನೆ. ಆದರೆ ದೇವಸ್ಥಾನದಲ್ಲಿ ನಿತ್ಯ ಸಿಗುವ ಅನ್ನವೂ ತಪ್ಪೀ ಹೋದಿತೆಂದು ರಾಮಕೃಷ್ಣಯ್ಯ ನೀಡುವ ಆತಂಕದ ಪ್ರತಿಕ್ರಿಯೆಗೆ ಜಗನ್ನಾಥನೇ ಕಂಗಾಲಾಗುತ್ತಾನೆ. ಇದು ಗೇಣಿದಾರನು ಹೋರಾಡಲಾಗದ ಅಸಹಾಯಕತೆಯನ್ನು ಅಭಿವ್ಯಕ್ತಿಸುತ್ತದೆ.

ಅನಂತಮೂರ್ತಿ ಅವರ 'ಅವಸ್ಥೆ' ಕಾದಂಬರಿಯಲ್ಲಿ ಬರುವ ಕೃಷ್ಣಪ್ಪ ಅನ್ಯಾಯ, ಅಸಮಾನತೆ ಶೋಷಣೆಯ ವಿರುದ್ಧ ಸೈದ್ಧಾಂತಿಕ ಹೋರಾಟ ಮಾಡುವ ಸಮಾಜವಾದಿ. (ಶಾಂತವೇರಿ ಗೋಪಾಲಗೌಡರ ಪ್ರೇರಣೆ, ಪ್ರಭಾವ ಈ ಪಾತ್ರದ ಮೇಲಿದೆ) ಆತ ಈ ಮಲೆನಾಡ ಪರಿಸರದಲ್ಲಿ ಜಮೀನ್ದಾರರ ಶೋಷಣೆಯ ವಿರುದ್ಧ ಗೇಣಿದಾರರಲ್ಲಿ ಹೋರಾಟದ ಕೆಚ್ಚನ್ನು ಮೂಡಿಸಲು, ಗೇಣಿದಾರರನ್ನು ಸಂಘಟಿಸಿ ಹೋರಾಟಕ್ಕೆ ಅಣಿಗೊಳಿಸಲು ನಿರಂತರ ಹೋರಾಡಿದವನು. ಕೃಷ್ಣಪ್ಪ ತನ್ನ ಸುತ್ತಲ ರೈತರಿಗೆ "ಯಾಕ್ರೋ ಈ ಕಲ್ಲುಟಕನ ಪೂಜೆ ಮಾಡ್ಕೊಂಡು ಮಂಕಾಗಿ ಕೂತಿದ್ದೀರಿ. ಅದೊಂದು ಕಲ್ಲು ಅಲ್ವ? ಎತ್ತಿ ಬಿಸಾಕಿ. ನಿಮ್ಮನ್ನ ಕಾಡೋ ದೆವ್ವ ಮಠದ ಏಜೆಂಟ್ ನರಸಿಂಹಭಟ್ಟ ನೀವು ಗೆಯ್ದಿದ್ದನ್ನೆಲ್ಲಾ ಬಂದು ತಗೊಂಡು ಹೋಗ್ತಾನೆ".[೧೦] ನರಸಿಂಹದೇವರ ಏಜೆಂಟಾದ ನರಸಿಂಹಭಟ್ಟನ ಧೂರ್ತನಡವಳಿಕೆ ಕೃಷ್ಣಪ್ಪನ ಮಾತಿನ ವಿವರಣೆಯಲ್ಲಿ ವ್ಯಕ್ತವಾಗುತ್ತದೆ.

"ವಸೂಲಿಯ ಕಾಲ ಬಂತೆಂದರೆ ನರಸಿಂಹಭಟ್ಟ ಅವನ ಕಡೆ ಅಮೀನ, ಅವನ ಶಾನುಭೋಗ ಹಳ್ಳಿಯ ರೈತರಿಗೆ ಸಿಂಹಸ್ವಪ್ನವಾಗಿ ಬಿಡುವರು. ಸಂದಾಯವಾಗಬೇಕಿದ್ದ ಗೇಣಿಯನ್ನು ಕೊಡಲಿಲ್ಲವೆಂದು

ಬೀರೇಗೌಡ ಎಂಬ ರೈತನ ಮನೆಗೆ ನರಸಿಂಹಭಟ್ಟ ತನ್ನ ಜವಾನರ ಜೊತೆ ನುಗ್ಗಿದ್ದ. ಅಲ್ಲಿ ಬೀರೇಗೌಡನ ಮಗುವಿಗೆ ಜ್ವರ ಬಂದಿತ್ತು. ಅವನ ಹೆಂಡತಿ ಮಗುವಿಗೆಂದು ಕಂಚಿನ ಪಾತ್ರೆಯಲ್ಲಿ ಹಾಲನ್ನು ಕಾಯಿಸುತ್ತಿದ್ದಳು. ಒಳಗೆಲ್ಲೋ ಅಡಿಕೆಯನ್ನು ಬೀರೇಗೌಡ ಬಚ್ಚಿಟ್ಟಿದ್ದಾನೆ ಎಂಬ ಗುಮಾನಿಯಿಂದ ಒಳಗೆ ನುಗ್ಗಿದ ಭಟ್ಟನಿಗೆ ಬರಿದಾದ ಮನೆಕಂಡು ಕಡುಕೋಪ ಬಂದು........ ಒಳಗಿದ್ದುದನ್ನೆಲ್ಲ ಅಂಗಳಕ್ಕೆ ಎಸೆಯಲು ಹೇಳಿ, ಗೌಡನ ಹೆಂಡತಿ ಕಾಲು ಹಿಡಿದುಕೊಂಡರೂ ಕರಗದೆ, ಒಲೆಯ ಮೇಲಿದ್ದ ಹಾಲನ್ನೂ ಎತ್ತಿಸಿ ಅಂಗಳದಲ್ಲಿ ಚೆಲ್ಲಿಸಿದ್ದ. ಈ ಘಟನೆ ಹಳ್ಳಿ ಜನರನ್ನು ಅವಕ್ಕಾಗಿಸಿತ್ತು".[೧೧]

ಮಲೆನಾಡ ಪರಿಸರದಲ್ಲಿ ಗೇಣಿದಾರರ ಮೇಲೆ, ಸಾಲಗಾರರ ಮೇಲೆ ನಡೆಯುತ್ತಿದ್ದ ಅಮಾನವೀಯವಾದ ದೌರ್ಜನ್ಯವಿದು. ಜಮೀನ್ದಾರ ಅಥವಾ ಅವನ ಪರವಾಗಿ ಬರುವ ಜನ ಜನಸಾಮಾನ್ಯರ ಪಾಲಿಗೆ ಸಾಕ್ಷಾತ್ ಯಮಧೂತರಂತಿದ್ದರು. ಇಂತಹ ಕ್ರೌರ್ಯದ ವಿರುದ್ಧ ಕೃಷ್ಣಪ್ಪನಂತವರು ಶೋಷಿತರನ್ನು ಎಚ್ಚರಿಸಿ, ಸಂಘಟನಾತ್ಮಕ ಹೋರಾಟಕ್ಕೆ ಅಣಿಗೊಳಿಸುತ್ತಿದ್ದ. ಬೀರೇಗೌಡನ ಮಗುವನ್ನು ಹೂಳಲು ನೆರೆದಿದ್ದ ರೈತ ಸಮುದಾಯವನ್ನು ಉದ್ದೇಶಿಸಿ –

"ಮಠದ ಭಟ್ಟ ಪ್ರತಿವರ್ಷ ಹೆಚ್ಚು ಹೆಚ್ಚು ಗೇಣಿಯನ್ನು ಪಡೆಯುತ್ತಿದ್ದಾನೆ. ಅವನು ಗೇಣಿ ಅಳೆಯಲು ತರುತ್ತಿರುವ ಕೊಳಗ ವರ್ಷೇ ವರ್ಷೇ ದೊಡ್ಡದಾಗುತ್ತ ಹೋಗಿದೆ. ಹಿಂದಿನ ಕೊಳಗದಲ್ಲಿ ಮಾತ್ರ ನೀವು ಗೇಣಿ ಅಳೆಯುತ್ತೀರೆಂದು ಹಠಮಾಡಿ. ಅವನು ಹಿಂಸೆ ಮಾಡಲು ಬರುತ್ತಾನೆ. ಮೊದಲೇ ನಿಮ್ಮ ಮನೆ ಹೆಂಗಸರಿಗೆ ಒಂದು ಪಾತ್ರೆಯಲ್ಲಷ್ಟು ಸಗಣಿ ನೀರನ್ನು ಬೆರಸಿ ಅದರಲ್ಲಿ ಪೊರಕೆಯನ್ನು ಅದ್ದಿಡಲು ಹೇಳಿ ಭಟ್ಟ ಒಳನುಗ್ಗಿದರೆ ಪೊರಕೆಯಲ್ಲಿ ಅವನಿಗೆ ಹೊಡೆಯಿರಿ. ಬ್ರಾಹ್ಮಣ ಇದರಿಂದ ಕಂಗಾಲಾಗುತ್ತಾನೆ".[೧೨]

ಎಂಬ ಮಾತಲ್ಲಿ ಶೋಷಿತ ಜಾಗೃತನಾಗದೆ, ಉಗ್ರವಾದ ಪ್ರತಿಭಟನೆ ವ್ಯಕ್ತವಾಗದೆ ಶೋಷಣೆ ನಿಲ್ಲದು ಎಂಬುದು ವ್ಯಕ್ತವಾಗುತ್ತದೆ. ಕೃಷ್ಣಪ್ಪನ ಪ್ರಭಾವ ಇನ್ನೊಬ್ಬ ಬಡ ರೈತನ ಮನೆಯಲ್ಲಿ ಗೇಣಿ ವಸೂಲಿಗೆ ಹೋದ ಸಂದರ್ಭದಲ್ಲಿ ಸಗಣಿ ನೀರಿಲ್ಲದಿದ್ದ ಪೊರಕೆಯ ಪ್ರಕ್ಷಾಳನ ನಡೆದು ತಾಲ್ಲೂಕಿನಲ್ಲೆಲ್ಲಾ ಸುದ್ದಿಯಾಯಿತೆಂದು, ಈ ಘಟನೆಯಿಂದ ಅನೇಕ ಬೆಳವಣಿಗೆಗಳಾಯಿತೆಂದೂ ಕಾದಂಬರಿ ಹೇಳುತ್ತದೆ. ಅಂದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ, ಹಾಗೆಯೇ ಈ ಮಲೆನಾಡ ಪರಿಸರದಲ್ಲಿ ಜಮೀನ್ದಾರಿ ಕ್ರೌರ್ಯದ ವಿರುದ್ಧ, ಆ ಮೂಲಕ ಈ ವ್ಯವಸ್ಥೆಯ ವಿರುದ್ಧ ಹೋರಾಟದ ಮನೋಭಾವ ಮೂಡುತ್ತಿರುವುದು ಗಮನಿಸಬೇಕಾದ ಸಂಗತಿ. ಆದರೆ ಪ್ರತಿಹಿಂಸೆ ಬಗ್ಗೆ ಕೃಷ್ಣಪ್ಪನಿಗೆ ಒಲವಿಲ್ಲ. ಆದರೆ ಅದು ಅನಿವಾರ್ಯ ಅನ್ನೋದನ್ನು ಕೃಷ್ಣಪ್ಪನ ಈ ಮಾತುಗಳು ಹೇಳುತ್ತವೆ.

"ದೂರದಿಂದ ನೋಡಿದಾಗ ಹಿಂಸೆಯಷ್ಟೇ ಪ್ರತಿಹಿಂಸೇನೂ ಕೊಳಕಾಗಿ ಕಾಣುತ್ತೆ..... ಆದರೆ ಪೊರಕೇಲಿ ಹೊಡೆಯಕ್ಕೂ ತಯಾರಾದಾಗ ಅವರಲ್ಲೆಷ್ಟು ಸ್ವಾಭಿಮಾನ ಬೆಳೆದಿರುತ್ತದೆ.... ಅವರೆಲ್ಲ ಹುಳುಗಳಂತೆ ಸಹಿಸ್ತ ಇದ್ದಿದ್ರಿಂದ್ಲೇನೇ ಮಠನೂ ಕೊಳೀತ ಬಂತು, ನರಸಿಂಹ ಭಟ್ಟನೂ ಸಣ್ಣ ಹುಳಾನ ತಿನ್ನೋ ದೊಡ್ಡ ಹುಳ ಆಗೋದು ಸಾಧ್ಯ ಆಯ್ತು"[೧೩] ಅಂದರೆ ಜಮೀನ್ದಾರನ ಹಿಂಸೆಗೆ, ಅಮಾನವೀಯತೆಗೆ ಗೇಣಿದಾರನಂತಹ ಶೋಷಿತನ ಸಹನೆಯೂ ಕಾರಣ. ಅನ್ಯಾಯದ ವಿರುದ್ಧ ಸದಾ ಪ್ರತಿರೋಧವಿದ್ದಾಗಲೇ

ಆರೋಗ್ಯವಂತ ಸಮಾಜ ಇರಲು ಸಾಧ್ಯ ಎಂಬ ದನಿ ಇದೆ. ಮಲೆನಾಡಿನ ಪ್ರಾಂತ್ಯದಲ್ಲಿ ಜಮೀನ್ದಾರರ ವಿರುದ್ಧ ವೈಯಕ್ತಿಕ ಮಟ್ಟದಲ್ಲಿ, ಚಿಕ್ಕಮಟ್ಟ ಸಮೂಹ ಮಟ್ಟದಲ್ಲಿ ವಿರೋಧಗಳು ವ್ಯಕ್ತವಾಗುತ್ತಾ ಬಂದು ಅದು ದೊಡ್ಡ ಹೋರಾಟವಾಗಿ ರೂಪತಳೆದದ್ದೂ ಇದೆ. ಅದಕ್ಕೆ ಸಾಗರ ಪ್ರಾಂತ್ಯದ ಕಾಗೋಡು ಸತ್ಯಾಗ್ರಹವೇ ಸಾಕ್ಷಿ.

'ಅವಸ್ಥೆ' ಕಾದಂಬರಿಯಲ್ಲಿ ನರಸಿಂಹದೇವರ ಏಜೆಂಟಾದ ನರಸಿಂಹಭಟ್ಟ ತನ್ನ ಗೇಣಿದಾರರನ್ನು ಶೋಷಿಸುತ್ತಿರುವಾಗ ಕೃಷ್ಣಪ್ಪನಂತಹ ಹೋರಾಟಗಾರ ಬೋಧನೆ, ಪ್ರೋತ್ಸಾಹಗಳಿಂದ ಅಲ್ಲಲ್ಲಿ ವಿರೋಧಗಳು ವ್ಯಕ್ತವಾಗತೊಡಗಿದವು. ಇದನ್ನು ಮಟ್ಟ ಹಾಕಲು "ಪೋಲಿಸ್ ಸಹಾಯ ಪಡೆದು ಭಟ್ಟ ಒಕ್ಕಲೆಬ್ಬಿಸಲು ಶುರುಮಾಡಿದ. ರೈತರು ಸಂಘಟಿತರಾಗಿ ತಮ್ಮ ಹೊಲದಲ್ಲಿ ಉಳಲು ಹೋದರು. ಅವರನ್ನು ಕಾನೂನಿನ ಪ್ರಕಾರ ಬಂಧಿಸಲಾಯಿತು. ಈ ಸುದ್ದಿ ಹರಡಿ ದೇಶದ ಅನೇಕ ಕಡೆಗಳಿಂದ ಸಮಾಜವಾದಿಗಳು ಬಂದು ಕೃಷ್ಣಪ್ಪನ ಹುಲಿಯೂರಲ್ಲಿ ದಸ್ತಗಿರಿಯಾಗತೊಡಗಿದರು. ಹುಲಿಯೂರು ಇಂಡಿಯಾದಲ್ಲೆಲ್ಲ ಈ ಘಟನೆಯಿಂದ ಕರ್ನಾಟಕದ ತೆಲಂಗಾಣವೆಂದು ಪ್ರಸಿದ್ಧವಾಯಿತು.

ರೈತರು ತಮ್ಮ ಹೋರಾಟದಲ್ಲಿ ಸಂಪೂರ್ಣ ಗೆಲ್ಲದಿದ್ದರೂ ಮಠ ಸ್ವಲ್ಪ ತಣ್ಣಗಾಯಿತು. ಕೊಳಗದ ಗಾತ್ರ ಹಿಗ್ಗುವುದು ನಿಂತು ಐದು ವರ್ಷಗಳ ಹಿಂದಿನ ತನ್ನ ಗಾತ್ರಕ್ಕೆ ಮರಳಿತು. ಈ ಘಟನೆ ಮೂಲಕ ರೈತರೆಲ್ಲರೂ ಸಂಘಟಿತರಾದರು.[೨೪]

ಕಾದಂಬರಿಯಲ್ಲಿ ಬರುವ ಈ ಘಟನೆಯ ವಿವರ ಮಲೆನಾಡು ಪ್ರಾಂತ್ಯ ಸಾಗರ ತಾಲ್ಲೂಕಿನ ಕಾಗೋಡು ಎಂಬ ಗ್ರಾಮದಲ್ಲಿ ೧೯೫೧ರಲ್ಲಿ ನಡೆದ ಹೋರಾಟವನ್ನು ನೆನಪಿಸುತ್ತದೆ ಅಥವಾ ತನ್ನ ಕಥಾಹಂದರದಲ್ಲಿ ಕಾಗೋಡು ಸತ್ಯಾಗ್ರಹವನ್ನು ದಾಖಲಿಸುತ್ತದೆ.

ಭೂಮಿ ಒಡೆತನ ಹೊಂದಿದ ಭೂಮಾಲಿಕರು ಆರ್ಥಿಕವಾಗಿ ಬಲಿಷ್ಠರೂ, ರಾಜಕೀಯ ಪ್ರಭಾವವುಳ್ಳವರೂ, ಸಾಮಾಜಿಕವಾಗಿ ಮೇಲು ಹಂತದವರೂ ಆಗಿರುವುದರಿಂದ ಬಹುಸಂಖ್ಯಾತ ಗೇಣಿದಾರರು ಇವರ ಶೋಷಣೆಯ ಚಕ್ರಕ್ಕೆ ಸಿಲುಕಿ ನಲುಗಿದರು. ಇಂತಹ ಅಮಾನವೀಯತೆಯಿಂದ ಸೃಷ್ಟಿಯಾದ ರೂಢಿಬದ್ಧವಾದ ವ್ಯವಸ್ಥೆಯ ಸಮಗ್ರ ಬದಲಾವಣೆ ತನ್ನಿಂದ ತಾನೇ ಆಗುವಂತಹದಲ್ಲ. ಒತ್ತಾಯ, ಹೋರಾಟಗಳಿಲ್ಲದೆ ಯಾವುದೇ ವರ್ಗ ನೈತಿಕತೆಗೆ ಓಗೊಡುವಂತಹದಲ್ಲ. ತನಗಿರುವ ಅಧಿಕಾರ, ಹಿಡಿತವನ್ನು ಸಡಿಲಿಸಲಾಗಲಿ, ಹಿತಾಸಕ್ತಿಯನ್ನು ಕಳೆದುಕೊಳ್ಳಲಾಗಲಿ ಸಿದ್ಧವಿರುವುದಿಲ್ಲ. ಹೀಗಿದ್ದೂ ಹೊರಗಿನ ಪ್ರಭಾವದಿಂದಲೋ, ಒಳಗಿನ ಒತ್ತಡದಿಂದಲೊ ಎಚ್ಚೆತ್ತ ಶೋಷಿತ ವರ್ಗದ ಪ್ರಜ್ಞಾವಂತ ಶಕ್ತಿಗಳು ಮಾನವೀಯ ಮೌಲ್ಯಗಳಿಗಾಗಿ ತುಡಿಯುವ, ಸಾಮಾಜಿಕ ನ್ಯಾಯಪರವಿರುವ ಚಿಂತಕರ, ಸಂಘಟನಾ ಶಕ್ತಿಯುಳ್ಳ ನಾಯಕರ ನೇತೃತ್ವದಲ್ಲಿ ಹಲವು ಚಳುವಳಿಗಳನ್ನು ಹುಟ್ಟುಹಾಕಿತು. ಈ ರೀತಿಯ ಚಳುವಳಿಗಳು ಕರ್ನಾಟಕದ ಪಶ್ಚಿಮಘಟ್ಟಗಳಿಂದ ಕೂಡಿದ ಮಲೆನಾಡು ಪ್ರಾಂತ್ಯದ ಸಾಗರ ತಾಲ್ಲೂಕಿನ ಕಾಗೋಡು ಎಂಬ ಗ್ರಾಮದಲ್ಲಿ ಪ್ರತಿಧ್ವನಿಸಿತು.

ಕಾಗೋಡು ಸತ್ಯಾಗ್ರಹ

ಸ್ವಾತಂತ್ರ್ಯನಂತರ ೧೯೫೧ರಲ್ಲಿ ನಡೆದ ಕಾಗೋಡು ಗೇಣಿ ರೈತನ ಚಳುವಳಿ ಗೇಣಿ ರೈತರ

ಸ್ವಾಭಿಮಾನದ ಪ್ರತೀಕವಾದ ಚಳುವಳಿಯಾಗಿಯೇ ಪ್ರತಿಫಲಿಸಿತು. ಆದರೆ ಇದಕ್ಕೂ ಮುನ್ನ, ಈ ದೇಶದಲ್ಲಿ ನಡೆದ ೧೮೫೫ರ ಸಂತಾಲರ ಚಳುವಳಿ ೧೮೭೫ರ ದರ್ಖ್ ರೈತ ಚಳುವಳಿ, ೧೮೭೦ರಿಂದ ೧೮೮೫ರವರೆಗೆ ಬಂಗಾಳದ ಜಮೀನ್ದಾರರ ವಿರುದ್ಧ ನಡೆದ ಗೇಣಿರೈತ ಚಳುವಳಿ, ೧೮೩೫-೩೭ರ ಅವಧಿಯಲ್ಲಿ ನಡೆದ ಕೆಳಕೊಡಗು ರೈತ ಬಂಡಾಯ, ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರ ಆಂದೋಲನಗಳು ಕರ್ನಾಟಕದ ಗೇಣಿರೈತ ಚಳುವಳಿಯ ಮೇಲೆ ಪ್ರಭಾವ ಬೀರುವಲ್ಲಿ ವಿಫಲವಾದವೆಂದೇ ಹೇಳಬಹುದು. ಹಾಗೆ ೧೯೫೧ರಲ್ಲಿ ನಡೆದ ಕಾಗೋಡು ಚಳುವಳಿ ಕೂಡ ಆ ಸಂದರ್ಭದಲ್ಲಿ ವಿಫಲವಾದರೂ ಕೂಡ ಸುಧಾರಿತಗೇಣಿ ಶಾಸನಗಳಿಗೆ, ನಂತರ ಭೂಸುಧಾರಣೆಯಂತಹ ಮಹತ್ವದ ಕಾನೂನು ಜಾರಿಗೆ ತರುವ ರಾಜಕೀಯ ಇಚ್ಛಾಸಕ್ತಿ ರೂಪಗೊಳ್ಳಲು ನಾಂದಿ ಹಾಡಿತು ಎಂದರೆ ತಪ್ಪಲ್ಲ.

ಆಗಿನ ಮೈಸೂರು ರಾಜ್ಯದ ಮಲೆನಾಡು ಪ್ರದೇಶದಲ್ಲಿ ಶೇ.೯೦ರಷ್ಟು ವ್ಯವಸಾಯಗಾರರು ಗೇಣಿದಾರರು ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ಕೆಲವು ನಿಬಂಧನೆಗಳಿದ್ದರೂ ಅವು ಗೇಣಿದಾರರಿಗೆ ಸಹಾಯಕವಾಗಲಿಲ್ಲ. ೧೯೪೫ರಲ್ಲಿ ಮಲೆನಾಡು ಪ್ರದೇಶಗಳಾದ ತೀರ್ಥಹಳ್ಳಿ, ಸಾಗರ, ಹೊಸನಗರ ತಾಲ್ಲೂಕುಗಳಿಗೆ ಮಾತ್ರ ಸೀಮಿತಗೊಂಡಂತೆ 'ಮಲೆನಾಡು ಗೇಣಿದಾರರ ಸಂಘ'[೧೫] ಸ್ಥಾಪನೆಯಾಯಿತು. ಶ್ರೀ ಕಡಿದಾಳ್ ಮಂಜಪ್ಪನವರು ಅದರ ಅಧ್ಯಕ್ಷರು. ೧೯೪೮ರಲ್ಲಿ ಸಾಗರದಲ್ಲಿ ಮಲೆನಾಡು ಗೇಣಿದಾರರ ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಭೂಮಾಲಿಕರು ಗೇಣಿದಾರರನ್ನು ಭೂಮಿಯಿಂದ ಉಚ್ಚಾಟನೆಮಾಡಬಾರದು. ಜಮೀನಿನ ಒಟ್ಟು ಉತ್ಪಾದನೆಯ ಮೂರನೇ ಒಂದು ಭಾಗಕ್ಕಿಂತ ಹೆಚ್ಚಿನ ಪ್ರಮಾಣದ ಗೇಣಿ ನೀಡಿಕೆ ಇರಬಾರದು. ಗೇಣಿ ಕೊಟ್ಟಿದ್ದಕ್ಕೆ ರಶೀದಿ ನೀಡಬೇಕು ಮುಂತಾಗಿ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಆದರೆ ಈ ನಿರ್ಣಯಗಳು ಮಲೆನಾಡ ಭೂಮಾಲಿಕರ ಮೇಲಾಗಲಿ, ಗೇಣಿದಾರರ ಮೇಲಾಗಲಿ, ನಿರ್ಣಾಯಕವಾದ ಪ್ರಭಾವ ಬೀರಲಿಲ್ಲ. ಆದಾಗ್ಯೂ ಸಾಗರ ತಾಲ್ಲೂಕು ರೈತ ಸಂಘ ಗೇಣಿದಾರರಲ್ಲಿ ಜಾಗೃತಿ ಮೂಡಿಸುವಂತಹ ಸಮಾರಂಭಗಳನ್ನು ನಡೆಸುತ್ತಾ ಬಂದಿತು. ಇದೆಲ್ಲದರ ಪರಿಣಾಮವಾಗಿ ಕಾಗೋಡು ಒಡೆಯರ ಮತ್ತು ಗೇಣಿದಾರರ ನಡುವೆ ವಿವಾದ ಪ್ರಾರಂಭವಾದುದು ಕೇವಲ ಗೇಣಿ ಅಳೆದುಕೊಡುವ ಮಾಪನದ ಬಗ್ಗೆ ಎದ್ದ ತಕರಾರಿನಿಂದ. ಮೂರು ಸೇರು ಹಿಡಿಯುವ ಕೊಳಗ ಬಳಕೆಯಲ್ಲಿರುವ ನಿಜವಾದ ಅಳತೆ ಮಾಪನ. ಆದರೆ ಕಾಗೋಡು ಒಡೆಯರು ಮೂರುವರೆ ಸೇರು ಹಿಡಿಯುವ ಅಳತೆ ಪ್ರಮಾಣದ ಕೊಳಗದಲ್ಲಿಯೇ ಗೇಣಿಯನ್ನು ನೀಡಬೇಕೆಂದು ಆಗ್ರಹಿಸಿದರು. ಗೇಣಿದಾರರು ಮೂರು ಸೇರಿನ ಕೊಳಗದಲ್ಲಿಯೇ ನೀಡುವುದಾಗಿ ಹಠ ಹಿಡಿದರು. ಇಬ್ಬರೂ ಪಟ್ಟು ಸಡಿಲಿಸದಾದರು. ಆದಕಾರಣ ಮರುವರ್ಷದ ಒಕ್ಕಲುತನಕ್ಕೆ ಇಳಿಯುವುದನ್ನು ಒಡೆಯರು ತಡೆದರು. ತಾವು ಉಳುಮೆ ಮಾಡಿಯೇ ಸಿದ್ಧವೆಂದು ನೇಗಿಲು ನೊಗಗಳಿಂದ ರೈತರು ಜಮೀನಿಗೆ ಇಳಿದರು. ಭೂಮಾಲಿಕರು ತಮ್ಮ ಕೂಲಿಯಾಳುಗಳೊಂದಿಗೆ ಸೇರಿ ನೇಗಿಲು, ನೊಗಗಳನ್ನು ಕತ್ತರಿಸಿದರು. ಮರುದಿನ ಅಂದರೆ '೧೭-೪-೧೯೫೧ರಂದು ಗೇಣಿ ರೈತರೆಲ್ಲಾ ಸೇರಿ ತುಂಡಾದ, ನೇಗಿಲು ನೋಗ ಹೊತ್ತು ಮೆರವಣಿಗೆ ನಡೆಸಿ'[೧೬] ಪ್ರತಿಭಟನೆಯನ್ನು ಮಾಡುವುದರ ಮೂಲಕ ಸತ್ಯಾಗ್ರಹದ ಕಿಡಿ ಹೊತ್ತಿಕೊಂಡಿತು. ಸರದಿ ಸತ್ಯಾಗ್ರಹ, ಜೈಲು ಸೇರುವ ಚಳುವಳಿ ನಡೆಯಿತು. ಭೂಮಾಲಿಕರಿಂದ ಹಲ್ಲೆ, ದೌರ್ಜನ್ಯಗಳು, ಪೋಲಿಸರಿಂದ ಲಾಠಿ ಏಟುಗಳು ಒಂದು ರೀತಿಯಲ್ಲಿ ಕಾಗೋಡು ರಣರಂಗವಾಗಿತ್ತು

ಎಂದು ಹೇಳಲಾಗಿದೆ. ಕಡಿದಾಳ್ ಮಂಜಪ್ಪ ಅವರ ಪ್ರಯತ್ನದಿಂದ ಗೇಣಿದಾರರ ಮತ್ತು ಭೂಮಾಲಿಕರ ನಡುವೆ ಸಂಧಾನ ಏರ್ಪಡಿಸಲು ಮಾಡಿದ ಪ್ರಯತ್ನ ವಿಫಲವಾಗುತ್ತದೆ. ಭೂಮಾಲಿಕರ ಬಲ ಹೆಚ್ಚಾದಂತೆ ಗೇಣಿದಾರರ ಹೋರಾಟ ವಿಫಲತೆಯ ಕಡೆಗೆ ಮುಖ ಮಾಡುತ್ತಿದ್ದಾಗ ಸಮಾಜವಾದಿಪಕ್ಷದ ನಾಯಕರಾದ ಶಾಂತವೇರಿ ಗೋಪಾಲಗೌಡರ ಪ್ರವೇಶದೊಂದಿಗೆ ಚಳುವಳಿಗೆ ಬಲ ಬಂದು 'ಉಳುವವನೆ ಹೊಲದೊಡೆಯ' ಎಂಬ ಸೈದ್ಧಾಂತಿಕವಾದ ಹೋರಾಟದ ಮುಖ ಪಡೆದು ಒಂದು ರೀತಿಯಲ್ಲಿ ರಾಜಕೀಯ ಹೋರಾಟದ ಆಯಾಮವನ್ನು ಪಡೆಯಿತು. ಡಾ.ರಾಮಮನೋಹರ ಲೋಹಿಯ, ಪಂಡಿತ್ ರಮಾನಂದಮಿಶ್ರ, ಜಯಪ್ರಕಾಶ ನಾರಾಯಣರಂತಹ ರಾಷ್ಟ್ರನಾಯಕರ ಆಗಮಿಸಿ ಈ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಆ ಮೂಲಕ ಕರ್ನಾಟಕದ ಭೂಪಟದಲ್ಲಿ ಒಂದು ಚಿಕ್ಕಹಳ್ಳಿಯಾದ 'ಕಾಗೋಡು' ರಾಷ್ಟ್ರದ ಗಮನ ಸೆಳೆಯಿತು. ಈ ನಾಯಕರುಗಳ ಭೇಟಿ ಮತ್ತು ಬೆಂಬಲದಿಂದಾಗಿ ದೇಶದ ಗಮನ ಸೆಳೆದದ್ದಲ್ಲದೆ ರೈತರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅಹಿಂಸಾತ್ಮಕವಾದ ರೀತಿಯಲ್ಲಿ ನಡೆದು ಸ್ವಾತಂತ್ರ್ಯ ಹೋರಾಟದ ಮಾದರಿಯನ್ನು ಅನುಸರಿಸಿದ ಕೀರ್ತಿಗೆ ಪಾತ್ರವಾಯಿತು. ಇದರಿಂದ ಭೂಮಾಲಿಕರಲ್ಲಿ ಧೈರ್ಯ ಕುಸಿದರೆ, ರೈತರಲ್ಲಿ ಹೊಸ ಚೈತನ್ಯ ಮೂಡಿತು. ಅಷ್ಟರಲ್ಲಿ ೧೯೫೨ರ ಸಾರ್ವತ್ರಿಕ ಮಹಾಚುನಾವಣೆ ಘೋಷಣೆಯಾದ್ದರಿಂದ ಹೋರಾಟ ಸ್ಥಗಿತವಾಗುತ್ತದೆ. ಕೇಸು ದಾಖಲಾಗಿ ಜೈಲು ಸೇರಿದ ಹೋರಾಟಗಾರರಿಗೆ ಕೇಸಿನಿಂದ ಬಿಡುಗಡೆಗೊಳಿಸುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಕಾಗೋಡು ಸತ್ಯಾಗ್ರಹದ ಫಲಶ್ರುತಿ

ಕಾಗೋಡು ಸತ್ಯಾಗ್ರಹ ಆ ಕಾಲಕ್ಕೆ ವಿಫಲವಾಯಿತೆಂದರೂ ಮುಂದೆ ರೈತರ ಬಗ್ಗೆ, ಭೂಹಿಡುವಳಿ ಬಗ್ಗೆ ವ್ಯಾಪಕವಾದ ಚಿಂತನ-ಮಂಥನಗಳು, ಚರ್ಚೆಗಳು ವಿಧಾನಮಂಡಲದ ಒಳಗೆ-ಹೊರಗೆ ನಡೆದು ಗೇಣಿದಾರನ ಸುಧಾರಣೆಗಾಗಿ ಅನೇಕ ಭೂಸುಧಾರಣೆಯ ಕಾನೂನುಗಳು ಜಾರಿಗೆ ಬಂದು ಅಂತಿಮವಾಗಿ 'ಉಳುವವನೆ ಹೊಲದೊಡೆಯ' ಎಂಬ ಭೂಸುಧಾರಣೆಯ ಕಾನೂನು ಜಾರಿಗೆ ಬರುವಂತಾಯಿತು. ಗೇಣಿ ಅಳತೆಯ ತಕರಾರಿನ ಘರ್ಷಣೆಯಾಗಿದ್ದ ಹೋರಾಟಕ್ಕೆ ಉಳುವವನೆ ಹೊಲದೊಡೆಯನೆಂಬ ಸೈದ್ಧಾಂತಿಕ ಹೋರಾಟ ಆಯಾಮವನ್ನು ಪಡೆದ ಕಾಗೋಡು ಚಳುವಳಿ ಭೂಸುಧಾರಣೆಯ ಮುಖ್ಯ ಗುರಿಯಾದ ಗೇಣಿದಾರನಿಗೇ ಭೂಮಿಯ ಒಡೆತನವನ್ನು ದೊರಕಿಸಿಕೊಡುವುದರಲ್ಲಿ ಹಾಗೂ ನಿಗದಿತ ಭೂಮಿಗಿಂತ ಹೆಚ್ಚಿರುವ ಭೂಮಿಯನ್ನು ಹಂಚಿಕೊಡುವಲ್ಲಿ ನಿರೀಕ್ಷಿತ ಯಶಸ್ಸು ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣ ನೂರಾರು ವರ್ಷಗಳಿಂದ ಊಳಿಗಮಾನ್ಯ ಪದ್ಧತಿಯ ಸಂಕೇತವೆಂಬಂತೆ ಉಳಿದು ಬಂದ ಗೇಣಿ ಪದ್ಧತಿಯಲ್ಲಿ 'ಮೂಲಗೇಣಿ' (ಇದು ಶಾಶ್ವತವಾದ ಗೇಣಿಪದ್ಧತಿಯಾಗಿದ್ದು ; ಇಲ್ಲಿ ಗೇಣಿ ವಂಶಪಾರಂಪರ್ಯವಾಗಿ ಮುಂದುವರಿಯುತ್ತದೆ), 'ಚಾಲಗೇಣಿ' (ತಾತ್ಕಾಲಿಕ ಗೇಣಿ), 'ವಾಯಿದೆಗೇಣಿ' (ಗೊತ್ತಾದ ಅವಧಿಯವರೆಗೆ ಮಾತ್ರ ಭೂಮಿಯನ್ನು ಗೇಣಿಗೆ ನೀಡುವುದು) 'ನ್ಯಾಯಗೇಣಿ' (ಒಬ್ಬ ಗೇಣಿದಾರ ತನ್ನ ಜೀವಿತ ಅವಧಿಯವರೆಗೆ ಗೇಣಿಗೆ ಭೂಮಿಯನ್ನು ಕೃಷಿ ಮಾಡುವುದು) ಇತ್ಯಾದಿ ವ್ಯವಸ್ಥೆಗಳಿದ್ದ ಕಾರಣ ಆ ವ್ಯವಸ್ಥೆಯನ್ನು ಸಮಗ್ರವಾಗಿ ಬದಲಾಯಿಸುವಲ್ಲಿ ಈ ಚಳುವಳಿ ವಿಫಲವಾಯಿತು.

ಕಾಗೋಡು ಚಳುವಳಿಯ ಫಲಶ್ರುತಿ ಏನೆಂದರೆ ಗೇಣಿದಾರರ ಬಗ್ಗೆ ಸ್ವತಂತ್ರ ಭಾರತ ಸರ್ಕಾರ

ಯೋಚಿಸುವಂತೆ ಮಾಡಿರುವುದು. ಆದಕಾರಣ ಗೇಣಿದಾರನ ಬದುಕಿನ ಸುಧಾರಣೆಯ ಬಗ್ಗೆ ಅನೇಕ ಕಾನೂನುಗಳನ್ನು ರೂಪಿಸುವಂತಾದುದು. ಮುಂದೆ ಉಳುವವನೆ ಹೊಲದೊಡೆಯ (೧೯೭೪) ಎಂಬ ಭೂಸುಧಾರಣೆಗೆ ಕಾಗೋಡು ಚಳುವಳಿ ಭೀಜಾಂಕುರವಾಯಿತೆನ್ನಬಹುದು.

ಸ್ವಾತಂತ್ರ್ಯನಂತರ ಕರ್ನಾಟಕದಲ್ಲಿ ಭೂಸುಧಾರಣೆಗೆ ಸಂಬಂಧಿಸಿದಂತೆ ೧೯೫೨ರಲ್ಲಿ ಮೈಸೂರು ಟೆನೆನ್ಸಿ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯ ಪ್ರಕಾರ ಗೇಣಿಯ ಬೆಳೆಯ ಮೂರನೇ ಒಂದುಕ್ಕಿಂತ ಹೆಚ್ಚಿನ ಇರಬಾರದೆಂದು ನಿಗದಿಗೊಳಿಸಲಾಯಿತು. ಅಲ್ಲದೆ ಹನ್ನೆರಡು ವರ್ಷಗಳಿಗಿಂತ ಹೆಚ್ಚು ಅವಧಿಯಲ್ಲಿ ಗೇಣಿ ಮಾಡಿಕೊಂಡಿದ್ದ ರೈತರಿಗೆ ಜಮೀನಿನ ಖಾಯಂ ಹಕ್ಕನ್ನು ನೀಡಲಾಯಿತು. ಆದರೆ ಈ ಕಾಯ್ದೆಯ ಪ್ರಕಾರ ಭೂಮಾಲಿಕ ತನ್ನ ಸ್ವಂತ ಸಾಗುವಳಿಗೆಂದು ಭೂಮಿಯನ್ನು ಬಿಡಿಸಿಕೊಳ್ಳಬಹುದಾಗಿತ್ತು. ಅಲ್ಲದೆ ಒಕ್ಕಲಿನ ಗೇಣಿ ಬಾಕಿ ಇದ್ದರೆ, ಭೂಮಿಯಲ್ಲಿ ಕೃಷಿ ಮಾಡದಿದ್ದರೆ ಭೂಮಿ ಹಾಳುಗೆಡವಿದ್ದರೆ ಭೂಮಾಲಿಕ ಒಕ್ಕಲೆಬ್ಬಿಸಬಹುದಾಗಿತ್ತು. ಇದರಿಂದ ಒಂದರ್ಥದಲ್ಲಿ ಸರಕಾರವೇ ಭೂಮಾಲಿಕರಿಗೆ ಒಕ್ಕಲೆಬ್ಬಿಸುವ ಉಪಾಯವನ್ನು ತೋರಿಸಿಕೊಟ್ಟಂತಿತ್ತು. ಈ ಹಿನ್ನಲೆಯಲ್ಲಿ ಸಹಜವಾಗಿ ಗೇಣಿದಾರನಿಗಿಂತ ಭೂಮಾಲೀಕನೇ ಭೂಮಿಯನ್ನು ಉಳಿಸಿಕೊಳ್ಳುವಲ್ಲಿ ಸಫಲವಾದ ಎನ್ನಬಹುದು.

೧೯೫೭ರಲ್ಲಿ ಅಂದಿನ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ ಭೂಸುಧಾರಣಾ ಸಮಿತಿ ರಚಿಸಿತು. ಅದು ವರದಿ ನೀಡುವ ಸಂದರ್ಭದಲ್ಲೇ ಬಿ.ಡಿ.ಜತ್ತಿಯವರೇ ಮುಖ್ಯಮಂತ್ರಿಗಳಾದರು. ಇವರ ಮಂತ್ರಿಮಂಡಲದಲ್ಲಿ ಕಂದಾಯ ಸಚಿವರಾಗಿದ್ದ ಹಾಗೂ ಗೇಣಿದಾರರ ಸಮಸ್ಯೆಗೆ ಶಾಸನಸಭೆಯೊಳಗೆ ಹೋರಾಡುತ್ತಲೆ ಬಂದ ಶ್ರೀ ಕಡಿದಾಳ್ ಮಂಜಪ್ಪನವರ ಸರ್ಕಾರದಿಂದ ೧೯೬೧ರಲ್ಲಿ 'ವಿಧಾನಸಭೆ'ಯಿಂದ ಅನುಮೋದನೆಗೊಂಡಿತು. ಆದರೆ ಈ ಶಾಸನ 'ಕರ್ನಾಟಕ ಭೂಸುಧಾರಣಾ ಕಾನೂನು' ಎಂಬ ಹೆಸರಿನೊಂದಿಗೆ ೧೯೬೫ರಲ್ಲಿ ಜಾರಿಗೊಂಡಿತು. ಈ ಎಂಟು ವರ್ಷಗಳ ಅವಧಿ ಭೂಮಾಲಿಕರಿಗೆ ವರದಾನವಾಗಿ ಪರಿಣಮಿಸಿತು. ಸ್ವಂತಕ್ಕೆ ಎಂಬ ನೆಪದಲ್ಲಿ ಸಾಕಷ್ಟು ಒಕ್ಕಲೆಬ್ಬಿಸುವ ಕೆಲಸ ನಡೆಯಿತು. ಗೇಣಿದಾರನಿಗೆ ಭೂಮಿಯನ್ನು ಖಾಯಂಗೊಳಿಸುತ್ತೇವೆ ಎಂದು ಹೇಳಿದ ಶಾಸನವು ಗೇಣಿದಾರನಿಂದ ಭೂಮಿಯನ್ನು ಬಿಡಿಸಲು ಕಾನೂನುಬದ್ಧ ಅವಕಾಶಮಾಡಿಕೊಟ್ಟಂತಾಯಿತು". ಇದು ಮಲೆನಾಡಿನ ಭೂಮಾಲಿಕರು ಮತ್ತು ಗೇಣಿದಾರರ ಸಂಬಂಧಗಳನ್ನು ಸ್ಥಾನಪಲ್ಲಟಗೊಳಿಸಿತು. ೧೯೬೧ರ ಭೂಸುಧಾರಣಾ ಕಾಯ್ದೆಯಲ್ಲಿ ಸಣ್ಣ ಹಿಡುವಳಿ ಜಮೀನ್ದಾರರು, ವಿಧವೆಯರು, ಅವಿವಾಹಿತ ಹೆಣ್ಣುಮಕ್ಕಳು, ಸೈನಿಕರು, ನಾವಿಕರು, ವೈಮಾನಿಕರು ಇವರುಗಳು ತಮ್ಮ ಭೂಮಿಯನ್ನು ಗೇಣಿಗೆ ಕೊಡುವ ಅವಕಾಶ ಕಲ್ಪಿಸಬೇಕಾಗಿತ್ತು. ಭೂಮಾಲಿಕರು ಗೇಣಿದಾರನ ಗೇಣಿಯಿಂದಲೇ ಜೀವನ ಸಾಗಿಸುತ್ತಿದ್ದರೆ, ಗೇಣಿದಾರನ ಸ್ವಾಧೀನದಲ್ಲಿದ್ದ ಸ್ವಲ್ಪ ಜಮೀನನ್ನು ಬಿಡಿಸಿಕೊಳ್ಳಲು ಅವಕಾಶ ಕಲ್ಪಿಸಿತು. ಇದು ಗೇಣಿದಾರರ ಉಚ್ಚಾಟನೆಯನ್ನು ತಡೆಗಟ್ಟತಕ್ಕ ತಾತ್ಕಾಲಿಕ ರಕ್ಷಣೆಯ ಕಾನೂನು ಇದಾಗಿತ್ತು"[೧೭]

ದೇವರಾಜ ಅರಸು ಸರ್ಕಾರ ೧೯೭೪ರಲ್ಲಿ ಈ ಭೂಸುಧಾರಣಾ ಕಾನೂನಿಗೆ ತಿದ್ದುಪಡಿ ತಂದು ಭೂಮಿಯನ್ನು ಗೇಣಿಗೆ ಕೊಡುವುದೇ ಕಾನೂನು ಬಾಹಿರವೆಂದು ವಿಧಾಯಕ ಮಾಡಲಾಯಿತು.

ಸೈನಿಕರು ಮತ್ತು ನಾವಿಕರನ್ನು ಹೊರತುಪಡಿಸಿದಂತೆ ಬೇರೆ ಯಾರೂ ಜಮೀನನ್ನು ಗೇಣಿಗೆ ನೀಡಲು ಅವಕಾಶವಿಲ್ಲದಂತೆ ಮಾಡಿತು. ಇದನ್ನು ಯಶಸ್ವಿಯಾಗಿ ತರಲು ಪ್ರತಿಯೊಂದು ತಾಲ್ಲೂಕಿನಲ್ಲೂ ಜನತಾ ನ್ಯಾಯಮಂಡಳಿಗಳನ್ನು ರೂಪಿಸಿತು. ಇದರಿಂದ ಸಂಘಟಿತ ಶಕ್ತಿಯಿಲ್ಲದ ಅಮಾಯಕ ಅವಿದ್ಯಾವಂತ, ಶ್ರಮಿಕ ದುರ್ಬಲ ವರ್ಗಕ್ಕೂ ಸಾಮಾಜಿಕ ನ್ಯಾಯ ದಕ್ಕುವಂತಾಗಬೇಕೆಂಬುದು, ನ್ಯಾಯಾಂಗಕ್ಕೆ ಭೂ ಒಡೆಯರು ಹೋಗುವುದನ್ನು ತಪ್ಪಿಸುವಂತದು ಇದರ ಮುಖ್ಯ ಧ್ಯೇಯವಾಗಿತ್ತು.

ಆದರೆ ಕೆಲವು ಕಡೆ ಈ ಲ್ಯಾಂಡ್ ಟ್ರಿಬ್ಯೂನಲ್‌ನ್ನು ಕೂಡ ಸ್ವಾರ್ಥಿಗಳು ದುರ್ಬಳಕೆ ಮಾಡಿಕೊಂಡಿದ್ದಾರೆ. ಶ್ರೀಕಂಠ ಕೂಡಿಗೆಯವರ 'ಅಪರೂಪದವರು' ಎಂಬ ಕಥೆಯಲ್ಲಿ ಅಂತಹ ಒಂದಂಶವನ್ನು ಕಾಣಬಹುದು. ಇಲ್ಲಿ ಬರುವ ಇಬ್ಬರು ಜಮೀನ್ದಾರರು ಹಠವಾದಿಗಳು. ಮಾರಿಹಬ್ಬ, ದೊಂಬರಾಟ ಇತ್ಯಾದಿ ಯಾವ ಊರೊಟ್ಟಿನ ಕೆಲಸ ಇದ್ದರೂ ಇವರಿಬ್ಬರದೂ ಒಂದೊಂದು ಗುಂಪು. ಇವರ ನಡುವಿನ ಸಣ್ಣಮಟ್ಟ ಚಕಮಕಿ ತೀವ್ರ ಸ್ವರೂಪ ಪಡೆದುಕೊಂಡುದು ಈ ಲ್ಯಾಂಡ್ ಟ್ರಿಬ್ಯೂನಲ್ ಬಂದ ಮೇಲೆ. ಇಲ್ಲಿ ಬರುವ ಬಾಳುನಾಯ್ಕ ತನ್ನ ಆಳುಗಳಿಗೆ ಹೇಳಿಕೊಟ್ಟು ಮತ್ತೊಬ್ಬ ಜಮೀನ್ದಾರನ ಜಮೀನಿಗೆ ಡಿಕ್ಲರೇಷನ್ ಕೊಡಿಸಿದರೆ ಈ ಬಾಳುನಾಯ್ಕನ ಜಮೀನಿಗೆ ಆ ಜಮೀನ್ದಾರ ತನ್ನ ಆಳುಕಾಳುಗಳ ಮೂಲಕ ಡಿಕ್ಲರೇಷನ್ ಕೊಡಿಸುತ್ತಾನೆ. ಈ ಜಗಳ ಮುಂದುವರೆದು ಒಂದು ಕುಟುಂಬ ಸಂಪೂರ್ಣ ನಾಶವಾಗುತ್ತದೆ. ಅಂದರೆ ಜಮೀನ್ದಾರರ ನಡುವಿನ ದ್ವೇಷ, ಸ್ವಾರ್ಥಕ್ಕೆ ದಾಳಗಳಾಗಿ ಅನೇಕ ಗೇಣಿದಾರರು ಆಳು ಕಾಳುಗಳು ಬಳಕೆಯಾಗಿ ಗ್ರಾಮೀಣ ಪರಿಸರ ಪ್ರಕ್ಷುಬ್ಧ ಸ್ಥಿತಿಯನ್ನು ತಲುಪಿದ್ದನ್ನು ಅಲ್ಲಲ್ಲಿ ಕಾಣಬಹುದು. ಇದೆಲ್ಲಾ ಭೂ ಸುಧಾರಣೆ ಕಾನೂನು ಬಂದ ಕಾಲದ ಸಂಕ್ರಮಣ ಸ್ಥಿತಿಯ ಅವಘಡಗಳು. ಇದರ ಮೇಲೆ ಈ ಕಥೆ ಬೆಳಕು ಚೆಲ್ಲುತ್ತದೆ.

ಜಮೀನ್ದಾರಿ ಪದ್ಧತಿ, ಸಂಘರ್ಷ ಮತ್ತು ಕುವೆಂಪು ಕಥಾಸಾಹಿತ್ಯ

ಕುವೆಂಪು ಅವರ 'ಕಾನೂರು ಹೆಗ್ಗಡತಿ' ಕಾದಂಬರಿ ೧೯೩೬ರಲ್ಲಿ ರಚಿತಗೊಂಡಿತು. ಮಲೆನಾಡಿನ ದಟ್ಟವಾದ ವೈವಿಧ್ಯಮಯವಾದ ಜೀವನವು ಚಿತ್ರಣಗೊಂಡ ಇದರಲ್ಲಿ ಜಮೀನ್ದಾರಿ ಪದ್ಧತಿಯ ಕ್ರೌರ್ಯವನ್ನು ಇದಕ್ಕೆ ಸಿಲುಕಿ ನರಳುವ ಜನಸಮುದಾಯವನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ಮಲೆನಾಡಿನ ಪ್ರಾಂತ್ಯದಲ್ಲಿ ವರ್ಗ ಸಂಘರ್ಷವೆನ್ನಬಹುದಾದ 'ಕಾಗೋಡು ಸತ್ಯಾಗ್ರಹ'ವಾಗಲು ಹದಿನೈದು ವರ್ಷಗಳ ಮುಂದಿತ್ತು (೧೯೫೧). ಸುಮಾರು ಶೇ. ೯೦ರಷ್ಟು ಜನ ಮಲೆನಾಡ ಪರಿಸರದಲ್ಲಿ ಗೇಣಿದಾರರಿದ್ದರು. ೧೯೪೫ರಲ್ಲಿ ಮಲೆನಾಡು ಗೇಣಿದಾರರ ಸಂಘ ಸ್ಥಾಪನೆಯಾಯಿತು. ಹೀಗಿರುವಾಗ ಗೇಣಿದಾರರ ಜಾಗೃತಿ ಬಗ್ಗೆ, ಆತ ನೆಲದೊಡೆಯನಾಗಬೇಕೆಂಬ ಮುಂಬೆಳಕಿನ ಆಶಯಗಳಾವುವು ವ್ಯಕ್ತವಾಗುವುದಿಲ್ಲ. ಅಷ್ಟೇಕೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ರಚನೆಯಾದುದು ೧೯೬೭ರಲ್ಲಿ ಅಂದರೆ ಕಾಗೋಡು ಸತ್ಯಾಗ್ರಹ ನಡೆದು ಹದಿನೈದು ವರ್ಷಗಳ ನಂತರ, ಆಗಾಲೆ ಗೇಣಿದಾರನ ಪರವಾದ ಚಿಂತನೆ, ಹೋರಾಟ, ಭೂಸುಧಾರಣೆಯಂತಹ ಕಾನೂನು ರೂಪಗೊಳ್ಳುತ್ತಿದ್ದ ಕಾಲ. ಇಲ್ಲಿಯು ಅಂತಹ ಆಶಯಗಳು ವ್ಯಕ್ತವಾಗದಿರುವುದೇ ಕುತೂಹಲದ ಸಂಗತಿ. ಹಾಗೆಂದು ಕುವೆಂಪು ಜಮೀನ್ದಾರಿ ವರ್ಗದ ಪರವಾಗಿದ್ದರು ಎಂದು ಅನುಮಾನಪಡಬೇಕಿಲ್ಲ ; ಅರ್ಥೈಸಬೇಕಿಲ್ಲ. ತಮ್ಮ ಎರಡೂ ಕೃತಿಗಳಲ್ಲಿ ದುರ್ಬಲ

ಸಮುದಾಯಗಳನ್ನು ಸಶಕ್ತವಾಗಿಯೇ ಚಿತ್ರಿಸಿದ್ದಾರೆ.

ಕಾನೂರು ಚಂದ್ರೇಗೌಡನ ಒಕ್ಕಲಾದ ಅಣ್ಣೇಗೌಡ ಒಕ್ಕಲುತನದಲ್ಲಿ ಮೊದಲು ನೆಮ್ಮದಿಯಾಗಿದ್ದವನು ಮತ್ತೆ ಮತ್ತೆ ಮದುವೆಯಾಗಬೇಕಾಗಿ ಬಂದು ತೆರ ತೆತ್ತೂ ತೆತ್ತೂ ಚಂದ್ರೇಗೌಡನಲ್ಲಿ ಸಾಲಗಾರನಾಗಿದ್ದ. ಈಗಾಗಲೇ ಸಾವಿರ ರೂಪಾಯಿ ಸಾಲ ಮಾಡಿರುವ ಅಣ್ಣೇಗೌಡನಿಗೆ ಮತ್ತೆ ಬಿಡಿಗಾಸನ್ನು ಕೊಡಬಾರದೆಂದು ದೃಢ ನಿಲುವನ್ನು ಜಮೀನ್ದಾರ ಚಂದ್ರೇಗೌಡ ತಳೆದಿದ್ದಾನೆ. ಓದು, ಬರಹ ಬಾರದ ಅಣ್ಣೇಗೌಡನ ಮುಂದೆ ಚಂದ್ರೇಗೌಡ ಲೆಕ್ಕದ ಪುಸ್ತಕ ಹಿಡಿಯುವುದು. ಅರ್ಥವಿಲ್ಲದೆ ಅನೇಕ ಕರ್ಮಕ್ರಿಯೆಗಳನ್ನು ಮಾಡುವಂತೆ ಮುಂದೆ ಬಾಗಿ ಪುಸ್ತಕ ನೋಡುವುದು ವಿನೋದ ಪೂರ್ಣವಾಗಿದ್ದರೂ ಅಕ್ಷರಸ್ಥ ಯಜಮಾನನ ಮುಂದೆ ಅನಕ್ಷರಸ್ಥ ಗೇಣಿದಾರನ ಕೋಲೆಬಸವನ ಸ್ಥಿತಿಯನ್ನು ಧ್ವನಿಸುತ್ತದೆ. ಮನೆಯಲ್ಲಿ ರೋಗಗ್ರಸ್ತಳಾಗಿ ಬಿದ್ದುಕೊಂಡಿದ್ದ ಹೆಂಡತಿಯ ಚಿತ್ರ, ಮದುವೆ ಮಾಡದಿದ್ದರ ಮನೆಬಿಟ್ಟು ಹೋಗುತ್ತೇನೆಂದು ಕ್ರೂರವಾಗಿ ವರ್ತಿಸುವ ಮಗ, ಏನೂ ಅರಿಯದ ಮುಗ್ಧ ಮಗಳ ಚಿತ್ರ ಕಣ್ಣಮುಂದೆ ಬಂದು ಮುಂದೇನೆಂದು ದಾರಿ ತೋಚದೆ ಕಣ್ಣೀರು ಮಿಡಿಯುತ್ತಿರುವ ಹೃದಯಸ್ಪರ್ಶಿ ಚಿತ್ರಣವನ್ನು ಕುವೆಂಪು ಅಂತಹ ಲೇಖಕ ಕೊಡಲು ಸಾಧ್ಯ. ಹೇಗೆ ಅಣ್ಣಯ್ಯನ ಧಾರುಣ ಸ್ಥಿತಿಯನ್ನು ಹೇಳಬಲ್ಲರೊ ಹಾಗೆ ಬಾಹ್ಯದಲ್ಲಿ ಕಠಿಣವಾಗಿ ತೋರುವ, ವರ್ತಿಸುವ ಚಂದ್ರೇಗೌಡನ ಅಂತರಂಗದ ಹೊಯ್ದಾಟದ ಚಿತ್ರಣವನ್ನು ನೀಡಬಲ್ಲರು. ಇದು ಕುವೆಂಪು ನೋಡುವ ಪೂರ್ಣದೃಷ್ಟಿ. ತಮ್ಮ ತಂದೆ ಕಾಲದಿಂದಲೂ ನಂಬಿಕೆಯಾಗಿ ಒಕ್ಕಲುತನ ಮಾಡಿಕೊಂಡು ಬಂದವನಿಗೆ, ಚಿಕ್ಕಂದಿನಿಂದಲೂ ಪರಿಚಿತನಾಗಿದ್ದವನಿಗೆ ದುಡ್ಡನ್ನು ಇಟ್ಟುಕೊಂಡು ಬಿಡಿಗಾಸು ಕೊಡಲಾರೆ ಎಂದಿದ್ದು, ಕ್ರೂರವಾಗಿಯೇ ಕಾಣುತ್ತದೆ. ಆದರೆ ಹೀಗೆ ಸಾಲ ನೀಡಿ ಹಣ ಕಳೆದುಕೊಂಡಿರುವುದು, ಅಣ್ಣಯ್ಯಗೌಡನಿಂದ ಹಣ ಹಿಂತಿರುಗಿ ಬರುವ ಮಾರ್ಗ ಕಾಣದಿರುವುದರಿಂದ ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ದುಡ್ಡು ಕೊಡದಿದ್ದರೆ ಅಣ್ಣಯ್ಯಗೌಡನ ಮಗ ಓಬಯ್ಯ ಈ ಯಜಮಾನನನ್ನು ಬಿಟ್ಟು ಬೇರೆ ಯಜಮಾನನಲ್ಲಿಗೆ ಹೋಗುವನೆಂಬ ಮಾತು ಚಂದ್ರೇಗೌಡ ನಿಷ್ಠುರವಾಗಿ ವರ್ತಿಸುವಂತೆ ಮಾಡುತ್ತದೆ. ಒಟ್ಟಾರೆ ಚಂದ್ರೇಗೌಡನಂತ ಜಮೀನ್ದಾರ ಅಣ್ಣಯ್ಯಗೌಡನಂತಹ ಒಕ್ಕಲನ್ನು ನಡೆಸಿಕೊಳ್ಳುವ ರೀತಿ ಹೀನಾಯವಾದುದಾಗಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮಂಜಭಟ್ಟರಂತಹ ಸಾಹುಕಾರ, ಪುರೋಹಿತ, ಜಮೀನ್ದಾರ ಮತ್ತು ಲೇವಾದೇವಿ ವ್ಯವಹಾರ ನಡೆಸುವಂತವನು. ಈ ಮೂರು ನೆಲೆಯಲ್ಲಿಯೂ ಶೋಷಿತ ಪ್ರವೃತ್ತಿಯುಳ್ಳವನು. ದಕ್ಷಿಣ ಕನ್ನಡ ಜಿಲ್ಲೆಯಿಂದ ಬರಿಗೈಲಿ ಬಂದು ಇಲ್ಲಿ ಸಾಹುಕಾರನಾದ ಬಗೆಯನ್ನು ಕಾದಂಬರಿ ಹೀಗೆ ಹೇಳುತ್ತದೆ.

"ಕಲ್ಲೂರು ಸಾಹುಕಾರ ಮಂಜಭಟ್ಟರಂತಹ ಬುದ್ಧಿವಂತ ಬ್ರಾಹ್ಮಣರು ಜಮೀನನ್ನು ಲಪಟಾಯಿಸಿಕೊಳ್ಳುವುದಕ್ಕೆ ಒಂದು ನೆವವಾದರೂ ಇರಲಿ ಎಂದೇ ಮಂದ ಬುದ್ಧಿಯ ಗೌಡರು ನಾಯಕರು ಹೆಗ್ಗಡೆಗಳಿಗೆ ಸಾಲ ಕೊಡುತ್ತಿದ್ದರು. ಹಾಗಲ್ಲದಿದ್ದರೆ ಕಲ್ಲೂರು ದೇವಸ್ಥಾನಕ್ಕೆ ಪೂಜಾರಿಯಾಗಿ ಕನ್ನಡ ಜಿಲ್ಲೆಯಿಂದ ಬಂದಾತನು ಕೆಲವು ವರ್ಷದಲ್ಲಿಯೇ ನಾಡಿನಲ್ಲೆಲ್ಲ ದೊಡ್ಡ ಜಮೀನ್ದಾರನೂ, ಶ್ರೀಮಂತನೂ ಎಂದು ಹೆಸರು ಪಡೆಯಲು ಹೇಗೆ ಸಾಧ್ಯವಾಗುತ್ತಿತ್ತು? ತೊಟ್ಟ ಜನಿವಾರ, ಉಟ್ಟಪಾಣಿ ಪಂಚೆ, ಬಹುಶಃ

ಕೈಲೊಂದು ಪಂಚಪಾತ್ರೆ– ಇಷ್ಟೆ ಆಸ್ತಿಯಾಗಿ ಬಂದಿದ್ದ ಬಡ ಹಾರುವನು. ಈಗ ದೊಡ್ಡ ಚೌಕಿಮನೆಯ ಯಜಮಾನನಾಗಿ ದರ್ಬಾರು ನಡೆಸಲು ಹೇಗೆ ಸಾಧ್ಯವಾಗುತ್ತಿತ್ತು? ಗೌಡ ಹೆಗಡೆ ನಾಯಕರುಗಳ ಮನೆ, ಮನೆಗೆ ಅಲೆದು, ದೇಶಾವರ ನಡೆಸಿ, ಸಂಭಾವನೆ ಬೇಡಿ, ಅಡಿಕೆ, ಅಕ್ಕಿ, ಕಾಯಿ ಪಲ್ಯಗಳನ್ನು ಒಟ್ಟು ಮಾಡಿ ಜೀವನಯಾಪನೆ ಮಾಡುತ್ತಿದ್ದವನು. ಈಗ ಗೌಡ ಹೆಗ್ಗಡೆ ನಾಯಕರುಗಳನ್ನೆಲ್ಲ ತನ್ನ ಮನೆಯ ಅಂಗಳದ ಕೆಳ ಜಗುಲಿಯಲ್ಲಿ ನಿಲ್ಲಿಸಿಯೊ ಆಜ್ಞೆ ಮಾಡಿ, ತಪ್ಪಿದರೆ ಶಿಕ್ಷೆ ವಿಧಿಸುತ್ತೇನೆ ಎಂದು ಗರ್ಜಿಸಲು ಹೇಗೆ ಸಾಧ್ಯವಾಗುತ್ತಿತ್ತು?[೧೮]

ಮಲೆನಾಡ ಪರಿಸರದಲ್ಲಿ ಹೆಚ್ಚಿನ ಜಮೀನ್ದಾರರು ತಲಾತಲಾಂತರದಿಂದ ಶ್ರೀಮಂತ ಪರಂಪರೆಯಲ್ಲಿ ಬಂದವರು ತೀರಕಡಿಮೆ. ಸಾಧಾರಣವಾಗಿ ದಕ್ಷಿಣ ಕನ್ನಡದಿಂದ ಉದ್ಯೋಗ ನಿಮಿತ್ತ ವಲಸೆ ಬಂದ ಬುದ್ಧಿವಂತರು ಇಲ್ಲಿನ ಶೂದ್ರ ಸಮುದಾಯಗಳಲ್ಲಿರುವ ಅಜ್ಞಾನವನ್ನು, ಬಡತನವನ್ನು ನಿಷ್ಠೆಯನ್ನು ಅನಕ್ಷರತೆಯನ್ನು ಶ್ರೀಮಂತರಾದವರೇ ಹೆಚ್ಚಿನವರು. ಸಾಲ ನೀಡುವ ವ್ಯವಹಾರದ ಹಿಂದಿನ ಪ್ರಧಾನ ಉದ್ದೇಶ ಇಲ್ಲಿನ ಜನರು ಜಮೀನನ್ನು, ನಗನಾಣ್ಯಗಳನ್ನು ತಮ್ಮದಾಗಿ ಮಾಡಿಕೊಳ್ಳಬೇಕೆಂಬುದು. ಈ ಕಾದಂಬರಿಯಲ್ಲಿ ಬರುವ ಜಮೀನ್ದಾರ ರಂಗಪ್ಪಗೌಡ “ಅವರ ಹತ್ತಿರ ಹೋದವರು ಅನೇಕರು ಹಾಳಾಗಿದ್ದಾರೆ, ನೀನು ಹೇಗಾದರೂ ಉಪಾಯದಿಂದ ಪಾರಾಗದಿದ್ದರೆ ನಿನ್ನ ಜಮೀನು ಉಳಿಯುವುದಿಲ್ಲ”[೧೯] ಎಂದು ವೆಂಕಟಪ್ಪನಾಯಕನಿಗೆ ಎಚ್ಚರಿಕೆ ನೀಡುತ್ತಾನೆ. ಹೂವಳ್ಳಿ ವೆಂಕಟಪ್ಪನಾಯಕನಂತಹ ದಂಡನಾಯಕ ವಂಶದವನು ಕಲ್ಲೂರು ಮಂಜಯ್ಯನ ಸಾಲದ ಉರುಳಿನಲ್ಲಿ ಸಿಲುಕಿ ಸಾಲಗಾರನಾದವನಲ್ಲ, ದುಂದುಗಾರಿಕೆಯಿಂದ ಸಾಲಗಾರನಾದವನು. ಹೆಸರಿಗಾದರೂ ಸ್ವಂತ ಜಮೀನುದಾರನಾಗಿದ್ದವನು ವಿಧುರನಾದ ಈತ ನಾಗಕ್ಕನನ್ನು ಕೂಡಿಕೆ ಶಾಸ್ತ್ರ ಮಾಡಿಕೊಳ್ಳುವ ಹಿನ್ನೆಲೆಯಲ್ಲಿ ಮಂಜಯ್ಯನಲ್ಲಿ ಜಮೀನು ಒತ್ತೆ ಇಟ್ಟು ಸಾಲ ಪಡೆದಿದ್ದ. ಆಗಿನ ಕಾಲದಲ್ಲಿ ಒಕ್ಕಲಾದವನು ತಾನು ದುಡಿದ ಉಪ ಉತ್ಪನ್ನಗಳಾದ ತರಕಾರಿ, ಬಾಳೆಕೊನೆ ಮೊದಲಾದವನ್ನು ಸಾಹುಕಾರರಿಗೆ ಮಾತ್ರ ಗೌರವ ಕಾಣಿಕೆಯಾಗಿ ಸಲ್ಲಿಸುತ್ತಿರಲಿಲ್ಲ, ಸಾಲ ವಸೂಲಿಗೆ ಬರುವ ಜನರಿಗೆ ಅದೇ ಮರ್ಯಾದೆಯನ್ನು ಸಲ್ಲಿಸಬೇಕಾಗುತ್ತಿತ್ತು. ಅವರು ಅದೇ ಹಕ್ಕಿನಿಂದ ಕೇಳಿ ಪಡೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ ವಸೂಲಿ ಸಾಬನಾದ ಲುಂಗಿಸಾಬು ವೆಂಕಟಪ್ಪನಿಂದ ಪುಕ್ಕಟೆಯಾಗಿ ಬಾಳೆಕೊನೆ ಪಡೆಯಲು ಬಂದವನು. ತನ್ನ ದುರಹಂಕಾರದಿಂದ ಹೊಡೆತ ತಿನ್ನಬೇಕಾಗುತ್ತದೆ. ವಸೂಲಿಸಾಬನ ಪಿತೂರಿಯ ಮಾತುಗಳಿಂದ ವೆಂಕಟಪ್ಪನ ಮೇಲೆ ಮಂಜಯ್ಯ ಕುಪಿತನಾಗಿ, ಆ ನೆಪದಲ್ಲಿ ವೆಂಕಟಪ್ಪನಿಗೆ ಯಾವ ಸೂಚನೆಯನ್ನು ನೀಡದೆ ಭೂಮಿಯನ್ನು ಊಳಲು ಜನ ಕಳುಹಿಸುತ್ತಾನೆ. ಇದನ್ನು ನಿರೀಕ್ಷಿಸದಿದ್ದ ವೆಂಕಟಪ್ಪ ಕಂಗಲಾದ. ಸಾಹುಕಾರನ ಏಜೆಂಟನ ಜೊತೆ ವಾಗ್ವಾದ ನಡೆಯುತ್ತದೆ. ಸಾಹುಕಾರನ ಜನಗಳೊಂದಿಗೆ ಹೊಡೆದಾಟವೂ ನಡೆಯುತ್ತದೆ. ಕೋಣೂರು ರಂಗಪ್ಪಗೌಡರ ಪ್ರವೇಶದಿಂದ ಈ ಬಗ್ಗೆ ಸಾಹುಕಾರರ ಸಮ್ಮುಖದಲ್ಲಿ ಪಂಚಾಯಿತಿ ನಡೆಯಲಿ ಎಂಬುದು ತೀರ್ಮಾನವಾದ ಅಂದಿನ ಜಗಳ ಸ್ಥಗಿತವಾಗುತ್ತದೆ. ತಾನು ಪಡೆದ ಸಾಲಕ್ಕೆ ನಂಬಿಕೆಯಾಗಿ ಕ್ರಯಪತ್ರವನ್ನು ಬರೆದುಕೊಟ್ಟದ್ದನ್ನು ನಿಜ ಕ್ರಯಪತ್ರವೆಂದು ಮಾರ್ಪಡಿಸಿಕೊಂಡು ಮೋಸ ಮಾಡುತ್ತಿದ್ದಾರೆ ಎಂದು ರಂಗಪ್ಪಗೌಡನಲ್ಲಿ ವೆಂಕಟಪ್ಪನಾಯಕ ಹೇಳುವಲ್ಲಿ ಆ ಕಾಲದ ಸಾಹುಕಾರ ಸಾಲದ ನೆಪದಲ್ಲಿ ಬಡಬಗ್ಗರ ಆಸ್ತಿಯನ್ನು ಲಪಟಾಯಿಸುವ ಕುತಂತ್ರದ ಬಗ್ಗೆ, ಅವರೆಲ್ಲಾ ಹೇಗೆ ದೊಡ್ಡ ಜಮೀನ್ದಾರರಾದರು ಎಂಬುದರ ಬಗ್ಗೆ

ಬೆಳಕು ಚೆಲ್ಲುತ್ತದೆ. ಆದರೆ ಇಲ್ಲಿ ಬರುವ ವೆಂಕಟಪ್ಪನಾಯಕ ಮುಗ್ಧ ರೈತನಲ್ಲ 'ಕಿಲಾಡಿಯೇ ಆಗಿದ್ದ. ತಾನು ಸಾಲ ತಂದ ಎಲ್ಲ ಸಾಹುಕಾರರಿಗೂ ಇದೇ ರೀತಿ ಕ್ರಯಪತ್ರ ಬರೆದುಕೊಟ್ಟಿದ್ದ. ಆದ್ದರಿಂದ ಸುಲಭವಾಗಿ ಅದನ್ನು ಯಾರೊಬ್ಬರೂ ದಕ್ಕಿಸಿಕೊಳ್ಳುವಂತಿರಲಿಲ್ಲ. ಆದರೆ ಮಂಜಯ್ಯನ ಸಾಲದಿಂದ ಮುಕ್ತನಾಗಲೇಬೇಕಾದುದರಿಂದ ತನ್ನ ಮಗಳು ಚೆಲುವೆಯಾದ ಚಿನ್ನಮ್ಮನನ್ನು ಮಧ್ಯ ವಯಸ್ಸು ದಾಟಿದವನೂ, ರೋಗಿಷ್ಠನೂ, ಜಮೀನ್ದಾರನೂ ಆದ ಸಿಂಭಾವಿ ಭರಮೈ ಹೆಗಡೆಗೆ ತೆರದ ರೂಪದಲ್ಲಿ ಹಣ ಪಡೆದು ಮದುವೆ ಮಾಡಿಕೊಡಲು ನಿರ್ಧರಿಸಿರುತ್ತಾನೆ. ಈ ರೀತಿ ಆರ್ಥಿಕ ಶೋಷಣೆ, ಅನೇಕ ಸಾಮಾಜಿಕ ಶೋಷಣೆಗೂ ಕಾರಣವಾಗುತ್ತದೆ ಎಂಬುದನ್ನು ಗಮನಿಸಬಹುದು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಎರಡನೇ ಅಧ್ಯಾಯದಲ್ಲಿ ಲಕ್ಕುಂದದ ಸೇಸಾನಾಯ್ಕನ ವಿಚಾರ ಬರುತ್ತದೆ.

"ಲಕ್ಕುಂದದ ಜಮೀನಿನಲ್ಲಿ ಮುಕ್ಕಾಲು ಪಾಲು ಸಿಂಭಾವಿ ಭರಮೈ ಹೆಗ್ಗಡೆಯವರಿಗೆ ಸೇರಿತ್ತು. ಇನ್ನುಳಿದ ಒಡೆಯರ ಹಳೆ ಪೈಕದ ಸೇಸಾನಾಯ್ಕನ ಸ್ವಂತದ್ದಾಗಿತ್ತು. ಸಾಧಾರಣವಾಗಿ ಒಕ್ಕಲಿಗ ಒಡೆಯರ ಒಕ್ಕಲಾಗಿದ್ದುಕೊಂಡು, ಬಗನಿಯ ಮರದಿಂದ ಕಳ್ಳು ಇಳಿಯಿಸಿ, ಮಾರಿ ಜೀವನ ಮಾಡುವ ಹಳೆ ಪೈಕದವರಿಗೆ ಸ್ವಂತ ಜಮೀನಿರುವುದು ಬಹಳ ಅಪೂರ್ವ ; ಮಹಾ ಅನಾಚಾರವೆಂದು ಅನೇಕರ ಮನಸ್ಸು. ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆಯೆ ಸ್ವಂತ ಜಮೀನು ಮಾಡುವುದು ಹಳೆಪೈಕದವರಿಗೆ ನಿಷಿದ್ಧ ಎಂದು ಒಕ್ಕಲಿಗರಾಗಿದ್ದ ಹೆಗ್ಗಡೆ, ಗೌಡ ನಾಯಕರುಗಳೆಲ್ಲ ಸೇರಿ ತೀರ್ಮಾನ ಮಾಡಿದ್ದರು[೨೦] ಎಂದು ಆ ಕಾಲದಲ್ಲಿ ಇದ್ದಿರಬಹುದಾದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯನ್ನು, ತಾರತಮ್ಯ ಭಾವನೆಯನ್ನು ಅಭಿವ್ಯಕ್ತಿಸುತ್ತದೆ. ಮಲೆನಾಡ ಪರಿಸರದಲ್ಲಿ ಬ್ರಾಹ್ಮಣರು, ಲಿಂಗಾಯಿತರು ಬಿಟ್ಟರೆ ಒಕ್ಕಲಿಗರು ಜಮೀನ್ದಾರರಾಗಿದ್ದರು. ಅಂತಹದರಲ್ಲಿ ಅದು ಹೇಗೋ ಹಳೇಪೈಕದ ಸೇಸಾನಾಯ್ಕ ಸ್ವಂತ ಜಮೀನು ಹೊಂದಿರುವುದು ಅನೇಕರಿಗೆ ವಿಶೇಷವಾಗಿ ಒಕ್ಕಲಿಗರಿಗೆ ಹುಬ್ಬೇರಿಸುವ ಸಂಗತಿಯಾಗಿತ್ತು. ಈ ರೀತಿ ಒಕ್ಕಲಿಗರ ಏಕಸ್ವಾಮ್ಯವೇ ಬಹುಶಃ ಈ ಪ್ರಾಂತ್ಯದಲ್ಲಿ ಹೆಚ್ಚು ಜನ ಹಳೇಪೈಕದವರು ಸ್ವಂತ ಜಮೀನು ಹೊಂದಿರಲು ಸಾಧ್ಯವಾಗಿರಲಿಲ್ಲ ಎಂದು ತೋರುತ್ತದೆ. "ಖಾಸಗೀ ಆಸ್ತಿಗೆ ಎರಡು ಶಕ್ತಿಗಳಿದ್ದು, ಅದು ಭೂಮಾಲಿಕರಲ್ಲಿ ದರ್ಪವನ್ನು ತುಂಬಿದ್ರೆ, ಸಾಮಾನ್ಯರಲ್ಲಿ ದಿಟ್ಟತನವನ್ನೂ, ಸ್ವಾಭಿಮಾನವನ್ನೂ ತರಬಲ್ಲದು. ಹಳೆಪೈಕದವರು ದಂಡಿಗೆ ಹತ್ತಬಾರದೆನ್ನುವ ಠರಾವನ್ನು ಹಳೆಪೈಕದ ಒಕ್ಕಲುಗಳೂ, ಜೀತದಾಳುಗಳೂ ಪ್ರತಿಭಟಿಸದೆ ಸೇಸಾನಾಯ್ಕನಂಥ ಸ್ವಂತ ಜಮೀನುದಾರರು ಮಾತ್ರ ಪ್ರತಿಭಟಿಸುತ್ತಾರೆ. ಆದರೆ ಆಸ್ತಿಯಿಲ್ಲದವನ ಛಲಗಳು ವ್ಯವಸ್ಥೆಯ ಕಣ್ಣಿಗೆ ಅಹಂಕಾರವಾಗಿ ತೋರುತ್ತವೆ.[೨೧] ಆದಕಾರಣ ಸೇಸಾನಾಯ್ಕನಿಗೆ ಒಕ್ಕಲಿಗರ ಯಜಮಾನಿಕೆಯನ್ನು ವಿರೋಧಿಸುವ ಶಕ್ತಿ ತಂದುಕೊಟ್ಟುದು ಸ್ವಂತ ಆಸ್ತಿ.

ಈ ಹಿನ್ನೆಲೆಯಲ್ಲಿ ಸೇಸಾನಾಯ್ಕನಂತವರು ಸಾಮಾಜಿಕ ಅಂತಸ್ಥಿಗಾಗಿ ಹೋರಾಟ ಮಾಡುತ್ತಾರೆ. ಸಾಮಾಜಿಕ ಪ್ರತಿಷ್ಠೆಗಾಗಿ ಹಳೆಪೈಕದವರು "ಮದುವೆಯಲ್ಲಿ ಕುದುರೆ, ಪಲ್ಲಕ್ಕಿಯನ್ನು ಬಳಸಬಾರದೆಂದು ಒಕ್ಕಲಿಗರ ವಿರೋಧದ ಚರ್ಚೆ, ವಾಗ್ವಾದ ಸರ್ಕಾರದವರೆಗೂ ಹೋಗಿ ಸರ್ಕಾರ ನ್ಯಾಯ ಪಕ್ಷಪಾತಕ್ಕಿಂತ ಬಲಪಕ್ಷಪಾತವಾಗಿಯೇ ತೀರ್ಮಾನ ನೀಡಿತ್ತು"[೨೨] ಎಂಬ ಮಾತಿನಲ್ಲಿ ಪ್ರಭುತ್ವ ದುರ್ಬಲರ ಕಡೆ

ಇರುವುದಿಲ್ಲವೆಂಬುದನ್ನು ಸೂಚಿಸುತ್ತದೆ. ಇದಕ್ಕೆ ಪೂರಕವಾಗಿ ಈ ಸಂಗತಿಯನ್ನು ನೀಡಬಹುದು. ಸ್ವಾತಂತ್ರ್ಯನಂತರ ನಡೆದ ರೈತ ಬಂಡಾಯವಾದ ಕಾಗೋಡು ಚಳುವಳಿಯಲ್ಲಿ ಸರ್ಕಾರ ಮೊದಮೊದಲು ಬಲಪಕ್ಷವಾಗಿಯೇ (ಜಮೀನ್ದಾರರ ಪರವಾಗಿಯೇ) ನಡೆದುಕೊಂಡದ್ದನ್ನು ಚಳುವಳಿಯ ಘಟನೆ ಸೂಚಿಸುತ್ತದೆ. ಕಾರಣವೇನೆಂದರೆ ಜನಪ್ರತಿನಿಧಿಗಳಲ್ಲಿ ಬಹುಸಂಖ್ಯಾತರು ಭೂಮಾಲಿಕ ಹಿನ್ನಲೆಯಿಂದಲೇ ಬಂದವರಾಗಿದ್ದರು. ೧೯೫೧ರಲ್ಲಿ ಕಾಗೋಡು ಗ್ರಾಮದಲ್ಲಿ ಗೇಣಿ ವಿವಾದ, ಪ್ರತಿಭಟನೆ, ಜೈಲು ಸೇರುವಿಕೆ ನಡೆಯುತ್ತಿರುವ ಸಂದರ್ಭದಲ್ಲಿ 'ಮಲೆನಾಡು ಗೇಣಿದಾರರ ಸಂಘದ ಅಧ್ಯಕ್ಷರೂ ಹಾಗೂ ಶಾಸಕರೂ ಆದ ಶ್ರೀ ಕಡಿದಾಳ್ ಮಂಜಪ್ಪನವರು ಅಂದಿನ "ಮುಖ್ಯಮಂತ್ರಿಗಳನ್ನು, ಇತರ ಮಂತ್ರಿಗಳನ್ನು ಭೇಟಿ ಮಾಡಿ ಭೂಮಾಲಿಕರಿಗೂ, ಗೇಣಿದಾರರಿಗೂ ಉಂಟಾದ ವಿವಾದದ ಅಂಶಗಳನ್ನು ಅವರ ಮುಂದಿಟ್ಟು, ಗೇಣಿದಾರ ರಕ್ಷಣೆಗಾಗಿ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕೆಂದು ಪ್ರಾರ್ಥಿಸಿಕೊಂಡರು. ಆದರೆ ಸಚಿವ ಮಂಡಲಿಯಲ್ಲಿದ್ದ ಬಹುಮಂದಿ ಸಚಿವರು ಗೇಣಿದಾರರ ಬೇಡಿಕೆ ವಿಚಾರದಲ್ಲಿ ಸಹಾನುಭೂತಿ ಹೊಂದಿರಲಿಲ್ಲ ಎಂದೂ ಸರ್ಕಾರ ಭೂಮಾಲಿಕರ ಪರವಹಿಸಿದ್ದರಿಂದ ಸರ್ಕಾರದ ವಿರುದ್ಧ ಸತ್ಯಾಗ್ರಹದಲ್ಲಿ ತಾನು ಭಾಗವಹಿಸಬೇಕಾಗಿ ಬಂತು ಎಂದೂ, ಕಾಂಗ್ರೇಸ್ ಪಕ್ಷದ ಮುಖಂಡರಲ್ಲಿ ಪ್ರಮುಖರಾಗಿದ್ದವರಿಗೆ ಗೇಣಿದಾರರ ವಿಚಾರದಲ್ಲಿ ಸಹಾನುಭೂತಿ ಇರಲಿಲ್ಲವೆಂದರೆ ತಪ್ಪಾಗಲಾರದು. ಆದ್ದರಿಂದ ಸರ್ಕಾರದವರು ಡೋಲಾಯಮಾನ ನೀತಿಯನ್ನು ಅನುಸರಿಸಿದರು"[೨೩] ಎಂದು ಹೇಳಿಕೊಂಡಿದ್ದಾರೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿ ಕೂಡ ಆ ಕಾಲದ ಬ್ರಿಟೀಷ್ ಸರ್ಕಾರದ ಡೋಲಾಯಮಾನ ಸ್ಥಿತಿಯನ್ನೇ ಹೇಳುತ್ತದೆ. "ಮೈಸೂರು ಸಂಸ್ಥಾನದ ಅಂಚಾಗಿ ದುರ್ಗಮವಾದ ಪರ್ವತಾರಣ್ಯಗಳ ಬೀಡಾಗಿ ಆಗತಾನೆ ನಗರ, ಕೌಲೆದುರ್ಗ ಮೊದಲಾದ ಪಾಳೆಪಟ್ಟುಗಳ ಕಿರುಕುಳದಿಂದ ಪಾರಾಗಿದ್ದ ಮಲೆನಾಡಿಗೆ ಅಲ್ಲಿದ್ದ ಬಹುಸಂಖ್ಯೆಯ ಬಲಿಷ್ಠರ ಇಚ್ಛೆಯಂತೆ ಸರ್ಕಾರದ ಕಾನೂನಾದುದರಲ್ಲಿ ಆಶ್ಚರ್ಯವೇನಿಲ್ಲ.......... ಒಂದು ಪಕ್ಷ ಇದನ್ನು ಹಳೇ ಪೈಕದವರು ವಿರೋಧಿಸಿದ್ದರೂ ಸರ್ಕಾರ ಅಡ್ಡಿಪಡಿಸುತ್ತಿರಲಿಲ್ಲ"[೨೪] ಎಂಬ ವಿವರಣೆ ಅಂದಿನ ಸರ್ಕಾರದ ನಿಲುವನ್ನು ಸೂಚಿಸುತ್ತದೆ. ಸರ್ಕಾರದಿಂದ ಕಾನೂನಾಗಿ ಬಂದ ಮಾತ್ರಕ್ಕೆ ಅನ್ಯಾಯ ನ್ಯಾಯವಾಗುತ್ತದೆಯೇ ಎಂದು ಸೇಸಾನಾಯ್ಕನಂತಹ ಸ್ವತಂತ್ರ ದೃಷ್ಟಿಯುಳ್ಳ ಹಳೆ ಪೈಕದ ನಾಯಕರು ಅದಕ್ಕೆ ವ್ಯತಿರಿಕ್ತವಾದ ರೀತಿಯಲ್ಲ ನಡೆಯಲು ಪ್ರಯತ್ನಿಸುತ್ತಿದ್ದರು. ಸೇಸಾನಾಯ್ಕ ಅಂತಹ ಸಂಘಟನೆಯನ್ನು ಮಾಡುವ ಪ್ರಯತ್ನ ಮಾಡುತ್ತಿದ್ದ ಎಂದು ಹೇಳುವ ಕಾದಂಬರಿ ಇದನ್ನು ಒಂದು ಎಳೆಯಾಗಿ ಪಡೆದು ಮುಂದೆ ಸಂಘರ್ಷವಾಗುವುದನ್ನು ಸೂಚಿಸುವುದಿಲ್ಲ ಅಥವಾ ಬೆಳೆಸುವುದಿಲ್ಲ. ಬಹುಶಃ ಹಾಗೆ ಬೆಳಸಿದ್ದರೆ ಕಾದಂಬರಿಯಲ್ಲಿ ಜಮೀನ್ದಾರ-ಗೇಣಿದಾರ ಸಂಘರ್ಷದ ಸ್ವರೂಪ ಬಿಂಬಿತವಾಗುತ್ತಿತ್ತು ಎಂಬುದು ಊಹಿಸಲು ಸಾಧ್ಯವಿದೆ. ಕಾದಂಬರಿಯ ಒಟ್ಟು ಸಂವಿಧಾನಕ್ಕೆ ಹೊರತಾದ ಈ ಸಂಗತಿಯನ್ನು ಕುವೆಂಪು ಏಕೆ ತಂದರು, ತಂದದ್ದನ್ನು ಏಕೆ ಬೆಳೆಸಲಿಲ್ಲ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಈ ಚರ್ಚೆಯನ್ನು ಬೆಳೆಸಲು ಕಾರಣವಿಷ್ಟೆ ಕಾದಂಬರಿ ಈ ಪ್ರಸಂಗವನ್ನು ಪ್ರಸ್ತಾಪಿಸುವಾಗ ಮಲೆನಾಡ ಪ್ರದೇಶದಲ್ಲಿ ನಡೆದ ಕಾಗೋಡು ಸತ್ಯಾಗ್ರಹದ ಪ್ರಭಾವ ಬಿದ್ದಿರುವ ಸಾಧ್ಯತೆ ಇದೆ ಎನಿಸುತ್ತದೆ. ಆದರೆ ಕಥಾ ಸಂವಿಧಾನದ ಕಾಲಘಟ್ಟ ಸತ್ಯಾಗ್ರಹದ ಶತಮಾನದ ಅಂತ್ಯ ಮತ್ತು ಇಪ್ಪತ್ತನೇ ಶತಮಾನದ 'ಆದಿ'ಯಾದ ಕಾರಣ ಅದರ ನೇರವಾಗಿ ವಿವರಣೆಗಳು, ಹೋರಾಟಗಳನ್ನು

ತನ್ನ ಕಲಾವಲಯದಲ್ಲಿ ತರಲು ಸಾಧ್ಯವಾಗಲಿಲ್ಲವೆಂದು ತೋರುತ್ತದೆ. ಹಾಗಿದ್ದೂ ಈ ಕೃತಿಯನ್ನು ೧೯೬೭ರಲ್ಲಿ ಬರೆಯುತ್ತಿರುವುದರಿಂದ ಸೇಸಾನಾಯ್ಕನ ಪ್ರಸಂಗದ ಹಿನ್ನಲೆಯಲ್ಲಿ ಕಾಗೋಡು ಸತ್ಯಾಗ್ರಹದ ಛಾಯೆ ಇದೆ ಎಂದು ಊಹಿಸಲು ಅವಕಾಶವಿದೆ. ಅಲ್ಲದೆ ಕೃತಿಯ ಆರಂಭದಿಂದಲೇ ಗುತ್ತಿ ಸಂಭಾವಿಯಿಂದ ಹೊರಟು ಸೀತೂರು, ಲಕ್ಕುಂದ, ಹಳೆಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ ಸುತ್ತಿ ಹಿಂತಿರುಗಿ ಬರುವ ಪಯಣದ ಹಿನ್ನಲೆಯ ಜಮೀನುದಾರರ ಬದುಕನ್ನು, ಸ್ವಭಾವವನ್ನು ಚಿತ್ರಿಸುತ್ತಾ ಹೋಗುವಲ್ಲಿಯೂ ಇದರ ಛಾಯೆಯನ್ನು ಊಹಿಸಿಕೊಳ್ಳಲು ಸಾಧ್ಯವಿದೆ ಎನ್ನಬಹುದು.

ಭೂಸುಧಾರಣೆ ಮತ್ತು ಗೇಣಿದಾರ-ಜಮೀನ್ದಾರ ಸಂಬಂಧ

'ಉಳುವವನೆ ಹೊಲದೊಡೆಯ' ಎಂಬ ಸಾಮಾಜಿಕ ನೀತಿಯನ್ನು ಹೊಂದಿದ ೧೯೭೦ಳರಲ್ಲಿ ಬಂದ 'ಭೂಸುಧಾರಣೆಯ ಕಾನೂನು' ಗೇಣಿದಾರ ಭೂಮಾಲಿಕನಾಗುವ ಭಾಗ್ಯವನ್ನು ತಂದಿತು. ರೈತನಿಗೆ ತನ್ನ ಭೂಮಿಯೆಂದು ಪ್ರೀತಿಸುವ, ತನ್ನ ಬದುಕಿಗೊಂದು ಅಸ್ತಿತ್ವವಿದೆ ಎಂದು ನಂಬುವ, ತಾನು ಇನ್ನೊಬ್ಬನ ಹಂಗಿನಲಿಲ್ಲ ಎಂಬ ಸ್ವಾಭಿಮಾನವನ್ನು ತಂದುಕೊಟ್ಟಿತು. ಒಟ್ಟಾರೆ ಗೇಣಿದಾರನ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಸ್ಥಿತ್ಯಂತರವನ್ನೇ ತಂದಿತು. ಹಲವು ಗೇಣಿದಾರರು ಈ ಅವಕಾಶವನ್ನು ಬಳಸಿಕೊಂಡು ಪ್ರಗತಿಪರರಾದರು. ಕೆಲವರು ತಮಗೆ ದೊರೆತ ಭೂಮಿಯನ್ನು ಇತರರಿಗೆ ಗೇಣಿಕೊಟ್ಟು ಅಥವಾ ಗೇಣಿ ಹಕ್ಕನ್ನು ಮಾರಿಕೊಂಡು ಕೂಲಿ ಮಾಡುವವರಾದರು. ಮತ್ತೆ ಕೆಲವರು ಭೂ ಸುಧಾರಣೆಯ ಕಾನೂನು ಸ್ವಾಮಿನಿಷ್ಠೆಯ ಹಿನ್ನಲೆಯಲ್ಲಿ ಬಳಸಿಕೊಳ್ಳದೆ ಋಣಧರ್ಮವನ್ನು ಪಾಲಿಸಿಕೊಂಡು ಬಂದವರೂ ಇದ್ದಾರೆ.

ಭೂಸುಧಾರಣೆಯ ಕಾನೂನಿನಿಂದ ಸಾಧಾರಣವಾಗಿ ಶ್ರೀಮಂತ ಜಮೀನ್ದಾರರು ನಿರ್ಗತಿಕರಾಗಲಿಲ್ಲ. ಆದರೆ ಬಹುಸಂಖ್ಯಾತ ಮಧ್ಯಮವರ್ಗದ, ಸಾಮಾನ್ಯವರ್ಗದ ಜಮೀನ್ದಾರರು ಜಮೀನನ್ನು ಕಳೆದುಕೊಂಡು ನಿರ್ಗತಿಕರಾದರು. ಗೇಣಿಯಿಂದಲೇ ಬದುಕು ಸಾಗಿಸುತ್ತಿದ್ದವರು ಅನಾಥರಾದರು. ಆ ಕಡೆ ಭೂಮಿಯೂ ಕೈತಪ್ಪಿತು ; ಈ ಕಡೆ ಬೇರ ಉದ್ಯೋಗ ತಿಳಿಯದ ಮಂದಿ ದುರಂತಕ್ಕಿಡಾದದ್ದು ಇದೆ. ಹಲವು ಜಮೀನ್ದಾರರು ಜಮೀನು ಕಳೆದುಕೊಂಡು ಹೊಸ ನೆಲೆ ಅರಸುತ್ತಾ ಪಟ್ಟಣ ಸೇರಿದರು. ಕೆಲವರು ಗೇಣಿಯಿಂದಲೇ ಬದುಕಿದ್ದು ಕಾಲಾಯಾಪನ ಮಾಡುತ್ತಿದ್ದವರು, ಸೋಮಾರಿಗಳಾಗಿದ್ದವರು ಎಚ್ಚೆತ್ತುಕೊಂಡು ಸ್ವಾವಲಂಬಿಗಳಾಗಿ ಬದುಕಲು ಪ್ರಯತ್ನಿಸಿದರು. ಹೀಗೆ ಈ ಕಾನೂನು ಜಮೀನ್ದಾರರ ಬದುಕಿನಲ್ಲಿ ಸಾಮಾಜಿಕವಾಗಿ ಆರ್ಥಿಕವಾಗಿ ಸ್ಥಿತ್ಯಂತರವನ್ನುಂಟು ಮಾಡಿತು. ಭೂಸುಧಾರಣೆಯ ಕಾನೂನಿನಿಂದ ಸ್ವಲ್ಪ ಜಮೀನು ಕಳೆದುಕೊಂಡ ಮಲೆನಾಡಿನ ತ್ಯಾನಂದೂರು ಪುಟ್ಟಣ್ಣ 'ನಾ ಕಂಡ ಮಲೆನಾಡು' ಕೃತಿಯಲ್ಲಿ ಹೀಗೆ ಹೇಳಿದ್ದಾರೆ –

"ಒಂದು ಕಾಲದಲ್ಲಿ ಅನಿಶ್ಚಿತ ಜೀವನ ಸಾಗಿಸುತ್ತ, ಭೂ ತಾಯಿಯ ಚೊಚ್ಚಲ ಮಗನಾಗಿಯೂ ಉಸಿರು ಕಟ್ಟಿಸುವ ವಾತಾವರಣದಲ್ಲಿ ತನ್ನತನವನ್ನೇ ಮರೆತ ರೈತನೀಗ ಭೂ ಸುಧಾರಣೆಯಿಂದಾಗಿ ಮುಕ್ತವಾದ ವಾತಾವರಣದಲ್ಲಿ ಉಸಿರಾಡುವಂತಾದ. ಭೂಮಿ ತನ್ನದೆಂಬ ಅರಿವಾದಾಗ ಆತನ ಕೆಲಸದಲ್ಲಿ ಹೊಸ ಹುರುಪು ಕಂಡಿತು. ಇದು ದೇಶದ ಅನ್ನದ ಸಮಸ್ಯೆ ನೀಗಲು, ಪ್ರಗತಿಪಥದಲ್ಲಿ ಸಾಗಲು ಒಂದು

ಮಹತ್ತರ ಕ್ರಾಂತಿಯೇ ಆಯಿತು. ಸರ್ಪದ ಹೆಡೆಯ ಕೆಳಗಿದ್ದಂತೆ ಇದ್ದ ರೈತ ಬಂಧನದಿಂದ ಪಾರಾಗಿ ಸ್ವತಂತ್ರ ಮಾನವನಾದ".[೨೫] ಇದು ಭೂಮಾಲಿಕನ ವಿಶಾಲವಾದ ಹೃದಯಕ್ಕೆ ಸಾಕ್ಷಿಯಾಗಿದೆ. ಗೇಣಿದಾರನ ಬವಣೆಯನ್ನು ಹತ್ತಿರದಿಂದ ಬಲ್ಲಂತಹ, ಸ್ವತಃ ಭೂಮಿಯಲ್ಲಿ ದುಡಿದ ರೈತನ ಅನಿಸಿಕೆಯಿದು.

ಹೀಗೆ ಭೂಸುಧಾರಣೆಯ ಕಾನೂನು ಮಲೆನಾಡು ಪ್ರಾಂತ್ಯದ ಗೇಣಿದಾರ ಸಮುದಾಯಕ್ಕೆ ಸ್ವಾತಂತ್ರ್ಯವನ್ನು, ಸ್ವಾವಲಂಬನೆಯನ್ನು, ಸ್ವಾಭಿಮಾನವನ್ನು, ಭೂಮಿಯ ಜೊತೆಗಿನ ಅವಿನಾಭಾವ ಸಂಬಂಧವನ್ನು ಉಂಟು ಮಾಡುವುದರ ಮೂಲಕ ಅವನ ಬದುಕಿಗೆ ಅಸ್ತಿತ್ವವನ್ನು, ಬಲವನ್ನು ಭದ್ರತೆಯನ್ನು ತಂದಿತು ಎಂಬುದು ಮುಖ್ಯವಾದ ಸಂಗತಿ. ಮಲೆನಾಡ ಪರಿಸರದಲ್ಲಿ ಹುಟ್ಟಿಬಂದ ಸಾಹಿತಿಗಳ ಕೆಲವು ಕೃತಿಗಳಲ್ಲಿ ಭೂಸುಧಾರಣೆ ತಂದಂತಹ ಸಾಂಸ್ಕೃತಿಕ ಪಲ್ಲಟಗಳ ಬಗ್ಗೆ ಬೆಳಕು ಚೆಲ್ಲಿವೆ.

ಮಲೆನಾಡ ಪರಿಸರದ ಆವರಣವನ್ನೊಳಗೊಂಡ ಬಿಳುಮನೆ ರಾಮದಾಸ್ ಅವರ 'ನಂಬಿಕೆಟ್ಟವರಿಲ್ಲವೊ' ಎಂಬ ಕಾದಂಬರಿಯಲ್ಲಿ ಜಮೀನ್ದಾರ-ಗೇಣಿದಾರರ ಸಂಬಂಧವನ್ನು, ಶೋಷಣೆಯ ಮುಖವನ್ನು ಭೂಸುಧಾರಣೆ ತಂದಂತಹ ಸಂಚಲನವನ್ನು ವಿಶ್ಲೇಷಿಸುತ್ತದೆ. ಹಾಗೆ ಗೇಣಿದಾರನೊಬ್ಬನ ಸ್ವಾಮಿನಿಷ್ಠೆಯನ್ನು ಕದಲಿಸುವುದಿಲ್ಲ ಎಂಬುದು ಇಲ್ಲಿನ ಕುತೂಹಲದ ಸಂಗತಿಯಾಗಿದೆ.

ಪಂಜರವಳ್ಳಿ ಕಾದಂಬರಿಯಲ್ಲಿ ತಮ್ಮ ಕಾಳೇಗೌಡನಿಂದ ಅಣ್ಣ ಗಿರಿಯಪ್ಪಗೌಡ ಶೋಷಿತನಾಗಿ ಕುಟುಂಬವನ್ನು ಬಿಟ್ಟು ಗೇಣಿದಾರನಾಗಿ ನೆಲೆನಿಲ್ಲುವುದನ್ನು ಕಂಡ ಹಾಗೆಯೇ ಈ ಕಾದಂಬರಿಯಲ್ಲೂ ಕೂಡ ಅಣ್ಣ ಪುಟ್ಟೇಗೌಡನ ಶೋಷಣೆಯನ್ನು ಸಹಿಸಲಾರದೆ ಮನೆ ಬಿಟ್ಟು ತಮ್ಮಯ್ಯಗೌಡ ಬೇಗದಾಳಿ ಸಾಹುಕಾರರಿಗೆ ಸೇರಿದ 'ಕೊಡಿಗೆ' ಊರಿನ ಹಾಳು ಜಮೀನನ್ನು ಗೇಣಿಗೆ ಪಡೆಯುತ್ತಾನೆ. ಅಜ್ಜನ ಕಾಲದಿಂದಲೂ ಲೇವಾದೇವಿ ಮಾಡಿದ ನಮ್ಮ ಸಾಹುಕಾರರು ಎಂಬ ಅಭಿಮಾನದ ನಿಷ್ಠೆ, ಭಕ್ತಿ ತಮ್ಮಯ್ಯನಿಗೆ. ಆದರೆ ಈ ಲೇವಾದೇವಿ ವ್ಯವಹಾರದ ಮೂಲಕವೇ ಅಜ್ಜನ ಸ್ವಂತ ಜಮೀನು ಈ ಸಾಹುಕಾರರ ಪಾಲಾದದ್ದನ್ನು ಯೋಚಿಸಲಾರದ ವ್ಯಂಗ್ಯವನ್ನು ತಮ್ಮಯ್ಯನ ನಡವಳಿಕೆಯಲ್ಲಿ ಕಾಣಬಹುದು. ಕೌಟುಂಬಿಕವಾದ ಜಗಳವೇ ಮಲೆನಾಡ ಪರಿಸರದಲ್ಲಿ ಕೆಲವರು ಮನೆ ಬಿಟ್ಟು ಗೇಣಿ ಬಲೆಗೆ ಸಿಲುಕಿದ್ದನ್ನು ಗಮನಿಸಬಹುದು. ಹೀಗೆ ಮನೆತೊರೆದು ಬಂದವರಿಗೆ ಸಾಹುಕಾರ ಸಾಗು ಮಾಡಲಾಗದ ಹಾಳು ಜಮೀನನ್ನು ನೀಡಿದರೂ ಪರಮಾನಂದವಾಗಿ, ಸಾಹುಕಾರರು ಕೃಪೆತೋರಿ ನೀಡಿದ್ದು ತಮ್ಮ ಭಾಗ್ಯವೆಂದು, ಸುಕೃತವೆಂದು ತಳೆಯುವ ಮನೋಭಾವವು ಸಾಹುಕಾರರ ಮೇಲೆ ಇನ್ನಿಲ್ಲದ ನಿಷ್ಠೆ, ಭಕ್ತಿ, ವಿನಯಗಳು ಮೈಗೂಡಿಕೊಂಡಿರುತ್ತವೆ. ಇಂತಹ ಸಂದರ್ಭದಲ್ಲಿ ಸಾಹುಕಾರನಿಂದಾಗುವ ಶೋಷಣೆಯ ನೆಲೆಗಳನ್ನು ಗುರುತಿಸಲಾರ.

ಬೇಗದಾಳಿ ಸಾಹುಕಾರ ನಾಗಪ್ಪಯ್ಯ ಯಾರೂ ಸಾಗು ಮಾಡಲಾಗದ ಪಾಳು ಜಮೀನಿಗೆ ಗೇಣಿದಾರನನ್ನು ಅರಸುತ್ತಿರುವಾಗ ತಮ್ಮಯ್ಯ ಬಂದಿದ್ದು ಅಂತರಂಗದೊಳಗೆ ಸಂತೋಷವಾದರೂ ಅದನ್ನು ತೋರಗೊಡದೆ, ತಾವು ಮನೆ ಬಿಟ್ಟು ಬಂದವನಿಗೆ ಮಹಾಔದಾರ್ಯ ತೋರಿಸುತ್ತಿದ್ದೇವೆ ಎಂಬ ಸೋಗಿನಿಂದಲೇ ಮಾತನಾಡಿ ತಮ್ಮಯ್ಯನಿಗೆ ಬಲೆ ಬೀಸುತ್ತಾನೆ.

"ಬಾಳೆ ಮರದಲ್ಲಿ ಬಾಳೆ ಕೊನೆಗೆ ನಾನು ಗೇಣಿಕೇಳಲ್ಲ.......... ಅಡಿಕೆ ಮರದಲ್ಲಿ ಬೆಳೆಯುವ

ಅಡಿಕೆಗೆ, ಗದ್ದೇಲಿ ಬೆಳೆಯುವ ಭತ್ತಕ್ಕೆ ಗೇಣಿಕೇಳುತಿರೋದು".[೨೬]

ಜಮೀನನ್ನು ರೈತ ಪಡೆಯುವುದೇ ಈ ನೆಲದ ಪ್ರಮುಖ ಬೆಳೆಗಾಗಿ ಹಾಗೂ ಜೀವನಕ್ಕೆ ಆಧಾರವಾದ ಬೆಳೆಗಾಗಿ. ಈ ಪ್ರಮುಖವಾದ ಬೆಳೆಯ ನಡುವೆ ಉಪಬೆಳೆಗಳಾಗಿ ಬಾಳೆ, ಕಬ್ಬು, ಶುಂಠಿ, ಕರಿಮೆಣಸು ಇತ್ಯಾದಿಯನ್ನು ಬೆಳೆಸಿಕೊಳ್ಳುತ್ತಾನೆ. ಎಷ್ಟೋ ಜನ ರೈತರು ತಾವು ಬೆಳೆದ ಬೆಳೆ ಗೇಣಿ ರೂಪದಲ್ಲಿ ಒಡೆಯರ ಮನೆ ಸೇರಿದಾಗ, ಈ ಉಪ ಬೆಳೆಗಳಿಂದ ಸಂಸಾರ ಸಾಗಿಸಿದ್ದಾರೆ. ಇಂತಹ ಉಪ ಬೆಳೆಗೆ ಯಾರು ಗೇಣಿ ಕೊಡುವುದಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯವೆ. ಆದರೂ ಸ್ವಾರ್ಥಿ ಸಾಹುಕಾರರುಗಳು ತಮ್ಮ ಹಕ್ಕಿನ ಜಮೀನಿನಲ್ಲಿ ಬೆಳೆದ ಉಪಬೆಳೆಗೆಲ್ಲ ತನಗೆ ಹಕ್ಕಿದೆ ಎಂದು ಭಾವಿಸುತ್ತಾನೆ. ಬಹುಶಃ ಈ ಮನೋಭಾವದಿಂದಲೇ ಗೇಣಿದಾರರಿಂದ ಪುಕ್ಕಟೆಯಾಗಿ, ಮರ್ಯಾದೆ ರೂಪದಲ್ಲಿ ಬಾಳೆಕೊನೆ, ತರಕಾರಿ ಮುಂತಾದವನ್ನು ಕಾಣಿಕೆಯಾಗಿ ಪಡೆಯುತ್ತಾನೆ ; ಗೇಣಿದಾರ ನೀಡುತ್ತಾನೆ ಎಂದು ಊಹಿಸಲು ಆಸ್ಪದವಿದೆ.

"ಗದ್ದೇಲಿ ಎಷ್ಟೇ ಭತ್ತ ಬೆಳೆಯಲಿ ಅದರ ಅರ್ಧ ಭತ್ತ ಕೊಡಬೇಕು, ತೋಟದಲ್ಲಿ ಎಷ್ಟೇ ಬೆಳೀಲಿ ಅದರ ಅರ್ಧಕೊಡಬೇಕು"[೨೭]

ಗೇಣಿಯನ್ನು ನಿಗದಿಗೊಳಿಸುವಲ್ಲಿಯೇ ಮಲೆನಾಡ ಗೇಣಿರೈತ ಶೋಷಣೆಗೊಳಗಾಗುವುದನ್ನು ಕಾಣಬಹುದು. ಗೇಣಿ ನಿಗದಿಗೊಳಿಸುವಲ್ಲಿ ಭೂಮಿ ಫಲವತ್ತತೆ ಬಗ್ಗೆ ಒಡೆಯ ಯೋಚಿಸಲಾರ. ರೈತನಾದವನು ತನ್ನ ಶಕ್ತಿ ಸಾಮರ್ಥ್ಯದಿಂದ ಎಷ್ಟೆಷ್ಟು ಬೆಳೆಯುತ್ತಾನೋ ಅಷ್ಟಷ್ಟು ಸಾಹುಕಾರನಿಗೆ ಲಾಭವಾಗುತ್ತಿತ್ತು. ಕೊಡಿಗೆ ತೋಟದಿಂದ ಸದ್ಯಕ್ಕೆ ಅಂತಹ ಲಾಭವೇನೂ ತನಗೆ ಆಗದು ಎಂದು ತಿಳಿದರೂ, ಬಾಳೆ ಬೆಳೆದು ಬದುಕನ್ನು ಹೇಗಾದರೂ ನಡೆಸುವೆನೆಂದು ದೈಹಿಕ ಬಲವುಳ್ಳ ತಮ್ಮಯ್ಯ ಒಪ್ಪಿಕೊಳ್ಳುತ್ತಾನೆ. ಮನೆ ತೊರೆದು ಬಂದವನ ಅಸಹಾಯಕತೆಯನ್ನು ಜಮೀನ್ದಾರರು ಚೆನ್ನಾಗಿಯೇ ಉಪಯೋಗಿಸಿಕೊಳ್ಳುತ್ತಾರೆ. ನೆಲತೊರೆದು ಬಂದವನಿಗೆ ಒಂದು ನೆಲಬೇಕಷ್ಟೆ.

ಗೇಣಿಯನ್ನು ಕೊಡುವ ಉದ್ದೇಶದಲ್ಲಿ ಸಾಹುಕಾರನಿಗೆ ಶ್ರಮರಹಿತ ಆರ್ಥಿಕ ಲಾಭದ ಉದ್ದೇಶ ಮಾತ್ರ ಇರುವುದಿಲ್ಲ ; ಇನ್ನೂ ಕೆಲವು ಹುನ್ನಾರಗಳು ಕೂಡ ಇರುತ್ತವೆ. ತಮ್ಮಯ್ಯನಿಗೆ ಬೇಗದಾಳು ಸಾಹುಕಾರರು ಜಮೀನನ್ನು ಕೊಡುತ್ತಾರೆ ಎಂದು ತಿಳಿದಾಗ ಪುಟ್ಟೇಗೌಡನ ಪ್ರತಿಕ್ರಿಯೆಯಲ್ಲಿ ಆ ಸೂಕ್ಷ್ಮವನ್ನು ಕಾಣಬಹುದು. ಇದು ತನ್ನ ಕುಟುಂಬವನ್ನು ಒಡೆಯುವ ತಂತ್ರವೆಂದೂ, ಗೇಣಿಗೆ ಭೂಮಿಯನ್ನು ಕೊಡುವ ನೆಪದಲ್ಲಿ 'ಒಳ್ಳೆಯ ಕೊನೆಯ' ಕಸುಬುದಾರನಾದ ತನ್ನ ತಮ್ಮನನ್ನು ಅಪಹರಿಸಿದ್ದಾರೆಂದು ಆಪಾದಿಸುತ್ತಾನೆ. ದೇವಸ್ಥಾನದ ಪೂಜೆಗೆ ಬಂದವರು ತಮ್ಮ ಅಜ್ಜನ ಜೊತೆ ಲೇವಾದೇವಿ ಮಾಡಿ ತಮ್ಮ ಜಮೀನನ್ನೇ ಲಪಟಾಯಿಸಿದರೆಂದು ದೂರುತ್ತಾನೆ. ತಮ್ಮಯ್ಯನ ತಂದೆಯ ಪ್ರತಿಕ್ರಿಯೆ ಇನ್ನೊಂದು ರೀತಿಯಲ್ಲಿದೆ. ಸಾಹುಕಾರರ ಹತ್ತಿರ ಗೇಣಿಗೆ ಜಮೀನು ಮಾಡುವುದು, ಅದಕ್ಕೆ ಸಾಲ ಮಾಡಿ ಸಾಲ ತೀರಿಸಲು ಸಾಧ್ಯವಾಗದೆ ಅವರ ಮನೆಯಲ್ಲಿ ಕೆಲಸದಾಳಾಗಿ, ಜೀತದಾಳಾಗಿ ದುಡಿಯುವ ಪರಿಸ್ಥಿತಿ ಬರಬಹುದೆಂಬ ಆತಂಕ. ಈ ಆತಂಕವನ್ನು ಸುಂದರ ಉಪಮೆಯ ಮೂಲಕ ಕಾದಂಬರಿಕಾರರು ಚಿತ್ರಿಸುತ್ತಾರೆ.

"ಹೊಸ ನೀರಿನಲ್ಲಿ ಬೇರೊಂದು ಕಡೆಗೆ ವಲಸೆ ಹೋಗುತ್ತೇನೆಂದು ಮೀನುಗಳು ಹರಿದು ಹೋಗಿ ಮನುಷ್ಯ ಒಡ್ಡಿದ ಕೂಣಿಗೂಡಿಗೆ ಬಿದ್ದು ಮನುಷ್ಯನ ಹೊಟ್ಟೆಗೆ ಹೋಗುವಂತೆ"೨೮- ಈ ಹೋಲಿಕೆ ಗೇಣಿದಾರನ, ಜೀತದಾರನ ಬದುಕನ್ನು ಸಮರ್ಥವಾಗಿ ಧ್ವನಿಸುತ್ತದೆ. ತಮ್ಮಯ್ಯಗೌಡನ ಜೊತೆ ಜಗಳವಾಡಿ ಹೊಸ ಬದುಕನ್ನು ಅರಸಿ ಹೊಸ ನೀರಿನ ಕಡೆ ಹೋಗುವ ಮೀನಿನಂತೆ ಹೋಗಿ ಸಾಹುಕಾರನ ಕೂಣಿಗೆ ಬೀಳುವ ಪರಿಸ್ಥಿತಿ ಬರುತ್ತದೆ. ಪುಟ್ಟಯ್ಯನ ಪ್ರತಿಕ್ರಿಯೆಯಂತೆಯೇ ಬೇಗದಾಳಿ ಸಾಹುಕಾರರ ಔದಾರ್ಯಕ್ಕೆ ವಿನಯದಿಂದ ಅವರ ಅಡಿಕೆ ತೋಟದ ಕೊನೆ ತೆಗೆಯುವ ಜೀತಗಾರನಾದ ಹಾಗೂ ಅವರ ಹಾಳುಬಿದ್ದ ಜಮೀನಿಗೆ ಗೇಣಿದಾರನಾದ. ಇನ್ನು ಜೀವನ ಪರ್ಯಂತ ಅವರ ಆಳಾಗಿ, ಗೇಣಿದಾರನಾಗಿ ಬದುಕುವ ಗಾಣದೆತ್ತಿನಂತಾದ, ಮಲೆನಾಡ ಪರಿಸರದ ತಮ್ಮಯ್ಯನಂತ ಮುಗ್ಧ ಗೇಣೀದಾರ ಸಾಹುಕಾರನ ಹಂಗಿಗೆ ಒಳಗಾಗುವ ಪರಿಯನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ಸಾಹುಕಾರರಿಂದ ಗೇಣಿಗೆ ಪಡೆದ ಹಾಳು ಜಮೀನನ್ನು ಕೆಲವೇ ವರ್ಷಗಳಲ್ಲಿ ನಳನಳಿಸುವ ಸುಂದರ ತೋಟವಾಗಿ ತಮ್ಮಯ್ಯ ತನ್ನ ಶ್ರಮದಿಂದ ಪರಿವರ್ತಿಸುತ್ತಾನೆ. ತನ್ನ ತೋಟದ ಸಸಿಗಳನ್ನು ಅಸೂಯೆಯಿಂದ ಯಾರೋ (ಅಣ್ಣನೇ) ಕಡಿದು ಹಾಕಿದಾಗ ಪೋಲಿಸ್ ದೂರು ನೀಡಲು ಆ ನೆಲದ ಮೇಲೆ ಯಾವ ಹಕ್ಕು ಇಲ್ಲದಂತಹ ದುರಂತವನ್ನು ನೋಡಬಹುದು. ಆ ಹಕ್ಕು ಇರುವುದು ಜಮೀನ್ದಾರರನಿಗೆ ಮಾತ್ರ ಎಂಬುದೇ ಇಲ್ಲಿನ ವ್ಯಂಗ್ಯ ಇನ್ನೂ ದುರಂತವೆಂದರೆ ಸಾಹುಕಾರ ಯಾರ ಮೇಲೆ ಗುಮಾನಿಯಿಂದ ಅಥವಾ ತನಗಾಗದ ಪುಟ್ಟೇಗೌಡನನ್ನು ಮಟ್ಟ ಹಾಕುವ ದೃಷ್ಟಿಯಿಂದ ದೂರು ನೀಡುತ್ತಾನೊ ಅವರ ವಿರುದ್ಧ ಸಾಕ್ಷಿ ಹೇಳಲು ನಿಲ್ಲಬೇಕಾದ ದುಸ್ಥಿತಿ ಬರುತ್ತದೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ಗೇಣಿದಾರ ಸಾಹುಕಾರನ ದಾಳವಾಗುತ್ತಾನೆ ಎಂಬುದನ್ನು ಗಮನಿಸಬೇಕು.

ತಮ್ಮಯ್ಯನಿಗೆ ತಾನು ಕಷ್ಟಪಟ್ಟು ಎಷ್ಟೇ ಚೆನ್ನಾಗಿ ಬೆಳೆ ಬೆಳೆದರೂ, ಅದರಲ್ಲಿ ಸಾಹುಕಾರನಿಗೆ ಅರ್ಧವನ್ನು ನೀಡುತ್ತಿದ್ದೇನೆ ಎಂಬುದಾಗಲಿ, ಒಡೆಯರ ಮನೆಯಲ್ಲಿ ಕೆಲವು ಬಿಟ್ಟಿ ಕೆಲಸ ಮಾಡುತ್ತಿದ್ದೇನೆ ಎಂಬುದಾಗಲಿ, ಬಿಟ್ಟಿ ಕಳ್ಳು ಸಾಹುಕಾರರಿಗೆ ಪೂರೈಕೆ ಮಾಡುತ್ತಿದ್ದೇನೆ ಎಂಬುದಾಗಲಿ ಅವನಿಗೆ ಮುಖ್ಯವಾಗುವುದೇ ಇಲ್ಲ. ಆ ಬಗ್ಗೆ ವಿಚಾರವನ್ನೇ ಮಾಡುವುದಿಲ್ಲ. ಹಾಗೆ ಮಾಡಿದ್ದರೆ ಅವನಲ್ಲಿ ಸ್ವಾಭಿಮಾನ ಮೂಡುತ್ತಿತ್ತು. ಆದರೆ ತಮ್ಮಯ್ಯನಂತಹ ಮುಗ್ಧನಿಗೆ ಅಣ್ಣನ ಉಪಟಳವೇ ಬಹುದೊಡ್ಡದಾಗಿ ಕಂಡ ಸಂದರ್ಭದಲ್ಲಿ ಸಾಹುಕಾರರಿಂದ ಗೇಣಿ ಜಮೀನು ಪಡೆದದ್ದು ಮಹತ್ವದ್ದಾಗಿ ತೋರುತ್ತದೆ. ತನಗೆ ಗೇಣಿಗೆ ಭೂಮಿಕೊಟ್ಟರು, ಇರುವುದಕ್ಕೆ ಹಳೆಮನೆಕೊಟ್ಟರು, ತನ್ನ ಮಗನಿಗೆ ಓದಲು ಸಾಲಕೊಟ್ಟರು ಎಂಬುದೇ ಬಹಳ ಮುಖ್ಯವಾಗಿ ಅವರಿಗೆ ಚಿರಋಣಿಯಾಗಿ ಬಾಳುವ ದಾಸ್ಯತನವನ್ನು ಒಪ್ಪಿಕೊಳ್ಳುತ್ತಾನೆ. ಮಲೆನಾಡ ಪರಿಸರದಲ್ಲಿ ಜಮೀನ್ದಾರ ನಾನಾ ರೀತಿಯ ಶೋಷಣೆಯನ್ನು ಸಹಿಸಿಕೊಂಡು ಯಾಕೆ ಬಾಳುತ್ತಿದ್ದರು ಎಂದರೆ ಎಷ್ಟೋ ಸಾರಿ ತಾವು ಶೋಷಣೆಗೆ ಒಳಗಾಗಿದ್ದೇವೆ ಎಂಬ ಅರಿವು ಮೂಡಲು ಸಾಧ್ಯವಿಲ್ಲದ ಮುಗ್ಧತೆ ಮತ್ತು ದಾಸ್ಯತನ ಅವರಲ್ಲಿ ಮನೆ ಮಾಡಿತ್ತು. ತಾನು ಕಷ್ಟಪಟ್ಟು ಊರ್ಜಿತ ಸ್ಥಿತಿಗೆ ತಂದ ಜಮೀನನ್ನು ಸಾಹುಕಾರ ಬಿಟ್ಟುಕೊಡು ಎಂದಾಗ ತಕ್ಷಣ ಬಿಟ್ಟುಕೊಟ್ಟು ಕೃತಜ್ಞತೆ ಸಲ್ಲಿಸುವ ಮನೋಭಾವ ಬೆಳೆದಿರುವುದು ಬೆರಗುತರುತ್ತದೆ. ತನ್ನ ಮಗನಿಗೆ ಆತನನ್ನು ಓದಿಸಲು ತಾನು ಕಷ್ಟಪಟ್ಟ

ಸಂಗತಿಯನ್ನು ಹೇಳುತ್ತಾ ಸ್ವಾಮಿನಿಷ್ಠೆಯ ಪರಾಕಾಷ್ಠೆ ವ್ಯಕ್ತವಾಗುತ್ತದೆ.

"ನೀನು ಯಾವುದಾದರೂ ಕೆಲಸ ಹಿಡಿದು ನಿನ್ನ ಅನ್ನ ನೀನು ನೋಡಿಕೊ, ಈ ಆಸ್ತಿ ಮನೆ ನಂಬಿಕೊಳ್ಳಬೇಡ, ಇದು ಎಂದಿದ್ದರೂ ಸಾಹುಕಾರರಿಗೆ ಹೋಗುವಂತಹದು......... ತಾನು ಬದುಕಿದ್ದರೆ ಸಾಹುಕಾರರಿಗೆ ಜಮೀನು ಒಪ್ಪಿಸಿ ಕಣ್ಣು ಮುಚ್ಚತ್ತೀನಿ......... ನಾನು ಚೆನ್ನಾಗಿದ್ದಾಂಗೆ ಸತ್ತರೆ ಅವರ ಜಮೀನು ಹಿಂತಿರುಗಿಸು.......... ಉಂಡ ಎಲೆಯ ಮೇಲೆ ಹೇಲಾಕೆ ಹೋಗಬೇಡ"[೨೯]

ತಾನು ಕಷ್ಟಪಟ್ಟು ಊರ್ಜಿತ ಸ್ಥಿತಿಗೆ ತಂದ ಜಮೀನಿನ ಬಗ್ಗೆ ವ್ಯಾಮೋಹವಿಲ್ಲ. ಇದು ವೈರಾಗ್ಯವಲ್ಲ ; ಸ್ವಾಮಿನಿಷ್ಠೆ. ಈ ಆಸ್ತಿಯನ್ನು ಸಾಹುಕಾರರಿಗೆ ತನ್ನ ಬದುಕಿನ ಅಂತ್ಯದೊಳಗೆ ಹಿಂತಿರುಗಿಸಬೇಕು, ಮಗ ಒಪ್ಪುತ್ತಾನೊ ಇಲ್ಲವೊ ಎಂಬ ಆತಂಕ. ಹಾಗ ಮಾಡದಿದ್ದರೆ ಅದು ಮಹಾಪಾಪ ಎಂಬ ಪ್ರಜ್ಞೆ ತಮ್ಮಯ್ಯನಂತವರಲ್ಲಿ ಬಲವಾಗಿ ಕೆಲಸ ಮಾಡುತ್ತದೆ. ಇಂತಹ ಪಾಪ ಪ್ರಜ್ಞೆಯೇ ಬಹುದೀರ್ಘಕಾಲ ಜಮೀನ್ದಾರಿ ಪದ್ಧತಿ ಉಳಿದು ಬಂದದ್ದಕ್ಕೆ ಕಾರಣ, ಹಾಗೆಯೇ ತನ್ನ ಶ್ರಮದ ಬಗ್ಗೆ ಅರಿವು ಬಾರದಿರಲು ಕಾರಣ. ಆದಕಾರಣ ಗೇಣಿದಾರರಲ್ಲಿ ಸಂಘಟನೆ ಸಾಧ್ಯವಾಗದೆ ಜಮೀನ್ದಾರಿಕೆ ನಿರಾಂತಕವಾಗಿ ಮುಂದುವರಿಯಲು ಸಾಧ್ಯವಾಗಿದ್ದು.

ಹೀಗೆ ತಮ್ಮಯ್ಯನಲ್ಲಿ ಈ ಭಾವನೆಗಳನ್ನು ಏಕೆ ಮೀರಲಿಕೆ ಸಾಧ್ಯವಾಗಲಿಲ್ಲವೆಂದರೆ, ಆತ ತನ್ನ ಸೀಮಿತ ಪ್ರಪಂಚದಿಂದ ಆಚೆ ಬಂದು ಜಗತ್ತನ್ನು ನೋಡಲಿಲ್ಲ. ಆದರೆ ಓದು ಕಲಿತ ಮಗನಲ್ಲಿ ಆ ಪಾಪ ಪ್ರಜ್ಞೆ ಕಾಡುವುದಿಲ್ಲ. ಆತನಂತವರಲ್ಲಿ ಜಾಗೃತಿ ಉಂಟಾಗುತ್ತದೆ. ಸಾಹುಕಾರಿಗೇ ವಾಪಾಸ್ಸು ಹೋಗುವುದಾದರೆ ಹೊಸ ಸಸಿನೆಟ್ಟು ಅದನ್ನು ಇನ್ನಷ್ಟು ಉತ್ತಮ ಪಡಿಸುವುದು ಏಕೆ ಎಂದು ಪ್ರಶ್ನಿಸುತ್ತಾನೆ. ಇದು ಅವನಿಗೆ ಆಧುನಿಕ ಶಿಕ್ಷಣದ ಮೂಲಕ ಮತ್ತು ಆ ಕಾಲಕ್ಕಾಗಲೇ ಗೇಣಿದಾರರ ಹೋರಾಟ ನಡೆಯುತ್ತಿದ್ದ ಸಂಗತಿಗಳಿಂದ ಬಂದ ಅರಿವು. ಮಗ ನ್ಯಾಯಯುತವಾಗಿ ಮಾಡುವ ಪ್ರಶ್ನೆ ಸ್ವಾಮಿನಿಷ್ಠೆ ತಮ್ಮಯ್ಯನಿಗೆ ಉದ್ಧಟತನವಾಗಿ ತೋರುತ್ತದೆ. ತನ್ನ ಮಗ ತನ್ನ ಒಡೆಯನಿಗೆ ಎಲ್ಲಿ ದ್ರೋಹವೆಸಗುತ್ತಾನೊ ಎಂಬ ಆತಂಕದಿಂದ ತನ್ನ ಹೆಂಡತಿಗೆ ತಾಕೀತು ಮಾಡುತ್ತಾನೆ.

"ನಾನು ಈಗಲೆ ನಿನಗೆ ಹೇಳಿರತೀನಿ, ನಾನು ನಿನಗಿಂತ ಮುಂಚೆ ಸತ್ತರೆ, ಜಮೀನು ಸಾಹುಕಾರರಿಗೆ ಬಿಟ್ಟುಕೊಡು......... ಸಾಹುಕಾರರ ಮನೆಯಲ್ಲಿ ಕೆಲಸ ಮಾಡಿಕೊಂಡಿರು".[೩೦] ಶೋಷಣೆಯ ಅರಿವೇ ಇಲ್ಲದಂತಹ ತಮ್ಮಯ್ಯನಂತಹ ಎಷ್ಟೊ ಮಂದಿ ಗೇಣಿದಾರರಾಗಿ ಸೇರಿ ಸಾಹುಕಾರರಿಗೆ ಜಮೀನನ್ನು ಉತ್ತಮಪಡಿಸಿಕೊಟ್ಟು, ಮದುವೆ, ಕಾಯಿಲೆಯಂತಹ ವೆಚ್ಚದ ಬಾಬತ್ತುಗಳಿಗೆ ಸಿಲುಕಿ ಸಾಲಗಾರರಾಗಿ, ಆ ಮೂಲಕ ಒಡೆಯರಿಗೇ ಜಮೀನನ್ನು ಒಪ್ಪಿಸಿ ಜೀತದಾರರಾಗಿ ಬದುಕಿದವರಿದ್ದಾರೆ.

ಈ ಕಾದಂಬರಿಯ ಘಟನೆಯ ಕಾಲಾವಧಿ ಗೇಣಿದಾರರ ಸಂಘಟನೆ, ಕಾಗೋಡು ಸತ್ಯಾಗ್ರಹ, ಅದರ ಪರಿಣಾಮವಾಗಿ ಭೂಸುಧಾರಣೆಯ ಕಾನೂನು ರೂಪಗೊಳ್ಳುತ್ತಿದ್ದ ಕಾಲ. ಇದರಿಂದ ಮಲೆನಾಡ ಪ್ರಾಂತ್ಯದಲ್ಲಿ ಒಡೆಯ–ಒಕ್ಕಲುಗಳ ಅದುವರೆಗಿನ ಸಂಬಂಧಗಳಲ್ಲಿ ಹೊಸ ಸಂಚಲನ ಉಂಟಾಗಿತ್ತು. ಸ್ವಲ್ಪ ಕಾನೂನಿನ ಅರಿವು ಇರುವಂತವರು, ಕಾಗೋಡು ಹೋರಾಟದ ಬಗ್ಗೆ ಅಷ್ಟೋ ಇಷ್ಟೋ ತಿಳಿದಂತವರು ಗೇಣಿದಾರರನ್ನು ಎಚ್ಚರಿಸುತ್ತಿದ್ದರು. (ಭೂಸುಧಾರಣೆಯ ಹರಿಕಾರ ಶಾಂತವೇರಿ ಗೋಪಾಲಗೌಡರು,

ಭೂಸುಧಾರಣೆಯ ರೂವಾದಿ ಶ್ರೀ ಕಡಿದಾಳ್ ಮಂಜಪ್ಪನಂತಹ ಧುರೀಣರು ಹುಟ್ಟಿದ್ದು ಈ ತೀರ್ಥಹಳ್ಳಿ ಪ್ರಾಂತ್ಯದಲ್ಲಿ. ಹಾಗಿದ್ದೂ ತಮ್ಮಯ್ಯನಂತಹ ಗೇಣಿದಾರರಿಗೆಲ್ಲ ಯಾಕೆ ಜಾಗೃತಿ ಮೂಡಲಿಲ್ಲ ಎಂಬುದರ ಬಗ್ಗೆ ಸಂಶೋಧನೆ ನಡೆಯಬೇಕಾಗಿದೆ. ಕಾಗೋಡಿನಂತಹ ಹೋರಾಟ ಇಲ್ಲಿ ನಡೆಯಲಿಲ್ಲ ನಿಜ. ಆದರೆ ಅದರ ಪ್ರಭಾವವಿತ್ತು ಎಂಬುದನ್ನು ಗಮನಿಸಬೇಕು.) ಹಾಗೆ ಈ ಕಾದಂಬರಿಯಲ್ಲಿ ಬರುವ ಹೈಕೋರ್ಟ್‌ಗೌಡ ತಮ್ಮಯ್ಯನಿಗೆ ಬೋಧನೆ ಮಾಡುವುದನ್ನು ನೋಡಬಹುದು.

"ಸಾಹುಕಾರರ ಹತ್ತಿರ ಸಾಲ ಮಾಡಿದೀನಿ ಅಂತಿ, ಸಾಹುಕಾರರಿಗೆ ಗೇಣಿ ಕೊಡುವುದನ್ನು ಕಡಿಮೆ ಮಾಡು.......... ಬೆಳೆ ಆಗಿದ್ದೇ ಕಡಿಮೆ ಅಂತೇಳು.......... ಸಾಹುಕಾರರು ಅದೇನು ಮಾಡುತ್ತಾರೆ ನೋಡಾನ"[೩೧] ಎಂದು ಸಾಹುಕಾರರಿಗೆ ಗೇಣಿ ನೀಡಲು ಸತಾಯಿಸುತ್ತಿರುವ ಸುತ್ತಮುತ್ತಲಿನ ಕೆಲವು ಉದಾಹರಣೆಗಳನ್ನು ಹೇಳಿ ಮನದಟ್ಟು ಮಾಡಲು ಪ್ರಯತ್ನಿಸುತ್ತಾನೆ. ಈ ಮಾತುಗಳು ಗೇಣಿದಾರರ ಜಾಗೃತಗೊಳ್ಳುವ, ಪ್ರತಿಭಟನೆಯ ಮನವನ್ನು ತಳೆಯಬೇಕಾದಂತಹವಾಗಿ ತಮ್ಮಯ್ಯ ದಂಪತಿಗಳಿಗೆ ತೋರುವುದಿಲ್ಲ. ಬದಲಿಗೆ ಒಡೆಯನಿಗೆ ಮೋಸ ಮಾಡುವ ಮೀರ್‌ಸಾದಕ್ ಗುಣಗಳಾಗಿ ಕಂಡುಬರುತ್ತವೆ. ಯಾಕೆ ತೀರ್ಥಹಳ್ಳಿ ಪ್ರಾಂತ್ಯದಲ್ಲಿ ಕಾಗೋಡಿನಂತಹ ಗೇಣಿದಾರನ ಹೋರಾಟ ನಡೆಯಲಿಲ್ಲ, ಗೇಣಿದಾರರ ಸಂಘಟನೆ ಯಾಕೆ ಗಟ್ಟಿಯಾಗಲಿಲ್ಲ ಎಂದರೆ ತಮ್ಮಯ್ಯನಂತಹ ಗೇಣಿದಾರರ ಮನೋಭಾವವೂ ಕಾರಣವಾಗಿತ್ತು ಎಂಬುದನ್ನು ಕಾದಂಬರಿ ದಾಖಲಿಸುತ್ತದೆ.

ಗೇಣಿದಾರರ ಸಮಸ್ಯೆಗೆ ಸರಕಾರ ಕಾನೂನು ರೂಪಿಸುತ್ತದೆ ಎಂಬ ಸೂಚನೆ ದೊರೆಯುತ್ತಿದ್ದಂತೆಯೇ ಜಮೀನ್ದಾರರೆಲ್ಲ ಎಚ್ಚೆತ್ತು ಒಕ್ಕಲೆಬ್ಬಿಸುವ ಕಾರ್ಯಗಳಲ್ಲಿ ತೊಡಗಿದರು. 'ಉಳುವವನೆ ಹೊಲದೊಡೆಯ' ಎಂಬ ಧ್ಯೇಯ ವಾಕ್ಯ ಜಮೀನ್ದಾರರನ್ನು ಆತಂಕಕ್ಕೆ ಒಳಪಡಿಸಿತ್ತು. ಕೊಡಿಗೆ ಜಮೀನಿನಲ್ಲಿ ಒಳ್ಳೇ ಬೆಳೆ ಬರುತ್ತಿರುವ ಸಂದರ್ಭದಲ್ಲಿ ತಮ್ಮಯ್ಯನ ಪಾಲಾಗುವುದು ಸಾಹುಕಾರರಿಗೆ ಅಪಥ್ಯವಾಗಿತ್ತು. ತಮ್ಮಯ್ಯನ ಮಗ ಬೊಮ್ಮಯ ಸರಕಾರಿ ನೌಕರಿಯಲ್ಲಿರುವುದರಿಂದ ಆತನಿಗೆ ನಿನ್ನ ತಂದೆ-ತಾಯಿಗಳನ್ನು ನೀನಿರುವಲ್ಲಿಗೆ ಕರೆದುಕೊಂಡು ಹೋಗಿ ನೋಡಿಕೊ, ಅದು ನಿನ್ನ ಕರ್ತವ್ಯವೆಂದು ಬುದ್ಧಿ ಹೇಳುವ ನೆಪದಲ್ಲಿ ಬಿಡಿಸಲು ಪ್ರಯತ್ನಿಸಿದರು. ತಮ್ಮಯ್ಯನ ಅಣ್ಣ ಪುಟ್ಟಯ್ಯ ಆಸ್ತಿ ಉಳಿಸಿಕೊಳ್ಳಬೇಕೆಂಬ ಹಿನ್ನಲೆಯಲ್ಲಿ ತಮ್ಮನಿಗೆ ತಿಳುವಳಿಕೆ ಹೇಳುತ್ತಾನೆ –

"ಗೇಣಿಗೆ ಜಮೀನು ಮಾಡತ ಇದ್ದವರು ಅಮಲ್ದಾರರಿಗೆ ಡಿಕ್ಲೇಶನ್ (ಡಿಕ್ಲರೇಶನ್) ಕೊಟ್ಟರೆ ಜಮೀನು ಅವರಿಗೆ ಆಗತದಂತೆ.......... ಕಾಗೋಡು ಸತ್ಯಾಗ್ರಹ ಆದದ್ದು ಅದಕ್ಕೆ ಅಂತೆ......... ಡಿಕ್ಲೇಶನ್ ಕೊಡು.......... ನಿನಗೆ ಈ ಜಮೀನು ಮನೆ ಆಗತದೆ. ಮೂಲತ ಈ ಜಮೀನು ನಮದೆ, ನಮಗೆ ವಾಪಾಸ್ಸು ಜಮೀನು ಬಂದಂಗೆ ಆಗತದೆ".[೩೨]

ಈ ಮಾತು ತಮ್ಮಯ್ಯನಿಗೆ ದಾಯಾದಿತನದ ಮಾತಾಗಿ ತೋರತ್ತದೆಯೇ ಹೊರತು ಅದರಲ್ಲಿನ ಸತ್ಯವನ್ನು ಕಾಣುವ ನೋಟವಿಲ್ಲ ; ವಿವೇಚನೆಯಿಲ್ಲ. ನಾಳೆ ಆಸ್ತಿಯೆಲ್ಲ ಹೊಡೆದುಕೊಂಡು ಮತ್ತೆ ತನ್ನನ್ನು ಬೀದಿಪಾಲು ಮಾಡುವ ಉಪಾಯವೆಂದೇ ಮೌಢ್ಯದ ಮನಸ್ಸು ತಿಳಿಯುತ್ತದೆ. ಹಾಗಿದ್ದೂ ತಮ್ಮಯ್ಯನ ಒಳಮನಸ್ಸು ಜಿಜ್ಞಾಸೆ ಮಾಡುತ್ತದೆ. ಮೂವತ್ತು ವರ್ಷದಿಂದ ತಾನು ಮಾಡುತ್ತಿರುವ

ಜಮೀನು ತನ್ನದು ಆಗಬಾರದೆ ಎಂದು ತರ್ಕವೊಂದು ಮನದಲ್ಲಿ ಮೂಡಿ ಮರೆಯಾಗುತ್ತದೆ. ಜಮೀನಿಗೆ ಡಿಕ್ಲರೇಶನ್ ಕೊಟ್ಟರೆ ಜಮೀನು ತನ್ನದಾಗುತ್ತದೆ. ಎಂದು ಆಸೆ ಮೂಡಿದರೂ ಒಂದು ಕಡೆ ನೆಲೆ ನಿಲ್ಲಲು ಅನುಕೂಲ ಮಾಡಿಕೊಟ್ಟವರ ಬೆನ್ನಿಗೆ ಚೂರಿ ಹಾಕಿದಂತಲ್ಲವೆ ಎಂದು ಆ ಆಸೆಯನ್ನು ಈ ಧರ್ಮಸೂಕ್ಷ್ಮ ಮುರಿದುಹಾಕುತ್ತದೆ.

ಸಾಹುಕಾರನ ಜೀತದಾಳು ಚೀಂಕ್ರ ಗೂಢಾಚಾರಿಯಂತೆ ಬಂದು ತಮ್ಮಯ್ಯನ ಮನವನ್ನು ಪರೀಕ್ಷಿಸಲು ಹೀಗೆ ಕೇಳುತ್ತಾನೆ "ಈಗ ವಂದು ಹೊಸ ಕಾನೂನು ಒಂದಿತೆಂಬರು ನಿಮಗೆ ಗೊತ್ತಿತಾ" ಎಂಬ ಪ್ರಶ್ನೆಗೆ ಯಾವುದು ಮೆಟ್ಟಿದವಂದೆ ಎಕ್ಕಡವಾ?.......... ನೋಡಲ್ಲಿ ನಂದು ಎಕ್ಕಡ ಇದೆ. ಅದನ್ನು ನೀನು ಹಾಕ್ಕೊಂಡು ಹೋದರೆ ಅದು ನಿಂದೆ ಎಂದು ಹೇಳಿಕೊಂಡು ಓಡಾಡಬಹುದು. ಹಾಂಗಿದ್ದ ಕಾನೂನು ಉಳುವವನೆ ಹೊಲದೊಡೆಯ ಅನ್ನೊ ಕಾನೂನು"[೩೩]

ಉಳುವವನೆ ಹೊಲದೊಡೆಯ ಎಂಬ ಕಾನೂನು ತಮ್ಮಯ್ಯನಂತವರಿಗೆ ಧರ್ಮದ್ರೋಹವಾಗಿ ತೋರುತ್ತದೆ. ಅದನ್ನು ಪರಿಭಾವಿಸುವ ರೀತಿ ಗೇಣಿದಾರರ ಅಜ್ಞಾನದ ಬಗ್ಗೆ ಭಯ ಹುಟ್ಟಿಸುತ್ತದೆ. ಭೂಸುಧಾರಣೆಯ ಬಗ್ಗೆ ತಮ್ಮಯ್ಯನಂತಹ ಗೇಣಿದಾರರಲ್ಲಿ ಮೂಡುವ ಧರ್ಮದ್ರೋಹ, ಸ್ವಾಮಿದ್ರೋಹ, ಪಾಪಪ್ರಜ್ಞೆಯಾಗಿ ಕಾಡಿದ್ದರಿಂದಲೇ ಭೂಸುಧಾರಣಾ ಕಾನೂನು ಸಂಪೂರ್ಣ ಯಶಸ್ಸು ಕಾಣಲು ಸಾಧ್ಯವಾಗಲಿಲ್ಲ. ಗೇಣಿದಾರರ ಇಂತಹ ಪ್ರತಿಕ್ರಿಯೆ ಒಡೆಯರಿಗೆ ವರದಾನವಾದುದುಂಟು.

ಆದರೆ ಈ ಕಾದಂಬರಿಯಲ್ಲಿ ಜಮೀನ್ದಾರನೂ ಇಂತಹ ಧರ್ಮಸೂಕ್ಷ್ಮಕ್ಕೆ ಒಳಗಾದುದು ವಿಶೇಷವೆನಿಸುತ್ತದೆ. ಇತರೇ ಗೇಣಿದಾರರು ಡಿಕ್ಲರೇಶನ್ ಕೊಡಲು ತುದಿಗಾಲ ಮೇಲೆ ನಿಂತಿರುವಾಗ ಗೇಣಿ ಕೊಡದೆ ಸತಾಯಿಸುವ, ಸಬೂಬು ಹೇಳುವ ಗೇಣಿದಾರರು ಇರುವಾಗ ತಮ್ಮಯ್ಯನೊಬ್ಬನೇ ಎಲ್ಲ ರೀತಿಯಿಂದಲೂ ನಿಷ್ಠೆಯಿಂದ ಗೇಣಿ ನೀಡುತ್ತ ಬಂದಿದ್ದಾನೆ. ಅವನೊಬ್ಬ ಡಿಕ್ಲರೇಶನ್ ಕೊಡುವುದು ಬೇಡ ಎಂದು ಹೇಳುವುದು ಸರಿಯೇ? ಅಥವಾ ನಿರಾಯಾಸವಾಗಿ ಬರುವ ಗೇಣಿಯನ್ನು ಕಳೆದುಕೊಳ್ಳುವುದೇ? ಎಂಬ ಜಿಜ್ಞಾಸೆಗೆ ಒಳಗಾಗುತ್ತಾರೆ.

ಹಾಗಿದ್ದೂ ತಾನು ತನ್ನ ತಮ್ಮನು ಆಸ್ತಿಯನ್ನು ಭಾಗ ಮಾಡಿಕೊಂಡಿರುವುದಾಗಿಯೂ, ಒಕ್ಕಲುಗಳ ಜಮೀನನ್ನೆಲ್ಲಾ ಬಿಡಿಸಿಕೊಂಡು ತಾವೇ ನೋಡೋಣವೆಂಬ ನಿರ್ಧಾರಕ್ಕೆ ಬಂದಿರುವುದಾಗಿಯೂ ತಿಳಿಸಿದಾಗ ತಮ್ಮಯ್ಯ ಯಾವ ಅಳಕೂ ತೋರದೆ ಸಂತೋಷವಾಗಿ ಬಿಟ್ಟು ಕೊಡುವುದಾಗಿಯೂ ತಮ್ಮ ತೋಟಗದ್ದೆ ಕಾಯ್ದುಕೊಂಡು ಆಳುಗಳಂತೆ ಜೀವನ ನಡೆಸುವುದಾಗಿಯೂ ಭರವಸೆ ನೀಡುತ್ತಾನೆ.

ಕಷ್ಟಕಾಲದಲ್ಲಿ ತನಗೆ ಅನ್ನಕೊಟ್ಟವರು ತಮ್ಮನ್ನು ಈ ಜನ್ಮದಾಗ ಮರೆಯುವುದಿಲ್ಲವೆಂದು ಈಗೇನೊ ಹೊಸ ಕಾನೂನು ಬಂದಿರುವಂತೆ 'ಮೆಟ್ಟಿದವರಿಗೆ ಚಪ್ಪಲಿ ಅಂತ' ಡಿಕ್ಲರೇಶನ್ ಕೊಟ್ಟರೆ ಜಮೀನು ಅವರಿಗೆ ಆಗುತ್ತದೆ ಅಂತೆ. ನಾನು ಕೊಡುವುದಿಲ್ಲವೆಂದು, ಬದುಕಿರುವವರೆಗೆ ಗೇಣಿ ಕೊಟ್ಟುಕೊಂಡು ಹೋಗ್ತೇನೆ ಎಂದು, ತಾನು ಸತ್ತ ನಂತರ ನಿಮ್ಮದೇ ಈ ಜಮೀನು ಎಂದು ಆತ ಹೇಳುವಲ್ಲಿ ಆತನ ಅಂತರಂಗದ ಆಳದಲ್ಲಿ ಆ ಜಮೀನು ತನ್ನದಾಗಬೇಕೆಂಬ ಆಸೆಯೇನೊ ಇಣುಕುತ್ತದೆ. ಆದರೆ ಸ್ವಾಮಿನಿಷ್ಠೆ ಅದನ್ನು ಅದುಮುತ್ತದೆ. ಡಿಕ್ಲೇರೇಶನ್ ಕೊಡುವುದರ ಬಗ್ಗೆ ಅಣ್ಣನ ಮಕ್ಕಳಿಂದ ಒತ್ತಾಯ, ಸ್ವಂತ

ಮಗನಿಂದ ಒತ್ತಾಯ, ಪುಟ್ಟೇಗೌಡನ ಆರ್ಭಟ ಯಾವುದೂ ತಮ್ಮಯ್ಯನ ಸ್ವಾಮಿನಿಷ್ಠೆಯನ್ನು ಕದಲಿಸುವುದಿಲ್ಲ. ಆದರೆ ಸಾಹುಕಾರ ನಾಗಪ್ಪಯ್ಯ ತಮ್ಮ ಕಾಲವಾದ ನಂತರ ಈ ಜಮೀನು ತಮ್ಮಯ್ಯನಿಗೇ ಎಂದು ಬರೆದಿಟ್ಟಿದ್ದರು. ಇಂತಹ ಉದಾರ ಮನಸ್ಸಿನ ಕೆಲವು ಸಾಹುಕಾರರು ಇದ್ದರೆಂಬುದನ್ನು ಈ ಕಾದಂಬರಿ ಸೂಕ್ಷ್ಮವಾಗಿ ತಿಳಿಸುತ್ತದೆ. ಆದ್ದರಿಂದ ಜಮೀನ್ದಾರ ಮತ್ತು ಗೇಣಿದಾರನ ನಡುವೆ ಇಲ್ಲಿ ಸಂಘರ್ಷವೇ ಏರ್ಪಡುವುದಿಲ್ಲ. ಹಾಗೆಂದೂ ಯಥಾಸ್ಥಿತಿಯನ್ನು ಕಾದಂಬರಿ ಬೆಂಬಲಿಸುವುದಿಲ್ಲ. ಜಮೀನ್ದಾರರೊಳಗೂ ಮಾನವೀಯತೆ ಇರುವುದನ್ನು ಸೂಚಿಸುತ್ತದೆ.

ಡಾ. ಯು.ಆರ್.ಅನಂತಮೂರ್ತಿ ಅವರ ದಿವ್ಯ ಕಾದಂಬರಿಯಲ್ಲಿ ಭೂಸುಧಾರಣೆ ಮತ್ತು ಭೂಮಿ ಹಂಚಿಕೆಯ ವಿಚಾರಗಳು ಚಿತ್ರಿತವಾಗಿವೆ. ಈ ಕಾದಂಬರಿಯಲ್ಲಿ ಬರುವ ದೇವನಹಳ್ಳಿ ಸಾಹುಕಾರ ಮಂಜಯ್ಯ ಆ ಪ್ರಾಂತ್ಯದ ಪ್ರಬಲ ಜಮೀನ್ದಾರ. ಆದರೆ ಇದುವರೆಗೆ ನಾವು ಗಮನಿಸಿದ ಜಮೀನ್ದಾರನಂತಲ್ಲ. ಜಮೀನ್ದಾರರ ಮನೋಭಾವದಲ್ಲಿ ಸ್ಥಿತ್ಯಂತರವಾಗುತ್ತಿದ್ದ ಸಂಧಿಕಾಲದಲ್ಲಿ ಬಂದವನು. ಗಾಂಧೀಜಿಯ ಪ್ರಭಾವಕ್ಕೆ ಒಳಗಾದ ಈ ಕಾಂಗ್ರೇಸ್ ಕಾರ್ಯಕರ್ತ ಸ್ವಲ್ಪ ಉದಾರ ಮನೋಭಾವದ ಸಮಾಜದಲ್ಲಿ ಸುಧಾರಣೆ ಬಯಸುವ ಉದಾರೀಮನೋಭಾವದ ಜಮೀನ್ದಾರ. ಜಮೀನ್ದಾರಿಕೆಯ ಹಿಡಿತ ಕಾಲಗತಿಯಲ್ಲಿ ಸಡಿಲವಾಗುತ್ತಿದ್ದಂತೆ, ರಾಜಕೀಯ ಹಿಡಿತ ಸಾಧಿಸಲು, ಜನನಾಯಕ ವರ್ಚಸ್ಸನ್ನು ಬೆಳಸಿಕೊಳ್ಳಬೇಕಾದ ಹಿನ್ನೆಲೆಯಲ್ಲಿ ಮಂಜಯ್ಯನಂತ ಜಮೀನ್ದಾರ ಉದಾರಿಯಂತೆ ಕಾಣಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದಕಾರಣ ಈತ ಇತರ ಜಮೀನುದಾರರಂತೆ ಕ್ರೂರಿಯಲ್ಲ ; ಜಮೀನು ಸ್ವಾಧೀನಕ್ಕೆ ತಂದುಕೊಳ್ಳಲು ಒಕ್ಕಲೆಬ್ಬಿಸುವುದಾಗಲಿ, ಗೇಣಿಕೊಡದ ಗೇಣಿದಾರನ ಮೇಲೆ ದಾವಾ ಹಾಕುವುದಾಗಲಿ, ಜಪ್ತಿ ಮಾಡಿಸುವುದಾಗಲಿ ಅವರ ವ್ಯವಹಾರದ ಕ್ರಮವಾಗಿರಲಿಲ್ಲ. ಗೇಣಿದಾರರು ಕಷ್ಟದಲ್ಲಿದ್ದಾಗ ಬಾಕಿಯ ಮೇಲಿನ ಬಡ್ಡಿಯನ್ನು ಮನ್ನಾಮಾಡುವಂತವರು. ಇವರ ಈ ಧಾರಾಳ ತನವನ್ನು ಜನ ಮೆಚ್ಚಿಕೊಳ್ಳುತ್ತಿದ್ದರೆ, ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವ ಇತರೆ ಜಮೀನ್ದಾರರು ಮಂಜಯ್ಯನ ನಡವಳಿಕೆಯನ್ನು ಬೇರೆ ರೀತಿ ವ್ಯಾಖ್ಯಾನಿಸುತ್ತಾರೆ.

"ಮಂಜಯ್ಯನಿಗೇನು? ಜಮೀನಿನಿಂದಲೇ ಅವರ ವಹಿವಾಟುಗಳು ನಡೆಯಬೇಕಿಲ್ಲ. ಅವರೀಗ ಕಾರ್ಖಾನೆ ಮಾಲಿಕರು........ ಮನೆಗಳಿಂದ ಬಾಡಿಗೆ....... ಸಿನಿಮಾ ಥಿಯೇಟರು....... ಮಳೆ ಬರಲಿ ಬಾರದಿರಲಿ........ ಸಂಪಾದನೆಯೇನಾದರೂ ಕಡಿಮೆಯಾಗುವುದೆ?........ ಗೇಣಿಯ ವಿಷಯದಲ್ಲಿ ಅವರು ತೋರುವ ಧಾರಾಳದಿಂದ ರಾಜಕೀಯವಾಗಿ ಅವರಿಗಾದ ಲಾಭ ಸಾಮಾನ್ಯವೇ?"[೩೪]

ಈ ವ್ಯಾಖ್ಯಾನದಲ್ಲಿ ಸತ್ಯಾಂಶವಿದೆ. ಕೆಲವು ಜಮೀನ್ದಾರರು ಗಾಂಧೀಜಿಯ ಪ್ರಭಾವದಿಂದ ಸಮಾಜವಾದಿ ಚಿಂತನೆಯಿಂದ ಉದಾರಿಗಳಾದದ್ದು ಇರಬಹುದು. ಹಲವು ಉದಾರತೆಯ ಮನವುಳ್ಳ ಜಮೀನ್ದಾರರ ಹಿಂದೆ ಇದ್ದ ಪ್ರಬಲ ಉದ್ದೇಶ ರಾಜಕೀಯ ಲಾಭ. ಹಾಗೆ ಮಂಜಯ್ಯನ ಉದಾರತೆಯ ಈ ಅಂಶವು ಸೇರಿಕೊಂಡಿದೆ.

ಸಾಹುಕಾರ ಮಂಜಯ್ಯನ ಗೇಣಿದಾರ ಪುಟ್ಟೇಗೌಡ ಗೇಣಿದಾರರ ಸಂಘದಲ್ಲಿ ಕ್ರಿಯಾಶೀಲ ವ್ಯಕ್ತಿ. ಗೇಣಿದಾರರ ಪರ ವಾದಿಸುವ ಪುಟ್ಟೇಗೌಡ ಮಂಜಯ್ಯನಿಗೆ ಕೊಡಬೇಕಾದ ಬಾಕಿ

ಉಳಿಸಿಕೊಂಡವನಲ್ಲ. 'ಎಲ್ಲ ಗೇಣಿದಾರರೂ ನಿನ್ನ ಹಾಗಿದ್ದರೆ ಸಮಸ್ಯೆಯೇ ಇರುತ್ತಿರಲ್ಲಿ' ಎಂದು ಮಂಜಯ್ಯ ಹೇಳಿದರೆ 'ಎಲ್ಲ ಜಮೀನುದಾರರೂ ನಿಮ್ಮ ಹಾಗಿದ್ದರೆ ಈ ಸಮಾಜದಲ್ಲಿ ಪ್ರಗತಿಯ ಆಗುತ್ತಿರಲಿಲ್ಲ'[೩೫] ಎಂದು ನಗುವ ಮಾತಿನಲ್ಲಿ ಸಮಾಜದಲ್ಲಿ ಘರ್ಷಣೆಯಿಲ್ಲದೆ ಹೊಸತು ಹುಟ್ಟಲಾರದು, ಯಥಾಸ್ಥಿತಿ ಪಲ್ಲಟವಾಗಲಾರದು. ಗೇಣಿದಾರನ ನಿಷ್ಠೆ, ಜಮೀನ್ದಾರನ ಉದಾರತೆ ಎರಡೂ ಸೇರಿದ್ದರೆ ಯಥಾಸ್ಥಿತಿ ಮುಂದುವರೆದು ಗೇಣಿದಾರ ಗೇಣಿದಾರನಾಗಿಯೇ ಉಳಿದು ಬಿಡುತ್ತಿದ್ದ. ಆದ್ದರಿಂದ ಸಂಘರ್ಷಗಳು ಸಮಾಜ ಪರಿವರ್ತನೆಗೆ ಅಗತ್ಯ

ಮಂಜಯ್ಯನ ಮಗ ಘನಶ್ಯಾಮ ದೇಶ-ವಿದೇಶಗಳಲ್ಲಿ ವ್ಯಾಸಂಗ ಮಾಡಿದ್ದರಿಂದ ಭಾರತೀಪುರ ಜಗನ್ನಾಥನಂತೆ ಜಮೀನ್ದಾರಿ ಪದ್ಧತಿಗೆ ವಿರೋಧವಾದ ರೀತಿಯಲ್ಲಿ ನಡೆದುಕೊಳ್ಳುತ್ತಾನೆ. ಆತ ಒಟ್ಟು ಸಮಾಜದ ಏಳಿಗೆಯ ಬಗ್ಗೆ ಕಾಳಜಿ ಹೊಂದಿದವನು. ತನ್ನ ತಂದೆಯು ಗೇಣಿ ವಸೂಲಿಯ ವಿಷಯದಲ್ಲಿ ಕ್ರೂರವಾಗಿ ನಡೆದುಕೊಂಡಿಲ್ಲದ ಬಗ್ಗೆ ಮೆಚ್ಚುಗೆಯಿದ್ದರೂ ತನ್ನ ವರ್ಗದ ಹಿತವನ್ನು ಬಿಟ್ಟುಕೊಡಲಾರದ ಬಗ್ಗೆ ಬೇಸರವಿದೆ. ಆದಕಾರಣ ಗೇಣಿದಾರರನ್ನೆಲ್ಲ ಕರೆದು ತನ್ನ ನಿರ್ಧಾರವನ್ನು ಪ್ರಕಟಿಸುತ್ತಾನೆ.

"ಜಮೀನುದಾರನಾಗಿ ನಾನು ನನ್ನ ಗೇಣೀದಾರರನ್ನು ಮುಕ್ತರನ್ನಾಗಿ ಮಾಡಲಾರೆ. ದಾಖಲೆಯಲ್ಲಿ ಗೇಣಿದಾರನಾದವನೊಬ್ಬ ತನ್ನ ಗೇಣಿಯ ಜಮೀನನ್ನು ಇನ್ನೊಬ್ಬರಿಗೆ ಗೇಣಿಗೆ ಕೊಟ್ಟಿರುತ್ತಾನೆ. ಆದ್ದರಿಂದ ಭೂ ಹಂಚಿಕೆ ಕಾನೂನಿನ ಅಡಿಯಲ್ಲೇ ಜಾರಿಯಾಗತಕ್ಕದ್ದು. ನಿಜವಾಗಿ ಉಳುವಾತ ಜಮೀನಿನ ಒಡೆಯನಾಗತಕ್ಕದ್ದು".[೩೬]

ಇಲ್ಲಿ ಒಂದು ಕುತೂಹಲದ ಸಂಗತಿ ಗಮನಿಸಬಹುದು ಕೆಲವು ಗೇಣಿದಾರರು ಸಾಹುಕಾರನಿಂದ ಗೇಣಿಗೆ ಜಮೀನೂ ಪಡೆದರೂ, ತಾನು ಉತ್ತಿ ಬಿತ್ತು ಬೆಳೆಯದೆ ಇನ್ಯಾರಿಗೂ ಗೇಣಿಗೆ ಕೊಟ್ಟಿರುವಂತಹದೂ ಇದೆ. ಒಂದು ಕಡೆ ಗೇಣಿದಾರ ಮತ್ತೊಂದು ಕಡೆ ಜಮೀನ್ದಾರನಾಗಿರುತ್ತಿದ್ದ. ಇಂತಹವರನ್ನು ಘನಶ್ಯಾಮ ವಿರೋಧಿಸುತ್ತಿದ್ದ. ಅಲ್ಲದೆ ಈ ಜಮೀನಿನಿಂದ ಬರುವ ಗೇಣಿಯನ್ನು ಒಂದು ಟ್ರಸ್ಟನ್ನು ರಚಿಸಿಕೊಂಡು ಅದರಲ್ಲಿ ಇಡುವಂತೆ ಮಾಡಬೇಕೆಂಬುದು ಅವನ ಉದ್ದೇಶವಾಗಿತ್ತು. ಇದರಿಂದ ಆತನಿಗೆ ಬಯಸಿಯೋ ಅಥವಾ ಬಯಸದಂತೆಯೋ ರಾಜಕೀಯದಲ್ಲಿ ಯಶಸ್ಸು ದೊರೆಯುವುದನ್ನು ಊಹಿಸಬಹುದು. ಶಾಸ್ತ್ರಿಗಳು ಅದನ್ನು ಹೀಗೆ ವ್ಯಾಖ್ಯಾನ ಮಾಡುತ್ತಾರೆ.

"ಈಗಿವನು ಮಾಡುತ್ತಿರುವ ಗೇಣಿಯ ತ್ಯಾಗವು ಮುಂದೆ ಇವನಿಗೆ ದೊಡ್ಡ ಆಸ್ತಿಯಾಗಿ ಬಿಡುತ್ತದೆ. ಕಳೆದುಕೊಂಡುದ್ದಕ್ಕಿಂತ ಹೆಚ್ಚನ್ನು ಗಳಿಸುತ್ತಾನೆ. ಹಣವಾಗಿ ಹೋದ್ದು ಅಧಿಕಾರವಾಗಿ ಹಿಂದಕ್ಕೆ ಬರುತ್ತದೆ"[೩೭]

ಈ ರೀತಿ ಜನ ಸಮೂಹದ ಮೇಲೆ ಸ್ಥಾಪಿಸಿಕೊಳ್ಳುವ ಅಧಿಕಾರದಿಂದ ಲೋಕಕ್ಕೆ ಒಳ್ಳೆಯದಾದರೆ ಆತನೆ ಜನನಾಯಕ. ಇಂತಹ ಪರಿವರ್ತನೆಯನ್ನು ಸಮಾಜ ಬಯಸುತ್ತದೆ.

ಇದುವರೆಗೆ ಚರ್ಚಿಸಿದಂತೆ ಮಲೆನಾಡ ಪರಿಸರದಲ್ಲಿ 'ಬಯಲುಸೀಮೆ'ಯ ಹಾಗೆ ಸಾವಿರಾರು ಎಕರೆಗಳ ಭೂಮಾಲಿಕರು ಇವರಾಗಿರಲಿಲ್ಲ. ನೂರಾರು ಎಕರೆಗಳ ವಾರಸುದಾರರೆ ಇಲ್ಲಿ ದೊಡ್ಡ ಜಮೀನ್ದಾರರು. ಬ್ರಾಹ್ಮಣರು, ಲಿಂಗಾಯಿತರು, ಧಾರ್ಮಿಕ ಮಠಗಳು ಮತ್ತು ಒಕ್ಕಲಿಗ ಸಮುದಾಯಕ್ಕೆ

ಸೇರಿದವರು ಸಾಮಾನ್ಯವಾಗಿ ಜಮೀನ್ದಾರರಾಗಿದ್ದವರು. ಮೇಲುವರ್ಗದ ಬಡವರು ಮತ್ತು ಶೂದ್ರಾದಿ ಸಮುದಾಯದ ಜನರೆಲ್ಲ ಒಕ್ಕಲುಗಳಾಗಿಯೂ ಹಾಗೂ ತಳ ಸಮುದಾಯದವರೆಲ್ಲ ಜಮೀನ್ದಾರರ, ಒಕ್ಕಲು ಮನೆಗಳ ಕೃಷಿ ಕಾರ್ಮಿಕರಾಗಿಯು ಇರುವಂತವರಾಗಿದ್ದರು. ಬ್ರಾಹ್ಮಣ, ಲಿಂಗಾಯಿತ ಸಮುದಾಯಕ್ಕೆ ಸೇರಿದ ಜಮೀನ್ದಾರರು ಮತ್ತು ಮಠಗಳು ದೊಡ್ಡ ಜಮೀನ್ದಾರಿ ವಲಯದಲ್ಲಿ ಬರುತ್ತವೆ. ಒಕ್ಕಲಿಗ ಸಮುದಾಯದಲ್ಲಿ ಅಂತಹ ದೊಡ್ಡ ಜಮೀನ್ದಾರರು ವಿರಳವಾಗಿದ್ದರು ಎಂದೇ ಹೇಳಬಹುದು.

ಕಥಾಸಾಹಿತ್ಯದಲ್ಲಿ ಗಮನಿಸಿದಂತೆ ನರಸಿಂಹದೇವರು (ಅವಸ್ಥೆ), ಕಲ್ಲೂರು ಮಂಜಯ್ಯ(ಮಲೆಗಳಲ್ಲಿ ಮದುಮಗಳು), ದೇವನಹಳ್ಳಿ ಮಂಜಯ್ಯ (ದಿವ್ಯ), ಸೀಗದಾಳು ನಾಗಪ್ಪಯ್ಯ (ನಂಬಿಕೆಟ್ಟವರಿಲ್ಲವೊ) ಇವರೆಲ್ಲಾ ಆಗಿನ ಕಾಲದ ಶ್ರೀಮಂತ ಜಮೀನ್ದಾರರನ್ನು ಪ್ರತಿನಿಧಿಸುವ ಪಾತ್ರಗಳಾಗಿವೆ. ಕಾನೂರು ಚಂದ್ರೇಗೌಡ (ಕಾನೂರು ಹೆಗ್ಗಡತಿ), ಬೆಟ್ಟಳ್ಳಿ ಕಲ್ಲೇಗೌಡ, ಕೋಣೂರು ರಂಗಪ್ಪಗೌಡ, ಸಿಂಭಾವಿ ಭರಮೈ ಹೆಗಡೆ (ಮಲೆಗಳಲ್ಲಿ ಮದುಮಗಳು) ಇವರೆಲ್ಲಾ ಮಧ್ಯಮ ವರ್ಗದ ಜಮೀನ್ದಾರರನ್ನು ಪ್ರತಿನಿಧಿಸುವ ಪಾತ್ರಗಳಾಗಿವೆ.

ಈ ಕಥಾಸಾಹಿತ್ಯದಲ್ಲಿ ಬ್ರಾಹ್ಮಣ ಮಠಗಳ, ಬ್ರಾಹ್ಮಣರ, ಒಕ್ಕಲಿಗ ಸಮುದಾಯಕ್ಕೆ ಸೇರಿದ ಜಮೀನ್ದಾರರ ಚಿತ್ರಣ ಬರುತ್ತದೆಯೇ ಹೊರತು ಎಲ್ಲಿಯೂ ಲಿಂಗಾಯಿತ ಮಠಗಳ, ಜಮೀನ್ದಾರರ ಚಿತ್ರಣವನ್ನು ಕಾಣುವುದಿಲ್ಲ. ತೀರ್ಥಹಳ್ಳಿಯಂತ ಮಲೆನಾಡ ಪ್ರಾಂತ್ಯದಲ್ಲಿ ಕಾಸರವಳ್ಳಿ, ಕಿತ್ತಂದೂರು, ಶೀನಾರ್ಳ್ಳಿ ಸಾಹುಕಾರರೆಂಬ ದೊಡ್ಡ ಜಮೀನ್ದಾರ ಮನೆತನಗಳೂ, ಪುತ್ತಿಗೆಮಠ, ರಾಮಚಂದ್ರಾಪುರದಂತಹ ಮಠಗಳನ್ನು ಜಮೀನ್ದಾರಿ ಹಿನ್ನಲೆಯಲ್ಲಿ ಇದ್ದಂತಹವನ್ನು ಕಾಣಬಹುದು. ದೇವಂಗಿ, ಅರಮನೆಕೇರಿ, ಕನ್ನಂಗಿ ಮುಂತಾಗಿ ಒಕ್ಕಲಿಗ ಸಮುದಾಯದ ಜಮೀನ್ದಾರಿ ಮನೆತನಗಳನ್ನು ಗಮನಿಸಬಹುದು. ಹಾಗೆ ಬಾಂಡ್ಯ, ಹೊದಲ, ತ್ಯಾನಂದೂರು ಸಾಹುಕಾರರ ಮನೆತನಗಳನ್ನು ಮಳಲಿಮಠ, ಉದ್ಧಾದೇವರ ಮಠದಂತಹ ಲಿಂಗಾಯಿತ ಸಮುದಾಯಕ್ಕೆ ಸೇರಿದ ಜಮೀನ್ದಾರಿ ವಲಯದಲ್ಲಿ ಕಾಣಬಹುದು. ಈ ಸಮುದಾಯದ ಹಿನ್ನೆಲೆಯಲ್ಲಿ ಜಮೀನ್ದಾರಿ ಚಿತ್ರಣ ಮಲೆನಾಡ ಸಾಹಿತ್ಯ ವಲಯದೊಳಗೆ ಬಾರದಿದ್ದರೂ ಒಟ್ಟು ಎಲ್ಲ ಸಮುದಾಯದ ಜಮೀನ್ದಾರರ, ಮಠಗಳ ಭೂಮಾಲಿಕ ವ್ಯವಸ್ಥೆಯ ಸ್ವರೂಪದಲ್ಲಿ ಭಿನ್ನತೆಯೇನೂ ಇರಲಿಲ್ಲ.

ಭಾರತದ ಮಟ್ಟಿಗೆ 'ಭೂಮಿ' ಕೇವಲ ವರಮಾನವನ್ನು ತಂದುಕೊಡುವ ವಿಷಯವಾಗಿರಲಿಲ್ಲ. ಅದು ಸ್ವಾಭಿಮಾನದ, ಬದುಕಿನ ಅಸ್ತಿತ್ವ ಮತ್ತು ಭದ್ರತೆಯ ವಿಷಯವಾಗಿತ್ತು. ಹಾಗೆಯೇ ಸಾಮಾಜಿಕ ಜೀವನದಲ್ಲಿ ಗೌರವ, ಘನತೆಗಳು ಭೂಮಿಯುಳ್ಳವನಿಗೆ ತನಗೆ ತಾನೇ ಪ್ರಾಪ್ತವಾಗುವ ಸಂಗತಿಯಾಗಿಯೂ ಇರುವುದನ್ನು ಕಾಣಬಹುದು.

ಆ ಕಾಲದ ಮುಖ್ಯ ಮನೋಭಾವ ಜಮೀನು ಮತ್ತು ಬಂಗಾರವನ್ನು ಹೆಚ್ಚೆಚ್ಚು ಹೊಂದುವುದು. ಈ ಹಿನ್ನೆಲೆಯಲ್ಲಿ ಜಮೀನ್ದಾರ-ಗೇಣಿದಾರರ ನಡುವಿನ ಸಂಬಂಧ ಕೇವಲ ಗೇಣಿ ವ್ಯವಹಾರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಗೇಣಿದಾರನ ಪಾಲಿಗೆ ಜಮೀನ್ದಾರ ಸಾಲ ನೀಡುವ ಸಾಹುಕಾರ, ಕೌಟುಂಬಿಕ ಸಮಸ್ಯೆ ತೀರ್ಮಾನ ಮಾಡುವ ನ್ಯಾಯಾಧೀಶ, ಆಪತ್ಕಾಲದಲ್ಲಿ ನೆರವಿಗೆ ಬರುವ ರಕ್ಷಕ ಮುಂತಾಗಿ

ಬಹುಮುಖ ಸಂಬಂಧವಿತ್ತು. ಸ್ವಾರ್ಥ ಜಮೀನ್ದಾರ ಈ ಸಂಬಂಧಗಳನ್ನೆಲ್ಲಾ ಬಳಸಿಕೊಂಡು ಶೋಷಿಸುತ್ತಿದ್ದ. ಜಮೀನ್ದಾರ ಶೋಷಣೆಗೆ ಗೇಣಿದಾರರ ನಡುವಿನ ಅಸೂಯೆ, ದಾಯಾದಾತನಗಳು ಕೂಡ ಪೂರಕವಾಗಿವೆ. ಈ ಹಿನ್ನಲೆಯಲ್ಲಿ ಜಮೀನ್ದಾರ ಬ್ರಿಟೀಷರ ಒಡೆದು ಆಳುವ ನೀತಿ ಅನುಸರಿಸುತ್ತಿದ್ದ. ಆದಕಾರಣ ಗೇಣಿದಾರರ ಸಂಘಟನೆ ಬೆಳೆಯಲು ಅವಕಾಶವೇ ನೀಡುತ್ತಿರಲಿಲ್ಲ.

ಗೇಣಿದಾರನ ಭೂಮಿಯಲ್ಲಿ ಬೆಳೆ ಬರಲಿ, ಬಾರದಿರಲಿ ಜಮೀನ್ದಾರ ಗೇಣಿಯನ್ನು ನಿರಾಂತರವಾಗಿ ಪಡೆಯಲು 'ದೈವ'ದ ಭಯ ಸೃಷ್ಟಿಮಾಡಲಾಗಿತ್ತು. ಗೇಣಿದಾರ ಶ್ರಮವಹಿಸಿ ಹೆಚ್ಚೆಚ್ಚು ಬೆಳೆದಷ್ಟು ಜಮೀನ್ದಾರನಿಗೆ ಲಾಭವಾಗುವಂತಹ ರೀತಿಯ ಗೇಣಿ ವ್ಯಾವಹಾರ ಸಂಬಂಧವಿತ್ತು. ಅಸಮರ್ಪಕವಾದ ಅಳತೆಯ ವಿಚಾರವೇ ಕಾಗೋಡು ಸತ್ಯಾಗ್ರಹದ ಕಿಡಿ ಹತ್ತಲು ಕಾರಣವಾಯಿತು.

ಕಾಗೋಡು ಚಳುವಳಿಯಿಂದ ಕರ್ನಾಟಕದಲ್ಲಷ್ಟೇ ಅಲ್ಲ, ಇಡಿ ಭಾತರದಲ್ಲಿಯೇ ರೈತರ ಬಗ್ಗೆ ಸರ್ಕಾರ, ಸಮಾಜ ಯೋಚಿಸುವಂತೆಯೂ, ಸುಧಾರಣಾ ನೀತಿಗಳನ್ನು ತರುವ ದಿಕ್ಕಿನಲ್ಲಿಯೂ ಪ್ರಭಾವ ಬೀರಿದೆ. ಹಾಗೆ ಇಡೀ ಮಲೆನಾಡಿನ ಗೇಣಿದಾರ ಮತ್ತು ಜಮೀನ್ದಾರರ ನಡುವೆ ಹೊಸ ಬಗೆಯ ವಿಚಾರಗಳನ್ನು ಹುಟ್ಟು ಹಾಕುತ್ತದೆ. ಕಾಗೋಡು ಸತ್ಯಾಗ್ರಹ ಜಮೀನ್ದಾರ ತನ್ನ ಜಮೀನು ಗೇಣಿದಾರನ ವಶವಾಗದಂತೆ ಎಚ್ಚರ ವಹಿಸುವುದಕ್ಕೆ ಕಾರಣವಾದರೆ, ಅದೇ ಗೇಣಿದಾರನಿಗೆ ಗೇಣಿ ನೀಡುವಲ್ಲಿ ಎಚ್ಚರವನ್ನು ತಾನು ಉಳುವ ಭೂಮಿಗೆ ಒಡೆಯನಾಗುವ ಕನಸನ್ನು ಬಿತ್ತುತ್ತದೆ. ಹಾಗಿದ್ದೂ ಈ ಚಳುವಳಿಯ ಉದ್ದೇಶವಾಗಲಿ, ಹೋರಾಟವಾಗಲಿ, ಪರಿಣಾಮವಾಗಿ ಬಂದ ಭೂಸುಧಾರಣೆಯ ಕಾನೂನುಗಳು ಬಂದಾಗ್ಯೂ ಮನಸ್ಥಿತಿ ಬದಲಾಗದೆ, ಋಣದ ಕಲ್ಪನೆ ದೊಡ್ಡದಾಗಿ, ಜಮೀನ್ದಾರರ ಇಚ್ಛೆಯಂತೆ ನಡೆದುಕೊಳ್ಳುವ ಕೆಲವು ಮುಗ್ಧ ಗೇಣಿದಾರರನ್ನು ಗಮನಿಸಬಹುದು.

ಮಲೆನಾಡು ಪ್ರಾಂತ್ಯದ ಮಠಗಳ ಧ್ಯೇಯೊದ್ದೇಶ ಬಯಲು ಸೀಮೆಯ ಮಠಗಳಿಗಿಂತ ಭಿನ್ನವಾಗಿ ಕಂಡು ಬರುತ್ತವೆ. ಶಿಕ್ಷಣ, ಆರೋಗ್ಯ, ಸಾಮಾಜಿಕ ಸೇವಾ ಕ್ಷೇತ್ರಗಳಿಗಿಂತ ಜಮೀನ್ದಾರಿ ಪದ್ಧತಿಯ ಭಾಗವಾಗಿಯೇ ಈ ಮಠಗಳು ನಡೆದುಕೊಳ್ಳುವುದನ್ನು ಕಾಣಬಹುದು.

ಕೆಲವು ಜಮೀನ್ದಾರರು ಮಾನವೀಯತೆಯ ದೃಷ್ಟಿಯಿಂದ ತಮ್ಮ ಗೇಣಿದಾರರನ್ನು ನೋಡಿಕೊಂಡವರಿದ್ದಾರೆ. ಭೂಸುಧಾರಣೆ ಕಾನೂನು ಬಂದಾಗ ಸಾಮಾಜಿಕ ನ್ಯಾಯದ ಹಿನ್ನಲೆಯಲ್ಲಿ ತಮ್ಮ ಭೂಮಿಯನ್ನು ಉದಾರತೆಯಿಂದ ಬಿಟ್ಟುಕೊಟ್ಟವರಿದ್ದಾರೆ. ಕೆಲವರು ಭೂಮಿಯನ್ನು ಕಳೆದುಕೊಂಡರೂ ಸ್ವಾಮಿನಿಷ್ಠೆಯ ಲಾಭ ಪಡೆದು ರಾಜಕೀಯ ಅಧಿಕಾರ ಪಡೆದವರಿದ್ದಾರೆ.

ಒಟ್ಟಿನಲ್ಲಿ ಭೂಸುಧಾರಣೆ ಹೊಸ ಮನ್ವಂತರವನ್ನೇ ಸೃಷ್ಟಿಸಿತು. ಸಾವಿರಾರು ಕುಟುಂಬಗಳು ಶಾಶ್ವತ ನೆಲೆಯನ್ನು ಕಂಡುಕೊಂಡವು. ಆಸ್ತಿಯ ಹಕ್ಕು, ಒಡೆತನವೆಂಬುದು ನೈತಿಕ ಜವಾಬ್ದಾರಿಯನ್ನು, ಆತ್ಮಸ್ಥೈರ್ಯವನ್ನು ತರುವುದರ ಮೂಲಕ ತನಗೂ ಈ ಭೂಮಿಯ ಮೇಲೆ ಬದುಕುವ ಹಕ್ಕಿದೆ ಎಂಬ ಮನೋಭಾವನೆಯನ್ನು ಇತರರಂತೆ ತಾನೂ ಪ್ರಗತಿಯಾಗಬೇಕೆಂದು ಛಲವನ್ನು ಮೂಡಿಸಿತು. ತನಗಲ್ಲದಿದ್ದರೂ ತನ್ನ ಮುಂದಿನ ಪೀಳಿಗೆ ಶೈಕ್ಷಣಿಕ ವಲಯದಲ್ಲಿ ಮುಂದುವರೆದು, ರಾಜಕೀಯ

ವಲಯದಲ್ಲಿ ಅವಕಾಶ ಪಡೆದು ರೈತಾಪಿ ಜಗತ್ತಲ್ಲದೆ ಬೇರೆಯಾದ ಜಗತ್ತು ಇದೆ ಎಂಬುದನ್ನು ಕಂಡುಕೊಳ್ಳಲು ಭೂಮಿಯ ಒಡೆತನದ ಅಸ್ತಿತ್ವ ಸಹಕಾರಿಯಾಗುತ್ತದೆ. ಆದಕಾರಣ ರೈತನ ಮಗ ರೈತನಾಗಿ ಉಳಿದಿಲ್ಲ. ಶೈಕ್ಷಣಿಕ ಕ್ಷೇತ್ರದಲ್ಲಿ, ಔದ್ಯಮಿಕ ಕ್ಷೇತ್ರದಲ್ಲಿ, ವ್ಯವಹಾರ ಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದ್ದಾರೆ ರೈತನ ಮಕ್ಕಳು. ಇದೆಲ್ಲಾ ಸಾಧ್ಯವಾದುದು ಆತನಿಗೆ ಧೈರ್ಯ, ಸ್ಥೈರ್ಯ ನೀಡಿದ್ದು ಉಳುವವನೆ ಹೊಲದೊಡೆಯನಾದಾಗ.

ಜಮೀನ್ದಾರಿ ವರ್ಗದಲ್ಲೂ ಅನಿವಾರ್ಯವಾದ ಪರಿವರ್ತನೆಗಳಾದವು. ಜಮೀನನ್ನು ಇಟ್ಟುಕೊಂಡವರು ಮೈ ಬಗ್ಗಿಸಿ ದುಡಿಯುವಂತಾಯಿತು. ಆ ಮೂಲಕ ಒಟ್ಟು ರೈತನ ಸಮಸ್ಯೆ ಏನು ಎಂಬುದು ತಿಳಿಯಿತು. ಜಮೀನನ್ನು ಕಳೆದುಕೊಂಡು ಕೆಲವರು ಬೇರೆ ಉದ್ಯೋಗ ತಿಳಿಯದೆ ಹಳ್ಳಿಯಿಂದ ನಗರಕ್ಕೆ ವಲಸೆ ಹೋದಂತವರಿದ್ದಾರೆ. ಹೀಗೆ ಮಲೆನಾಡು ಪ್ರಾಂತ್ಯದಲ್ಲಿ ಭೂಸುಧಾರಣೆಯ ಕಾನೂನು ಸಾಮಾಜಿಕ, ರಾಜಕೀಯ, ಆರ್ಥಿಕವಾದ ಬದಲಾವಣೆಯ ಮೂಲಕ ಸ್ಥಿತ್ಯಂತರವನ್ನುಂಟು ಮಾಡಿತು.

ಅಡಿ ಟಿಪ್ಪಣಿ

೧. ಕಡಿದಾಳ್ ಮಂಜಪ್ಪ, ಪಂಜರವಳ್ಳಿ ಪಂಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೮, ಪುಟ:೦೫

೨. ಕಡಿದಾಳ್ ಮಂಜಪ್ಪ, ಪಂಜರವಳ್ಳಿ ಪಂಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೮, ಪುಟ:೩, ೪

೩. ಕಡಿದಾಳ್ ಮಂಜಪ್ಪ, ಪಂಜರವಳ್ಳಿ ಪಂಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೮, ಪುಟ:೨೭

೪. ತಿಮ್ಮಪ್ಪ ಎಂ.ಎಸ್., ಗೇಣಿ ರೈತನ ಆರ್ಥಿಕ ಸ್ಥಿತಿಗತಿ, ಕಾಗೋಡು ಚಳುವಳಿ ಸುವರ್ಣ ಸಂಪುಟ (ಸಂ), ಹಿ.ಚಿ.ಬೋರಲಿಂಗಯ್ಯ, ಎನ್.ಹುಚ್ಚಪ್ಪ ಮಾಸ್ತರ, ಮಲೆನಾಡು ಜಾನಪದ ಲೋಕ, ಸಾಗರ, ೨೦೦೧, ಪುಟ:೩೧

೫. ಗಣಪತಿಯಪ್ಪ ಹೆಚ್., ಕಾಗೋಡು ಸತ್ಯಾಗ್ರಹದಲ್ಲಿ ದೀವರ ಪಾತ್ರ, ಕಾಗೋಡು ಚಳುವಳಿ ಸುವರ್ಣ ಸಂಪುಟ (ಸಂ), ಹಿ.ಚಿ.ಬೋರಲಿಂಗಯ್ಯ, ಎನ್.ಹುಚ್ಚಪ್ಪ ಮಾಸ್ತರ, ಮಲೆನಾಡು ಜಾನಪದ ಲೋಕ, ಸಾಗರ, ೨೦೦೧, ಪುಟ:೩೯

೬. ರಾಜಶೇಖರ ಜಿ., ಕಾಗೋಡು ಸತ್ಯಾಗ್ರಹ ಆಯ್ದ ಭಾಗಗಳು, ಕಾಗೋಡು ಚಳುವಳಿ ಸುವರ್ಣ ಸಂಪುಟ, (ಸಂ) ಹಿ.ಚಿ.ಬೋರಲಿಂಗಯ್ಯ, ಎನ್.ಹುಚ್ಚಪ್ಪ ಮಾಸ್ತರ, ಮಲೆನಾಡು ಜಾನಪದ ಲೋಕ, ಸಾಗರ, ೨೦೦೧, ಪುಟ:೯೭

೭. ಯು.ಆರ್.ಅನಂತಮೂರ್ತಿ, 'ಮೌನಿ' ಐದುದಶಕದ ಕಥೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೨೫೨

೮. ಯು.ಆರ್.ಅನಂತಮೂರ್ತಿ, 'ಮೌನಿ' ಐದುದಶಕದ ಕಥೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ:೨೫೬

೯. ಯು.ಆರ್.ಅನಂತಮೂರ್ತಿ, ಭಾರತೀಪುರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೮, ಪುಟ:೦೬

೧೦. ಯು.ಆರ್.ಅನಂತಮೂರ್ತಿ, ಅವಸ್ಥೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬, ಪುಟ:೯೩

೧೧. ಯು.ಆರ್.ಅನಂತಮೂರ್ತಿ, ಅವಸ್ಥೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬, ಪುಟ:೯೫

೧೨. ಯು.ಆರ್.ಅನಂತಮೂರ್ತಿ, ಅವಸ್ಥೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬, ಪುಟ:೯೫

೧೩. ಯು.ಆರ್.ಅನಂತಮೂರ್ತಿ, ಅವಸ್ಥೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬, ಪುಟ:೧೧೧

೧೪. ಯು.ಆರ್.ಅನಂತಮೂರ್ತಿ, ಅವಸ್ಥೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬, ಪುಟ:೯೫

೧೫. ಕಡಿದಾಳ್ ಮಂಜಪ್ಪ, ನನಸಾಗದ ಕನಸು, ಕಡಿದಾಳು ಪ್ರಕಾಶನ, ಬೆಂಗಳೂರು, ೧೯೯೦, ಪುಟ:೧೧೪

೧೬. ಎಚ್.ಗಣಪತಿಯಪ್ಪ, ಕಾಗೋಡು ರೈತ ಸತ್ಯಾಗ್ರಹ ಮತ್ತು ಗೋಪಾಲಗೌಡರು, ಕಾಗೋಡು ಚಳುವಳಿ ಸುವರ್ಣ ಸಂಪುಟ, (ಸಂ) ಹಿ.ಚಿ.ಬೋರಲಿಂಗಯ್ಯ, ಎನ್.ಹುಚ್ಚಪ್ಪ ಮಾಸ್ತರ, ಮಲೆನಾಡು ಜಾನಪದ ಲೋಕ, ಸಾಗರ ೨೦೦೧, ಪುಟ:೪೭

೧೭. ಕಡಿದಾಳ್ ಮಂಜಪ್ಪ, ನನಸಾಗದ ಕನಸು, ಕಡಿದಾಳು ಪ್ರಕಾಶನ, ಬೆಂಗಳೂರು, ೧೯೯೦, ಪುಟ:೨೩೭

೧೮. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೧೮೭

೧೯. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೩೫೪

೨೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೦೮

೨೧. ತರೀಕರೆ ರಹಮತ್. ಪ್ರತಿಸಂಸ್ಕೃತಿ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೩, ಪುಟ:೧೨೮

೨೨. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೦೯

೨೩. ಕಡಿದಾಳ್ ಮಂಜಪ್ಪ, ನನಸಾಗದ ಕನಸು, ಕಡಿದಾಳು ಪ್ರಕಾಶನ, ಬೆಂಗಳೂರು, ೧೯೯೦, ಪುಟ:೧೧೬

೨೪. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧, ಪುಟ:೦೯

೨೫. ತ್ಯಾನಂದೂರು ಪುಟ್ಟಣ್ಣ, ನಾನುಕಂಡ ಮಲೆನಾಡು, ಮಲೆನಾಡು ವೀರಶೈವ ಅಧ್ಯಯನ, ಸಂಸ್ಥೆ, ಪುಟ:೧೯೭

೨೬. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೧೦೮

೨೭. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೧೦೮

೨೮. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೧೫೯

೨೯. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೩೪೨

೩೦. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೨೪೨

೩೧. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೩೮೨

೩೨. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೩೮೯

೩೩. ಬಿಳುಮನೆ ರಾಮದಾಸ್, ನಂಬಿಕೆಟ್ಟವರಿಲ್ಲವೊ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೧, ಪುಟ:೩೯೩

೩೪. ಅನಂತಮೂರ್ತಿ ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೯೯

೩೫. ಅನಂತಮೂರ್ತಿ ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೧೨೩

೩೬. ಅನಂತಮೂರ್ತಿ ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೧೫೧

೩೭. ಅನಂತಮೂರ್ತಿ ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩, ಪುಟ:೧೬೨

ಅಧ್ಯಾಯ ೮

ಉಪ ಸಂಹಾರ

ಅಧ್ಯಾಯ ೮ ಉಪ ಸಂಹಾರ

ಈವರೆಗೆ ಮಲೆನಾಡಿನ ಸಾಂಸ್ಕೃತಿಕ ಸ್ಥಿತ್ಯಂತರಗಳ ಸ್ವರೂಪವನ್ನು ಈ ಪರಿಸರದಿಂದ ಬಂದ ಆರು ಜನ ಲೇಖಕರ ಕಥಾಸಾಹಿತ್ಯದ ಹಿನ್ನೆಲೆಯಲ್ಲಿ ಮತ್ತು ಪೂರಕವಾಗಿ ಕೆಲವು ಆತ್ಮಕಥೆಗಳನ್ನು, ಸಂಸ್ಮರಣ ಗ್ರಂಥಗಳನ್ನು ಬಳಸಿಕೊಂಡು ಗುರುತಿಸುವ, ವಿಶ್ಲೇಷಣೆ ಮಾಡುವ ಯತ್ನ ಮಾಡಲಾಯಿತು. ಒಂದು ಶತಮಾನದ ಹಿಂದಿನ ಕಾಲಕ್ಕೆ ನಿಂತು ನೋಡಿದಾಗ ಬಹುಮುಖಿ ಸಂಸ್ಕೃತಿಯನ್ನು ಒಳಗೊಂಡಿರುವ ಮಲೆನಾಡಿನ ವಿವಿಧ ಜನ ಜಾತಿ ಸಮುದಾಯವು ನಿಸರ್ಗಕ್ಕೆ ಹೆಚ್ಚು ಹತ್ತಿರವಾದ ಜೀವನ ವಿಧಾನವನ್ನು ರೂಪಿಸಿಕೊಂಡಿದ್ದವು. ಮನುಷ್ಯ ಶ್ರಮವೇ ಪ್ರಧಾನವಾಗಿದ್ದು, ತನ್ನದೇ ಆದ ಅನನ್ಯತೆಯನ್ನು ಸ್ಥಾಪಿಸಿಕೊಂಡಿತ್ತು. ನಗರ ಸಂಸ್ಕೃತಿಯಿಂದ ಬಹುದೂರವಿದ್ದು ಈ ಪರಿಸರವು ಮೇಲುನೋಟಕ್ಕೆ ಪ್ರಶಾಂತವಾಗಿಯೂ ಜಡ ಸ್ಥಿತಿಯಲ್ಲಿರುವಂತೆ ತೋರುತ್ತಿತ್ತು. ಪುರೋಹಿತಶಾಹಿ ಹಿಡಿತ, ಜಮೀನ್ದಾರಿ ಶೋಷಣೆ, ಜಾತಿಪದ್ಧತಿಯ ಕಟ್ಟುಕಟ್ಟಳೆಗಳು, ಮೇಲು-ಕೀಳು ಭಾವನೆಗಳು, ಅನಕ್ಷರತೆ-ಅಜ್ಞಾನಗಳು, ಕಾಡುವ ಅನಾರೋಗ್ಯ ಇವೆಲ್ಲವು ಇದ್ದದ್ದು ನಿಜ. ಹಾಗೆಂದು ಈ ಪರಿಸರದ ಬದುಕು ಜಡವಾಗಿಯೂ, ದುರಂತವಾಗಿಯೂ ಏನೂ ಇರಲಿಲ್ಲ. ಇಲ್ಲಿಯು ಪ್ರಾಜ್ಞರು, ದೂರದೃಷ್ಟಿಯುಳ್ಳವರು, ವಿಶಾಲ ಹೃದಯದವರು, ಮಾನವೀಯತೆಯುಳ್ಳವರು, ಪರಿಸರದ ಸುಧಾರಣೆಯ ಬಗ್ಗೆ ಕಾಳಜಿಯುಳ್ಳವರು, ಉತ್ತಮ ಜೀವನ ರೂಢಿಸಿಕೊಂಡವರು, ಹೊಸ ಬದುಕನ್ನು ಹಂಬಲಿಸುವವರು ಇದ್ದರು. ಇಲ್ಲಿನ ಸಾಂಸ್ಕೃತಿಕ ಬದುಕಿನಲ್ಲಿ ನಿರಂತರವಾದ ಚಲನೆಯೆಂಬುದು ಇತ್ತು. ಜೀವನ ವಿಧಾನದಲ್ಲಿ, ಆಲೋಚಿಸುವ ಕ್ರಮದಲ್ಲಿ ಪಲ್ಲಟಗಳಾಗುತ್ತಿರುವ ಸಹಜ ಪ್ರಕ್ರಿಯೆ ಇಲ್ಲಿಯೂ ಇತ್ತು. ಈ ಸ್ಥಿತ್ಯಂತರ ತೀವ್ರವಾದ ಸ್ವರೂಪವನ್ನು ಪಡೆದುಕೊಂಡುದು ವಸಾಹತುಶಾಹಿ ಪ್ರವೇಶವಾದ ಮೇಲೆ ಎನ್ನುವುದು ನನ್ನ ಅಧ್ಯಯನದ ಮೂಲಕ ಕಂಡುಕೊಂಡ ಮುಖ್ಯ ಸಂಗತಿ.

೧೯ನೇ ಶತಮಾನದ ಕೊನೆಯ ಕಾಲಘಟ್ಟದಲ್ಲಿ ಕ್ರೈಸ್ತ ಮಿಷನರಿಗಳು ಮಲೆನಾಡನ್ನು ಪ್ರವೇಶಿಸುತ್ತಾರೆ. ಈ ಪರಿಸರದ ಜನರು ಒರಟರು, ಅಜ್ಞಾನಿಗಳು, ಅನಾಗರಿಕರು ಎಂದು ಭಾವಿಸಿಕೊಂಡು ಇವರನ್ನು ನಾಗರಿಕರನ್ನಾಗಿ ಪರಿವರ್ತಿಸುವ ಹಿನ್ನೆಲೆಯಲ್ಲಿ ಮತಾಂತರಗೊಳಿಸಬಹುದು ಎಂಬ ಸರಳವಾದ ತೀರ್ಮಾನಕ್ಕೆ ಬರುತ್ತಾರೆ. ಆದರೆ ಇಲ್ಲಿ ಜನಸಮುದಾಯದ ಸಾವಿರಾರು ವರ್ಷಗಳ ಪರಂಪರೆಯನ್ನು, ಸಂಸ್ಕೃತಿ, ಇತಿಹಾಸ, ನಂಬಿಕೆ, ಆಚರಣೆಗಳ ಆಳವನ್ನು ಅರಿಯಲಾಗದ ತಿಳುವಳಿಕೆಯಾಗಿತ್ತು. ಬಹುಮುಖಿ ಸಂಸ್ಕೃತಿಯನ್ನುಳ್ಳ ಈ ಸಂಕೀರ್ಣ ಸಮಾಜವು ಒರೆಗೆ ಹಚ್ಚಲ್ಪಟ್ಟಿದ್ದು ಕ್ರೈಸ್ತ ಮಿಷನರಿಗಳ ಪ್ರವೇಶದಿಂದ ಎಂಬುದು ನನ್ನ ಅಧ್ಯಯನದಲ್ಲಿ ಕಂಡುಕೊಂಡು ಸಂಗತಿಯಾಗಿದೆ.

ಮತಾಂತರದ ಉದ್ದೇಶದ ಹಿನ್ನೆಲೆಯಲ್ಲಿ ಈ ಪರಿಸರದ ಮುಖ್ಯ ಕೊರತೆಗಳಾದ ಶಿಕ್ಷಣ ಮತ್ತು ಆರೋಗ್ಯವನ್ನು ಬಳಸಿಕೊಂಡು ಅವುಗಳ ಸೇವೆಯನ್ನು ನೀಡುವುದರ ಮೂಲಕ ಇಲ್ಲಿನ ಜನಸಮುದಾಯವನ್ನು ಆಕರ್ಷಿಸಲು ಕ್ರೈಸ್ತ ಮಿಷನರಿಗಳು ಪ್ರಯತ್ನಿಸುತ್ತಾರೆ. ಈ ಪ್ರಯತ್ನ ಎಲ್ಲ ಸಮುದಾಯದೊಡನೆ ನಡೆಸುವುದಿಲ್ಲ. ವಸಾಹತುಶಾಹಿಯ ಧೋರಣೆಯಂತೆ ಅದರ ಭಾಗವಾದ

ಮಿಷನರಿಗಳು ಈ ಪರಿಸರದಲ್ಲಿ ಬಹುಸಂಖ್ಯಾತರಾದ ಒಕ್ಕಲಿಗರ ಸಮುದಾಯದ ಶ್ರೀಮಂತರ ಮನೆಯ ಯುವ ಜನಾಂಗದ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತಾರೆ. ಕಾರಣಗಳೇನೆಂದರೆ ಈ ಪರಿಸರ ಊಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿದೆ. ಈ ಜಮೀನ್ದಾರಿ ಕುಟುಂಬಗಳನ್ನು ಸೆಳೆದರೆ ಅವರ ಅನುಯಾಯಿಗಳಾದ ಗೇಣಿದಾರರನ್ನು, ಜೀತದಾರರನ್ನು ಸುಲಭವಾಗಿ ಮತಾಂತರಕ್ಕೆ ಒಳಪಡಿಸಬಹುದೆಂಬ ತಂತ್ರ, ಆದರೆ ಬೇರೆ ಪ್ರದೇಶಗಳಿಗಿಂತ ಭಿನ್ನವಾಗಿರುವ, ಅನೇಕ ವೈಶಿಷ್ಟ್ಯಗಳನ್ನು ಹೊಂದಿರುವ ಈ ಪರಿಸರ ಒಡ್ಡಿದ ಪ್ರತಿತಂತ್ರ ವಿಶಿಷ್ಟವಾದುದು, ಬಹಳ ಮುಖ್ಯವಾದುದು ಎಂಬುದನ್ನು ಕಂಡುಕೊಳ್ಳಲಾಗಿದೆ. ಈ ಪ್ರತಿತಂತ್ರಗಳ ಸಂಘರ್ಷ ತೀವ್ರವಾದದ್ದಲ್ಲ ; ಸೌಮ್ಯವಾದ ಕ್ರಮವೇ ಆಗಿತ್ತು ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಂಡಿದ್ದೇನೆ. ಎರಡೂ ಸಂಸ್ಕೃತಿಗಳು ಮುಖಾಮುಖಿಯಾಗಿ ನಿಂತಾಗ ಅವುಗಳ ಒಳನಿರೀಕ್ಷೆಯೇ ಬೇರೆಯಾಗಿದ್ದು, ಹೊರಗೆ ವ್ಯಕ್ತವಾಗುವ ಕ್ರಿಯೆಯೇ ಬೇರೆಯಾಗಿರುತ್ತದೆ.

ಅಂದರೆ ಮಿಷನರಿಗಳು ಅಂತರಂಗದಲ್ಲಿ ಮತಾಂತರ ಉದ್ದೇಶವಿಟ್ಟುಕೊಂಡು ಬಾಹ್ಯದಲ್ಲಿ ಶಿಕ್ಷಣ, ಆರೋಗ್ಯ ಸೇವೆಯನ್ನು ನಡೆಸುತ್ತಾರೆ. ಗಿರಿಯಪ್ಪಗೌಡರಂತವರು ಈ ಪರಿಸರದ ಮಕ್ಕಳ ಶೈಕ್ಷಣಿಕ ಬದುಕು ಸುಧಾರಿಸಬಹುದು ಎಂಬ ಕಾಳಜಿಯಿಂದ ಮತಾಂತರಕ್ಕೆ ಮನಸ್ಸು ಮಾಡುತ್ತಾರೆಯೇ ಹೊರತು ಧಾರ್ಮಿಕ ಕೊರತೆಯಿಂದಾಗಲಿ, ಪರಂಪರಾ ಬದುಕಿನಿಂದ ಬೇಸತ್ತಾಗಲಿ ಅಲ್ಲ. ರಾಮಣ್ಣ ಗೌಡರಂತವರು ಕ್ರೈಸ್ತ ಮಿಷನರಿಗಳ ಮತಾಂತರ ಉದ್ದೇಶವನ್ನು ನಯವಾಗಿ ನಿರಾಕರಿಸುತ್ತಲೇ ಅವರ ಶೈಕ್ಷಣಿಕ ಸೇವೆಯನ್ನು ಮುಕ್ತವಾದ, ದೂರದೃಷ್ಟಿಯ ಮನೋಭಾವದಿಂದ ಸ್ವೀಕರಿಸುತ್ತಾರೆ. ಇದು ಮಿಷನರಿಗಳು ಕೊಟ್ಟ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಾ ಮತಾಂತರವೂ ಆಗದೆ ಸಬಲತೆಯನ್ನು ಪಡೆಯುವ ಪ್ರಕ್ರಿಯೇ ಆಗಿದೆ. ಪರಿಣಾಮವಾಗಿ ಈ ಮಲೆನಾಡ ಪರಿಸರವು ಇಂದು ಬೌದ್ಧಿಕವಾಗಿ ಹೆಚ್ಚು ಪ್ರಬುದ್ಧವಾಗುವುದಕ್ಕೆ ಕಾರಣವಾದ ಅಂಶಗಳನ್ನು ನನ್ನ ಅಧ್ಯಯನದ ಚರ್ಚೆಯಲ್ಲಿ ಕಂಡುಕೊಂಡಿದ್ದೇನೆ.

ಭಾರತದ ಹತ್ತಿ ಇಂಗ್ಲೆಂಡಿನ ಗಿರಣಿಗಳಲ್ಲಿ ಸುಂದರವಾದ ಬಟ್ಟೆಯಾಗಿ ಬರುವಂತೆ ಈ ಪರಿಸರದ ಮಕ್ಕಳು ಮಿಷನ್ ಶಾಲೆಗಳಲ್ಲಿ ಸುಂದರ ಚಾರಿತ್ರ್ಯವುಳ್ಳವರಾಗಿ ಬರಬೇಕೆಂಬ ಗಿರಿಯಪ್ಪಗೌಡರ ಅನಿಸಿಕೆ ಆ ಕ್ಷಣದ ಬಿಡುಗಡೆಯ ಅನಿಸಿಕೆಯಾಗಿದ್ದು, ಆ ಸಂದರ್ಭದ ಅನುಕೂಲತೆಯ ಪ್ರಶ್ನೆಯಾಗಿತ್ತು. ಆದರೆ ವಸಾಹತುಶಾಹಿಯ ಒಡಲಿನಲ್ಲಿ ಇದ್ದ ಆಧುನಿಕತೆಯು ಒಡ್ಡಬಹುದಾದ ಸಮಸ್ಯೆಗಳು ಗಿರಿಯಪ್ಪನವರ ಪ್ರಜ್ಞೆಗೆ ಮೀರಿದ ಅಂಶವಾಗಿತ್ತು.

ಕುವೆಂಪು ಅವರ ಕಾದಂಬರಿಯಲ್ಲಿ ಬರುವ ದೇವಯ್ಯನಂತವರು ವಿಲಾಸ ಜೀವನದ ಅಪೇಕ್ಷೆಯಿಂದ ಕಟ್ಟುಪಾಡುಗಳಿಲ್ಲದೆ ಬದುಕಬಹುದೆಂಬ ಧೋರಣೆಯಿಂದ ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವ ಆಸೆ ಹೊಂದಿದವರು. ಇನ್ನು ತಳ ಸಮುದಾಯಗಳು ಕ್ರೈಸ್ತ ಧರ್ಮವನ್ನು ಜಾತಿಯನ್ನಾಗಿಯೂ, ಅದು ತಮಗಿಂತ ಕೀಳಾದುದು ಎಂದೇ ಭಾವಿಸುತ್ತವೆ ; ಪ್ರತಿಕ್ರಿಯಿಸುತ್ತವೆ. ಹಾಗೆ ಕ್ರೈಸ್ತ ಮಿಷನರಿಗಳೂ ಕೂಡ ಅವರಿಗೆ ಯಾವ ಸೌಲಭ್ಯದ ಆಮಿಷವನ್ನು ಒಡ್ಡುವುದಿಲ್ಲ. ಬಚ್ಚನಂತವರಿಗೆ ಮತಾಂತರದಲ್ಲಿ ಜಮೀನ್ದಾರನ ಕ್ರೌರ್ಯ ವ್ಯಕ್ತವಾಗುತ್ತದೆ. ಈಗಾಗಲೇ ಈ ನಿಬಂಧದಲ್ಲಿ ಚರ್ಚಿಸಿದಂತೆ ದಲಿತ ಸಮುದಾಯಗಳಿಗೆ ಜಮೀನ್ದಾರರಿಂದ ಆಗುವ ಕ್ರೌರ್ಯಗಳ ಜೊತೆಗೆ ವಸಾಹತುಶಾಹಿಯ ಭಾಗವಾದ ಮತಾಂತರವೂ

ಕೂಡ ಆ ಸಮುದಾಯಗಳಿಗೆ ಇನ್ನೊಂದು ಬಗೆಯ ಕ್ರೌರ್ಯವನ್ನು ಉಂಟು ಮಾಡಿತು. ಅಂದರೆ ಮತಾಂತರಕ್ಕೆ ಜೀತದಾಳುಗಳನ್ನು ದೀವವಾಗಿ ಬಳಸುತ್ತಾರೆ. ಆದ್ದರಿಂದ ತಳಸಮುದಾಯಕ್ಕೆ ಈ ಪರಿಸರದಲ್ಲಿ ಮತಾಂತರವು ಶೋಷಣೆಯಿಂದ ಬಿಡುಗಡೆಯ ಸಾಧ್ಯತೆಯಾಗಿ ಕಂಡುಬರುವುದಿಲ್ಲ ಎಂಬುದನ್ನು ನನ್ನ ಅಧ್ಯಯನದಲ್ಲಿ ಕಂಡುಕೊಂಡ ಮುಖ್ಯ ಅಂಶವಾಗಿದೆ. ಈ ಪರಿಸರದಲ್ಲಿ ಮತಾಂತರವು ವ್ಯಕ್ತಿ ನಿರ್ಧಾರವೇ ಹೊರತು ಕುಟುಂಬದ ಸಮೂಹದ ನಿರ್ಧಾರವಲ್ಲ. ಈ ಎಲ್ಲ ಕಾರಣಗಳಿಂದ ಮತಾಂತರಕ್ಕೆ ಪರವಾದ ಗಾಳಿಯಾಗಲಿ, ವಿರೋಧದ ಬಿರುಗಾಳಿಯಾಗಲಿ ಬೀಸಲಿಲ್ಲ. ಅದರ ವಿಫಲತೆಗಳ ಬಗ್ಗೆ ಚರ್ಚೆ ಮಾಡಿದ್ದೇನೆ. ಹಾಗಿದ್ದೂ ಈ ಪರಿಸರದ ಜೀವನ ಕ್ರಮದಲ್ಲಿ ಸ್ಥಿತ್ಯಂತರಗಳಾಗಲು ಈ ಮತಾಂತರ ಪ್ರಕ್ರಿಯೆ ಕಾರಣವಾಗಿದೆ ಎಂಬುದನ್ನು ಖಚಿತವಾಗಿ ಈ ಅಧ್ಯಯನ ಗುರುತಿಸುತ್ತದೆ.

ಕ್ರೈಸ್ತ ಮಿಷನರಿಗಳ ಮೂಲಕ ಪ್ರವೇಶ ಮಾಡಿದ ಇಂಗ್ಲಿಷ್ ಶಿಕ್ಷಣ ಅಥವಾ ಆಧುನಿಕ ಶಿಕ್ಷಣ ಈ ಮಲೆನಾಡ ಪರಿಸರದಲ್ಲಿ ತೀವ್ರತರವಾದ ಸ್ಥಿತ್ಯಂತರಗಳಿಗೆ ಕಾರಣವಾಗಿದೆ. ಇಲ್ಲಿಯ ಪರಿಸರದ ಜನ ಸಮುದಾಯದ ಕ್ರೈಸ್ತ ಮಿಷನರಿಗಳ ಮತಾಂತರ ಉದ್ದೇಶವನ್ನು ನಯವಾಗಿ ನಿರಾಕರಿಸಿ ಶಿಕ್ಷಣ ಸೇವೆಯನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿದರು. ಈ ಪರಿಸರದಲ್ಲಿ ಪರಂಪರಾಗತ ಒಂದು ಶಿಕ್ಷಣ ಪದ್ಧತಿಯನ್ನು ವ್ಯವಸ್ಥೆಗೊಳಿಸಿಕೊಂಡಿದ್ದರೂ ಅದನ್ನು ಎಲ್ಲ ವರ್ಗದವರೂ ಪಡೆಯುವಂತಿರಲಿಲ್ಲ. ಆಧುನಿಕ ಶಿಕ್ಷಣ, ಅದನ್ನು ಕಲಿಸುವರ ಆಕರ್ಷಣೆಯ ಎದುರಿನಲ್ಲಿ ಪರಂಪರಾಗತ ಶಿಕ್ಷಣದ ರೂಕ್ಷತೆ, ಕಲಿಸುವವರ ಆಕರ್ಷಕ ರಹಿತ ವ್ಯಕ್ತಿತ್ವ ಮತ್ತು ಹಿಂದೂ ಸಮಾಜದ ಅಸಮಾನತೆಗಳು ಮುಖಾಮುಖಿಯಾದಾಗ ಆಧುನಿಕ ಶಿಕ್ಷಣಕ್ಕೆ ಈ ಪರಿಸರದ ಸಮುದಾಯಗಳು ಪ್ರತಿಸ್ಪಂದಿಸಿದ ರೀತಿ ವಿಶಿಷ್ಟವಾದುದು. ಇಂಗ್ಲಿಷ್ ಶಿಕ್ಷಣ ಪಡೆದು ಬಂದವರ ಬಗ್ಗೆ ಇಲ್ಲಿನ ಸಮುದಾಯಗಳಲ್ಲಿ ವ್ಯಕ್ತವಾದ ವಿಭಿನ್ನ ಧೋರಣೆಗಳನ್ನು ಚರ್ಚಿಸಿದ್ದೇನೆ.

ಮಿಷನರಿಗಳು ಮತಾಂತರದ ಉದ್ದೇಶದ ಹಿನ್ನೆಲೆಯಲ್ಲಿ ಕೊಡಮಾಡಿದ ಆಧುನಿಕ ಸೌಲಭ್ಯಗಳು ಅವರ ಉದ್ದೇಶ ಈಡೇರದೇ ಹೋದಾಗ, ತಾವೇ ನೀಡಿದ ಸೌಲಭ್ಯವನ್ನು ಹಿಂದೆ ಪಡೆದುಕೊಂಡರೂ ಮಲೆನಾಡಿನಲ್ಲಿ ಆರಂಭವಾದ ಸಾಂಸ್ಕೃತಿಕ ಸ್ಥಿತ್ಯಂತರದ ಸಂಚಲನಗಳ ವೇಗ ಕಡಿಮೆಯಾಗಲಿಲ್ಲ. ಈ ಪರಿಸರದ ಲೇಖಕರೂ ಆಧುನಿಕತೆ, ಆಧುನಿಕ ಶಿಕ್ಷಣ ಮುಂತಾದ ಕಾರಣಗಳಿಂದಲೇ ಮೈಸೂರಿನಂತಹ ಪಟ್ಟಣ ಪ್ರವೇಶದಿಂದ ಇಂಗ್ಲೆಂಡಿನವರೆಗೂ ಸಾಗಿದ್ದನ್ನು ಗಮನಿಸಬಹುದಾಗಿದೆ. ಇದು ಅವರ ಕಥಾಸಾಹಿತ್ಯದ ನಾಯಕ ಪಾತ್ರಗಳಿಗೂ ಸಂಬಂಧಪಡುವುದು ವಿಶಿಷ್ಟವಾದುದು. ಕುವೆಂಪು ಅವರ 'ಕಾನೂರು ಹೆಗ್ಗಡತಿ', ಅನಂತಮೂರ್ತಿ ಅವರ 'ಭಾರತೀಪುರ' ಬಿಳುಮನೆ ರಾಮದಾಸ್ ಅವರ 'ವ್ಯಾಮೋಹ' ಕೃತಿಗಳ ವಿವರಗಳಲ್ಲಿ ಸಾಂಸ್ಕೃತಿಕ ಸ್ಥಿತ್ಯಂತರದ ಹಿನ್ನೆಲೆಯಲ್ಲಿ ಹೇಗೆ ಮುಖ್ಯವಾಗಿದೆ ಎಂಬುದನ್ನು ಚರ್ಚಿಸಲಾಗಿದೆ. ಪ್ರಾತಿನಿಧಿಕವಾಗಿ – ಆಧುನಿಕ ಶಿಕ್ಷಣ ಪಡೆದ ಹೂವಯ್ಯ, ರಾಮಯ್ಯರನ್ನು ನೋಡಿ ಸಾಮ್ರಾಜ್ಯಶಾಹಿ ಪ್ರಭುತ್ವದ ಕೆಳಹಂತದ ನೌಕರ ಮಾರ್ಕ್ ಕೂಡ ಹಳ್ಳಿಮಂದಿಗೆ ತೂರಿಸುವ ದರ್ಪವನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ಪಂಜರವಳ್ಳಿ ಪಂಜುವಿನ ಗೇಣಿದಾರ ಸಿದ್ಧಣ್ಣ ತನ್ನ ಮಗನನ್ನು ಇಂಗ್ಲಿಷ್ ಶಿಕ್ಷಣಕ್ಕೆ ಕಳುಹಿಸಲೇಬೇಕೆಂದು ನಿರ್ಧರಿಸುವುದು ಜಮೀನ್ದಾರಿ ಕ್ರೌರ್ಯವನ್ನು ಮುರಿಯುವ ಸಲುವಾಗಿಯೆ.

"ವಸಾಹತುಶಾಹಿಯ ಫಲವಾಗಿ ಲಭಿಸಿದ ಹೊಸ ಇಂಗ್ಲಿಷ್ ವಿದ್ಯಾಭ್ಯಾಸದ ಜ್ಞಾನದ ಎದುರಿಗೆ ಹಳೆಯ ಜಮೀನ್ದಾರಿ ಪದ್ಧತಿಯ ಅಧಿಕಾರ ತಲೆತಗ್ಗಿಸುವ ಪ್ರಸಂಗ ಕಾದಂಬರಿಯಲ್ಲಿದೆ. ಈ ಮೂಲಕ ವಿದ್ಯೆಯಿಂದ ಲಭಿಸುವ ವ್ಯಕ್ತಿ ಸಂಸ್ಕಾರ ಹಣಕ್ಕಿಂತ ದೊಡ್ಡದು ಎಂಬುದನ್ನು ಕಾದಂಬರಿಕಾರರು ಪ್ರತಿಪಾದಿಸುತ್ತಾರೆ. ಚಂದ್ರಯ್ಯಗೌಡರು ಕೊನೆಗಾಲದಲ್ಲಿ ಹೂವಯ್ಯ ಯೋಗಕ್ಷೇಮ ವಿಚಾರಿಸಲು ಹೋದಾಗ ಅವನಿಗೆ ಕೈಯೆತ್ತಿ ನಮಸ್ಕರಿಸುವುದು, ಪಶ್ಚಾತ್ತಾಪದಿಂದ ಕಣ್ಣೀರಿಡುವುದರಲ್ಲಿ" ಗಮನಿಸಬಹುದು. ಇಂತಹ ಅನೇಕ ಕೃತಿ ವಿವರಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ಗ್ರಹಿತಗಳನ್ನು ಗುರುತಿಸಲಾಗಿದೆ.

ವಸಾಹತುಶಾಹಿಯ ಭಾಗವಾಗಿ ಬಂದ ಆಧುನಿಕ ಶಿಕ್ಷಣವು ಭಾರತೀಯ ಸಮುದಾಯದಲ್ಲಿ ಮೂಡಿಸಿದ ಎಚ್ಚರದ ಜೊತೆಗೆ ಅನೇಕ ವಿಕಾರಗಳನ್ನು ತಂದೊಡ್ಡಿತು ಎಂಬುದು ಸ್ಪಷ್ಟ. ಆಧುನಿಕ ಶಿಕ್ಷಣ ಪಡೆದ ಹೂವಯ್ಯ, ಶ್ರೀನಿವಾಸ, ಜಗನ್ನಾಥ, ಘನಶ್ಯಾಮ ಆ ಪರಿಸರಕ್ಕೆ ಒಂದು ರೀತಿ ಪರಕೀಯರಾಗಿ ಕಾಣತೊಡಗುತ್ತಾರೆ. 'ಕಾನೂರು ಹೆಗ್ಗಡತಿ'ಯ ರಾಮಯ್ಯನಂತವರು ಪರಂಪರಾಗತ ಮೌಲ್ಯವೂ ಉಳಿಯದೆ, ಆಧುನಿಕ ಮೌಲ್ಯವನ್ನೂ ಮೈಗೂಡಿಸಿಕೊಳ್ಳಲಾರದೆ ತ್ರಿಶಂಕು ಸ್ಥಿತಿ ತಲುಪುತ್ತಾರೆ. 'ಸಂಸ್ಕಾರ'ದ ನಾರಾಣಪ್ಪ, 'ವ್ಯಾಮೋಹ'ದ ನೇರಲಮನೆ ರಾಮಯ್ಯನ ವಿಲಾಸ ಪ್ರವೃತ್ತಿಯು ಆಧುನಿಕ ಶಿಕ್ಷಣದಿಂದಲೇ ಮೂಡಿದ್ದು. 'ನಂಬಿಕೆಟ್ಟವರಿಲ್ಲವೊ' ಬೊಮ್ಮಯ್ಯನಂತವನು ಪರಿಸರದಿಂದ, ಪರಂಪರಾಗತ ವೃತ್ತಿಯಿಂದ ದೂರವಾಗಿ ತನ್ನ ಪರಿಸರ ಮತ್ತು ಕುಟುಂಬದಲ್ಲಿ ಹೀನ ಸಂಸ್ಕೃತಿ ಕಾಣುವ ದೃಷ್ಟಿಕೋನವು ಕೂಡ ಆಧುನಿಕ ಶಿಕ್ಷಣದ ಫಲವಾಗಿಯೆ ಬಂದುದು. ಇದನ್ನೆಲ್ಲಾ ನನ್ನ ಅಧ್ಯಯನದಲ್ಲಿ ಚರ್ಚಿಸಿದ್ದೇನೆ.

ಇಷ್ಟಾದರೂ ತಳಸಮುದಾಯವನ್ನು ಆಧುನಿಕ ಶಿಕ್ಷಣ ಮುಟ್ಟಿದುದು ಬಹಳ ತಡವಾಗಿ ಅವರಿನ್ನೂ ಒಡೆಯರ ಕೂಲಿಯಾಳುಗಳೇ. ಅವರು ಹೊಸ ಕಾನೂನಿನ ಹಿನ್ನೆಲೆಯಲ್ಲಿ ಜೀತಮುಕ್ತರಾಗಿರಬಹುದು ; ಕೂಲಿತನದಿಂದ ಮುಕ್ತರಾಗಿಲ್ಲ. ಹಾಗಿದ್ದೂ ಆಧುನಿಕ ಶಿಕ್ಷಣದ ಹಂಬಲ ಮೂಡುತ್ತಿರುವುದು ಆಶಾದಾಯಕ ಸಂಗತಿ ಎಂಬುದನ್ನು ಕಥಾಸಾಹಿತ್ಯದ ಹಿನ್ನೆಲೆಯಲ್ಲಿ ನನ್ನ ಈ ಅಧ್ಯಯನ ಗುರುತಿಸಿದೆ.

ಮತಾಂತರದ ಉದ್ದೇಶದ ಹಿನ್ನೆಲೆಯಲ್ಲಿ ಕ್ರೈಸ್ತ ಮಿಷನರಿಗಳು ಆರೋಗ್ಯ ಸೇವೆ, ಶೈಕ್ಷಣಿಕ ಸೇವೆಯ ಜೊತೆಯಲ್ಲಿ ಯಂತ್ರನಾಗರಿಕತೆಯ ಅನೇಕ ಉತ್ಪಾದನಾ ವಸ್ತುಗಳನ್ನು ಆಮಿಷದ ರೂಪದಲ್ಲಿ ಈ ಪರಿಸರಕ್ಕೆ ಪರಿಚಯಿಸಿದರು. ಅವು ಇಲ್ಲಿನ ಜನಸಮುದಾಯದಲ್ಲಿ ಕುತೂಹಲ, ಬೆರಗು, ತಲ್ಲಣ, ಆಕರ್ಷಣೆ, ನಿರಾಕರಣೆ, ಸ್ವೀಕರಣೆಯ ಭಾವವನ್ನು ಮೂಡಿಸುತ್ತಲೇ ಇಲ್ಲಿನ ಜೀವನ ಕ್ರಮದಲ್ಲಿ ಬೆರೆತು ಹೋದವು. ಸೈಕಲ್ ಆಧುನಿಕತೆಯ ರೂಪಕವಾಗಿಯೇ ಪ್ರವೇಶಿಸುತ್ತದೆ. ಈ ಹಿನ್ನೆಲೆಯಲ್ಲಿ ವಸಾಹತುಶಾಹಿ ರೂಪಿಸುವ ಮನೋಧರ್ಮ ಯಾವ ಬಗೆಯದು ಎಂಬುದನ್ನು ಕಂಡುಕೊಳ್ಳಲಾಗಿದೆ. ಇಂತಹ ಆಧುನಿಕ ವಸ್ತು ಪ್ರಪಂಚವು ಪ್ರತಿಷ್ಠೆಯ ಪ್ರಶ್ನೆಯಾಗಿಯೂ ಮೂಡತೊಡಗಿದ ಬಗೆ ಯಾವುದು ಎಂಬುದು ಕುತೂಹಲಕಾರಿಯಾಗಿದೆ. ಯಂತ್ರನಾಗರಿಕತೆಯ ವೇಗ ಎಂತಹ ಸಮಸ್ಯೆಯನ್ನು ಉಂಟು ಮಾಡಬಲ್ಲದು ಎಂಬುದನ್ನು ನೋಡಲಾಗಿದೆ. ಆದಾಗ್ಯೂ ಸಾಮಾಜಿಕ ಅಸಮಾನತೆಯಾದ ಸ್ಪೃಶ್ಯ-ಅಸ್ಪೃಶ್ಯತೆಯನ್ನು ತೊಡೆದುಹಾಕಬಲ್ಲ ಆಧುನಿಕ ರೂಪಕವಾಗಿ ಸೈಕಲ್ ಬಂದಿರುವುದನ್ನು ನನ್ನ ಅಧ್ಯಯನದ ವಿಶ್ಲೇಷಣೆಯಲ್ಲಿ ಕಂಡುಕೊಳ್ಳಲಾಗಿದೆ.

ಈ ಪರಿಸರದಲ್ಲಿ ಜೀವನೋಪಾಯದ ಮಾರ್ಗವಾಗಿದ್ದ 'ಅರವಟ್ಟಿಗೆ' ವಸಾಹತುಶಾಹಿ ಪ್ರವೇಶದೊಂದಿಗೆ 'ಹೋಟೆಲ್' ರೂಪ ಪಡೆದುಕೊಳ್ಳುತ್ತದೆ. ಉದ್ಯಮ ರೂಪ ಪಡೆದ ಇದು ಸುದ್ದಿ ಮಾಧ್ಯಮದ ಕೇಂದ್ರವಾಗಿ, ಧರ್ಮ ನಿರಪೇಕ್ಷ ಸಂಸ್ಥೆಯಾದ ಬಗೆ ಕುತೂಹಲಕಾರಿಯಾದುದು. ಹಾಗೆ ಬ್ರಾಹ್ಮಣ ಮತ್ತು ದಲಿತ ಸಮುದಾಯಗಳಿಗೆ ಭಿನ್ನವಾದ ನೆಲೆಗಳನ್ನು ತೆರೆದುಕೊಂಡಂತಹದನ್ನು ಗುರುತಿಸಲಾಗಿದೆ. ದಲಿತ ಸಮುದಾಯಗಳಿಗೆ ಹೋಟೆಲ್ ಸಾಮಾಜಿಕವಾಗಿ ನಿಷಿದ್ಧತೆಯನ್ನು ಮೀರುವ ನೆಲೆಯಾಗಿ ಕಂಡರೆ ಬ್ರಾಹ್ಮಣ ಸಮುದಾಯಕ್ಕೆ ಹೆಚ್ಚು ಲಾಭ ತರುವ ಉದ್ಯಮವಾಗಿ ಕಂಡಿತು. ಹೋಟೆಲ್ ನಮ್ಮ ಸಂರಚನೆಗಳಲ್ಲೇ ಸ್ಥಿತ್ಯಂತರವನ್ನುಂಟು ಮಾಡಿದೆ.

ನನ್ನ ಸಾಂಸ್ಕೃತಿಕ ಅಧ್ಯಯನಕ್ಕೆ ಕಥಾಸಾಹಿತ್ಯವು ಪ್ರಮುಖ ಆಕರವಾಗಿದ್ದು ಅವುಗಳನ್ನು ಗಮನಿಸಿ ಉಡುಪು, ಕ್ರಾಪು, ವೇಷಗಳು ಈ ಪರಿಸರದಲ್ಲಿ ಹೇಗೆ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ತಂದುಕೊಟ್ಟಿತು ಎಂಬುದನ್ನು ಸೂಕ್ಷ್ಮ ವಿವರಗಳಲ್ಲಿ ಗುರುತಿಸಿದ್ದೇನೆ. ಇವು ತಂದುಕೊಟ್ಟ ವಿವಿಧ ತಲ್ಲಣಗಳ ಬಗೆಗಳು ಯಾವುದೆಂಬುದರ ತಾತ್ವಿಕ ಚರ್ಚೆಯೂ ನನ್ನ ನಿಬಂಧದಲ್ಲಿದೆ. ಹಾಗೆ ವಸಾಹತುಶಾಹಿ ತಂದುಕೊಟ್ಟ ಅನುಕೂಲಗಳ ಬಗ್ಗೆ ಹಿತಕರ ಭಾವನೆ ಇರುವಂತೆಯೇ ಪರಂಪರೆಯೊಂದಿಗಿನ ಸಂಬಂಧದ ಬಿರುಕುಗಳು ಅಹಿತಕರವಾಗಿಯೂ ಕಾಣಿಸಿಕೊಂಡಿದ್ದರ ವಿವರವಿದೆ.

ಮಲೆನಾಡ ಪಾನೀಯಗಳು, ಹಬ್ಬದ ಆಚರಣೆಗಳು ನಿಸರ್ಗ ಸಹಜವಾದ ಸ್ಥಳೀಯ ಕಾರಣಗಳಿಂದ ರೂಪಿತಗೊಂಡಿದ್ದವು. ಇದರ ಸ್ಥಾನವನ್ನು ವಿಲಾಯಿತಿಯಿಂದ ಬಂದ ಪಾನೀಯಗಳು, ನಗರ ಸಂಸ್ಕೃತಿಗಳು ಆಕ್ರಮಿಸಿ ಅವುಗಳನ್ನು ಹಿಂದೆ ತಳ್ಳಲ್ಪಟ್ಟವುಗಳಾಗಿ ಅಥವಾ ಯಾಂತ್ರಿಕ ಆಚರಣೆಗಳಾಗಿ ಪರಿಣಮಿಸಿರುವ ಬಗ್ಗೆ ವಿಶ್ಲೇಷಿಸಲಾಗಿದೆ. ಪುರೋಹಿತಶಾಹಿಯಿಂದ, ಸಾಲದ ಪಾಶದಿಂದ ವಿಮುಕ್ತಿ ಪಡೆಯುವ ಮಂತ್ರಮಾಂಗಲ್ಯದಂತಹ ಸುಧಾರಿತ ಕಾರ್ಯಗಳೂ ಪ್ರಮುಖವಾಗಲಿಲ್ಲ. ಬದಲಿಗೆ ಹುಸಿ ಪ್ರತಿಷ್ಠೆಯಾದ ವಿದೇಶಿ ಪಾನೀಯಗಳು, ವಸ್ತ್ರಾಲಂಕಾರಗಳು, ಅದ್ದೂರಿ ಮದುವೆಗಳು ವಿರಾಜಮಾನವಾದವು. ಈ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.

ವಸಾಹತುಶಾಹಿ ಪ್ರವೇಶ ಆ ಮೂಲಕ ಬಂದ ಆಧುನಿಕತೆ ಹಾಗೂ ಒಳಗಿನ ಒತ್ತಡದಿಂದಲೇ ಆಸ್ಫೋಟಗೊಂಡ ಹೊಸ ಬಗೆಯ ಆಲೋಚನೆಗಳು ಮಲೆನಾಡ ಸ್ತ್ರೀ ಸಮುದಾಯದಲ್ಲಿ ಸಂಚಲನವನ್ನುಂಟು ಮಾಡಿವೆ. ಇಲ್ಲಿ ನೆಲೆಸಿರುವ ಎಲ್ಲ ಸಮುದಾಯಗಳಲ್ಲೂ ಸ್ತ್ರೀಯರ ಸಾಮಾಜಿಕವಾದ ಸ್ಥಾನಮಾನಗಳಲ್ಲಿ ಅಂತಹ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ. ಎಲ್ಲ ಸಮುದಾಯದ ಸ್ತ್ರೀಯರು ಪುರುಷನ ಅಧೀನಕ್ಕೆ ಒಳಪಟ್ಟವರೇ. ಆದರೆ ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ಮಹಿಳೆಯರ ಬಗ್ಗೆ ಇರುವ ವಿಧಿ, ನಿಷೇಧಗಳು ಸಾಮಾಜಿಕ ಮೇಲುಸ್ತರದ ಸಮುದಾಯದಲ್ಲಿ ತೀವ್ರವಾಗಿದ್ದು, ಸಾಮಾಜಿಕವಾಗಿ ಕೆಳಹಂತಕ್ಕೆ ಬಂದಂತೆಲ್ಲಾ ಸಡಿಲಗೊಳ್ಳುತ್ತಾ ಬಂದಿರುವುದನ್ನು ಕಾಣಬಹುದು. ಇದರೊಳಗೇ ಸ್ಥಿತ್ಯಂತರಗಳು ಮೂಡುವ ಕ್ರಮವೂ ಇದೆ. ಪ್ರಾತಿನಿಧಿಕವಾಗಿ ಫಣಿಯಮ್ಮನಲ್ಲಿ ಅನುಭವ ಜನ್ಮವಾಗಿ ರೂಪಗೊಳ್ಳುವ ಆಧುನಿಕತೆ ವಿಶೇಷವಾದುದು. "ಒಂದು ಸಂಸ್ಕೃತಿ ತನ್ನ ಒಳಗಿನಿಂದಲೇ ಆಧುನಿಕತೆಯನ್ನು ಹೇಗೆ ಸಾಧಿಸಬಲ್ಲದು ಎನ್ನುವುದಕ್ಕೆ ನಿದರ್ಶನ........ ಬಾಲ ವೈಧವ್ಯದಂಥ ದೈನ್ಯದ ಅವಸ್ಥೆಯನ್ನೇ ಶಕ್ತಿಯ ಕೇಂದ್ರವನ್ನಾಗಿ

ಫಣಿಯಮ್ಮ ಪರಿವರ್ತಿಸಿಕೊಂಡುದು ಸಾಮಾನ್ಯ ಸಾಧನೆಯಲ್ಲ".[೨] ಸಾಂಪ್ರದಾಯಿಕ ಮೌಲ್ಯಗಳಾದ ಪುರುಷ ಪ್ರಧಾನ್ಯತೆ, ಪಾತಿವ್ರತ್ಯ, ವಿವಾಹ ಮುಂತಾದವುಗಳನ್ನು ಅನುಮಾನದಿಂದ ನೋಡುವ ಭಾವ ಕಾಣಬಹುದು. ಇಂತಹ ವೈಚಾರಿಕತೆ ಅವಳ ಅನುಭವದಲ್ಲಿ ಮೂಡಲು ಆಧುನಿಕ ವ್ಯವಸ್ಥೆಯಾದ ಅಂಚೆಮನೆಯಲ್ಲಿ ಆಕೆ ಹುಟ್ಟಿದ್ದೂ ಕಾರಣ ಎಂಬುದು ಸ್ಪಷ್ಟ. ಕೆಲವು ವಿಧವೆಯರು ವಿಧವಾ ಆಚರಣೆಯ ವಿರುದ್ಧ, ಆರ್ಥಿಕ ಶೋಷಣೆಯ ವಿರುದ್ಧ ಬಂಡಾಯವೆದ್ದವರಿದ್ದಾರೆ. ಬದಲಾದ ಕಾಲಗತಿಯಲ್ಲಿ ಪುರುಷ ಪ್ರಧಾನ ಚಿಂತನೆ ಕೂಡ ಈ ಬಗ್ಗೆ ಚರ್ಚಿಸುತ್ತದೆ ; ಒಪ್ಪುತ್ತದೆ ಎಂಬುದು ಕುತೂಹಲಕಾರಿಯಾದ ಅಂಶ. ಆಧುನಿಕತೆಗೆ ತೆರೆದುಕೊಂಡ ಕೆಲವು ಸ್ತ್ರೀಯರು ಪರಂಪರಾಗತ ವೃತ್ತಿ ಬದುಕನ್ನು, ಜೀವನಕ್ರಮವನ್ನು ಮೀರುವುದನ್ನು ಚರ್ಚಿಸಲಾಗಿದೆ. ಮಲೆನಾಡ ಪರಿಸರದ ಒಕ್ಕಲಿಗರ ಸಮುದಾಯದಲ್ಲಿದ್ದ 'ಕೂಡಿಕೆ' ಸಂಪ್ರದಾಯದ ಹಿನ್ನೆಲೆಯ ಮನೋಭಾವವನ್ನು ನನ್ನ ಅಧ್ಯಯನ ಕ್ರಮದಿಂದ ಕಂಡುಕೊಳ್ಳಲು ಸಾಧ್ಯವಾಯಿತು.

ತಳಸಮುದಾಯಗಳಲ್ಲಿ ಸ್ತ್ರೀಯಂತೆ ಅನಿವಾರ್ಯವಾದ ಕೆಲವು ಕಾರಣಗಳಿಂದ ಪುರೋಹಿತಶಾಹಿಯ ಕಟ್ಟುಪಾಡುಗಳಷ್ಟು ಬಿಗಿಯಾದ ರೀತಿಯಲ್ಲಿ ಒಳಗಾಗದಿದ್ದರೂ ಒಡೆಯ–ಒಡೆತನಗಳ ಕಟ್ಟುಪಾಡುಗಳಿಗೆ ಒಳಗಾಗಿರುವುದನ್ನು ಕಾಣಬಹುದು. ಈ ಸಮುದಾಯ ಒಡೆಯನ ಆಸ್ತಿಯೇ ಹೊರತು, ತಮ್ಮದೇ ಆದ ಆಸ್ತಿ ಹೊಂದಿದವರಲ್ಲ. ಕುಟುಂಬದ ನಿರ್ವಹಣೆಗೆ ಸ್ತ್ರೀ–ಪುರುಷ ಇಬ್ಬರೂ ಒಡೆಯನ ಮನೆಯಲ್ಲಿ ದುಡಿಯಬೇಕು. ಇಲ್ಲಿನ ಸ್ತ್ರೀ ಮನೆಯೊಳಗಿನ ದುಡಿಮೆಯಲ್ಲದೆ ಮನೆಯ ಹೊರಗೂ ದುಡಿಯಲೇಬೇಕು. ಈ ದುಡಿಮೆ ಆಕೆಯಲ್ಲಿ ಸ್ವಾಭಿಮಾನ ಮೂಡಿಸಿದೆ. ಆಕೆ ತನ್ನ ಮನೆಯ ಪುರುಷ ಪ್ರಾಧಾನ್ಯತೆಯನ್ನು ಕೆಲವೊಮ್ಮೆ ಮೀರಬಲ್ಲಳು, ಆದರೆ ಒಡೆಯನನ್ನು ಮೀರಲಾರದ ಅಸಾಹಾಯಕತೆ ಇದೆ. ಇದನ್ನು ತಿಮ್ಮಿ, ಅಬ್ಬಕ್ಕ, ಅಕ್ಕು ಅಂತವರು ಏಕಕಾಲದಲ್ಲಿ ಎರಡೂ ವ್ಯವಸ್ಥೆಯನ್ನು ಮೀರಬಲ್ಲರು. ಈ ಸಮುದಾಯಗಳಿಗೆ ಆಧುನಿಕತೆ ತೀವ್ರವಾದ ಸ್ಥಿತ್ಯಂತರಗಳಿಗೆ ಕಾರಣವಾಗದೇ ಹೋದರೂ ಎದ್ದಿರುವ ಕಿರುತೆರೆಗಳು ಮುಂದಿನ ಹೆದ್ದೆರೆಗಳಿಗೆ ಕಾರಣವಾಗಬಹುದೆನ್ನುವ ನೆಲೆಯಲ್ಲಿ ವಿವರಗಳನ್ನು ಚರ್ಚಿಸಲಾಗಿದೆ. ಎಷ್ಟೇ ಬಿಗಿಯಾದ ಪುರುಷ ಪ್ರಧಾನ ಸಾಮಾಜಿಕ ಬದುಕಿನಲ್ಲಿ ಹೆಣ್ಣು ಬಸವಳಿದಿದ್ದರೂ ಆಧುನಿಕ ಶಿಕ್ಷಣದ ಕಾರಣದಿಂದ ಅವಳ ಬಿಡುಗಡೆಯ ಸಾಧ್ಯತೆಗಳು ದೊರಕಿವೆಯೆಂಬುದು ಕಥಾಸಾಹಿತ್ಯದಲ್ಲಿ ಬರುವ ಸೀತೆ, ನೇತ್ರಾವತಿ, ಸರಸ್ವತಿ, ವಿಮಲೆ, ವಿನೋದಿನಿ ಮೊದಲಾದ ಪಾತ್ರಗಳ ಮೂಲಕ ಕಂಡುಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆ ಮಲೆನಾಡಿನಲ್ಲಿ ನಿಧಾನಗತಿಯಲ್ಲಿ ಸಾಗಿವೆ ಎಂಬುದು ನಿಜ.

ಒಟ್ಟು ಭಾರತೀಯ ಬದುಕಿನಲ್ಲಿ ಅಸ್ಪೃಶ್ಯತೆ, ಜಾತಿಪದ್ಧತಿ ಮತ್ತು ವರ್ಗಸಂಘರ್ಷಗಳು ಹೇಗಿವೆಯೋ ಹಾಗೆ ಮಲೆನಾಡ ಪರಿಸರವೂ ಭಿನ್ನವಾಗಿಯೇನೂ ಇಲ್ಲ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿರುವ ಅಸ್ಪೃಶ್ಯತೆ, ಜಾತಿಪದ್ಧತಿ ಮತ್ತು ವರ್ಗಸಂಘರ್ಷಗಳು ಒಂದರೊಳಗೊಂದು ಮಿಳಿತಗೊಂಡಿವೆ. ಈ ಪರಿಸರದ ಎಲ್ಲಾ ಜಾತಿ ಸಮುದಾಯದವರು ಸಾಮಾನ್ಯವಾಗಿ ಜಾತಿಪದ್ಧತಿಯ ಕಟ್ಟುಪಾಡುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಲೇ ಶ್ರೇಷ್ಠತೆಯ ವ್ಯಸನಕ್ಕೆ ಬಿದ್ದಿದ್ದಾರೆ. ತಮಗಿಂತ ಮೇಲುಜಾತಿಯೆಂದು ಯಾರನ್ನು

ತಿಳಿಯಲಾಗಿದೆಯೋ ಅವರನ್ನು ಅನುಕರಿಸುತ್ತಾರೆ. ಹಾಗೆ ತಮಗಿಂತ ಕೀಳು ಎಂದು ಯಾರನ್ನು ತಿಳಿಯಲಾಗಿದೆಯೋ ಅವರನ್ನು ನಿರಾಕರಿಸುತ್ತಾರೆ. ಈ ತಾರತಮ್ಯ ನೀತಿಗೆ ಜಾತಿ ಭಾವನೆಯ ಜೊತೆ ಆರ್ಥಿಕ ಸ್ಥಿತಿಯೂ ಪೂರಕವಾಗಿರುವುದು ಇಲ್ಲಿ ಮುಖ್ಯವಾಗಿದೆ. ಪ್ರಸ್ತುತ ನಿಬಂಧದಲ್ಲಿ ಆಧುನಿಕತೆ ತಂದ ಸಂಘರ್ಷವನ್ನು, ಸ್ಥಿತ್ಯಂತರಗಳನ್ನು ಗುರುತಿಸಲಾಗಿದೆ. ಆಧುನಿಕತೆಯು ಏಕಮುಖವಾಗದೆ, ಅದು ರೂಪಿಸಿದ ದ್ವಂದ್ವ ವ್ಯಕ್ತಿತ್ವವನ್ನು ಚರ್ಚಿಸಲಾಗಿದೆ. ಮಾನವೀಯತೆಯ ಹಿನ್ನೆಲೆಯಲ್ಲಿ ಹೂವಯ್ಯನಂತವರು, ಫಣಿಯಮ್ಮನಂತವರು ಜಾತಿ ತಾರತಮ್ಯವನ್ನು ಮೀರಿ, ಯಾವ ಸಂಪ್ರದಾಯಕ್ಕೂ ಮನ್ನಣೆ ನೀಡದೆ ನಡೆದುಕೊಳ್ಳುವುದನ್ನು ಕಾಣಬಹುದು. ಹಾಗೆ ಜಗನ್ನಾಥನಂತವರು ವರ್ಗ ಸ್ಥಿತಿಯನ್ನು ಕಳೆದುಕೊಳ್ಳಲು ಪ್ರಯತ್ನಿಸುವುದು, ಅಸ್ಪೃಶ್ಯತೆ, ಜಾತಿಪದ್ಧತಿಯನ್ನು ತೊಲಗಿಸಬೇಕೆಂದು ಹೋರಾಡುವುದು, ಹರಿಜನರು ತಾವಾಗೆ ತನ್ನನ್ನು ಮುಟ್ಟಿಸುವ ಆಸೆ ಹುಟ್ಟಿಸಬೇಕೆಂದು ಕ್ರಿಯಾಶೀಲನಾಗುವುದು ಆಧುನಿಕತೆಯಿಂದ ಬಂದ ವೈಚಾರಿಕ ತಿಳುವಳಿಕೆಯಾಗಿದೆ. ಈತನ ಪ್ರಯತ್ನ ವಿಫಲವಾದರೂ ಚಲನೆಯ ಮುಂದುವರಿಕೆಗೆ ಕಾರಣವಾಗುತ್ತದೆ ಎಂಬುದು ಮುಖ್ಯವಾಗುತ್ತದೆ. ಇದನ್ನು ನನ್ನ ನಿಬಂಧದಲ್ಲಿ ಕಂಡುಕೊಳ್ಳಲಾಗಿದೆ. ನೌರಾಣಪ್ಪನಂತವರು ಆಧುನಿಕತೆಯನ್ನು ಮೈಗೂಡಿಸಿಕೊಂಡು ಮೇಲುಕೀಳುಗಳನ್ನು ಮೀರಲೆತ್ನಿಸುವುದು ಸಾಮಾಜಿಕ ಸಮಾನತೆಗಾಗಿ ಹೋರಾಡುವ ಪ್ರಯತ್ನಕ್ಕಿಂತ ವೈಯಕ್ತಿಕ ಸುಖಾಪೇಕ್ಷೆಯೇ ಪ್ರಧಾನವಾಗುತ್ತದೆ. ಇಂತವರ ವಿರೋಧಗಳು ಹೊರ ವಿರೋಧವೇ ಹೊರತು ಸೃಜನಾತ್ಮಕ ವಿರೋಧವಲ್ಲ. ಆದಾಗ್ಯೂ ಮಲೆನಾಡ ಪರಿಸರದ ಜೀವನಕ್ರಮದ ಪಲ್ಲಟಗಳಿಗೆ ಇಂತಹದ್ದೂ ಕೂಡ ಕಾರಣವಾಗಿದೆ.

ಚಾರಿತ್ರಿಕವಾಗಿ ಗಾಂಧಿ ತೀರ್ಥಹಳ್ಳಿಗೆ (೧೯೨೬) ಭೇಟಿ ನೀಡಿದ್ದರೂ, ಈ ಪರಿಸರದ ಮೇಲೆ ಪ್ರಭಾವ ಬೀರಿದ್ದರೂ ಅಸ್ಪೃಶ್ಯತೆಯ ನಿವಾರಣೆ ವೇದಿಕೆಯ ಮೇಲಿನ ಹೇಳಿಕೆಯಾದ ಬಗೆಯನ್ನು ಚರ್ಚಿಸಲಾಗಿದೆ. ಆಧುನಿಕತೆ ಪ್ರವೇಶ ಮಾಡಿದಾಗ ಉಂಟಾದ ಜಾತಿ ಪದ್ಧತಿಯ ದ್ವಂದ್ವಾತ್ಮಕ ನೆಲೆ ಇನ್ನೂ ಮುಂದುವರಿಯುತ್ತಲೇ ಇದೆ.

ಚಾರಿತ್ರಿಕವಾಗಿ ಗಮನಿಸಿದಾಗ ದೇವಾದಾಯ, ಬ್ರಹ್ಮಾದಾಯ, ರಾಜಾದಾಯ ಮೊದಲಾದ ಸ್ವರೂಪದಲ್ಲಿ ಉಳಿಗಮಾನ್ಯ ಅಥವಾ ಜಮೀನ್ದಾರ ಪದ್ಧತಿ ಲಾಗಾಯ್ತಿನಿಂದಲೂ ಇತ್ತು. ಬ್ರಿಟಿಷ್ ಆಳ್ವಿಕೆಯಲ್ಲಿ ಈ ಜಮೀನ್ದಾರಿಕೆ ಪದ್ಧತಿ ಅಧಿಕೃತ ರೂಪವನ್ನು ಪಡೆಯಿತು. ಬ್ರಿಟಿಷ್ ಆಡಳಿತದ ಜೊತೆ ಜಮೀನ್ದಾರರು ಸಂಬಂಧ ಸ್ಥಾಪಿಸಿಕೊಂಡ ಹಿನ್ನೆಲೆಯಲ್ಲಿ ಜಮೀನ್ದಾರರು ವ್ಯವಸ್ಥಿತ ಶೋಷಕರು ಮತ್ತು ಗೇಣಿದಾರರು ವ್ಯವಸ್ಥಿತ ಶೋಷಿತರೂ ಆದರು. ಭಾರತದ ದೇಶದ ಆಹಾರ ಉತ್ಪಾದನೆಯ ಕುಸಿತದಲ್ಲಿ ಭೂಮಿಯ ಮಾಲಿಕತ್ವಕ್ಕೂ ಉಳುಮೆಗಾರನಿಗೂ ಸಂಬಂಧವಿಲ್ಲದ್ದು ಪ್ರಮುಖ ಕಾರಣವೆಂಬುದನ್ನು ಸ್ವತಂತ್ರ್ಯ ಭಾರತ ಕಂಡುಕೊಳ್ಳುವ ಪ್ರಯತ್ನ ಮಾಡಿತು ಅಥವಾ ರೈತರ ಹೋರಾಟ ಅದನ್ನು ಕಾಣುವಂತೆ ಮಾಡಿತು. ಜಮೀನ್ದಾರ ಮತ್ತು ಗೇಣಿದಾರನ ನಡುವಿನ ಸಂಬಂಧ ಬಹುಮುಖಿಯಾಗಿರುವುದನ್ನು ಕ್ಷೇತ್ರ ಕಾರ್ಯ, ಕಥಾಸಾಹಿತ್ಯದ ಅಧ್ಯಯನದಿಂದ ಈ ನಿಬಂಧದಲ್ಲಿ ಕಂಡುಕೊಂಡ ಅಂಶವನ್ನು ನಿರೂಪಿಸಿದ್ದೇನೆ. ಈ ಬಹುರೂಪಿ ಹಿಡಿತವೇ ಗೇಣಿದಾರನು ನಿರಂತರ ಶೋಷಣೆಗೆ ಒಳಗಾದದ್ದನ್ನು, ಸಂಘಟನೆಯ ಶಕ್ತಿ ರೂಪು ಪಡೆಯಲು ಅಸಾಧ್ಯವಾದದ್ದನ್ನು ಸೂಚಿಸುತ್ತದೆ. ಮಲೆನಾಡ ಪರಿಸರದ

ಸಾಗರ ಪ್ರಾಂತ್ಯದಲ್ಲಿ ನಡೆದ ಕಾಗೋಡು ಸತ್ಯಾಗ್ರಹ 'ಉಳುವವನೆ ನೆಲದೊಡೆಯ' ಎಂಬ ಕಾನೂನು ರೂಪಗೊಳ್ಳಲು ಕಾರಣವಾಗುತ್ತದೆ. ಭೂ ಸುಧಾರಣೆ ಕಾನೂನು ಬಂದಾಗ ಒಡೆಯ ಗೇಣಿದಾರನ ನಡುವಿನ ಸಂಬಂಧದ ಸ್ವರೂಪಗಳನ್ನು ಚರ್ಚಿಸಲಾಗಿದೆ. ಜಮೀನ್ದಾರರು ಜಮೀನನನ್ನು ಕಳೆದುಕೊಂಡರೂ ಜನಸಮುದಾಯದ ಮೇಲಿನ ತನ್ನ ಹಿಡಿತ ರಾಜಕೀಯ ಅಧಿಕಾರದ ರೂಪದಲ್ಲಿ ಮರಳಿ ಬಂದ ಪರಿಯನ್ನು ಚರ್ಚಿಸಲಾಗಿದೆ. ಕಾಗೋಡು ಸತ್ಯಾಗ್ರಹ ೧೯೬೫ರಲ್ಲಿ ಬಂದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮೇಲೆ ಪ್ರಭಾವ ಬೀರಿಲ್ಲವೆ? ಎಂಬ ಬಗ್ಗೆ ಈ ನಿಬಂಧದಲ್ಲಿ ಚರ್ಚಿಸಲಾಗಿದೆ.

ಹೀಗೆ ನನ್ನ ನಿಬಂಧದಲ್ಲಿ ನಾನು ರೂಪಿಸಿಕೊಂಡು ಚೌಕಟ್ಟಿನ ಒಳಗೆ ಮಲೆನಾಡ ಪರಿಸರದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಶೋಧಿಸುವ ಪ್ರಯತ್ನ ಮಾಡಿದ್ದೇನೆ. ಮಲೆನಾಡಿನ ಸಾಂಸ್ಕೃತಿಕ ಚರಿತ್ರೆಯ ಹುಡುಕಾಟಕ್ಕೆ ಹೊರಟಾಗ ಕುವೆಂಪು ಅವರ ಕೃತಿಗಳೇ ಮೊದಲ ಮತ್ತು ಬಹಳ ಮುಖ್ಯವಾದ ಆಕರಗಳಾಗಿವೆ. ಕುವೆಂಪು ಅವರ ಕಾದಂಬರಿಗಳು ಮತ್ತು ಆತ್ಮಕಥೆ ಮಲೆನಾಡಿನ ಸಾಂಸ್ಕೃತಿಕ ಬದುಕಿನ ಮಹಾಕೋಶದಂತಿವೆ. ಆದಕಾರಣ ನನ್ನ ಸಂಶೋಧನೆಯ ಉದ್ದಕ್ಕೂ ಪ್ರಧಾನವಾಗಿ ಬಳಸಿಕೊಂಡಿದ್ದೇನೆ. ಕುವೆಂಪು ಅವರ ಸಮಕಾಲೀನರಾದ ಕಡಿದಾಳ್ ಮಂಜಪ್ಪನವರು ಈ ನಾಡಿನ ಶ್ರೇಷ್ಠ ರಾಜಕೀಯ ನೇತಾರರಾಗಿದ್ದವರು. ಅವರ 'ಪಂಜರವಳ್ಳಿ ಪಂಜು' ಕಾದಂಬರಿ ಮತ್ತು 'ನನಸಾಗದ ಕನಸು' ಎಂಬ ಕೃತಿ ಮಲೆನಾಡಿನ ಅಂದಿನ ಬದುಕಿನ ಬಗ್ಗೆ ಬೆಳಕು ಚೆಲ್ಲಿವೆ. ಹೆಚ್ಚು ಕಡಿಮೆ ಇವರ ಸಮಕಾಲೀನರಾದ ಇಂದಿರಾ ಎಂ.ಕೆ. ಅವರು ೬೦ರ ದಶಕದಲ್ಲಿ ನಿಂತು ಬರೆಯುತ್ತಿದ್ದರೂ ಮಲೆನಾಡ ಆವರಣವುಳ್ಳ ಅವರ ಕಥಾಜಗತ್ತಿನ ಕಾಲಘಟ್ಟ ಹಿಂದಿನದೆ. ಅಂದರೆ ಈ ಮೂರು ಜನಲೇಖಕರ ಕಥಾ ಜಗತ್ತಿನ ಕಾಲಘಟ್ಟ ೧೯ನೇ ಶತಮಾನದ ಕೊನೆ ಮತ್ತು ೨೦ನೇ ಶತಮಾನದ ಪೂರ್ವಾರ್ಧವಾಗಿದೆ. ನಂತರ ಬಂದ ಅನಂತಮೂರ್ತಿ ಯು.ಆರ್. ಮತ್ತು ಬಿಳುಮನೆ ರಾಮದಾಸ್ ಅವರ ಮಲೆನಾಡ ಪರಿಸರದ ಆವರಣವುಳ್ಳ ಕಥಾಜಗತ್ತು ೨೦ನೇ ಶತಮಾನದ ಪೂರ್ವಾರ್ಧ ಮತ್ತು ಹೆಚ್ಚಾಗಿ ಉತ್ತರಾರ್ಧ ಕಾಲಘಟ್ಟವನ್ನು ಹೊಂದಿವೆ. ಮಲೆನಾಡ ಪರಿಸರದಲ್ಲಿ ಆಧುನಿಕತೆ, ಆಧುನಿಕ ಶಿಕ್ಷಣದ ಪ್ರವೇಶ ಪಡೆಯುವ, ಹೊಸಚಿಂತನೆಗಳು, ವ್ಯಕ್ತಿ ವಿಶಿಷ್ಟತೆಗಳು ಮೂಡುವ, ಅನೇಕ ಕ್ಷೇತ್ರಗಳಲ್ಲಿ ಸುಧಾರಣೆಗಾಗಿ ಹೋರಾಟಗಳು ನಡೆಯುವ ತೀವ್ರವಾದ ಪ್ರಕ್ರಿಯೆಗಳನ್ನು ಕಾಣಬಹುದು. ಆ ಮೂಲಕ ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಒಟ್ಟು ಸಾಂಸ್ಕೃತಿಕ ಬದುಕಿನಲ್ಲಾಗುವ ಸ್ಥಿತ್ಯಂತರಗಳನ್ನು ಕಲಾತ್ಮಕವಾಗಿ ಇವರ ಕೃತಿಗಳು ಕಟ್ಟಿಕೊಟ್ಟಿವೆ. ನಂತರ ಬಂದ ವಸುಮತಿ ಉಡುಪ ಅವರು ೯೦ರ ದಶಕದಲ್ಲಿ ಬರೆಯಲು ಪ್ರಾರಂಭಿಸಿದ್ದರೂ ಅವರ ಕಥಾ ಸಾಹಿತ್ಯದಲ್ಲಿನ ಕಾಲಾವಧಿ ಹೆಚ್ಚಾಗಿ ೬೦, ೭೦ರ ದಶಕದ ಮಲೆನಾಡ ಪರಿಸರದ ಜಗತ್ತನ್ನು ಕೆಲವು ಕಥೆಗಳು ಹೊಂದಿವೆ. ಈ ರೀತಿ ಮಲೆನಾಡ ಪರಿಸರದ ಆರು ಜನ ಲೇಖಕರನ್ನು ಒಂದು ಕಾಲಾನುಕ್ರಮಣಿಕೆಯ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿಕೊಂಡ ವಿಶ್ಲೇಷಣೆ ಮಾಡಿದ್ದೇನೆ.

ಒಟ್ಟಿನಲ್ಲಿ ಈ ಮಹಾಪ್ರಬಂಧಕ್ಕೆ ಉದ್ದೇಶಿತ ಮಲೆನಾಡಿನ ಕಥಾಸಾಹಿತ್ಯವನ್ನು ಮತ್ತು ಪೂರಕವಾಗಿ ಕೆಲವು ದಾಖಲೆಗಳನ್ನು ಸಾಧಾರವಾಗಿಟ್ಟುಕೊಂಡು ಚರ್ಚಿಸಿದ್ದೇನೆ. ನಿರಂತರ ಬದಲಾವಣೆ ಹೊಂದುವ ಮಾನವನ ಬದುಕು ಹೊಸತನಕ್ಕೆ ಹಾತೊರೆಯುವುದು ಸಹಜ. ಇದು ಬಹುಕಾಲದಿಂದ ಒಳಗಿನ

ಒತ್ತಡದಿಂದ ಮೂಡಿರುವಂತಹದು. ಇದರ ಜೊತೆ ಜೊತೆಗೆ ಪಾಶ್ಚಾತ್ಯರ ಆಗಮನ ಮತ್ತು ಅವರ ಚಿಂತನಾ ವಿಧಾನ, ಜೀವನದ ರೀತಿ-ನೀತಿಗಳು, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಮುಂತಾದ ಕ್ಷೇತ್ರಗಳಲ್ಲಿ ಬಾಹ್ಯ ಪ್ರೇರಣೆಗಳನ್ನು ನಿಸ್ಸಂಶಯವಾಗಿ ಉಂಟು ಮಾಡಿದೆ. ಈ ಸಂಗತಿಯನ್ನು ನನ್ನ ಅಧ್ಯಯನ ಕಾಲಕ್ಕೆ ಗುರುತಿಸಿಕೊಂಡಿದ್ದೇನೆ. ಅಸಮಾನತೆಯಲ್ಲಿ ಶತಮಾನಗಳಿಂದ ಕಟ್ಟಿಕೊಂಡು ಬಂದಿದ್ದ ಮಲೆನಾಡಿನ ಬದುಕು ಅನ್ಯ ಸಂಸ್ಕೃತಿಯ ಪ್ರಭಾಕ್ಕೆ ಮುಖಾಮುಖಿಯಾಗಿ ತನ್ನ ಬದುಕಿನ ಹಾದಿಯಲ್ಲಿ ಹೊಸದನ್ನು ಆವಿಷ್ಕರಿಸಿಕೊಂಡಂತೆ ನಿರಂತರವಾಗಿ ಸ್ವೀಕಾರ ಮತ್ತು ನಿರಾಕರಣೆಯ ನೆಲೆಗಳಲ್ಲಿ ಮಲೆನಾಡು ಪ್ರಾಂತ್ಯ ತನ್ನ ತನವನ್ನು ಕಳೆದುಕೊಳ್ಳದೇ ಹೊಸದನ್ನು ಮೈಗೂಡಿಸಿಕೊಳ್ಳುತ್ತಾ ಬಂದಿದೆ. ಇದು ಈ ಭಾಗದ ಸೃಜನಶೀಲ ಸಾಹಿತ್ಯದಲ್ಲಿ ಅತ್ಯಂತ ಸೂಕ್ಷ್ಮವಾಗಿ ದಾಖಲಾಗಿದ್ದು, ಅದನ್ನು ಈ ಸಂಶೋಧನೆಯ ಕಾಲಕ್ಕೆ ಪ್ರಮಾಣಿಕವಾಗಿ ಗುರುತಿಸಿಕೊಂಡಿದ್ದೇನೆ.

ಹಾಗೆಂದು, ಕಥಾಸಾಹಿತ್ಯದಲ್ಲಿ ಬರುವ ಸಾಂಸ್ಕೃತಿಕ ಸ್ಥಿತ್ಯಂತರವೇ ತೀರ್ಥಹಳ್ಳಿಯಂತಹ ಮಲೆನಾಡು ಪರಿಸರದ ಸ್ಥಿತ್ಯಂತರದ ನಿಜವಾದ ಸ್ವರೂಪವೆಂದು ಸ್ಥಾಪಿಸಲು ಹೊರಟವನಲ್ಲ. ನಿಜವನ್ನು ಬಿಂಬಿಸುವುದು, ವಿವರಗಳನ್ನು ದಾಖಲಿಸುವುದು ಸಾಹಿತ್ಯದ ಕೆಲಸವಲ್ಲ ; ಇದು ಕಲಾತ್ಮಕವಾದ ಮಾಧ್ಯಮ ಎಂಬ ಅರಿವು ನನಗಿದೆ. ಮಲೆನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವವರಿಗೆ ಬೇರೆ ಬೇರೆ ಆಕರಗಳು, ಪರಿಕರಗಳು ಇವೆ. ಅವುಗಳಲ್ಲಿ ಸಾಹಿತ್ಯವೂ ಒಂದು. ಒಬ್ಬ ಲೇಖಕ ಲೋಕ ಸಂಗತಿಯನ್ನು ವಿಶಿಷ್ಟವಾಗಿ ಗ್ರಹಿಸಿ ಅದಕ್ಕೆ ಕಲಾತ್ಮಕ ರೂಪವನ್ನು ನೀಡಿರುತ್ತಾನೆ. ಬದುಕಿನ ಅನೇಕ ಸಂಗತಿಗಳು ಆ ಕಲಾ ರೂಪದಲ್ಲಿ ಸೂಕ್ಷ್ಮವಾಗಿ ದಾಖಲಾಗಿರುತ್ತವೆ. ನಾನು, ಮಲೆನಾಡ ಪರಿಸರದ ಸಾಂಸ್ಕೃತಿಕ ಸ್ಥಿತ್ಯಂತರಗಳು ಕೃತಿಯಲ್ಲಿ ಮೈದಾಳಿರುವ ಬಗೆಯನ್ನು ವಿಶ್ಲೇಷಿಸುತ್ತಾ, ತಮ್ಮ ಕೃತಿಗಳ ಮೂಲಕ ಲೇಖಕರು ತೋರಿದ ಪ್ರತಿಕ್ರಿಯೆಯನ್ನು ಚರ್ಚಿಸುತ್ತಾ ಮಲೆನಾಡಿನ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಈ ಹಿನ್ನೆಲೆಯಲ್ಲಿ ನನ್ನ ಶೋಧನೆಯನ್ನು ನಿಷ್ಪಕ್ಷಪಾತವಾಗಿ, ಪ್ರಾಮಾಣಿಕವಾಗಿ ಮಾಡಿದ್ದೇನೆ ಎಂದು ವಿನಮ್ರವಾಗಿ ಹೇಳಬಯಸುತ್ತೇನೆ.

ವಂದನೆಗಳು

ಅಡಿ ಟಿಪ್ಪಣಿ

೧. ಸುಮಿತ್ರ ಎಲ್.ಸಿ., ವಾಸುದೇವನ್ ನಾಯರ್ ಅವರ ಚೌಕಟ್ಟಿನ ಮನೆ ಮತ್ತು ಕುವೆಂಪು ಅವರ ಕಾನೂರು ಹೆಗ್ಗಡತಿ, ಕಾದಂಬರಿಗಳನ್ನು ಕುರಿತು ಕೆಲವು ವಿಚಾರಗಳು, ವಿಭಾವ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೭, ಪುಟ:೬೧

೨. ಆಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ : ಕಾದಂಬರಿ, ಶ್ರೀಹರಿ ಪ್ರಕಾಶನ, ಧಾರವಾಡ, ೧೯೯೪, ಪುಟ:೨೪೪

ಆಕರ ಗ್ರಂಥಗಳು

ಕಥಾಸಾಹಿತ್ಯ : ಕಾದಂಬರಿಗಳು

೧. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೦೧

೨. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨

೩. ಕಡಿದಾಳ್ ಮಂಜಪ್ಪ, ಪಂಜರವಳ್ಳಿ ಪಂಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೮.

೪. ಇಂದಿರಾ ಎಂ.ಕೆ., ಫಣಿಯಮ್ಮ, ಇಂದಿರಾ ಪ್ರಕಾಶನ, ಬೆಂಗಳೂರು, ೧೯೯೬.

೫. ಇಂದಿರಾ ಎಂ.ಕೆ., ತಗ್ಗಿನಮನೆ ಸೀತೆ, ಪ್ರಕಾಶನ ಸಾಹಿತ್ಯ, ಬೆಂಗಳೂರು, ೨೦೦೪.

೬. ಇಂದಿರಾ ಎಂ.ಕೆ., ತುಂಗ-ಭದ್ರ, ಶ್ರೀಲಕ್ಷ್ಮಿವೆಂಕಟೇಶ್ವರ ಪ್ರಕಾಶನ, ಬೆಂಗಳೂರು, ೨೦೦೨.

೭. ಅನಂತಮೂರ್ತಿ ಯು.ಆರ್., ಸಂಸ್ಕಾರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೮

೮. ಅನಂತಮೂರ್ತಿ ಯು.ಆರ್., ಭಾರತೀಪುರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೮

೯. ಅನಂತಮೂರ್ತಿ ಯು.ಆರ್., ಅವಸ್ಥೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬

೧೦. ಅನಂತಮೂರ್ತಿ ಯು.ಆರ್., ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧.

೧೧. ಬಿಳುಮನೆ ರಾಮದಾಸ್, ವ್ಯಾಮೋಹ, ಮಲೆನಾಡು ಪ್ರಕಾಶನ, ಬೆಂಗಳೂರು, ೧೯೯೦

೧೨. ಬಿಳುಮನೆ ರಾಮದಾಸ್, ಕುಂಜ, ಮಲೆನಾಡು ಪ್ರಕಾಶನ, ಬೆಂಗಳೂರು, ೧೯೯೩

೧೩. ಬಿಳುಮನೆ ರಾಮದಾಸ್, ತಲೆಮಾರು, ಜ್ಞಾನೋದಯ ಪಬ್ಲಿಕೇಷನ್ಸ್, ಬೆಂಗಳೂರು, ೧೯೯೮

೧೪. ಬಿಳುಮನೆ ರಾಮದಾಸ್, ಕರಾವಳಿಯ ಹುಡುಗಿ, ಸಿವಿಜಿ ಪಬ್ಲೀಕೇಷನ್ಸ್, ಬೆಂಗಳೂರು, ೨೦೦೪.

೧೫. ವಸುಮತಿ ಉಡುಪ, ಅನವರತ, ಅಂಕುರ ಪ್ರಕಾಶನ, ಬೆಂಗಳೂರು, ೧೯೯೯.

ಕಥಾಸಾಹಿತ್ಯ : ಸಣ್ಣಕಥೆಗಳು

೧. ಕುವೆಂಪು, ಸನ್ಯಾಸಿ ಮತ್ತು ಇತರ ಕಥೆಗಳು, ಉದಯರವಿ ಪ್ರಕಾಶನ, ಮೈಸೂರು ೧೯೯೧

೨. ಕುವೆಂಪು, ನನ್ನದೇವರು ಮತ್ತು ಇತರ ಕಥೆಗಳು, ಉದಯರವಿ ಪ್ರಕಾಶನ, ಮೈಸೂರು ೧೯೯೧

೩. ಅನಂತಮೂರ್ತಿ ಯು.ಆರ್. ಐದು ದಶಕದ ಕಥೆಗಳು, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೧.

೪. ವಸುಮತಿ ಉಡುಪ, ಬಂದನಾ ಹುಲಿರಾಯನು ಮತ್ತು ಇತರ ಕಥೆಗಳು, ಕರ್ನಾಟಕ ಸಂಘ, ಶಿವಮೊಗ್ಗ, ೧೯೯೬

ಇತರ ಕೃತಿಗಳು

೧. ಕುವೆಂಪು, ನೆನಪಿನದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩

೨. ಕಡಿದಾಳ್ ಮಂಜಪ್ಪ, ನನಸಾಗದ ಕನಸು, ಕಡಿದಾಳ್ ಪ್ರಕಾಶನ, ಬೆಂಗಳೂರು, ೧೯೯೦

೩. ತ್ಯಾನಂದೂರು ಪುಟ್ಟಣ್ಣ, ನಾನುಕಂಡ ಮಲೆನಾಡು, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಶಿವಮೊಗ್ಗ, ೧೯೯೭.

೪. ಅಂಬಳಿಕೆ ಹಿರಿಯಣ್ಣ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೫. ಕೌಲಾನಿ ಧರ್ಮಯ್ಯ (ಸಂ), ನಾಮಧಾರಿ, ತೀರ್ಥಹಳ್ಳಿ ತಾಲ್ಲೂಕು, ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ, ೧೯೦೧-೨೦೦೧, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ (ರಿ.), ೨೦೦೨.

ಪರಾಮರ್ಶನ ಗ್ರಂಥಗಳು

೧. ಅಗ್ರಹಾರ ಕೃಷ್ಣಮೂರ್ತಿ (ಸಂ), ಡಿ.ಆರ್.ನಾಗರಾಜ್ ಸಂಸ್ಕೃತಿ ಕಥನ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೨.

೨. ಅನಂತಮೂರ್ತಿ ಯು.ಆರ್., ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೭೧

೩. ಅನಂತಮೂರ್ತಿ ಯು.ಆರ್., ಪೂರ್ವಾಪರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬

೪. ಅಶೋಕ ಟಿ.ಪಿ., ಯು.ಆರ್.ಅನಂತಮೂರ್ತಿ ಒಂದು ಅಧ್ಯಯನ, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೧

೫. ಅಶೋಕ ಟಿ.ಪಿ., ಕುವೆಂಪು ಕಾದಂಬರಿ : ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೧

೬. ಅಶೋಕ ಟಿ.ಪಿ., ಪುಸ್ತಕ ಪ್ರೀತಿ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೩

೭. ಅಶೋಕ ಟಿ.ಪಿ., ಸಾಹಿತ್ಯ ಸಂಬಂಧ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೮

೮. ಅಶೋಕ ಟಿ.ಪಿ., ಶಿವರಾಮಕಾರಂತ : ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧

೯. ಅಶೋಕ ಟಿ.ಪಿ., ಪುಸ್ತಕ ಪ್ರೀತಿ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೩

೧೦. ಅಂಬಳಿಕೆ ಹಿರಿಯಣ್ಣ, ಮಲೆನಾಡ ಸಂಪ್ರದಾಯಗಳು, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು ೧೯೭೮.

೧೧ ಅರವಿಂದ ಮಾಲಗತ್ತಿ, ಡಾ.ಅಂಬೇಡ್ಕರ್ ವಿಚಾರಧಾರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೧

೧೨ ಅರವಿಂದ ಮಾಲಗತ್ತಿ, ದಲಿತ ಮಾರ್ಗ (ಸಂ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೧೩ ಅರವಿಂದ ಮಾಲಗತ್ತಿ (ಪ್ರಸಂ) ಕುವೆಂಪು ಕೃತಿ ವಿಮರ್ಶೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ವಿ.ವಿ.ಮೈಸೂರು, ೨೦೦೬

೧೪ ಆಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ : ಕಾದಂಬರಿ, ಶ್ರೀಹರಿ ಪ್ರಕಾಶನ, ಧಾರವಾಡ, ೧೯೯೪,

೧೫ ಆಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ : ಸಣ್ಣಕಥೆ, ಶ್ರೀಹರಿ ಪ್ರಕಾಶನ, ಧಾರವಾಡ, ೧೯೯೪,

೧೬. ಆಹಿತಾನಲ (ಸಂ) ಕುವೆಂಪು ಸಾಹಿತ್ಯ ಸಮೀಕ್ಷೆ (ಅಮೆರಿಕದ ಕನ್ನಡ ಸಾಹಿತ್ಯ ರಂಗದಿಂದ ಅರ್ಪಿತ) ವಸಂತ ಪ್ರಕಾಶನ, ಬೆಂಗಳೂರು, ೨೦೦೪

೧೭. ಉದ್ದಂಡಯ್ಯ, ಕುವೆಂಪು ಕಥನ, ಅಧ್ಯಯನ ಮಂಡಲ, ಬೆಂಗಳೂರು, ೨೦೦೪

೧೮. ಕಡಿದಾಳು ಎಸ್. ರಾಮಪ್ಪಗೌಡ, ಮಲೆನಾಡ ಶ್ರೀ ವೈಷ್ಣವ ನಾಮಧಾರಿಗೌಡ ಸಂಸ್ಕೃತಿ, ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ (ರಿ.) ತೀರ್ಥಹಳ್ಳಿ, ೧೯೯೮

೧೯. ಕಡಿದಾಳು ಎಸ್. ರಾಮಪ್ಪಗೌಡ, ಮಲೆನಾಡಿನ ಶಿಕಾರಿಯ ನೆನಪುಗಳು, ಕಡಿದಾಳು, ಸಹ್ಯಾದ್ರಿ ಪ್ರಕಾಶನ, ತೀರ್ಥಹಳ್ಳಿ, ೧೯೯೫

೨೦. ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೩

೨೧. ಕೊ.ಮ.ಕಾರಂತ, ಭಾರತೀಪುರ ಕುರಿತು, ಯು.ಆರ್.ಅನಂತಮೂರ್ತಿ ವ್ಯಕ್ತಿ–ಕೃತಿ (ಸಂ) ಮುರುಳೀಧರ ಉಪಾಧ್ಯ ಹಿರಿಯಡರ, ಕರ್ನಾಟಕ ಸಂಘ ಪುತ್ತೂರು, ೨೦೦೦

೨೨. ಕಾಳೇಗೌಡ ನಾಗವಾರ, ಜಿ.ವಿ.ಆನಂದಮೂರ್ತಿ (ಸಂ) ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೩. ಕೀರ್ತಿನಾಥ ಕುರ್ತುಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ವಿಶ್ವ ಕನ್ನಡ ಸಮ್ಮೇಳನ, ಬೆಂಗಳೂರು, ೧೯೮೩.

೨೪. ಕೀರ್ತಿನಾಥ ಕುರ್ತುಕೋಟಿ, ನೂರುಮರ ನೂರುಸ್ವರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಸಮ್ಮೇಳನ, ಬೆಂಗಳೂರು, ೧೯೮೩.

೨೫. ಕೀರ್ತಿನಾಥ ಕುರ್ತುಕೋಟಿ, ಕನ್ನಡ ಸಾಹಿತ್ಯ ಸಂಗಾತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫

೨೬. ಕೃಷ್ಣಪ್ಪ.ಬಿ. ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರಣ, ಕುವೆಂಪು ಕಾದಂಬರಿಗಳು (ಸಂ) ಗುರುಪಾದ ಮರಿಗುದ್ದಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೪

೨೭. ಕೃಷ್ಣಮೂರ್ತಿ ಎಂ.ಜಿ., ಸಂಸ್ಕಾರ, ಯು.ಆರ್.ಅನಂತಮೂರ್ತಿ ವ್ಯಕ್ತಿ–ಕೃತಿ (ಸಂ), ಮುರುಳೀಧರ ಉಪಾಧ್ಯ ಹಿರಿಯಡರ, ಕರ್ನಾಟಕ ಸಂಘ ಪುತ್ತೂರು, ೨೦೦೦

೨೮. ಗಣೇಶ ಮೊಗಳ್ಳಿ, ದಲಿತರು ಮತ್ತು ಜಾಗತೀಕರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೧

೨೯. ಗುರುರಾವ್ ಬಾಪಟ್, ಜನಸಂಸ್ಕೃತಿ ಶೋಧ, ರವೀಂದ್ರ ಪುಸ್ತಕಾಲಯ, ಸಾಗರ, ೨೦೦೩

೩೦. ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳು (ಸಂ), ಕುವೆಂಪು ಕಾದಂಬರಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೩೧. ಗೋವಿಂದ ರಾಜ ಗಿರಡ್ಡಿ, ಸಾಹಿತ್ಯ ಮತ್ತು ಪರಂಪರೆ, ಅಭಿಜಾತ ಗ್ರಂಥಮಾಲೆ, ಬೆಂಗಳೂರು, ೧೯೮೧

೩೨. ಗೋವಿಂದ ರಾಜ ಗಿರಡ್ಡಿ, ಕಾದಂಬರಿ ವಸ್ತು ಮತ್ತು ತಂತ್ರ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೮೭.

೩೩. ಗೋವಿಂದ ರಾಜ ಗಿರಡ್ಡಿ, ಸಮಗ್ರ ವಿಮರ್ಶೆ ಸಂಪುಟ–೨, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೧.

೩೪. ಚಂದ್ರಶೇಖರ ಎಸ್., ಸಾಹಿತ್ಯ ಮತ್ತು ಚರಿತ್ರೆ, ನಮ್ಮ ಪ್ರಕಾಶನ, ತಿಪಟೂರು, ೧೯೯೯

೩೫. ಚಂದ್ರಶೇಖರ ಎಸ್., ವಸಾಹತುಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೩೬. ಚಂದ್ರಶೇಖರ ಎಸ್., ದಕ್ಷಿಣಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೩೭. ಚಂದ್ರಶೇಖರ ಟಿ.ಆರ್., ದಲಿತ ಅಧ್ಯಯನ (ಸಂ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫

೩೮. ಜನಾರ್ಧನ್ ಭಟ್, ಸಾಹಿತ್ಯ ವಿಮರ್ಶೆ ೨೦೦೧ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೨

೩೯. ಜವರೇಗೌಡ ದೇ., ಕುವೆಂಪು ದರ್ಶನ ಮತ್ತು ಸಂದೇಶ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೮೫

೪೦. ಜವರೇಗೌಡ ದೇ., ಸಹ್ಯಾದ್ರಿ (ಪ್ರ.ಸಂ.), ಪರಮಶಿವಯ್ಯ ಜೀ., ಕೃಷ್ಣಕುಮಾರ ಸಿ.ಪಿ. (ಸಂ), ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೧೯೭೫

೪೧. ತಿಪ್ಪೇರುದ್ರ ಸ್ವಾಮಿ ಎಚ್., ಕುವೆಂಪು ವೈಚಾರಿಕತೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.ವಿ.ವಿ., ಮೈಸೂರು, ೧೯೯೩

೪೨. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೪೩. ನಾಗಭೂಷಣ ಡಿ.ಎಸ್., ಕುವೆಂಪು ಒಂದು ಪುನರನ್ವೇಷಣೆ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫

೪೪. ನಾಗಭೂಷಣ ಡಿ., ಗಮನ, ಸಮೂಹದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ, ೧೯೯೦.

೪೫. ನಾಗರಾಜ್ ಡಿ.ಆರ್., ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬

೪೬. ನಾಗರಾಜ್ ಡಿ.ಆರ್., ಅಮೃತ ಮತ್ತು ಗರುಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೦

೪೭. ನಾಗರಾಜ್ ಡಿ.ಆರ್., ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೩

೪೮. ನಾಗೇಗೌಡ ಎಚ್.ಎಲ್., ಪಿರಿಯರ್ ಎಲ್ವಿನರ ಗಿರಿಜನ ಪ್ರಪಂಚ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, ೨೦೦೪.

೪೯. ನಾಗೇಶ ಹೆಚ್.ವಿ., ಗ್ರಾಮಾಂತರ ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦.

೫೦. ನಾಯಕ ಜಿ.ಹೆಚ್., ಶತಮಾನದ ಕನ್ನಡ ಸಾಹಿತ್ಯ (ಸಂ), ಶ್ರೀರಾಘವೇಂದ್ರ ಪ್ರಕಾಶನ, ಅಂಕೋಲ, ೨೦೦೦.

೫೧. ನಾಯಕ ಹಾ.ಮಾ., ಕನ್ನಡ ವಿಷಯ ವಿಶ್ವಕೋಶ (ಸಂ), ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ೧೯೭೯.

೫೨. ನಾವಡ ಎ.ವಿ., ಕನ್ನಡ ಅಧ್ಯಯನ (ಸಂ), ಸಂಪುಟ ೧೨ ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೫೩. ಪಾರ್ವತಿ ಎಚ್.ಎಸ್. ಸುರಗಿ (ಇಂದಿರಾ.ಎಂ.ಕೆ ಅಭಿನಂದನಾ ಗ್ರಂಥ) (ಸಂ), ಕರ್ನಾಟಕ ಲೇಖಕಿಯರ ಸಂಘ, ಇಳಾ ಪ್ರಕಾಶನ, ಬೆಂಗಳೂರು, ೧೯೯೧.

೫೪. ಪುಟ್ಟೇಗೌಡ ಎಸ್.ಕೆ., ಮಲೆನಾಡಿನ ನೆನಪುಗಳು, ಶುಭೋಧಯ ಪ್ರಕಾಶನ, ಮೈಸೂರು, ೧೯೯೬.

೫೫. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಅಣ್ಣನ ನೆನಪು ಪುಸ್ತಕ ಪ್ರಕಾಶನ, ಮೈಸೂರು, ೧೯೯೭

೫೬. ಪ್ರಹ್ಲಾದ ಅಗಸನಕಟ್ಟೆ, ದಲಿತ-ಬಂಡಾಯ ಕಾವ್ಯ ಮತ್ತು ವಿಚಾರವಾದಗಳು, ಹರ್ಷ ಪ್ರಕಾಶನ, ಹುಬ್ಬಳ್ಳಿ, ೨೦೦೪.

೫೭. ಬಸವರಾಜ ಕಲ್ಗುಡಿ, ನಕ್ಷೆ-ನಕ್ಷತ್ರ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೯.

೫೮. ಬಿಳುಮನೆ ರಾಮದಾಸ್, ಭೂಸುಧಾರಣೆಯ ರುವಾರಿ ಕಡಿದಾಳ್ ಮಂಜಪ್ಪ, ಕಡಿದಾಳ್ ಮಂಜಪ್ಪ ಸಭಾಭವನ ನಿರ್ವಹಣಾ ಸಮಿತಿ, ಹಾರೊ ಗೂಳಿಗೆ, ೨೦೦೯.

೫೯. ಬಿಳುಮನೆ ರಾಮದಾಸ್, ಮಲೆಯ ಪ್ರಬಂಧಗಳು, ಪ್ರಗತಿ ಗ್ರಾಫಿಕ್ಸ್ ಬೆಂಗಳೂರು, ೨೦೦೯

೬೦. ಬೋರಲಿಂಗಯ್ಯ ಹಿ.ಚಿ., ಹುಚ್ಚಪ್ಪ ಮಾಸ್ತರ.ಎನ್, ಕಾಗೋಡು ಚಳುವಳಿ, ಸುವರ್ಣ ಸಂಪುಟ (ಸಂ), ಮಲೆನಾಡು ಜಾನಪದ ಲೋಕ, ಸಾಗರ, ಶಿವಮೊಗ್ಗ

೬೧. ಬೋರಲಿಂಗಯ್ಯ ಹಿ.ಚಿ., ಸಂಸ್ಕೃತಿ-ವಿಸ್ಮೃತಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.

೬೨. ಭಗವಾನ್ ಕೆ.ಎಸ್., ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ (ಅನು) ಸ್ವಾಮಿಧರ್ಮ ತೀರ್ಥ (ಮೂಲ), ಮಹಿಮ ಪ್ರಕಾಶನ, ಮೈಸೂರು, ೧೯೯೦

೬೩. ಭಗವಾನ್ ಕೆ.ಎಸ್., ಕುವೆಂಪು ಯುಗ, (ಪ್ರಸಂ.) ದೇ. ಜವರೇಗೌಡ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೦

೬೪. ಭಾರತಿ.ಎಂ.ಆರ್., ಭೂಸುಧಾರಣೆ ಮತ್ತು ದೇವರಾಜ ಅರಸು, ದೇವರಾಜ ಅರಸು ಒಂದು ಅವಲೋಕನ, ಶೂದ್ರ ಶ್ರೀನಿವಾಸ (ಸಂ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೬೫. ಭೈರಪ್ಪ ಕೆ. ಅರವಿಂದ ಮಾಲಗತ್ತಿ, ಕುವೆಂಪು : ಪುನರ್ಮನನ (ಪ್ರಸಂ.), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೨೦೦೪.

೬೬. ಭೈರೇಗೌಡ ಎಂ. ಸಂಜಯ್ ಪ್ರಕಾಶ್, ಮಳೆಕೋಗಿಲೆ (ಸಂ), ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೯.

೬೭. ಮಹೇಶ್ವರಿ ಯು., ಮಧುರವೇ ಕಾರಣ, ಕರ್ನಾಟಕ ಸಂಘ, ಪುತ್ತೂರು, ೨೦೦೪.

೬೮. ರಮೇಶ ಜೆ.ಕೆ., ಸ್ಮೃತಿ ಸಂಸ್ಕೃತಿ, ಕಡಿದಾಳ್ ಎಸ್.ರಾಮಪ್ಪಗೌಡ ಸ್ಮೃತಿ ಸಂಚಿಕೆ (ಸಂ), ಸಹ್ಯಾದ್ರಿ ಪ್ರಕಾಶನ, ಕಡಿದಾಳು, ತೀರ್ಥಹಳ್ಳಿ, ೨೦೦೧

೬೯. ರಮೇಶ ಜೆ.ಕೆ., ಕಲ್ಲುಸಾರ, ಸಿವಿಜಿ ಪಬ್ಲೀಕೇಷನ್ಸ್, ಬೆಂಗಳೂರು, ೨೦೦೪.

೭೦. ರಮೇಶ ಬೆ.ಗೊ., ಎಂ.ಕೆ.ಇಂದಿರಾ, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು, ೨೦೦೩

೭೧ ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೭೨. ರಹಮತ್ ತರೀಕೆರೆ, ಪ್ರತಿಸಂಸ್ಕೃತಿ, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೨

೭೩. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು, ೨೦೦೨

೭೪. ರಹಮತ್ ತರೀಕೆರೆ, ಕತ್ತಿಯಂಚಿನ ದಾರಿ, ಅಭಿನವ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು, ೨೦೦೬

೭೫. ರಾಘವೇಂದ್ರ ಪಾಟೀಲ, ಸಾಹಿತ್ಯ ಸಂವಾದ–೫೩ (ಸಂ), ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಚಿತ್ರದುರ್ಗ, ೨೦೦೦

೭೬. ರಾಜಾರಾಮ್ ಹೆಗಡೆ, ಅಶೋಕ ಶೆಟ್ಟರ್ (ಸಂ), ಮಲೆ ಕರ್ನಾಟಕದ ಅರಸು ಮನೆತನಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೨೦೦೧.

೭೭. ರಾಜೇಂದ್ರ ಚೆನ್ನಿ, ದೇಶೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೯

೭೮. ರಾಜೇಂದ್ರ ಚೆನ್ನಿ, ಕುವೆಂಪು ಮತ್ತು ಕನ್ನಡ ಕಾದಂಬರಿ, ಅಧ್ಯಯನ, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೮೭.

೭೯. ಶಿವರಾಮ ಪಡಿಕ್ಕಲ್, ನಾಡು-ನುಡಿಯ ರೂಪಕ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾಲಯ ಮಂಗಳ ಗಂಗೋತ್ರಿ, ೨೦೦೧.

೮೦. ಶಿವರುದ್ರಪ್ಪ ಜಿ.ಎಸ್., ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮.

೮೧. ಶಾಸ್ತ್ರಿ ಕೆ.ಜಿ.ಎನ್. ಸ್ವಾತಂತ್ರ್ಯೋತ್ತರ ಮಲೆನಾಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೮೨. ಶ್ರೀಕಂಠ ಕೂಡಿಗೆ, ಭೂಮಿಹುಣ್ಣಿಮೆ, ಲಕ್ಷ್ಮೀನರಸಿಂಹ ಪ್ರೆಸ್, ಮೈಸೂರು, ೧೯೯೬

೮೩. ಶ್ರೀಕಂಠ ಕೂಡಿಗೆ, ನಮ್ಮಿಬ್ಬರ ನಡುವೆ, ಶ್ರೀ ಪ್ರಕಾಶನ, ಬಿ.ಆರ್.ಪ್ರಾಜೆಕ್ಟ್, ೧೯೭೮.

೮೪. ಷೇಕ್‌ಅಲಿ.ಬಿ., ಜಿ.ಆರ್.ರಂಗಸ್ವಾಮಯ್ಯ, ದಕ್ಷಿಣ ಭಾರತದ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೪.

೮೫. ಸಣ್ಣರಾಮ, ಕೂಡಿಗೆ (ಪ್ರ.ಸಂ.), ಕನ್ನಡ ಭಾರತಿ ಹಳೆ ವಿದ್ಯಾರ್ಥಿ ಸಂಘ ಮತ್ತು ಅಭಿಮಾನಿ ಬಳಗ ಶಂಕರಘಟ್ಟ, ಶಿವಮೊಗ್ಗ, ೨೦೦೮

೮೬. ಸುಮಿತ್ರಾ ಎಲ್.ಸಿ., ಕಾಡು ಕಡಲು, ಶಿವರಾಮಕಾರಂತ ಅಧ್ಯಯನ ಕೇಂದ್ರ ವಿವೇಕಾನಂದ ಕಾಲೇಜು, ಪುತ್ತೂರು, ೨೦೦೨

೮೭. ಸುಮಿತ್ರಾ ಎಲ್.ಸಿ., ವಿಭಾಗ, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೭

೮೮. ಸುಮಿತ್ರಾ ಎಲ್.ಸಿ., ಗುಬ್ಬಿಹಳ್ಳದ ಸಾಕ್ಷಿಯಲ್ಲಿ, ಅಂಕಿತ ಪುಸ್ತಕ, ಬೆಂಗಳೂರು, ೨೦೦೮

೮೯. ಸುಮಿತ್ರಾ ಎಲ್.ಸಿ., ನಿರುಕ್ತ, ಸಿವಿಜಿ ಪಬ್ಲಿಕೇಷನ್ಸ್, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫

೯೦. ಸುಬ್ಬಣ್ಣ ಕೆ.ವಿ., ಕುವೆಂಪುಗೆ ಪುಟ್ಟ ಕನ್ನಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೫.

೯೧. ವಸುಮತಿ ಉಡುಪ, ಸೀತಾಳದಂಡೆ, ಗೌರಿ ಪ್ರಕಾಶನ, ಜೆ.ಪಿ.ನಗರ, ಬೆಂಗಳೂರು, ೨೦೦೧.

೯೨. ವಸುಮತಿ ಉಡುಪ, ಸಂಕ್ರಮಣ, ಅಂಕಿತ ಪುಸ್ತಕ, ಬೆಂಗಳೂರು, ೨೦೦೯.

೯೩. ವಿಷ್ಣುಮೂರ್ತಿ ಹೆಚ್. (ಸಂ), ಗೋಪಾಲಗೌಡ ಶಾಂತವೇರಿ, ಅನನ್ಯ ಪ್ರಕಾಶನ, ಧಾರವಾಡ, ೧೯೯೧.